ಆದಿಲಶಾಹಿ ಸಾಹಿತ್ಯ ಸಂಪುಟ : ೯

ಹಜ್ರತ್ ಖ್ವಾಜಿ ಮಹಮೂದ ಬಹರಿ ವಿರಚಿತ

ಊರುಸೇ-ಇರ್ಫಾನ್

(ಮನ್ ಲಗನ್)

BIJAPUR LIBERAL DISTRICT EDUCATIONAL ASSOCIATION
BIJAPUR
ESTD 1910

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೯

ಹಜ್ರತ್ ಖ್ವಾಜಿ ಮಹಮೂದ ಬಹರಿ

ವಿರಚಿತ

ಊರುಸೇ-ಇರ್ಫಾನ್
(ಮನ್ ಲಗನ್)

ಅನುವಾದಕರು

ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Uruse -Irfan (man lagan) : Dakani works.
Kannada translation by Bode Riyaz Ahmad Timmapuri

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2015**

Pages : **xxviii + 324 = 352**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಊರುಸೇ-ಇರ್ಫಾನ್ (ಮನ್ ಲಗನ್) : ದಖನಿ ಕೃತಿಗಳು
ಅನುವಾದಕರು : ಬೋಡೆ ರಿಯಾಜ಼್ ಅಹ್ಮದ್ ತಿಮ್ಮಾಪುರಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೫

ಪುಟಗಳು : xxviii + ೩೨೪ = ೩೫೨

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು.
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ|| ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ|| ಫಗು.ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ.೧೪೮೯ರಿಂದ ೧೬೮೬ರವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦–೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ

ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೯೧], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ವಿಜಯಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ವಿಜಯಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ:** ಅಹವಾಲೆ ಸಲಾತೀನ ವಿಜಯಪುರ[ಪರ್ಶಿಯನ್].

ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ :** ತಾರೀಖೆ ಹಪ್ತಕುರ್ಸೀ [ಪರ್ಶಿಯನ್].

ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ :** ಕಿತಾಬೆ ನವರಸ [ದಖನಿ].

ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ :** ರೌಜತುಲ್ ಔಲಿಯಾ ಎ ವಿಜಯಪುರ [ಪರ್ಶಿಯನ್].

ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ :** ಬಸಾತೀನೆ ಸಲಾತೀನ [ಪರ್ಶಿಯನ್].

ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ :** ಗುಲದಸ್ತಾ ಎ ವಿಜಯಪುರ [ದಖನಿ].

ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ :** ಶಾಹಿಪತ್ ಇ ಹುದಾ [ಪರ್ಶಿಯನ್].

ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು :** ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ವಿಜಯಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ವಿಜಯಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ಪರ್ಶಿಯನ್]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿದತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ವಿಜಯಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ

೧೨. ಡಾ. ಆರ್.ಕೆ. ಕುಲಕರ್ಣಿ, ವಿಜಯಪುರ

೧೩. ಡಾ. ಮುಹಮ್ಮದ್ ಸಿಬ್ಗತ್‌ಉಲ್ಲಾಹ್

ಇವರ ಸಹಕಾರದಿಂದ ಮೊದಲ ಹಂತದ ೬ ಸಂಪುಟಗಳು,

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ವಿಜಯಪುರ [ದಖನಿ], ತಾರೀಖೆ ಹಫ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ ನೆಯ ಸಂಪುಟ

ಹೀಗೆ ೮ ಸಂಪುಟಗಳು ಪ್ರಕಟವಾಗಿವೆ. ಇದೀಗ ೯ನೆಯ ಸಂಪುಟವಾಗಿ 'ಹಜ್ರತ್ ಖ್ವಾಜಿ ಮಹಮೂದ ಬಹರಿ' ವಿರಚಿತ 'ಊರುಸೇ–ಇರ್ಫಾನ್' (ಮನ್ ಲಗನ್) ಪ್ರಕಟವಾಗುತ್ತಿದೆ. ಇದನ್ನು ಕಲಬುರಗಿಯ ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಅವರು ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಂದೀಪ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಖ್ವಾಜಾ ಮಹಮೂದ ಬಹರಿ, ೧೭ನೆಯ ಶತಮಾನದ ಉತ್ತರಾರ್ಧ, ೧೮ನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಳಿ ಬದುಕಿದ ಪ್ರಸಿದ್ಧ ಸೂಫೀ ಸಂತ. ಇಂದಿನ ಯಾದಗಿರಿ ಜಿಲ್ಲೆಯ ಶಹಪೂರ ತಾಲೂಕಿನ ಗೋಗಿಯಲ್ಲಿ ಅವನ ಸಮಾಧಿ ಇದೆ. ಬಿಜಾಪುರ ಆದಿಲಶಾಹಿಗಳ ಕೊನೆಯ ಬಾದಶಹ ಸಿಕಂದರ, ನಂತರ ಔರಂಗಜೇಬನ ಆಡಳಿತದ ಅವಧಿಯಲ್ಲಿ ಇದ್ದವನು. ಬಿಜಾಪುರ, ಹೈದರಾಬಾದ ಪ್ರದೇಶದಲ್ಲಿ ತಿರುಗುತ್ತಿದ್ದನಾದರೂ ಬಹುಕಾಲ ಅವನು ಗೋಗಿಯಲ್ಲಿಯೇ ಇರುತ್ತಿದ್ದನು.

'ಊರುಸೇ ಇರ್ಫಾನ್' ಎಂಬುದು ಬಹರಿಯ ಪರ್ಶಿಯನ್ ಕೃತಿ, ಇದು ಧಾರ್ಮಿಕ ಕೃತಿಯಾಗಿದ್ದರೂ ಅದರಲ್ಲಿ ಸಮಕಾಲೀನ ಚರಿತ್ರೆಯ ಅಂಶಗಳು ಅಡಕಗೊಂಡಿವೆ. ಕವಿ ಮೊದಲು ಇದನ್ನು ದಖಣೀ ಉರ್ದುವಿನಲ್ಲಿ 'ಮನ ಲಗನ' ಎಂದು ರಚಿಸಿದ್ದನು. ಅನಂತರ ಅಂದಿನ ಜನರ ಆಗ್ರಹದ ಮೇರೆಗೆ ಮತ್ತೆ ಅದನ್ನೆ ಸ್ವತಂತ್ರವಾಗಿ ಪರ್ಶಿಯನ್ ದಲ್ಲಿ 'ಊರುಸೇ ಇರ್ಫಾನ್' ಎಂಬ ಹೆಸರಿನಲ್ಲಿ ರಚಿಸಿದನು.

'ಮನ ಲಗನ' ದಖಣೀ ಉರ್ದು' ಕೃತಿಯ ಒಂದೇ ಒಂದು ಹಸ್ತ ಪ್ರತಿ ಲಭ್ಯವಿದೆ ಎಂದು ಹೇಳುತ್ತ ಕರಾಚಿಯ ಸಖಾವತ್ ಮಿರ್ಜಾ ಅವರು ೧೯೫೫ರಲ್ಲಿ ಅದನ್ನು ಪ್ರಕಟಿಸಿದ್ದರು. ಅನಂತರ ದೊರೆತ ಪರ್ಶಿಯನ್ ಕೃತಿಯನ್ನು ಹೈದರಾಬಾದಿನ ಮುಜ್ ಖಾದರಿ ಅಲ್ ಮುಲ್ತಾನಿ ಎಂಬವರು 'ಊರುಸೇ ಇರ್ಫಾನ್' ಕಾವ್ಯವನ್ನು ೧೯೫೭ರಲ್ಲಿ 'ಮಿಫ್ತಾ ಅಲ್ ಜನ್ನಾನ್' ಎಂಬ ಶೀರ್ಷಿಕೆಯ ಅಡಿಯಲ್ಲಿ ಉರ್ದುವಿಗೆ ಅನುವಾದಿಸಿ ಪ್ರಕಟಿಸಿದರು. 'ಮಿಫ್ತಾ ಅಲ್ ಜನ್ನಾನ್' ಎಂದರೆ 'ಸ್ವರ್ಗದ ಬೀಗದ ಕೈ'.

ಅನಂತರ ೧೯೮೯ರಲ್ಲಿ ಡಾ.ಮಹ್ಮದ ಅರೀಫುದ್ದೀನ್ ಶಾಹ ಫಾರೂಖಿ ಖಾದರೀ ಮುಲ್ತಾನಿ ಎಂಬವರು ವಿಸ್ತೃತ ಪೀಠಕೆಯೊಂದಿಗೆ ಪ್ರಕಟಿಸಿದರು.

ಪ್ರಸ್ತುತ ಅನುವಾದವು ಡಾ. ಮಹ್ಮದ ಅರೀಫುದ್ದೀನ್ ಶಾಹ ಫಾರೂಖಿ ಖಾದರೀ ಮುಲ್ತಾನಿ ಅವರ ಮುದ್ರಿತ ಕೃತಿಯನ್ನು ಆಧರಿಸಿದೆ. ಅನುವಾದಿಸಿದವರು ಕಲಬುರ್ಗಿಯ ಬೋಡೆ ರಿಯಾಜ್ ಅಹ್ಮದ ತಿಮ್ಮಾಪುರಿ ಅವರು. ಸುಂದರವಾಗಿ ಕನ್ನಡದ ಸ್ವತಂತ್ರ ಕೃತಿ ಎಂಬಂತೆ ಅನುವಾದಿಸಿದ್ದಾರೆ ಅವರಿಗೆ ಕೃತಜ್ಞತೆಗಳು.

ಉಳಿದಂತೆ ಕವಿ, ಕಾವ್ಯದ ಕುರಿತು ಉರ್ದು ಅನುವಾದಕರು ವಿಸ್ತೃತವಾಗಿ ಚರ್ಚಿಸಿದ್ದಾರೆ.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ನೀಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಮತ್ತು ಸಹಕಾರವಿತ್ತ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

*

ವಿಷಯಾನುಕ್ರಮಣಿ

■

*

ಕವಿ–ಕಾವ್ಯ

ಸಾಕಷ್ಟು ಹುಡುಕಾಟ, ಅಲೆದಾಟದ ನಂತರ ಹಜ್ರತ್ ಬಹರಿಯವರ "ಮನ್ ಲಗನ್" ಗ್ರಂಥದ ನಾಲ್ಕು ಹಸ್ತಪ್ರತಿಗಳು ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ (ಪೂರ್ವದ 'ಕುತುಬ್ ಖಾನಾ ಆಸೀಫಿಯಾ') ಯಲ್ಲಿ ದೊರೆತವು. ಮತ್ತೆರಡು ಹಸ್ತಪ್ರತಿಗಳು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಹಾಗೂ ಎರಡು ಹಸ್ತಪ್ರತಿಗಳು "ಇದಾರಯೇ ಅದ್‌ಬಿಯಾತ್ ಉರ್ದು" ಗ್ರಂಥಾಲಯದಲ್ಲಿ ಇರುವುದಾಗಿ ಮಾಹಿತಿ ಲಭ್ಯವಾಯಿತು. ಇವೆಲ್ಲವುಗಳಲ್ಲಿ ಅತೀ ಹಳೆಯದಾದ ಹಸ್ತಪ್ರತಿ ಹಿಜರಿ ೧೧೧೬ (ಕ್ರಿ.ಶ.೧೭೦೪) ರದ್ದಾಗಿತ್ತು. ಅಂದರೆ ಅದು ಕವಿ ಬಹರಿಯ ಜೀವಿತ ಕಾಲದ್ದಾಗಿರಬಹುದಾದ ಹಸ್ತಪ್ರತಿ. ಈ ಎಲ್ಲಾ ಹಸ್ತಪ್ರತಿಗಳನ್ನು ಅತೀ ಸೂಕ್ಷ್ಮವಾಗಿ ಪರಿಶೀಲಿಸಿ, ಪರೀಕ್ಷಿಸುವ ಕಠಿಣ ಪರಿಶ್ರಮದ ಕೆಲಸವಾಗಿತ್ತು. ಒಂದೊಂದು ಶಬ್ದವನ್ನು ಹೋಲಿಸಿ, ಗಮನಿಸಿ ಒಂದು ಸೂಕ್ತವಾದಂತಹ ಹಸ್ತಪ್ರತಿ ಸಿದ್ಧಪಡಿಸಲಾಯಿತು. ಜೊತೆಗೆ ಪ್ರಸಕ್ತ ಭಾಷಾಂತರದ ಪ್ರತಿಶಬ್ದವನ್ನು ತೀವ್ರವಾಗಿ ಗಮನಿಸಿ, ಅವಶ್ಯವೆನಿಸಿದ ಕಡೆ ಸೂಕ್ತ ತಿದ್ದುಪಡಿ ಹಾಗೂ ಪರಿಷ್ಕರಣೆ ಮಾಡಲಾಯಿತು.

ಕೆಲವು ಆಭರಣಗಳ ಸಂಖ್ಯೆ ೧೦, ಸಂಖ್ಯೆ ೫೯, ಹಾಗೂ ಸಂಖ್ಯೆ ೧೬೬ರ ಅಂತ್ಯದ ಪದವಿನ್ಯಾಸ ಶೈಲಿಯನ್ನು ಮತ್ತೊಮ್ಮೆ ಹೊಸದಾಗಿ ಬರೆಯಲಾಯಿತು. ಆದರೆ ಅದರಲ್ಲಿ ವಿಷಯಾನುಕ್ರಮಣೆ ಇರಲಿಲ್ಲ. ಆದ್ದರಿಂದ ಗ್ರಂಥದ ಉಪಯುಕ್ತತೆಯು ಸೀಮಿತವಾಗಿತ್ತು. ಮೂಲ ಫಾರಸಿ ಹಸ್ತಪ್ರತಿಯು ಅನುಕ್ರಮ ಪಟ್ಟಿಯಿಂದ ಬರಿದಾಗಿತ್ತು. ಕೆಲವೊಂದು ಹಸ್ತಪ್ರತಿಗಳಲ್ಲಿ ಅನುಕ್ರಮ ಯಾದಿ ಇದ್ದರೂ, ಕೆಲವೊಂದು 'ಆಭರಣ'ಗಳ ಮೇಲೆ ದಪ್ಪಕ್ಷರದ ಶೀರ್ಷಿಕೆಯನ್ನು ಲಗತ್ತಿಸಲಾಗಿತ್ತು ಹಾಗೂ ಉಳಿದವುಗಳನ್ನು ಕೇವಲ 'ಇತರ ಆಭರಣ'ಗಳು ಎಂದು ನಮೂದಿಸಲಾಗಿತ್ತು. ಪ್ರಸಕ್ತ ಕಾಲದ ಲೇಖನ

ಶೈಲಿಯ ಸಂಪ್ರದಾಯದಂತೆ, ಪ್ರತಿಯೊಂದು ಆಭರಣಕ್ಕೆ ಅದರ ವಿಷಯಕ್ಕೆ ಅನುಗುಣವಾಗಿ ಶೀರ್ಷಿಕೆ ನೀಡುವ ಅವಶ್ಯಕತೆಯಿತ್ತು. ಆ ಮೂಲಕ ಅದರಲ್ಲಿ ಚರ್ಚಿತ ವಿಷಯ ಅಥವಾ ವಾದವು ಸ್ಪಷ್ಟಪಡಿಸಬೇಕಿತ್ತು. ಇದರಿಂದ ಓದುಗನಿಗೆ ಸರಳವಾಗಿ ಮತ್ತು ಪ್ರಿಯವಾಗುವ ಹಾಗೆ ಮಾಡುವ ಅಗತ್ಯವಿತ್ತು. ಇದರ ಮಹತ್ವದ ಬಗ್ಗೆ ಹಜ್ರತ್ ಮುರ್ಷದ್ ಅವರ ಗಮನವನ್ನು ಸೆಳೆಯಲಾಯಿತು. ಹಜ್ರತರು ಅದನ್ನು ಮೆಚ್ಚಿ, ಸಹಮತಿ ವ್ಯಕ್ತಪಡಿಸಿದರು. ಫಾರಸಿ ಮೂಲ ಹಸ್ತಪ್ರತಿಯ ದಪ್ಪಕ್ಷರದ ಶೀರ್ಷಿಕೆಗಳನ್ನು ಹಾಗೆಯೇ ಉಳಿಸಿಕೊಂಡು, ಕೆಳಗಡೆ ವಿಶದೀಕರಿಸಿದ ಉಪಶೀರ್ಷಿಕೆಗಳನ್ನೂ ಸಹ ನೀಡಲಾಯಿತು. ಇದರ ಜತೆಗೆ ಹಜ್ರತ್ ಮಹಮೂದ್ ಬಹರಿಯವರ ಸ್ಥಿತಿಗತಿಗಳ ನವಸಂಶೋಧಿತ ವಿಷಯಗಳ ಸೇರ್ಪಡೆಯ ಬಗ್ಗೆಯೂ ಗಮನಹರಿಸಲಾಯಿತು. ಇದರಲ್ಲಿ 'ಉರುಸೇ-ಇರ್ಫಾನ್'ನ ಪರಮ ಸತ್ಯದ ಹುಡುಕಾಟವೂ ಸೇರಿಕೊಂಡಿದೆ. ಪರಮ ಸತ್ಯದ ಕುರಿತಾದ ವಿವರವನ್ನು ಅವಶ್ಯ ಎನಿಸಿದ ಕಡೆ ವಿವರವಾಗಿಯೇ ಅಡಿಟಿಪ್ಪಣಿಯಲ್ಲಿ ನೀಡಲಾಗಿದೆ. ಈ ಟಿಪ್ಪಣಿಗಳು ೨-೩ ಸಾಲುಗಳಲ್ಲಿವೆ. ಆದರೆ ಈ ಎರಡು ಮೂರು ಸಾಲು ಬರೆಯುವುದಕ್ಕಾಗಿ ಹಲವಾರು ಹೊತ್ತಿಗೆಗಳ ಪುಟ ತಿರುವಬೇಕಾಯಿತು. ಇದರಿಂದಾಗಿ ಅದರ ನೈಜತೆ ಹಾಗೂ ಮೂಲತ್ವವನ್ನು ಮತ್ತಷ್ಟು ದೃಢೀಕರಿಸಲಾಯಿತು.

ಗೋಗಿಯ ಭೌಗೋಳಿಕ ಸ್ಥಿತಿ-ಗತಿಗಳು ಹಾಗೂ ಐತಿಹಾಸಿಕ ಮಹತ್ವ:

ಗೋಗಿಯು ಹಜ್ರತ್ ಮಹಮೂದ್ ಬಹರಿಯ ಕಾಲದಲ್ಲಿ ಬಿಜಾಪುರ ಪ್ರಾಂತ್ಯದ ಭಾಗವಾಗಿತ್ತು. ಸದ್ಯ ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನಲ್ಲಿದೆ. ಶಹಾಪುರಿನಿಂದ ೭ ಮೈಲಿ ದೂರದಲ್ಲಿದೆ. ಗುಲಬರ್ಗಾ ತಲುಪಿ, ಶಹಾಪುರದ ಬಸ್ಸನ್ನು ಹತ್ತಿದರೆ, ಶಹಾಪುರಕ್ಕೆ ಮೊದಲು ಒಂದು ಕವಲು ದಾರಿ ಸಿಗುತ್ತದೆ. ಇಲ್ಲಿಯ ಬಸ್ ನಿಲ್ದಾಣವನ್ನು 'ಭೀಮರಾಯನಗುಡಿ' ಎಂದು ಕರೆಯಲಾಗುತ್ತದೆ. ಇಲ್ಲಿಯೇ ಇಳಿಯಬೇಕು, ಯಾಕೆಂದರೆ ಬಸ್ಸು ಇಲ್ಲಿಂದ ಶಹಾಪುರಕ್ಕೆ ಹೋಗಿ, ಮತ್ತೆ ಹಿಂತಿರುಗಿ ಬಂದು, ಅಲ್ಲಿಂದ ನೇರವಾಗಿ ಗೋಗಿಗೆ ಹೋಗುತ್ತದೆ. ಈ ಕವಲುದಾರಿಯಿಂದ ಗೋಗಿಯು ಕೇವಲ ೬ ಕಿಲೋ ಮೀಟರ್ ದೂರದಲ್ಲಿದೆ.

ಲಭ್ಯವಿರುವ ಈಗಿನ ಸಂಶೋಧನೆಗಳ ಪ್ರಕಾರ, ಗೋಗಿಯು ದಕ್ಷಿಣ ಭಾರತದ ಪ್ರಾಚೀನ ಹಾಗೂ ಹಲವು ಇತಿಹಾಸ ಪೂರ್ವ ಅವಶೇಷಗಳನ್ನು ಹೊಂದಿದ ಪ್ರಮುಖ ನಗರ. ಇಲ್ಲಿ ಆದಿಮಾನವ ಕಾಲದ ಹಲವು ಅವಶೇಷಗಳು ದೊರೆತಿವೆ. ಗೋಗಿಯಲ್ಲಿ ದೊರೆತ ಅತ್ಯಂತ ಹಳೆಯ ಶಿಲಾಶಾಸನವು ಇಸ್ಲಾಮಿ ಯುಗಕ್ಕೆ ಸೇರಿದ್ದಾಗಿದೆ. ಅಸ್ತಾಬಾದಿನ ಕೋಟೆಗೆ ಸಂಬಂಧಿಸಿದ ಈ ಶಾಸನವು ದೆಹಲಿಯ ದೊರೆ ಸುಲ್ತಾನ್ ಮಹ್ಮದ್ ತುಘಲಕ್‌ನ ಆಳ್ವಿಕೆ (ಕ್ರಿ.ಶ. ೧೩೩೮/ಹಿ.೭೩೮)ಯ ಕಾಲಕ್ಕೆ ಸೇರಿದ್ದು.

ಇದನ್ನು 'ಅರಬಾ ಮಸಜಿದ್' ಗೋಗಿಯಲ್ಲಿ ಸಂರಕ್ಷಿತಗೊಳಿಸಿರುವ ಮಾಹಿತಿಯಿದೆ. ಗೋಗಿಯು ಯುಸೂಫ್ ಆದಿಲ್‌ಶಾಹನ ಜಾಗೀರಿಗೆ ಸೇರಿತ್ತು. ಈಗ ಗೋಗಿಯು ಹಿರಿಯ ಸೂಫಿಸಂತ 'ಚಂದಾ ಹುಸೇನಿ' ಎಂದು ಗುರುತಿಸಲಾಗುವ ಸಯ್ಯದ ಜಲಾಲುದ್ದೀನ್ ಅವರ ದರ್ಗಾದ ಕಾರಣಕ್ಕೆ ಜನಪ್ರಿಯವಾಗಿದೆ. ಇವರ ನಿಧನವು ಹಿ. ಶ. ೮೫೮ (೧೪೫೪)ರಲ್ಲಿ ಆಯಿತು. ಗೋಗಿಯನ್ನು ಪ್ರವೇಶಿಸುತ್ತಲೇ ಹಜ್ರತ್‌ರ ದರ್ಗಾದ ವಿಶಾಲ ಆವರಣ ಎದುರಾಗುತ್ತದೆ. ಸುಂದರ ಹಾಗೂ ಕಲಾತ್ಮಕವಾದ ಕರಿಕಲ್ಲಿನ ಗುಂಬಜ್ ಗೋಚರವಾಗುತ್ತದೆ. ದರ್ಗಾದ ಉತ್ತರ ದಿಕ್ಕಿನಲ್ಲಿ ವಿಶಾಲವಾದ ಕೆರೆಯೂ ಇದೆ. ಚಂದಾ ಹುಸೇನಿ ಅವರು ಬೀದರ್ ರಾಜಧಾನಿ ಆಗಿದ್ದ ಬಹಮನಿಯ ದೊರೆಗಳಾದ ಅಹ್ಮದ್ ಶಾಹ ಅಲಿ 'ವಲಿ' ಹಾಗೂ ಎರಡನೇ ಅಲ್ಲಾವುದ್ದೀನ್‌ನ ಸಮಕಾಲೀನರು. ಯುಸೂಫ್ ಆದಿಲ್‌ಖಾನ್‌ನು ಇವರ ಶಿಷ್ಯನಾಗಿದ್ದ. ಆದಿಲ್‌ಶಾಹಿ ಸಾಮ್ರಾಜ್ಯದ ಮೊದಲ ನಾಲ್ವರು ದೊರೆಗಳನ್ನು ಈ ದರ್ಗಾ ಪರಿಸರದಲ್ಲಿ ದಫನ್ ಮಾಡಲಾಗಿದೆ. ಒಂದು ಮೂಲದ ಪ್ರಕಾರ, ಚಂದಾ ಸಾಹೇಬರು ಹಜ್ರತ್ ಮೀರ್ ಅಶ್ರಫ್ ಜಹಾಂಗೀರ್ ಸಾಮ್ನಾಯಿ ಅಲ್ ಮುಲ್ತಫಿ ೮೦೮ ಹಿ.(೧೪೦೫) ಕಚೂಚ್ ಶರೀಫ್ (ಅವಧ್)ರ ಖಲೀಫಾ ಆಗಿದ್ದರು. ಹಜ್ರತ್ ಮಹಮೂದ್ ಬಹರಿ ಅವರು ಇವರ ಸಂತತಿಯ ಸಮಸ್ತ ವಿವರಗಳನ್ನು, ನಾಮಾವಳಿ ಹಾಗೂ ಸಮಗ್ರ ಸ್ಥಿತಿ–ಗತಿ, ಹಾಗೂ ಸಂತ -ಜೀವನದ ವಿವರಣೆಗಳನ್ನು ಸವಿಸ್ತಾರವಾಗಿ ಫಾರಸಿಯಲ್ಲಿ ದಾಖಲಿಸಿದ್ದಾರೆ.

ಗೋಗಿಯಿಂದ ಎಂಟು ಮೈಲಿಗಳ ದೂರದಲ್ಲಿ ಪ್ರಸಿದ್ಧ 'ಸಗರ' ಕೋಟೆ ಇದೆ. ಇಲ್ಲಿ 'ಮುಜಾಹಿದೇ ಆಜ಼ಂ, ಅಸದುಲ್ ಔಲಿಯಾ' ಎಂದು ಖ್ಯಾತರಾದ ಶೇಖ್ ಮಹ್ಮದ ಮಹಮೂದ್ ಸೂಫಿ ಸರಮಸ್ತ್ ದೆಹಲ್ವಿ (ಹಿ.ಶ. ೫೫೯–೬೮೦)ಯ ದರ್ಗಾ ಇದೆ. 'ಅಸುದುಲ್ ಔಲಿಯಾ' ಅವರು ದೆಹಲಿಯ ಹಜ್ರತ್ ಖ್ವಾಜಾ ನಿಜಾಮುದ್ದೀನ್ ಮಹಬೂಬೆ–ಇಲಾಹಿ (ಅಲ್ಲಾಹನ ಪ್ರಿಯರು) ಅವರ ಅಧ್ಯಾತ್ಮಿಕ ಉತ್ತರಾಧಿಕಾರಿ ಆಗಿದ್ದರು. ಹಜ್ರತ್ ಬಹರಿ ಅವರ ಪೀರ್ – ಮುರ್ಷದ್ (ಗುರು)ರಾಗಿದ್ದ ಶೇಖ್ ಮುಹ್ಮದ್ ಬಾಖ಼ಿರ್ ಖಾದ್ರಿ ಅವರು ಚಂದಾ ಹುಸೇನಿ ಅವರ ಸಂತತಿಯವರಾಗಿದ್ದರು.

ಹಜ್ರತ್ ಬಹರಿಯವರ ಮೂಲ:

ಮಹಮೂದ್ ಬಹರಿ ಅವರ ಮನೆತನವನ್ನು 'ಹಸಿರು ವಸ್ತ್ರಧಾರಿ ಖಾದರಿ' ಎಂದು ಗುರುತಿಸಲಾಗುತ್ತಿತ್ತು. ಬಹರಿ ಅವರು ಪೀರಾನೆ ಪೀರ್‌ನ ಸಂತತಿಯ ಪರಂಪರೆಗೆ (ಸಿಲ್‌ಸಿಲಾ) ಸೇರಿದವರು. ಹಲವು ತಲೆಮಾರುಗಳಿಂದ ಈ ಮನೆತನವು ನ್ಯಾಯ ಹೇಳುವ ಸೇವಾವೃತ್ತಿ ಮಾಡುತ್ತ ಬಂದಿತ್ತು. ಹಜ್ರತ್ ಬಹರಿ ಅವರ ಮೂಲಪುರುಷನ ಹೆಸರು ಸಯ್ಯದ್ ಜಮಾಲ್ ಹುಸೇನಿ ಎಂದಾಗಿತ್ತು. ಇವರ ವಂಶಾವಳಿಯ ವಿವರವು ಈ ರೀತಿ ಇದೆ.

"ಖ್ವಾಜಿ ಮಹಮೂದ್ ಬಹರಿ ಬಿನ್ ಬಹರುದ್ದೀನ್ ಬಿನ್ ಖ್ವಾಜಿ ಶಫೀಯುದ್ದೀನ್ ಹುಸೇನಿ ಬಿನ್ ಖ್ವಾಜಿ ಸಯ್ಯದ್ ಇಸ್‌ಹಾಕ್ ಹುಸೇನಿ ಬಿನ್ ಖ್ವಾಜಿ ದಾವೂದ್ ಹುಸೇನಿ ಬಿನ್ ಖ್ವಾಜಿ ಅಬ್ದುಲ್ ರಜ್ಜಾಕ್ ಹುಸೇನಿ ಬಿನ್ ಖ್ವಾಜಿ ಮಹಮೂದ್ ಹುಸೇನಿ ಬಿನ್ ಖ್ವಾಜಿ ಮೀರಾನ್ ಹುಸೇನಿ ಬಿನ್ ಖ್ವಾಜಿ ಮಖ್ದೂಮ್ ಹುಸೇನಿ ಬಿನ್ ದಾವೂದ್ ಹುಸೇನಿ ಬಿನ್... ಹುಸೇನಿ ಬಿನ್ ಸಯ್ಯದ್ ಜಮಾಲ್ ಹುಸೇನಿ ಮುಕ್ರಾನಿಯಾ ಕಿರ್ಮಾನಿ."

ಹಜ್ರತ್ ಬಹರಿ ಅವರ ತಂದೆಯವರಾದ ಖ್ವಾಜಿ ದರಿಯಾ ಅವರು ಹಜ್ರತ್ ಬುರಹಾನುದ್ದೀನ್ ಜಾನಮ್ ಅವರ ಶಿಷ್ಯರು. ಅವರಿಗೆ ಸೂಫಿಗಳ ಬಗ್ಗೆ ವಿಶೇಷ ಗೌರವ ಮತ್ತು ಒಲವು ಇತ್ತು. ಹಜ್ರತ್ ಬಹರಿ ಅವರು 'ಉರೂಸೇ-ಇರ್ಫಾನ್'ನಲ್ಲಿ ಅವರನ್ನು 'ಘವಾಸ್ ಬಹರ್ ಸಫಾ'[೧] (ನಿರ್ಮಲ ಸಾಗರದಲಿ ಮುಳುಗಿದವ) ಎಂದು ಬರೆದಿದ್ದಾರೆ. ಅವರ ಬಗ್ಗೆ ಫಾರಸಿಯಲ್ಲಿ ಈ ರೀತಿ ಉಲ್ಲೇಖವಿದೆ.

'ಘವಾಸೆ ಬಹರ್ ಸಫಾ ಖ್ವಾಜಿ ಬಹರುದ್ದೀನ್ ಅಲ್ ಮಶಹೂರ್ ಬ ಖಾಜಿ ದರಿಯಾ ಕೆ ಪಿದರೆ ಫಖೀರ್ ಅಸ್ತ್ ಅಜ಼ ಬಹರ್ ಬರ್ ಆಮದ್‌ಂ ಯಖೀಂ ಅಸ್ತ್, ನಾಮ್ ಪದರ್ಮ ಚೂ ಬಹರೆ ದೀನ್ ಅಸ್ತ್'[೨]

ಹಜ್ರತ್ ಮಹಮೂದ್ ಬಹರಿಯ ಜನ್ಮ:

ಹಜ್ರತ್ ಬಹರಿ ಅವರು ತಮ್ಮ ಜನನದ ಮಾಹಿತಿಯನ್ನು ಎಲ್ಲಿಯೂ ಸ್ಪಷ್ಟವಾಗಿ ಬರೆದಿಲ್ಲ. ಸಂಗಾತಿಗಳು ಈ ಬಗ್ಗೆ ಬಹರಿ ಅವರನ್ನು ಪ್ರಶ್ನಿಸಿದಾಗ ಖಚಿತ ಉತ್ತರ ಹೇಳದೇ ಅಸ್ಪಷ್ಟವಾಗಿ ತೇಲಿಸಿ ಬಿಡುತ್ತಿದ್ದರು.

---

೧. (೧ ಮುಂಬೈನಿಂದ ಪ್ರಕಟವಾಗುತ್ತಿದ್ದ 'ನವಾಯೇ ಅದಬ್' ಪತ್ರಿಕೆ (ಜುಲೈ ೧೯೫೫)ಯಲ್ಲಿ ಪ್ರಕಟವಾದ ಡಾ. ಹಫೀಜ್ ಸಯ್ಯದ್ ಸಾಹೇಬರ ಲೇಖನದ ಪ್ರಕಾರ ಬಹರಿ ಅವರು ತಮ್ಮ ತಂದೆಯವರನ್ನು 'ಖುದ್‌ವತಾ ಖಲಂದರಾನ್' (ದೈವಿಕ ಖಲಂದರರು) ಎಂದು ಕರೆಯುತ್ತಿದ್ದರು ಎಂದು ದಾಖಲಿಸಿದ್ದಾರೆ. ಇದಕ್ಕೆ ಅವರು ಜನಾಬ್ ಸಖಾವತ್ ಮಿರ್ಜಾ ಅವರ 'ಮನ್ ಲಗನ್' ಮುನ್ನುಡಿ ದಾಖಲೆಯಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. (ಮು.ಸಂ.೧೫) 'ನವಾಯೇ ಅದಬ್'ನಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಮೂಲ ಫಾರಸಿಯ ಲೇಖನವನ್ನು ಉಲ್ಲೇಖಿಸಿ ಬಹರಿ ಅವರ ತಂದೆಯವರು ಪೀರ್-ಮುರ್ಷದ್ ಆಗಿದ್ದರು ಎಂದು ದಾಖಲಿಸಿದ್ದಾರೆ. ಆದರೆ ಇಲ್ಲಿ ಹಜ್ರತ್ ಬಹರಿ ಅವರು ತಮ್ಮ ಪೀರ್ ಅನ್ನೇ 'ಖುದ್‌ವತಾ ಖಲಂದರಾನ್' ಎಂದು ಸ್ಮರಿಸಿದ್ದಾರೆ. ತಮ್ಮ ತಂದೆ ಹಾಗೂ ತಂದೆಯ ಪೀರ್-ಮುರ್ಷದರನ್ನು ಅಲ್ಲ. ನೋಡಿ ಆಭರಣ ೧೦೮ ಹಾಗೂ 'ನವಾಯೇ ಅದಬ್' ಬಾಂಬೆ ಜುಲೈ ೧೯೫೫.)

೨. ಆಭರಣ ೬೭

ಅಯ್ ಮೋರಖ್ ಗರ್ ಬತಾರೀಖ್ ತವಲ್ಲುದ್ ಪರ್‌ಸೀಮ್
ಮನ್ ಅಜಾಂ ರೋಜಂ ಕೆ ಇರ್ಫಾನ್ ಶುದ್ ಬನೂಲ್ ಅಂದರ್ ನಮೂ

'ಇತಿಹಾಸಕಾರನು ಕೇಳುತಾನೆ ನನ್ನ ಜನ್ಮ ದಿನ
ಹಾಂ! ಜ್ಞಾನವು ಅಸ್ತಿತ್ವದಲಿ ಮೊಳಕೆಯೊಡೆದ ದಿನ'

ಆದರೆ ಇತರೆ ಸೂಚನೆ, ಸುಳಿವುಗಳ ಮೇಲೆ ಬಹರಿಯ ಜನ್ಮವರ್ಷವನ್ನು ಹಿಜರಿ ಶಕೆ ೧೦೩೬ ಎಂದು ಅಂದಾಜಿಸಬಹುದು. ಅದು ಇಬ್ರಾಹೀಂ ಆದಿಲ್‌ಶಾಹ (ದ್ವಿತೀಯ) ಜಗದ್ಗುರುವಿನ ಆಳ್ವಿಕೆಯ ಕಾಲದಲ್ಲಿ ರಚನೆ ಆದ (ಹಿಜರಿ ಶಕೆ. ೧೧೧೨) 'ಮನ್ ಲಗನ್'ನ ಒಂದು ದ್ವಿಪದಿ ಹೀಗಿದೆ.

ನನ್ನ ಆಯಷ್ಯವು ತೊಂಬತ್ತು ವರ್ಷ.
ಆದರೆ, ನನ್ನ ಪ್ರೇಮಿಯದು ಹತ್ತು ವರ್ಷ[೩]

ಇದರಿಂದ ಆಗ ಅವರ ವಯಸ್ಸು ೯೦ ವರ್ಷವಾಗಿತ್ತೆಂದು ಸಾಬೀತಾಗುವುದಿಲ್ಲ. ಯಾಕೆಂದರೆ ಈ ದ್ವಿಪದಿಯ ವಾಗ್ವಿಧಾನ ಪ್ರಾವಿಣ್ಯತೆಯಿಂದ ಸ್ಪಷ್ಟವಾಗುವುದೇನೆಂದರೆ ಇದು ಪೀರ್ (ಹಜ್ರತ್ ಬಾಖರ್) ಹಾಗೂ ಮುರೀದ್ (ಹಜ್ರತ್ ಬಹರಿ)ಯವರ ಸಂಭಾಷಣೆಯಾಗಿದೆ ಹಾಗೂ ಈ ದ್ವಿಪದಿಯ ಸೂಚಕವು ಹಜ್ರತ್ ಬಹರಿಯ ಸಂತ ಗುರು (ಪೀರ್ ಮುರ್ಷದ್)ವಿನ ಕಡೆ ಇದೆ. ಹಜ್ರತ್ ಬಹರಿಯವರ ತಮ್ಮ ಶೇಖ್‌ರ ಶ್ರದ್ಧಾ ನಂಬಿಕೆಯ ವರ್ತುಲದೊಳಗೆ ಪ್ರವೇಶಿಸಿದಾಗ, ಶೇಖ್‌ರ ವಯಸ್ಸು ೮೦ ವರ್ಷವಾಗಿತ್ತು ಹಾಗೂ ಅವರ ನಿಧನವು ೧೦೦ ವರ್ಷ ವಯಸ್ಸಿನಲ್ಲಾಯಿತು. ಹಜ್ರತ್ ಬಹರಿಯವರು ಬರೆದಿರುವುದೇನೆಂದರೆ, ನಾನು ೨೦ ವರ್ಷಗಳವರೆಗೆ ಗುರುವಿನ ಸೇವೆಯಲ್ಲಿ ನಿರತನಾಗಿದ್ದೆ. ಇದರಿಂದ ಈ ಮಾತು ಸಿದ್ಧವಾಗುವುದೇನೆಂದರೆ ಆಗ ಹಜ್ರತ್ ಬಾಖರ್‌ರವರ ವಯಸ್ಸು ೧೦೦ ವರ್ಷವಾಗಿತ್ತು. ಈ ರೀತಿಯಾಗಿ ಬಹರಿಯವರು ಘಟನೆಯನ್ನು ಪ್ರಸ್ತಾಪಿಸುತ್ತಾ ಆವಾಗ ಗುರುವಿನಿಂದ ದೀಕ್ಷೆ ಸ್ವೀಕರಿಸಿ, ೧೦ ವರ್ಷಗಳು ಕಳೆದಿದ್ದವು ಹಾಗೂ ಗುರುವಿನ ವಯಸ್ಸು ೯೦ ವರ್ಷವಾಗಿತ್ತೆಂದು ಬರೆದಿರುತ್ತಾರೆ. ಸಖಾವತ್ ಮಿರ್ಜಾ ಸಾಹೇಬರು ಸಹ 'ಮನ್ ಲಗನ್'ನ ಮುನ್ನುಡಿಯಲ್ಲಿ ಇಂತಹದೇ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

---

೩. 'ಮನ್ ಲಗನ್' – ಸಂಗ್ರಹಕಾರರು, – ಸಖಾವತ್ ಮಿರ್ಜಾ ಸಾಹೇಬ ಪು.ಸಂ.೧೨೪ ಪ್ರಕಾಶನ; ಅಂಜುಮನ್ ತರಖ್ಖಿ ಉರ್ದು ಪಾಕಿಸ್ತಾನ, ೧೯೫೫.

ಶಿಕ್ಷಣ ಮತ್ತು ತರಬೇತಿ

ಹಜ್ರತ್ ಬಹರಿ ಅವರು ಸಂಪೂರ್ಣ ಅನಕ್ಷರಸ್ಥರಾಗಿರಲಿಲ್ಲ. ಆದರೆ ಅವರು ಔಪಚಾರಿಕವಾಗಿ ಶಿಕ್ಷಣ ಪಡೆದಿರಲಿಲ್ಲ. ಓದುವುದು ಮತ್ತು ಬರೆಯುವುದನ್ನು ಅರಿತಿದ್ದರು. 'ಉರೂಸೆ-ಇರ್ಫಾನ್'ನಲ್ಲಿ ಇರುವ ಪದಗಳ ಬಳಕೆಯ ಪ್ರೌಢಿಮೆ ಹಾಗೂ ಖಚಿತತೆಗಳು ಮತ್ತು, ಪ್ರಾಸಮಯ ಪ್ರತಿಮೆಗಳ ಬಳಕೆಯು ಅವರಿಗೆ ಅರಬ್ಬಿ, ಫಾರಸಿ, ಹಿಂದಿ, ಸಂಸ್ಕೃತ, ತತ್ವಜ್ಞಾನ, ವೈದ್ಯಶಾಸ್ತ್ರ ಹಾಗೂ ವೇದಾಂತದ ಅಪಾರ ಪರಿಣತಿ ಇರುವುದರನ್ನು ಖಚಿತ ಪಡಿಸುತ್ತದೆ. ಹಾಗೆಯೇ ಅವರಿಗೆ ಪ್ರಮುಖ ಧಾರ್ಮಿಕ ವಿದ್ವಾಂಸರ ಗ್ರಂಥಗಳ ಆಳವಾದ ಅಧ್ಯಯನದ ಹಿನ್ನೆಲೆಯೂ ಇತ್ತು. ಹಕೀಂ ನಾಸಿರ್ ಖೂಸ್ರೋ - ಅಲ್ - ಮುತ್ತಫೀ (೪೮೧ ಹಿಜಿ /ಕ್ರಿ.ಶ ೧೦೮೮), ಹಾಫೀಜ್ ಶಿರಾಜಿ (೭೯೧ ಹಿಜಿ/ ಕ್ರಿ.ಶ. ೧೩೮೯), ಹಜ್ರತ್ ಖ್ವಾಜಾ ಬಂದೇ ನವಾಜ್ (೭೬೫ ಹಿಜಿ/ ಕ್ರಿ.ಶ. ೧೩೮೯) ಹಾಗೂ ಹಜ್ರತ್ ಜಾಮಿ (೭೯೭ ಹಿಜಿ/ ಕ್ರಿ.ಶ. ೧೪೩೪) ರ ಕಾವ್ಯದ ವ್ಯಾಖ್ಯಾನ ಮತ್ತು ಅರ್ಥೈಸುವಿಕೆಯು ಉರೂಸೇ-ಇರ್ಫಾನ್‌ನಲ್ಲಿ ಹೇರಳವಾಗಿ ದೊರೆಯುತ್ತದೆ. ಅವರ ಗುರು ಖ್ವಾಜಿ ದರಿಯಾ ಅವರದು ವಿದ್ವಾಂಸರ ಮನೆತನ ಆಗಿತ್ತು. ಹೀಗಾಗಿ ತೀರಾ ಚಿಕ್ಕ ವಯಸ್ಸಿಯಲ್ಲಿಯೇ ಶೈಕ್ಷಣಿಕ ಹಾಗೂ ಸಾಹಿತ್ಯದ ಅರಿವು ಪ್ರೌಢಿಮೆಯ ಹಂತವನ್ನು ತಲುಪಿತ್ತು. ತದನಂತರ ಪೀರ್‌ರ (ಗುರುವಿನ) ತರಬೇತಿ ಹಾಗೂ ಸಾನಿಧ್ಯವು ಅದರಲ್ಲಿ ಪರಿಪೂರ್ಣತೆಯನ್ನು ದೊರಕಿಸಿಕೊಟ್ಟಿತ್ತು. ಎಲ್ಲಾ ಮೂಲ ಹಾಗೂ ಸಹಜ ಶಿಕ್ಷಣದ ಗುಣ ವಿಶೇಷಗಳ ಕಡೆ ನೋಟ ಬೀರಿದಾಗ, ಅವರ ಜ್ಞಾನವು ಶ್ರಮ ಪ್ರಾಪ್ತಿಗಿಂತಲೂ, ಅಧಿಕವಾಗಿ ದೈವದತ್ತವಾಗಿ ಬಂದುದಾಗಿತ್ತು ಎಂದು ಹೇಳಬಹುದು. ತಮ್ಮ ಅಧ್ಯಯನದ ಕುರಿತು ಅವರು ಈ ರೀತಿ ಬರೆಯುತ್ತಾರೆ.

"ಇಶಾರತೆ ಅಜ್ ಮರ್ಬಿ ಸಾಹೇಬ್ ಹಮ್ ಯಾಪ್ತಾ ಉಮ್ ವೋ ಸಿವಾಯೇ ಅಂಯ್ ಕುತುಬ್ ದೇರೇನಾ ವೋ ರಿಸಾಲಾ ಹಾಯ್ ಹಜ್ರತ್ ಶಾಹ ಬುರಾಹನುದ್ದೀನ್ ಇಬ್ನೆ ಶಾಹ ಮೀರಾಂಜಿ ಶಮ್ಸಲ್ ಅಶ್ವಾಖ್ ಖುದ್ದುಸ್ ಸರ್ರ, ಬಾಂದಾಜಾ-ಯೆ-ಇಸ್ತೇರಾದ್ ಖುದ್ ಮುತಾಲಾ ಕರದಂ."

(ನಾನು ನನ್ನ ಪೀರ್ ಮುರ್ಷದರಿಂದಲೂ ಜ್ಞಾನ ಪ್ರಾಪ್ತಿಯ ಸೌಭಾಗ್ಯ ಪಡೆದಿದ್ದೆ. ಇದರ ಹೊರತಾಗಿ ಹಜ್ರತ್ ಶಾಹ ಬುರಾಹನುದ್ದೀನ್ ತಂದೆ ಶಾಹ ಮೀಂರಾಜಿ ಶಮ್ಸುಲ್ ಅಶ್ವಾಖ್ ಖುದ್ದುಸ್‌ರ ಪುರಾತನ ಗ್ರಂಥಗಳು ಹಾಗೂ ಕಿರುಹೊತ್ತಿಗೆಗಳನ್ನು ಅಭ್ಯಸಿಸಿದ್ದೆ. ಅರ್ಥಾತ್ ಸಮಸ್ತ ಜೀವನವನ್ನು ಅದರ ಚರ್ಚೆ-ಸಂವಾದಗಳಲ್ಲಿ ಕಳೆಯಿತು. ಅಂತಿಮವಾಗಿ ಅರ್ಥವಾದದ್ದು ಏನೆಂದರೆ ಸಮಸ್ತ ಬ್ರಹ್ಮಾಂಡವು ಹಾಗೂ 'ಆದಂ'ನ ಸಾರಾಂಶವೇ ಜ್ಞಾನವಾಗಿದೆ.) (ಆಭರಣ.೬೨).

ತಮ್ಮ ಕವನ ರಚನೆಯ ಕುರಿತು ಈ ರೀತಿ ಬರೆಯುತ್ತಾರೆ.

'ದರ್ ಆಂ ತಫ್ಲಿ ಬಖುದರ್ ಇಸ್ತೇರಾದ್ ವೋ ಶೇರ್ ಹಮ್ ಮೈಗಫ್ತಂ ವೋ ಹಂ ದಖನಿ ವೋ ಹಂ ಫಾರಸಿ, ಹರ್ ಕಸ್‌ಕಮಿ ಶನೀದ್ ಮೊತಹರಮಿ ಗಶ್ತ್ ಕೆ ಆಂಯ್ ಉಮ್ರ್ ವಾಂಯ್ ಇಶ್ಕ್‌ವಾಂಯ್ ಇಬಾರತ್ – ವ ಅಲ್ಲಾ ಅಗರ್ ಹೌಸಲಾ ಶೇರ್ ಬನೂದೇ ನಮೀ ಗಫ್ತೆ ಸೀನಾ ಬಮಸಾಯಿಯಾ ಖಯಾರೇ ಬಾದ ರಂಗ್ ಬತರ್ ಖೈದಿಯೇ ವ ದಿಲ್ ಸೋಖ್ತಾ ಅಸ್‌ಬಂದ್ ಆಸಾ ಬರ್ಮಿ ಜಸ್ತೆ ವೊ ಮರ್ದಮ್ ಮುಷಾಹಿದಾ ಮೈಕರ್ ದಂದೆ'

(ಬಾಲ್ಯದಿಂದಲೇ ನನ್ನ ಸಾಮರ್ಥ್ಯ ಹಾಗೂ ಆಸಕ್ತಿಗೆ ಅನುಗುಣವಾಗಿ ದಖನಿ ಹಾಗೂ ಫಾರಸಿಯಲ್ಲಿ ಕವನ ಹೇಳುತ್ತಿದ್ದೆ. ಕೇಳಿದ ಪ್ರತಿಯೊಬ್ಬನು ಆಶ್ಚರ್ಯಚಕಿತವಾಗಿ ಏನೀದು? ಇಷ್ಟು ಚಿಕ್ಕ ವಯಸ್ಸು, ಪ್ರೇಮ ಹಾಗೂ ವಚನ ಶೈಲಿ! ಓ! ಅಲ್ಲಾಹನೇ! ಕವನ ರಚನೆಯ ಅರ್ಹತೆ ನನ್ನಲ್ಲಿ ಇರದಿದ್ದರೆ ಹಾಗೂ ಕವನ ವಾಚನ ಮಾಡದೇ ಇದ್ದರೆ, ನನ್ನೆದೆಯು ಸೌತೆಕಾಯಿಯಂತೆ ಒಡೆದು ಚೂರಾಗುತ್ತಿತ್ತು ಹಾಗೂ ಹೃದಯವು ಉರಿವ ಕರಿಕಾಳಿನಂತೆ ಕುಣಿದಾಡುತ್ತಿತ್ತು. ಜನರು ನಿಂತು ಈ ತಮಾಷೆಯನ್ನು ನೋಡುತ್ತಿದ್ದರು. ಮಹಾಮಹಿಮನಾದ ಅಲ್ಲಾಹನು ನನ್ನ ಈ ಸ್ಥಿತಿಯನ್ನು ಕಣ್ಣಾರೆ ಕಂಡವನಾಗಿದ್ದಾನೆ ಹಾಗೂ ಈ ಸಂಭಾಷಣೆಗೆ ಸಾಕ್ಷಿಯಾಗಿದ್ದಾನೆ.)

ಷರೀಯತ್‌ನ ಅನುಸರಣೆ: (ಧರ್ಮ ಶಾಸ್ತ್ರ ಅನುಸರಣೆ)

ಹಜ್ರತ್ ಬಹರಿ ಅವರು ಹನಫೀ ಸಂಪ್ರದಾಯದ ಸುನ್ನತ್ ಜಮಾತ್‌ನ ಸಂಬಂಧ ಹೊಂದಿದವರಾಗಿದ್ದರು. ಆದುದರಿಂದ 'ಊರುಸೆ-ಇರ್ಫಾನ್'ನ ಒಂದು ಖಸೀದಾ (ವರ್ಣನಾ ಪದ್ಯ)ದಲ್ಲಿ ಈ ರೀತಿ ಬರೆದಿದ್ದಾರೆ.

'ಮನ್ ಮುಸಲ್ಮಾನ್‌ಮ್ ಬೂದ್ ಬರ್‌ಹಕ್ ಖುದಾ ವೊ ಮುಸ್ತಾಫಾ
ದೋಸ್ತಾದ್‌ರಮ್ ಮಜಹಬೇ ಸುನ್ನತ್ ಜಮಾತ್ ರಾಂಕೂ'

'ಹೃದಯದಿಂದ ಮುಸಲ್ಮಾನನಾಗಿ ಅಲ್ಲಾಹ ಹಾಗೂ ಪ್ರವಾದಿಯ ನಿಷ್ಠನು ನಾನು
ಆದರೆ ಸುನ್ನತ್ ಜಮಾತಿನ ಸ್ನೇಹವಿರುವುದು ನನಗೆ'

ಸೂಫಿ ಪಂಥದ ಪ್ರಕಾರದಿಂದ ಅವರು ಮಜಜ್ಞೂಬ್ (ಸಂತ್-ಫಕೀರ್) ಸಾಲಿಕ್ (ಸಾಧಕ) ಹಾಗೂ ದೈವವಾಣಿಯ ಪ್ರವಾಚಕರಾಗಿದ್ದರು. ಧರ್ಮವನ್ನು ದೇಹವೆಂದು ಹಾಗೂ ಪ್ರೇಮವನ್ನು ಜೀವವೆಂದು ಬರೆದು, ತರೀಖತ್ (ಕರ್ಮಕಾಂಡ), ಹಾಗೂ ಹಖೀಖತ್‌ನನ್ನು (ಬ್ರಹ್ಮಕಾಂಡ), ಶರೀಯತ್‌ನ (ಧರ್ಮಶಾಸ್ತ್ರ ಕಾಂಡದ) ಅಧೀನವೆಂದು ವಾದಿಸುತ್ತಿದ್ದರು. ಹಾಗೂ ಶರೀಯತ್ ನಿಷೇಧಿಗಳು ದಿವ್ಯಜ್ಞಾನದಿಂದ ಹತಾಶರಾದವರು

ಎಂದು ಬಗೆಯುತ್ತಿದ್ದರು. ಪ್ರಥಮ ಆಭರಣದಲ್ಲಿ ಧಾರ್ಮಿಕ ವ್ಯವಹಾರಗಳ ಕಡೆ ಗಮನಹರಿಸಲಾಗಿದೆ. ಇದರ ವಿಸ್ತೃತ ವಿವರ ಮುಂದಿನ ಪುಟಗಳಲ್ಲಿದೆ.

ಧಾರ್ಮಿಕ ಹಿತಚಿಂತನೆ:

ಯಾವುದೇ ಧರ್ಮ, ಮತ–ಪಂಥಗಳ ಭೇದ–ಭಾವವಿಲ್ಲದೆ ಎಲ್ಲರ ಜತೆ ಸಹೃದಯ ಹಾಗೂ ಪ್ರೇಮಭಾವದ ಸಂಬಂಧ ಇಟ್ಟುಕೊಂಡಿದ್ದರು. ಸದಾ ಮೈತ್ರಿಭಾವದ ಮನೋಭಾವದರಾಗಿದ್ದರು. ಧಾರ್ಮಿಕ ವೈಷಮ್ಯದಿಂದ ದೂರವಿರುವ ಈ ವ್ಯಕ್ತಿಯನ್ನು ಧರ್ಮನಿಷ್ಠರು ತಮ್ಮ 'ಪೀರ್' ಎಂದು ಹಾಗೂ ಬ್ರಾಹ್ಮಣರು ಬಹರಿಯನ್ನು ತಮ್ಮ ಗುರುವೆಂದು ಕರೆಯುತ್ತಿದ್ದರು.

'ಆಂಕೆ ಅಜ಼್‌ಬಂದ್ ತಾಸ್ಸುಬ್ ಹಚೂ ಬಹರಿ ಬಾಜ಼್‌ರಾಸ್ತ್,
ಹಮ್ ಬಾ ಮೋಮಿನ್ ಮುರ್ಷದ್ ಆಮವ ಬ್ರಹ್ಮನ್ ರಾಗುರು'

ಹೇ ಬಹರಿ, ಯಾವನು ಮತ ವೈಷ್ಯಮ್ಯದ ಸೆರೆಯಿಂದ ಮುಕ್ತನು
ಅವನು ಮೋಮಿನಿನ[೧] ಮುರ್ಷದನು[೨] ಹಾಗೂ ಬ್ರಾಹ್ಮಣನ ಗುರುವು.[೩]

ಸೂಫಿ ಪರಂಪರೆ:

ಹಜ್ರತ್ ಬಹರಿ ಅವರ ಖಾದರಿಯಾ ಸೂಫಿ ಪರಂಪರೆಯ ಹೊರತಾಗಿಯೂ ಚಿಶ್ತಿಯಾ ಸಿಲ್‌ಸಿಲಾದಲ್ಲೂ ದೀಕ್ಷೆ (ಬಯತ್)ಯನ್ನು ಪಡೆದಿದ್ದರು. ಯಾವ ಉತ್ಸಾಹದಿಂದ ಅವರು 'ಸಮಾ'ದ (ಸೂಫಿ ಸಂಗೀತ ಗೋಷ್ಠಿ)ಯ ಸಮರ್ಥಕರಾಗಿದ್ದರೋ, (ಆಭರಣ ೧೩೩ ನೋಡಿ) ಇದರಿಂದ ಚಿಶ್ತಿಯಾ ಪರಂಪರೆಯಲ್ಲಿ ನಿಷ್ಠೆ ಅನಿವಾರ್ಯವಾಗಿದೆ. ಈ ಪಂಥ ಪರಂಪರೆಯಲ್ಲಿ ಅವರು ತಮ್ಮ ತಂದೆಯವರಿಂದ ದೀಕ್ಷೆ ಪಡೆದಿದ್ದರೆಂದು ಊಹಿಸಲಾಗಿದೆ. ಇವರ ತಂದೆಯವರು ಶಾಹ ಹಜ್ರತ್ ಬುರಾಹನುದ್ದೀನ್ ಜಾನಂ ಅವರ ಒಂದು ಸಂಬಂಧದಿಂದ ಖಲೀಫಾ[೪]ರಾಗಿದ್ದರು. ಇವರ ಪ್ರಸ್ತಾಪವನ್ನು ಅವರ 'ಮನ್ ಲಗನ್'ನಲ್ಲಿ ಈ ರೀತಿಯಾಗಿದೆ.

---

೧. ಮೋಮಿನ್ – ಧರ್ಮನಿಷ್ಠ ಮುಸ್ಲಿಂ

೨. ಮುರ್ಷದ್ – ಸೂಫಿಗುರು

೩. ಆಭರಣ – ೧೧೨

೪. ಖ್ವಾಜಿ ದರಿಯಾ ಅವರು ಹಜ್ರತ್ ಜಾನಂರವರ ಖಲೀಫಾರಾದ ಬಗ್ಗೆ ಎಲ್ಲಿಯೂ ಖಚಿತ ಉಲ್ಲೇಖ ದೊರೆಯುವುದಿಲ್ಲ. ಜನಾಬ್ ಹುಸೇನಿ ಶಾಹೇದ್ ಅವರು ಅದರ ಪ್ರಮಾಣವಿಲ್ಲದೆ ಪು.ಸಂ. ೧೮೪ರಲ್ಲಿ ಹಾಗೂ 'ಉರುಸೇ–ಇರ್ಫಾನ್'ನ ಪು.ಸಂ.೨೬೩ ರಲ್ಲಿ ಅವರನ್ನು ಖಲೀಫಾರ ಯಾದಿಯಲ್ಲಿ

'ಥಾ ಬಾಪ್ ಮೆರಾ ಮುರೀದ್ ಇಸ್ ಘರ್ ಕಾ
ಇಸ್ ಘರ್ ಸೂಂ ಕ್ಯಾ ಅಪಸ್ ಕೂಂ ಗೋಹರ್'

ಇಸ್ ಘರ್ ಸೂಂ ಮುಝ್ಝು ಬಿ ಬಂದಗಿ ಹೈ
ಮುಝ್ಝು ಜೂಂ ಮೇ ಜೋತ್ ಹೋ ಚುಕಿ ಹೈ.

(ನನ್ನ ತಂದೆಯು ಆ ಮನೆಯ ಮುರೀದ್‌ರಾಗಿದ್ದರು
ಆ ಮನೆಯಿಂದ ತನ್ನನ್ನು ರತ್ನವಾಗಿಸಿಕೊಂಡರು

ಆ ಮನೆಯೆಡೆಗೆ ನನಗೂ ದಾಸ್ಯರಾಧನೆಯ ಭಾವವಿದೆ.
ನನ್ನ ಆತ್ಮವೂ ಅಲ್ಲಿಯ ಜ್ಯೋತಿಯಿಂದಲೇ ಬೆಳಗಿದೆ.)

ಹಜ್ರತ್ ಬಹರಿ ಅವರ ಖಾದರಿಯಾ ಖಿಲಾಫತ್‌ನ ವಂಶಾವಳಿ:

ಹಜ್ರತ್ ಬಹರಿ ಅವರು ಹಜ್ರತ್ ಶಾಹ ಮಹ್ಮದ ಬಾಖರ್ ಉರ್ಫ್ ಮಂಜನ್ ಬಘರಿ ಅವರ ಹಸ್ತದ ಮೇಲೆ ಖಾದರಿಯಾ ಸೂಫಿ ಪರಂಪರೆಯ (ಸಿಲ್‌ಸಿಲಾ) ಸೂಫಿ ಸಂತತ್ವದ ದೀಕ್ಷೆ ಪಡೆದಿದ್ದರು. ಸಂತತ್ವದ ದೀಕ್ಷೆ ಸ್ವೀಕರಿಸಿದಾಗ ಹಜ್ರತ್ ಬಹರಿ ಅವರು ಸುಮಾರು ೪೦ ವರ್ಷ ವಯಸ್ಸಿನವರಾಗಿದ್ದರು. 'ಮನ್ ಲಗನ್' ನಲ್ಲಿ ಈ ವಿಷಯ ಪ್ರಸ್ತಾಪಿಸುತ್ತಾ, ೪೦ನೇ ವಯಸ್ಸಿನವರೆಗೆ ತಮ್ಮ ಹವ್ಯಾಸವು ಕವನ ವಾಚನ ಹಾಗೂ ಸೌಂದರ್ಯ ಅಸ್ವಾದನೆಯಾಗಿತ್ತೆಂದು ಉಲ್ಲೇಖಿಸಿರುತ್ತಾರೆ. ಹಜ್ರತ್ ಬಹರಿ ಅವರ ಖಿಲಾಫತ್‌ನ ವಂಶವೃಕ್ಷ ಈ ರೀತಿಯಾಗಿತ್ತು.

ಸೇರಿಸಿದ್ದಾರೆ. ಅಮೀನುದ್ದೀನ್ ಆಲಿಯ ಗ್ರಂಥವನ್ನು ನೋಡಿ. ಆದರೆ 'ಉರುಸೇ-ಇರ್ಫಾನ'ನ ವಾಕ್ಸರಣಿಯಿಂದ ಅವರು ಖಲೀಫಾರಾದ ಬಗ್ಗೆ ಸಾಬೀತಾಗುವುದಿಲ್ಲ. ಆದರೆ ಖಲೀಫಾ ಶಾಹ ಬುರಹಾನುದ್ದೀನ್ ಅವರು ಹಜ್ರತ್ ಮಹ್ಮದ್ ಬಾಖರ್ ಅವರ ಸಮ್ಮುಖ ಹಾಜರಾಗಿ ಸಂಭಾಷಿಸಿದ ಉಲ್ಲೇಖವಿದೆ. ಹೀಗಾಗಿ ಸಂಗ್ರಹಿತ ಮೂಲಪ್ರತಿಯ ಪದವಿನ್ಯಾಸ ಏನೆಂಬುದು ಸ್ಪಷ್ಟವಿಲ್ಲ. ಸಖಾವತ್ ಮಿರ್ಜಾ ಸಾಹೇಬರೂ ಸಹ ಖಾಜಿ ದರಿಯಾ ಹಾಗೂ ಹಜ್ರತ್ ಜಾನಂ ಅವರ ಮಧ್ಯೆ ಒಂದು ಖಚಿತ ಉದ್ದೇಶದ ಸಂಬಂಧವಿತ್ತು ಎಂಬ ಪ್ರಸ್ತಾಪವಿದೆ. ಆದರೆ ಇತಿಹಾಸದಿಂದ ತಿಳಿಯುವುದೇನೆಂದರೆ ಖ್ವಾಜಿ ದರಿಯಾ ಅವರು ಇಬ್ರಾಹೀಂ ಆದಿಲ್‌ಶಾಹನ ಆಳ್ವಿಕೆಯ ಕಾಲದಲ್ಲಿ ಮದ್ರಾಸಿನಿಂದ ಬಿಜಾಪುರಕ್ಕೆ ಬಂದಿದ್ದರು. ಇವರ ಆಗಮನ ಹಿ.ಶ.೧೦೦೭ಕ್ಕಿಂತ ಮುಂಚೆ ಆಗಿರಬೇಕು. ಆದರೆ ಅದು ಹುಸೇನಿ ಶಾಹೆದ್ ಸಾಹೇಬರ ಸಂಶೋಧನೆಯ ಪ್ರಕಾರ ಹಜ್ರನ್ ಜಾನಮ್ ಅವರ ನಿಧನದ ವರ್ಷ. ಖ್ವಾಜಿ ದರಿಯಾ ಅವರ ವಯಸ್ಸು ಆ ಸಮಯದಲ್ಲಿ ೨೨ ಅಥವಾ ೨೩ ವರ್ಷ ಎಂದು ಭಾವಿಸಿದರೂ ಖಿಲಾಫತಿನ ವರ್ಷವನ್ನು ಜಾನಂರವರ ನಿಧನದ ವರ್ಷ ಎಂದು ಒಪ್ಪಿಕೊಂಡರೆ, ಹಜ್ರತ್ ಬಹರಿ ಅವರ ಜನ್ಮದ ಸಮಯದಲ್ಲಿ ಅವರ ವಯಸ್ಸು ೫೦ ವರ್ಷ ಎಂದು ಸಾಬೀತಾಗುತ್ತದೆ. ಇದು ಅಸಂಭವನೀಯ.

'ಶಾಹ ಮಹಮೂದ ಬಹರಿ ಅವರು ಶಾಹ ಮಹ್ಮದ್ ಬಾಖ಼ಿರ್ ಅವರ ಖಲೀಫಾರಾಗಿದ್ದರು ಹಾಗೂ ಮಹ್ಮದ್ ಬಾಖ಼ಿರ್ ಅವರು ಸಯ್ಯದ ಶಾಹ ಅಬ್ದುಲ್ ಸತ್ತಾರ್ ಹಾದಿ ಅವರ ಶಾಹ ಮೀರಾನ್ ಅಶ್ರಫರ್ ಅವರ, ಅವರು ತಮ್ಮ ಚಿಕ್ಕಪ್ಪನವರಿಂದ, ಅವರಿಗೆ ತಮ್ಮ ತಂದೆಯವರಾದ ಸಯ್ಯದ್ ಅಬುಲ್ ಹಸನ್ ಜಲಾಲುದ್ದೀನ್ ಅವರಿಂದ, ಅವರಿಗೆ ಸಯ್ಯದ್ ಜಹೀರುದ್ದೀನ್ ಅವರಿಂದ, ಅವರಿಗೆ ಅಬುಲ್ ಖಾಸಿಂ ಅವರಿಂದ, ಅವರಿಗೆ ಸಯ್ಯದ್ ಅಬುಲ್ ಹಸನ್ ಅವರಿಂದ ಅವರಿಗೆ ಸಯ್ಯದ್ ಮೂಸಿ ಅವರಿಂದ, ಅವರಿಗೆ ಸಯ್ಯದ್ ಮಹ್ಮದ್ ಅವರಿಂದ, ಅವರಿಗೆ ಸಯ್ಯದ್ ಹಸನ್ ಅವರಿಂದ, ಅವರಿಗೆ ಸಯ್ಯದ್ ಅಹ್ಮದ್ ಅವರಿಂದ, ಅವರಿಗೆ ಸಯ್ಯದ್ ಅಬು ಸಾಲೇಹ ನಸರ್ ಇಬ್ನೆ ಸಯ್ಯದ್ ತಾಜುದ್ದೀನ ಅವರಿಂದ, ಅವರಿಗೆ ಅಬ್ದುಲ್ ರಜ಼ಾಕ್ ಇಬ್ನೆ ಮೀರಾನ್ ಮುಹಿಯುದ್ದೀನ್ ಸಯ್ಯದನಾ ಅಬ್ದುಲ್ ಖಾದರ್ ಜೀಲಾನಿ ಬಗ್ದಾದಿ (ರ.ಅ) ಇವರಿಂದ ಖಿಲಾಫತ್‌ನ ದೀಕ್ಷೆ ಪ್ರಾಪ್ತಿಯಾಗಿತ್ತು.

ಹಜ್ರತ್ ಶಾಹ ಮಹ್ಮದ ಬಾಖ಼ಿರ್ ಅವರು ತಮ್ಮ ೧೦೦ನೇ ವಯಸ್ಸಿನಲ್ಲಿ ೧೧ ಷವ್ವಾಲ್ ೧೧೪೯ ಹಿಜರಿಯಲ್ಲಿ ನಿಧನ ಹೊಂದಿದರು. ಅವರು ವಿದ್ಯಾನುರಾಗಿಯೂ ಪರಿಪೂರ್ಣ ಸಾಧಕರೂ ಆಗಿದ್ದರು. ಮೃತ್ಯುವಿನ ಸಮಯದಲ್ಲಿ ಅವರ ಪ್ರತಿ ಕೇಶವೂ ಹಾಗೂ ಪ್ರತಿ ಕಣವೂ ಪರಂದ್ಯೆವದ ಸ್ಮರಣೆಯಲ್ಲಿ ನಿರತವಾಗಿತ್ತು. (ನೋಡಿ ಆಭರಣ ೧೪೦). 'ಮನ್ ಲಗನ್'ನಲ್ಲಿ ಅವರನ್ನು ಕುರಿತು ಬರೆಯಲಾದ 'ಮನ್‌ಖಬತ್' (ಪ್ರಶಂಸಾ ಕಾವ್ಯ)ಗಳಿಂದ ವ್ಯಕ್ತವಾಗುವುದು, ಏನೆಂದರೆ ಅವರು ಬಡತನವೂ ಅಭಿಮಾನದ ಗರಿ ಎನ್ನುವ ನಿಲುವು ಅವರದಾಗಿತ್ತು. ಇವರು ಫಾರಸಿಯ ಉತ್ತಮ ಕವಿಗಳಾಗಿದ್ದರು ಹಾಗೂ ಕವನ ರಚನೆಯಲ್ಲಿ ಬಹರಿ ಅವರ ಗುರುಗಳಾಗಿದ್ದರು. ಹಜ್ರತ್ ಬಹರಿ ಅವರು ತಮ್ಮ ಗುರು ಶಾಹ ಬಾಖ಼ಿರ್ ಅವರ ಮೃತ್ಯುವಿನ ಕುರಿತು ಬರೆದ 'ಖ಼ತಾ' (ಕವನ)ದಿಂದ, ಅವರ ನಿಧನದ ವರ್ಷ ತೆಗೆಯಲಾಗಿದೆ. ಅದರ ಕೆಲವು ಆಯ್ದ ಸಾಲುಗಳು ಇಲ್ಲಿವೆ.

ಮಹ್ಮದ್ ಬಾಖ಼ಿರ್ ಆಂ ಬಹರ್ ಮಾಯಿನಿ
ಕೆ ರೋಶನ್ ಬೂದ್ ಅಜ಼್ ಮಾವಾಯೇ ವಹದತ್

ವೋ ಯೇಕ್ ರಫ್ತಾ ಬೂದ ಅಜ್ ಮಾಹ ಷವ್ವಾಲ್
ಬ ಶಂಬಾ ಆಂ ಶಯ್ ವಾಲಾಯೇ ವಹದತ್
ಹಿಸಾಬ್ ಸಾಲಿಶ ಆಜ್ ಮಿಸ್ರಾಅ ಆಖ಼ಿರ್
ಬಗೀರ್ ಆಯ್ ಶಮ್ಮ ಮಹಫಿಲ್ ಹಾಯ್ ವಹದತ್

ವಲೇ ದರ್ಪರ್ದ ದಾರದ್ ಅವೋ ಶುಮಾರಾ
ಮಹ್ಮದ್ ಬಾಖರ್ ಅಂ ದರ್ಯಾಯೇ ವಹದತ್. (೧೧೪೯ ಹಿ.)

ಬಹರಿ ಅವರಿಗೆ ಸಿಕಂದರ್ ಆದಿಲ್‌ಶಾಹ ದ್ವಿತೀಯನ ಸಂಸ್ಥಾನದ ಕೃಪೆಗಳು:

ಹಜ್ರತ್ ಬಹರಿ ಅವರು ತಮ್ಮ ಗುರುವಿನ ನಿಧನದ ಬಳಿಕ, ಔರಂಗಜೇಬ್ ಆಲಂಗೀರನು ಬಿಜಾಪುರವನ್ನು ವಶಪಡಿಸಿಕೊಳ್ಳುವ ಕೆಲವು ವರ್ಷ ಮೊದಲು ಅಲ್ಲಿಗೆ ಹೋಗಿದ್ದರು. ಆ ಸಮಯದಲ್ಲಿ ಅವರು ಅತೀವ ಬಡತನದಿಂದ ಬಳಲುತ್ತಿದ್ದರು. ಹಜ್ರತ್ ಶಾಹ ನಯೀಮುಲ್ಲಾ ಬುಖಾರಿ ಬಿಜಾಪೂರಿ ಅವರ ಅನುಯಾಯಿಯಾಗಿದ್ದ, ಸುಲ್ತಾನ್ ಸಿಕಂದರ್ ಆದಿಲ್‌ಶಾಹ (ಹಿ.ಶ.೧೧೧೧) ನು ಇವರನ್ನು ಅತೀವ ಗೌರವ ಆದರಗಳಿಂದ ಕಂಡನು. ಹೀಗಾಗಿ ಇವರು ಸುಮಾರು ಎರಡು ವರ್ಷ ಖುಸ್ರುವಿ ಶಿಬಿರದಲ್ಲಿ ಅತಿಥಿಯಾಗಿದ್ದರು. ಈ ಅವಧಿಯಲ್ಲಿ ಸಿಕಂದರ್‌ಶಾಹನು ಅತೀವ ಶ್ರದ್ಧಾ-ಭಕ್ತಿಗಳಿಂದ ಇವರಿಂದ ಆಧ್ಯಾತ್ಮಿಕ ಪ್ರಯೋಜನ ಹಾಗೂ ಆಶೀರ್ವಾದ ಪಡೆದನು. ಅಲ್ಲಿಯ ವಾಸ್ತವ್ಯದ ಅವಧಿಯ ಒಂದು ಸಂಭಾಷಣೆಯ ವಿವರವನ್ನು ಹಜ್ರತ್ ಬಹರಿ ಅವರು ತಮ್ಮ ಆಭರಣ ೩೦ರಲ್ಲಿ ದಾಖಲಿಸಿದ್ದಾರೆ. ಬೀಳ್ಕೊಡುವಾಗ ಸುಲ್ತಾನ್ ಸಿಕಂದರ್‌ಶಾಹನು ಅತ್ಯಮೂಲ್ಯ ರಾಜಪೋಷಾಕು, ಕತ್ತಿಗಳು ಹಾಗೂ ಕಾಣಿಕೆಗಳನ್ನು ಅರ್ಪಿಸಿದನು. ಇದರ ಹೊರತಾಗಿ ೧೨೦ ಹೆಕ್ಟೇರ್ ಭೂಮಿಯನ್ನು ನುಸ್ರತಾಬಾದ್ ಸಗರ ಪ್ರಾಂತ್ಯದ ಗ್ರಾಮಗಳಾದ ಅಂಗನಹಾಳ್ ಹಾಗೂ ಹಂಚಿನಾಳದ ಜಾಗೀರಿನ ಸನದನ್ನು ನೀಡಿದನು. ಅದರ ಮರುಅನುಮೋದನೆಯನ್ನು ಶಹಂಶಾಹ ಆಲಂಗೀರ್ ಹಾಗೂ ನಂತರದ ಸುಲ್ತಾನರು ಹಾಗೂ ಆಸೀಫಿಯಾ ಸುಲ್ತಾನರು ಮುಂದುವರೆಸಿದರು. ಶಾಹಿ ಫರ್ಮಾನಿನಲ್ಲಿ ಇವರನ್ನು 'ಹಖಾಯಿಖ್-ವೊ-ಮಾಅರುಫ್ ಆಗಹಾ ಖ್ವಾಜೆ ಮಹಮೂದ್ ಬಹರಿ ದರವೇಶ್' ಎಂಬ ಉಪಾಧಿಯಿಂದ ಸಂಬೋಧಿಸಲಾಗಿದೆ.

'ಸಲಾತೀನೆ ಬಸಾತೀನ್' ಲೇಖಕನು ತನ್ನ ಇತಿಹಾಸ ಗ್ರಂಥದಲ್ಲಿ ಸಿಕಂದರ ಆದಿಲ್‌ಶಾಹನು ಆ ಕಾಲದ ದೈವಸಾಮಿಪ್ಯ ಹೊಂದಿದವರ ಹಾಗೂ ಆಧ್ಯಾತ್ಮಿಕ ಜ್ಞಾನ ಸಿದ್ಧಿಯ ವ್ಯಕ್ತಿಗಳ ಸಹವಾಸದ ಪ್ರೇಮಿಯಾಗಿದ್ದನು. ಹಜ್ರತ್ ಬಹರಿ ಅವರ ಸಾಂಗತ್ಯದ ಘಟನೆಯನ್ನು ಬರೆಯುತ್ತಾ ಅವರನ್ನು 'ಮಸ್ತ್ ಬಾದಯೇ ಇರ್ಫಾನ್, ಫರ್‌ಷಾ ರೆ ಖಿಮ್‌ಆನಾ ವಜ್ದಾನ್, ಆರೀಫ ಬಾ ಅಲ್ಲಾಹ ಶೇಖ್ ಮಹಮೂದ ಬಹರಿ, ಉರುಸೇ ಇರ್ಫಾನಿನ ಕರ್ತೃ ಎಂಬ ಉಪಾಧಿಗಳಿಂದ ಸ್ಮರಿಸಿದ್ದಾನೆ.[೧]

'ಉರುಸೇ-ಇರ್ಫಾನ್'ನ ಅಂತ್ಯದಲ್ಲಿ ಅವರಿಗೆ ಸಲ್ಲಿಸಿದ ಕಾಣಿಕೆಯ ಬಹುಮೂಲ್ಯ ಸ್ವತ್ತು ಹಾಗೂ ಕಾವ್ಯ ಮತ್ತು ಸಾಹಿತ್ಯದ ಮಹತ್ವದ ಸಂಗ್ರಹಗಳು, ಹೈದ್ರಾಬಾದಿಗೆ ಹೋಗುವ ಮಾರ್ಗದಲ್ಲಿ ಮುಖವಾಡ ಧರಿಸಿದ ಡಕಾಯಿತರಿಂದ ಲೂಟಿಯಾದವು.

ಬಹರಿ ಅವರ ಪಂಥದ ತನಿಖೆಗಾಗಿ ಸೇನಾಧಿಪತಿ ಫೇರೋಜ್ ಜಂಗ್‌ನನ್ನು ಕಳುಹಿಸುವುದು:

ಬಿಜಾಪುರದ ವಿಜಯದ ಬಳಿಕ, ಔರಂಗಜೇಬ್ ಆಲಂಗೀರ್‌ನು ತನ್ನ ಸೇನಾಧಿಪತಿಯಾದ ನವಾಬ್ ಘಾಜಿಯುದ್ದೀನ್, ಫೇರೋಜ್ ಜಂಗ್‌ನನ್ನು ವಾಗಣಗೇರಾದ ರಾಜನ ಬಂಡಾಯುವನ್ನು ಹತ್ತಿಕ್ಕಲು ಕಳುಹಿಸಿದನು. ಫೇರೋಜ್‌ಜಂಗ್‌ನಿಗೆ ಅವನ ಸಹವರ್ತಿಗಳಲ್ಲಿ ಒಬ್ಬರು ಹಜ್ರತ್ ಬಹರಿ ಅವರು ಧರ್ಮವಿರೋಧಿ ಆಗಿದ್ದಾರೆಂದು ಮಾಹಿತಿ ನೀಡಿದರು.

ಫೇರೋಜ್ ಜಂಗ್‌ನು ಈ ವಿಷಯದ ತನಿಖೆಗಾಗಿ ಹಾಗೂ ಆಲಂಗೀರ್‌ನ ಆದೇಶದ ಪರಿಪಾಲನೆಗಾಗಿ ಲಷ್ಕರ್‌ನ ಮುಖ್ಯ ಖಾಜಿಯಾಗಿದ್ದ ಹಬೀಬಲ್ಲಾ ಅವರನ್ನು ಹಜ್ರತ್ ಬಹರಿ ಅವರ ಬಳಿ ಕಳುಹಿಸಿದನು. ಖಾಜ಼ಿ ಸಾಹೇಬರು ಅತ್ಯಂತ ಕಠೋರ ಸ್ವಭಾವದ ವ್ಯಕ್ತಿಯಾಗಿದ್ದು, ಕೆಲವು ದಿನಗಳ ಮೊದಲು ಒಬ್ಬ ದರ್ವೇಶನನ್ನು ಧರ್ಮ ವಿರೋಧಿ ಚರ್ಚೆಯ ಅಪರಾಧದಲ್ಲಿ ಹತ್ಯೆಗೆ ಆದೇಶಿಸಿದ್ದರು. ವಿಚಾರಣೆಗಾಗಿ ಹಜ್ರತ್ ಬಹರಿ ಅವರ ಬಳಿಗೆ ಖಾಜಿ ಹಬೀಬುಲ್ಲಾ ಆಗಮಿಸಿ, ಸಲಾಂ ಮಾಡಿ ಕುಳಿತುಕೊಂಡ. ಉಭಯ ಕುಶಲೋಪರಿಯ ನಂತರ ತನಿಖೆಯ ಬಗ್ಗೆ ಪ್ರಸ್ತಾಪಿಸದೇ ಹೊರಟುಹೋದ. ತನಿಖೆ ಅಥವಾ ಯಾವುದೇ ಶಿಕ್ಷೆಯ ಅವಶ್ಯಕತೆಯೇ ಖಾಜಿಗೆ ತಲೆದೋರಲಿಲ್ಲ. (ನೋಡಿ ಆಭರಣ ೧೧೩).

ಔರಂಗಜೇಬ್ ಆಲಂಗೀರ್‌ನ ಜತೆ ಭೇಟಿ:

ಔರಂಗಜೇಬ್ ಆಲಂಗೀರ್‌ನು ಸಗರದ ಕಡೆಯಿಂದ ಪ್ರಯಾಣಿಸುತ್ತಿದ್ದಾಗ, ಬಹರಿ ಅವರನ್ನು ಭೇಟಿ ಮಾಡಿದನು. ಬಹರಿ ಅವರು 'ಭಂಗ್' ಕುಡಿಯುತ್ತಾರೆಂದು ಜನರು ಆಲಂಗೀರ್‌ನ ಬಳಿ ದೂರು ನೀಡಿದ್ದರು. ಆಗ ಬಹರಿ ಅವರು ಬೇಕಂತಲೆ 'ಭಂಗ್' ಕುಡಿಯುವ ಪಾತ್ರೆ ತರಿಸಿದರು. ಆಗ ಆಲಂಗೀರನು ಅದರಲ್ಲಿ ಇಣುಕಿ ನೋಡಿದಾಗ ಅದು ಹಾಲಾಗಿ ಕಾಣಿಸಿತು. ಇದೇ ಸಮಯದಲ್ಲಿ ಅವರು ತಮ್ಮ ನಿಲುವಂಗಿಯನ್ನು ಬಿಚ್ಚಿ ಒಂದು ಮೂಲೆಯಲ್ಲಿ ಇಟ್ಟಿದ್ದರು. ಆಗ ಆ ನಿಲುವಂಗಿ ಕಂಪಿಸುತ್ತಿದ್ದನ್ನು ಕುತೂಹಲದಿಂದ ಆಲಂಗೀರನು ಗಮನಿಸಿದನು. ಇದರ ಕಾರಣವನ್ನು ಕೇಳಲಾಗಿ ಬಹರಿ ಅವರು 'ನಾನು ರಾಜ ಮರ್ಯಾದೆಯನ್ನು ನಿಲುವಂಗಿಯ ವಶಕ್ಕೆ ನೀಡಿದ್ದೇನೆ. ಆದುದರಿಂದ ನಾನು ರಾಜಗಾಂಭೀರ್ಯ ಮರೆತಿದ್ದೆನೆ ಎಂದು ಅಪಾರ್ಥ ಮಾಡಿಕೊಳ್ಳಬಾರದು' ಎಂದು ಉತ್ತರಿಸಿದರು. ಈ ಘಟನೆಯ ವಿವರವನ್ನು ಸಖಾವತ್ ಮಿರ್ಜಾ ಸಾಹೇಬರು ಸಹ 'ಮನ್ ಲಗನ್'ದ ಮುನ್ನುಡಿಯಲ್ಲಿ 'ಅನ್ವಾರೇ ಜಲಾಲಿಯಾ'ದ ಆಧಾರದಿಂದ ಬರೆದಿದ್ದಾರೆ. ಇದನ್ನು ನಾನು ಗೋಗಿ ಪ್ರಯಾಣದ ಸಮಯದಲ್ಲಿ ಸ್ಥಳಿಯರಿಂದಲೂ ಕೇಳಿದ್ದೇನೆ.

ನಿಧನ:

ಹಜ್ರತ್ ಬಹರಿಯವರು ೯೮ ವರ್ಷಗಳ ದೀರ್ಘಾಯುಷಿಗಳಾಗಿದ್ದರು ಹಾಗೂ ತಮ್ಮ ಜೀವಮಾನದ ಅವಧಿಯಲ್ಲಿಯೇ ಅನೇಕ ರಾಜಕೀಯ ಬದಲಾವಣೆಗಳನ್ನು ಕಂಡವರಾಗಿದ್ದರು. ಆದಿಲ್‌ಶಾಹಿ ಹಾಗೂ ಖುತುಬ್‌ಶಾಹಿ ಸಾಮ್ರಾಜ್ಯಗಳ ಉತ್ತುಂಗಸ್ಥಿತಿ ಹಾಗೂ ಅವನತಿಗಳು ಅವರ ಕಣ್ಣ ಮುಂದೆಯೇ ಸಂಭವಿಸಿದ್ದವು. ಅವರ ಬಾಲ್ಯವು ಜಗದ್ಗುರು ಇಬ್ರಾಹೀಂ ಆದಿಲ್‌ಶಾಹ (ಹಿ.ಶ. ೧೦೩೮– ಕ್ರಿ.ಶ.೧೬೨೮) ಕಾಲದಲ್ಲಿ ಕಳೆದರೆ, ಯೌವ್ವನವು ಎರಡನೇ ಆಲಿ ಆದಿಲ್‌ಶಾಹ (ಹಿ.ಶ.೧೦೩೮ – ಕ್ರಿ.ಶ. ೧೬೭೨)ನ ಕಾಲದ್ದಾಗಿತ್ತು. ಅವರು ಜನಪ್ರಿಯತೆಯ ತುತ್ತ ತುದಿ ತಲುಪಿದ್ದು ಸಿಕಂದರ್ ಆದಿಲ್‌ಶಾಹ ಆಳ್ವಿಕೆಯಲ್ಲಿ. ಮೊಗಲ್ ದೊರೆ ಔರಂಗಜೇಬ್ ಆಲಂಗೀರ್ ದಖನ್ ಕಡೆಗೆ ಬರುವ ವೇಳೆಗಾಗಲೇ ಅವರು ವಯೋವೃದ್ಧರಾಗಿದ್ದರು. ತಮ್ಮ ೬೮ನೇ ವಯಸ್ಸಿನಲ್ಲಿ (ಹಿ.ಶ. ೧೧೦೦)ರಲ್ಲಿ ಅವರದೇ ಉಕ್ತಿಯಂತೆ 'ಪೀರ್ ಪಾಯೇ, ಮನ್ ಶಿಕಸ್ತಾ' (ಮನನೊಂದವನಾಗಿ ಪೀರ್‌ರ ಪಾದವ ಹಿಡಿದಿದ್ದೆ). ಹೀಗೆ ಪಾದವ ಹಿಡಿದವರು ಕೊನೆಯ ಉಸಿರು ಎಳೆಯುವವರೆಗೂ ಪೀರ್‌ರ ಚೌಖಂಡಿಯ ಆವರಣದಲ್ಲಿಯೇ ಕುಳಿತಿದ್ದರು. ಪ್ರಾಣತ್ಯಾಗ ಮಾಡಿದ ನಂತರವೂ ಅದೇ ಪರಿಸರದಲ್ಲಿಯೇ ಚಿರನಿದ್ರೆಯಲ್ಲಿದ್ದಾರೆ. ಅವರು ತಮ್ಮ ಜೀವಿತದ ಏಕಾಂತವಾಸದ ಅವಧಿಯಲ್ಲಿ ತಮ್ಮ 'ಪೀರ್'ನ ಚೌಖಂಡಿಯನ್ನು ನಿರ್ಮಿಸಿದರು. ಇದರ ದಿನಾಂಕವನ್ನು ವ್ಯಕ್ತಪಡಿಸುವ ಕವನವು 'ಊರುಸೆ–ಇರ್ಫಾನ್'ನಲ್ಲಿ ದಾಖಲಾಗಿದೆ. 'ಗುರುವಿನ ಮರಣದ ದಿನಾಂಕವು ಈ ಕವನ ಚರಣದಿಂದ ಹೊರಹೊಮ್ಮುತ್ತದೆ' ಎಂದಿದ್ದಾರೆ.

"ಮಹಮೂದ್ ಬಹರಿ ಬಂದಯೇ ಬಾಖರ್ ಮಹ್ಮದ್ ಬೇಶಕೆ" (ಹಿ.ಶ.೧೧೧೬)

ಬಹರಿ ಅವರು ಅಂತ್ಯಕಾಲದಲ್ಲಿ ತೀವ್ರವಾಗಿ ಅಸ್ವಸ್ಥರಾಗಿದ್ದರು. ಐವತ್ತು ಸಾವಿರಕ್ಕೂ ಹೆಚ್ಚು ಸಾಲುಗಳ ಕಾವ್ಯದ ಕಟ್ಟನ್ನು ಕಳೆದುಕೊಂಡು ಹತಾಶರಾಗಿದ್ದರು. ಅಂತಹ ಅನಾರೋಗ್ಯದ ಸ್ಥಿತಿಯಲ್ಲಿಯೇ 'ಮನ್ ಲಗನ್' ಹಾಗೂ 'ಊರುಸೇ–ಇರ್ಫಾನ್'ಗಳಂತಹ ಅತ್ಯಮೂಲ್ಯ ಹಾಗೂ ಅವಿಸ್ಮರಣೀಯ ಗ್ರಂಥಗಳನ್ನು ರಚಿಸಿದರು. ಈ ಎರಡೂ ಗ್ರಂಥಗಳು ಜ್ಞಾನಲೋಕಕ್ಕೆ ಬಹರಿಯವರು ನೀಡಿದ ಬಲುದೊಡ್ಡ ಖಜಾನೆಗಳಾಗಿವೆ. ಈ ಗ್ರಂಥಗಳು ಅವರ ಹೆಸರನ್ನು ಜ್ಞಾನ–ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಗೊಳಿಸಿವೆ. ಬಹರಿ ಅವರು ಶವ್ವಾಲ್ ತಿಂಗಳ ೧೦ನೇ ತಾರೀಖು ಹಿ.ಶ. ೧೧೩೦ (ಕ್ರಿ.ಶ.೧೭೧೭) ಪರಲೋಕ ಪ್ರಯಾಣ ಬೆಳೆಸಿದರು. ಹೈದ್ರಾಬಾದಿನಿಂದ ಪ್ರಕಟವಾದ 'ತಜ್‌ಕೇರಾಯೇ ಜಲಾಲಿ' ಗ್ರಂಥದಲ್ಲಿ ಈ ಮಹಾನ್‌ಜ್ಞಾನಿಯ 'ಖತಾ'ವೊಂದರಿಂದ ಅವರ ನಿಧನದ ದಿನಾಂಕ ತಿಳಿದು ಬರುತ್ತದೆ. ಅದು ಈ ಕೆಳಗಿನಂತಿದೆ.

ಬೂದ್ ಬಹರಿ ಬಾ ಕಮಾಲ್ ಹಕ್ ಆಗಾಹ,
ಶೇಖ ಮಹಮೂದ್ ಆರೀಫ್ ಬಾ ಅಲ್ಲಾಹ.

ಬೂದ್ ದರ್ ಅಹವ್ ಬಾದಶಾಹೇ ಝಮನ್,
ಖತಮ್ ಶಾಹಾನ್ ಸಿಕಂದರ್ ಆದಿಲ್‌ಶಾಹ.

ದಸ್ತ್‌ಗಾಹಿಶ್ ಬ ಇಲ್ಮ್ ಹಖ್ ಚಿನಾ
ಕೆ ತಂವಾ ಯಾಫ್ತ್ ಇಲ್ಮ್‌ವೋ ದಾನಿಶ್ ರಾಹ್

ಸೈರ್ ಅವ್ ದರ್ ಹವಾಯೇ ಆಲಂ ಖುದ್ದೂಸ್
ತೈರ್ ಅವ್ ದರ್ ಹವಾಯೇ ಇಷ್ಕ್ ಅಲ್ಲಾಹ

ಗೋಶ್ ಕರ್‌ದಂ ನಿದಾಯೇ ರಹಲತ್ ಅವ್
ದಾಖಿಲ್ ಮಜಲಿಸ್ ರಸೂಲ್ ಅಲ್ಲಾಹ
(ಹಿ.ಶ.೧೧೧೩೦)

ಆಕಸ್ಮಿಕ ಹಾಗೂ ಸೋಜಿಗವೆಂದರೆ ಪೀರ್ ಹಾಗೂ ಮುರೀದ್ ಇಬ್ಬರ ನಿಧನದ ತಿಂಗಳು ಒಂದೇ ಆಗಿದೆ. ಆದರೆ ತಾರೀಖಿನಲ್ಲಿ ಕೇವಲ ಒಂದು ದಿನದ ವ್ಯತ್ಯಾಸವಿದೆ. ಅರ್ಥಾತ್ ಪೀರ್‌ಮುರ್ಷದರು ೧೧ ಷವ್ವಾಲ್‌ರಂದು ನಿಧನ ಹೊಂದಿದ್ದರು.

ಸಾಯುವ ಮುನ್ನವೇ ತಮ್ಮ ಕಳೇಬರವನ್ನು ತಮ್ಮ ಪೀರ್‌ನ ಪಕ್ಕದಲ್ಲೇ ದಫನ್ ಮಾಡಲು ಸೂಚಿಸಿದ್ದರು. ಹೀಗಾಗಿ ಈಗ ಇರುವ ಚೌಖಂಡಿಯಲ್ಲಿ ಕೇವಲ ಇಬ್ಬರಿಗೆ ಮಾತ್ರ ಅವಕಾಶವಿದೆ. ಈ ಇಬ್ಬರು ಮಹನೀಯರು ಅಲ್ಲಿ ಚಿರನಿದ್ರೆಯಲ್ಲಿದ್ದಾರೆ. ಚೌಖಂಡಿಯಲ್ಲಿ ಇನ್ನೂ ಅಧಿಕ ವಿಸ್ತರಣೆಗೆ ಅವಕಾಶವಿಲ್ಲ. ದರ್ಗಾದವರೆಗೆ ತಲುಪಲು ಭವ್ಯವಾದ ಪ್ರವೇಶದ್ವಾರವಿತ್ತು. ಅದು ಈಗ ಒಡೆದು ಬಿದ್ದಿದೆ. ಇದರ ಪ್ರವೇಶದ್ವಾರದ ಚಿತ್ರವು ಸಖಾವತ್ ಮಿರ್ಜಾ ಸಾಹೇಬರ್ 'ಮನ್ ಲಗನ್' (ಪ್ರಕಟಣೆ ೧೯೫೫)ದಲ್ಲಿ ಸೇರ್ಪಡೆಯಾಗಿದೆ. ಅದರಿಂದ ಗೊತ್ತಾಗುವುದು ಏನೆಂದರೆ ಆ ಕಾಲದವರೆಗೆ ಅದು ಸುಸ್ಥಿತಿಯಲ್ಲಿತ್ತು.

ಹಜ್ರತ್ ಬಹರಿ ಅವರ ಸಮಕಾಲೀನ ಔಲಿಯಾ (ಸೂಫಿ ಸಂತರು):

ಹಜ್ರತ್ ಬಹರಿ ಅವರ ಜೀವಿತಕಾಲದಲ್ಲಿ ಬದುಕಿದ್ದ ಸುಪ್ರಸಿದ್ಧ ಸೂಫಿ-ಸಂತರ ಹೆಸರು ಹಾಗೂ ಅವರ ನಿಧನದ ವರ್ಷದ ಜತೆ ಇಲ್ಲಿ ಉಲ್ಲೇಖಿಸಲಾಗಿದೆ.

೧. ಹಜ್ರತ್ ಅಮೀನುದ್ದೀನ್ ಅಲಿ ಆಲಾ (ಬಿಜಾಪುರ) – ೧೦೭೮ ಹಿಜರಿ (ಕ್ರಿ.ಶ. ೧೬೬೭)

೨. ಹಜ್ರತ್ ಶಾಹ್ ನೂರ್ ಮಹ್ಮದ್ ಹಮೂವಿ (ಔರಂಗಾಬಾದ್) – ೧೧೦೪ ಹಿಜರಿ (ಕ್ರಿ.ಶ.೧೬೯೨)

೩. ಹಜ್ರತ್ ಶೇಖ್ ಕಲೀಮುಲ್ಲಾ ಜಹಾಂಬಾದಿ (ದೆಹಲಿ) – ೧೧೪೨ ಹಿಜರಿ (ಕ್ರಿ.ಶ. ೧೭೨೯)

೪. ಹಜ್ರತ್ ಶಾಹ್ ನಿಜಾಮುದ್ದೀನ್ (ಔರಂಗಾಬಾದ್)

೫. ಹಜ್ರತ್ ಮಖ್ದೂಮ್ ಅಬ್ದುಲ್ ಹಕ್ ಪೀರ್ ದಸ್ತಗೀರ್ ಸಾವಿ (ಮದ್ರಾಸ್) – ೧೧೬೫ ಹಿಜರಿ (ಕ್ರಿ.ಶ.೧೭೫೧)

ಹಜ್ರತ್ ಬಹರಿ ಅವರ ಕೃತಿಗಳು ಹಾಗೂ ಅವುಗಳ ಜನಪ್ರಿಯತೆ:

ದಖನಿ ಭಾಷೆಯಲ್ಲಿ ಹಜ್ರತ್ ಬಹರಿ ಅವರ ಮೂರು ಕೃತಿಗಳಿವೆ. ೧) ದೀವಾನೆ ಗಜ಼್‌ಲಿಯಾತ್ ೨) ಬಂಗಾಬ್‌ನಾಮಾ ಹಾಗೂ ೩) ಮನ್‌ಲಗನ್. ಈ ಮೂರು ಕೃತಿಗಳಲ್ಲಿ ಒಟ್ಟು ಹದಿನೆಂಟುನೂರು ಅಶಾರ್‌ಗಳಿವೆ (ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಾಲಿನವು). ಅವುಗಳಲ್ಲಿ 'ಮನ್‌ಲಗನ್'ಗೇ ಹೆಚ್ಚು ಜನಮನ್ನಣೆ. ಸೂಫಿಗಳ ಸಮೂಹದಲ್ಲಿ ಮನ್‌ಲಗನ್ ಕುರಿತು ಬಿರುಸಿನ ಚರ್ಚೆ ಹಾಗೂ ವಾದ–ವಿವಾದಗಳು ನಡೆದವು. ಅದರ ಹಲವು ವ್ಯಾಖ್ಯಾನ ಹಾಗೂ ಅರ್ಥಕೋಶಗಳನ್ನು ರಚಿಸಲಾಯಿತು. ಆನಂತರ ಬಂದ ಲೇಖಕ ಸೂಫಿಗಳು, ಬರಹಗಾರರು ಬಹರಿಯವರ ಕವನಗಳನ್ನು ತಮ್ಮ ಗ್ರಂಥಗಳಲ್ಲಿ ಆಧಾರರೂಪವಾಗಿ ಉಲ್ಲೇಖಿಸಿದ್ದಾರೆ. ಇತರರು ಇವರದೇ ಶೈಲಿಯಲ್ಲಿ ಇದೇ ಮಾದರಿಯ ಮಸ್ನವಿಗಳನ್ನು ರಚಿಸಿದರು.

ತಮ್ಮ ಗ್ರಂಥಗಳಲ್ಲಿ 'ಮನ್‌ಲಗನ್'ನ ಸಾಲುಗಳನ್ನು ಉಲ್ಲೇಖಿಸಿದವರಲ್ಲಿ ಕಡಪಾದ ಪ್ರಸಿದ್ಧ ಸೂಫಿ–ಸಂತರಾದ ಸಯ್ಯದ್ ಮಹ್ಮದ್ ಹುಸೇನಿ ಶಾಹ್ ಮೀರ್ (ನಿಧನ ೧೧೮೬ ಹಿಜ್ರಿ/ಕ್ರಿ.ಶ. ೧೭೭೨) ಪ್ರಮುಖರು. ಇವರ ಸಹೋದರರಾದ ಶಾಹ ಕಮಾಲ್ (ನಿಧನ ೧೨೨೨ ಹಿಜ್ರಿ / ಕ್ರಿ.ಶ. ೧೮೦೭) ಅವರು ಕೂಡ ತಮ್ಮ ಕೃತಿ "ಕಲ್ಮಾತೆ ಕಮಾಲಿಯಾ"ದಲ್ಲಿ 'ಮನ್‌ಲಗನ್'ನ ಪ್ರಾರಂಭಿಕ ಈ ಎರಡು ಕವನ ಚರಣವನ್ನು ಉಲ್ಲೇಖಿಸಿರುತ್ತಾರೆ.

'ಆಯ್ ರೂಪ್ ತೇರಾ ರತ್ತಿ ರತ್ತಿ ಹೈ,
ಪರ್ಬತ್ ಪರ್ಬತ್ ಪತ್ತಿ ಪತ್ತಿ ಹೈ.

ಪರ್ಬತ್ ಮೇ ಔಕ್ ನ ಕಮ್ ಪತ್ತಿ ಮೇ,
ಯಕ್ಸಾಂ ರಹೇ ರಾಸ್ ಹೋರ್ ರತ್ತಿ ಮೇ".

(ಕಣ ಕಣದಲ್ಲಿಯೂ ನಿನ್ನ ರೂಪ-ಲಾವಣ್ಯ
ಅದು ಗಿರಿಶಿಖರದಲ್ಲೂ, ಚಿಗುರೆಲೆಯಲ್ಲೂ ನೆಲೆಸಿದೆ

ಕಡಿಮೆಯಿಲ್ಲ ಗಿರಿಶಿಖರ ಹಾಗೂ ಚಿಗುರಿನಲಿ
ಸಮನಾಗಿರಲಿ ಅದು ಕಣ-ಕಣದ ಶೃಂಗದಲಿ)

ಹಾಗೂ ತಮ್ಮ ಇನ್ನೊಂದು ಗ್ರಂಥ 'ಅಸಾಸುಲ್ ಮ್ವಾರಿಫತ್'ನಲ್ಲಿ ಇವರ ಪ್ರಸಿದ್ಧ ಪಾರ್ಸಿ ಕವನ ಚರಣವನ್ನು ಉದ್ಧರಿಸಿದ್ದಾರೆ.

ಖಾಲ್ ರಾ ಶದ್ ಮಾಯಾ ಬಾಶದ್ ಅಯ್ ಜವಾಂ,
ಹಾಲ್ ಬಸ್ ಮುಫ್ತ್ ಅಸ್ತ್ ನಜ್ವೆ ಆರಿಫಾಂ.

("ಖಾಲ್"ಗೆ ಅವಶ್ಯಕ ಸಾವಿರ ಕೌಶಲಗಳು
"ಹಾಲ್"ಗೆ ಸಾಕು ಕೇವಲ ತನ್ಮಯತೆ ಹಾಗೂ ಆವೇಗ)

'ವೇಲೂರಿನ ಧ್ರುವತಾರೆ (ಖುತುಬೇ ವೇಲೂರ್) ಎಂದು ಖ್ಯಾತರಾಗಿದ್ದ ಶಾಹ ಅಬ್ದುಲ್ ಲತೀಫ್ ಖಾದರಿಯವರು ತಮ್ಮ ಕೃತಿ 'ಜವಾಹರುಲ್ ಸುಲೂಕ್'ನ 'ಫಾಯದಾ' ಸಂಖ್ಯೆ ೭ (೭ನೇ ಅಧ್ಯಾಯ)ದ ಅಡಿಟಿಪ್ಪಣಿಯಲ್ಲಿ 'ಮನ್‌ಲಗನ್'ನ 'ಅಸ್ರಾರೆ ಬೇಖುದಿ ವ ಜಿಕ್ರೆ ಮಂಸೂರ್' ಎಂಬ ಶೀರ್ಷಿಕೆಯ ಈ ಸಾಲುಗಳನ್ನು ಉಲ್ಲೇಖಿಸಿದ್ದಾರೆ.

"ಅಪ್ನಾಚ್ ತೂ ಯಾದ್ ಹೈ ಯಾದ್ ಹಖ್ ಕಾ,
ಪನ್ ಕಾಂ ಹೈ ಮೊಅಲ್ಲಿಮ್ ಇಸ್ ಸಬಖ್ ಕಾ.

(ನೀ ನನ್ನವನು, ನೆನಪಿದೆಯಾ ನಿನಗೆ ಸತ್ಯದ ನೆನಪು?
ಆದರೆ ನೀನಲ್ಲ ಬಿಡು, ಈ ಪಾಠದ ಶಿಕ್ಷಕ)

ಬಹರಿ ಅವರ ಕೊನೆಯ ದಿನಗಳಲ್ಲಿ ಈ ಸಾಲುಗಳು ಅತ್ಯಂತ ಜನಪ್ರಿಯವಾಗಿದ್ದವು.

'ರಖ್ ಅಸಲ್ ಪೇ ಚತ್ ನ ಭಾನೂ ಉಪರ್,
ಕರ್ ಖತಮ್ ಖುದಾಕೆ ನಾನೂ ಉಪರ್.'

'ಮೂಲತಃ ಗಮನವಿಡು ಸದಾ ಹುಡುಕಾಟದಲಿ,
ಅಂತ್ಯಗೊಳಿಸು ಇದನು ದೇವರ ನಾಮದಲಿ.

'ಮನ್‌ಲಗನ್'ನ ಶೈಲಿ ಹಾಗೂ ಪ್ರಾಸದ ಮಾದರಿಯಲ್ಲಿ ಹಲವು ಬರಹಗಾರರು ಭಿನ್ನಭಿನ್ನ 'ಮಸ್ನವಿ' (ದ್ವಿಪದಿ)ಗಳನ್ನು ರಚಿಸಿದ್ದಾರೆ. ಅದರ ವಿವರ ಹೀಗಿದೆ.

೧. 'ಮನ್ ಮೋಹನ್' – ಐನುಲ್ ಹಕ್ ಅಜ಼ಾದ್

೨. 'ಮನ್ ಜೀವನ್' – ಬಾಖ಼ರ್ ಆಗಾಹಿ ಮದ್ರಾಸಿ

೩. 'ವಹದತುಲ್ ಉಸೂಲ್ – ಗುಲಾಂ ಜೀಲಾನಿ ತಸ್ಲೀಮ್ ಟೇಕ್ಮಾಲಿ

ಖಾದರಿಯಾ–ಮುಲ್ತಾನಿಯಾ ಸೂಫಿ–ಪರಂಪರೆಯ ಕೃತಿ–ರಚನಕಾರರಾದ ಗೌರವಾನ್ವಿತ ಹಜ್ರತ್ ಸಯ್ಯದ್ ಶಾಹ ಇಸ್ಮಾಯಿಲ್ ಖಾದ್ರಿ ಮುಲ್ತಾನಿ ಉರ್ಫ ಹಜ್ರತ್ ಬಾಶಾ ಬಿನ್ ಸಯ್ಯದ್ ಅಹ್ಮದ್ ಖಾದ್ರಿ ಮುಲ್ತಾನಿ ಬಿನ್ ಮಹ್ಮದ್ ಖಾದ್ರಿ ಬಿನ್ ಸಯ್ಯದ್ ಅಬುಲ್ ಹಸನ್ ಅಲೂರ್ ನಗ್ಲಿಯವರು ನವಾಬ್ ಶಹಾಮತ್ ಜಂಗ್ ಅರ್ಥಾತ್ ನವಾಬ್ ಅನ್ವರುದ್ದೀನ್ ಗೋಪಾಯೋಯಿ (ನಿಧನ ೧೧೬೨ ಹಿಜ್ರಿ / ಕ್ರಿ.ಶ.೧೭೪೮) ಅಥವಾ ಅವರ ಪುತ್ರ ನವಾಜ್ ಮಹಫೂಜ್‌ಖಾನ್ ಶಹಾಮತ್ ಜಂಗ್ ದ್ವಿತೀಯ (ನಿಧನ ೧೧೯೩ ಹಿಜ್ರಿ / ಕ್ರಿ.ಶ. ೧೭೭೯) ರವರ ಸೂಚನೆಯಂತೆ 'ಮನ್‌ಲಗನ್'ನ ಶಬ್ದಾವಳಿಗೆ ಸಂಬಂಧಿಸಿದಂತೆ ನಿಘಂಟನ್ನು ರಚಿಸಿದ್ದಾರೆ. ಆದರೆ ನಮ್ಮ ಅಭಿಪ್ರಾಯದಲ್ಲಿ ಈ ನಿಘಂಟನ್ನು ರಚಿಸಿದವರು ಮೊದಲನೇ ಶಹಾಮತ್ ಜಂಗ್ ಅವರೇ ಆಗಿದ್ದಾರೆ ಯಾಕೆಂದರೆ ಮಸ್ನವಿ 'ಮನ್‌ಸಬದ್'ನ ಅಂತ್ಯದಲ್ಲಿ ಇರುವ ಉಪಸಂಹಾರದಲ್ಲಿ ಲೇಖಕರು ತನ್ನ ಹೆಸರನ್ನು ಬದ್ರುದ್ದೀನ್ ಎಂದು ಪ್ರಕಟಿಸಿದ್ದಾರೆ ಹಾಗೂ ತನ್ನನ್ನು ಹಜ್ರತ್ ಶಾಹ ಸಯ್ಯದ್ ಇಸ್ಮಾಯಿಲ್ ಖಾದ್ರಿ ಮುಲ್ತಾನಿಯವರ ಸೇವಕರೆಂದು ಪರಿಗಣಿಸಿಕೊಳ್ಳುತ್ತಾರೆ ಹಾಗೂ ಪ್ರಕಟಣೆ ವರ್ಷ ಝಿಖಿಜ಼ಾ ೧೧೩೭ ಹಿಜರಿ (ಕ್ರಿ.ಶ. ೧೭೨೪) ಎಂದು ನಮೂದಿಸಲಾಗಿದೆ. ಈ ರೀತಿಯಾಗಿ ಮೊದಲನೇ ಶಹಾಮತ್ ಜಂಗ್ ಅವರೇ ಹಜ್ರತ್ ಶಾಹ ಇಸ್ಮಾಯಿಲ್ ಅವರ ಸಮಕಾಲೀನರಾಗಿರುತ್ತಾರೆ.

ಉರೂಸೇ– ಇರ್ಫಾನ್:

ಉರೂಸೇ – ಇರ್ಫಾನಿನ ಲಿಖಿತ ಹಸ್ತಪ್ರತಿಗಳ ವಿವರವನ್ನು ನಾವು ಮುನ್ನುಡಿಯ ಆರಂಭದಲ್ಲಿಯೇ ಬರೆದಿದ್ದೇವೆ. ಉರೂಸೇ–ಇರ್ಫಾನ್ ಸೂಫಿ–ದರ್ಶನ ಜ್ಞಾನದ ಪರಿಪೂರ್ಣ ಗ್ರಂಥವಲ್ಲ ಆದರೆ ಇದಕ್ಕೆ ಸಂಬಂಧಿಸಿದಂತೆ ಅನೇಕ ದಾರ್ಶನಿಕರ ವಿಭಿನ್ನ ಸೂಕ್ಷ್ಮ ಸಂಗತಿಗಳನ್ನು ಒಂದೆಡೆ ತರಲಾಗಿದೆ. ಆದರೆ ಅವೆಲ್ಲವೂ ಹಜ್ರತ್ ಬಹರಿ ಅವರು ಬರೆದಿರುವಂತೆ ಸಹಜ ಪ್ರವೃತ್ತಿಯ ಗುಣದಿಂದ ಹುಟ್ಟಿಕೊಂಡಿವೆ.

"ಶಾಹದ್ ಹಖೀಖಿ ಅಂಯ್ ಹಾಲ್ ಅಸ್ ವೋ ಗವಾಹ್ ಅಂಯ್ ಗುಫ್ತಗೂ, ಹರ್ ನುಕ್ತಾ ಕೆ ಮಿ ನವಿಯಸ್ಥ ವೊ ಹರ್ ಸರೆ ಕೆ ಮಿ ಸರ್ ಏದಾಜ್ ಬೂನ್ ಮಾಯಿನಾ ಖಿದ್ ನ ಅಜ್ ಖವಾಮಿ ಮುಶಾಹಿದಾ ದಿಗ್ರಾಂ"[1].

ಗ್ರಂಥದ ಶೀರ್ಷಿಕೆಯು ಅನುರೂಪವಾಗಿ ಹಜ್ರತ್ ಬಹರಿಯುವರು 'ಮನ್‌ಲಗನ್'ನಲ್ಲಿದ್ದ 'ಫಸಲು' ಶಬ್ದದ ಬದಲಾಗಿ 'ಆಭರಣ' ಎಂಬ ಹೆಸರನ್ನು ಅಧ್ಯಾಯಗಳಿಗೆ ನೀಡಲಾಗಿದೆ. ಗ್ರಂಥದಲ್ಲಿ ಒಟ್ಟು ೧೬೦ ಆಭರಣಗಳಿವೆ.[೨] ಎರಡು ವಿಭಿನ್ನ ಸೂಕ್ಷ್ಮತೆಗಳನ್ನು ಏಕತ್ರಗೊಳಿಸುವ ಈ ಪರಿಪಾಠವು ದಿವ್ಯಜ್ಞಾನಿ ಪುಣ್ಯಪುರುಷರಲ್ಲಿ (ಔಲಿಯಾರಲ್ಲಿ) ಆಚರಣೆಯಲ್ಲಿದೆ.

ಹಜ್ರತ್ ಶೇಖ್ ಕಲೀಮುಲ್ಲಾ ಜಹಾಂಬಾದಿ ಅವರು 'ಕಶಕೋಲ್' (ಭಿಕ್ಷಾಪಾತ್ರೆ) ಎಂಬ ಕೃತಿಯನ್ನು ರಚಿಸಿ ಅದರ ಅಧ್ಯಾಯಗಳ ಶೀರ್ಷಿಕೆಗಳನ್ನು 'ಲುಖ್ಮಾ' (ತುತ್ತು) ಎಂಬ ಹೆಸರಿನಿಂದ ಕರೆದರು. ಮತ್ತು 'ಸಿವಾಯೆ-ಉಲ್-ಸಬೀಲ್' ಕೃತಿಯ ಪ್ರತಿಯೊಂದು ಅಧ್ಯಾಯವನನ್ನು 'ಮರ್‌ಹಲಾ' (ಹಂತ) ಎಂದು ಹೆಸರಿಸಿದರು. ಇದೇ ರೀತಿಯಲಿ ಶಾಹ ವಲಿ ಅಲ್ಲಾ ಸಾಹೇಬ್ ಮೊಹದ್ದಿಸ್ ದೆಹಲ್ವಿಯವರ ಕೆಲವು ಕೃತಿಗಳಿವೆ.

ಹಜ್ರತ್ ಬಹರಿ ಅವರು ಗೋಗಿಯ ಚಂದಾ ಹುಸೇನಿ ಅವರ ಉತ್ತರಾಧಿಕಾರಿಯ ಸೂಚನೆಯ ಮೇರೆಗೆ 'ಮನ್‌ಲಗನ್' ಮಸ್ನವಿಯನ್ನು ಹಿ.ಶ. ೧೧೧೬ರಲ್ಲಿ ಬರೆಯಲು ಆರಂಭಿಸಿದರು. ಇದರ ನಂತರ ಬಹರಿ ಅವರ ಒಬ್ಬ ಸಮೀಪವರ್ತಿ ಆದರೆ ದೂರದೃಷ್ಟಿಯ ಹಿತಚಿಂತಕನು ಇದನ್ನು ಫಾರ್ಸಿ ಭಾಷೆಯಲ್ಲಿ ಬರೆದರೆ ಹೆಚ್ಚು ಜನರಿಗೆ ಪ್ರಯೋಜನವಾಗುತ್ತದೆ ಹಾಗೂ ಬಹಳಷ್ಟು ಜನ ಇದರ ಉಪಯೋಗ ಪಡೆಯುತ್ತಾರೆ ಎಂದು ಸಲಹೆ ನೀಡಿದರು. ಈ ಸಲಹೆಯನ್ನು ಸ್ವೀಕರಿಸಿದ ಬಹರಿ ಅವರು 'ಉರೂಸೇ-ಇರ್ಫಾನ್' ಬರೆದರು. ಇದು 'ಮನ್‌ಲಗನ್'ನ ಶಬ್ದಾನುಶಬ್ದ ಅನುವಾದವಲ್ಲ, ಬದಲಾಗಿ ಅದರ ಮೂಲ ಸ್ವರೂಪವನ್ನು ಆಧಾರವಾಗಿಟ್ಟುಕೊಂಡು ಅದರ ಮೂಲತತ್ವಗಳ ಲೇಖನಗಳ ಆಧಾರಿತ ಒಂದು ಪರಿಪೂರ್ಣ ಫಾರ್ಸಿ ಕೃತಿಯಾಗಿದೆ. ಈ ಕೃತಿ ರಚನೆಯು ಹಿ.ಶ. ೧೧೧೬ (ಕ್ರಿ. ಶ.೧೭೦೪)ರಲ್ಲಿ ಪ್ರಾರಂಭವಾಗಿ ಹಿ.ಶ. ೧೧೧೭ (ಕ್ರಿ.ಶ. ೧೭೦೫)ರಲ್ಲಿ ಪರಿಪೂರ್ಣವಾಯಿತು. ಇದರ ಉಪಸಂಹಾರ ಈ ರೀತಿಯಾಗಿದೆ.

"ಯಕೇ ಅಜ್ ನಜ್‌ದಿಕಾನ್ ದೂರಂದೇಶ್ ಗಫ್ತ್ ಅಗರ್ ಬಫಾರ್ಸಿ ಬೂದೆ ಚ ಖುಷ್ ಬೂದೆ ಕೆ ದಾಸ್ತಾನ್ ಹರಿ ದಯಾರ್‌ರಾದ್ ದಲೀಲ್ ಆಮದ್ ವೊ ಖಲಾಯಿಖ್

---

೧. ಹಜ್ರತ್ ಬಹರಿಯವರ ಮುನ್ನುಡಿ.

೨. ಸಖಾವತ್ ಮಿರ್ಜಾರವರು ಸಹ ಇದೆ ಸಂಖ್ಯೆಯನ್ನು ನಮೂದಿಸಿರುತ್ತಾರೆ. ನವಾಯೇ ಅದಬ್- ಬಾಂಬೆ, ಅಕ್ಟೋಬರ್ ೧೯೫೫, ಪು.ಸಂ. ೪೫.

ಹರ್ ಖತ್ತಾ ರಾ ಖಲೀಲ್, ಬನಾ ಅಲಿಯಾ ಅಂಯ್ ಊರುಸೇ–ಇರ್ಫಾನ್ ರಾಬ್ ತರೀಖ್ ತರ್ಜುಮಾನ್ ಬಂಗಾಶತಮ್ ಬಚೀ ಇಮಾಯೇ ದಿಗರ್ ಆತಿಶ್ ದ್ವಾಮ್"[೧].

ಆದುದರಿಂದ ಬಹರಿಯವರ ಸಮೀಪರ್ತಿಯ ದೂರದೃಷ್ಟಿ ಯಶಸ್ಸಿಗೆ ಕಾರಣವಾಯಿತು. ಎರಡುವರೆ – ಮೂರು ವರ್ಷಗಳ ದೀರ್ಘ ಅವಧಿಯಲ್ಲಿ ದಖನಿ ಭಾಷೆಯಲ್ಲಿದ್ದ ಮಸ್ನಿವಿಯು ಫಾರ್ಸಿಯಲ್ಲಿ ತೀವ್ರ ಗತಿಯಿಂದ ಪ್ರವಾಹ ರೂಪವಾಗಿ ಉಕ್ಕಿ ಹರಿಯಿತು. ಇದರಿಂದಾಗಿ ಇಂದು 'ಮನ್ ಲಗನ್'ನ ಅರ್ಥಕೋಶವನ್ನು ಮುಂದಿಟ್ಟುಕೊಂಡು ಸಹ ಅದರ ಅರ್ಥದ ಸನಿಹಕ್ಕೆ ತಲುಪುವುದು ಅಸಾಧ್ಯವಾಗಿದೆ. ಇದರ ಪ್ರಭಾವಲಯವು ಗ್ರಂಥರೂಪದಲ್ಲಿ ದಾಖಲಾಗಿ ಉಳಿಯಿತು. ಅರ್ಥಾತ್ ಕೇವಲ ದಖನಿ ಸಾಹಿತ್ಯದ ಇತಿಹಾಸ ಹಾಗೂ ಪ್ರಗತಿ ಹಂತಗಳನ್ನು ಸೂಚಿಸಲು ಇದರ ಬಳಕೆಯಾಗಹತ್ತಿತ್ತು ಆದರೆ 'ಉರೂಸೇ– ಇರ್ಫಾನ್' ದೈವಿ ಜ್ಞಾನದ ವಧು, ಆಭರಣಗಳನ್ನು ಧರಿಸಿ, ಫಾರ್ಸಿ ಪೋಷಾಕಿನಲ್ಲಿ ಸಿಂಗಾರಗೊಂಡು ತನ್ನ ಪ್ರಥಮ ಮಿಲನದ ರಾತ್ರಿಗಾಗಿ ನಾಚಿಕೆಯಿಂದ ಮುದ್ದೆಯಾಗಿ ಕುಳಿತುಕೊಂಡಿದೆ. ಇದೇ ಕಾರಣಕ್ಕಾಗಿ ಫಾರ್ಸಿ ಭಾಷೆಯ ಬಳಕೆ ಕಡಿಮೆ ಆಗಿರುವ ಈ ದಿನಗಳಲ್ಲಿ ಈ ಪುಸ್ತಕವನ್ನು ಜನ ನುಡಿಯುವ ಹಾಗೂ ಬಹುಜನರಿಗೆ ಅರ್ಥವಾಗುವ ರೀತಿಯಲ್ಲಿ ಉರ್ದುವಿನಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.

'ಉರೂಸೇ–ಇರ್ಫಾನಿ'ನ ಪ್ರಮುಖ ತತ್ವಸಿದ್ಧಾಂತಗಳು:

'ಉರೂಸೇ–ಇರ್ಫಾನ್' ನಿರ್ದಿಷ್ಟವಾಗಿ ಸೂಫಿ ದರ್ಶನದ (ತಸ್ಸವುಫ್) ಹಾಗೂ ಅದರ ತತ್ವ ಸಿದ್ಧಾಂತ ಪ್ರತಿಪಾದಿಸುವ ಗ್ರಂಥ ಅಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಆದುದರಿಂದ ಸೂಫಿ–ತತ್ವಸಿದ್ಧಾಂತಗಳ ಮೂಲ ಅಂಶಗಳನ್ನು ಸಮರ್ಥವಾಗಿ ಕೇವಲ ಅರಿಯುವುದರ ಜೊತೆಗೆ ಆ ಬಗ್ಗೆ ನಂಬಿಕೆಯನ್ನು ಹೊಂದದ ಹೊರತು, ಈ ಪುಸ್ತಕದಿಂದ ಯಾವುದೇ ನಿಶ್ಚಿತ ಪ್ರಯೋಜನ ಪಡೆಯಲು ಆಗುವುದಿಲ್ಲ. ವಾಸ್ತವಿಕವಾಗಿ ಸೂಫಿ ದರ್ಶನ (ತಸ್ಸವುಫ್) ಆಸಕ್ತಿ ಹಾಗೂ ತನ್ಮಯ ಸ್ಥಿತಿಗೆ ಸಂಬಂಧಿಸಿದ್ದಾಗಿದೆ. ಹೀಗಾಗಿ ಸೂಫಿ ತತ್ವಾಸಕ್ತಿ ಹಾಗು ತನ್ಮಯತೆಯಲ್ಲಿ ಬುದ್ಧಿಮತ್ತೆ ಹಾಗೂ ತರ್ಕಕ್ಕೆ ಯಾವುದೇ ಸ್ಥಾನ ಇರುವುದಿಲ್ಲ. ಮಖ್ದೂಮುಲ್ ಮುಲ್ಕ್ ಹಜ್ರತ್ ಶೇಖ್ ಶರಫುದ್ದೀನ್ ಯಾಹ್ಯಾ ಮುನೀರಿ ಅಲ್ ಮುಲ್ತಫಿ (ನಿಧನ ೭೭೬ ಹಿಜ್ರಿ) ಈ ವಿಷಯದಲ್ಲಿ ಬುದ್ಧಿಮತ್ತೆಯನ್ನು ಜನ್ಮತಃ ದರಿದ್ರ ಎಂದು ಕರೆದಿರುತ್ತಾರೆ. ಇದೇ ಮಾತನ್ನು ಹಜ್ರತ್ ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ.

---

೧. 'ಉರುಸೇ–ಇರ್ಫಾನ್'ನ ಉಪಸಂಹಾರ.

'ಜಿಕ್ರೆ ಇರ್ಫಾನ್ ದರೇಂ ಉರೂಸೇ–ಇರ್ಫಾನ್ ಕಿ ಹರ್ ಹರ್ ಮಹಲ್ ದರ್ ಜೋಶ್ ಅಸ್ತ್ ವೋ ಹರ್ ಹರ್ ಮಕಾನ್ ದರ್ ಖುರೂಶ್, ನ ಆಂಯ್ ಇರ್ಫಾನ್ ಅಸ್ತ್ ಕಿ ನಜ್ಜಾರ್ ಬರ್ ಖಶಬ್ ಖರ್ಚ್ ಮಿ ಕಂದ್ ವೋ ಜರ್ ಗರ್ದ್‌ರ್ ಜಹಬ್ ದರ್ಜ್ ಮಿ ಸಾಜ್ ಮುಫ್ನಿ ದರ್ ಸರೂದ್ ವೋ ಜಾಮಾ ಬಾಫ್ ದರ್ ತಾದೆ ಪೂದ್ ಅಂಯ್ ಇರ್ಫಾನ್ ಕಿ ಬದ್ ಮಸ್ತ್ ವೋ ಪಾಯೇ ಮರ್ದಮ್ ದರ್ ಆಮದೌ–ದಿಗರ್ ಅಸ್ತ್ ವಾಂ ಇರ್ಫಾನ್ ಕಿ ಇಲ್ಮೆ ರಾಜಾನ್ ಅಸ್ತ್ ಅಯಾನ್ ರಾಸ್ತಾನ್, ಹಸ್ತಿರಾ ಪೀರ್ ವೋ ಶಾಹಿರಾದ್ ದಸ್ತಗೀರ್, ದೀಗರ್ ಅಸ್ತ್ ಯಾನಿ ಪಾಕ್ ಅಜ್ ಪಾಕ್ ವೊ ಲತೀಫ್ ಅಜ್ ಲತೀಫ್, ಅಖೀಲ್ ದರಿಖ್‌ಜಾ ಕೋರ್ ವೋ ಕಿರ್‌ದಾಲ್ ರಾಕ್ ಖಾಕ್ ಬ ಸರ್".[೧]

ಆದರೆ ಗ್ರಂಥದ ಪ್ರಯೋಜನ ಪಡೆಯುವ ಇನ್ನೊಂದು ಮಾರ್ಗವೆಂದರೆ ಭಾಷೆಯ ಮಿತಿಗಳನ್ನು ಕುರಿತು ತಕರಾರು ಮಾಡದೇ ಒಪ್ಪಿಕೊಂಡರೆ ಅದರ ಮಾರ್ಗ ಸುಗಮವಾಗುತ್ತದೆ.

"ಬಾರೆ ಅರ್‌ನೀಸ್ತ್ ತೆರಾ ವಜ್ಞಾನೆ,
ಮೊತೆ ಖಿದ್ ಭಾಷ್ ವೋ ಬ್ಯಾರ್ ಈಮಾನೆ".

ಷರೀಯತ್ತಿನ (ಧರ್ಮಶಾಸ್ತ್ರದ) ಅನುಸರಣೆಯ ಕಟ್ಟಪ್ಪಣೆ:

ತರೀಖತ್ (ಕರ್ಮಕಾಂಡ) ಹಾಗೂ ಸುಲೂಕ್ (ಶುದ್ಧ ಆಚರಣೆ)ನ ಕುರಿತಾಗಿ ಸಾಮಾನ್ಯವಾದ ಪರಿಜ್ಞಾನ ಇರುವದೇನೆಂದರೆ ಇದರ ಬುನಾದಿಯು ಶರೀಯತ್ (ಧರ್ಮಶಾಸ್ತ್ರದ)ನಿಂದ ಬಿಡುಗಡೆ ಪಡೆದಂತಾಗಿದೆ ಹಾಗೂ ದೈವಿ ಸಾಮಿಪ್ಯಕ್ಕಾಗಿ ಧರ್ಮಶಾಸ್ತ್ರದ ಎಲ್ಲೆಗಳನ್ನು ಮೀರುವುದು ಅಥವಾ ಅವುಗಳನ್ನು ಅಪ್ರಯೋಜಕವೆಂದು ಭಾವಿಸುವುದು ಅವಶ್ಯಕ. ಆದರೆ ಇಂಥ ಧಾರ್ಮಿಕ ನಿಷ್ಠೆಯು ಬಾಹ್ಯವಾದ ಸಮೂಹದ್ದಾಗಿದೆ. ಈ ನಿಷ್ಠೆಯನ್ನು ಪ್ರವಾದಿಗಳ ಕರ್ಮಾಚರಣೆಯ ಅನುಯಾಯಿಗಳು ತಿರಸ್ಕರಿಸುತ್ತಾರೆ. ತರೀಖತ್‌ನ (ಕರ್ಮಕಾಂಡ) ನಾಲ್ಕು ಮಜಲುಗಳು, ಮೂರ್ತರೂಪ ಪಡೆದುಕೊಂಡ ಸಮಯದಲ್ಲಿ ಪ್ರತಿ ಮಜಲಿನಲ್ಲೂ ಶರೀಯತ್ತಿನ ಅನುಪಾಲನೆಗೆ ಅತೀವ ಮಹತ್ವ ನೀಡಲಾಗಿದೆ. ಆದುದರಿಂದ ಪ್ರತಿ ಹಂತದ 'ಅಗಲುವಿಕೆ'ಯನ್ನು ತೊರೆದು ಮಂತ್ರವಾದದ ಮಾರ್ಗ ಹಿಡಿದು, ಅದರ ಆಚರಣೆಯ ಪ್ರಮಾಣ ನೀಡಿರುತ್ತಾರೆ. ಹಜ್ರತ್ ಬಹರಿ ಅವರು ಸಹ 'ಶರೀಯತ್'ನ ಅನುಪಾಲನೆಗೆ ಕಟಿಬದ್ಧರಾಗಲು ತೀವ್ರ ತರಹದ ಕಟ್ಟಪ್ಪಣೆಯನ್ನು ನೀಡಿರುತ್ತಾರೆ ಹಾಗೆಯೇ ದೈವಿ

೧. ಆಭರಣ–೬೬

ಸಾಮಿಪ್ಯದ ಅತೀವ ಮಹತ್ವದ ಹಂತದಲ್ಲೂ ಅದರ ಕಡೆಗಣನೆ ಸಲ್ಲದು. ದೇವರ ಅನ್ವೇಷಣೆಗೆ ಅವಶ್ಯವಾಗಿ ಬೇಕಾಗಿರುವುದು ಪಶ್ಚಾತ್ತಾಪದ ಮನೋಭಾವ. ಯಾವ ಕುಕರ್ಮದ ಬಗ್ಗೆ ಪಶ್ಚಾತಾಪ ಪಡಲಾಗಿದೆಯೋ, ಎಂಥಾ ಕಷ್ಟ ಬಂದರೂ, ಮತ್ತೊಮ್ಮೆ ಅದರ ಕಡೆ ತಿರುಗಿಯೂ ನೋಡಬಾರದು. ಮನುಷ್ಯನು ವಾಸ್ತವದಲ್ಲಿ ಶುಭ್ರನೂ, ನಿರ್ಮಲನೂ ಆಗಿದ್ದಾನೆ. ಆದರೆ ದುಷ್ಟಕರ್ಮಗಳಿಂದಾಗಿ ಕೊಳೆಯು ಪೊರೆ ಪೊರೆಯಾಗಿ ಶೇಖರವಾಗುತ್ತದೆ. ಇದರಿಂದಾಗಿ ದೈವಿ ಸಾಕ್ಷಾತ್ಕಾರ, ಪ್ರವಾದಿಯ ಮಧ್ಯಸ್ಥಿಕೆ (ಶಾಪ ವಿಮೋಚನೆಗಾಗಿ) ಹಾಗೂ ದೈವಿ ಪ್ರಭೆಯಿಂದ ವಂಚಿತನಾಗುತ್ತಾನೆ. ಅವನಿಗೆ ದೇವದೂತರಂತೆ ಹಾರಾಡುವ ಅವಕಾಶವು ಪ್ರಾಪ್ತಿಯಾಗಬಹುದು ಆದರೆ ದುಷ್ಕರ್ಮಗಳ ಒಂದು ಕಣವೂ ಅವನಲ್ಲಿ ನೆಲೆಸಿದ್ದರೆ ಅವನ ಸ್ಥಾನವು ಮೃಗಗಳಿಗಿಂತಲೂ ಕನಿಷ್ಠವಾಗಿರುತ್ತದೆ. ಪ್ರಾರ್ಥನೆ, ಉಪವಾಸ ಹಾಗೂ ಕುರಾನ್ ಪಠಣ ಯಾವ ಕಾರಣದಿಂದಲೂ ತ್ಯಜಿಸುವಂತಿಲ್ಲ. ಅವನ ಮೇಲೆ ಸಾಕ್ಷಾತ್ ದೈವಿ ತನ್ಮಯತೆ ಸ್ಥಿತಿಯಿದ್ದರೂ ಸಹ ಇವುಗಳನ್ನು ತ್ಯಜಿಸುವುದು ತರವಲ್ಲ.

ಗರ್ವ, ಮತ್ಸರ, ದ್ವೇಷ, ನಿಂದನೆ ಹಾಗೂ ಪರನಿಂದೆಯಂತಹ ದುರ್ಗುಣಗಳಿಂದ 'ಫಕೀರತ್ವ' ಭವನದ ಅಡಿಪಾಯವು ದುರ್ಬಲವಾಗುತ್ತದೆ. ಜಗತ್ತಿನ ಸಮಸ್ತ ಕೆಡುಕುಗಳ ಮೂಲ ಸುಳ್ಳು ಆಗಿದೆ. ಕುರಾನಿನ ನಿರ್ಣಾಯಕ ಸೂಕ್ತಿಗಳ ಪ್ರಕಾರ ಸುಳ್ಳು ಹೇಳುವವನ ಮೇಲೆ ಸತತವಾಗಿ ದೇವರ ಶಾಪ ಉಂಟಾಗುತ್ತಿರುತ್ತದೆ. ಮನುಷ್ಯನು ಸುಳ್ಳು ಹೇಳಿದಾಗ ಅವನ ಆಂತರ್ಯದಲ್ಲಿ ಎಂಥ ಸ್ಥಿತಿ ಉದ್ಭವವಾಗುತ್ತದೆ ಎಂಬುದನ್ನು ಬಹರಿ ವಿನೂತನ ರೀತಿಯಲ್ಲಿ ಬರವಣಿಗೆಯಲ್ಲಿ ವ್ಯಕ್ತಪಡಿಸಿದ್ದಾರೆ.

"ಇನ್ಸಾನ್ ಹರ್‌ಗಾಹ್ ಬದ್‌ರೋಘ್ ದಮ್ ಬಿರಾರದ್, ಖುದಾಯೇ ತಾಲಾ ವಹಮ್ ಖಲ್‌ಖತ್ ಅವ್‌ಬರೂ ಲಾನತ್ ಕನಂದವಾಜ್ ಜಮೀನ್ ತಾ ಅಸ್ಮಾನ್ ಶೋರೆ ಬರ್ ಖೈಜ಼್ ಘರ್‌ಯೂ ಬರ್‌ಪಾಶದ್ ವಾಂಯೇ ಅಜಬ್ ಕೆ ಬಗೋಶ್ ಮರ್ದಮ್ ನಮೀ ರಸದ್"

'ಕೆ ದಾರೋಘಯೇ ದರೂಘ್ ಬೂದ್,
ರೂ ತರರ್ಶ ಹರ್ ಕಜಾ ಚೂ ದೋಘ್ ಬೂದ್'.

ಸದಾ ವುಜೂ⁰ನಿಂದ ಇರುವುದು, ರಾತ್ರಿಯಲ್ಲಿ ದೇವಸ್ಮರಣೆಗಾಗಿ ಜಾಗರಣೆ ಹಾಗೂ ಬೆಳಿಗ್ಗೆ ಬೇಗ ಏಳುವುದರ ಕುರಿತು ಈ ರೀತಿ ಬರೆಯುತ್ತಾರೆ.

ಜಿಸ್ಮ್ ತೂ ಚೂ ಜಾ ಅಗರ್‌ಚೇ ಪಾಕ್ ಅಸ್ತ್
ಜಿನೆಹಾಲ್ ತೂ ಅಜ಼್ ವುಜೂ ಮುಶೂ ದಸ್ತ್

ಪೇವಸ್ತಾ ಕಸೆ ಕೆ ಬವಜೂ಼ ನೀಸ್ತ್
ದರ್ ಮಹಫಿಲ್ ಪಾಕಶ್ ಆಬರೂ ನೀಸ್ತ್

ಚೂಂ ಸಗ್ ಬಸ್‌ಹರೆ ಮಖಿಸಬ್ ಫ಼ನ್‌ಹಾಲ್
ಶೂ ಹಮ್ ಚೂ ನಸೀಂ ಸುಬಹ ಬೇದಾರ್

ಶಬ್ ಹಾ ಬಫಮ್ ಅರ್ ತೂ ಜಿಂದಾದಾರಿ
ಚೂಂ ಅಬ್ ಶುವಿ ಬಸೀರ್ ಅಬಿ.

ಆಭರಣ ೧೫೪ರಲ್ಲಿ ಸಾಧಕರ ಮಾರ್ಗದರ್ಶನಕ್ಕಾಗಿ ಒಂದು ಬರಹವಿದೆ. ಇದರಲ್ಲೂ ಇದೇ ಉಪದೇಶಗಳನ್ನು ಪುನರಾವರ್ತಿಸಲಾಗಿದೆ.

ದೈವೀತನ್ಮಯತೆಯು ಸುಲಭವಾಗಿದ್ದು ದೈವೀ ಸಂವಾದವು ಕಷ್ಟಕರವಾಗಿದೆ:

ಆಭರಣ ೩ರಲ್ಲಿ 'ಹಾಲ್' ಹಾಗೂ "ಖ಼ಾಲ್"ನ ಚಮತ್ಕಾರಿಕ ವರ್ಣನೆಯನ್ನು ಮಾಡಲಾಗಿದೆ. ಪರಿಣಾಮ ಸ್ವರೂಪವಾಗಿ ಹೇಳುವುದನೆಂದರೆ 'ದೈವೀ ತನ್ಮಯ' ಸ್ಥಿತಿ ತಲುಪುವುದು ಸುಲಭವಾಗಿದೆ. ಆದರೆ 'ದೈವೀ ಸಂವಾದ'ದ ಸ್ಥಿತಿಯು ತುಂಬಾ ಕಷ್ಟಕರವಾಗಿದೆ.

"ಹಾಲ್ ಬಸ್‌ಯಾರ್ ಮುಫ್ತ್ ಅಸ್ತ್ ವೋ ಖಾಲ್ ಖರಾಂವಾಂ ಮುಶಿಕಿಲ್... ಖ಼ಾಲ್ ರಾ ಅಜ಼್ ಹರ್ ತರಫ್ ಸದ್ ಹಜಾರ್ ಖಾಬಿಲಿಯತ್ ಮಿ ಯದ್‌ತಾ ಖಬೂಲ್ ಮಖಬೂಲಾನ್ ವ ಮತ್‌ಬೂಅ ಸಾಹೇಬ್‌ದಾನ್ ಶೂದ್".

"ಹಾಲ್ ಬಸ್ ಮುಫ್ತ್ ಅಸ್ತ್ ನಿಜ್ದ ಆರಿಫಾಂ,
ಖ಼ಾಲ್ ರಾ ಸದ್ ಮಾಯ ಬಾಯದ್ ಆಯ್ ಜವಾಂ.

ಹಾಲ್ ಅಗರ್ ಬೇ ಖ಼ಾಲ್ ಬಾಷಿದ್ ಹಾಲ್ ನೀಸ್ತ್,
ಮುರ್ಗ್ ನಾತಂವಾ ರಾ ಬಾಲ್ ನೀಸ್ತ್.

ಹಜ್ರತ್ ಶಾಹ ಅಬ್ದುಲ್ ಲತೀಫ್ ಖಿತುಬ್ ವೇಲೂರ್ ಅವರು 'ಜವಾಹರುಲ್ ಸುಲೂಕ್'*ನಲ್ಲಿ ಬರೆಯುತ್ತಾರೆ.

- ವುಜೂ : ಪ್ರಾರ್ಥನೆಗೆ ಮುಂಚೆ ನೀರಿನಿಂದ ಕೈ, ಕಾಲು, ಮುಖವನ್ನು ನಿಶ್ಚಿತ ರೂಪದಲ್ಲಿ ತೊಳೆದುಕೊಂಡು ನಿರ್ಮಲನಾಗುವ ಕ್ರಿಯೆ.

* ಜವಾಹರುಲ್ – ಸುಲೂಕ್ ಭಾಷಾಂತರ ಪು.ಸಂ.೧೨೬ ಕ್ರಿ.ಶ. ೧೯೨೮.

"ಅಗರ್ ಹಾಲತ್ ಖಬೀಲಾ ರಾಬಾ ಖವ್ವಾಲ್ ಲಸಾನಿಯಾ
ವ ಅಫ್‌ವಾಲ್ ಜಿಸ್ಮಾನಿಯಾ ತಾಯಿದೆ ಕುನಂದ್

ಅಲಬತ್ತಾ, ಖಿದ್ವತ್ ವ ತಜ಼ಾಯಿದೇ ಬಹಮ್
ರ ಸದ್ ವ ವಸ್ತೆ ವಾಹತೆ ದಸ್ತ್ ದಿಹದ್".

ಅಕಸ್ಮಾತ್ ಅವನ ಹೃದಯದ "ಸ್ಥಿತಿ"ಯ ಸಮರ್ಥ ವಾಣಿಯ 'ವಚನ'ಗಳನ್ನು ದೈಹಿಕ ಕರ್ಮಗಳಿಂದ ನೆರವೇರಿಸಿದರೆ, ನಿಸ್ಸಂಶವಾಗಿ ಅದರ ಬಲವು ವೃದ್ಧಿಯಾಗುವುದು ಹಾಗೂ ವಿಸ್ತೀರ್ಣಕ್ಕೆ ವೈಶಾಲ್ಯತೆಯು ಪ್ರಾಪ್ತಿಯಾಗುವುದು.[೨]

'ಮ್ಆರಿಫತ್'ನ ಪ್ರಾಪ್ತಿಗಾಗಿ ಲೌಕಿಕತೆಯ ಪರಿತ್ಯಾಗ ಅವಶ್ಯಕವಿಲ್ಲ:

"ಮ್ಆರಿಫತ್"ನ ಪ್ರಾಪ್ತಿಗಾಗಿ ಪ್ರಚಲಿತವಾಗಿರುವ ಸಾಮಾನ್ಯವಾದ ಭಾವನೆಯೆಂದರೆ, ಇದಕ್ಕಾಗಿ ಲೋಕದ ಪರಿತ್ಯಾಗ ಲೌಕಿಕ ಸಂಬಂಧಗಳ ತ್ಯಾಗ ಹಾಗೂ ಜೀವನ ನಿರ್ವಹಣೆಯ ಕಾಯಕ-ಸಂಘರ್ಷದಿಂದ ಮುಕ್ತರಾಗುವುದು ಅವಶ್ಯವಾಗಿದೆಯೆಂದು ತಿಳಿಯಲಾಗಿದೆ.

"ಹಂ ಖುದಾ ಖಿವ್ವಾಯಿ ವಹಮ್ ದುನಿಯಾಯೇ ದೂಂ,
ಅಂಯ್ ಖಿಯಾಲ್ ಅಸ್ತ್ ವೋ ಮಹಾಲ್ ಅಸ್ತ್ ಜುನೂಂ"

ಈ ವಿಚಾರಸರಣಿಯನ್ನು ಅಲ್ಲಗಳೆಯುತ್ತಾ ಹಜ್ರತ್ ಬಹರಿ ಅವರು ಹೇಳುವುದೇನೆಂದರೆ, ನಿಜವಾಗಿ ಕುಕರ್ಮ ರಹಿತನಾಗುವುದೇ ಎಲ್ಲಕ್ಕಿಂತಲೂ ಅತಿ ಮುಖ್ಯ. ಮನುಷ್ಯನು ತನ್ನ ಜೀವನ ನಿರ್ವಹಣೆಯ ಕಾಯಕವನ್ನು ತೊರೆದರೆ ಇದರಿಂದಾಗಿ ಅವನು ಬಾಹ್ಯ ಹಾಗೂ ಆಂತರಿಕವಾಗಿಯೂ ಅಸ್ತವ್ಯಸ್ತ ಸ್ಥಿತಿಗೆ ಗುರಿಯಾಗುತ್ತಾನೆ. ಇದರಿಂದ ಬಿಡುವು ದೊರೆತರೆ ಆ ಸ್ಥಿತಿಯಲ್ಲೂ ಅತೀವ ಜಾಗೃತನಾಗಿರವುದು ತೀರಾ ಅವಶ್ಯಕವಾಗಿದೆ. ಹಾಗೆಯೇ ಈ ಭವಸಾಗರವನ್ನೂ ದಾಟುವುದೂ ಅನಿವಾರ್ಯವಾಗಿದೆ ಹಾಗೂ 'ಪರಲ್ಲೋಕ'ಕ್ಕೆ 'ಏನಾದರೂ' ಒಯ್ಯುವ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.

"…..ಸಮಿ ಖ್ವಾಹಿದ್ ತಾಲ್ಲೂಖಾತ್ ವೋ ತಮ್‌ಲಿಖಾತ್ ದುನಿಯಾ ದೋ ಅಹಲ್ ಆಂ ರಾಬ್‌ದಸ್ತ್ ಆವರದನೆ ಮ್ಆರಿಫತ್ ತರ್ಕಗೋಯಿ ವಾಜ್ ಉಮೂರ್ ಮಾಶ್ ಕೆ ವಾಸ್ತಾಯೇ ಸರ್ ಅಂಜಾಮ್ ಖಾನಾವೊ ವಸೀಲಾ ಹುಸೂಲೇ ಆಬ್ ವೋ ದಾನಾ ತಸ್ತ್ ತಾಯಿಬ್ ಕರ್ದಿ, ಬಲ್ಕೆ ದೋ ಚಂದಾನೀಶ್ ಕುನ್ ವ ಬಜ಼ೆಯಬ್ ವೋ ಜ಼ೀನತ್ ಖುಷ್ ಖುಂದಾನ್ ಬಾಷ್ ಕೆ ನಾದಾರಿ ಆದ್ಮಿ ರಾಚೂಂ ದರ್ ಯೋಜ಼ಯೇ ಕುಂದು ಖೋಸ್ತಾಯೇ ದಿಲಶ್ ದಾನಾದಾನಾ ಸಜದ್ ಮಾನಿ ಅಮಾ ಬಾವಜೂದ್

ಪರಹತ್ ವೋ ಘರಾಫತ್ ಹೊಶಿಯಾರ್ ಬಾಯದ್ ಬೂದ್ ವಬಾ ಸೋದೋಝೆಯಾಂ ಖುದ್ ಖಬರ್‌ದಾರ್ ಬದ್ ಆಂ ಮಾಇನಿ ಕೆ ಮರ್ದ್ ನಸ್ತ್ ವಾಝ್ ನೀಜಾ ಚೀಝೆ ಬರ್‌ದನ್"[೨]

ಪುರುಷರ ಚಿಲ್ಲಾ:

ಮಹಿಳೆಯರ ಚಿಲ್ಲಾವು ನಲವತ್ತು ದಿನಗಳವರೆಗೆ ತಮ್ಮ ಒಂದು ನಿರ್ದಿಷ್ಟ ಸ್ಥಳದಿಂದ ಕದಲದೆ, ಸಮಸ್ತ ಲೌಕಿಕ ಹಾಗೂ ಐಹಿಕ ಬದುಕಿಗೆ ಸಂಬಂಧಿಸಿದ ವ್ಯವಹಾರಗಳಿಂದ ಸಂಬಂಧ ಕಡಿದು ಕೊಂಡು ಇರುವುದೇ ಆಗಿದೆ ಆದರೆ ಪುರುಷರ ಚಿಲ್ಲಾ ದಲ್ಲಿ ಅವರು ಪತ್ನಿ ಹಾಗೂ ಮಕ್ಕಳ ಸಮಸ್ತ ಅವಶ್ಯಕತೆಗಳನ್ನು ಪೂರೈಸುತ್ತಾ, ಒಂದು ಕ್ಷಣವು ದೈವಸ್ಮರಣೆಯಿಂದ ವಂಚಿತರಾಗದೇ ಇರುವುದೇ ಆಗಿದೆ.

"ಚಿಲ್ಲಾ ಘನಾನ್ ಆಂ ಬಾಷದ್ ಕೆ ಚೆಹಲ್ ರೋಝ್ ಅಝ್ ಜಾಯೇ ಖುದ್ ಬರ್‌ನಮಿ ಜನ್‌ಬದ್ ವಾಝ್ ಜಮೀ ಉಮೂರ್ ಬೇಕಾರ್ ಬಾಶಿಂದ್ ವೊ ಚಿಲ್ಲಾ ಮರ್ದಾನ್ ಏಂಕಾ ಬಾಘನ್ ವೋ ಘರ್‌ಜಂದ್ ಬಾವ್‌ಜೂದ್ ಸರ್‌ಬರಾಹೆ ತಮಾಮ್ ಮೊಹಮಾತ್ ಮಾಷ್ ಲಿಮ್ವಾ ಅಝ್ ಯಾದದಾಶ್ತ್ ಖಾಲಿ ನಿಬಾಶುಂದ್"

ಏಳು ಪರಮ ಅರ್ಹತೆಗಳಲ್ಲಿ ಜ್ಞಾನದ ಸ್ಥಾನವು ಪ್ರಥಮವಾಗಿದೆ:

ದೈವೀಸಂವಾದ ಹಾಗೂ ಸಾಮಾನ್ಯ ಸೂಫಿಗಳ ದೃಷ್ಟಿಯಲ್ಲಿ ಅರ್ಹತೆಗಳ ಮಾತೆ ಎಂದು ಕರೆಯಲಾಗುವ ಏಳು ವಿಶೇಷ ಅರ್ಹತೆಗಳು ಅನುಕ್ರಮ ಈ ರೀತಿಯಾಗಿವೆ. ಜೀವನ, ಜ್ಞಾನ, ಸಂಕಲ್ಪ, ಸಾಮರ್ಥ್ಯ, ಶ್ರವಣ, ನೋಟ ಹಾಗೂ ವಚನ. ಇವುಗಳಲ್ಲಿ ಪ್ರಥಮ ಸ್ಥಾನವು ಜೀವನದ್ದಾಗಿದೆ. ಆದರೆ ನಂತರ ಬರುವ ಅರ್ಹತೆಗಳು ಜೀವನಕ್ಕೆ ಅವಲಂಬಿತವಾಗಿವೆ. ಹಜ್ರತ್ ಬಹರಿ ಅವರು ಇದಕ್ಕೆ ವ್ಯತಿರಿಕ್ತವಾಗಿ ಜ್ಞಾನಕ್ಕೆ ಪ್ರಥಮ ಸ್ಥಾನದ ಗೌರವವನ್ನು ನೀಡಿ, ಜೀವನಕ್ಕೆ ಅಂತಿಮ ಹಂತವನ್ನು ನಿಗದಿ ಮಾಡಿದ್ದಾರೆ ಯಾಕೆಂದರೆ ಜ್ಞಾನ ಸ್ಥಾನವು ಅರ್ಹತೆಯು ಜೀವನದ ಯಕಶ್ಚಿತ್ ಅಸಹಾಯಕತೆಯ ಕೊರತೆಯಿಂದ ಬಳಲುತ್ತಿಲ್ಲ. ಪರಮ ಪವಿತ್ರ ಅಲ್ಲಾಹನು ಪ್ರವಾದಿ 'ಆದಂ'ರನ್ನು ತನ್ನ ಪ್ರತಿರೂಪವಾಗಿ ಸೃಷ್ಟಿಸಿದ ಹಾಗೂ ಆ ಅರ್ಹತೆಗಳ ಪ್ರತಿಬಿಂಬವನ್ನು ಅವರಲ್ಲಿ ಹಾಯಿಸಿದನು. ಇದರಿಂದಾಗಿಯೇ ಅವರು ದೈವೀ ರಹಸ್ಯಜ್ಞಾನದ ಬೋಧಕರಾದರು. ಹಾಗೂ ಅಲ್ಲಾಹನ ಏಕತೆಯಲ್ಲಿ ವಿಶ್ವಾಸವಿರಿಸುವ ಜ್ಞಾನಕೇಂದ್ರದ ಶಿಕ್ಷಕರೆನಿಸಿದರು. ಶ್ರೇಷ್ಠತಮವಾಗಿ ಮ್ವಾರಿಫತ್‌ನ ಪ್ರಶಂಸಕರಾದರು ಹಾಗೂ ದೈವೀ ಕರ್ತವ್ಯದ ಭಾರವನ್ನು ಧಾರಣಮಾಡಲು ಪೃಥ್ವಿ, ಆಕಾಶ, ಹಾಗೂ ಗಗನಗಳು ಅಸಮರ್ಥವಾದಾಗ ಅದನ್ನು ತಮ್ಮ ಹೆಗಲಿಗೇರಿಸಿಕೊಂಡರು.

• ಆಭರಣ : ೬

"ಹಜ್ರತ್ ಆದಂ ಅಲೈ ಸಲಾಂ ಕೆ ಸೂರತ್ ವ ಬಸೂರತ್ ಖುದ್ ಆರಾಸ್ತಾ ಬಕಮಾಲ್ ಕರಮ್ ಅತಾ ಫರ್ಮೂನ್ ತಾಬ್ ದಸ್ತಿಯಾರಿ ಆಂ ಮೊಲ್ಲಿಮ್ ಇಲ್ಮೆ ಐಬ್ ವೋ ಮೊದರಿಸ್ ಮದರಸಾ ಶಹಾದತ್ ಗುಶ್ರಾ ವೋ ಮಹದಮೂದುಲ್ ತರ್‌ಫೀನ್ ಆಮದಾಹ್ ವೊ ದಾದೇ ಮ್ವಾರಿಫತ್ ರಾಚನಾಂಚ ಶರ್ತೆದಾನ್ ಅಸ್ತ್ ದಾದ ವೋ ಬಾರೆ ಅಮಾನತ್ ರಾ ಕೇ ಆಸ್ಮಾನ್ ವೋ ಝಮೀನ್ ವೊ ಕೋಹ್ ಹಾರಿತೂ ಅಸ್ತ್ ಕಶಿದಂದ್ ಬದೋಶ್ ಖುದ್ ಗಿರಿಫ್ತಾ"•

ಜ್ಞಾನಾರ್ಜನೆ ಮಗ್ನತೆಯ ಉಪದೇಶ:

ವಿಶಿಷ್ಟ ಪರಮೋಚ್ಚ ದೈವೀ ಅರ್ಹತೆಗಳಲ್ಲಿ ಯಾವ ಅರ್ಹತೆಯು ನಿಗದಿಪಡಿಸಲಾಯಿತು, ಅದು ಜ್ಞಾನವಾಗಿದೆ. ಪವಿತ್ರ ಕುರಾನಿನ ಉಕ್ತಿಯಂತೆ "ಇನ್ನಾ ಅಲ್ಲಾಹ್ ಖದ್ ಅಹಾತಾ ಬಿ ಕುಲ್ಲಿ ಶೈನ್ ಇಲ್ಮಾ"ದಿಂದ ವ್ಯಕ್ತವೇನೆಂದರೆ ಮಹಾಮಹಿಮ ಪರಂಜ್ಞಾನಿಯ ಜ್ಞಾನವು ಸಮಸ್ತ ಬ್ರಹ್ಮಾಂಡವನ್ನು ಆವರಿಸಿದೆ•) ಹಾಗೂ ಸಮಸ್ತ ಸೃಷ್ಟಿಯಲ್ಲಿ ಸುಪ್ತರೂಪದಲ್ಲಿದೆ. ಜ್ಞಾನದ ಅರ್ಹತೆಯ ಹೊರತಾಗಿ, ಇರುವ ಇತರ ಅರ್ಹತೆಗಳು ಕೆಲವರ ಬಳಿ ಇವೆ, ಇನ್ನು ಕೆಲವರ ಬಳಿ ಇಲ್ಲ. ಯಾವಾಗ ಈ ಶಾಶ್ವತ ಸತ್ಯವು ಬೌದ್ಧಿಕವಾಗಿ ಮನನವಾಗುತ್ತದೆಯೋ ಆಗ ಜ್ಞಾನ ಪ್ರಾಪ್ತಿಯ ಮಗ್ನತೆಯ ಪರಿಣತಿಯಲ್ಲಿ ತೊಡಗುತ್ತದೆ, ಇದರ ಕ್ರಮವೇನೆಂದರೆ ಸಮಸ್ತ ಸಪ್ತ ದೈವಿ ಅರ್ಹತೆಗಳನ್ನು ಕೇವಲ ಒಂದು ದೈವಿ ಅರ್ಹತೆಯಿಂದ ದಿವ್ಯದರ್ಶನ ಮಾಡಿಸುತ್ತದೆ. ಅರ್ಥಾತ್ ನೋಡುವುದು ಕಣ್ಣಿನ ಅರ್ಹತೆ ಆಗಿದೆ. ಆದರೆ ಸೌಂದರ್ಯ ಹಾಗೂ ಕುರೂಪದ ಯುಕ್ತಾಯುಕ್ತತೆಯ ಪರಿಜ್ಞಾನವು ಜ್ಞಾನದ ಕಾರಣದಿಂದಾಗುತ್ತದೆ. ಕೇಳುವುದು ಕಿವಿಯ ಅರ್ಹತೆಯಾಗಿದೆ, ಆದರೆ ಅದನ್ನು ಸುಮಧುರ ಅಥವಾ ಸಾಮಾನ್ಯವಾಗಿಸುವುದು ಜ್ಞಾನದ ಔದಾರ್ಯವಾಗಿದೆ. ಇದೇ ರೀತಿ ಅನ್ಯ ಅರ್ಹತೆಗಳು ಪಂಚ ಜ್ಞಾನೇಂದ್ರಿಯಗಳ ಕಲ್ಪನೆಯಾಗಿದೆ. ಮಣ್ಣು, ಕಲ್ಲು, ವೃಕ್ಷ, ಪರ್ವತಗಳ ಬಗ್ಗೆಯೂ ಹೇಳುವುದಾದರೆ ಅವು ಸಜೀವವಾಗಿದ್ದು, ಜ್ಞಾನ ಹಾಗೂ ಜೀವದ ನಿಜ ಅಸ್ತಿತ್ವವೆಂದು ಭಾವಿಸಬಹುದು. ಅಕಸ್ಮಾತ್ ಒಬ್ಬ ವ್ಯಕ್ತಿಯು ಮಧುರ ಕಂಠವುಳ್ಳವನ್ನಾಗಿ ಅದನ್ನು ಸುಮಧುರವಾಗಿ ಆಲಾಪಿಸಿದರೆ ಹಾಗೂ ಮತ್ತೊಬ್ಬ ಶ್ರೋತೃವು ಆ ರಾಗವನ್ನು ಅರಿಯುವಂತವನಾಗಿದ್ದರೆ, ರಾಗಾಲಾಪನೆ ಹಾಗೂ ಅದರ ಅರಿವು, ಈ ಉಭಯ ಅರ್ಹತೆಗಳು ಜ್ಞಾನದ ಅವಲಂಬನವಾಗಿವೆ. ಜ್ಞಾನವು 'ಸ್ವಯಂ'ಗೆ ಸಂಬಂಧಿಸಿದ್ದರು, ಅಥವಾ ಅನ್ಯರಿಗೆ, ಅದು ಒಂದೇ ಆಗಿರುತ್ತದೆ.

- ಚಿಲ್ಲಾ ಎಂದರೆ ಸಮಸ್ತ ಲೌಕಿಕ ವ್ಯವಹಾರಗಳನ್ನು ತ್ಯಜಿಸಿ, ಒಂದೇ ಸ್ಥಾನದಲ್ಲಿ ೪೦ ದಿನ ಏಕಾಂತವಾಸ ಕೈಕೊಂಡು ದೇವರ ಸ್ಮರಣೆ ಹಾಗೂ ಧ್ಯಾನ ಮಾಡುವುದು.
- ಆಭರಣ : ೪೭,

ಇದೇ ಕ್ರಮದಲ್ಲಿ ಜ್ಞಾನವನ್ನು ಸಮಸ್ತ ಭಂಡಾರದಲ್ಲಿ ಗಗನದಿಂದ ಭೂಮಿಯವರೆಗೆ ಹೃದಯದ ಕಲ್ಪನೆಯ ಜತೆ ವೀಕ್ಷಿಸಬೇಕಾಗುತ್ತದೆ. ಪರಮೋಚ್ಚ ಸ್ಥಿತಿಗೆ ತಲುಪಿದಾಗ, ರಹಸ್ಯ ಜ್ಞಾನವು ಬಾಹ್ಯಜ್ಞಾನವಾಗಿ ಪ್ರಕಟವಾಗುತ್ತದೆ.[೩]

ಹಜ್ರತ್ ಬಹರಿ ಅವರು ಸಮಸ್ತ ಜ್ಞಾನಗಳು ಹೇಗೆ ಏಕಜ್ಞಾನವಾಗುತ್ತದೆ ಎಂದು ತಮ್ಮ ಪೀರ್‌ರನ್ನು ವಿಚಾರಿಸಲಾಗಿ, ಹಜ್ರತ್‌ರು ಉದಾಹರಣೆಯನ್ನು ನೀಡುತ್ತಾ, ಹೂಜಿಯನ್ನು ನೋಡುವ ಪ್ರತಿ ವ್ಯಕ್ತಿಯು ಅದನ್ನು ಹೂಜಿಯೆಂದೇ ಹೇಳಬಹುದು ವಿನಃ ಅನ್ಯ ವಸ್ತುವೆಂದು ಅಲ್ಲ, ಇದರಿಂದ ವ್ಯಕ್ತವಾಗುವುದೇನೆಂದರೆ ಎಲ್ಲರ ಜ್ಞಾನವು ಏಕರೂಪವಾಗಿದೆ.(೪) ಆಪೇಕ್ಷಿತನು ಒಂದು ವೇಳೆ ವಾಸ್ತವತೆಯ ಆಕಾಂಕ್ಷಿಯಾಗಿ ಏಕತ್ವನ್ನು ಪ್ರಾಪ್ತಿಸಿಕೊಂಡರೆ ಹಾಗೂ ಅನೇಕತೆಯನ್ನು ಅಳಿಸಿ, ಬ್ರಹ್ಮಾಂಡವನ್ನು ಜ್ಞಾನದಲ್ಲಿ ನಿರ್ವಾಣಗೊಳಿಸಿ (ಫನಾ) ಹಾಗೂ ಜ್ಞಾನವನ್ನು ಪರಂಜ್ಞಾನದಲ್ಲಿ ವಿಲೀನಗೊಳಿಸಬೇಕು (೨).

ಜಾತ್, ಜಾತ್‌ನ ಅರ್ಹತೆ ಹಾಗೂ ಅರ್ಹತೆಯ ಪರಮಾರ್ಹತೆಗಳ ದೃಷ್ಟಾಂತದ ಮೂಲಕ ವಿವರಣೆ:

ವ್ಯಕ್ತಿಯೊಬ್ಬನು ತನ್ನ ಜ್ಞಾನ ಕೌಶಲ್ಯದಿಂದ ಒಂದು ಪಲ್ಲಕ್ಕಿಯನ್ನು ನಿರ್ಮಿಸುತ್ತಾನೆ. ಹಾಗೂ ಕುಸುರಿಯ ಕೆತ್ತನೆಯಿಂದ ಚಿತ್ತಾರಗೊಳಿಸಿ ಸಿಂಗರಿಸುತ್ತಾನೆ. ಪಲ್ಲಕ್ಕಿಯನ್ನು ನಿರ್ಮಿಸುವ ಹಾಗೂ ಅದನ್ನು ಮನಸ್ಸಿಗೆ ಆಕರ್ಷಕವಾಗಿ ಕಾಣಿಸುವಂತೆ ಸಿಂಗಾರಮಯಗೊಳಿಸುವುದು ಅದರ ಜಾತ್ ಆಗಿದೆ. ಹಾಗೂ ಇದರ ಜ್ಞಾನವು ಅರ್ಹತೆಯ ಜಾತ್ ಆಗಿದೆ. ಹಾಗೂ ಆ ಪಲ್ಲಕ್ಕಿಯ ಅರ್ಹತೆಯು, ಪರಮಾರ್ಹತೆಯಾಗಿ 'ಆರಿಫ್‌ನ (ದೈವಿಜ್ಞಾನಿಯ)' ದೃಷ್ಟಿಯಲ್ಲಿ ಈ ಮೂರು ಒಂದೇ ಆಗಿವೆ.

"ಖುದಾ ಅಸ್ತ್ ಝಾತಿ ವೋ ಝಾತಿ ಸಿಪ್ತ್ ಬೂದ್ ಅಲ್ಮಷ್,
ಸಿಪ್ತ್ ಸಿಪಾತಿ ಅವಾಯೇ ದೋ ಆಲಂ ಅಸ್ ಅಯ್ ದೋಸ್ತ್,

ಬಚಷಮ್ ಆಲಂ ಜದಾಮಿ ನುಮಾಯಿನ್ 'ಅಅಂಯ್ ಹರ್ ಸಾ ವಲೇ,
ಬದೀದಯೇ ಆರಿಫ್ ಏಕ್ ಅಸ್ತ್ ಬಲ್ ಹಮಾ ಔಸತ್".

ದೇವನಾಮಗಳಲ್ಲಿ ಅತಿ ಪರಮ ನಾಮ ಯಾವುದು?

ವಾಸ್ತವದಲ್ಲಿ ಅಲ್ಲಾಹನ (ಜ಼ಾತ್‌ನ) ನಾಮವು ಪ್ರಕೃತಿಯ ಹೆಸರಿನ ಪ್ರಮುಖ ದೇವನಾಮವಾಗಬೇಕು ಯಾಕೆಂದರೆ ಅದು ಸಮಸ್ತ ನಾಮಗಳ ಪರಿಪೂರ್ಣತೆ ಹಾಗೂ ಸಮಗ್ರತೆಯ ಅರ್ಹತಾರೂಪವಾಗಿದೆ ಆದರೆ ಹಜ್ರತ್ ಬಹರಿ ಅವರು

---

೩. ಇಲ್ಲಿ ಜ್ಞಾನವೆಂದರೆ – ಕುರಾನಿನ ಕಡ್ಡಾಯಗೊಳಿಸಲ್ಪಟ್ಟ ಜ್ಞಾನ ಸೂಕ್ತಿಗಳಾಗಿವೆ., (೪) ಆಭರಣ:೫೨

ನುಡಿಯುವುದು ಏನೆಂದರೆ ಪರಮ ದೇವನಾಮವನ್ನು ನಿರ್ದಿಷ್ಟಗೊಳಿಸಲಾಗುವುದಿಲ್ಲ. ಹಾಗೂ ಸಮಸ್ತ ಜನರ ಸತ್ಯದ ಅರಿವಿನಿಂದ ಒಂದೇ ನಾಮವು ಅವನ ಸತ್ಯದ ಪರಮನಾಮನಾಗುವುದಿಲ್ಲ. ಹೀಗಾಗಿ ಇದಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಕ್ಕೆ ಬಂದ ಒಂದು ಘಟನೆಯನ್ನು ಪ್ರಸ್ತಾಪಿಸುತ್ತಾರೆ, ಸಮಾಧಿ ಸ್ಥಿತಿಯಲ್ಲಿದ್ದಾಗ ಅವರಿಗೆ ದೈವೀ ಪ್ರೇರಣೆ ವಾಣಿ (ಇಲ್ಹಾಮ್) ಆಯಿತು. ಅದೇನೆಂದರೆ, ಸರ್ವಜ್ಞನೇ ಪರಮ ದೇವನಾಮವಾಗಿದೆ ಆದರೆ ಅವರು ಸಮಾಧಿ ಸ್ಥಿತಿಯಿಂದ ಸಹಜ ಸ್ಥಿತಿಗೆ ಮರಳಿದಾಗ ಯೋಚಿಸಿದರೆ, ಸರ್ವಜ್ಞತೆಯು ದೈವೀ ಅರ್ಹತೆಯ ನಾಮವಿಶಿಷ್ಟವಾಗಿದೆ. ಅರ್ಹತೆಯು ದೈವೀ ನಾಮ ವಿಶೇಷವು ಅದ್ಹೇಗೆ ಆಗಬಹುದು? ಸ್ವಲ್ಪ ಸಮಯದ ಬಳಿಕ, ಹೃದಯಕ್ಕೆ ಅವ್ಯಕ್ತನು ಮಾರ್ಗದರ್ಶನ ಮಾಡಿದಂತಾಯಿತು. ಅದೇನೆಂದರೆ ಈ ನಾಮವು ಅವರ ಸ್ವಯಂ ಬೌದ್ಧಿಕ ಪ್ರತಿಭೆ ಹಾಗೂ ಪ್ರಯತ್ನ ಫಲಸ್ವರೂಪದಿಂದ ವ್ಯಕ್ತವಾದುದಲ್ಲ. ಅಲೌಕಿಕ ಜ್ಞಾನದಲ್ಲಿ ತರ್ಕ–ವಿತರ್ಕದ ರುಜುವಾತಿನ ವಿಧಾನ ಸೂಕ್ತವಲ್ಲ. ತದನಂತರ ಇದರಿಂದ ಸಂತುಷ್ಟರಾದ ಬಹರಿ ಅವರು ಆಗ ಸಮಸ್ತಜ್ಞಾತನ ಪರಮನಾಮದ ಜ್ಞಾನಸಂಬಂಧಿತ ವಾದಕ್ಕೆ ಸಮರ್ಥನೆ ದೊರೆಯಿತು. ಅರ್ಥಾತ್ ಸಮಸ್ತ ವಿಶ್ವದಿಂದ ಇಂದ್ರಿಯಾನುಭವಗಳ ಅರಿವಿಗೆ ಬರುವ ಹಾಗೂ ಅದಕ್ಕೆ ಅನುಗುಣವಾಗಿ ಆಗುವ ವ್ಯಕ್ತವು ದೈವೀ ಜ್ಞಾನವಾಗಿದೆ. ಅದೇ ನಿಜವಾದ ಜ್ಞಾನವಾಗಿದೆ. ಇದೇ ಸಹಸ್ರಾರು ವರ್ಣ ಸುಗಂಧರೂಪಗಳಲಿ ಪೋಷಣೆಯಾಗಿ ವ್ಯಕ್ತವಾಗಿದೆ.

–ಅಲ್–ಅಲೀಮ್—ಇಸ್ಮೆ ಆಜಂ, ಮುಖದ್ದರ್ ಹಖ್ ಮನ್
ನ ದೀಗಾರಾಂ, ಅಜ್ ಬಹ್ರೆ ಅಂಕಾ ತಮಾಮ್ ಮಖಲೂಖಾತ್

ವೋ ಮಾಅಖೂಲಾತ್ ಚೀಸ್ತ್, ಇಲ್ಮೇ ಇಲಾಹಿ ಅಸ್ತ್ ಕೆ
ಬಹಜಾರ್ ರಂಗ್ ವೊ ಬೂ ನಶೋ ನುಮಾಯಾ[೧].

ಆಭರಣ ೧ಳರ ಒಂದು ಕವನದ ವ್ಯಾಖ್ಯೆ ಮಾಡುತ್ತ ಹೇಳಲಾಗಿದೆ 'ಪರಂಸತ್ಯ'ನಾದ ದೈವನು ಒಂದೇ ರೂಪದಲ್ಲಿ ಎರಡು ಸಲ ಪ್ರಕಾಶಮಾನ ಆಗುವುದಿಲ್ಲ, ಪ್ರತಿಕ್ಷಣವು ನವೀನವಾಗಿದೆ. ಇದರ ದಿವ್ಯ ಪ್ರಭೆಯು ಸೀಮಿತವಾಗಿದೆ ಅಥವಾ ಅಪರಿಮಿತವಾಗಿದೆ ಎಂಬ ವಾದ–ವಿವಾದ ಕಂಡುಬರುತ್ತದೆ.

'ಹಜ್ರತ್ ಹಖ್ ದುಬಾರಾ ಬಯಕ್ ಸೂರತೆ ತಜಲ್ಲಿ ನಿಮಿಕಂದ
ಸಾಅತ್ ಬಸಾಅತ್ ನೌಬಾ ಬನೂ ಅಸ್ತ್ ವೋ ಅಸ್ಲನ್

---

೧. ಆಭರಣ:೫೯

ತಜಲ್ಲಿಯಾತ್ ಅವ್ ಮಹಮೂದ್ ಮನ್ ಹಸಲ್ ನೀಸ್ತ್
ಕೆ ಮಕರ್‍ರ್ರ್ ಶೂದ್ ಬೇಹದ್ ವ್ರೋ ಬೇಪಾಯಾ ಅಸ್ತ್(೨)

ಸತ್ಯಮಿಲನದ (ವಸ್ಲೆ ಹಕ್‌ನ) ವ್ಯಾಖ್ಯಾನ:

ಸತ್ಯಮಿಲನದ ವಿವಾದವು ಆಚರಣೆಯ ಮಾರ್ಗದಲ್ಲಿ (ಸುಲೂಕ್) ಒಂದು ಪ್ರಮುಖ ಚರ್ಚೆಯ ವಿಷಯವಾಗಿದೆ. ಹಜ್ರತ್ ಬಹರಿ ಅವರು ಈ ಸಮಸ್ಯೆಯನ್ನು ಒಂದು ವಿಚಿತ್ರ ಶೈಲಿಯಲ್ಲಿ ತಿಳಿಸುತ್ತಾರೆ. ಅವರ ಪ್ರಕಾರ ದೇವರು ಹಾಗೂ ಮನುಷ್ಯನ ಮಿಲನ, ಎರಡು ಬೆರಳುಗಳ ಮಿಲನದ ರೀತಿ ಅಲ್ಲ, ಅದೇನೆಂದರೆ ಒಂದು ಬೆರಳು ಈ ಕಡೆಯಿಂದ ಚಲಿಸಿತು ಹಾಗೂ ಮತ್ತೊಂದು ಬೆರಳು ಇನ್ನೊಂದು ಕಡೆಯಿಂದ ಬಂದು, ಮಧ್ಯದಲ್ಲಿ ಮಿಲನವಾಯಿತು. ಬದಲಾಗಿ ಈ ಪ್ರಕ್ರಿಯೆಯ ವಾಸ್ತವವಾಗಿ ಮಿಲನವಲ್ಲ, ಬದಲಾಗಿ ವಿಯೋಗವಾಗಿದೆ. ಅರ್ಥಾತ್ ಮಿಲನವೆಂದರೆ ತನ್ನನ್ನು ನೀಡುವುದು ಅಥವಾ ದೇವರನ್ನು ಪಡೆಯುವುದು.

"ಪಸ್ ದಿಸಾಲ್ ಖುದಾ ವೊ ಬಂದಾ ಚುಸಾಚೆ ಆಂಯ್ ದೊ ಅಂಗಷ್ತ್ ಕೇ ಅಜ್‌ಂ ಸೌ ಸಬಾಸ ರಸೀದ್ ವಾಜ್‌ ಆಂ ಸಿಮ್ತ್ ವಸ್ತ್ ವೊ ವಸಲ್ ದರ್‌ಮಿಯಾನ್ ವಾಖ್ವೆ ಶುದ್, ಹರಗಿಜ್ ನಿಬಾಶುದ್. ಅಯ್ ದೋಸ್ತ್ ದರೇಂ ಜಾನಾ ವಿಸಾಲ್ ಅಸ್ತ್ ನ ಪಿರಾಖ್ ಬಲ್ಕೆ ಬದರ್ ಅಸ್ತ್ ಯಾನಿ ಖುದರಾದಾದನ್ ವೊ ಖುದಾ ರಾಸ್ತ್‌ದನ್(*)

ತನ್ಮಯತೆಯ ಹಂತಗಳು:

ತನ್ಮಯತೆಯ ನಾಲ್ಕು ಅವಸ್ಥೆಗಳಾದ ನಾಸೂತ್ (ನರಲೋಕ(ಸ್ಥಿತಿ)) ಮಲಕೂತ್ (ದೇವಲೋಕ(ಸ್ಥಿತಿ)), ಜಬರೂತ್ (ಐಶ್ವರ್ಯಲೋಕ(ಸ್ಥಿತಿ)) ಹಾಗೂ ಲಾಹೂತ್ (ಮಾಧುರ್ಯಲೋಕ(ಸ್ಥಿತಿ)) ಗಳನ್ನು ಅವರು ತಮ್ಮ ವಿಶಿಷ್ಟ ಶೈಲಿಯಲ್ಲಿ ವ್ಯಾಖ್ಯಾನ ಮಾಡುತ್ತಾ ಬರೆಯುತ್ತಾರೆ. ನೋಟಕ್ಕೆ ಹಾಗೂ ಸ್ಪರ್ಶಕ್ಕೆ ಯಾವುದೆಲ್ಲವು ಸಾಧ್ಯವೋ ಅದು ನಾಸೂತ್‌ನ ತರಹವಿದ್ದು, ಎರಡರಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ – ದರ್ಪಣದಲ್ಲಿ ಮೂಲದ ಬಿಂಬದಂತೆ ಯಾವುದೇ ವ್ಯಕ್ತಿಯು ಈ ಲೋಕವನ್ನು ಬಾಹ್ಯ ಕಣ್ಣಿನಿಂದ ನೋಡಿದರೆ ಅದು ನಾಸೂತ್ ಹಾಗೂ ಕಣ್ಣುಮುಚ್ಚಿ ಅಂತದೃಷ್ಟಿಯಿಂದ ನೋಡಿದರೆ ಅದು ಮಲಕೂತ್. ಜಬ್ರೂತ್ ಅಂಧಕಾರದ ಸ್ಥಾನವಾಗಿದೆ, ಹಾಗೂ ಸಂಬಂಧದಿಂದ ದೂರೀಕರಿಸಿದ ಅಸ್ತಿತ್ವದಿಂದ ಇದೆ. ಅರ್ಥಾತ್ ಯಾವುದೇ ಅಸ್ತಿತ್ವವು ಇಲ್ಲಿ ಪ್ರಕಟ ರೂಪದಲ್ಲಿ ಇರುವುದಿಲ್ಲ. ಇನ್ನು ಉಳಿದಿರುವ ಲಾಹೂತ್ ಅಂತೂ ಸದರಿ ಅಂಧಕಾರದ

---

(೧): ಆಭರಣ ೫೯, (೨): ಈ ವಿವಾದದ ಹೆಚ್ಚಿನ ವಿವರ ಆಭರಣದ ೮೪ರಲ್ಲಿ ವಿವರಿಸಲಾಗಿದೆ. (*) ಆಭರಣ: ೭೦

(ಅರ್ಥಾತ್ ಜಬ್ರೂತ್‌ನ) ವೀಕ್ಷಕನೂ, ಸಾಕ್ಷಿಯೂ ಆಗಿದ್ದಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಲಾಹೂತ್ ಜ್ಯೋತಿಯಾಗಿದ್ದು, ಜಬರೂತ್ ಆತ್ಮ ಮಲಕೂತ್ ಹೃದಯ ಹಾಗೂ ನಾಸೂತ್ ದೇಹವಾಗಿದೆ.

"ಹರ್ ಚಹಾರ್ ಮಂಜಿಲ್ ಮಾಲೂಮ್ ಚನಿ ಅಸ್ತ್, ಆಂಚಾ ಬದೀದಾ ದೋಸ್ತ್ ದರ್ಮಿ ಆಯದ್ ನಾಸೂತ್ ಅಸ್ತ್, ವೋ ಮಲಕೂತ್ ಬಯಾನಾ ನಾಸೂತ್, ದರ್‌ಮಿಯಾ ಹರ್ ದೋಚಾ ಜಾಯ್ ಖ಼ತಾ ಕೆ ಬಖ಼ದರ್ ಖ್ಞಾಲೆ ತಜಾವಿಜ಼್್ ನೀಸ್ತ್, ಚುನಾಂಚೆ ಅಸ್ಲ್ ದರ್ ಆಯಿನಾ ಯಾ ಕಸೇ ಆಂಯ್ ಜಹಾಂ ರಾಬ್ ಚಷ್ಮ್ ಜಾಹೀರಿ ಬ ಬಯೆಂದ್ ನಾಸೂತ್ ಅಸ್ತ್ ವೋ ಗರ್ ಚಶ್ಮ್ ಬಸ್ತಾ ಬನಜರ್ ಬಾತಿನ್ ಮುಶಾಹಿದಾ ನುಮಾಯಿದ್ ಗೋಯಾ ಹುಮೂನಿಸ್ತ್ ಮಲಕೂತ್ ವೋ ಜಬ್‌ರೂತ್ ಮೊಜ್ಜ ಜುಲ್‌ಮತ್ ಅಸ್ತ್ ಮುತಲ್ಲಿಖ್ ಬ ಮಮ್‌ತನಾ ಅಲ್ ವಜೂದ್ ಯಾನಿ ಹೈಚ್ ವಜೂದ್ ರಾದಾಲ್ ನಮೂದಾರಿ ನಿಬಾಶುದ್. ಲಾಹೂತ್ ಬರ್‌ಜುಲ್‌ಮತ್ ಮಜಕೂತ್ ನಾಜ಼ೆರ್ ಸತ್ ವೊ ಶಾಹಿದ್ ಪಾಕ್ ಅಯ್ ಅಜ಼ೀಜ಼್್, ಲಾಹೂತ್ ನೂರ್ ಅಸ್ತ್ ವೋ ಜಬ್ರೂತ್ ರೂಹ್ ಮಲಕೂತ್ ದಿಲ್, ನಾಸೂತ್ ತನ್[೧]

ಒಳಿತು ಹಾಗೂ ಕೆಡಕು ಅಲ್ಲಾಹನಿಂದಾಗುವ ವಿಚಾರ:

ಬುದ್ಧಿಯ 'ಇನ್ನಾ ಲಾ ಖೈರಾ, ಲಾ ಷರ್ರಾ, ಮೀಲ್ ಅಲ್ಲಾಹ ತಾಲಾ' ಇಂತಹ ಸಮಯದಲ್ಲಿ ಆರೀಫ್‌ನು ತನ್ನ ಪರಮೋಚ್ಚ ಸ್ಥಿತಿಯನ್ನು ತಲುಪಿ ಹಾಗೂ ತನ್ಮಯತೆಯಲ್ಲಿ ಅವನು ಅಗ್ನಿ ಹಾಗೂ ನೀರಿನ ವ್ಯತ್ಯಾಸವನ್ನು ಅರಿಯದವನಾದಾಗ ಮುಗ್ಧ ಮಗುವಿನಂತೆ ದೇವತಲ್ಲೀನ ಯೋಗಿಯ ಸ್ಥಿತಿಯಾಗುತ್ತದೆ.

'ಖ಼ಿರ್ದ್ ಅನಾಲಾ ಖೈರಾಹ್ ವಲಾಷರ್ರಾಹ್ ಮಿನ್ ಅಲ್ಲಾಹ ತಾಲಾಹ ವಖ್ರೇ ಸೂರತ್ ಪಜ಼ೀರ್ ಗರ್ದ್ ವೊ ಕೆ ಆಷೀಖ್ ಆರೀಫ್ ರಾ ಬಾಕಮಾಲ್ ಮಸ್ತಿ ವೋ ಇಸ್ತೆಖ್‌ರಾಖ಼್್ ಇಮ್ರೆಯಾಜ್ ಬ ಅಬೋ ಆತಿಶ್ ನಿಬಾಶುದ್ ಹಂಚೂ ಮಾಸೂಮ್ ಯಾ ಮಜ್‌ಜೂ಼ಬ್[೨].

ಗೋಚರ ವಾಸ್ತವಿಕತೆಯ ಜ್ಞಾನದ ಶ್ರೇಷ್ಠತೆ:

ಆಭರಣ ಸಂಖ್ಯೆ ೯೨ ರಲ್ಲಿ ಒಬ್ಬ ಪೀರ್‌ರ ಸ್ವತಂತ್ರ ವಿಚಾರಧಾರೆಯಿಂದಾಗಿ ಗೌರವಾನ್ವಿತನಾಗಿದ್ದ ಹಸೀನ್ ಚಾಬುಕ್ ಬನೂವಾ ಎಂಬ ಹೆಸರಿನ ವ್ಯಕ್ತಿಯ ಸಂಭಾಷಣೆಯ ಪ್ರಸ್ತಾಪವಿದೆ. ಗೋಚರ ವಾಸ್ತವಿಕತೆಯು ಜ್ಞಾನದ ಶ್ರೇಷ್ಠತೆಯನ್ನು ಪ್ರಚುರ ಪಡಿಸಲು ಹಜ್ರತ್ ಶೇಖ್ ಮಹ್ಮದ್ ಬಾಖ಼ರ್ ಅಲ್ಲಾಹ್ (ಬಹರಿಯ

ಆಭರಣ:೨ ೨. ಆಭರಣ–೮೯

ಮುರ್ಷದ್) ಅವರು ಪರಮ ಕುರುಹುಗಳನ್ನು ಹೀಗೆ ನುಡಿಯುತ್ತಾರೆ. ಬ್ರಹ್ಮಾಂಡದ ಸೃಷ್ಟಿಯ ಕಡೆ ಗಮನಹರಿಸಿದರೆ ಔನ್ನತ್ಯ ಹಾಗೂ ವೈಶಾಲ್ಯದಲ್ಲಿ ಆಕಾಶದ ಸರಿಸಮ ಯಾರೂ ಇಲ್ಲ. ಸೂರ್ಯನನ್ನು ನೋಡಿದರೆ, ಅದರಂಥ ಪ್ರಕಾಶದ ನಿರಂತರ ಚಿಲುಮೆ ಮತ್ತೊಂದಿಲ್ಲ, ಅಥವಾ ಸಮುದ್ರದತ್ತ ನೋಟ ಬೀರಿದರೆ ಇದರಾಳದ ಗುಪ್ತತೆಯು ಎಲ್ಲಕ್ಕಿಂತಲೂ ವಿಚಿತ್ರವಾಗಿದೆ. ಈ ರೀತಿ ಮಲಕೂತ್ (ದೇವಲೋಕ) ಲೋಕದ ಚಕ್ರವರ್ತಿ ಹೃದಯವೇ ಆಗಿದೆ ಮತ್ತು ಪ್ರಕಾಶವಾಗಿದೆ. ಇದು ಮಣ್ಣಿನಿಂದ ಮುಕ್ತವಾಗಿ, ಪವಿತ್ರವೂ ಆಗಿ, ಬುದ್ಧಿಯಿಂದ ಹೊರತಾಗಿದೆ. ಇವೆಲ್ಲವುಗಳಲ್ಲಿ ಯಾವುದರ ಬಗ್ಗೆಯೂ ಈ ರೀತಿಯಾಗಿ ಹೇಳಲಾಗಿಲ್ಲ. – ಅಂದರೆ ಇವುಗಳ ಜ್ಞಾನವು ದೈವೀ ಜ್ಞಾನವಾಗಿದೆ. ಅರ್ಥಾತ್ ಯಾವುದೇ ವ್ಯಕ್ತಿ ಆಕಾಶ, ಸೂರ್ಯ ಅಥವಾ ಸಮುದ್ರವನ್ನು ಅರಿತರೆ ಅವನು ದೇವರನ್ನು ಅರಿತಂತೆ ಎಂದು ಹೇಳಲಾಗಿಲ್ಲ. ಬದಲಾಗಿ ದೈವಾಜ್ಞೆಯಾಯಿತೇನೆಂದರೆ **"ಮನ್ ಅರ್ಫ ನಫ್ಸಾಅ**

ಫಖದ್ ಅರ್ಫಾ ರಬ್ಬಹ" ಅರ್ಥಾತ್ ಯಾವುದನ್ನು ಅರಿಯುವುದರ ನಿರಾಪೇಕ್ಷೆಯಿಂದ ದೈವನು ಪ್ರಾಪ್ತಿಯಾಗುತ್ತಾನೋ ಅವನ ಶ್ರೇಷ್ಠತೆಗೆ ಸೀಮೆಯೇ ಇಲ್ಲ.

"ಹದೀಸೆ ನಬದಿ ಅಲೈ ಸಲಾಂ ದರ್ಶಾನ್ ಯಕಿ ಅಜೀಂ ಹಾವ್ ಅಕ್‌ದಮಿ ಶುದಿ, ಯಾನಿ ಹರ್ ಕಸ್‌ಕಾ ಆಸ್ಮಾ ರಾಯ ಆಪ್ರಾಬ್ ಯಾ ರೂಹ್ ರಾಬ್ ಬಶನಾಖತ್ ಖುದಾಯೇ ಅಜು ಜಲ್ ಬಶನಾಖತ್ ಅಂಯ್ ಹಮಾ ರಾಗ್ ಗುಜಾಶ್ತಾ ದರ್‌ಬಾಬ್ ನಫ್ಸ್, ನಾಖಿದ್ ಗುಶ್ತಾ ಚುನಾಂಚೆ ಮನ್ ಉರ್ಫ್ ನಫ್ಸಾ

ಫಖದ್ ಅರ್ಫ್ ರಬ, ಪಸ್ ಆಂಚಾ ಆಜ್‌ಯಾಫ್ತಿನ್ ಆಂ ಖುದಾಯೇ ಬಿಚೂ ಹಾಸಿಲ್ ಮಿ ಶುದೂರ್ ಹೌಸಲಯೇ ಕೋತಾ ಅಂದೇಶ್ ಚೆ ಸಾಲ್ ದೆರ್ ಆಯದ್ ವೊ ಚೆ ಗೋನಾ ದರ್ ಗಂಜದ್.[೧]

ಮಾದರಿ ಲೋಕ ಹಾಗೂ ಮಲಕೂತ್ (ದೇವಲೋಕ) ಸ್ಥಿತಿಯ ಭಿನ್ನತೆಗಳು:

ಸಾಮಾನ್ಯವಾಗಿ ಜನ ಮಾದರಿ ಲೋಕ (ಆಲಾಂ–ಎ–ಮಿಸಾಲ್) ಹಾಗೂ ದೇವಲೋಕ (ಆಲಂ–ಎ–ಮಲಕೂತ್)ಗಳೆರಡೂ ಒಂದೇ ಎಂದು ಭಾವಿಸುತ್ತಾರೆ. ಆದರೆ ಅವುಗಳ ಮಧ್ಯೆ ಹಲವು ಭಿನ್ನತೆಗಳಿವೆ. ಅದು ಹೇಗೆಂದರೆ ಸ್ವಪ್ನಲೋಕದ ಸಂಬಂಧವು ಮಾದರಿ ಲೋಕದ ಜತೆಗಿದ್ದು, ಅದು ನಾಸೂತ್ ಹಾಗೂ ಮಲಕೂತ್‌ನ ಮಧ್ಯದಲ್ಲಿದೆ. ಹಜ್ರತ್ ಬಹರಿ ಅವರು ಈ ವ್ಯತ್ಯಾಸವನ್ನು ಒಂದು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುತ್ತಾರೆ. ಸ್ವಪ್ನದಲ್ಲಿ ನಾವು ಯಾರೊಂದಿಗೋ ಸಂಭಾಷಿಸುತ್ತೇವೆ. ಈ ಸಂಭಾಷಣೆಯ ಮಧ್ಯೆ ಅಕಸ್ಮಾತ್ ನಾವು ಎದುರಿನ ವ್ಯಕ್ತಿಯ ಜತೆ ಯಾವುದೇ

ವಿಷಯವನ್ನು ರಹಸ್ಯವಾಗಿಟ್ಟರೆ, ಸ್ವಪ್ನದ ವ್ಯಕ್ತತೆಯು ಮಾದರಿ ಲೋಕದಲ್ಲಿ, ಹಾಗೂ ರಹಸ್ಯ ವಿಷಯವು ದೇವಲೋಕದಲ್ಲಿ ಇರುತ್ತದೆ ಎಂದು ಭಾವಿಸಲಾಗುತ್ತದೆ. ಸ್ವಪ್ನದಿಂದ ಸ್ವಪ್ನಕ್ಕೆ ಇದೇ ಸ್ಥಿತಿ ಮುಂದುವರೆಯುತ್ತದೆ.

"ಫಖೀರ್ ಅಂಯ್ ರಾಜಾಯೇ ಖಿದ್ ಬದೀಂ ತರೀಖ್ ಬ ತಹಖೀಖ್ ರಸಾನಿಯದ ಕೆ ಬಹಜೆ ಅವಖಾತ್ ದೋ ಆಲಂ ಖ್ವಾಬ್ ಯಾ ಕಿಸೆ ಗುಫ್ತಗೂ ಮಿ ಕರ್‌ದಲ ಚಿಂವ್ ಸುಖನ್ ಮೈಗಫ್ತ್‌ಂ ವೋ ಚಂದೇ ರಾ ಪಿನ್ಹಾ ಮಿ ದಾಶ್ತ್‌ಂ ಪಸ್ ಗುಫ್ತ್‌ಗೂ ದರ್ ಮಹಲ್ ಮಿಸಾಲ್ ಬಾಗದ್ ವೋ ಆಂಚಾ ಪಿನ್ಹಾ ಮೈದಾಶಿತಂ ಶಾಯದ್ ಕೆ ದರ್ ಮಕಾನ್ ಮಲಕೂತ್ ಆಲಾ ಖಾಹದ್ ಬೂದ್ ನೇಜ್ ಖ್ವಾಬ್ ದರ್ ಖ್ವಾಬ್ ಹಮೇ ದಾರದ್"[೩]

ಮನುಷ್ಯನು 'ಜಾತ್' (ಸತ್ತೆ)ನ ವಿವರಣೆಯಾದರೆ ಇತರ ಪದಾರ್ಥಗಳು ಅರ್ಹತೆಯ ವಿವರಣೆಗಳು ಸಾಕ್ಷತ್ (ರೂಪ) ಲೋಕದಿಂದ, ರಹಸ್ಯಾತ್ಮಕ ಲೋಕದವರೆಗೆ ಅದೆಷ್ಟು ವಸ್ತುಗಳಿವೆಯೋ, ಅವೆಲ್ಲವೂ ದೈವಿ ಸ್ವರೂಪ ಅರ್ಹತೆಯ ಪ್ರಕಟರೂಪದ್ದಾಗಿದೆ. ಮನುಷ್ಯನು ಮೂಲತಃ ಸತ್ತೆಯ ಪ್ರಕಟರೂಪವಾಗಿದ್ದಾನೆ. ಆಕಾರ ಹಾಗೂ ಅರ್ಥರೂಪದಲ್ಲಿ 'ಅವನದೇ' ಪ್ರತಿಬಿಂಬವಿದೆ. ಸತ್ತೆಯ ಪರಂಜ್ಞಾನಕ್ಕಾಗಿ (ಮ್ವಾರಿಫತ್‌ಗಾಗಿ) ದೇಹ ಹಾಗೂ ಆತ್ಮದ ಪರಿಪೂರ್ಣತೆಯ ಅವಶ್ಯಕತೆಯಿತ್ತು. ಆದುದರಿಂದ ಮಹಾಮಹಿನಾದ ಸತ್ಯನು ತನ್ನ ಸೃಷ್ಟಿಯ ಅಂತಿಮ ಮಹತ್ಸಾಧನೆಯಾಗಿ 'ಆದಂ'ನನ್ನು ಸೃಷ್ಟಿಸಿದನು. ಇವರ ಹುಟ್ಟು ತಾಯಿಯ ಗರ್ಭದಿಂದಾಗಲಿಲ್ಲ ಬದಲಾಗಿ ಅದು ನಿತ್ಯ-ಶಾಶ್ವತ ಕರಾರಾಗಿದೆ. ಇದರ ಪರಾಕಾಷ್ಠೆಯು ಮೃತ್ಯುವಲ್ಲ ಬದಲಾಗಿ ಪುನರುತ್ಥಾನದ (ನಿರ್ಣಯದ) ದಿನವಾಗಿದೆ.

ಪ್ರವಾದಿತ್ವ ಹಾಗೂ ಸಂತತ್ವ (ದೇವಸಾಮಿಪ್ಯ)ದಲ್ಲಿ ಶ್ರೇಷ್ಠತೆಯ ಚರ್ಚೆ:

ಪ್ರವಾದಿತ್ವ ಹಾಗೂ ಸಂತತ್ವದಲ್ಲಿ ಯಾರಿಗೆ ಶ್ರೇಷ್ಠತೆಯ ಪ್ರಾಪ್ತಿಯಾಗಿದೆಯೆಂಬುದು ವಿವಾದಾಸ್ಪದ ಸಮಸ್ಯೆಯಾಗಿದೆ. ಹಜ್ರತ್ ಮುಜರಿದ್ ಅಲ್ಫ್ ದ್ವಿತೀಯ ಅವರು ತಮ್ಮ ಲೇಖನಗಳಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ. ಪತ್ರ ಲೇಖನ ೧೦೮ ಹಾಗೂ ಪತ್ರ ಲೇಖನ ೯೩ರಲ್ಲಿ ತಮ್ಮ ತೀರ್ಮಾನವನ್ನು ಈ ರೀತಿಯಾಗಿ ಪ್ರಕಟಿಸಿದ್ದಾರೆ.

"ಅಂಬಿಯಾ ಅಲೈಹಿಂ, ಅಸ್ಸಲಾಓ ವತ್ ತಸ್ಲಿಲೀಮಾತ್ ಬೆಹತರೀನ್ ಜಮೀಯ್ ಮೌಜೂದಾತ್ ಅಂದ್. ವಿಲಾಯತ್ ಜಜ್ ವೊ ನಬೂವತ್ ಕುಲ್ ಅಸ್ತ್. ಲಾ ಜುರ್ಮ್

ಆಭರಣ-೯೨

ನಬೂವತ್ ಅಫಜಲ್ ಬಾಷ್‌ದಾಜ್ ವಿಲಾಯತ್, ಖ್ವಾದ್ ವಿಲಾಯತ್ ಬನಿ ಬಾಷಿದ್ ಖ್ವಾದ್ ವಿಲಾಯತ್ ವರಿ"[೧]

"ಸಮಸ್ತ ಜೀವಿಗಳಲ್ಲಿ ಪ್ರವಾದಿ ಅವರು ಶ್ರೇಷ್ಠತಮ ವ್ಯಕ್ತಿ ಆಗಿದ್ದಾರೆ. ಸಂತತ್ವವು ಪ್ರವಾದಿತ್ವದ ಭಾಗವಾಗಿದೆ ಆದರೆ ಪ್ರವಾದಿತ್ವವು ಪರಿಪೂರ್ಣವಾಗಿದೆ. ಈ ಸ್ಥಿತಿಯಲ್ಲಿ ಪ್ರವಾದಿತ್ವವು, ಸಂತತ್ವಗಿಂತಲೂ ಶ್ರೇಷ್ಠವಾಗಿದೆ. ಅದು ಪ್ರವಾದಿಯ ಸಂತತ್ವವೇ ಆಗಲಿ ಅಥವಾ ಸಂತರ ಸಂತತ್ವವೇ ಆಗಲಿ". ಹಜ್ರತ್ ಬಹರಿಯವರು ಈ ವಿಷಯದ ಪ್ರಸ್ತಾಪವಾಗಿ ಆಭರಣ-೧ಳರಲ್ಲಿ ಅದರ ಲಾಲಿತ್ಯ ಹಾಗೂ ಪಾಂಡಿತ್ಯದ ಬಗ್ಗೆ ವಿವರಿಸಿದ್ದಾರೆ. ಅವರ ಪ್ರಕಾರ ಸಂತತ್ವದ (ದೇವಸಾಮಿಪ್ಯ) ಮೂರು ವಿಧಗಳಿವೆ. ೧) ಸಾಮಾನ್ಯ ಸಂತತ್ವ (ವಿಲಾಯತ್) ೨) ವಿಶೇಷ ಸಂತತ್ವ ಹಾಗೂ ೩) ಪರಮೋನ್ನತವಾದಿ ಸಂತತ್ವ. ಪ್ರವಾದಿತ್ವವಂತೂ ಮುಗಿದಿದೆ ಆದರೆ ಸಂತತ್ವವು ಜಾರಿಯಲ್ಲಿದೆ. ಅದರ ದಿವ್ಯಪ್ರಭೆಯ ಉಗಮಸ್ಥಾನವಾದ ಮಹಾಮಹಿಮ 'ಪರಂಸತ್ಯ'ನ ನಾಮವು 'ಪವಿತ್ರ ಸಂತ'ವಾಗಿದೆ ಅದೇ ದಿವ್ಯಪ್ರಭೆಯು ಮಹ್ಮದ್ ಸಲ್ಲಾಲ್ಲಾಹ ಅಲೈಹು ಸಲ್ಲಂ ರವರ ಮೇಲೆ ಪ್ರಕಾಶಿತವಾಯಿತು ಹಾಗೂ ಅವರ ಮಾಧ್ಯಮವಾಗಿಯೇ ಅವರ 'ಸೇವಕ'ರ ಮೇಲಾಯಿತು. ಪ್ರವಾದಿಗಳು ತಮ್ಮನ್ನು ಪ್ರವಾದಿಗಳೆಂದು ಭಾವಿಸಿದರೆ, ಹಾಗೂ ದೈವೀ ಆಚರಣೆಯ ಮಾರ್ಗದ ಕಡೆ, ಜನರಿಗೆ ಅಹ್ವಾನ ನೀಡಿದರೆ ಅದು ದೈವೀ ಸಮ್ಮತವಾಗಿದೆ ಆದರೆ ಸಂತರು ತಮ್ಮನ್ನು ಸಂತ ಎಂದು ಭಾವಿಸಿ, ತಮ್ಮ ಸಂತತ್ವದ ಪ್ರಮಾಣದ ಘೋಷಣೆಯನ್ನು ಮಾಡಿಕೊಂಡು 'ಏಕತ್ವ'ದ ದೃಢೀಕರಣ ಹಾಗೂ 'ಅನೇಕತ್ವ'ದ ನಿರಾಕರಣದ ಉದ್ದೇಶ ಪ್ರಾಪ್ತಿಗಾಗಿ ಇದ್ದರೆ ಮಾತ್ರ ಅದು ಕ್ಷಮಾರ್ಹವಾಗಿದೆ, ಇಲ್ಲವಾದರೆ ಇಂಥ ಸಂತತ್ವವು ನಿಕೃಷ್ಟವಾಗಿದೆ ಯಾಕೆಂದರೆ ಅಹಂಭಾವದಂತಹ ಕೆಟ್ಟ ಅರ್ಹತೆಯೂ ಇನ್ನೂ ಅವನ ಅಂತರ್ಯದಲ್ಲಿ ನೆಲೆಸಿದೆ ಎಂದಾಯಿತು. ಪ್ರವಾದಿತ್ವಕ್ಕೆ ಸಂತತ್ವದ ಮೇಲೆ ಸಾವಿರ ಪಟ್ಟಿನ ಶ್ರೇಷ್ಠತೆಯಿದೆ. ಯಾಕೆಂದರೆ ಪ್ರಕೃತಿದತ್ತವಾಗಿ ಖ್ವಾಜಾ (ಸಂತರಾದ) ಮಹ್ಮದ್ ಸಲ್ಲಾಲ್ಲಾಹು ಅಲೈಹು ಸಲ್ಲಂ ಅವರನ್ನು ಪ್ರವಾದಿಯೆಂದು ಕರೆಯಬಹುದು ಆದರೆ ಅವರನ್ನು ಸಂತರೆಂದು ಕರೆಯಲಾಗುವುದಿಲ್ಲ. ವಾಸ್ತವವಾಗಿ ಅವರು ಪ್ರವಾದಿಯೂ ಸಂತರೂ ಆಗಿದ್ದಾರೆ. ಪ್ರವಾದಿತ್ವವು ಸಂತತ್ವದ ಪ್ರಕಟರೂಪವಾಗಿದೆ ಆದರೆ ಸಂತತ್ವವು ಪ್ರವಾದಿತ್ವದ ಆಂತರ್ಯವಾಗಿದೆ. ವಾಸ್ತವದಲ್ಲಿ ಇವೆರಡೂ ಒಂದೇ ಆಗಿವೆ.

"ನಬಿ ಅಗರ್ ಖುದ್ರಾಬೇನಿ ಬದಾನಿದ್ ವಬಾ ಬಸಬಬ್ ದಾವತೇ ಖಲಖ್ ಮಾಜೂರ್, ವಲಿ ರಾನ್ ಶಾಯದ್ ಕೆ ಖುದ್ ರಾ ವಲಿ ಬೈನಿದ್ ವೊ ದಾವಿ ಬ ಹಸ್ತಿ

---

೧. ಆಭರಣ-೧೦೨

ಖುದ್ ರಾ ಕುಂದಾಗರ್ ಅಜ಼್ ಬರಾಯೇ ಅಸ್ಬಾತ್ ವಹದತ್ ವ ನಫಿ ಕಸ್ರತೋ ಶಿರ್ಕತ್ ಬಾಶದ್ ಮಾಫ್ ದಿಗರ್ ನಾ ವಿಲಾಯತ್ ಅವ್ ಜಯೀಫ್ ಅಸ್ತ್ ಬಿಲ್ ಅಜ಼ಹಫ್ ಜ಼ೇರಾ ಕೆ ಖುದ್ ಬೇನಿ ಕೆ ಅಜ಼್ ಅವಸಾಫ್ ನಫ್ಸ್ ಅಸ್ತ್ ಹುನೂಜ಼್ ದರ್ ಜ಼ಾತ್ ಆವ್ ಬಾಖಿ ಅಸ್ತ್. ಅಯ್ ಅಜ಼ೀಜ಼್! ನಬೂವತ್ ಬರ್ ವಿಲಾಯತ್ ಹಜ಼ಾರ್ ಮರ್ತಬಾ ಶರ್ಫ ದಾರದ್ ಕೆ ರಸೂಲ್ ಖುದಾ ರಾ ಸಲ್ಲಲಾಹ ಅಲೈಹು ಸಲ್ಲಾಂ ನಬಿ ಮಿ ತೂ ಗುಫ್ತ್ ನ ವಲಿ ಅಗರ್ ಚೆ ಹಮ್ ನಬಿ ವೋ ಹಮ್ ವಲಿ... ನಬೂವತ್ ಜಾಹಿರ್ ವಿಲಾಯತ್ ಅಸ್ತ್ ವೊ ವಿಲಾಯತ್ ಬಾತಿನ್ ನಬೂವತ್ ವಾಂಯ್ ಹರ್ ದೋ ದರ್ ಹಖೀಖತ್ ಯಕ್ಸಿಯತ್"[೧]

ಅಸ್ತಿತ್ವದ ನಾಮಸ್ಮರಣೆಯು ಶ್ರೇಷ್ಠ ಜಪವಾಗಿದೆ:

'ಸ್ಮರಣೆಗಳು' ಹಾಗೂ 'ತನ್ಮಯತೆ'ಗಳಲ್ಲಿ ಅನೇಕ ವಿಧಗಳು ಇವೆ ಆದರೆ ಯಾವ ಸ್ಮರಣೆಯ ಮೂಲೋದ್ದೇಶವೇ ಸತ್ಯದ ಪ್ರಕಟಣೆ ಹಾಗೂ ದಿವ್ಯಜ್ಯೋತಿ ದರ್ಶನದ ಸೌಭಾಗ್ಯವಾಗಿದೆಯೋ ಅದು ನಿಜಕ್ಕೂ ಅಪೂರ್ವವಾಗಿದೆ. ಮತ್ತೆ ಮೂಲದಲ್ಲಿ ಕೆಡುಕಿದೆಯೋ, ಅದನ್ನು ವರ್ಣಿಸಿ ಲಿಖಿತಗೊಳಿಸಲಾಗುವುದು ಏಕೆಂದರೆ, ಅಸ್ತಿತ್ವನಾಮದ ಪ್ರಸ್ತಾಪದಲ್ಲಿ ಅಲ್ಲಾಹನ ನಾಮದ ಜಪವು ಸಮಸ್ತ ಸ್ಮರಣೆಗಳಲ್ಲಿ ಸರ್ವೋತ್ತಮವಾಗಿದೆ. ಅವನ ಸ್ಮರಣೆಯ ವಿಧಾನವು ಏನೆಂದರೆ ಗಂಟಲು ಹಾಗೂ ನಾಲಿಗೆಗಳಿಗೆ ಅಲುಗಾಟವನ್ನು ನೀಡದೆಯೇ ಕೇವಲ ದೈವಲೋಕದ ದೇಹದ ನಾಲಿಗೆಯನ್ನು ಶ್ವಾಸದ ಜತೆ ಸಮನ್ವಯಗೊಳಿಸಬೇಕು. ಉಚ್ಛ್ವಾಸದ ಸಮಯದಲ್ಲೂ ನಿಶ್ವಾಸದ ಸಮಯದಲ್ಲೂ ಸ್ಮರಣೆಯ ವಿಧಿಯಲ್ಲಿ ಮನಸ್ಸನ್ನು ಏಕತ್ರ ಕೇಂದ್ರೀಕರಿಸಿ, ದೇವಲೋಕದ ಶರೀರದ ಕಿವಿಗಳನ್ನು ಹಣೆಬದಿಯಲ್ಲಿ ಇಡಬೇಕು. ಈ ಸ್ಮರಣೆಯನ್ನು ಕೇಳದೇ ಅದು ಅಸಮಂಜಸ. ಬದಲಾಗಿ ಅದನ್ನು ಮಾಡದೇ ಇರುವುದೇ ಒಳ್ಳೆಯದು. ಇಂತಹ ಸ್ಮರಣೆಯಿಂದ ಅಪಾಯಗಳು ನಿರ್ಬಂಧಿತವಾಗುತ್ತವೆ ಹಾಗೂ ಸ್ಮರಣೆಯು ಅಪಾಯರಹಿತವಾಗಿ ಪ್ರಾಪ್ತವಾಗುತ್ತದೆ.

"ಫೀ ಅಲ್ ಜುಮ್ಲಾ ಜ಼ಿಕ್ರೆ ಇಸ್ಮ್ ಜ಼ಾತಿ ಅಲ್ಲಾಹ್ ಅಸ್ತ, ಅಜ಼್ ವೋ ಜಲ್ ಅಜ಼್ ಹಮ್‌ಗಿ ಅಜ಼್‌ಕಾಲ್ ಬೆಹತರ್ ವೋ ಖುಶತರ್ ವೊ ತರೀಖಶ್ ಆಂಕೆ ಬಜುಬಾನ್ ತನ್ ಮಲಕೂತಿ ಬೇ ಹರ್ಕತ್ ಹಲಖ್ ವೊ ಜ಼ುಬಾನ್ ಬರಾಬರ್ ದಲ ಬಗೂವಿದ್‌ದರ್ ಉರೂಜ್ ವಚ ದರ್ ನುಜ಼ೂಲ್ ವೊ ದರ್ ದಖ ಗುಫ್ತನ್ ದಿಲ್ ರಾಮುತ್ವಜಾ ದಾಶ್ರಾ ಬಗೋಶ್ ತನ್ ಮಲ್‌ಕೂತಿ ಬಶನೂದ್ ವಾಂಯ್ ಗುಪ್ತ್ ಬಗೇರ್ ಶಪಖತ್ ದುರುಸ್ತ್

---

೧. ಆಭರಣ-೧೧೪

ನೀಸ್ತ್ ಗೋಯಾ ನಗಫ್ತಾ. ಖತ್ರಾ ದರ್ ಯಂದಮ್ ಶೋದ್ ವೋ ಶುಗಲ್ ಬೇ ಖತ್ರಾ ಖುದಾ ಮೊಯಸ್ಸಲ್ ಆರದ್"

ಮ್ವಾರಿಫತ್‌ನ ಅಶ್ವಾರೋಹಿಯ ಐದು ಆಯುಧಗಳು:

ಯಾವ ರೀತಿ ಲೌಕಿಕ ಸೈನಿಕನು ಪ್ರಯಾಣವಿರಲಿ, ವಿಶ್ರಾಂತಿಯ ಸ್ಥಿತಿಯಲ್ಲಿರಲಿ, ತನ್ನ ಆಯುಧವನ್ನು ಎಂದಿಗೂ ತನ್ನಿಂದ ಬೇರ್ಪಡಿಸುವುದಿಲ್ಲವೋ, ಅದೇ ರೀತಿಯಾಗಿ 'ಮ್ವಾರಿಫತ್'ನ ಅಶ್ವಾರೋಹಿಗಳು ಈ ಕೆಳಗಿನ ಐದು ಆಯುಧಗಳಿಂದ ಸದಾ ಸನ್ನದ್ಧರಾಗಿರುತ್ತಾರೆ. ೧) ಸದಾ ಸನಿಹದಲ್ಲಿರುವುದು, ೨) ಅಲ್ಪತಮ ಹಿಂಸೆ, ೩) ನಿಜ ಹಾಗೂ ನೇರ ನುಡಿ, ೪) ಸತ್-ಸಂಕಲ್ಪ ೫) ಜನರ ಸ್ವೀಕಾರ ಅರ್ಹತೆ ಅಥವಾ ತಿರಸ್ಕರಿಸುವಿಕೆಗೆ ಅತೀತನಾಗಿರುವುದು. ಒಂದು ಹದೀಸ್‌ನಲ್ಲಿ ಈ ರೀತಿ ನುಡಿಯಲಾಗಿದೆ. 'ತಮೂತುನ್ ಕಮಾ ತಯಶ್ಯಫ್ಜನ್' ಅರ್ಥಾತ್ ಯಾವ ರೀತಿಯಲ್ಲಿ ನೀವು ಬದುಕುವಿರಿ, ಅದೇ ಸ್ಥಿತಿಯಲ್ಲಿ ನಿಮಗೆ ಮೃತ್ಯು ಬರುವುದು. ಸಮಸ್ತ ಬಾಳನ್ನು ರಕ್ತ ಪಿಪಾಸೆಯಲ್ಲಿ ಕಳೆದು, ಅಂತ್ಯವು ಒಳಿತಿನಿಂದಾಗಲಿ ಎಂದು ಇಚ್ಛಿಸುವುದು ಅದ್ಹೇಗೆ ಸೂಕ್ತ? ಜನರು ಸಾವಿನ ಸಮಯದಲ್ಲಿ 'ಕಲೇಮಾ'[೧]ದ ಉಚ್ಛಾರಣೆಯ ಉಪದೇಶ ಮಾಡುತ್ತಾರೆ. ಸಾಯುವವನು ಸರಳ ರೀತಿಯಂತೆ ಕೊನೆಯುಸಿರು ಎಳೆದರೆ ಅಂತ್ಯವು ಶಾಂತಿಪೂರ್ಣ ಆಯಿತೆಂದು ನುಡಿಯುತ್ತಾರೆ. 'ಕಲೇಮಾ'ದ ಕೃಪೆಯಿಂದ ಹೀಗಾಗುವುದು ಅಸಂಭವ ಅಲ್ಲ ಆದರೆ ಈ ಜನರು ಇದನ್ನು ಅರಿಯುವುದಿಲ್ಲ. ಅದೇನೆಂದರೆ ಈ ರೀತಿ ಅವರಿಗೆ ಇದರ ನೆನಪು ಅಥವಾ ನೆನಪಿಸುವುದು ಅದೆಷ್ಟು ಪ್ರಯೋಜಕ? ಯಾಕೆಂದರೆ 'ಕಲೇಮಾ' ಉಚ್ಛರಿಸುವ ಅಭ್ಯಾಸವೇ ಅವನಿಗೆ ಇರದಿದ್ದರೆ, ಅದರ ಕೃಪೆ ಅದ್ಹೇಗೆ ಅವನ ಜತೆ ಬರಬಹುದು? ಹಾಗೂ ಅದ್ಹೇಗೆ ಪರಿಣಾಮಕಾರಿಯಾಗಬಹುದು? ಆಭರಣ ೧೫೪ರಲ್ಲಿ ಸಾಲಿಕ್ (ಸಾಧಕ)ನ ಮಾರ್ಗದರ್ಶನಕ್ಕೆ ಒಂದು ಸುದೀರ್ಘ ಲೇಖನವನ್ನು ಬರೆಯಲಾಗಿದೆ ಹಾಗೂ ಅನೇಕ ಉಪದೇಶ ಹಾಗೂ ಬುದ್ಧಿವಾದ ವಚನಗಳನ್ನು ಅತ್ಯಂತ ಮನೋಹರವಾದ ಶೈಲಿಯಲ್ಲಿ ರಚಿಸಲಾಗಿದೆ.

ಆಭರಣ ೧೫೦ರಲ್ಲಿ ಪವಾಡಗಳು ಸಂತತ್ವದ ವಿರುದ್ಧ ಆಗಿವೆ ಎಂದು ಬರೆದಿರುತ್ತಾರೆ. ಪ್ರಾಯಶಃ ಇದು ಅವರ ವಿಭಿನ್ನ ಹಾಗೂ ವಿಶೇಷ ದೃಷ್ಟಿಕೋನ. ಆದರೆ ಜನಸಾಮಾನ್ಯರ ನಿರ್ಣಯದ ಪ್ರಕಾರ ಪವಾಡಗಳು ದೈವೀ ಸಂಭವಿಸುತ್ತವೆ.

---

೧. ಇಸ್ಲಾಮಿನ ಶ್ರದ್ಧೆಯ ಪ್ರಥಮ ಸ್ತಂಭ 'ಅಲ್ಲಾಹನ ಹೊರತು ಬೇರ್‍ಯಾರು ಉಪಾಸನೆಗೆ ಅರ್ಹರಲ್ಲ. ಮಹ್ಮದರು ಅವರ ಪ್ರವಾದಿಗಳು ಎಂದು ಮೃತ್ಯವಿನ ಸಮಯದಲ್ಲಿ ಕಲೇಮಾ ಉಚ್ಚರಿಸುವುದರಿಂದ ಆತ್ಮವನ್ನು ಹೆಚ್ಚು ತೊಂದರೆ ನೀಡದೆ ದೇಹತ್ಯಾಗ ಮಾಡುವುದು. ಹಾಗೆಯೇ ಮರಣಾನಂತರ ಶಾಂತವಾಗುವುದು ಎಂಬುದು ಮುಸ್ಲಿಂರ ಧಾರ್ಮಿಕ ಭಾವನೆಯಾಗಿದೆ.

ಹೀಗಾಗಿ ಇಮಾಮ ಆಜಲ್ ಅವರು ತಮ್ಮ ಕೃತಿ 'ಫಿಖ್ಹಾಯೇ ಅಕ್ಬರ್'ನಲ್ಲಿ ಪವಾಡವನ್ನು ತಮ್ಮ ದೈವೀ ನಂಬಿಕೆಯ ಯಾದಿಯಲ್ಲಿ ಸೇರಿಸಿರುತ್ತಾರೆ.

ಮುನ್ನುಡಿಯ ಅಂತ್ಯಕ್ಕೆ ಮುನ್ನ ಕೆಲವು ವಿಷಯ ಪ್ರಸ್ತಾಪವಿಸುವುದು ತೀರಾ ಅಗತ್ಯ.

ತಿದ್ದುಪಡಿಗೊಳಿಸಲಾದ ಫಾರ್ಸಿ ಹಸ್ತಪ್ರತಿಯ ನೆರವಿನಿಂದ ಎಲ್ಲೆಲ್ಲಿ ಮಹತ್ವದ ಪರಿಷ್ಕರಣೆ ಮಾಡಲಾಯಿತೋ ಅದನ್ನು ಅನುವಾದಕರ ಸಹೋದರರಾದ ಮೌಲಾನಾ ಮಸೀಹುದ್ದೀನ್ ಸಾಹೇಬ್ ಖಾದರಿ ಮುಲ್ತಾನಿ ಅವರು ಅತ್ಯಂತ ಸಂತೋಷಭಾವದಿಂದ ಇದನ್ನು ಆಲಿಸಿದರು. ಇದರಿಂದಾಗಿ ಭಾಷಾಂತರಕ್ಕೆ ಉತ್ಕೃಷ್ಟತೆಯ ಸ್ಥಾನ ಪ್ರಾಪ್ತಿಯಾಗಿದೆ. ನಾನು ಹಜ್ರತ್ ಮುಲ್ತಾನಿ ಅವರನ್ನು ಹೃದಯದ ಅಂತರಾಳದಿಂದ ಕೃತಜ್ಞತೆ ಸಲ್ಲಿಸುತ್ತೇನೆ.

ಅದಲ್ಲದೆ ಸಹೃದಯಿ ಹಾಗೂ ಗೌರವಾನ್ವಿತ ಹಜ್ರತ್ ಸಯ್ಯದ್ ಮಹ್ಮದ ಪಾಶಾ ಹುಸೇನಿ ಸಾಹೇಬ್ ಖಾದ್ರಿ ಮುಲ್ತಾನಿ ಅವರ ಹಲವು ವಿಧದ ಕೃಪೆ ನೆರವುಗಳು ಈ ಅಲ್ಪನಿಗೆ ದೊರಕಿವೆ. ಈ ಕಾರ್ಯದಲ್ಲಿ ಆದಿಯಿಂದ ಅಂತ್ಯದವರೆಗೆ ಅವರ ಪ್ರೀತಿ ಸಹಕಾರವು ನಿರಂತರವಾಗಿ ದೊರೆತವು. ಹಸ್ತಪ್ರತಿಯ ವಾಚನ ಹಾಗೂ ಆಲಿಸುವಿಕೆಯ ಎರಡು ಅತಿ ಪ್ರಮುಖ ಹಾಗೂ ಪ್ರಯಾಸಕರ ಹಂತಗಳನ್ನು ಅವರ ಸತತ ಪ್ರೋತ್ಸಾಹದಿಂದಲೇ ಸರಾಗವಾಗಿ ದಾಟುವುದು ಸಾಧ್ಯವಾಯಿತು. ಕೃತಿಯ ಪರಿಷ್ಕರಣೆಯ ಸಮಯದಲ್ಲಿ ಹಜ್ರತ್ ಮಹಮೂದ್ ಬಹರಿಯವರ ಅಂತಿಮ ವಿಶ್ರಾಮದ ಸಮಾಧಿಗೆ ಭೇಟಿ ನೀಡುವ ಸೌಭಾಗ್ಯ ದೊರೆಯಿತು. ಗೋಗಿ ಪ್ರಯಾಣದ ವೇಳೆಯಲ್ಲಿ ಅವರು ನನ್ನ ಜತೆ ಬಂದು, ಸಹ ಪ್ರಯಾಣಿಕರಾದರು. ಇದಕ್ಕಾಗಿ ಈ ಅಲ್ಪನು ಅವರಿಗೆ ಕೃತಜ್ಞನಾಗಿದ್ದಾನೆ.

ಈ ಮುನ್ನುಡಿಯ ಲೇಖನಕ್ಕಾಗಿ ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವ ನನ್ನ ಸೋದರಳಿಯ ಫಜ್ಲುದ್ದೀನ್ ಅಹ್ಮದ್ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಸಹಾಯಕ ಗ್ರಂಥಪಾಲರು ಕೂಡ. ಅವರು ಅವಶ್ಯಕ ಗ್ರಂಥಗಳ ನೆರವು ನೀಡಿದ್ದಾರೆ. ದೇವರು ಅವರ ಜ್ಞಾನಾಸಕ್ತಿಯನ್ನು ವೃದ್ಧಿಸಲಿ ಹಾಗೂ ಇಹಪರಗಳೆರಡಲ್ಲೂ ಅವರಿಗೆ ತನ್ನ ಕೃಪೆ ಹಾಗೂ ಸೌಭಾಗ್ಯ ದಯಪಾಲಿಸಲಿ.

ಸಂತ ಸೋದರರಾದ ಜನಾಬ್ ಮಹ್ಮದ್ ಯಾಖೂಬ್ ಖಾನ್ ಸಾಹೇಬ್ ಖಾದ್ರಿ ಮುಲ್ತಾನಿ (ಮುಜ್ತಬಾ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರು), ಜನಾಬ್ ಅಲ್‌ಹಾಜ್ ಸಯ್ಯದ್ ವಹೀದುದ್ದೀನ್ ಸಾಹೇಬ್ ಖಾದ್ರಿ ಮುಲ್ತಾನಿ ವಲಿ ಭಾಯಿ, ಜನಾಬ್ ಹಕೀಂ ಮುಜಫ್ಫರ್ ಅಲಿ ಸಾಹೇಬ್ ಸಜ್ಜಾದ್ ಖಾದ್ರಿ ಮುಲ್ತಾನಿ, ಜನಾಬ್ ಮಹ್ಮದ್ ಅಕ್ಬರ್ ಅಲಿ ಸಾಹೇಬ್ ಖಾದ್ರಿ ಮುಲ್ತಾನಿ, ಜನಾಬ್ ಗೌಸ್ ಮುಹಿಯೋದ್ದಿನ್

ಸಾಹೇಬ್ ಖಾದ್ರಿ ಮುಲ್ತಾನಿ, ಜನಾಬ್ ಖ್ವಾಜಾ ಮೊಯಿನುದ್ದೀನ್ ಸಾಹೇಬ್ ಉರ್ಫ ಇಕ್ಬಾಲ್ ಖಾದ್ರಿ ಮುಲ್ತಾನಿ ಅವರು ಈ ಕಾರ್ಯವು ಪರಿಪೂರ್ಣಗೊಳ್ಳಲು ಸಹಕಾರ ನೀಡಿರುತ್ತಾರೆ. ಅಲ್ಲಾಹನು ಅವರ ಪ್ರಯತ್ನಗಳಿಗಾಗಿ ಯಶವನ್ನು ನೀಡಲಿ.

೨೫ ಶಾಬಾನ್ ಹಿಜ್ರ ೧೪೧೯. | **ಡಾ॥ ಮಹ್ಮದ್ ಆರೀಫುದ್ದೀನ್ ಶಾಹ**
೧೨ ಏಪ್ರಿಲ್ ೧೯೯೯, ಸೋಮವಾರ. | **ಫಾರೂಖಿ ಖಾದರಿ ಮುಲ್ತಾನಿ**
ಎಂ.ಎ., ಪಿಹೆಚ್.ಡಿ (ಉಸ್ಮಾನಿಯಾ)

■

*

ಪ್ರಥಮ ಆವೃತ್ತಿಯ ಮುನ್ನುಡಿ

ನಾಮದಹವೂ ನಸಲ್ಲೆ ಅಲಿ ರಸೂಲುಲ್ ಕರೀಮ್

ಮುರ್ಷದರೂ, ಮೌಲ್ವಿಗಳೂ ಆಗಿರುವ ಹಜ್ರತ್ ಸಯ್ಯದ್ ಶಾಹ್ ಇಸ್ಮಾಯಿಲ್ ಹುಸೇನಿ ಅಲ್ ಖಾದರಿ, ಅಲ್ ಮುಲ್ತಾನಿ ಅವರು ತಮ್ಮ ಪಿತಾಮಹ ಹಜ್ರತ್ ಸಯ್ಯದ್ ಶಾಹ ಪೀರ್ ಹುಸೇನಿ ಅಲ್ ಖಾದ್ರಿ ಅಲ್ ಮುಲ್ತಾನಿ ಅವರು ಬರೆದು ಕೃತಿಯಲ್ಲಿ ತಂದ 'ಉರೂಸೆ–ಇರ್ಫಾನ್'ನ ಒಂದು ಹಸ್ತಪ್ರತಿಯನ್ನು ಅವರ ಅಧ್ಯಾತ್ಮಿಕ ಸಂಸ್ಥಾನದ ಅಜ್ಞಾನಿ ಸೇವಕನಾದ ನನಗೆ ದಯಪಾಲಿಸಿ, ಅದನ್ನು ಉರ್ದು ಭಾಷೆಯಲ್ಲಿ ಭಾಷಾಂತರಿಸುವಂತೆ ಅಜ್ಞಾಪಿಸಿದರು. ನನ್ನ ಅಲ್ಪ ಬುದ್ಧಿ ಹಾಗೂ ಅಜ್ಞಾನದ ಹೊರತಾಗಿಯೂ, ಜ್ಞಾನಪ್ರಾಪ್ತಿಯ ಆಕಾಂಕ್ಷಿಗಳು ಇದರ ಪ್ರಯೋಜನ ಪಡೆಯಲಿ ಎನ್ನುವ ಸದುದ್ದೇಶದಿಂದ ಭಾಷಾಂತರದ ಕಾರ್ಯವನ್ನು ಪ್ರಾರಂಭಿಸಿದೆ. ಸುಮಾರು ೬೭ ದಿನಗಳಲ್ಲಿ ಭಾಷಾಂತರದ ಈ ಕಾರ್ಯವು ಪೂರ್ಣಗೊಂಡಿತು. ತದನಂತರ ಗೌರವಾನ್ವಿತ ಹಜ್ರತರ ಸನ್ನಿಧಿಯಲ್ಲಿ ಹಾಜರಾಗಿ, ಭಾಷಾಂತರವನ್ನು ಅವರ ಗಮನಕ್ಕೆ ತಂದಾಗ, ಖತ್ಆಅತ್ (ಕವನಗಳು), ಅಬ್ಯಾತ್ (ಕವಿತೆಗಳು), ರುಬಾಯಿ (ಚೌಪದಿಗಳು)ಗಳ ಭಾಷಾಂತರವನ್ನು ಕವನ ರೂಪದಲ್ಲೇ ಮಾಡಿದರೆ ಸೂಕ್ತವೆಂದು ಸೂಚಿಸಿದರು. ಈ ಆದೇಶವನ್ನು ಜಾರಿಗೆ ತರುವುದು ನನ್ನ ಸಾಮರ್ಥ್ಯಕ್ಕೆ ಮೀರಿದ ಸಂಗತಿ ಎಂದು ನನಗೆ ತೋರತೊಡಗಿತು. ಆದರೂ ಪೀರ್ ಮುರ್ಷದರ (ಗುರುಸಂತರ) ಬಗ್ಗೆ ನನಗಿರುವ ಶ್ರದ್ಧೆಯಲ್ಲಿ ನಂಬಿಕೆ ಇಡುತ್ತಾ, ಈ ಕಾರ್ಯವನ್ನು ಪ್ರಾರಂಭಿಸಿ, ಸುಮಾರು ಎರಡು ತಿಂಗಳಲ್ಲಿ ಪರಿಪೂರ್ಣಗೊಳಿಸಿದೆನು. ಇದು ಪೀರ್ ಮುರ್ಷದರ ಆಧ್ಯಾತ್ಮಿಕ ಕೃಪೆಯಿಂದಲೇ ಸಾಧ್ಯವಾಯಿತು ಎನ್ನಬಹುದು. ಆದರೆ ಇದರ ಪ್ರಕಟರೂಪವು ನನ್ನ ಸ್ವಯಂಜ್ಞಾನದ ಸಾಮರ್ಥ್ಯದ ಅನುಗುಣವಾಗಿ ಆ ಹಂತದಲ್ಲಿಯೇ ಆಯಿತು ಎನ್ನಬಹುದು.

'ಉರೂಸೆ–ಇರ್ಫಾನ್' ಖ್ವಾಜಿ ಮಹಮೂದ್ ಬಹರಿ (ರ.ಅ) ರವರ ದಖ್ಖಿನಿ ಭಾಷೆಯ ಪ್ರಥಮ ಮಸ್ನವಿ 'ಮನ್ ಲಗನ್'ನ ಫಾರ್ಸಿ ಭಾಷಾಂತರವಾಗಿದೆ. ಕೃತಿಯ ಮೂಲೋದ್ದೇಶವು ಇಸ್ಲಾಮಿ ತಸ್ಸವುಫ್ ಆಗಿದೆ. ಉರ್ದು ಭಾಷಾಂತರದಲ್ಲಿ ಲೇಖಕ ಹಜ್ರತ್ ಮಾನ್ಯರ ಮೂಲದ ಭಾವಾರ್ಥವನ್ನು ಅಕ್ಷರಶಃ ಮೂಲದಂತೆಯೇ ಉಳಿಸಿಕೊಳ್ಳಲು ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸಲಾಗಿದೆ. ಈ ಭಾಷಾಂತರವು ಸ್ವತಂತ್ರವಾಗಿರುವುದಕ್ಕಿಂತಲೂ ಶಾಬ್ದಿಕವಾಗಿ ಅಧಿಕ ಪ್ರಮುಖವಾಗಿದೆ ಎಂದು ಓದುಗರು ಇದನ್ನು ಓದಿದ ನಂತರ ಗಮನಿಸಬಹುದು. ಅಬಯಾತ್ (ಕವಿತೆಗಳು) ಹಾಗೂ ಖತಾಅತ್ (ಕವನಗಳು)ಗಳ ಕಾವ್ಯಾತ್ಮಕ ಭಾಷಾಂತರವನ್ನು ಸಹ ಬಹುಮಟ್ಟಿಗೆ ಶಾಬ್ದಿಕವಾಗಿ ಮಾಡಲಾಗಿದೆ. ಇದರಿಂದಾಗಿ ಮಹನೀಯರು ತಮ್ಮ ಅಭಿರುಚಿ ಹಾಗೂ ಜ್ಞಾನಾನುಭವದ ಅನುಗುಣವಾಗಿ ಲೇಖಕ ಮಾನ್ಯರ ಭಾವಾರ್ಥದ ಸವಿ ಅನುಭವಿಸಬಹುದು. ಶಬ್ದಾನುಶಬ್ದ ಭಾಷಾಂತರದ ಪ್ರಯತ್ನದಿಂದ ಬಹುತೇಕ ಕವನಗಳ ವ್ಯಾಕರಣದ ಬದ್ಧತೆಯು ಭಾಷೆಯ ಸೌಂದರ್ಯ ನಿರ್ಲಕ್ಷಿಸುವುದಕ್ಕೆ ಕಾರಣವಾಗಿದೆ. ಹೀಗಾಗಿ ಕವನಗಳ ಭಾಷಾಂತರದಲ್ಲಿ ಭಾಷೆಯ ಅರ್ಹತೆ ಕಡೆ ಅಧಿಕ ಪ್ರಾಶಸ್ತ್ಯ ನೀಡಿದ್ದರೆ, ಹಜ್ರತ್‌ರ ಭಾವಾರ್ಥದ ಮೇಲೆ ಪ್ರಭಾವವಾಗುತ್ತಿತ್ತು. ಆದುದರಿಂದ ನಾನು ನ್ಯೂನತೆಗಳಿಗೆ ನನ್ನ ಮಿತಿಯೇ ಕಾರಣವೆಂದು ಭಾವಿಸಿ ಅದನ್ನು ಆದಷ್ಟು ಮಟ್ಟಿಗೆ ಕಡಿಮೆಗೊಳಿಸಿ ಸಾಧ್ಯವಾದ ಮಟ್ಟಿಗೆ ಮೂಲ ಭಾವಾರ್ಥವು ತನ್ನ ಪ್ರಕಾಶವನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಿ, ಶಬ್ದದ ತಡಕಾಟದಲ್ಲಿ ಅರ್ಥವು ಅಪಭ್ರಂಶವಾಗದಂತೆ ಎಚ್ಚರವಹಿಸಿದ್ದೇನೆ. ಇದರಿಂದಾಗಿ ಜ್ಞಾನಾಸಕ್ತರಿಗೆ ಈ ಭಾಷಾಂತರದಲ್ಲಿ ಯಾವುದಾದರೂ ಆಸಕ್ತಿ ಅಥವಾ ಆತ್ಮತೃಪ್ತಿಯ ಸಾಮಗ್ರಿ ದೊರೆತರೆ ಅದನ್ನು ನಾನು ನನ್ನ ಪರಂಪರೆಯ ಪೂರ್ವಿಕರ ಅನುಗ್ರಹವೆಂದು ಭಾವಿಸುತ್ತೇನೆ. ಅಕಸ್ಮಾತ್ ಯಾವುದಾದರೂ ದೋಷ ಅಥವಾ ನ್ಯೂನತೆ ಕಂಡುಬಂದರೆ, ಕಣ್ತಪ್ಪಿನಿಂದ ಜರುಗಿದ ಅನಾಹುತವೆಂದು ಭಾವಿಸಿ, ಅವನ್ನು ಮನ್ನಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಯಾಕೆಂದರೆ ಈ ಮೊದಲು ಈ ಅಲ್ಪನು ಯಾವುದೇ ಜ್ಞಾನಕ್ಕೆ ಸಂಬಂಧಿಸಿದ ಸೇವೆಯನ್ನೂ ಮಾಡಿರಲಿಲ್ಲ. ಕಾವ್ಯರಚನೆ ಹಾಗೂ ಸಾಹಿತ್ಯ ಸೃಷ್ಟಿಯ ರಂಗದಲ್ಲೂ ಯಾವುದೇ ಗಮನಾರ್ಹ ಸಾಧನೆ ಮಾಡಿರಲಿಲ್ಲ. ಮೊದಲಿನಿಂದಲೂ ನಾನು ಸಾಹಿತ್ಯದ ವಿದ್ಯಾರ್ಥಿಯಾಗಿದ್ದೇನೆ, ಹೀಗಾಗಿ ಕಾವ್ಯ, ಛಂದಸ್ಸು, ಸುಸಂಸ್ಕೃತತೆ ಇತ್ಯಾದಿಗಳ ಅಭಿರುಚಿಯಿತ್ತು. ಆದರೆ ಈ ಮಾತುಗಳು ಆ ಕಾಲದ್ದಾಗಿದ್ದವು, ಆವಾಗ ಜ್ಞಾನದ ನೈಜತೆ ಹಾಗೂ ಅದರ ದುಸ್ಸಾಧ್ಯತೆಗಳ ಅರಿವಿರಲಿಲ್ಲ. ಹಾಗೂ ಯೋಚನಾಕ್ರಮವು ತನ್ನ ನೈಜತೆಯನ್ನು ಕಳೆದುಕೊಂಡಿತ್ತು. 'ವಮಾ ಅವಿತಯಮ್ ಮಿನ್ ಅಲಂ ಅಲಾ ಖಲೀಲಾ' ದಿಂದ ಬುದ್ಧಿಯು ಅರಿತಿರಲಿಲ್ಲ. ಆದರೆ ನೈಜ ಮಾರ್ಗದರ್ಶಕನು ಕಣ್ತೆರೆಸಿದಾಗ, ನನ್ನ ಜ್ಞಾನ–ಅಹಂಕಾರದ ನಶೆಯು ಇಳಿದುಹೋಗಿ 'ಮಾಅಲೂಮ್ ಶದ್ ಕೆ ಮಅಲೂಮ್ ನಶೆದ್' (ಏನು

ಗೊತ್ತಿದೆಯೆಂದರೆ, ಏನೂ ಗೊತ್ತಿಲ್ಲ) ಎಂಬಂತೆ ಈ ಜ್ಞಾನವೂ ಇಲ್ಲ, ಜ್ಞಾನದ ಅಹಂಭಾವವೂ ಇಲ್ಲ, ಈ ಏನೂ ನೆನಪು ಇಲ್ಲ, ಮರೆವೂ ಇಲ್ಲ, ನನ್ನ ಮುಂದೆ ಕೇವಲ ಆ ಹೊಸ್ತಿಲು ಹಾಗೂ ಅದರ ಅಪೇಕ್ಷೆಯ ವಿನಮ್ರ ಹಣೆ ಇದೆ.

ಅದೆಂತಹ ಪಾಠವನು ಕಲಿಸಿದೆ ನೀನು,
ಮನದಿಂದ ಎಲ್ಲವನು ಮರೆಸಿದೆ ನೀನು.

"ಅಜ್ ಮಂತಿಖ್ ವಜ್. ಹುಕಮತ್ ಜಜ್. ಇಷ್ಕ ನ ಪಹಮಿದಮ್
ಚಂದಾನಕಾ ನಝರ್ ಕರ್ದಮ್ ಬಕ್‌ತಬಾಬ್ ಅಂದರ್"

ಈ ಸಂದರ್ಭದಲ್ಲಿ ಗೌರವಾನ್ವಿತ ಓದುಗರಿಗೆ 'ಉರೂಸೆ-ಇರ್ಫಾನಿ'ನ ಕರ್ತೃ ಹಜ್ರತ್ ಖ್ವಾಜಾ ಮಹಮೂದ್ ಬಹರಿ ಅವರ ಪರಿಚಯ ಮಾಡಿಸುವುದು ಅತ್ಯವಶ್ಯಕ ಎನಿಸುತ್ತವೆ.

ಹಿಜರಿ ಶಕೆಯ ಹನ್ನೊಂದನೆಯ ಶತಮಾನದ ಕುರಾನ್ ಹಾಗೂ ದೈವಿ ಉಪಮೆಗಳ ಮೂಲದ ರಹಸ್ಯಜ್ಞಾನಿ ಸಂತನ ಜೀವನ ವೃತ್ತಾಂತ ವಿವರಗಳು ನಮ್ಮ ನಿರೀಕ್ಷೆಗೆ ವ್ಯತಿರಿಕ್ತವಾಗಿ ತುಂಬಾ ಕಡಿಮೆ ಲಭ್ಯವಿದೆ. ಅಷ್ಟಿಷ್ಟನ್ನು ಬರೆದಿರುವ ಕೆಲವು ವೃತ್ತಾಂತ ಲೇಖಕರೂ ಸಹ ಅದನ್ನು ಹಜ್ರತ್ ಅವರ ಕೃತಿ 'ಮನ್‌ಲಗನ್' ಅಥವಾ 'ಉರೂಸೆ-ಇರ್ಫಾನ್'ನಿಂದಲೆ ಆಯ್ದುಕೊಂಡಿರುತ್ತಾರೆ. ನಸೀರುದ್ದೀನ್ ಸಾಹೇಬ್ ಹಾಶ್ಮಿ ಅವರು ತಮ್ಮ 'ದಖನ್ ಮೇ ಉರ್ದು' ಎಂಬ ಪುಸ್ತಕದಲ್ಲಿ ಹಜ್ರತರ ವೃತ್ತಾಂತವನ್ನು 'ದಖನಿ ಕವಿ'ಯ ರೂಪದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 'ಉರ್ದು-ಏ-ಖದೀಮ್'ನಲ್ಲಿ ಹಜ್ರತ್‌ರ ಜೀವನ ಚರಿತ್ರೆಯ ಕುರಿತು ಬರೆದಿರುವುದು ಕೂಡ ಹಜ್ರತ್ ಬಹರಿ ಅವರ ಕೃತಿಯಿಂದಲೇ ಆಯ್ದುಕೊಳ್ಳಲಾಗಿದೆ. ಇವರ ಹೊರತಾಗಿ ಡಾ॥ ಮಹ್ಮದ್ ಹಫೀಜ್ ಸಯ್ಯದ್‌ರು 'ಕುಲಿಯಾತೆ ಬಹರಿ'ಯಲ್ಲಿ ಹಜ್ರತರ ಜೀವನ ಹಾಗೂ ಕೃತಿ ಮತ್ತು ಅವರ ಸಮಕಾಲೀನ ಕವಿಗಳ ಬಗ್ಗೆ ಗಂಭೀರವಾದ ಚರ್ಚೆಯನ್ನು ಮಾಡಿರುತ್ತಾರೆ. ಆದರೆ ಇಷ್ಟರ ಹೊರತಾಗಿ ಹಜ್ರತರ ಜೀವನ ಚರಿತ್ರೆಯನ್ನು ಯಾರೂ ಪ್ರಕಟಿಸಿಲ್ಲ. ಹೀಗಾಗಿ ಹಜ್ರತ್ ಬಹರಿ ಅವರ ಕೃತಿಗಳಲ್ಲಿ ಅವರಿಗೆ ಸಂಬಂಧಿಸಿದಂತೆ ಲಭ್ಯವಿರುವ ಮಾಹಿತಿಗಿಂತ ಹೆಚ್ಚಿನದೇನೂ ಲಭ್ಯವಿಲ್ಲ.

ಹಜ್ರತ್ ಖ್ವಾಜಿ ಮಹಮೂದ ಬಹರಿ:

ಉರೂಸೆ ಇರ್ಫಾನ್‌ನ ಮುನ್ನುಡಿಯಲ್ಲಿ ಈ ಕೃತಿಯ ರಚನೆಯ ಕುರಿತು ಈ ರೀತಿ ಪ್ರಸ್ತಾಪಿಸಲಾಗಿದೆ.

'ಉರೂಸೆ-ಇರ್ಫಾನ್' ಮನ್ ಕಲಾಂ ವಹಶತ್ ಇಂತೆಜ಼ಾಮ್, ಸರ್ ಖೈಲ್

ಖಲಲ್ ದಮಾಘಾನ್, ಖ್ವಾಜೆ ಮಹಮೂದ ಬಹರಿ ವಲ್ದ್ ಖ್ವಾಜೆ ಬಹರೂದ್ದೀನ್ ಅಲ್‌ಮಾರೂಫ್ ಬ ಖಾಝೆ ದರಿಯಾ, ಮುತ್ವತಿನ್ ಗೋಗಿ, ಮುತ್ಸಲ್ ಖಿಲಾ ನುಸ್ರತಾಬಾದ್ ಅಲ್ ಮಶಹೂರ್ ಬ ಸಗರ್, ಮಜ್ಞಾಫಾತ್ ಬ ಸುಭಾ ದಾರೂಜ್ ಜಫರ್ ಬಿಜಾಪುರ ದರ್ ಜಮಾ ನಿಸ್ಪ್ ತವಾಂಮಾ, ದೇಂ ಪರವರ್, ದಯಾನತ್ ಗುಸ್ತರ್, ಅಬುಲ್-ಅಲ್-ಮಾಝೆ ಸುಲ್ತಾನ್ ಔರಂಗಜೇಬ್ ಘಾಝೆ ಖಿಲ್ಪಲ್ಲಾ ಮಲ್ಕಾ ಅಜ್ಞ್ ಮುಕಮನ್ ಬ ಮುಶಹದ್ ಶಹಾದತ್ ನಜ್ಞೂರ್ ನಮೂದ್'

'ಉರೂಸೆ-ಇರ್ಫಾನಿ'ನ ಕೃತಿ ರಚನೆ:

ಮುನ್ನುಡಿಯ ಅಂತ್ಯದಲ್ಲಿ ಕೃತಿರಚನೆಯು ೧೧೧೭ ಹಿ. ಶ. ಎಂದು ನಮೂದಿಸಲಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ 'ಮನ್‌ಲಗನ್'ನ ಐದು ವರ್ಷಗಳ ನಂತರ 'ಉರೂಸೆ-ಇರ್ಫಾನ್' ಕೃತಿ ರಚನೆಯಾಗಿದೆ. ಇದರ ಉಪಸಂಹಾರದಲ್ಲಿ ಕೃತಿರಚನೆಯ ಶಕೆಯ ಕುರಿತು ಹಜ್ರತ್ ಬಹರಿ ಅವರು ತಮ್ಮ ಕವನದ ಒಂದು ಚರಣದಲ್ಲಿ ಈ ರೀತಿಯಾಗಿ ಉಲ್ಲೇಖಿಸಿದ್ದಾರೆ.

ಹಿಜರಿ ತೋ ಯಹಿ ಕೇತಕ್ ಬರ್ಸ ಥೇ
ಬಾಶಾ ಉಪರ್ ಯೇಕ್ ಸೌ ಸಹಸ್ ಥೇ

'ಮನ್‌ಲಗನ್'ನ ಅಧ್ಯಯನದಿಂದ ಸ್ಪಷ್ಟ ಆಗುವುದು ಏನೆಂದರೆ, 'ಮನ್‌ಲಗನ್'ಅನ್ನು ಹಿ.ಶ.೧೧೧೨ರಲ್ಲಿ ತಮ್ಮ ೯೦ನೇ ವರ್ಷ ವಯಸ್ಸಿನಲ್ಲಿ ಬರೆಯಲಾಗಿದ್ದು, ಅದನ್ನು ಈ ರೀತಿಯಾಗಿ ಪ್ರಸ್ತಾಪಿಸಿದ್ದಾರೆ.

ಹೈ ಉಮ್ರ್ ಮೊರಾ ನವ್ವದ್ ಬರಸ್ ಕಾ
ಪನ್ ಇಷ್ಕ್ ಮೊರಾ ಬರಸ್ ಹೈ ದಸ್ ಕಾ

ಜಿನ್ ಇಷ್ಕ್ ಕೋಂ ಕುಚ್ ಪಹಚಾಂತಾ ಹೈ
ಮಾಷೂಖ್ ಹೈ ಕ್ಯಾ ಸೂ ಜಾನ್‌ತಾ ಹೈ

ಹಜ್ರತ್ ಬಹರಿಯವರ ನಿಧನ ಶಕೆ:

ಈ ಕವನದ ಸಾಲುಗಳಿಂದಾಗಿ ಹಜ್ರತರು ಹಿ.ಶ.೧೧೧೨ರಲ್ಲಿ ೯೦ ವರ್ಷದವರು ಆಗಿದ್ದರೆಂದು ಸಾಬೀತಾಗುತ್ತದೆ. ಮೌಲ್ವಿ ಅಬ್ದುಲ್ ಹಕ್ ಸಾಹೇಬರು ಹಜ್ರತ್‌ರ ನಿಧನದ ದಿನಾಂಕವನ್ನು ೧೦ ಷವ್ವಾಲ್ ೧೧೩೦ ಹಿಜರಿ ಶಕೆ ಎಂದು (೧೫ ಅಗಸ್ಟ್ ಕ್ರಿ.ಶ. ೧೭೧೮) ಎಂದು ಉಲ್ಲೇಖಿಸಿದ್ದಾರೆ. ಇದರಿಂದ ಅವರ ಜನ್ಮದ ವರ್ಷವು ಹಿ.ಶ. ೧೦೨೨ ಎಂದಾಗುತ್ತವೆ. ಹೀಗಾಗಿ ನಿಧನದ ಸಮಯದಲ್ಲಿ ಅವರ ವಯಸ್ಸು ೧೦೮ ವರ್ಷವೆಂದು ದೃಢವಾಗುತ್ತದೆ. 'ಉರೂಸೆ-ಇರ್ಫಾನ್'ನಲ್ಲಿ ಅಲ್ಲಲ್ಲಿ

ಚದುರಿದಂತಿರುವ ಅವರ ಜೀವನದ ಘಟನೆಗಳನ್ನು ಒಂದೆಡೆ ಸೇರಿಸಿದಾಗ ಹಜ್ರತ್ ಬಹರಿ ಅವರ ಜೀವನ ಚರಿತ್ರೆಯು ಈ ರೀತಿಯಾಗುತ್ತದೆ.

ಹಜ್ರತ್ ಬಹರಿಯವರ ಸಂತ ಪರಂಪರೆ:

ಹಜ್ರತ್ ಖಾಜಿ ಮಹಮೂದ್ ಬಹರಿ ತಂದೆ ಹಜ್ರತ್ ಖಾಜಿ ಬಹರುದ್ದೀನ್, ಉರ್ಫ ಖಾಜಿ ದರಿಯಾ ಅವರು, ಆದಿಲ್‌ಶಾಹಿ ಆಳ್ವಿಕೆಯಲ್ಲಿ ನ್ಯಾಯಾಧೀಶರ ಹುದ್ದೆಯಲ್ಲಿ ಸೇವಾನಿರತರಾಗಿದ್ದರು. ಅವರು ಸೂಫಿ ಮನೋಭಾವದವರಾಗಿದ್ದು, ಪವಿತ್ರ ಆಂತರ್ಯವನ್ನು ಹೊಂದಿದ್ದ ಮಹಾಪುರುಷರಾಗಿದ್ದರು. ಶಮ್ಸಲ್ ಅಶ್ಶಾಖ್ ಹಜ್ರತ್ ಶಾಹ ಮಿರಾಂಜಿ ಅವರ ಖಲೀಫಾರಾಗಿದ್ದ ಹಜ್ರತ್ ಶಾಹ ಬುರಾಹನುದ್ದೀನ್ ಬಿಜಾಪುರಿ ಅವರ ಖಲೀಫಾರಾಗಿದ್ದರು.

ಹಜ್ರತ್ ಖ್ವಾಜಿ ಮಹಮೂದ್ ಬಹರಿ ಅವರ ಶಿಕ್ಷಣ ಹಾಗೂ ತರಬೇತಿ

ಹಜ್ರತ್ ಖ್ವಾಜಿ ಮಹಮೂದ್ ಬಹರಿ ಅವರ ಶಿಕ್ಷಣ ಹಾಗೂ ತರಬೇತಿಯು ಸಾಮಾನ್ಯ ರೀತಿಯಿಂದ ಅಂದರೆ ಸಾಂಪ್ರದಾಯಿಕ ರೀತಿಯಲ್ಲಿ ಆಗಲಿಲ್ಲ. ಅವರೇ ನುಡಿದಂತೆ...

...ಯೆಕ್ ರೋಜ಼್ ನ ಬರ್ದಾ ರಹ ಬ ಮಕ್ತಬ್
ನೇ ದೂದೆ ಚರಾಗ್ ಖುರ್ದಾ ಯಕ್ ಶಬ್

ಹರ್ಗಿಜ಼್ ನಿಶ್‌ದಂ ಜಿನ್‌ಫಶ್ ನಾಜ಼್ ರೂ
ಆಲೂದಅ ಲುತ್ಫ್ ವೊ ಖಹರ್ ಉಸ್ತಾದ್ (ಉರೂಸೆ-ಇರ್ಫಾನ್)

ಆದರೂ ಅವರ ಕೃತಿಗಳ ಅಧ್ಯಯನದಿಂದ ಸ್ಪಷ್ಟವಾಗುವುದು ಏನೆಂದರೆ ಪರಮ ಚಾರಿತ್ರ್ಯನು, ಜ್ಞಾನದ ಚರಮನಾದವನು ಆದಿಯಿಂದಲೇ ಇವರ ಶುಭ್ರ ಹೃದಯದಲ್ಲಿ ಸತ್ಯ ಹಾಗು ದೈವೀಜ್ಞಾನದ ಸತತ ಪ್ರವಾಹವನ್ನೇ ಹರಿಸಿದ್ದನು. ಅಲೌಕಿಕ ಜ್ಞಾನದ ದಿವ್ಯಪ್ರಭೆಯು ಇವರ ಹೃದಯ ಹಾಗೂ ನೋಟಕ್ಕೆ ಪ್ರಕಾಶವನ್ನು ದಯಪಾಲಿಸಿತ್ತು. ಬಾಲ್ಯಾವಸ್ಥೆಯಿಂದಲೇ ಅವರ ಅಸ್ತಿತ್ವ ಇಂತಹ ದೈವೀ ಲಕ್ಷಣಗಳ ಮೂಲಕ ವ್ಯಕ್ತವಾಗಿದ್ದವು. ಅವು ಏನೆಂದರೆ, ಸೂಫಿ-ಸಂತರ ಸಮಾವೇಶಗಳಲ್ಲಿ ಅವರು ಗೋಷ್ಠಿಯ ಕೇಂದ್ರ ಬಿಂದು ಆಗಿರುತ್ತಿದ್ದರು. ಮಹಾನ್ ವಿದ್ವಾಂಸರು ಇವರ ಪ್ರಜ್ವಲವಾದ ಭವಿಷ್ಯತ್ತನ್ನು ಕಲ್ಪಿಸಿಕೊಂಡು, ಅಭಿಮಾನಭಾವದಿಂದ ನೋಡುತ್ತಿದ್ದರು. ಇವರ ಗದ್ಯ ಹಾಗೂ ಪದ್ಯಗಳಲ್ಲಿ ಸತ್ಯದರ್ಶನ ಹಾಗೂ ಅನುಭಾವದ ಜತೆಗೆ ಸಾಹಿತ್ಯ ಹಾಗೂ ಚಿಂತನೆಯ ಅಪೂರ್ವ ಔನತ್ಯ, ಶಬ್ದ ಹಾಗೂ ಅರ್ಥಗಳ ಒನಪು ಒಯ್ಯಾರದ ಲಾಲಿತ್ಯಗಳು ಅತ್ಯಧಿಕವಾಗಿ ಬಳಕೆಯಾಗಿವೆ. ಯಾವುದೇ ಔಪಚಾರಿಕ ಶಿಕ್ಷಣ-

ತರಬೇತಿ ಪಡೆಯದೆ, ಇವರ ಸಾಹಿತ್ಯವು ಅದು ಹೇಗೆ ಇಷ್ಟು ಮಧುರ ಹಾಗೂ ಪ್ರಭಾವಶಾಲಿಯಾಗಿದೆ ಎಂಬುದು ಆಶ್ಚರ್ಯಕರ ಸಂಗತಿ? ಆದರೆ ಯಾರಿಗೆ ದೈವೀರಹಸ್ಯದ ಗೂಢವು ಸುವ್ಯಕ್ತವಾಗಿದೆಯೋ ಅವರಿಗಿದು ಗೊತ್ತಾಗುತ್ತದೆ! ಅದೇನೆಂದರೆ ಅರಬಿನ ಭೂಮಿಯ ಮೇಲೆ ಹದಿಮೂರವರೆ ನೂರು ವರ್ಷಗಳ ಮುಂಚೆ ಅಶಿಕ್ಷಿತ ಮಹಾನುಭಾವರಾಗಿದ್ದ ಪ್ರವಾದಿ ಮಹ್ಮದ್ (ಸ.ಅ) ರವರಿಗೆ 'ಮದಿನಾ-ತುಲ್-ಇಲ್ಮ್' ಎಂಬ ಉಪಾಧಿ ಪಡೆಯುವಂತೆ ಅನುಗ್ರಹಿಸಿದ ಆ ದಿವ್ಯ ಅಸ್ತಿತ್ವಕ್ಕೆ ಯಾವುದು ಅಸಾಧ್ಯ? ಈ ಪ್ರವಾದಿಯ ಅನುಯಾಯಿಗಳಲ್ಲಿ ಸಮಸ್ತ ಪ್ರವಾದಿಗಳ ಸರದಾರನ ಅನುಗ್ರಹದಿಂದ ಅನೇಕ ಅಶಿಕ್ಷಿತ ವ್ಯಕ್ತಿಗಳು ಹುಟ್ಟಿ, ಅವರ ಎದೆಗಳನ್ನು ಮಾಯನತಿಖ್ ಅನ್ ಅಲ್ ಹುವಿ'ಯ ಸಂಬಂಧದಿಂದ ಜ್ಞಾನಸಂಪತ್ತು ತುಂಬಿ ತುಳುಕುವಂತಾದರೂ, ಬಹುಶಃ ಅನೇಕ ಮಹನೀಯರು 'ಅನಕ್ಷರಸ್ಥತೆ'ಯನ್ನು ಪ್ರವಾದಿ ಮಾನ್ಯರ ವಿಶೇಷತೆಗಳಲ್ಲಿ ಒಂದು ಎಂದು ಭಾವಿಸುತ್ತಾರೆ. ಅನುಯಾಯಿ ಸಮುದಾಯಕ್ಕೆ ಇದರ ಸಂಸರ್ಗವು ಅಸಂಸ್ಕೃತ ಎಂದು ಭಾವಿಸುವುದಾದರೂ, ವಿನಮ್ರತೆಯ ಅರಿಕೆ ಏನೆಂದರೆ ಇಹಪರಗಳ ಸರದಾರ (ಪ್ರವಾದಿ)ರು ತಮ್ಮ ವಿಶೇಷತೆಗಳಿಂದ ತಮ್ಮ ಅನುಯಾಯಿಗಳು ವಂಚಿತರಾಗದಂತೆ ನೋಡಿಕೊಂಡಿದ್ದು. ಪ್ರವಾದಿಯ 'ಮೇರಾಜ್'*೧ಗಿಂತ ಹಿರಿಯದಾದಂತಹ ವಿಶೇಷತೆಯು ಮತ್ತೊಂದಿಲ್ಲ. ಇದರಿಂದಲೂ ಅನುಯಾಯಿಗಳಿಗೆ ದಿನದಲ್ಲಿ ಐದು ಸಲ 'ಅಸ್ಸಲಾತ ಮೇರಾಜುಲ್ ಮೋಮಿನೀನ್' ಎಂಬ ಶುಭ ಸಂದೇಶದ ಸೌಭಾಗ್ಯವನ್ನು ದಯಪಾಲಿಸಲಾಯಿತು.

ಅನಾದಿಯಿಂದಲೂ ನಿನ್ನಲ್ಲಿ ಇಹುದು ಈ ವಿಶ್ವಾಸವು
ಒಂದು ಹಿಡಿ ಮಣ್ಣಿನಿಂದ ಮನುಜನನ್ನು ಸೃಷ್ಟಿಸಿದೆ.

ಈ ಒಂದು ವಾಕ್ಯದ ತಾತ್ಪರ್ಯ ಏನೆಂದರೆ 'ಪರಂಸತ್ಯ'ದ ಜ್ಞಾನವಾಗಲಿ, ದೈವೀ ಜ್ಞಾನವಾಗಲಿ ಅದು ದೇವರ ಕೃಪಾನುಗ್ರಹದಿಂದ ಪ್ರಾಪ್ತಿಯಾಗಿದೆ ಹಾಗೂ ನೀಡುವವನಿಗೆ (ಅಲ್ಲಾಹನಿಗೆ) ಅಧಿಕಾರವಿದೆ. ಅವನು ಅದನ್ನು ಯಾರಿಗೆ ಬೇಕೋ ಅವರಿಗೇ ದಯಪಾಲಿಸುತ್ತಾನೆ. ಕೃತಘ್ನರಿಗೆ ಇದನ್ನು ಅಲ್ಲಗಳೆದರೂ ಅಥವಾ ಅವಿಶ್ವಾಸಿಗಳು ಇದರಲ್ಲಿ ಭಿನ್ನಮತ ಹೊಂದಿದರೂ 'ಝಲಕ್ ಫಜಲಕಲ್ಲಾಹ ಯೂತಿಯ ಮಿನ್ ಯಶ್‌ಯಾ' ಎಂಬುದಾಗಿ ತನ್ನ ಸ್ಥಾನದಲ್ಲಿ ಸ್ಥಿರವಾಗಿದೆ ಹಾಗೂ ಅವನು ತನ್ನ ಅನಂತ ಕೃಪೆಯಿಂದ ಅನುಗ್ರಹಿಸುತ್ತಾನೆ. ಓದುಗರಿಗೆ 'ಉರೂಸೆ-ಇರ್ಫಾನ್'ನಲ್ಲಿ

---

೧. ಮೇರಾಜ್: ಇದರ ಶಾಬ್ದಿಕ ಅರ್ಥ ಏಣಿ. ಆದರೆ ಪ್ರವಾದಿಯವರು ತಮ್ಮ ಜೀವಿತಕಾಲದಲ್ಲಿ ಒಂದು ಸಲ ರಜ್ಜಬ್‌ನ ೨೭ರ ರಾತ್ರಿ ಬುರ್‍ರಾಖ್ ಎಂಬ ವಾಹನ ಏರಿ, ಸಪ್ತ ಆಕಾಶಗಳ ಯಾತ್ರೆಯನ್ನು ಮಾಡಿ, ಪರಂಜ್ಞಾನಿ ಅಲ್ಲಾಹನ ಇವರಿಗೆ ದರ್ಶನ ನೀಡಿದ್ದಾನೆ. ಅದಕ್ಕೆ ಮೇರಾಜ್ ಎನ್ನುತ್ತಾರೆ.

ಇಂತಹ ದೈವೀ ಅನುಗ್ರಹವು ಸಮೃದ್ಧ ದರ್ಶನವಾಗಿ ಕಾಣಿಸುತ್ತದೆ. ಇದರಿಂದ ಅರಿವಾಗುವುದು ಏನೆಂದರೆ ಯಾವ ರೀತಿಯಿಂದ ಹಜ್ರತ್ ಮಹಮೂದ್ ಬಹರಿ ಅವರು ಓದು-ಬರಹದಿಂದ ವಂಚಿತರಾಗಿಯೂ ಸತ್ಯಜ್ಞಾನದ ಹೊಳೆಯನ್ನು ಹರಿಸಿ, ದೈವೀಜ್ಞಾನದ ಬೊಕ್ಕಸವನ್ನೆ ಪಡೆದು ಹಂಚಿರುತ್ತಾರೆ.

ಹಜ್ರತ್ ಬಹರಿಯವರ ಧಾರ್ಮಿಕ ಗುರು (ಮುರ್ಷದ್):

ಹಜ್ರತ್ ಬಹರಿ (ರ.ಅ) ರವರು ಹಜ್ರತ್ ಶಾಹ್ ಮಹ್ಮದ್ ಬಾಖ಼ರ್ ಖಾದ್ರಿ ಅವರಿಂದ ದೀಕ್ಷೆ ಪಡೆದಿದ್ದರು. ಇಪ್ಪತ್ತು ವರ್ಷಗಳವರೆಗೆ ಹಗಲೂ-ರಾತ್ರಿ ತಮ್ಮ ಗುರು (ಪೀರ್‌ನ) ಸಾನಿಧ್ಯದಲ್ಲಿದ್ದು, ಪುಣ್ಯ ಸಂಪಾದನೆ ಮಾಡಿದರು. ಶೇಖ್‌ರ ನಿಧನದ ಬಳಿಕ, ಅವರ ಗುಂಬಜ್‌ನ್ನು ತಮ್ಮ ಮೇಲ್ವಿಚಾರಣೆಯಲ್ಲಿ ಗೋಗಿಯಲ್ಲಿ ಹಿ.ಶ. ೧೧೦೦ರಲ್ಲಿ ನಿರ್ಮಿಸಿ ಅದನ್ನೇ ತಮ್ಮ ವಾಸಸ್ಥಳ ಹಾಗೂ ವಿಶ್ರಾಂತಿಧಾಮವನ್ನಾಗಿ ಮಾಡಿಕೊಂಡರು ಅವರ ಸಮಾಧಿ ಸ್ಥಳದಲ್ಲಿ ದೇವಧ್ಯಾನಸಕ್ತರಾಗಿ ಕುಳಿತಿರುತ್ತಿದ್ದರು.

ಬಿಜಾಪುರ ಸಂಸ್ಥಾನದ ಕೊನೆಯ ದೊರೆಯಾಗಿದ್ದ ಸಿಕಂದರ್ ಆದಿಲ್‌ಶಾಹನಿಗೂ ಇವರ ಬಗ್ಗೆ ಅತೀವ ಗೌರವಭಾವವಿತ್ತು. ಬಾದಶಹಾನ ಒತ್ತಾಯದ ಮೇರೆಗೆ ಕೆಲವು ದಿನಗಳಿಗಾಗಿ ಇವರು ಬಿಜಾಪುರಕ್ಕೆ ಆಗಮಿಸಿದ್ದರು. ಸಿಕಂದರ್ ಆದಿಲ್‌ಶಾಹನು ಇವರಿಂದ ಅತ್ಯಧಿಕ ಪ್ರಭಾವಿತನಾಗಿದ್ದನು. ಹೊರಡುವಾಗ ರಾಜುಡುಪು ಹಾಗೂ ಕೆಲವು ಅತ್ಯಮೂಲ್ಯ ರತ್ನಗಳನ್ನು ನೀಡಿ, ಇವರನ್ನು ಬೀಳ್ಕೊಟ್ಟಿದ್ದನು. ಆದರೆ ಆ ರಾಜುಡುಪು ಹಾಗೂ ರತ್ನಗಳನ್ನು ಹೈದ್ರಾಬಾದಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಡಕಾಯಿತರು ಲೂಟಿ ಮಾಡಿದರು. ಅದಲ್ಲದೆ ಹಜ್ರತರ ಕಾವ್ಯದ ಬೃಹತ್ ಪ್ರಮಾಣದ ಸಾಹಿತ್ಯ ಸುಮಾರು ೫೦ ಸಾವಿರ ಕವನೋಕ್ತಿಗಳನ್ನು ಹೊಂದಿದ್ದ ಅಮೂಲ್ಯ ಸಾಹಿತ್ಯ ನಿಧಿ ಆ ಲೂಟಿ ಹಾಗೂ ಧ್ವಂಸದ ಸಂದರ್ಭದಲ್ಲಿ ನಾಶವಾಯಿತು. ಇದರಿಂದ ಹಜ್ರತರಿಗೆ ಅತೀವ ದುಃಖವಾಗಿತ್ತು.

ಆಗ ನೈರುತ್ಯ ಭಾರತದಿಂದ ಶಹಂಶಾಹ ಔರಂಗಜೇಬನ ಆಕ್ರಮಣ ಸತತವಾಗಿ ಮುಂದುವರೆಯುತ್ತಿದ್ದ ಕಾಲವಾಗಿತ್ತು. ಅಂತಿಮವಾಗಿ ದೀರ್ಘ ಮುತ್ತಿಗೆಯ ನಂತರ ಶಹಂಶಾಹ ಔರಂಗಜೇಬನು ಬಿಜಾಪುರದ ಮೇಲೆ ಪ್ರಭುತ್ವ ಸಾಧಿಸಿದನು ಹಾಗೂ ಆದಿಲ್‌ಶಾಹಿ ಸಾಮ್ರಾಜ್ಯದ ದೀಪವು ಶಾಶ್ವತವಾಗಿ ನಂದಿಹೋಯಿತು.

'ಮನ್ ಲಗನ್' ಕೃತಿ:

ಹಜ್ರತ್ ಮಹಮೂದ ಬಹರಿ ಅವರು ಯಥಾಪ್ರಕಾರ ತಮ್ಮ ಶೇಖ್‌ರ ಸಮಾಧಿಯ ಬಳಿ ಧ್ಯಾನಮಗ್ನರಾದರು. ಅವರು ಇಲ್ಲಿಯೇ ಹಿ.ಶ. ೧೧೧೨ರಲ್ಲಿ 'ಮನ್‌ಲಗನ್'

ಕೃತಿಯನ್ನು ದಖ್ಖನಿ ಭಾಷೆಯಲ್ಲಿ ಬರೆದರು. 'ಮನ್‌ಲಗನ್'ನ ಕೃತಿಯ ಬಳಿಕ ಅವರಿಗೆ 'ಕ್ಷಯ' ರೋಗದ ತೀವ್ರ ಬಾಧೆ ಆರಂಭವಾಯಿತು. ಇದರಿಂದಾಗಿ ಅವರ ದೀರ್ಘ ಕಾಲ 'ಚಳಿಜ್ವರ'ದಿಂದ ಬಳಲಿದರು. ದೇಹದ ಮಾಂಸವೆಲ್ಲಾ ಕರಗಿ, ಅದು ಕ್ಷೀಣವಾಯಿತು. ಇಂಥ ಸಮಯದಲ್ಲಿ ಅವರ ಸಮಕಾಲೀನ ಮಹನೀಯರೊಬ್ಬರು ಹಾಗೂ ಮಿತ್ರರು ಅವರಿಗೆ ಈ ರೀತಿ ಸಲಹೆ ನೀಡಿದರು. "ನೀವು ದಖ್ಖನಿ ಭಾಷೆಯಲ್ಲಿ ಬರೆದಿರುವ 'ಮನ್‌ಲಗನ್'ನನ್ನು ಫಾರ್ಸಿ ಭಾಷೆಯಲ್ಲಿ ಬರೆದರೆ ದೂರದೂರದವರೆಗೆ ಇದರ ಪ್ರಯೋಜನ ಪಡೆಯಬಹುದಾಗಿದೆ. ದಖ್ಖನಿ ಭಾಷೆಯಲ್ಲಿರುವುದರಿಂದ ಪ್ರಯೋಜನವು ಸೀಮಿತವಾಗುತ್ತದೆ." ಈ ಸಲಹೆಯನ್ನು ಅವರು ಸಕಾರಾತ್ಮಕವಾಗಿ ಸ್ವೀಕರಿಸಿ ಇದರ ಫಾರಸಿ ಭಾಷಾಂತರವನ್ನು 'ಉರೂಸೆ-ಇರ್ಫಾನ್' ಎಂಬ ಕೃತಿನಾಮದಿಂದ ಅಲ್ಪ ಪರಿಷ್ಕರಣೆಯೊಂದಿಗೆ ಸಂಗ್ರಹಿಸಿದರು. ಅನಿವಾರ್ಯವಾದ ಕೆಲವು ವಿಷಯಗಳನ್ನು ಅಧಿಕವಾಗಿ ಸೇರ್ಪಡೆಗೊಳಿಸಿದರು. 'ಮನ್‌ಲಗನ್'ನಲ್ಲಿ 'ಫಸಲು' ಎಂದಾಗಿದ್ದ ಪ್ರತಿ ಅಧ್ಯಾಯವನ್ನು ಅವರು, "ಆಭರಣ" ಎಂದು ಹೆಸರಿಸಿದರು. ಈ ರೀತಿಯಾಗಿ ಇಸ್ಲಾಮಿ ಸೂಫಿ ಅನುಭಾವ ದರ್ಶನದ ಈ ಕೃತಿ ಹಿ.ಶ.೧೧೧೬ರಲ್ಲಿ ಪೂರ್ಣಗೊಂಡಿತು.

ಹೀಗಾಗಿ ಅತ್ಯುನ್ನತ ದೈವೀ ಸಾಕ್ಷಾತ್ಕಾರದ ಶೋಭಿತ ವಧುವಾಗಿ ಪ್ರಕಾಶಮಾನವಾಗಿ ಪ್ರಕಟವಾಯಿತು.

ಸೂಫಿ ಅನುಭಾವ (ತಸವ್ವುಫ್):

'ತಸವ್ವುಫ್'ನ ಅರ್ಥವು ಅದೆಷ್ಟು ವ್ಯಾಪಕವಾಗಿದೆ ಎಂದರೆ ವಿಸ್ತೃತವಾಗಿ ಪ್ರತಿ ಅರ್ಥದ ವಿವರಣೆಯ ಬದಲು ಅದನ್ನು ವಿವಿಧ ಆಧ್ಯಾತ್ಮಿಕ ವಿಷಯಗಳ ಸಂಕಲನವೆಂದರೆ ಒಳಿತು. ಒಬ್ಬನು ತಸವ್ವುಫ್ ಎಂದರೆ 'ಸೌಫ್'ನ ವೇಷಾಧಾರಣೆ ಎಂದು ಕರೆದರೆ, ಮತ್ತೊಬ್ಬನು ವಿಷಯ-ಇಂದ್ರಿಯಗಳ ಶುದ್ಧೀಕರಣ ಹಾಗೂ ಹೃದಯ ಮಧ್ಯಸ್ಥಿಕೆಯ ಸ್ಥಿತಿಯೆಂದು ಕರೆದನು. ಆದರೆ ಪಾರಿಭಾಷಿಕವಾಗಿ ತಸವ್ವುಫ್ ಆ ಪಥವಾಗಿದೆ ಯಾವುದು ಸಮಸ್ತ ಜೀವಕೋಟಿಯ ಮುಕುಟ ಮಣಿ ಅರ್ಥಾತ್ ಮನುಷ್ಯನಿಗೆ 'ಪರಂ'ಗುರಿಯ ಶೋಧದ ಕುಶಲತೆಯನ್ನು ಕಲಿಸಿ, ಏಕತ್ವದ ನೇರಮಾರ್ಗ (ಸೀರಾತ್ ಮುಸ್ತಖೀಮ್)ದಲ್ಲಿ ನಡೆಸುವ ಜೀವನದ ಕ್ರಮವೆನ್ನಬಹುದು.

ಇಸ್ಲಾಮೀ ಹಾಗೂ ಇಸ್ಲಾಮೇತರ ತಸವ್ವುಫ್:

ಇಸ್ಲಾಮಿ ಪಂಡಿತರ ಬಹುಸಂಖ್ಯಾತ ಸಮೂಹವು ತಸವುಫ್‌ನ ಬಗ್ಗೆ ತೀವ್ರತರವಾದ ವಿರೋಧಭಾವವನ್ನು ಹೊಂದಿರುತ್ತಾರೆ ಹಾಗೂ ಇದನ್ನು ಇಸ್ಲಾಮಿ ಮೂಲ ಸಿದ್ಧಾಂತದ ಅರ್ಥಾತ್ ದೈವೀಗ್ರಂಥ ಕುರಾನ್‌ನ ಹಾಗೂ ಪ್ರವಾದಿಗಳ ವಚನಾಮೃತಗಳಿಗೆ (ಹದೀಸ್)

ವಿರುದ್ಧವಾಗಿದೆ ಎಂಬ ಭಾವನೆ ಹೊಂದಿದ್ದಾರೆ. ಕೆಲವರಂತೂ ಇದು ಯುನಾನಿ (ಗ್ರೀಕ್) ತತ್ವದರ್ಶನದಿಂದ ನೇರವಾಗಿ ಭಟ್ಟಿ ಇಳಿಸಿರುವುದು ಎಂದು ವ್ಯಾಖ್ಯಾನಿಸಿದರೆ, ಇನ್ನೂ ಕೆಲವರು ಇದನ್ನು ಭಾರತೀಯ ಹಿಂದೂ ವೇದಾಂತದ ಅನುಕರಣೆಯೆಂದು ಘೋಷಿಸಿದರು. ಈ ವಾಗ್ವಾದದಲ್ಲಿ ಇಸ್ಲಾಮಿ ಹಾಗೂ ಇಸ್ಲಾಮೇತರ ದೃಷ್ಟಿಕೋನದಿಂದ ತಸವ್ವುಫ್‌ನ ಭಿನ್ನತೆಯನ್ನು ಚುಟುಕಾಗಿ ವಿವರಿಸುವುದು ಅನಗತ್ಯ ಎನಿಸುವುದಿಲ್ಲವೆಂದು ಭಾವಿಸಿದ್ದೇನೆ. ಜತೆ ಜತೆಯಲ್ಲಿ ಈ ತಪ್ಪು ತಿಳುವಳಿಕೆಯ ಮೂಲಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

- ಶಾಬ್ದಿಕವಾಗಿ ಹಾಗೂ ತಾಂತ್ರಿಕವಾಗಿ ಇವು ಅದೆಷ್ಟು ಸಮೀಪದಲ್ಲಿವೆ ಎಂದರೆ ಮೇಲ್ನೋಟಕ್ಕೆ ಹಿಂದೂ ಹಾಗೂ ಇಸ್ಲಾಮಿ ತಸವ್ವುಫ್ ಒಂದೇ ಎಂಬಂತೆ ಕಾಣಿಸುತ್ತವೆ. ಆದರೆ ಅದರ ತಾಂತ್ರಿಕ ಅರ್ಥವನ್ನು ಆಳವಾಗಿ ಅಭ್ಯಸಿಸಿದಾಗ ಇವುಗಳಲ್ಲಿ ಭೂಮ್ಯಾಕಾಶದ ಅಂತರ ಕಂಡು ಬರುತ್ತದೆ. ಉದಾಹರಣೆಗೆ ಹಿಂದೂ ತತ್ವದರ್ಶನ ಅರ್ಥಾತ್ ವೇದಾಂತದಲ್ಲಿ 'ಸತ್ಯದ ಅಸ್ತಿತ್ವವು ಕೇವಲ ಬ್ರಹ್ಮ ಅಥವಾ ದೇವರು ಆಗಿದ್ದಾನೆ. ದೇವರ ಹೊರತಾಗಿ ಯಾರೂ ಅಸ್ತಿತ್ವದಲ್ಲಿಲ್ಲ' ಎಂಬುದರ ಅರ್ಥ ಏನಾಗುವುದು ಎಂದರೆ ವ್ಯಕ್ತರೂಪದಲ್ಲಿರುವ ಈ ಬ್ರಹ್ಮಾಂಡವು ಕೇವಲ ಮಾಯೆ ಅಥವಾ ಭ್ರಮೆಯಾಗಿದೆ. ಅದರ ಸತ್ಯತೆಯು ನಾಸ್ತಿಯಾಗಿದೆ. ಆದರೆ ಅಸ್ತಿತ್ವದಲ್ಲಿ ಇರುವಂತೆ ಭಾಸವಾಗುತ್ತದೆ.

ಆದರೆ ಇಸ್ಲಾಮಿ ತಸವ್ವುಫ್‌ನಲ್ಲಿ ಈ ಚಿಂತನಕ್ರಮವು ಯಥಾವತ್ ಆಗಿದ್ದರೂ, ಅದರ ಅರ್ಥವು ಏನಾಗಿದೆ ಎಂದರೆ ವ್ಯಕ್ತವಾಗುವವನು ಸತ್ಯಲೋಕದ ಪ್ರಕಟರೂಪ ಆಗಿದ್ದಾನೆ. ಇದನ್ನು ಪರಂಸತ್ಯದ ಹೊರತಾಗಿ ಭಾವಿಸುವುದು ಭ್ರಮೆ.

ವೇದಾಂತದಲ್ಲಿ 'ಅನ್ಯಸತ್ಯ'ವೇ ಬ್ರಹ್ಮಾಂಡ. ಆದರೆ ಇವೆಲ್ಲವು ಅಸ್ತಿತ್ವದ ಪ್ರಕಟರೂಪ. ಹಾಗೂ ಪ್ರತಿ ಹಂತವೂ ವಿಭಿನ್ನವಾಗಿದ್ದು, ಅವು ದೈವಾಜ್ಞೆಯ ಅಧೀನವಾಗಿದೆ.

'ಹರ್ ಮರ್ತಬಾ ವಜೂದೆ ಹುಕ್ಮೆ ದಾರದ್
ಗರ್ ಫರ್ಖ್ ಮರಾತಿಬ್ ನಕ್ನಿ ಜಿಂದೀಖಿ' (ಜಾಮಿ)

- ಈ ತಪ್ಪು ತಿಳುವಳಿಕೆಯ ಎರಡನೆಯ ಕಾರಣವೆಂದರೆ ಇಸ್ಲಾಮಿ ಧಾರ್ಮಿಕ ಪಂಡಿತರು ಹಾಗೂ ವಿದ್ವಾಂಸರು ತತ್ವದರ್ಶನದ ವಾಕ್ಸರಣಿಯಿಂದ ಅಲ್ಲಾಹುವಿನ ಅಸ್ತಿತ್ವದ ಪಾರಮಾರ್ಥಿಕ ಸತ್ಯ ತಲುಪುವ ನಿಷ್ಪ್ರಯೋಜಕ ಪ್ರಯತ್ನ ಮಾಡಿದ್ದರು. ಆದುದರಿಂದಲೇ ಪ್ರಾರಂಭಿಕ ಸೂಫಿ ಮಹನೀಯರು, ಇಸ್ಲಾಮಿ ಶ್ರದ್ಧೆಗಳ ವಿವರಣೆಯನ್ನು ಯಕಶ್ಚಿತ್ ಇದೇ ಶೈಲಿಯಲ್ಲಿ ಪ್ರಾರಂಭಿಸಿದ್ದರಿಂದ ಹಲವರಿಗೆ ತಸವುಫ್ ಕೇವಲ ಯುನಾನಿನ ತತ್ವದರ್ಶನದ ಮುಂದುವರಿಕೆ ಆಗಿದೆ ಎಂದು ದೋಷಾರೋಪಣೆ

ಮಾಡುವವರು ಭಾವಿಸಿದರು. ವಾಸ್ತವಿಕವಾಗಿ ಯುನಾನಿ ತತ್ವದರ್ಶನವು ಕ್ರಿಸ್ತಪೂರ್ವ ೬೦೦ ವರ್ಷಗಳ ಹಿಂದಿನದಾಗಿದ್ದು ಅಥವಾ ತದನಂತರ ಜೈನಾಫಿಜಿಯಾ ಹಾಗೂ ಅವನ ಪ್ರಶಂಸಕರಾದ ಪೈಥಾಗೋರಸ್ ಹಾಗೂ ಹರ್ಕ್ಯುಲಸ್ ಇವರೆಲ್ಲರ ತತ್ವಜ್ಞಾನವು ಕೇವಲ ಬೌದ್ಧಿಕವಾಗಿವೆ. ಆದರೆ ಇವರಲ್ಲಿ ಸತ್ಯದ ಪರಂಸತ್ಯತೆಯಲ್ಲಿ ಮಾನವನ ವಿವೇಚನೆಯುಕ್ತ ಶೋಧದ ಪ್ರಯತ್ನ ಕಂಡುಬರುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಇಸ್ಲಾಮಿ ತಸವ್ವುಫ್‌ನ ಮೂಲ ಸಿದ್ಧಾಂತದ ಸಂಗ್ರಹಕಾರರಾದ 'ಜ಼ೂಲ್‌ನೂನ್ ಮಿಶ್ರಿ'ಯಾಗಲಿ ಅಥವಾ ಶೇಖ ಜುನೈದ್ ಬಾಗ್ದಾದಿ ಅಥವಾ ಫರೀದುದ್ದೀನ್ ಅತ್ತಾರ್ ಆಗಲಿ, ಅಥವಾ ಇಬ್ನೆ ಅರಬಿ ಆಗಲಿ, ಇವರೆಲ್ಲರ ಶೋಧದ ಮೂಲವು ವಾಸ್ತವವಾಗಿ ಕುರಾನ್ ಮತ್ತು ಹದೀಸ್‌ಗಳಾಗಿದ್ದವು. ಇದರ ಸಿದ್ಧಾಂತಗಳು ಮನುಷ್ಯನ ಸ್ವತಂತ್ರವಿಚಾರಶಕ್ತಿಯ ಪರಾಕಾಷ್ಠೆಯ ಪ್ರಾಪ್ತಿ ಆಗಿರಲಿಲ್ಲ, ಬದಲಾಗಿ ಅದು ಪ್ರವಾದಿಗಳಿಗೆ ಅವತರಿಸಲ್ಪಟ್ಟ 'ವಹಿ'ಯ ಅಧ್ಯಾತ್ಮವಾಗಿತ್ತು. ಇದರಲ್ಲಿ ನಿಸ್ಸಂಶಯವಾಗಿ ಪ್ರಾರಂಭದಲ್ಲಿ ಇದು ಒಂದು ಕಲೆ ಅಥವಾ ಜ್ಞಾನದ ರೂಪವಾಗಿ ಸಂಗ್ರಹವಾಗಲಿಲ್ಲ. ಆದರೆ ಇವರ ಎಲ್ಲಾ ಶ್ರದ್ಧೆ ನಂಬಿಕೆಗಳು ಮೊದಲಿನಿಂದಲೂ ನೆಲೆಸಿದ್ದವು. ವಾಸ್ತವಾಗಿ ಇದೇ ಇಸ್ಲಾಮಿ ಶ್ರದ್ಧಾನಂಬಿಕೆಗಳಾಗಿವೆ. ಇಸ್ಲಾಮಿ ತಸ್ಸವುಫ್‌ವನ್ನು ಇಸ್ಲಾಮಿ ಶ್ರದ್ಧಾನಂಬಿಕೆಗಳಲ್ಲಿ ವೃದ್ಧಿ ಅಥವಾ ಮುಂದುವರೆದ ಭಾಗವೆಂದು ಭಾವಿಸುವುದು ಸರ್ವಥಾ ಸರಿಯಲ್ಲ. ಉದಾಹರಣಾರ್ಥವಾಗಿ ಪ್ರಾರಂಭಿಕ ಇಸ್ಲಾಮಿನಲ್ಲಿ ಅದರಲ್ಲೂ ಖಲೀಫಾರ ಅವಧಿಯಲ್ಲಿ ಹದೀಸ್, ನೀತಿ ಸಂಹಿತೆ, ತರ್ಕ-ವಿತರ್ಕಗಳು ಸಂಗ್ರಹ ರೂಪದಲ್ಲಿ ಇರಲಿಲ್ಲ. ಧರ್ಮಶಾಸ್ತ್ರ ಸಂಬಂಧಿತ ಸಮಸ್ಯೆಗಳ ಪರಿಹಾರ ಹಾಗೂ ಅವುಗಳ ವ್ಯವಸ್ಥಿತ ಸಂಗ್ರಹಣೆ ಬಹಳ ಕಾಲದ ನಂತರ ಆಯಿತು. ಹೀಗಾಗಿ ಪ್ರಾಚೀನವಾಗಿ ಈಗ ಇರುವ ರೂಪದಲ್ಲಿ ನೆಲಸದೇ ಇದ್ದ ಕಾರಣ ಇವುಗಳನ್ನು ಇಸ್ಲಾಮಿ ಶ್ರದ್ಧಾ ನಂಬಿಕೆಗಳೆಂದು ನಂಬದೇ ಇರಬಹುದೇ? ಬಾಹ್ಯ ವಿಚಾರ ಸ್ಥಿತಿಯು ವಾಸ್ತವವಾಗಿ ಹೀಗಿರುವಾಗ ಇಂದ್ರಿಯ ನಿಗ್ರಹ ಹಾಗೂ ಆಂತರ್ಯದ ಶುದ್ಧೀಕರಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅದು ಹೇಗೆ ಟೀಕೆ ಮಾಡಬಹುದಾಗಿದೆ? ಶರೀಯತ್‌ನ ತತ್ವಗಳ ಅನುಸರಣೆಯು ಪ್ರತಿಯೊಬ್ಬ ಪೌಢ ಪ್ರಾಜ್ಞ ಮುಸ್ಲಿಮನ ಆದ್ಯ ಕರ್ತವ್ಯವಾಗಿದೆ. ಇಸ್ಲಾಮಿ ತಸವ್ವುಫ್ ಅಥವಾ ತರೀಖತ್ ಕರ್ಮಾಚರಣೆಯ ಪ್ರಾಪ್ತಿಗಾಗಿ, ಪ್ರತಿಯೊಬ್ಬ ಮುಸ್ಲಿಮನನ್ನು ಮತ್ತೇ ಅಹ್ವಾನಿಸಬೇಕಾಗಿಲ್ಲ. ಯಾಕೆಂದರೆ ತರೀಖ಼ತ್ ಇಸ್ಲಾಮಿ ಆಚರಣೆಯ ಹೊರತಾದ ವಿಷಯ ಇಲ್ಲವೇ ಇಲ್ಲ. ಶರೀಯತ್ತಿನ ಗೂಢತೆಯು ವಿವಿಧ ಹಂತಗಳಲ್ಲಿ ತರೀಖ಼ತ್, ಹಖೀಖತ್ ಹಾಗೂ ಮ್ಹಾರಿಫತ್ ಎಂದು ಕರೆಯಲಾಗುತ್ತದೆ. ಪ್ರತ್ಯೇಕವಾಗಿ ಪ್ರತಿ ವ್ಯಕ್ತಿಗೆ ಅವರವರ ಅರ್ಹತೆ ಹಾಗೂ ಕರ್ಮಾನುಸರಣೆಯಂತೆ ಆಪೇಕ್ಷೆಯ ಆಧಾರದಲ್ಲಿ ಇವುಗಳ ಪ್ರಾಪ್ತಿ ಆಗುತ್ತದೆ.

'ಜ್ಞಾಲಿಕ್ ಫಜಲ್ ಅಲ್ಲಾಹ ಯೂತಿಹ ಮಿನ್‌ಯಶ್ಯಾ' ಹಾಗೂ ಅದರ ನೈಜ ಪ್ರಾಪ್ತಿಯ ಉತ್ಕಟ ಆಪೇಕ್ಷೆ ಆದಾಗ ಅಲ್ಲಾಹುವಿನ ವತಿಯಿಂದ ಅರ್ಹತೆಗೆ ಅನುಸಾರವಾಗಿ ಅವರ ಆಪೇಕ್ಷೆಯ ಫಲವು ದೊರೆಯುತ್ತದೆ. **'ವಾಲೇದೀನ್ ಹಾಹುದು ಯನ್ನಲ್‌ಹನ್ ಹುಂ ನಸ್ಲನಾ'** (ನಮ್ಮ ಆಪೇಕ್ಷೆಯಲ್ಲಿ ಸಾಧನೆ ಮಾಡುವ ಜನರಿಗೆ ನಾವು ಸ್ವಯಂಮಾರ್ಗದ ಮಾರ್ಗದರ್ಶನ ಮಾಡುತ್ತೇವೆ).

- ತಪ್ಪು ತಿಳುವಳಿಕೆಯ ಮೂರನೆಯ ಕಾರಣವೆಂದರೆ ದೈವೀ ಸಾಕ್ಷಾತ್ಕಾರದ ಸಿದ್ಧಾಂತವು ಆಚರಣೆಗೆ ಕುರಿತಾದದ್ದು. 'ಮಜರಿದ್ ಅಲಫ್ ಸಾನಿ' ಎಂದು ಖ್ಯಾತರಾಗಿದ್ದ ಹಜ್ರತ್ ಶೇಖ ಅಹ್ಮದ್ ಸರ್‌ಹಿಂದಿ ಅವರು ಮೊಘಲ್ ಆಳ್ವಿಕೆಯ ಮಧ್ಯಯುಗದಲ್ಲಿ ಅದ್ವೈತ ಸಿದ್ಧಾಂತವಾದಿಗಳ ವಿರುದ್ಧ ಅದರಲ್ಲೂ ವಿಶೇಷವಾಗಿ ಹಜ್ರತ್ ಮೊಹಿಯುದ್ದೀನ್ ಇಬ್ನೆ ಅರಬಿ ಅವರ ವಿರುದ್ಧ ಧರ್ಮಪ್ರಚಾರ ವಿರೋಧಿ ಅಭಿಯಾನ ಆರಂಭಿಸಿದರು. ಅವರ ಪ್ರಕಾರ ಅದ್ವೈತವಾದವು ವಾಸ್ತವಾಗಿ ಅಸ್ತಿತ್ವದಲ್ಲಿಲ್ಲ. ಆದರೆ ವಿವಾದವು ವಾಸ್ತವವಾಗಿ ಹಿಂದಿನ ಸೂಫಿಗಳ (ಔಲಿಯಾಗಳ) ಪರೋಕ್ಷ ಜ್ಞಾನದ ಪ್ರಮಾದವಾಗಿದೆ. ಈ ಪರೋಕ್ಷ ದೈವೀಜ್ಞಾನದ ವಂಚನೆಗೆ ಒಳಗಾದವರಲ್ಲಿ ಸ್ವಯಂ ಮುಜರಿದ್ ಅಲಿಫ್ ಸಾನಿ ಅವರ ಪೀರ್–ಮುರ್ಷದ್ (ಗುರು ಸಂತರು)ರಾದ ಹಜ್ರತ್ ಬಾಖಿ ಬಾ ಅಲ್ಲಾಹ್ ಸಾಹೇಬರು ಒಬ್ಬರಾಗಿದ್ದಾರೆ. ಹೀಗಾಗಿ ಹಜ್ರತ್‌ರ ಸಿದ್ಧಾಂತವು ಅಸ್ತಿತ್ವವಾದ ಆಗಿತ್ತು.

  ಅಸ್ತಿತ್ವವಾದ (ವಜೂದಿಯಾ) ಹಾಗೂ ದೈವೀಸಾಕ್ಷಾತ್ಕಾರ ಸಿದ್ಧಾಂತ (ಶಹೂದಿಯಾ)ಗಳ ಬಗ್ಗೆ ಬಹಳಷ್ಟು ಬರೆಯಲಾಗಿದೆ. ಆದುದರಿಂದ ಈ ಸಂಬಂಧವಾಗಿ ಸಂಕ್ಷಿಪ್ತತೆಯನ್ನು ಗಮನದಲ್ಲಿರಿಸಿಕೊಂಡು, ಕೇವಲ ಇದಿಷ್ಟನ್ನೇ ವ್ಯಕ್ತಪಡಿಸಲು ಇಚ್ಛಿಸುವುದು ಏನೆಂದರೆ, ದೈವೀಸಾಕ್ಷಾತ್ಕಾರ ಸಿದ್ಧಾಂತ (ಶಹೂದಿಯತ್) ಹಾಗೂ ವೇದಾಂತದ ಸಿದ್ಧಾಂತದಲ್ಲಿ ಹಲವು ಸಾಮ್ಯತೆಗಳು ಕಂಡುಬರುತ್ತವೆ. ಈ ಎರಡೂ ಸಿದ್ಧಾಂತಗಳಲ್ಲಿ ಬ್ರಹ್ಮಾಂಡವು 'ಪರಂಸತ್ಯ'ದಿಂದ ಅನ್ಯತ್ವದ ಸತ್ಯತೆಯನ್ನು ಹೊಂದಿದೆ ಹಾಗೂ ಸಮಸ್ತ ಬ್ರಹ್ಮಾಂಡದ ಅಸ್ತಿತ್ವದ ಮೂಲವು ಅಸ್ತಿತ್ವರಹಿತೆಯಿಂದ ಸ್ಥಿರವಾಗಿದೆ. ಅರ್ಥಾತ್ ಇವೆಲ್ಲವೂ ಪರಂಸತ್ಯದ ಹೊರತಾಗಿ ಕೇವಲ ಭ್ರಮೆಯಾಗಿದೆ.

- ನಾಲ್ಕನೆಯ ಕಾರಣವೇನೆಂದರೆ ತಸ್ಸವ್ವುಫ್‌ನ ಜ್ಞಾನವು ಎದೆಯಿಂದಲೆದೆಗೆ ಪ್ರಸಾರವಾದ ಕಾರಣ, ಮನುಷ್ಯರ ಬುದ್ಧಿಮತ್ತೆಗಳು ಕಾಲಕಾಲಕ್ಕೆ ಸಮಾನ ಆಗಿರುವುದಿಲ್ಲ. 'ಕಲಮುನ್ನಾಸ್ ಅಲಾ ಖೈರ್ ಅಖೂಲ್‌ಹುಮ್" ಎಂಬಂತೆ ಈ ಜ್ಞಾನವು ಪ್ರತಿಮಾ ರೂಪದಲ್ಲಿದ್ದು, ಕೆಲವು ಸೂಫಿಗಳ ಸಂತತಿಯಲ್ಲಿ ಅರ್ಹರು ಇರದ ಕಾರಣ, ಈ ಜ್ಞಾನವು ತನ್ನ ಮುಂದುವರಿಕೆಯನ್ನು ಕಳೆದುಕೊಂಡಿತ್ತು.

ಹೀಗಾಗಿ ಸಂತತ್ವ ಹಾಗೂ ಮಾರ್ಗದರ್ಶನವು ನೈಜತೆ ಹಾಗೂ ವಾಸ್ತವಿಕತೆಗಿಂತ ಅಧಿಕವಾಗಿ ಔಪಚಾರಿಕ ಹಾಗೂ ಆರ್ಥಿಕವಾಗಿ ಮಹತ್ವ ಪಡೆಯಿತು. ಇದರ ಪರಿಣಾಮವಾಗಿ ಪರೋಕ್ಷಜ್ಞಾನ ಹಾಗೂ ಪವಾಡಗಳ ಭ್ರಮೆಯಲ್ಲಿ ಅನುಯಾಯಿಗಳನ್ನು ಮುಳುಗಿಸಿ ಅನರ್ಹ ಉತ್ತರಾಧಿಕಾರಿಗಳು ಅಂತರಂಗ ಜ್ಞಾನದಿಂದ ತಮ್ಮನ್ನು ಅರಿಯದಂತೆ ಮಾಡಿದರು. ಇದನ್ನು ಸಂಪೂರ್ಣವಾಗಿ ಇಲ್ಲವಾಗಿಸಿಯೂ ಅಥವಾ ಅದರ ಮೂಲ ಸ್ವರೂಪವನ್ನು ವಿರೂಪಗೊಳಿಸಿ ಮನಸ್ಸಿಗೆ ಬಂದಂತೆ ಬೋಧನೆ ಮಾಡಲು ಪ್ರಾರಂಭಿಸಿದರು. ಇದರಿಂದಾಗಿ ಅಧ್ಯಾತ್ಮಿಕ ಔನ್ನತ್ಯತೆಗಳು ಸಂಕುಚಿತಗೊಂಡು ವಿಷಯಾಸಕ್ತಿಯು ಪ್ರಾಮುಖ್ಯತೆ ಪಡೆಯಿತು.

'ತಸ್ಸವ್ವುಫ್'ನ ಕುರಿತಾಗಿ ಧಾರ್ಮಿಕ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳು:

'ತಸ್ಸವ್ವುಫ್'ನ ಕುರಿತು ಮುಸ್ಲಿಮ್ ಧಾರ್ಮಿಕ ಪಂಡಿತರು ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದ್ದಾರೆ ಹಾಗೂ ಇಸ್ಲಾಮಿನ ವಿವಿಧ ಪಂಥಗಳಲ್ಲಿ ಕೆಲವೊಂದು ನಂಬಿಕೆಗಳಲ್ಲಿ ಭಿನ್ನತೆ ಇರುವುದರಿಂದ, ತಸವ್ವುಫ್ ಕುರಿತಾಗಿಯೂ ಹಲವು ಭಿನ್ನಾಭಿಪ್ರಾಯಗಳು ಜನ್ಮತಾಳಿದವು. ಇವುಗಳ ಸಾಮೂಹಿಕ ಕಾರಣಗಳನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಸಮಸ್ತ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಈ ಒಂದು ಆಲೋಚನಾ ಕೇಂದ್ರಬಿಂದುವಿನ ಅಡಿಯಲ್ಲಿ ಏಕಾಭಿಪ್ರಾಯ ಹೊಂದಲಾಗಿದೆ. ಅದೇನೆಂದರೆ ಸಮಸ್ತ ಬ್ರಹ್ಮಾಂಡ ಹಾಗೂ ಸೃಷ್ಟಿಯ ಕರ್ತನು ಏಕನಾಗಿದ್ದು, ಅವನು ಅಸ್ತಿತ್ವದ ಮೂಲ ಆಗಿದ್ದಾನೆ. ಹಾಗೆಯೇ ತನ್ನ ಅಸ್ತಿತ್ವಕ್ಕಾಗಿ ಅವನು ಯಾರ ಅವಲಂಬಿತನೂ ಆಗಿರುವುದಿಲ್ಲ, ಬದಲಾಗಿ ಅವನು, ಸ್ಥಿರನೂ, ಶಾಶ್ವತನೂ, ಚಿರಂತನೂ ಆಗಿ ಅಸ್ತಿತ್ವದಲ್ಲಿದ್ದಾನೆ. ಭಿನ್ನಾಭಿಪ್ರಾಯಗಳ ಆರಂಭವು ಈ ವಿಷಯದ ಕುರಿತು ಆಗಬೇಕಾಗಿದೆ. ಅದೇನೆಂದರೆ.

೧. ಸೃಷ್ಟಿ ಹಾಗೂ ಸೃಷ್ಟಿಕರ್ತನ ಮಧ್ಯದ ಸಂಬಂಧದ ಸ್ವರೂಪವೇನು?

೨. ಸೃಷ್ಟಿ ಹಾಗೂ ಜೀವಿಗಳು ಸ್ವಯಂ ಅಸ್ತಿತ್ವದಂತಿವೆಯೋ ಅಥವಾ ಅಸ್ತಿತ್ವದಿಂದ ಹೊರತಾಗಿವೆಯೋ?

೩. ಪರಂಸತ್ಯದ ಸಾಂಗತ್ಯದ ಹಾಗೂ ಆವರಣವು ವೈಯಕ್ತಿಕವಾಗಿದೆಯೇ ಅಥವಾ ಜ್ಞಾನಮಾರ್ಗವಾಗಿದೆಯೇ?

ಈ ವಿಭಿನ್ನ ಶ್ರದ್ಧೆಗಳು ಹಾಗೂ ಚಿಂತನಾಕ್ರಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ಲೇಷಿಸಿದಾಗ, ಗೊತ್ತಾಗುವುದು ಏನೆಂದರೆ ಅಹ್ಲೆ ಸುನ್ನತ್‌ನ ಧಾರ್ಮಿಕ ಪಂಡಿತರಲ್ಲಿ ಅಲ್ಲಾಹುವಿನ ಅಸ್ತಿತ್ವದ ಕುರಿತಾದ ವಿಚಾರದಲ್ಲಿ ಎರಡು ಗುಂಪುಗಳಾಗಿ

ವಿಭಜನೆಗೊಂಡಿವೆ. ಒಂದು ಗುಂಪು ಅದ್ವೈತದ (ವಹದತುಲ್ ವುಜೂದ್) ಪರವಾಗಿದ್ದರೆ ಇನ್ನೊಂದು ಅಸ್ತಿತ್ವವಾದದ (ವಹದತುಲ್ ಶುಹೂದ್) ಪರವಾಗಿದೆ.

ಅನ್ಯ ಶಬ್ದಗಳಲ್ಲಿ ಅದ್ವೈತವಾದಿ (ಅಹ್ಲೆ ವಹದತುಲ್ ವುಜೂದ್) ಸೂಫಿಗಳು ಬ್ರಹ್ಮಾಂಡವನ್ನು 'ಪರಂಸತ್ಯ'ದ ಪ್ರಕಟರೂಪವೆಂದು ಭಾವಿಸುತ್ತಾರೆ ಹಾಗೂ ಸಮಸ್ತ ಇತರವನ್ನು ಏಕ ಅಸ್ತಿತ್ವದವೆಂದು ಭಾವಿಸುತ್ತಾರೆ. ವ್ಯಕ್ತರೂಪದಲ್ಲಿರುವ ಸಮಸ್ತವು ಅದು ಬಾಹ್ಯರೂಪದಲ್ಲಿರಲಿ, ಅಥವಾ ಹೊರತಾಗಿರಲಿ, ಅಥವಾ ಆಂತರ್ಯವಾಗಿರಲಿ, ಪ್ರತಿ ಕಾಲ-ದೇಶದಲ್ಲಿ ಅವುಗಳ ಸತ್ಯತೆಯೇ ಅಲ್ಲಾಹು ಆಗಿದ್ದಾನೆ.

'ಹುಲಾಅವ್ವಲ್ ವಲಾ ಅಖೈರ್ ವ ಅಲ್ ಜಾಹಿರ್‌ಹು ವ ಅಲ್‌ಬಾತಿನ್' (ಅಲ್-ಆಯತ್)

ಜ್ಞಾನಿಗಳ ವಿಚಾರದಲ್ಲಿ ಈ ದೈವೋಕ್ತಿಯಲ್ಲಿ 'ಹು'ನ ಶಬ್ದವು ಆದಿಯಲ್ಲಿ ಬರುವುದು, ಅದು ಆವರಣತ್ವದ ಸಾಕ್ಷ್ಯವಾಗಿದ್ದು, ಈ ದೈವೋಕ್ತಿಯ ಅರ್ಥವು ಈ ರೀತಿಯಾಗುತ್ತದೆ. ಅದೇನೆಂದರೆ ಅಲ್ಲಾಹುವೇ ಆದಿಯೂ ಹಾಗೂ ಅಂತ್ಯ ಮತ್ತು ಅಲ್ಲಾಹುವೇ ಬಾಹ್ಯವೂ ಹಾಗೂ ಅಂತರಂಗವೂ ಆಗಿದ್ದಾನೆ. ಆದಿ ಹಾಗೂ ಅಂತ್ಯ, ಬಾಹ್ಯ ಹಾಗೂ ಆಂತರ್ಯ ಸಮಸ್ತವೂ ಅವನೇ ಇರುವಾಗ ಭ್ರಮೆಯ ಪ್ರಶ್ನೆ ಎಲ್ಲಿ?

'ಗೈರ್ ತಶ್, ಗೈರ್ ದಲ್ ಜಹಾಂ ನಿಗ್ ಜ಼ಾಶ್ತ್
ಲಾ ಜುರ್ಮ ಆಯಿನ್ ಜುಮ್ಲಾ ಆಶಿಯಾ ಶುದ್' (ಜಾಮಿ)

ತರೀಖ಼ತ್ ವಾದಿಗಳ ನಂಬಿಗೆಯ ಪ್ರಕಾರ ವಹದುತುಲ್ ವಜೂದ್ (ಅದ್ವೈತವಾದ) ಸಿದ್ಧಾಂತವು ಒಬ್ಬರಿಂದೊಬ್ಬರಿಗೆ ನಿರಂತರವಾಗಿ ಇಸ್ಲಾಮಿನ ಪ್ರವಾದಿಯವಂಶದ ಅಂತರಂಗವಾದಿಗಳವರೆಗೆ ತಲುಪಿತು. ಆದರೆ ಇವರ ತಿಳುವಳಿಕೆ ಹಾಗೂ ಬೋಧನೆ, ಸತ್ಯಾಕಾಂಕ್ಷಿಗಳಿಗೆ ಅವರವರ ಬುದ್ಧಿಶಕ್ತಿ ಹಾಗೂ ಯೋಗ್ಯತೆಗಳ ಅನುಸಾರವಾಗಿ ಪ್ರಾಪ್ತಿಯಾಯಿತು. ಮೌಲಾನಾ ಜಾಮಿ ಅವರು 'ನಿಫ್‌ಹಾತ್-ಉಲ್-ಉನ್ಸ್' ನಲ್ಲಿ ಬರೆದಿರುವುದು ಏನೆಂದರೆ ಎಲ್ಲರಿಗಿಂತಲೂ ಪ್ರಥಮವಾಗಿ ಹಜ್ರತ್ ಜೂಲ್‌ನೂನ್ ಮಿಶ್ರಿ ಅವರು ಹಜ್ರತ್ ಮಾಲಿಕ್ ಇಬ್ನೆ ಉನ್ಸ್ ಅವರ ಪ್ರಮುಖ ಶಿಷ್ಯರಲ್ಲಿ ಒಬ್ಬರಾಗಿದ್ದರು. ಇವರ ಸಿದ್ಧಾಂತ ಸಂದೇಶಗಳನ್ನು ಪ್ರಬಂಧಗಳ ಬರೆದಿಟ್ಟರು. ಇವರ ನಂತರ ಸಯ್ಯದುಲ್ ತಾಯಿೇಫಾ ಹಜ್ರತ್ ಜುನೈದ್ ಬಾಗ್ದಾದಿ (ರ.ಅ) ಅವರು ತಸವ್ವುಫ್‌ಅನ್ನು ವಿದ್ಯೆಯ ರೂಪದಲ್ಲಿ ಕ್ರಮಬದ್ಧಗೊಳಿಸಿದರು. ಹಜ್ರತ್ ಅಬೂಬಕರ್ ಶಿಬ್ಲಿ ಅವರು ಈ ರಹಸ್ಯಗಳನ್ನೇ ಪ್ರವಚನಗಳಾಗಿ ಮಾರ್ಪಡಿಸಿದರು. ಇದಕ್ಕಾಗಿ ಹಜ್ರತ್ ಜುನೈದ್ ಅವರು ಅವರನ್ನು ತಡೆಯಬೇಕಾಯಿತು. ಈ ಘಟನೆಯನ್ನು ಶೇಖ್ ಫರೀದುದ್ದಿನ್ ಅತ್ತಾರ್ ಅವರು ತಮ್ಮ ಮಸ್ನವಿಯಲ್ಲಿ ಸವಿಸ್ತಾರವಾಗಿ ಉಲ್ಲೇಖಿಸಿದ್ದಾರೆ.

ಹಜ್ರತ್ ಅಬೂಬಕರ್ ಶಿಬ್ಲಿ (ರ.ಅ) ಅವರು ಹಜ್ರತ್ ಜುನೈದಿ ಬಾಗ್ದಾದಿಯ ಖಲೀಫಾರಾಗಿದ್ದರು. ಇವರ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಅವರ ಈ ಉಕ್ತಿಯನ್ನು ಇಲ್ಲಿ ಉಲ್ಲೇಖಿಸುವುದು ಅವಶ್ಯಕ ಎಂದು ಕಂಡು ಬರುತ್ತದೆ. ಅದರಲ್ಲಿ ಅವರು ತಸವ್ವುಫ್‌ನ ವಿವರಣೆ ಈ ರೀತಿಯಾಗಿ ತಿಳಿಸಿರುತ್ತಾರೆ.

'ಅಲ್ ತಸವ್ವುಫ್ ಶಿರ್ಕ್‌ಲಿ ಅನ್ನಹೂ ಜಿಯಾನತಲ್
ಖಲ್ಬಿ ಅನ್ ರೂಯತ್‌ಲ್‌ವಲಾ ಗೈರ್

ಅರ್ಥಾತ್ 'ತಸ್ಸವ್ವುಫ್ ವಿವರಿಸುವುದು ಶಿರ್ಕ ಆಗಿದೆ. ಯಾಕೆಂದರೆ ಇದರಲ್ಲಿ ಹೃದಯವನ್ನು ಅನ್ಯನ ದಿವ್ಯದರ್ಶನದಿಂದ ಸುರಕ್ಷಿತವಾಗಿಡಬೇಕಾಗಿದೆ. ಹಾಗೂ ಪರಂಸತ್ಯದ ಅಸ್ತಿತ್ವವು ಇಲ್ಲವೇ ಇಲ್ಲ'

ಈ ಉಕ್ತಿಯಿಂದಲೂ ಅಸ್ತಿತ್ವವಾದ ಏಕತ್ವಕ್ಕೆ ಪ್ರಮಾಣ ದೊರೆಯುತ್ತದೆ. ಇದರ ಹೊರತಾಗಿಯೂ ಅದ್ವೈತವಾದದ (ವಹದುತುಲ್ ವುಜೂದ್‌ನ) ಸಮರ್ಥನೆಯಲ್ಲಿ ಹಲವು ದೈವೋಕ್ತಿಗಳು ಲಭ್ಯವಿವೆ. ಇವುಗಳ ಬಗ್ಗೆ ಅತ್ಯಲ್ಪ ನೈಜ ವಿಚಾರ ಮಾಡುವುದರಿಂದ ಈ ಸಿದ್ಧಾಂತವು ಸೂರ್ಯ ಪ್ರಕಾಶದಂತೆ ಸ್ಪಷ್ಟವಾಗಿ ಗೋಚರಿಸುತ್ತದೆ.

'ಹುವಾ ಅಲ್ಲೈನ್ ಝಃ ಖಲ್‌ಖ ಅಲ್ ಸಮಾವಾತಿ ವ ಅಲ್ ಅರ್ಜ್ವ ಬಿಲ್ ಹಖ್'

ಅರ್ಥಾತ್ ಭೂಮ್ಯಾಕಾಶಗಳ ಸೃಷ್ಟಿಯು 'ಪರಂಸತ್ಯ'ದಿಂದಾಗಿದೆ. ಸಮಸ್ತ ಬ್ರಹ್ಮಾಂಡದ ವ್ಯಕ್ತವು 'ಪರಂಸತ್ಯ' ಪ್ರಕಟಣೆಯಿಂದ ಆದಾಗ ಮಿಥ್ಯೆಯ ಅಸ್ತಿತ್ವ ಎಲ್ಲಿದೆ? ಮಿಥ್ಯೆಯು ಸದ್ಯದ ಮಟ್ಟಿಗೆ ಬೇರ್ಪಡದೆ, ಅದು ಬುದ್ಧಿಯ ಮೂಲಕ ವ್ಯಕ್ತವಾಯಿತು. ಹೀಗಾಗಿ ದೈವಾಜ್ಞೆ ಏನಾಯಿತೆಂದರೆ,

ವಿ ಯತ್ತಫಕರೂನ್ ಫಿಯೀ ಖಲ್‌ಖಿಲ್ ಸಮಾವಾತಿ
ವ ಅಲ್ ಅರ್ಜ್ವಿ ರಬ್ಬನಾ ಮಾ ಖಲ್ ಖತಾ ಹಾಜಾ ಬಾತಿಲನ್'

ಭೂಮ್ಯಾಕಾಶಗಳ ಸೃಷ್ಟಿಯ ಕುರಿತು ಚಿಂತನೆಯಲ್ಲಿರುವ ಜನರೇ, ನಮ್ಮ ದೇವರ ಸೃಷ್ಟಿಯು ಮಿಥ್ಯವಾಗಿಲ್ಲ. ಚಿಂತನೆಯ ಜತೆಗೆ ದೈವೀ ಸ್ಮರಣೆಯು ಅನಿವಾರ್ಯ ಷರತ್ತಾಗಿದ್ದು, ಫಲಸ್ವರೂಪ ಯಾವುದೇ ಸೃಷ್ಟಿಯು ಅವನ ಸ್ಮರಣೆಯಿಂದ ಬರಿದಾಗಿರಬಾರದು. ಇಸ್ಲಾಮಿ ಹಾಗೂ ಇಸ್ಲಾಮೇತರ ತಸವ್ವುಫ್‌ನಲ್ಲಿ ಇದೊಂದು ಪ್ರಮುಖ ಭಿನ್ನತೆಯಾಗಿದೆ. **'ಕಮಾ ಖಾಲಲ್ಲಾಹ ತಾಲಾ ವ ಅಜ಼ಿಕ್ರು ರಬ್ಬಿಕಾ ಇಜ಼ಾ ನಸಿಯತಾ'**

'ನಿನ್ನ ದೇವರನ್ನು ನೆನೆ, ನೀನು ಮರೆತಾಗೊಮ್ಮೆ'

ಹೀಗಾಗಿ ತಸವ್ವುಫ್‌ನ ಪ್ರಾಪ್ತಿಯಲ್ಲಿ ಈ ಚಿಂತನೆ ಹಾಗೂ ಸ್ಮರಣೆ (ಜಿಕ್ರ ವೊ ಫಿಕ್ರ್) ಸತ್ಯಾನ್ವೇಷಿಗೆ ಕಡ್ಡಾಯವಾಗಿದೆ. ಹೀಗಾಗಿ 'ಅವನ' ಸ್ಮರಣೆಯಲ್ಲಿ ತಲ್ಲೀನನಾಗಿ ಚಿಂತನೆಯ ಸಾಗರದಲ್ಲಿ ಮುಳುಗಿರಬೇಕು. ಅದೆಷ್ಟು ಮುಳುಗಿರಬೇಕಂದರೆ ದೇವನ ಸ್ಮರಣೆಯ ಹೊರತು ಅವನು ತನ್ನ ಅಸ್ತಿತ್ವವನ್ನು ಕಾಣದಂತಿರಬೇಕು. ಆಗ ಪರಂಸತ್ಯದ ಸಾಮಿಪ್ಯವು, ಯಾವುದು ಮ್ವಾರಿಫತ್ (ದೈವೀ ಸಾಕ್ಷಾತ್ಕಾರದ) ಗುರಿಯಾಗಿದೆಯೋ ಅವು ಅವಶ್ಯವಾಗಿ ಪ್ರಾಪ್ತಿಯಾಗುವುದು. ಇದೇ ನೈಜ ಹಾಗೂ ಪವಿತ್ರ ಕರ್ಮವಾಗಿದೆ. ಹಾಗೂ ಈ ಮಾರ್ಗದ ಮೂಲಕವೇ ದೈವೀ ಸಾಕ್ಷಾತ್ಕಾರದ ಶುಭ ಸಂದೇಶದ ಭರವಸೆ ಆಗುತ್ತದೆ.

'ಫಮನ್ ಕಾನ ಯರ್‍ಜ ಜುವಲ್‌ಖಿಹಾ ರಬ್ಬಿಯಾ ಫಾಲ್ ಅಮಲ್ ಅಮಲನ್ ಸಾಲೇಹೀನ್ ವ ಅಲ್ ಯಶ್ರಿಕಾ ಬ ಇಬಾದತಿ ರಬ್ಬಹ ಅಹದನ್'

ಫಲಸ್ವರೂಪವಾಗಿ ಆಚರಣೆಯ ಈ ಹಂತಗಳು ಹಾಗೂ ದೈವೀ ಸ್ಮರಣೆಯ ಈ ಹವ್ಯಾಸಗಳ ಕುರಿತಾಗಿಯೇ ಹಜ್ರತ್ ಖ್ವಾಜಾ ಮಹಮೂದ್ ಬಹರಿ (ರ.ಅ) ಅವರು 'ಉರೂಸೆ-ಇರ್ಫಾನ್'ನ ವಿವಿಧ ಅಧ್ಯಾಯಗಳಲ್ಲಿ ಸವಿವರ-ಸವಿಸ್ತಾರವಾಗಿ ಉಲ್ಲೇಖಿಸಿರುತ್ತಾರೆ. ನಿಸ್ಸಂದೇಹವಾಗಿ ಆಸಕ್ತ ಮಹನೀಯರು ಇದರ ಅಧ್ಯಯನದಿಂದ ಅತ್ಯಧಿಕ ಪ್ರಯೋಜನ ಹಾಗೂ ಆಧ್ಯಾತ್ಮಿಕ ನೆಮ್ಮದಿಯನ್ನು ಪಡೆಯುವರೆಂಬ ವಿಶ್ವಾಸವಿದೆ.

'ವಮಾ ತಾಫೀಖಿ ಇಲ್ಲಾ ಬಿಲ್ಲಾ ಹಿಲ್ ಅಲಿಯಿಲ್ ಅಜೀಮ್'

ಅಂತ್ಯದಲ್ಲಿ ಭಾಷಾಂತರದ ಈ ಬರವಣಿಗೆಯ ಪರಿಷ್ಕರಣೆ ಹಾಗೂ ಪ್ರಕಟಣೆಯ ಕಾರ್ಯದಲ್ಲಿ ಅಭಿರುಚಿ ತೋರಿದ ಸಮಸ್ತ ಮಹನೀಯರಿಗೆ ನನ್ನ ಅನಂತ ಧನ್ಯವಾದಗಳು. ಈ ಕಾರ್ಯದಲ್ಲಿ ನನ್ನ ಕೈ ಜೋಡಿಸಿ ನೆರವಾದ ಸಹೋದರ ಹಸನ್ ಇರ್ಫಾನಿ ಸಾಹೇಬ್ ಖಾದರಿ ಹಾಗೂ ಮೌಲ್ವಿ ಯಾಖೂಬ್‌ಖಾನ್ ಸಾಹೇಬ್ ಖಾದರಿ, ಮಾಲಕರು ಮುಜ್ತಬಾ ಪ್ರೆಸ್, ಛತ್ರಾ ಬಾಜಾರ್ ಹಾಗೂ ಮೌಲ್ವಿ ಸಯ್ಯದ್ ಅಮೀನ್ ಬಾದಶಾಹ್ ಸಾಹೇಬ್ ಖಾದ್ರಿ ಖದೀರಿ ಹಾಗೂ ಸಯ್ಯದ್ ನಿಜಾಮುದ್ದೀನ್ ಸಾಹೇಬ್ ಖಾದರಿ ಖದೀರಿ ಅವರು ಪ್ರಮುಖರಾಗಿದ್ದಾರೆ. ಇವರಿಗೆ ನನ್ನ ಧನ್ಯವಾದಗಳು.

ಇತಿ

ಮುಯಿಜ್ ಖಾದರಿ ಅಲ್ ಮುಲ್ತಾನಿ
ಅಸ್ತಾನಾ ಖಾದರಿಯ ಆಲಿಯಾ ಮುಲ್ತಾನಿಯಾದ ಮುಖ್ಯಸ್ಥರು

■

*

ಮುನ್ನುಡಿ

ಮೂಲಗ್ರಂಥದ ಲೇಖಕ ಹಜ್ರತ್ ಮಹಮೂದ್ ಬಹರಿ ಅವರಿಂದ

ಓ, ದೇವರೆ! ಈ ದಿವ್ಯಜ್ಞಾನ ಉದ್ಯಾನವನ್ನು ಶಿಶಿರ*ದಿಂದ ದೂರವಿಡು
ದಿವ್ಯಜ್ಞಾನಿಗಳ ಚಿಲಿಪಿಲಿಯಿಂದ ಹಗಲುರಾತ್ರಿ ನಾದಮಯಗೊಳಿಸು.

ಲಾ ಇಲಾಹ ಇಲ್ಲಲ್ಲಾಹ, ಮಹಮೂದುರ್-ರಸೂಲ್‌ಲಿಲ್ಲಾಹ

ಬಗಲಿನಲ್ಲಿ 'ಉರೂಸೆ-ಇರ್ಫಾನ್' ಇಟ್ಟುಕೊಂಡುವ,
ಶರಧಿಯಾಳದಲಿ ನೋಡುವ ಜ್ಞಾನ ಸಾಗರವ.

'ಉರೂಸೆ-ಇರ್ಫಾನ್' ಎಂಬ ನಾಮವನ್ನು ಹೊಂದಿರುವ ಈ ಸುಂದರ ಅರ್ಥಗರ್ಭಿತ ಹೊತ್ತಿಗೆಯ, ಲೇಖಕನು ಖ್ವಾಜಿ ಮಹಮೂದ್ ಬಹರಿ ತಂದೆ ಖ್ವಾಜಿ ದರಿಯಾ ಎಂದು ಖ್ಯಾತರಾದ ಖ್ವಾಜಿ ಬಹರುದ್ದೀನ್‌ರವರ ಅಶಾಂತ ಹುಚ್ಚು ಸರದಾರನಾಗಿದ್ದು, ಗೋಗಿಯ ನಿವಾಸಿಯಾಗಿದ್ದಾನೆ. ಈ ಗ್ರಾಮವು ನುಸ್ರತಾಬಾದ್ ಕೋಟೆಯ ವ್ಯಾಪ್ತಿಯಲ್ಲಿದ್ದು. ಅದು 'ಸಗರ' ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿದೆ. ಹಾಗೂ ಬಿಜಾಪುರ ಸಂಸ್ಥಾನದ ಅಧೀನದಲ್ಲಿದೆ. ಈ ಹೊತ್ತಿಗೆಯ ಧಾರ್ಮಿಕನು, ದಯಾಪರನು, ಯೋಧರ ಯೋಧನು, ಔರಂಗಜೇಬ್ ಘಾಜಿಯ ಆಳ್ವಿಕೆಯ ಅವಧಿಯಲ್ಲಿ, ದೈವೀ ರಹಸ್ಯದ ತೆರೆಯ ಮರೆಯಿಂದ ಸಾಕ್ಷಾತ್ಕಾರವಾಗಿ ಪ್ರಕಟವಾಯಿತು. ಯಾವ ವ್ಯಕ್ತಿಯು ಬುಲ್‌ಬುಲ್‌ನ ಹಾಡು ಹಾಗೂ ತಂಪಾದ ಮಂದಮಾರುತದಂತೆ ದೈವೀ ರಹಸ್ಯದ ಉತ್ಕೃಷ್ಟತೆಯ ಉದ್ಯಾನವನದಲ್ಲಿ ನಿರ್ಮಲ ಮನಸ್ಸಿನಿಂದ ಪ್ರಫುಲ್ಲಿತನಾಗಿ ವಿಹರಿಸುವನೋ, ನಿಸ್ಸಂಶಯವಾಗಿ ಆ ವ್ಯಕ್ತಿಯು ಚೇತೋಹಾರಿ ಲಲಿತತೆಯ ವಿಶೇಷತೆಯಿಂದ ಪ್ರಸನ್ನ ಹೃದಯಿ ಆಗುವನು. ಮಹಾಮಹಿಮನಾದ ಅಲ್ಲಾಹುವಿನ ಕೃಪೆಯಿಂದ ಹಾಗೂ ಇಹಪರಗಳಲ್ಲಿ ಅನುಪಮರಾದ ಮಹ್ಮದ್ ರಸೂಲ್‌ಲಿಲ್ಲಾಹ

ಸಲ್ಲಾಲ್ಲಾಹು ಅಲೈಹು ಸಲ್ಲಂ ಅವರ ಪುಣ್ಯದ ಪ್ರತಿಫಲವಾಗಿ ಬುದ್ಧಿ-ವಿವೇಕದ ಹೆಬ್ಬಾಗಿಲು ಯಾವುದೇ ಶಿಫಾರಿಸಿಲ್ಲದೆ ಸ್ವಯಂ ಆಗಿ ತೆರೆದುಕೊಳ್ಳುವುದು ಹಾಗೂ ಬುದ್ಧಿ-ವಿವೇಕದ ಸಾಗರದ ಮುತ್ತು ಯಾವುದೇ ವ್ಯವಧಾನವಿಲ್ಲದೆ ಅವನ ಕೈಸೇರುವುದು. (ಹಿ.ಶ.೧೧೧೨).

ಇದು ಬಾಯಾರಿದವನಿಗೆ ತಣ್ಣೀರಿನ ಚಿಲುಮೆ,
ಹಾಗೆಯೇ ಹಸಿದವನಿಗೆ 'ರುಚಿಕರ ಭೋಜನದ ಹಾಸು'[೧].

ಇದು ಕೊಳ್ಳುವನಿಗೆ ಆಗಿಹುದು ಮುತ್ತು-ರತ್ನದ ಖನಿ,
ಹೇ, ದೇವಜ್ಞಾನದ ಹೃದಯಿಯೇ, ಇದು 'ಉರೂಸೆ-ಇರ್ಫಾನ್'.

ಈ ಅಪೂರ್ವ ಕೃತಿಯ ಆರಂಭವನ್ನು,
'ತೌಹೀದ್ ಬಾರಿ'ಯಿಂದ ಮಾಡುವೆನು.

"ಅಲ್ಲಾಹುಮ್ಮಾ ರಫ್‌ಖನಿ ಬಮಾ ತಜಬ್ ವೋ, ತರ್ಜೆಯಾ"

(ಹೇ ಅಲ್ಲಾಹುವೇ, ಈ ಕಾರ್ಯದಲ್ಲಿ ಯಶಸ್ಸು ದಯಪಾಲಿಸು, ನನ್ನ ಕಾರ್ಯವ ಮೆಚ್ಚಿ ಸಮ್ಮತಿಸು.)

■

---

* ಶಿಶಿರ : ಎಲೆ ಉದುರುವ ಕಾಲ

೧. ಭೋಜನದ ಹಾಸು – ಮುಸ್ಲಿಂರಲ್ಲಿ ಔತಣದಲ್ಲಿ ಒಂದು ಹಾಸನ್ನು ಹಾಸಿ ಅದರ ಮೇಲ ಖಾದ್ಯಗಳನ್ನು ಇಡುತ್ತಾರೆ. ಅದಕ್ಕೆ 'ದಸ್ತರ್‌ಖಾನ್' ಎನ್ನುತ್ತಾರೆ.

* ತೌಹೀದ್ ಬಾರಿ= ಏಕದೇವ ಉಪಾಸನೆಯ ಸ್ಮರಣೆ

*

ಮಸ್ನವಿ ದರ್ ತೌಹೀದೆ ಬಾರಿ

(ಏಕದೇವ ಉಪಾಸನೆ ಕುರಿತಾದ ದ್ವಿಪದಿಗಳು)

ಬಿಸ್ಮಿಲ್ಲಾ ಇರ್ರಹಮಾನ್ ನಿರ್ರಹೀಮ್

(ಪರಮ ದಯಾಳವೂ, ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ)

"ರಬ್ಬಿ ಯಸ್ಸಿರ್ ವಂತಮಿಮ್ ಬಿಲ್ ಖೈರ್ ವ ಬಿಹಿ ನಸ್ತ್ರಯೀನ್"

(ಓ ನನ್ನ ದೇವನೇ, ಇದನ್ನು ಸರಳ ಹಾಗೂ ಉತ್ತಮವಾಗಿ
ಪರಿಪೂರ್ಣಗೊಳಿಸಲು ನನಗೆ ನೆರವನ್ನು ದಯಪಾಲಿಸು).

ಶ್ರೇಷ್ಠನಿರಲಿ, ಅಲ್ಪನಿರಲಿ – ಬದುಕಿಹರು ನಿನ್ನಿಂದಲೇ,
ಧಾರ್ಮಿಕರು, ಲೌಕಿಕರು– ಬದುಕಿಹರು ನಿನ್ನಿಂದಲೇ,

ಶತ್ರುವಿರಲಿ, ಮಿತ್ರನಿರಲಿ– ಅವರ ಅಸ್ತಿತ್ವವು ನಿನ್ನಿಂದಲೇ,
ನಾಸ್ತಿಕನಿರಲಿ, ಧಾರ್ಮಿಕನಿರಲಿ – ಅವರ ಗುರಿಯು ನೀನೇ,

ಸಮಸ್ತ ಆಗಸದೊಳು – ಈ ರಾತ್ರಿ ಹಗಲುಗಳು,
ಸಮಸ್ತ ಪವಾಡಗಳು – ಜರುಗುತಿಹವು ನಿನ್ನಿಂದಲೇ,

ಸರ್ವಲೋಕಗಳ ಸೃಷ್ಟಿಕರ್ತನು ನೀನೇ,
ಹಾವಿರಲಿ, ನವಿಲಿರಲಿ, ಅನ್ನದಾತನು ನೀನೇ,

ನಿನ್ನಾಜ್ಞೆಯಿಂದಲೆ ಚೇತನವಿಹುದು ಲಕ್ಷ–ಕೋಟಿಗಳಲಿ,
ಒಂದೇ ಭೂಮಿಯ ಮೇಲೆ ವಾಸಿಪರು ಕೋಟಿ–ಕೋಟಿಗಳಲಿ,

ನಿರ್ಮಲ ಗಗನವೆಂಬ ಈ ಪರದೆಯ ಮೇಲೆ,
ರಚಿಸಿರುವೆ ಹೊಳಪಿನ ಚಿತ್ತಾರಗಳ ಕಾಯಗಳೆಷ್ಟೊ?

ಒಳಿತಿರಲಿ, ಕೆಡುಕಿರಳಿ, ದುಗುಡ–ದುಮ್ಮಾನವಿರಲಿ
ಕೀರ್ತಿ ಇರಲಿ, ದೌರ್ಭಾಗ್ಯವಿರಲಿ, ಸರ್ವವೂ ನೀನೇ,

ಮುಳ್ಳಿರಲಿ, ಹೂವಿರಲಿ–ವನವಿರಲಿ, ಮರುಧರೆ ಇರಲಿ,
ಸಮಸ್ತ ಬ್ರಹ್ಮಾಂಡದ ಸಪ್ತ ಗಗನವು ನಿನ್ನವೆ.

ಅಸ್ತಿತ್ವವು ನಿನ್ನದು, ಯೋಗ್ಯತೆಗಳು ನಿನ್ನವು
ಅಸ್ತಿತ್ವದೊಳಗಿರುವ ಬಹು ಪರದೆಗಳು ನಿನ್ನವು.

ನಿನ್ನ ಅಸ್ತಿತ್ವವಿಹುದು ಪರಮ, ಇದು ಶತಸಿದ್ಧ,
ಸಾಕ್ಷಾತ್ಕಾರಕೆ ಇರುವವು ಪರದೆಗಳು ಹಲವು.

ನೀ ನೀಡುವೆ ಯಾರಿಗೆ ಅನುರಾಗದ ಅರಿವ,
ಅವರಿಗೇ ನೀಡುವೆ ದಿವ್ಯಜ್ಞಾನದ ವಧುವ

ನಿನ್ನ ಸನಿಹದ ಭಾಗ್ಯ ಯಾರಿಗೆ ನೀಡುವೆಯೋ.?
ಅದ ನೀ ಮಾತ್ರ ಅರಿವೆ, ಪಡೆವವರ್‍ಯಾರು ಪರಮ ಜ್ಞಾನವ?

ಮಾಧುರ್ಯದ ಮಾರ್ಗವನ್ನು ಮೊದಲು ತೋರಿ
ಆ ಬಳಿಕ ತೆರೆಯುವೆ ದೈವೀ ಸತ್ಯದ ದ್ವಾರ.

ಎಲ್ಲರ ಮೇಲೆ ಇಹುದು ನಿನ್ನ ಕರುಣೆಯು ಶಾಶ್ವತ,
ಸರ್ವ ಸೃಷ್ಟಿಗೆ ಒಡೆಯ, ನೀನೇ ಇರುವುದು ಖಚಿತ.

ಈ ರಹಸ್ಯವ ಪಡೆಯಲಿಲ್ಲ ಯಾರೂ ಸಂಪೂರ್ಣ
ಪ್ರವಾದಿ ಮಾತ್ರ ಪಡೆದರಿದನು ಪರಿಪೂರ್ಣ

ನುಡಿದರು ಇದನೆ ಅಹ್ಮದೇ ಮುಹಮ್ಮದ್
ಸರಳವಿಲ್ಲ ಈ ಮಾರಿಫತ್‌ನ ಮರ್ಮಜ್ಞಾನ

ಯಾರು ಕರೆಯುವರೋ ಅಲ್ಲಾಹ್‌ನ ನಾಮವ,
ಪ್ರವಾದಿಗೆ ಇದರೊಳಗಿದೆ ಅಲ್ಲಾಹ್‌ನ ಸೂಚನೆ

ಒಳಿತನ ದಾರಿಯ ತೋರುವವರು ಅನೇಕ,
ಒಂದೇ ದಾರಿಯೆಡೆ ಇರುವವರು ಕೆಲವರು ಮಾತ್ರ.

'ಸ್ವಯಂ'ದಿಂದ ದೂರ ನಡೆದ ಅವನು,
ತನ್ನದೇ ಸೌಂದರ್ಯವ ಮೋಹಿಪನು

ತನ್ನನು ಮರೆಸಿ, 'ಸ್ವಯಂ'ವ ಪಡೆದವ,
ಅವನೇ ಜ್ಞಾನದ ಆತ್ಮವ ಪಡೆಯುವವ

ಓ ಅರಿವಿನ ಸಾಗರವೆ, ಸತತ ಶರಧಿಯು ನೀನು,
ಸುಪ್ತವೂ ನೀನೇ, ಪ್ರಕಟವಾಗಿರುವವನೂ ನೀನೇ.

ಯಾವ ಹನಿಯು ಬರಿದಲ್ಲ, ನಿನ್ನ ಕೃಪೆಯಿಂದ,
ಬರಿ ನದಿಯಲ್ಲ ಅದು, ಹನಿ ಹನಿಯೇ ನದಿಯು.

ಉಸಿರು–ದೇಹಗಳಲಿರುವ ಪ್ರತಿಯೊಂದು ನಿನ್ನ ಸೃಷ್ಟಿಯು,
ಹೊಳೆಯುವ ಬೆಳಕು ಗೋಚರಿಸುವುದು ನಿನ್ನ ಪ್ರಭೆಯಿಂದ.

ಕಷ್ಟವಿರಲಿ ಸುಖವಿರಲಿ ಅದರರಿವು ನಿನ್ನ ಜ್ಞಾನ
ವಿದ್ಯೆಯಲಿ, ಅವಿದ್ಯೆಯಲಿ – ಸುಪ್ತ ನಿನ್ನ ನಾಮ

ಯಾರ ಬುದ್ಧಿಗೂ ಸಿಗಲಿಲ್ಲ ನಿನ್ನರಿವ ಇರುವು
ಅಲ್ಲಿಯೂ ಇಹುದು ನೀನೆ ಆಗಿರುವ ಅರಿವು

ತೆರೆಯಿಂದ ಹೊರಬಂದ ನಿನ್ನ ದಿವ್ಯ ಅರಿವು,
ಮಹ್ಮದರ ರೂಪದಲಿ ಕಾಣುತಿದೆ ಆ ಬೆಳಕು.

ಪ್ರವಾದಿಗೆ ಸಲ್ಲುವುದು, ದುರೂದ್ – ಪ್ರಾರ್ಥನೆ,
ಇರಲಿ ಅವರ ಸಂತತಿ, ಮತ್ತು ಅನುಯಾಯಿಗಳ ನೆನಹು.

ಪ್ರಕಟವಾದವು ಅವರ ದಿವ್ಯ ಮುಖವಾಣಿಯಿಂದ
ದೈವೀ ದೃಷ್ಟಾಂತದ ಹಲವು ರಹಸ್ಯ ಒಗಟುಗಳು.

ಇದು ಕರೆಯೂ ಅಲ್ಲ, ಹಠಯೋಗವು ಅಲ್ಲ,
ತೆರೆಯು ಸರಿದಾಗ ಗುರಿ ಆಗುವುದು ಸಾಧ್ಯ,

ಎರಡೂ ಲೋಕದೊಳು ಸುವ್ಯಕ್ತ, ಓ ವ್ಯಕ್ತನೆ,
'ಆದಮ'ರ ಆಗಿದ್ದರು ನಿನ್ನ ಜ್ಞಾನದ ವ್ಯಕ್ತ.

ನಿನ್ನ ಅರಿವಿಂದಲೇ ಖ್ಯಾತರಾದರು ಅವರು,
ಆದಂ ಆದರು ಲೋಕದಲಿ ಅತಿ ಪ್ರಿಯರು.

ನಿನ್ನ ಕೃಪೆಯಿಂದಲೇ ಪ್ರೇಮಕ್ಕೆ ಆವೇಶ,
ನಿನ್ನಿಂದಲೇ ಪ್ರಾಪ್ತಿಯು ಜ್ಞಾನಕ್ಕೆ ವಿವೇಕ.

'ಬಹರಿ'ಯು ಇಹನು ಮೌಢ್ಯದಿಂದ ಬಲುದೂರ,
ಅವನಿಗಿಹುದು ಜ್ಞಾನಸಿರಿಯ ಕೃಪೆಯು ನಿನ್ನಿಂದ.

ಇಹುದು ಅಭಿಲಾಷೆ ನಿನ್ನ ಕೃಪೆಯಿಂದ,
ಮುಳುಗುವೆ ನಾನು ಜ್ಞಾನ ಸಾಗರದಲಿ.

ಮನದಿ ಅಡಗಿಹುದು, ಸೂಕ್ಷ್ಮಗಳು ಲಕ್ಷ,
ನಿನ್ನ ಅಸ್ತಿತ್ವದ ಗುಣವಾಚಕಗಳು ಲಕ್ಷ ಲಕ್ಷ.

ನಿನ್ನ ಕೃಪೆಯಾದರೆ ಉದ್ಧಾರವೀ ಮನವು
ದೈವೀ ಗ್ರಂಥದ ಪ್ರತಿಪುಟವ ಅರಿಯಲೀ ಮನವು

ತದನಂತರ ಸುಸ್ತಾಗಲಿ ನನ್ನ ನಾಲಿಗೆಗೆ,
ದೊರೆಯಲೀ ನೆಮ್ಮದಿಯು ನನ್ನ ಆತ್ಮಕೆ

ಹೊರಡಲಿ ಮಾತಿಂತಹವು ನನ್ನ ಬಾಯಿಂದ,
ಆದರೆ ಇದ ಕೇಳಿ ಇಂದ್ರಿಯಗಳಾಗಲಿ ಮೌನ

'ಆರಿಫ್'ರ ನುಡಿಯಲಿರಲಿ ಮಾತನರಿವ ಅರಿವು,
ಮನವು ಪುಟಿದು ಬರಲಿ ದುಂಡುಚೆಂಡಿನ ತರಹ.

ಆಗಲಿ ನುಡಿಯು ಸ್ತಬ್ಧ ಆಗ ದೊರೆವ
ಸ್ಥಿರತೆಯಿಂದ ಆತ್ಮಕೆ ದೊರೆವುದು ನೆಮ್ಮದಿ.

ಹೃದಯ ಸಮೂಹಗಳು ಇಹವು ಉತ್ಕೃಷ್ಟ
ಉದ್ದಿಪ್ತ ದೀಪಗಳು ಇದರಿಂದ ಉದ್ದಿಪ್ತ

ಇಂತಹ ಗುರುವು ಇಹನು ಅತ್ಯುಚ್ಚನು
ಸೈತಾನಿನ ಪಿತನು ಇದರಿಂದ ದುಃಖಿತನು.

ನುಡಿದೆ ನೀ ವಾಣಿ, ಅತಿ ಪವಿತ್ರ,
'ಧನ'ವು ಲಜ್ಜಿತ 'ಕಾಮ'ವು ಮಣ್ಣು ಮಿಶ್ರಿತ.

ಅವನು ಮಣ್ಣಿನಿಂದ ರಸಾಯನ ನಿರ್ಮಿಸಿದ,
ನಿರ್ನಾಮಗೊಳಿಸಿತದು ನಿರ್ಮಿತ ಮಣ್ಣನು.

ಬರೆದಿರುವೆ ಇದನು ಅತಿ ಒತ್ತಡದಿಂದ,
ಜ್ಞಾನದಿಂದ ದೂರವಿರುವ ನನ್ನಂಥ ಮನುಜನಿಂದ

ಲೇಖಕನು ದುರ್ಜಗದಿಂದ ದೂರವಿರಲಿ,
ಜಗದಿಂದ ದೂರವಿರುವ ಶರಧಿಯ ಆಳವಿರಲಿ.

ಅವನ ಅರ್ಥದಲಿ ಅಡಗಿರುವ ಶಬ್ದದಲಿ,
ನವನವೀನ ತರಹದ ವಿಷಯವು ಗೋಚರ.

ಪ್ರತಿ ವಿಷಯವೂ ಹೃದಯ ಮಿಲನದ ಶಯ್ಯೆ
ಅದರ ಹೆಸರೇ– "ಉರೂಸೇ ಇರ್ಫಾನ್'

ಪ್ರತಿ ಪ್ರಭೆಯಲಿ ಹೃದಯದ 'ಉರಿ' ಇದೆ
ಪ್ರತಿ ರಸಾಯನದಲ್ಲಿ ಜಿಹ್ವೆಗೊಂದು ರಸವಿದೆ.

ಸಂತರಿಗಿದು ಅತಿ ಮನಮೋಹಕವಿದು
ನವವರರಿಗಿದು ಅತಿ ಅತೀ ಪ್ರಿಯವು

ಪ್ರತಿ ಶಬ್ದದಲ್ಲಿ ಅಡಗಿವೆ ನೂರಾರು ಅರ್ಥಗಳು,
ಪ್ರತಿ ಶಬ್ದದಲಿ ಸುಪ್ತವಿವೆ ತರ್ಕಾತಿ ಮಹಿಮೆಗಳು

ಪ್ರತಿ ವಾಕ್ಯದ ಗೂಢವು, ಹರಿವ ಕಾಲುವೆ ತರಹ ಸತತ,
ಪ್ರತಿ ಪುಟದಲಿಯೂ ಗ್ರಾಮ ವಿವರವಿರುವ ನಗರ.

ಹೇ ಕರ್ತನೆ, ದಿವ್ಯ ಜ್ಯೋತಿಯ ಕರ್ತನೆ, ನಿನಗೆ ಹೊರತಾದ
ಯಾವ ರಹಸ್ಯವೂ ಇಲ್ಲ, ಎಲ್ಲವೂ ಗೂಢ ನಿನ್ನಿಂದ.

ಇದರಿಂದ ದೊರೆಯಲಿ ನಿಜಮಾರ್ಗ ದೀಪಿಕೆ,
ಸರ್ವರ ಹೃದಯದೊಳು ಉರಿಯಲಿ ಆ ದೀವಿಗೆ.

ಮೋಹಿತರಾಗಲಿ ಜನಮಾನಸರು ಪರಸ್ಪರ
ಜ್ಯೋತಿಷಿ ಹಾಗೂ ತಾರೆಯ ಸಾಂಗತ್ಯದ ಹಾಗೆ

ನಾನ್ಯಾರು? ನನ್ನ ಗೂಢದ ದಾರಿ ಯಾವುದು?
ರೆಕ್ಕೆಯಿಲ್ಲದ ಕೋಳಿ ಆಕಾಶದಿ ಹಾರಿದಂತೆ

ವಯಸ್ಸಾದ ಶಕ್ತಿಹೀನ ಆಗಿರುವೆ ನಾನೀಗ,
ಸೊರಗಿದ ದೇಹ, ಅದರೊಳಗಿದೆ ಅಲ್ಪಜೀವ

ಲವಲೇಶ ಉಳಿದಿಲ್ಲ ಈ ದೇಹದಲಿ ಉತ್ಸಾಹ
ಆದರೂ ಇದೆ 'ಸತ್ಯಯಾತ್ರೆಯ ಗುರಿಯು ಮನದಿ.

ಗೊತ್ತು ಗೋಗಿಯೊಳು ಎಲ್ಲರಿಗೂ ಈ ತಥ್ಯ
ಮತಿಹೀನ ಅಲ್ಪರೂ ಅರಿವರು ಇದರ ಸತ್ಯ

ಓದಿಲ್ಲ ನಾನು 'ಅಲೀಫ್' ನಿಂದ ಮುಂದೇ
ತಿರುವಿಲ್ಲ ಗ್ರಂಥದ ಪುಟವನ್ನು ಒಂದೇ.

ಪಾಠಶಾಲೆಗೆ ಎಂದೂ ಹೋದವನು ನಾನಲ್ಲ
ಒಂದು ರಾತ್ರಿಯೂ ದೀಪದಡಿ ಕುಳಿತವನಲ್ಲ

ಇರಲಿಲ್ಲ ನನಗೆ ಯಾವ ಕುಶಲತೆಯ ದೃಷ್ಟಿಯೂ
ಹಾಗೆಯೇ ನನಗೆ ಇರಲಿಲ್ಲ ಕಲೆಯ ಗಂಧವೂ

ಅಕ್ಷರ ಮತಿಗಳ ಮಿತ್ರನೂ ನಾನಲ್ಲ
ಅನುರಾಗಿಗಳ ಸ್ನೇಹಿತನೂ ನಾನಲ್ಲ

ಯಾವ ನಗರವನೂ ಸುತ್ತಿ ನೋಡಿದವನಲ್ಲ
ಪರ್ಯಟನ ಮಾಡಿದವರ ಗೆಳೆಯನೂ ಅಲ್ಲ

ಗೋಗಿಯ ಹೊರತು ನೋಡಿಲ್ಲ ಬೇರೇನನ್ನು
ಬದುಕದಾರಿ ಸವೆದದ್ದು ಕೇವಲ ಗೋಗಿಯಲಿ

ಜೀವನವಿಡೀ ಕಳೆದೆ ನಾ ಒಂದೇ ದೇಶದಲಿ
ದೇಹದಲಿ ನೆಲೆಸಿರುವ ಪ್ರಾಣ ಬಂಧಿತವು

ಮನ್ನಿಸಿರಿ ಎನ್ನಯ ಸಮಸ್ತ ದೋಷವನು
ಹಾಗೆಯೇ ಮರೆಯರಿ ಕಾಡಾಡಿದ ದೋಷವ

ಓ ದೇವರೇ, ನನ್ನನ್ನು 'ಅಹಂ'ನಿಂದ ವಿಮೋಚನೆಗೊಳಿಸು. 'ಪರಂ'ಜ್ಯೋತಿಯ ಪವಿತ್ರ ಸ್ಥಾನದ ಪ್ರತಿರೂಪವಾದ, ಲೌಕಿಕ ಹಾಗೂ ಅಲೌಕಿಕ ಜ್ಞಾನದ ಅನಂತ ಸೆಲೆಯಾದ ಪ್ರವಾದಿ ಮಹ್ಮದ್ ಅವರ ದರ್ಶನದ ಭಾಗ್ಯವ ದಯಪಾಲಿಸು. ಚ್ಯುತಿರಹಿತವಾದ ನಿನ್ನ ಅಪ್ರತಿಮ ಸೌಂದರ್ಯದ ಅಭಿವ್ಯಕ್ತಿಯನ್ನು ದರ್ಪಣವಾಗಿಸಿ, ಅದನ್ನು ವೀಕ್ಷಿಸುವ ಸೌಭಾಗ್ಯವ ದಯಪಾಲಿಸು. ಯಾಕೆಂದರೆ ಇದೇ ಪ್ರಕಾಶವು ಪವಿತ್ರ ದೈವೀ ಅಸ್ತಿತ್ವದ ಮಧುಶಯ್ಯೆಯ ಪ್ರತಿಬಿಂಬ. ಇದು ಸಮಸ್ತ ಸೃಷ್ಟಿಯ ಸಹಸ್ರಾರು ರೂಪ ವೈವಿಧ್ಯಗಳಲ್ಲಿ, ಪ್ರಕೃತಿ ಒನಪು-ಒಯ್ಯಾರಗಳಲ್ಲಿ, ಜೀವಸೆಲೆಯ

ಲೀಲೆಗಳ ಅಸ್ತಿತ್ವದಲ್ಲಿ ಅಡಗಿದ್ದು, ಸಾಕಾರವಾಗಿ ಅದರ ಅಭಿವ್ಯಕ್ತಿಯಾಗಿ ಕಾಣಿಸಿಕೊಂಡಿದೆ. ನಿನ್ನೆಯವರೆಗೆ ಯಾವ ಪ್ರಕಾಶವು ಬೀಜವೆಂದು ಕರೆಸಿಕೊಳ್ಳುತ್ತಿತ್ತೊ, ಅದು ಇಂದು ಮರವಾಗಿದೆ. ಒಂದು ಸಮೂಹ ಇದನ್ನು ಸತ್ವ ಎಂದು ಕರೆದರೆ, ಮತ್ತೊಂದು ಸಮೂಹ ಅದನ್ನು ಸತ್ತೆಯೆಂದು ಕರೆಯುತ್ತಿದೆ. ಆದರೆ ಅದರ ಅರ್ಥವು ರೂಪಾತೀತವಾಗಿದೆ. ಹಾಗಯೇ ಅತೀತದ ಸಂಘರ್ಷವು ನಿಜವಾದ ಅರ್ಥದಲಿ ಅರ್ಥಹೀನ. ಇದರ ತಾತ್ಪರ್ಯವಿಷ್ಟೇ, ಭ್ರಮಾಧೀನವಾಗಿರುವ ಸ್ಥಿತಿಯ ಸಂಭಾಷಣೆಯು ಒಂದು ಮಾಯಾಜಾಲ.

■

*

ಆಭರಣ–೧

ಉಪದೇಶ (ಬುದ್ಧಿವಾದ)

ಯಾರಿಗೆ ದೇವರ ಹುಡುಕಾಟದ ಅವಶ್ಯಕತೆ ಇದೆಯೋ, ಅವನು ಕುಕರ್ಮಗಳಿಂದ ದೂರ ಇರುವುದು ಅವಶ್ಯಕ. ಒಮ್ಮೆ ಪ್ರಾಯಶ್ಚಿತ್ತ ಮಾಡಿದ ಬಳಿಕ, ತಲೆಯ ಮೇಲೆ ಆಕಾಶ ಕಳಚಿ ಬಿದ್ದರೂ ಮತ್ತೆ ಆ ಕುಕರ್ಮದ ಕಡೆ ದೃಷ್ಟಿ ಹಾಯಿಸಬಾರದು. ಹಾಗೂ ತನ್ನ ನಿಲುವಿನಿಂದ ವಿಚಲಿತನಾಗದೇ ಅಚಲನಾಗಿರಬೇಕು. ಹುಟ್ಟಿನಿಂದಲೇ ಮನುಷ್ಯ ನಿರ್ಮಲನು ಚಾರಿತ್ರ್ಯವಂತನು, ಹಾಗೆಯೇ ಸ್ವಭಾವತಃ ಹಲವು ದೈವಿ ಕೃಪೆಗಳ ಪಡೆದವ. ಆದರೆ ಕೆಲವು ಬಯಸದ ಕುಕರ್ಮಗಳಿಂದಾಗಿ ದೇವರ ಅನುಗ್ರಹದಿಂದ ವಂಚಿತನಾಗಿ, ಮಾನವ ಸಮುದಾಯವ ಮುನ್ನಡೆಸುವ ಪ್ರವಾದಿ ಮಹ್ಮದ್ (ಸಲ್ಲಲ್ಲಾಹು ಅಲೈಹು ಸಲ್ಲಮ್= ಸ.ಅ.) ಅವರ ಮನವಿಯ ಮೇರೆಗೆ ಅನುಯಾಯಿಗಳ ಪಾಪ ವಿಮೋಚನೆ ಆಗುವುದರಿಂದ ವಂಚಿತನಾಗಿ ದೈವಿಜ್ಞಾನ ಪ್ರಾಪ್ತಿಯ ತಪ್ಪಿಸಿಕೊಳ್ಳುತ್ತಾನೆ. ಸತ್ಯ–ಅಸತ್ಯಗಳ ಅರಿವು ಇರದ ಹೃದಯದಲ್ಲಿ ಮಾರಿಫತ್‌ನ ಸಾನ್ನಿಧ್ಯವು ಖಂಡಿತವಾಗಿಯೂ ಆಶ್ರಯ ಪಡೆಯುವುದಿಲ್ಲ. ಕೆಲವೊಮ್ಮೆ 'ಪರಂ' ಸತ್ಯದ ಸಾನ್ನಿಧ್ಯದ ಸ್ಥಾನ ದೊರೆತಂತೆ ಭಾಸವಾದರೂ ಅದು ತಾತ್ಕಾಲಿಕ. ಹಾಗೂ ಎಂದೆಂದಿಗೂ ನೆಲೆ ನಿಲ್ಲುವುದಿಲ್ಲ.

'ಮನುಜ ಸ್ವಯಂ ಪವಿತ್ರ ಹಾಗೆಯೇ
ಆಕಾಶದಂತೆ ಶುಭ್ರ, ಪ್ರಕಾಶಮಾನವೂ

ಕೆಲವು ದುರ್ನಡತೆಗಳು ಅವನನ್ನು
ಅಫೀಮು ತಿಂದವನಂತೆ ಲಜ್ಜೆಗೊಳಿಸಿವೆ.

ಪ್ರತಿಯೊಬ್ಬ ವ್ಯಕ್ತಿಯು ದೇವದೂತನ ಹಾಗೆ ಆಕಾಶದ ಎತ್ತರದಲ್ಲಿ ಹಾರಾಡಬಹುದು.

ಆದರೆ ಅವನಲ್ಲಿ ದುರ್ಗುಣಗಳ ಒಂದು ಕಣವೂ ಉಳಿದಿದ್ದರೆ ಅವನು ಕಾಡುಪ್ರಾಣಿಗಳಿಗಿಂತಲೂ ಕಡಿಮೆ. ಕಾಲಜ್ಞಾನದ ನಾಡಿ ಮಿಡಿತ ಅರಿಯುವುವರಿಗೆ ಇದು ಚೆನ್ನಾಗಿ ಗೊತ್ತು.

ಓ! ಆತ್ಮಿಯನೇ!! ಅವನಿಷ್ಟದ ದೈವೀಪ್ರೇರಣೆಯಿಂದ ಜೀವನದ ಹಣತೆಯು ಬೆಳಕು ಕಂಡಿದೆ. ಆದರೆ ಅದನ್ನು ಇರಿಸಿರುವುದು ಮಾತ್ರ ಕಿಟಕಿಯಲ್ಲಿ. ಆದುದರಿಂದ ದೀಪ ಆರದಂತೆ ನೋಡಿಕೊಳ್ಳುವುದಕ್ಕಾಗಿ ಆಯುಷ್ಯವಿಡೀ ಸತ್ಯಾನ್ವೇಷಣೆಯಲ್ಲಿ ಕಳೆಯುವುದು ಸೂಕ್ತ. ಇದರ ಅರಿವು ನಿನ್ನ ವ್ಯಕ್ತಿತ್ವದಲಿ ಇರಲಿ. ಇದೇ ಹೊರ ಹಾಗೂ ಒಳಗಿನ ಅರಿವು ಎಂದು ಭಾವಿಸಿ, ಸತ್ಯದ ಆಶ್ರಯದಲ್ಲಿ ನೆಲೆಸು ಹಾಗೂ ಪರಂಸತ್ಯಕ್ಕೆ ನಿನ್ನನ್ನು ಆಶ್ರಯ ತಾಣವಾಗಿಸು.

ಬಹಿರಂಗವಾಗಿ ಸುಸ್ಪಷ್ಟವಾದ ಹಾಗೂ ರಹಸ್ಯಾತ್ಮಕವಾದ ಉಪಾಸನೆಗಳಾದ ನಮಾಜ್, ರೋಜಾ, ಕುರಾನ್ ಪಠಣ ಮುಂತಾದವುಗಳನ್ನು ಅನನ್ಯ ಆಸಕ್ತಿ, ಭಕ್ತಿ ಹಾಗೂ ಏಕಾಗ್ರತೆಯಿಂದ ನೆರವೇರಿಸು. ನಿನ್ನ ವ್ಯಕ್ತಿತ್ವವು ದೈವಿಪ್ರಭೆಯಿಂದ ಕಾಂತಿಯುಕ್ತವಾಗಿ ಪ್ರಜ್ವಲಿಸುವಂತಾಗಲಿ. “ನಾಸೂತ್” ಎಂಬ ನರಕಲೋಕದ ಕೊಳಕು ಹಾಗೂ ಕಲ್ಮಶಗಳಾದ – ಸುಳ್ಳು, ನಿಂದನೆ, ಮತ್ಸರ, ಮದ, ದ್ವೇಷ, ಪರ ನಿಂದನೆ, ದುಃಖ ಇತ್ಯಾದಿ ಅವಗುಣಗಳಿಂದ ನಿನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವಂತಾಗಲಿ. ಈ ಅವಗುಣಗಳು 'ಫಕೀರಿಯ (ಸಂತತ್ವದ) ಸೌಧವನ್ನೇ ಬುಡಮೇಲು ಮಾಡುತ್ತದೆ. ಸುಳ್ಳಿನಿಂದ ಸದಾ ದೂರವಿರು. ಯಾಕೆಂದರೆ ಸುಳ್ಳು ಸರ್ವ ಪಾತಕಗಳ ಬೇರಾಗಿದೆ. ಅದು ಹೃದಯದಂತಹ ಪವಿತ್ರ ಸ್ಥಾನವನ್ನು ಮಲಿನಗೊಳಿಸುತ್ತದೆ. ಇದನ್ನು ಜಾಗೃತನಾಗಿ ಅರಿ. ಇದರ ಶುದ್ಧಿಗಾಗಿ ಮನಃಪೂರ್ವಕವಾಗಿ ಪ್ರಯತ್ನಿಸು.

'ದುಷ್ಟ ಸಂಕಲ್ಪ, ಹೃದಯದಿಂದ ತೆಗೆ
ಹೃದಯ 'ಕಾಬಾ'ದಿಂದ ಈ ಕಶ್ಮಲ ತೆಗೆ

ಹಾಲಿನಲ್ಲಿ ಮಜ್ಜಿಗೆಯನ್ನು ಬೆರೆಸಬೇಡ
ಸತ್ಯದಿಂದ ಈ ಅಸತ್ಯದ ಕೊಳೆ ತೆಗೆ'

ಬಹುಶಃ ನಿನಗಿದರ ಅರಿವಿಲ್ಲವೇನೋ– ಮನುಷ್ಯನು ಸುಳ್ಳು ಹೇಳಿದ ಸಂದರ್ಭದಲ್ಲಿ ಅಲ್ಲಾಹನು ಹಾಗೂ ಅವನ ಸಮಸ್ತ ಸೃಷ್ಟಿಯು, ಅವನ ಮೇಲೆ ಅಭಿಶಾಪ ಹಾಕುತ್ತಿದೆ. ಭೂಮಿಯಿಂದ ಆಕಾಶದೆತ್ತರಕ್ಕೆ ಚೀರಾಟದ ಗುಲ್ಲಾಟವಾಗುತ್ತದೆ, ಹಾಗೂ ವ್ಯಾಪಕವಾಗಿ ಕೋಲಾಹಲವಾಗುತ್ತದೆ. ಆದರೆ ಆಶ್ಚರ್ಯದ ಸಂಗತಿಯೆಂರೆ ಈ ಗುಲ್ಲು ಹಾಗೂ ಕೋಲಾಹಲ ಮನುಷ್ಯನ ಕಿವಿಗಳಿಗೆ ಕೇಳಿಸುವುದಿಲ್ಲ.

'ಸುಳ್ಳು ಹೇಳುವುದು ಯಾರ ಹವ್ಯಾಸವಾಗುತ್ತದೆ.
ಅವನ ಮುಖದ ಮೇಲೆ ಶಾಪದ ಮಳೆಯಾಗುತ್ತದೆ.

ಸತ್ಯವೆಂಬ ನಗರದ ನಗರವಾಸಿಯ–
ಮೊಗದ ಮೇಲೆ ಪ್ರಕಾಶದ ಮಳೆಯಾಗುತ್ತದೆ.

ಪ್ರಾಣಿ ಸಂಕುಲಕ್ಕೆ ಅವು ಕಿರಿದಿರಲಿ, ಹಿರಿ ಇರಲಿ, ನಿನ್ನ ಕೈಗಳಿಂದ ಹಾಗೂ ಭಾಷೆಯಿಂದ ಹಿಂಸೆ ನೀಡಬೇಡ. ಹಿಂಸೆ ನೀಡುವುದರಿಂದ ದುಃಖಿತನಾಗಬೇಡ. ನಿನ್ನ ವ್ಯಾಜ್ಯವನ್ನು ಆಳುವ ಅರಸನ ನ್ಯಾಯಾಲಯದ ಸಮ್ಮುಖ ಮಂಡಿಸು.

ಅಸ್ತಿತ್ವದಲ್ಲಿರುವ ಪ್ರತಿ ವ್ಯಕ್ತಿತ್ವದ ನೈಜ ಕರ್ತೃ 'ಅವನೇ' ಆಗಿದ್ದಾನೆ. ಸಂತೋಷ ಹಾಗೂ ದುಃಖದ ಪ್ರಭಾವ, ನಿನ್ನ ಮನದಲ್ಲಿ ಮನೆಯಾಗಿಸಿಕೊಂಡಿರುವ ಹೊಟ್ಟೆ ಬಟ್ಟೆಯ ಚಿಂತೆಯು ತುಂಬಾ ಕೆಡುಕಾಗಿದೆ. ಈಗಲೇ ಇದನ್ನು ಕೂದಲ್ಹಿಡಿದು ಎಳೆದು ಹೊರಹಾಕು, ಯಾಕೆಂದರೆ ಯಾವ ಅಸ್ತಿತ್ವವು ನಿನಗೆ ಆತ್ಮವನ್ನು ಉಚಿತವಾಗಿ ದಯಪಾಲಿಸಿದ್ದಾನೋ, ಅವನು ಬಹುಮೂಲ್ಯ ರತ್ನಗಳನ್ನು ಕವಡೆಯ ಬೆಲೆಯಲ್ಲಿ ನಿನಗೆ ಮಾರಿದ್ದಾನೆ. ಆದರೆ ಅದರಲ್ಲಿ ಒಂದು ಭಾಗವೇನು, ಒಂದು ಕಣವನ್ನು ವ್ಯರ್ಥಗೊಳಿಸುವುದು ಅವನಿಗಿಷ್ಟವಿಲ್ಲ. ಆದರೆ ಇದೇನು ವೃತ್ತಾಂತ? ನಿನ್ನ ನಡತೆಯು ನಿಜಕ್ಕೂ ಅಸಮಂಜಸವಾಗಿದೆ.

ಮಿತ ಭೋಜನ, ಮಿತ ನಿದ್ರೆ ಹಾಗೂ ಮಿತ ಮಿಲನ,
ಅಕಾಲ, ಅನಾವಶ್ಯಕ, ಅಪ್ರಯೋಜಕವಾಗಿ ಬಾಯ್ಬಿಡಬೇಡ

ತಾಳ್ಮೆ, ಸಹನೆ, ತ್ಯಾಗ ಆಶಾಭಾವನೆ, ತ್ಯಜಿಸಬೇಡ
ವಿಷಯ ಲಂಪಟ, ದುರಾಸೆ, ಎದೆ ಸೀಳಿ ಹೊರಹಾಕು.

ನಿನ್ನ ಕರ್ಮದ ಸದಾ ನೀನು ಕಾವಲಾಗಿರು
ಹೃದಯದ ಸನಿಹವಿರು, ದೇಹದಿಂದ ದೂರವಿರು.

ಹೃದಯಕೆ ತನು–ಮನದ ಕಾಣಿಕೆ ಅರ್ಪಿಸು,
ಹೃದಯ ಪರಿಮಾರ್ಜನವಾದರೆ ಜೀವವನೆ ಬಿಡು.

"ಚೂಂ ಬದ್‌ಲಾ ರಾಮ್ ರಸಿ ರಾಮ್ ಬಾಷ್'
ರಾಮ್ ದರ್ ಅಫೋಸ್ ದಿಲಾ ರಾಮ್ ಭಾಷ್.

ಓ, ಆತ್ಮೀಯನೇ! ವಿಶ್ವಾಸಹೀನ ಸಾಧಕನು (ಸಾಲಿಕ್) ಹುಲುಮಾನವಗಿಂತಲೂ ಕೀಳು, ನಿಸ್ಸಂದೇಹವಾಗಿ, ಯಾವ ಏಕ–ಅಸ್ತಿತ್ವವು, ದೈವೀ ನಿರಾಪೇಕ್ಷೆಯ ಪ್ರತಿಜ್ಞೆ ಹೊಂದುತ್ತಾನೋ, ಅವನು ಅವನ ಏಕತ್ವದಲ್ಲಿ ಅನ್ಯರನ್ನು (ಅಲ್ಲಾಹನಿಂದ ಏನನ್ನೂ

ಬಯಸದ) ಸೇರಿಸಿಕೊಳ್ಳುವುದಿಲ್ಲ. ಪ್ರತಿ ಸಂದರ್ಭದಲ್ಲಿ ಪ್ರತಿ ರಣರಂಗದಲ್ಲಿ ಏನು ನುಡಿಯಬೇಕೋ, ಅದನ್ನೆ ನುಡಿಯುತ್ತಾನೆ. ಮತ್ತು ಏನನ್ನು ಬೇಡಬೇಕೋ, ಕೇವಲ ಅವನಿಂದಲೇ ಬೇಡುತ್ತಾನೆ.

ಪ್ರತಿಯೊಬ್ಬ ಆರೀಫನು, ತನ್ನ ಮನದ ಮಾತು,
ಹೃದಯವಂತನ ಹೊರತು, ನುಡಿಯನು ಅನ್ಯರಿಗೆ.

ಅರಸ–ಕೋತ್ವಾಲನ ಮಧ್ಯೆ ಇಹುದು ಅಂತರ ನಿಸ್ಸಂದೇಹ,
ಇದರ ಅನುಗುಣವಾಗಿ ಇಹುದು ಜೀವಾತ್ಮಗಳ ಘನತೆ.

ಅಕಸ್ಮಾತ್ ದೈವೀ ಅನುಗ್ರಹವಾದರೆ ಹಾಗೂ ದೈವೀ ಮಹಿಮೆ ಪ್ರಾಪ್ತಿಯಾಗಿ, ಅದರಲ್ಲಿ ವೃದ್ಧಿ ಹಾಗೂ ಉನ್ನತಿ ಪ್ರಾಪ್ತಿಯಾದರೆ, ಅದನ್ನು ಭೂಗರ್ಭದಲ್ಲಿ ನಿಧಿಯನ್ನು ರಹಸ್ಯವಾಗಿ ಹುದುಗಿಡುವಂತೆ (ಪ್ರಕಟಣೆಯಿಂದ) ಗುಪ್ತವಾಗಿರಿಸು, ಯಾಕೆಂದರೆ ಅದರ ಅವಿರ್ಭಾವದಿಂದ ದಿವ್ಯಾವೇಶ ಹಾಗೂ ಪ್ರೇಮದ ಚಂಡಮಾರುತವು ಮುಚ್ಚಳವಿಲ್ಲದ ಪಾತ್ರೆಯಲ್ಲಿ ಕುದಿಯುವ ಹಾಲು ಆವಿಯಾದಂತೆ ಕ್ಷೀಣವಾಗುತ್ತದೆ. ಇದರಿಂದ ಅಂತರಂಗದ ಪರಮಾನಂದ ಗೋಷ್ಠಿಯ ಸಮಸ್ತ ವ್ಯವಸ್ಥೆಯೇ ಅಲ್ಲೋಲ ಕಲ್ಲೋಲವಾಗುತ್ತದೆ.

ಪ್ರೇಮ ಸಿರಿಯಿಂದ ಆಗುವವು ಭವನ–ದ್ವಾರಗಳು ಕನ್ನಡಿಯಂತೆ
ಮಹಿಮೆಯನು ತೋರಬೇಡ ಸರ್ವರಿಗೂ ಕ್ಷೌರಿಕನ ಕನ್ನಡಿಯಂತೆ

ದೇವರನ್ನು ಪ್ರತ್ಯಕ್ಷವಾಗಿ ದರ್ಶನ ಮಾಡಿಸುವ ಸುಳ್ಳು ಭರವಸೆಯನ್ನು ನೀಡುವವರು ಪ್ರತಿಯೊಂದು ಯುಗದಲ್ಲೂ ಪ್ರಕಟವಾಗುತ್ತಾರೆ. ಇಂಥ ಸತ್ಯರಹಿತವಾದ ವ್ಯಕ್ತಿಗಳ ಸಾಮಿಪ್ಯ ಸಂಬಂಧವು ವೃಥಾ ಕೇಡಾಗಿದೆ. ಇದರಲ್ಲಿ ಸ್ಪಷ್ಟವಾದ ಗಂಡಾಂತರವಿದ್ದು, ಈ ಗುಂಪಿನ ಕುತಂತ್ರಗಾರಿಕೆಯಲ್ಲಿ ಎಂದಿಗೂ ಸಿಲುಕಬಾರದು, ಹಾಗೂ ಅವರ ಕುಟಿಲತೆಯಿಂದ ಸದಾ ಜಾಗೃತರಾಗಿದ್ದು, ಸ್ನೇಹ–ಸಂಬಂಧ ಹೊಂದಬಾರದು.

'ತಪ್ಪಿಯೂ ಎಂದಿಗೂ ಅವರ ಬಳಿ ಸುಳಿಯಬೇಡ,
ಅವರು ಸಂಖ್ಯೆಯಲಿ ಅಧಿಕ, ಅರಿವಿನಲಿ ವಿರಳ'

ಮಹಾಮಹಿಮರ ಆರಾಧನಾಲಯದ ಪ್ರೇಮಿಗಳಿಂದ ಜೀವನಮುಕ್ತನಾಗಿ ಭಕ್ತಿಭಾವದಿಂದ ಭೇಟಿಯಾಗುವುದನ್ನು ನಿನಗಾಗಿ ಕಡ್ಡಾಯಗೊಳಿಸಿಕೊಳ್ಳು, ಯಾಕೆಂದರೆ ಇವರು 'ಅವನ' ನಾಮದ ಹೊರತು ಬೇರೇನನ್ನೂ ಅರಿಯರು, ಹಾಗೂ 'ಅವನ' ಹೊರತು ಬೇರೇನನ್ನು ನುಡಿಯರು. ಇದು ಶ್ರೇಷ್ಠತಮ ಶಿಫಾರಸ್ಸಾಗಿದೆ. ದೈವಾನ್ವೇಷಣೆಯಲ್ಲಿ ನಿರತರಾದವರ ದರ್ಶನ ನಿನ್ನ ಮೇಲೆ ಕಡ್ಡಾಯಗೊಳಿಸಿಕೊಳ್ಳು.

ಯಾಕೆಂದರೆ, ಇವರು 'ನಾಸೂತ್' ಎಂಬ ನರಲೋಕದ ಜಗಲಿನಿಂದ 'ಮಲಕೂತ್' ಎಂಬ ಸತ್ಯಲೋಕದ ಬಿಡಾರದಲ್ಲಿ ಪ್ರವೇಶಿಸಿದ್ದಾರೆ. ಇವರಿಬ್ಬರೂ ಐಹಿಕ ಹಾಗೂ ಲೌಕಿಕ ಸೆರೆಯಿಂದ ಬಿಡುಗಡೆ ಹೊಂದಿದ್ದವರಾಗಿದ್ದಾರೆ. ಇದು ನಿಸ್ಸಂಶಯವಾಗಿ ಪ್ರಭಾವಶಾಲಿ ಶಿಫಾರಸ್ಸಾಗಿದೆ.

'ಅಲ್ಲಾಹನ ಪ್ರೇಮಿಗಳು ಭೂವಾಸಿಗಳಾಗಿಯೂ ಭುವಿಯಲ್ಲಿ ಶ್ರೇಷ್ಠರು
ಹೇ ಮನವೇ, ನೀ ಕಾಯಾ–ಮನಸಾ ಅವರ ಸೇವೆಯಲ್ಲಿ ನಿರತನಾಗಿರು.'

'ಅಲ್ಪಗಮನದಿಂದ ನಿನ್ನ ಶತ್ರುವು ಸೊಳ್ಳೆ ಸಮಾನ
ಬಲ–ಪರಾಕ್ರಮದಲ್ಲಿ ಅವನಿದ್ದರೂ ಆನೆ ಸಮಾನ'

ಬಾದಶಹಾನಿರಲಿ, ಫಕೀರನಿರಲಿ, ಕೃಷಿಕನಿರಲಿ, ಧನಿಕನಿರಲಿ ಸಮಸ್ತ ಮನುಜರನ್ನು ಸಮಾನ ದೃಷ್ಟಿಯಿಂದ ಕಾಣು, ಯಾಕೆಂದರೆ ಪ್ರವಾದಿಗಳ ಜ್ಞಾನ ಜ್ಯೋತಿಯ ಪ್ರಕಾರ ಇವರೆಲ್ಲರೂ ಸಮಾನ ಸೃಷ್ಟಿಯ ಅಸ್ತಿತ್ವಗಳು.

(ಅನಾ ಮಿನ್ ನೂರುಲ್ಲಾ ವೊ ಕುಲ್ ಶೈ ಮಿನ್ ನೂರಿ)

'ಮಹ್ಮದರ ಜ್ಞಾನಜ್ಯೋತಿಯ ಪ್ರಭೆಯು ಎಲ್ಲರಿಗೂ ಸಮಾನ
ಅಜ್ಞಾನಿಯ ಬಳಿಯೂ, ಮಹಾನ್ ಜ್ಞಾನಿಯ ಬಳಿಯೂ'

ಸೃಷ್ಟಿಸಲ್ಪಟ್ಟವನ ಅಧೀನನಾದ ನೀನು ಅವನಿಂದ ಅದ್ಯಾವದೋ ಕೃಪೆಯಿಂದ ಗಮನಿಸಿಲ್ಪಟ್ಟನಾಗಿದ್ದಕ್ಕೆ ಹೆಮ್ಮೆ ಪಡಬೇಡ. ಯಾಕೆಂದರೆ ಅಧಿಕ ಜನರು ಇಂತಹ ದೌರ್ಬಲ್ಯದಿಂದಲೇ ಮಹೋನ್ನತ ಪದವಿಯಿಂದ ವಂಚಿತರಾಗಿ ಅಧಮರಾಗಿ ಭೂಮಿಯ ಮೇಲೆ ಬೀಸಾಡಲ್ಪಟ್ಟಿದ್ದಾರೆ. ಇವರು ಮೃತ್ಯು ದೇವದೂತರಾದ ಇಸ್ರಾಫೀಲ್‌ನ ಕಹಳೆಯ ದನಿಯ ಹೊರತು ಖಂಡಿತವಾಗಿಯೂ ಮತ್ತೆ ಎಚ್ಚರಾಗಿ ಮೇಲೇಳಲಾರರು.

'ಅಸ್ತಿತ್ವ ಮಾರ್ಗದ ಪರಮ ಸ್ಥಾನದಲಿ ಇಹನವನು
ಎಳೆದು ಬೀಸಾಕಿದ್ದಾನೆ, ಸ್ವೀಕಾರ ರದ್ದತಿಯ ಹೊದಿಕೆ'

ಯಾವುದೇ ಕಾರ್ಯ ಅಥವಾ ಕರ್ಮದಲ್ಲಿ ಒಳಿತಿದ್ದರೆ, ಅದರ ಪ್ರಾರಂಭದಿಂದ, ತನ್ನ ಗೋರಿಯ ಅಂತಿಮ ಶಿಲೆಯವರೆಗೆ ತಲುಪಿಸು, ಅರ್ಥಾತ್ ಅದನ್ನು ಅಪೂರ್ಣವಾಗಿ ಮಧ್ಯದಲ್ಲಿ ಬಿಡದಿರು. ಯಾಕೆಂದರೆ ಇದರಿಂದ ಅದರ ಉದ್ದೇಶಿತ ಪರಿಣಾಮ ಪ್ರಕಟವಾಗುವಂತಿರಲಿ. ನಿನ್ನ ಪತ್ನಿ ಹಾಗೂ ಮಕ್ಕಳು, ದಾರಿದ್ರ್ಯ ಹಾಗೂ ಸುಭಿಕ್ಷೆಯಲಿ, ಸುಖ–ದುಃಖಗಳಲ್ಲಿ ನಿನ್ನ ಜತೆಗಿದ್ದರೆ, ಆಗಲೂ ನೀನು ಇದನ್ನು ಪರಿತ್ಯಾಗ ಮಾಡದಿರು, ಬದಲಾಗಿ ತನ್ನ ಹಾಗೂ ಅವರ ಹೃದಯಗಳ ಮೇಲೆ ಸ್ವಾಧೀನತೆಯನ್ನು ಹೊಂದಿರುವ, ಹಾಗೂ ಸಮಸ್ತ ಸಂಕಟಗಳನ್ನು ಪರಿಹರಿಸುವವನಾದ

ಆ ಅನುಪಮ ದೈವದ ಸುಪರ್ದಿಗೆ ಒಪ್ಪಿಸಿ, ನೆರೆಹೊರೆಯವರ ತಕರಾರು ಹಾಗೂ ಕಲಹಕ್ಕೆ ಸುತಾರಾಂ ಆಸ್ಪದವಿಲ್ಲದ ಸ್ಥಳದಲ್ಲಿ ನಿಶ್ಚಿಂತೆಯಿಂದ ಪವಡಿಸು.

ದೇಹ ಪ್ರಕ್ಷುಬ್ಧವಾಗಿದ್ದರೆ, ಮನವು ಡೋಲಾಯಮಾನವಾಗಬಹುದು,
ನೀ ಪ್ರಶಾಂತನಾಗಿದ್ದರೆ, ಮನೋಲ್ಲಾಸವು ನಿನ್ನ ಅತಿಥಿಯಾಗಬಹುದು.

'ಜಗದ ವ್ಯಾಮೋಹದಿ ಸಿಲುಕಿದೆ ನಿನ್ನ ಗಂಟಲು, ಆದರೆ-
ಉಲ್ಲಾಸ ಪ್ರಾಪ್ತಿಯು ನಿನಗೆ, ಪ್ರಿಯತಮೆಯ ಕೇಶರಾಶಿಯಲಿ'

ಹೇ, ವಾಸ್ತವ ಗಿರಿಶಿಖರದ ಅತ್ಯಲ್ಪ ಕಣವೆಯೇ, ನರಕಾಗ್ನಿಯಿಂದ ಹಾಗೂ ಪ್ರಳಯದ ದಿನದ (ಖಿಯಾಮತ್‌ನ) ಲೆಕ್ಕಚಾರದಿಂದ ಭಯಪಡು.

"ಸಂಕಲ್ಪ"ದ ಕೃಪೆಯಿಂದ ಗಣನೆಯಾಗಿ ಪಾರಾದರೆ ಸಾಕು,
ಕರ್ಮದ ನ್ಯೂನತೆಯಿಂದ ಕಂಪಿಸುತಿದೆ ನಿನ್ನ ಪಾದ"

ಮೃತ್ಯುವಿನ ಬಗ್ಗೆ ಸದಾ ಜಾಗೃತನಾಗಿರು, ಯಾಕೆಂದರೆ ಅದರ ಆಗಮನವು ಶುಕ್ರವಾರ ಅಥವಾ ಶನಿವಾರ ಎಂದು ನಿಶ್ಚಿತವಾಗಿ ಆಗುವುದಿಲ್ಲ. ಅದು ಸದಾ ನಿನ್ನ ತವಕದಲ್ಲಿದೆ. ಎಚ್ಚರದಿಂದಿರು!, ದುರಾದೃಷ್ಟವಶಾತ್ ಬರಿಗೈಯಿಂದ ಹಾಗೂ ಹತಾಶ ಹೃದಯದಿಂದ ಇಲ್ಲಿಂದ ತೆರಳದಿರಲಿ. ಆದುದರಿಂದ ಈ ನಶ್ವರ ಲೋಕದಲಿ ಈ ತರಹ ಬಾಳು, ನಾಳೆ ನಿನಗೆ, ಆ ಶಾಶ್ವತ ಲೋಕದಲಿ ಲಜ್ಜೆಯಾಗದಿರಲಿ.

"ಈ ಜಗದ ತಪ್ಪು-ಒಪ್ಪಿನ ಮೂಟೆ ನಾನು,
ಹೊರಡುವೆ, ಒಂದೆರಡು ದಿನದ ಅತಿಥಿ ನಾನು".

ನೀನು ನಿನ್ನ 'ಫಕೀರಿ'ಯ ಉಪವಾಸದಲಿ ಸದಾ ಸಂತಸದಿಂದ ತೃಪ್ತನಾಗಿರು, ಬದಲಾಗಿ ದಾರಿದ್ರ್ಯ ಹಾಗೂ ಬಡತನಕ್ಕಾಗಿ ಹಳಹಳಿಸಬೇಡ. ಯಾವತ್ತಾದರೊಂದು ದಿನ ಆ ಸರ್ವಶಕ್ತನು ನಿನ್ನಿಂದ ಸಂಪ್ರೀತನಾದರೆ, ನಿನಗೇನು ಕೊರತೆ? ನಿನ್ನ ಆಕಾಂಕ್ಷೆಗೂ ಮೀರಿ ಅವನು ನೀಡಬಹುದು. ಅಕಸ್ಮಾತ್ ನೀಡದಿದ್ದರೂ ಅವನು ನಿನ್ನ ಒಳಿತನ್ನೇ ಬಯಸುತ್ತಿದ್ದಾನೆಂದು ತಿಳಿ. ಯಾಕೆಂದರೆ ಅವನು ಮೂಲತಃ ಕಲ್ಯಾಣಕಾರನಾಗಿದ್ದಾನೆ. ಆದುದರಿಂದ ಪರಮ ಸತ್ಯಕ್ಕೆ ಅನುರೂಪನಾಗಿರು ಹಾಗೂ ಅಸತ್ಯದಿಂದ ಸದಾ ದೂರವಿರು.

ಹೇ ಆತ್ಮೀಯರೇ, ವಾಕ್ಚಾತರ್ಯದ ಸಾಗರದಲ್ಲಿ ಮುಳುಗಿ ವಾಣಿಗೆ ಮತ್ತೊಮ್ಮೆ ಸ್ವೀಕಾರದ ರಾಜುಡುಪನ್ನು ದಯಪಾಲಿಸಲಾಗುವುದಿಲ್ಲ. ಉಪದೇಶದ ಅನುರೂಪದಲ್ಲಿ ವಿಷದೀಕರಿಸಿದ ಕೆಲವು ಕವನೋಕ್ತಿಗಳು ಅಲ್ಲಲ್ಲಿ ಬಿದ್ದು ವ್ಯರ್ಥವಾಗುತ್ತಿದ್ದವು. ಅವುಗಳಲ್ಲಿ ಕೆಲವನ್ನು ಆಯ್ದು ಲೇಖನಿಯಲ್ಲಿ ಬಂಧಿಯಾಗಿಸಲಾಗಿದೆ.

ಆಭರಣ–೨

'ದೇವವಾಣಿ'ಯ ಬಗ್ಗೆ

ಸಾಮಾನ್ಯವಾಗಿ ಮನುಷ್ಯನು ಚರ್ಚಿಸುವಾಗ, ದೇವವಾಣಿಯ ಸಂಬಂಧವು 'ಸ್ವಯಂ'ದಿಂದ ಇರುವುದಾಗಿ, ಹಾಗೂ ಅನ್ಯ ಸೃಷ್ಟಿಯಿಂದ ಅಲ್ಲವೆಂದು ವಿಶ್ವಾಸದಿಂದ ವಾದಿಸುತ್ತಾರೆ. ಇವರ ಈ ವಾದವನ್ನು ಕೇಳುಗನು ಸ್ವೀಕರಿಸಿದರೆ ಹರ್ಷಿಸುತ್ತಾರೆ. ಇಲ್ಲವಾದರೆ ಸಿಡುಕನ್ನು ಪ್ರದರ್ಶಿಸುತ್ತಾರೆ. ಆದರೆ ಚರ್ಚೆಯ ಮಧ್ಯೆ ಅವರಿಗೆ ಒಂದು ಅಕ್ಷರದ ಬಳಿಕ ಯಾವ ಮತ್ತೊಂದು ಅಕ್ಷರ ಬರುವುದೆಂದು ತಿಳಿದಿರುವುದಿಲ್ಲ. ಒಂದು ಶಬ್ದದ ನಂತರ ಬರುವ ಇನ್ನೊಂದು ಶಬ್ದ ಏನೆಂದು ಅರಿಯರು. ಅವರು ಇದನ್ನು ಅರಿತಿದ್ದರೆ, ಅವರ ವಾದವು ಸರಿ, ಇಲ್ಲವಾದರೆ ಅದು ತಪ್ಪು. ಓ ಆತ್ಮೀಯನೆ! ಈ ಮುತ್ತು ರತ್ನದಂತಹ ವಾಣಿ ಯಾವ ಗಣಿಯಿಂದ ಹೊರಬಂದಿದೆ, ಹಾಗೂ ದಿವ್ಯವಾಣಿಯ ಚಿಲುಮೆಯು ಯಾವ ಜಲ ಸೆಲೆಯಿಂದ ಹೊರಹೊಮ್ಮಿದೆ, ಇದನ್ನು ಆ ದೇವರ ಹೊರತಾಗಿ, ಬೇರ್ಯಾರು ಅರಿಯರು.

ನರನರದಲಿ ಹೇ, ಪ್ರೇಮಗುಲಾಬಿ ನೀನಿರುತ್ತಿರಲಿಲ್ಲ,
ಗೋಷ್ಠಿಯಲಿ ನನ್ನ ನಾಲಿಗೆಯಲಿ ನಿನ್ನ ಹೆಸರಿರುತ್ತಿರಲಿಲ್ಲ.

ಬುದ್ಧಿಮತ್ತೆಯ ಕಾರ್ಯಚಟುವಟಿಕೆಯು ವಿವಶವಾಗಿ ಈ ಹಂತವನ್ನು ತಲುಪತ್ತದೆ. ಅದೇನೆಂದರೆ ಮತ್ಸದಿಂದ ಮಾಹೆಯವರೆಗೆ, ಕೃತ್ತಿಕಾ ನಕ್ಷತ್ರ ಸಮೂಹದಿಂದ ಭೂತಳದ ಮಣ್ಣಿನವರೆಗೆ, ಒಂದು ವಾಣಿಯು ರೂಪಧಾರಣೆ ಮಾಡಿ, ವ್ಯಕ್ತ ವಿಶ್ವದಲಿ ವಿಕಾಸಗೊಂಡು ಜೀವ, ಜಗತ್ತು, ಹೃದಯ ಹಾಗೂ ಸಮಸ್ತ ವಿಶ್ವದಲಿ ಚೈತನ್ಯವು ಚೇತೋಹಾರಿಯಾಗುತ್ತದೆ.

ವಾಣಿಯಿಂದ ವ್ಯಕ್ತ, ವರ್ತಮಾನ ಭವಿಷ್ಯತ್ತಿನ ರಹಸ್ಯ,
ವಾಕ್ಚುತರತೆಯ ವಾಣಿ ಪಂಕ್ತಿಗಳಲಿ ಇಹುದು ಆತ್ಮಜನ ರಹಸ್ಯ.

ಅಗೋಚರ ವಾಣಿಯ ಸೆಲೆಯು ಹೊಳೆಯುತಿದೆ ಸತತ
ಒರೆಗ್ಹಚ್ಚಿ ಕಾಣಲಿಲ್ಲವಾದ ತರ್ಕದಿ ಇವನು.

ವಾಣಿಯು ಸೃಷ್ಟಿ ಚೇತನದ ದೈವೀ ರಹಸ್ಯ ಪ್ರಾಪ್ತಿ
ಅಡಗಿವೆ ಇದರಲ್ಲಿ ಸಹಸ್ರಾರು 'ಹಸನ್' ಹಾಗೂ 'ಕಮಾಲ' ರು

ವಾಣಿಯು ಇಹುದು ಕವಿ ಕಣ್ಣಿಗೆ ರತ್ನ ಬಹುಮೂಲ್ಯ
ಅದರ ತೇಜಸ್ಸಿನಲಿ ಸುಪ್ತವಾಗಿದೆ ಸೌಂದರ್ಯ ಪ್ರಖರ

ಕಣ್ಣ ಸಂಜ್ಞೆಯ ಒಗಟು ಬಿಡಿಸಿಲ್ಲ ಜ್ಞಾನದ ನೆರವಿಂದ
(ಆದರೂ) ಜೋಡಿಸಿದ ಬಹರಿ ಮಣ್ಣಿನ ಹಲವು ದೀಪ ಹಣತೆಗಳು.

ಆಭರಣ-೩

ದೈವಪರವಶತೆ (ಹಾಲ್) ಹಾಗೂ ತನ್ಮಯ ಸಂವಾದ (ಖ಼ಾಲ್)

ಹಜ್ರತ್ ಖ್ವಾಜಾ ಬಂದೇ ನವಾಜ್‌ರ ಸಂತತಿಯವರಾದ ಮಿಂಯಾ ಶಾಹ ರಜ಼ಖುಲ್ಲಾರವರು ತಮ್ಮ ವಿಶೇಷ ಶಿಷ್ಯರು ಹಾಗೂ ಅನುಯಾಯಿಗಳ ಜತೆ ಗೋಗಿಗೆ ದಯಾಮಾಡಿಸಿದ್ದರು. ಈ ಅಲ್ಪ ಪಕೀರನೂ ಸಹ ಅವರ ಸಾನಿಧ್ಯ ಸೌಭಾಗ್ಯ ಪಡೆಯಲು ಅವರ ಸನ್ನಿಧಿಯಲ್ಲಿ ಹಾಜರಾದನು. ಸೂಫಿ ಸಂತರ ಸ್ಥಿತಿ-ಗತಿ ವೃತ್ತಾಂತಗಳ ವಿವರಣೆಗಳ ವರ್ಣನೆ ಜಾರಿಯಲ್ಲಿತ್ತು. ಈ ಫಕೀರನನ್ನು ಕಂಡಾಗ ನುಡಿದರು- " ಈ ಪುಣ್ಯಭೂಮಿಯು (ಗೋಗಿ) ದೈವಾನುಗ್ರಹದ ಬಹುಮೂಲ್ಯ ಚಿನ್ನ-ಬೆಳ್ಳಿಯ ಗಣಿಯಾಗಿದೆ. ಹಾಗೂ ದೈವೀವಾಣಿಯ ನಿರಂತರ ಪ್ರವಾಹದ ಚಿಲುಮೆಯಿಂದ ಪಾವನವಾದ ಹಲವು ಸೂಫಿ-ಸಂತರ ನೆಲೆಯಾಗಿದೆ. ಹಲವರ ಸನ್ಮಾರ್ಗಗಾಮಿ ದೈವೀ ಆದೇಶಗಳು ಲಭ್ಯವಿದ್ದು, ಕೆಲವರದು ಲುಪ್ತವಾಗಿರುತ್ತವೆ. ನನಗೆ ಸಂಪೂರ್ಣ ವಿಶ್ವಾಸವಿದೆಯೇನೆಂದರೆ ಎಲ್ಲರೂ ಆ ಆದೇಶಾಮೃತಗಳನ್ನು ಜ್ಞಾನರೂಪದಲ್ಲಿ ಹೊಂದಿದವರಾಗಿದ್ದೀರಿ. ಆದರೆ ಅವುಗಳ ಲಿಖಿತ ರೂಪದ ಪಾಂಡುಲಿಪಿಗಳು, ಕಾಲದ ಸ್ಥಿತ್ಯಂತರದಿಂದ ಲುಪ್ತವಾಗಿರಬಹುದು. ಅವರ ಸೇವಕರಲ್ಲಿ ಯಾರೂ ಅವುಗಳ ಸೂಕ್ತ ರಕ್ಷಣೆಯನ್ನು ಮಾಡಲಿಲ್ಲ.

ದೈವೀಪರವಶತೆಯು (ಹಾಲ್), ದೈವ ಸಂವಾದದಿಂದಲೂ (ಖ಼ಾಲ್) ಸಾಕ್ಷಾತ್ಕಾರವಾಗುತ್ತದೆ, ಹಾಗೂ ದೈವೀ ಪರವಶತೆಯು, ದೈವೀ ಸಂವಾದದ ಕನ್ನಡಿಯಾಗಿರುತ್ತದೆ. ವ್ಯಕ್ತಿಯೊಬ್ಬನು ಸಂತನಾಗಿದ್ದು, ದೈವೀ ಪರವಶತೆರಹಿತನಾಗಿರುವುದು ಹಾಗೂ ಅವನ ದೈವೀಪರವಶತೆ, ದೈವೀ ಸಂವಾದದಿಂದ ಸಂಬಂಧ ಹೊಂದದಿರುವುದು ವಿಚಿತ್ರ ಸಂಗತಿಯಾಗಿದೆ. ವ್ಯಕ್ತಿಯೊಬ್ಬನು ಭಾವಪರವಶತೆಯ ಉನ್ಮಾದ ಸ್ಥಿತಿಯಲ್ಲಿದ್ದು, ದೈವೀ ಸಂವಾದ ಪ್ರಕಟಗೊಳಿಸದಿದ್ದರೆ, ಅವನ ಭಾವಪರವಶತೆಯು ಸಂಶಯಾಸ್ಪದವಾಗಿದೆ. ಅರ್ಥಾತ್ ಅವನು ದೈವೀಪರವಶತೆಗೆ ಅನರ್ಹನಾಗಿದ್ದಾನೆ.

ಓ ಸಾದಾತ್ ವಂಶದ ಪ್ರತಿನಿಧಿಗಳೇ, ಹಲವರು ದೈವೀ ಪರವಶತೆಯನ್ನು

ದೈವೀ ಸಂವಾದದ ಮೇಲೆ ಪ್ರಾಮುಖ್ಯತೆ ನೀಡುತ್ತಾರೆ. ಈ ಅಲ್ಪಜ್ಞಾನಿಯು ತನ್ನ ಗುರುಹಿರಿಯರ ಸಂಭಾಷಣೆ ಹಾಗೂ 'ಸಾಮಿ' ಯ ವಾದದ ಪ್ರಕಾರ ದೈವೀ ಪರವಶತೆಯು ತೀರಾ ಸರಳವಾಗಿದ್ದು, ದೈವೀ ಸಂವಾದವು ಅತೀ ಕಷ್ಟಕರವೆಂದು ಅಭಿಪ್ರಾಯ ಹೊಂದಿರುತ್ತಾನೆ. ಆದುದರಿಂದ ವ್ಯಕ್ತಿಯೊಬ್ಬ ಪ್ರಯತ್ನ ಪೂರ್ವಕವಾಗಿ ಸಹಜ ಪ್ರವೃತ್ತಿಗಳನ್ನು ತ್ಯಜಿಸಿದರೆ, ಜನಸಾಮಾನ್ಯರು ಈ ಅವಸ್ಥೆಯನ್ನು ದೈವೀಪರವಶತೆಯೆಂದು ಭಾವಿಸಿ, ಹೃದಯದಾಳದಿಂದ ಅವನ ಸೇವೆಗೈಯುವರು.

ದೈವಿ ಸಂವಾದವು ಸಮಸ್ತ ರೀತಿಯಿಂದಲೂ ಸಾರ್ವತ್ರಿಕ ಅರ್ಹತೆಯನ್ನು ಹೊಂದಿರಬೇಕು. ಯಾಕೆಂದರೆ ದೇವರ ಯೋಗ್ಯ ಆಜ್ಞಾಪಾಲಕರು, ಈ ದೈವಿ ಸಂವಾದವನ್ನು ಸ್ವೀಕರಿಸುವಂತಾಗಬೇಕು, ಹಾಗೂ ಮೆಚ್ಚುಗೆಗೆ ಪಾತ್ರವಾಗಿರಬೇಕು.

'ಖ಼ಾಲ್'ಗಿಂತ ಶ್ರೇಷ್ಠವೆಂದು ಭಾವಿಸುವರು ಹಾಲ್'
ಆದರೆ ನನ್ನ ಮನದೊಳಗಿಹುದು ಬೇರೆಯೇ ಖ಼ಯಾಲ್

'ಆರಿಫ್'ಗೆ ಅತಿ ಸರಳವು 'ಹಾಲ್'ನ ಪ್ರಾಪ್ತಿ,
ಇರುವವು ಅನಿವಾರ್ಯತೆಗಳು ಹಲವು 'ಖಾಲ್'ನ ಪ್ರಾಪ್ತಿಗೆ

'ಹಾಲ್'ನ ಪ್ರಾಪ್ತಿಗೆ ಅನಿವಾರ್ಯವು ತನ್ಮಯತೆ,
'ಖಾಲ್'ನ ಶೋಭೆಯು ಶತಯುಕ್ತಿಗಳ ಕಂತೆ.

ಮುಳಗುವನು ಯಾರು ಭ್ರಾಂತಿ ಸಾಗರದಲಿ
'ಹಾಲ್' ಆಗುವುದು ಅವನ ಕೈವಶದಲಿ

ದೈವಿವಾಣಿಯು ಆಗದು ಇದರಿಂದ ಪ್ರಕಟ
ಆಗುವನು ಅವನ ಕ್ಲೇಶದಲಿ ಬಂಧಿ

'ಖಾಲ್' ಹೊರತು 'ಹಾಲ್' ಇಲ್ಲ ಉಚಿತ
ರೆಕ್ಕೆವಿರದ ಪಕ್ಷಿ ಇದ್ದರೇನು ಉಚಿತ

'ಬಹರಿ' ನೀನು ಸೂಕ್ತನಲ್ಲ 'ಹಾಲ್' ಹಾಗೂ 'ಖ಼ಾಲ್' ಗೆ
ಇವರೆಡರಿಂದ ಹೊರತು ಹುಲುಮಾನವ ನೀನು.

ಆಭರಣ–೪

ಕಾಲಪ್ರಭಾವದ ವಿವರಣೆಯಲ್ಲಿ

ಪ್ರತಿಯೊಂದು ಗುರಿ ಹಾಗೂ ಉದ್ದೇಶ ಸಾಧನೆಗೆ ಒಂದು ಕಾಲ ಹಾಗೂ ಯುಗ ನಿರ್ದಿಷ್ಟವಾಗಿದೆ. ಅದರಲ್ಲಿ ಅದು ಪರಿಪೂರ್ಣವಾಗುತ್ತದೆ. ಯಾಕೆಂದರೆ ಸತ್ಯಾನ್ವೇಷಣೆಯ ಅಭಿಲಾಷಿಯಾದ ವ್ಯಕ್ತಿಯೊಬ್ಬನು, ಅಸತ್ಯದ ಈ ಅಲ್ಪನನ್ನು, ಸತ್ಯದ ರಹಸ್ಯಗಳನ್ನು ವರ್ಣಿಸಿ ವಿವರಿಸುವ ಕೋರಿಕೆ ಮತ್ತು ಪ್ರಾರ್ಥನೆ ಮಾಡಿದನು. ಆಗ ನಾನು ನುಡಿದೆ, ಫಕೀರನಿಗೆ ಒಂದು ನಿರ್ದಿಷ್ಟ ಕಾಲದಲ್ಲಿ 'ಅವನ' ದಿವ್ಯ ಭಾವಪರವಶತೆಯ ಅನುಭವವಾಗುತ್ತದೆ. ಆ ಸಮಯದಲ್ಲಿ ಅವನು ಏನನ್ನು ನುಡಿಯುತ್ತಾನೆ, ಇದರ ಪ್ರಭಾವವು ಬಹುಬೇಗವಾಗುತ್ತದೆ. ಇದರ ಭಾವ ಸಂವಾದವು ಉದ್ದೇಶರಹಿತವಾಗಿರುವುದಿಲ್ಲ. ಹೀಗಾಗಿ ಒಂದು ಸಲ ನಾನು ವ್ಯಕ್ತಿಯೋರ್ವನನ್ನು ಹಾಜರಾಗಲು ಆಜ್ಞಾಪಿಸಿದೆ. ಹಾಗೂ ಸಂಭಾಷಣೆಯ ಮಧ್ಯೆ ಮೊಜ್ಜನನ 'ಆಜ಼ಾನ್' ಕರೆಯಾಯಿತು. ಸದರಿ ಆಪೇಕ್ಷಿಯು ನಮಾಜ್ ಮಾಡಲು ಅನುಮತಿ ಕೋರಿದನು. ನಾನು ನುಡಿದೆ 'ಅಲ್‌ಹಮ್ದು ಲಿಲ್ಲಾಹ್', ಫಕೀರನು ಸಹ ವುಜೂಗಾಗಿ ಎದ್ದನು. ನಮಾಜನ್ನು ಪೂರ್ಣಗೊಳಿಸಿದ ನಂತರ ಅವನು ಎರಡು ಮೂರು ಜನರ ಜತೆ ಹಿಂತಿರುಗಿ ಬಂದನು. ಆಗ ನಾನು ನುಡಿದೆ, ಮತ್ತೊಂದು ಸಮಯದಲ್ಲಿ ಮುಂದುವರೆಸೋಣ.

ಶುಭ ಗಳಿಗೆಯಾದರೆ, ಆನಂದ ಭಾವದಲ್ಲಿ,
ಮಾಡುವೆನು ನಮಾಜ್ ಆಜಾನ್ ಇಲ್ಲದೆಯೂ ನಾನು.

ಆದರೆ ಪಾನಮತ್ತನಾಗಿ ಪ್ರಮತ್ತಾದಾಗ,
ದೂಷಣೆಯ ಸಂದೇಹವನ್ನು ಪರಿಗಣಿಸುವುದಿಲ್ಲ.

ಓ ಆತ್ಮೀಯನೇ, ಅಕಸ್ಮಾತ್ ನನ್ನನು ಕೇಳಿದರೆ ಇದು ಸಹ ನಮಾಜಿನಿಂದ ವರ್ಜಿತವಲ್ಲವೆಂದು ನುಡಿಯುವೆ, ಯಾಕೆಂದರೆ ಪರಂಸತ್ಯದ ನಾಮದ ಗೌರವಾರ್ಪಣೆಯೇ ಮ್ವಾರಿಫತ್ ಪ್ರಾಪ್ತಿಯ, ಅರ್ಥಾನುಸಾರವಾಗಿ ನಿಜವಾದ ನಮಾಜನ್ನು ಮಾಡುವುದಾಗಿದೆ. ನಮಾಜನ್ನು ನಿಯಮಿತ ಸಮಯದ ಹೊರತಾಗಿಯೂ ಪರ್ಯಾಯವಾಗಿ ಬೇರೆ ಸಮಯದಲ್ಲಿ ಮಾಡಬಹುದಾಗಿದೆ.

ಆದರೆ ಸಮಯದ ಖ಼ಜಾ (ತಪ್ಪಿಸುವಿಕೆ) ಅಸಾಧ್ಯವಾಗಿವೆ, ಯಾಕೆಂದರೆ ಇದರ ಅವಲಂಬನವು ಕೇವಲ ಅಗೋಚರದ ಮೇಲಿದೆ. ಮನುಷ್ಯನು ಕೇವಲ ಮ್ವಾರಿಫತ್‌ನ

ಪ್ರಾಪ್ತಿಗಾಗಿ ಹುಟ್ಟಿಸಲ್ಪಟ್ಟಿದ್ದಾನೆ, ಹಾಗೂ ಪ್ರತಿ ವಿಷಯಕ್ಕೆ ಒಂದು ಸಮಯ ನಿರ್ದಿಷ್ಟವಾಗಿದೆ. ಕೆಲವೊಂದು ವಿಷಯುಗಳನ್ನು ಐದು ಜನರ ಸಮುಸ್ತ ನುಡಿಯಬಹುದಾಗಿದೆ. ಆದರೆ ಆರು ಜನರ ಬಳಿ ಅಲ್ಲ! ಕೆಲವೊಂದು ವಚನಗಳನ್ನು ನಾಲ್ವರ ಸಮ್ಮುಖ ಪ್ರಕಟಿಸಬಹುದೇ ವಿನಃ ಐದರ ಸಮ್ಮುಖದಲ್ಲಿ ಅಲ್ಲ. ಕೆಲವು ಮರ್ಮಗಳನ್ನು ಮೂರು ಜನರ ಬಳಿ ವಿವರಿಸಬಹುದೇ ವಿನಃ ನಾಲ್ಕು ಜನರ ಬಳಿ ವಿವರಿಸುವುದು ಸಾಧ್ಯವಿಲ್ಲ. ಕೆಲವೊಂದು ರಹಸ್ಯಗಳನ್ನು ಇಬ್ಬರ ಬಳಿ ಪ್ರಸ್ತಾಪಿಸಬಹುದೇ ವಿನಃ ಮೂರನೆಯ ವ್ಯಕ್ತಿಯ ಬಳಿ ಅಲ್ಲ. ಇಂಥ ಸಮಯದಲ್ಲಿ ದೈವದೂತರಾದ ಜಿಬ್ರಾಯಿಲ್‌ರು ಆಗಮಿಸಿದರೂ ಅವರು ಹೊರಟು ಹೋಗುವವರೆಗೂ ಏನನ್ನೂ ಪ್ರಕಟಿಸಲು ಸಾಧ್ಯವಿಲ್ಲ ಎಂದು ಹೇಳಬಹುದು. ಇದರಿಂದಾಗಿ ಅವರು ಹೊರಟು ಹೋಗಬಹುದು. ಯಾಕೆಂದರೆ ದೈವಾಜ್ಞೆಗಳು ಇದೇ ರೀತಿಯಾಗಿವೆ.

ದೈವನು ಪ್ರಾರ್ಥನೆಯ ಪ್ರಾಪ್ತಿಗಾಗಿ,
ನಿಶ್ಚಿತ ಸಮಯವನ್ನು ನಿರ್ಧರಿಸಿದ್ದಾನೆ.

ಆಗುವುದು ವ್ಯಕ್ತ ಅದು ಆ ಸಮಯದಲ್ಲೆ,
ಅದು ಶುಭ ಕಾರ್ಯವಿರಲಿ, ಅಥವಾ ಇರಲಿ ಅಶುಭ.

ಈ ತರಹ ದೈವವಾಣಿಯ ಸಮಯವೂ ನಿಗದಿ,
ಎಲ್ಲಾ ಸಮಯವೂ ಅಲ್ಲ ಎಲ್ಲಾ ಕ್ರಿಯೆಗಳಿಗೆ.

ಆಗುವುದು ಅದು ಫಲಕಾರಿ ಕೆಲವೊಮ್ಮೆ,
ಸರ್ವಥಾ ಆಗದು ಅದು ಮಗದೊಮ್ಮೆ.

ಕೆಲವೊಮ್ಮೆ ಆಹ್ಲಾದಕರ ಬೀಸುವುದು ತಂಗಾಳಿ,
ಆಗುವುದು ಮಗದೊಮ್ಮೆ ಭೀಕರ ಬರುಗಾಳಿ.

ಕೆಲವೊಮ್ಮೆ 'ಬಹರಿ'ಯ ವಚನಗಳು ಲದ್ದಿಯಂತೆ,
ಆದರೆ ಮಗದೊಮ್ಮೆ ಸುಗಂಧಿತ ಪನ್ನಂಬರದಂತೆ.

'ಹಾಲ್' – ದೈವೀಪರವಶತೆ
'ಖಾಲ್' – ದೈವೀ ಸಂವಾದ

ಆಭರಣ-೫

ಮ್ಹಾರಿಫತ್‌ನ ರಹಸ್ಯಜ್ಞಾನ ಶೋಧದಲಿ

ಈ ಕ್ಷಣಿಕ ಲೋಕದಲ್ಲಿ ಆನೆಯಿಂದ ಸೊಳ್ಳೆಯವರೆಗೆ ಸಮಸ್ತ ಜೀವಿಗಳು, ಯಾವ ರೀತಿ ಇರಬೇಕೋ ಹಾಗೆಯೇ ಇವೆ. ದೈವೀಕಾಂಕ್ಷಿಯೊಬ್ಬ ಸಂಪೂರ್ಣವಾಗಿ ನಾಶಪಡಿಸಲ್ಪಟ್ಟನಾದರೂ, ಅವನು ಕೆಲವೊಮ್ಮೆ ದೇವರ ಶೋಧದ ಇಚ್ಛುಕನಾಗಿರುತ್ತಾರೆ ಆದರೆ ಮಗದೊಮ್ಮೆ ವಿಷಯಕಾಂಕ್ಷಿಯಾಗಿರುತ್ತಾನೆ. ಆದುದರಿಂದ ಅವನ ಮ್ಹಾರಿಫತ್ ('ಪರಂಜ್ಞಾನ') ಸಂಪೂರ್ಣ ಜಲಾವೃತ್ತ ನದಿ ಮತ್ತು ಬಟ್ಟ ಬರಿದಾದ ಅರಣ್ಯವಾಗಿದೆ ಮತ್ತು ದೃಷ್ಟಿಯಿಂದ ಅಗೋಚರವಾಗಿದ್ದು, ಪ್ರಾಪ್ತಿಯಾಗುವಂತಹದಿದೆ. ಮಹಮೂದ್ ಬಹರಿಯು ರಹಸ್ಯೊದ್ಘಾಟನೆಯಲ್ಲಿ ಜಿಪುಣತೆಯನ್ನು ತೋರುತ್ತಾನೆ ಎಂದು ದೂಷಿಸಲಾಗುತ್ತಿದೆ. ಅಲ್ಲಾಹನ ಅಭಯವಿರಲಿ ದೈವೀಸತ್ಯವು ಮರೆಮಾಚುವವರು (ಕಾಫೀರ್) ಸತ್ಯನಿಷೇಧಿಯಾಗಿದ್ದಾರೆ. ಅದರೆ ಮಾಡುವುದೇನು, ಆಕಾಂಕ್ಷೆಯ ಹಾಗೂ ಪ್ರಬಲ ಬಯಕೆಯ ಪ್ರಾಪ್ತಿಯ ಕೊರತೆಯಿಂದ ಅವನ ಮನಸ್ಸಾಗುವುದಿಲ್ಲ.

ಮಾರ್ಗಭ್ರಷ್ಟನಿಗೆ ದಾರಿ ತೋರವವರ್‍ಯಾರು,
ಸತ್ಯಪ್ರಾಪ್ತಿಯಿಂದ ದೂರವಿದ್ದಾರೆ ಮನುಜರು

ಮಿತ್ರ ರಹಿತನಾಗಿ ಜೀವಿಸಿದರೆ ಅವನು
ಪ್ರಾಣಿಯಲ್ಲ, ಅದರ ಬಾಲನಾಗಿದ್ದಾನೆ ಅವನು.

ಆಭರಣ-೬

ರಹಸ್ಯಜ್ಞಾನದ (ಮ್ಹಾರಿಫತ್‌ನ) ಪ್ರಾಪ್ತಿಗೆ ಲೋಕ ಪರಿತ್ಯಾಗ ಕಡ್ಡಾಯವಲ್ಲ

ಅಕಸ್ಮಾತ್ ನೀನು ಸಾಮ್ರಾಜ್ಯದ ಸಿಂಹಾಸನದ ಮೇಲೆ ವಿರಾಜಮಾನವಾಗಿದ್ದರೆ, ಅಥವಾ ಯಾವುದೇ ಅಧ್ಯಕ್ಷೀಯ ಪಟ್ಟ ಅಲಂಕರಿಸಿದ್ದರೆ, ಇದರ ಹೊರತಾಗಿಯೂ ನಿನ್ನ ಮನವು ಜನಸೇವೆಗಾಗಿ ಉತ್ಸುಕವಾಗಿದ್ದರೆ, ಇವೆಲ್ಲವೂ ನಿನಗೆ ಶುಭದಾಯಕವಾಗಲಿ. ಜಗತ್ತು ಹಾಗೂ ಸಂತಾನ ಮತ್ತು ಕುಟುಂಬ ಜತೆಗಿನ ಸಂಬಂಧಗಳನ್ನು, ರಹಸ್ಯಜ್ಞಾನ ಪ್ರಾಪ್ತಿಗಾಗಿ ಪರಿತ್ಯಾಗ ಮಾಡುವುದನ್ನು ದರ್ವೇಶರು ಅರಿಯರು, ಬದಲಾಗಿ ಈ

ಸಂಬಂಧವನ್ನು ಇಮ್ಮಡಿಗೊಳಿಸಿ, ಅದನ್ನು ಸೂಕ್ತ ಅಲಂಕಾರ ಹಾಗೂ ಸೊಬಗಿನಿಂದ ಮನೋಹರಗೊಳಿಸಿ, ಅವರ ಜತೆ ಸುಖ-ಸಂಭ್ರಮದಿಂದ ಜೀವನವನ್ನು ವ್ಯಯಿಸುತ್ತಾರೆ. ಆದುದರಿಂದ ದಾರಿದ್ರ್ಯವು ಮನುಷ್ಯನಿಗೆ ಭೂತ, ಪಿಶಾಚಿಯಿಂದ ಆವೃತ್ತಗೊಳಿಸಿ ದುಃಖಿತನಾಗುವಂತಾಗಿಸಿ, ಅದರಿಂದಾಗಿ ಮತಿಭ್ರಮಿತನನ್ನಾಗಿಸುತ್ತದೆ ಹಾಗೂ ಅವನ ಮನಸ್ಸನ್ನು ವಿಹ್ವಲಗೊಳಿಸುತ್ತದೆ. ಚಿತ್ತವು ಶಾಂತವಾಗಿರದ ಕಾರಣ, ಅವನ ಬದುಕು ಅಸ್ತವ್ಯಸ್ತವಾಗುತ್ತದೆ. ಅವನ ಬಾಹ್ಯಸ್ಥಿತಿಯೂ ಪ್ರಶಾಂತವಾಗಿರುವುದಿಲ್ಲ, ಆಂತರ್ಯವೂ ನೆಮ್ಮದಿಯಿಂದಿರುವುದಿಲ್ಲ. ಆದರೂ ಮನುಷ್ಯನು ವೈಭೋಗ ಹಾಗೂ ಸುಖ-ಶಾಂತಿಯಿಂದ ಜಾಗೃತನಾಗಿರಬೇಕಾಗುತ್ತದೆ. ಲಾಭ-ನಷ್ಟಗಳಿಂದ ಜ್ಞಾತನಾದವನಿಗೆ ಇದು ಸುಸ್ಪಷ್ಟವಾಗಿ ತಿಳಿದಿರಿಲೇಬೇಕು, ಅದೇನೆಂದರೆ ಅವನಿಗೆ ಒಂದು ದಿನ ಸಾಯಲೇಬೇಕಾಗಿದೆ. ಹಾಗೂ ಇಲ್ಲಿಂದ ಏನನ್ನೂ ಜತೆಗೆ ಒಯ್ಯುವಂತಿಲ್ಲ.

ಮನುಜ ಮತ್ತು ತುರಗ, ಇರುವವು ಸದಾ ಸ್ವಪ್ನದಲಿ,
ಮೃತ್ಯುವಿನಿಂದ ಜ್ಞಾತ ಇವನು, ಯುದ್ಧದಿಂದ ಅವನು.

ಆದರೆ ಹಲವು ಮಹನೀಯರು, ಇದೇ ಲೌಕಿಕ ಏಣಿಯಿಂದಲೇ ತಮ್ಮ ಸಂಕಲ್ಪದ ಸೌಧವನ್ನು ಏರುತ್ತಾರೆ, ಇದೇ ಶಿಶಿರದ ಎಲೆಯುದುರುವ ಕಾಲದಿಂದ ತಮ್ಮ ಆಶೋತ್ತರದ ಹೂವುಗಳನ್ನು ಆಯ್ದುಕೊಳ್ಳುತ್ತಾರೆ. ನಿಸ್ಸಂದೇಹವಾಗಿ 'ಫಕೀರಿ'ಯು ಉತ್ತಮವಾಗಿದೆ ಹಾಗೂ 'ಉಪವಾಸ'ವು ಅತ್ಯುತ್ತಮವಾಗಿದೆ. ಆದರೆ ಅವನ ಮನೋದಾರ್ಢ್ಯವು ಉನ್ನತವಾಗಿದ್ದು, ಅನನ್ಯ ಸಂತೃಪ್ತಿ ಭಾವ ಹೊಂದಿರಬೇಕು. ತಾಳ್ಮೆ ಹಾಗೂ ಸಹನೆಯ ಸಿರಿಯನು ಹೊಂದಿಲ್ಲದ ವ್ಯಕ್ತಿಗೆ ಖಂಡಿತ ಇದು ಸೂಕ್ತವಲ್ಲ. ಇಂಥ ವ್ಯಕ್ತಿಯ ಮನದೊಳಗೆ ಪ್ರಾಣ ಹಾಗೂ ವಿಶ್ವಾಸದ ದೃಢತೆಯಿರದಿದ್ದರೆ, ಕಂಗಾಲನಾದ ಅವನಾದರೂ ಏನು ಮಾಡಬಹುದಾಗಿದೆ. ಎಲ್ಲಿಯವರೆಗೆ ಯಾವುದೇ ವ್ಯಕ್ತಿ ಪರ್ವತದೆತ್ತರದ ಸಹನೆಶೀಲ ಹೃದಯ ಹಾಗೂ ಸಹಿಷ್ಣುಶೀಲ ಮನೋಧೈರ್ಯ ಸಿದ್ಧಿ ಪ್ರಾಪ್ತನಾಗಿರುವುದಿಲ್ಲವೋ, ಅಲ್ಲಿಯವರೆಗೆ ಪವಿತ್ರಾತ್ಮ ಜಗದೀಶ್ವರನು, ಆ ವ್ಯಕ್ತಿಗೆ ದಾರಿದ್ರ್ಯದ ಭಯಂಕರ ಅಗ್ನಿಕುಂಡದಲ್ಲಿ ಎಸೆಯುವುದಿಲ್ಲ. ಆ ಹಿಂದೆ ಒಂದು ದಿನ ದೈವಿ ಪ್ರೇರಣೆಯು ಅಶರೀರವಾಣಿಯಾಗಿತ್ತು. ಅದೇನೆಂದರೆ ಹಸಿದವನಿಗೆ ಮಾತ್ರ ದೇವರು ಗೋಚರಿಸುತ್ತಾನೆ, ಉದರ ಸಂತೃಪ್ತನಿಗಲ್ಲ. ಅವನು ತನ್ನ ವಿಚಾರದಲ್ಲಿ ಸರಿ ಇದ್ದಾನೆ. ಇವನು ತನ್ನ ಸ್ಥಿತಿಯಿಂದ ನಿಜವಾಗಿದ್ದಾನೆ. ಆದುದರಿಂದ ಗುರಿ ಪ್ರಾಪ್ತಿಯಲ್ಲಿ ಯಾವ ಮಾರ್ಗ ಸುಲಲಿತವೂ, ಕಾರ್ಯಸಾಧುವೂ ಆಗಿದೆಯೋ ಅದನ್ನು ಆಯ್ಕೆ ಮಾಡುವುದು ಸೂಕ್ತವಾಗಿದೆ.

ಓ ಆತ್ಮೀಯನೇ, ಈಶ್ವರನ ದಿವ್ಯಜ್ಞಾನವನ್ನು ಅನ್ವೇಷಣೆ ಹಾಗೂ ಶ್ರಮ-ಸಂಕಷ್ಟದಿಂದ ಪ್ರಾಪ್ತಿಸಿಕೊಳ್ಳು. ಸಮಸ್ತ ಸೂಫಿಗಳು, ಸಂತರು, ಪಾವನ ಪುರುಷರು,

ಮಹಾತ್ಮರು, ಅವತಾರಿಗಳು, ಸಾಧಕರ (ಆರೀಫ್‌ರ) ಅವಲಂಬಿತರಾಗಿದ್ದಾರೆ. ಆದರೆ ಸಾಧಕರು ಈ ಸಮಸ್ತದಿಂದ ಪರಿತ್ಯಾಗಿಗಳಾಗಿದ್ದಾರೆ. ಮನುಷ್ಯನೊಬ್ಬನು ಅಗಣಿತ ಚಿನ್ನ, ಬೆಳ್ಳಿ ಹಾಗೂ ಅಸಂಖ್ಯಾತ ಆನೆ-ಕುದುರೆಗಳನ್ನು ಸಂಗ್ರಹಿಸಿ, ಮ್ವಾರಿಫತ್‌ನ ಸಂಪತ್ತಿನಿಂದ ಅವನ ಜೇಬು ಖಾಲಿಯಾಗಿದ್ದರೆ, ಇದಕ್ಕೆ ಸಂಬಂಧಿಸಿದಂತೆ ನನ್ನ ವಿಚಾರವೆಂದರೆ ಈ ಕರ್ಮಲೋಕದಲ್ಲಿ ನಶ್ವರ ದೇಹದ ಅವನು ಜನ್ಮ ತಾಳಿಯೇ ಇಲ್ಲ, ಬದಲಾಗಿ ಇನ್ನೂ ಆ ಪರಲೋಕದಲ್ಲೇ ಇದ್ದಾನೆ.

ಓ ಸ್ನೇಹಿತನೇ! ಯಾರಿಗೋಸ್ಕರ ನೀನು ನಿನ್ನನ್ನು ಅಗ್ನಿ ಹಾಗೂ ಜಲ ಪ್ರವಾಹಕ್ಕೆ ಒಪ್ಪಿಸಿದೆ ಮತ್ತು ನಿನ್ನ ಮನೋ-ನೆಮ್ಮದಿಯ ಪರಿಕರಗಳನ್ನು ಧ್ವಂಸಮಾಡಿದೆ. ಈ ನಶ್ವರ ಲೋಕದಲ್ಲಿ ಹಾಗೂ ಅನಂತ ವಿಶ್ವದಲ್ಲಿ ನೀನು ನಿನ್ನ ಕಲ್ಯಾಣವನ್ನು ಬಯಸುತ್ತಿದ್ದರೆ, ನೀನು ದೇವರ ಜತೆ ಅಧಿಕ ಒಲವನ್ನು ಹೊಂದು ಹಾಗೂ ಸ್ನೇಹ ಸಂಬಂಧವನ್ನು ಸ್ಥಾಪಿಸು. ಇದು ಮಾವಿನ ಹಣ್ಣಿಗಿಂತಲೂ ಅಧಿಕ ಸಿಹಿಯಾಗಿದೆ. ಇದರಿಂದಾಗಿ ನೀನಿರುವ ಸ್ಥಳದಲ್ಲಿ ಅವನು ನಿನ್ನ ಜೊತೆಗಾರನಾಗಿರುತ್ತಾನೆ. ಈ ಸಂಬಂಧವನ್ನು ಇಂದ್ರಾಯಣರಹಿತವಾಗಿ ಮಾಡು (ಇಂದ್ರಾಯಣ ಫಲವು ಹೊರನೋಟಕ್ಕೆ ಸಾಮಾನ್ಯವಾಗಿದ್ದು, ಒಳಗೆ ಅತೀವ ಕಹಿಯಾಗಿರುತ್ತದೆ) ಹಾಗೂ 'ಅವನ' ಜತೆ ಸಹಗಮನವು ಒಂದು ನಿಶ್ಚಿತ ಸ್ಥಾನದವರೆಗೆ ಸೀಮಿತವಾಗಿದೆ. ದೇವರ ಜೊತೆ ಅಫೀಮು ವ್ಯಸನಿಯಂತೆ ಮಧುರವಾದ ಪ್ರೇಮಭಾವ ಹೊಂದು ಹಾಗೂ ಇದರ ರಸದಿಂದ ನೊಣದಂತೆ ದ್ವೇಷಿಸು.

ಅರ್ಥಾತ್ ಸದಾ ಆ ಸತ್ಯ ಹೃದಯಶಾಲಿಯ ಕಡೆ ಗಮನಶಾಲಿಯಾಗಿರುವಂತೆ ಆತ್ಮವನ್ನು ಆ ದಿಶೆಯಲ್ಲಿ ಪ್ರವೃತ್ತಗೊಳಿಸು. ಯಾಕೆಂದರೆ ಆ ಪರಂ - ನಿರೀಕ್ಷಕನ ಗಮನವು ಸದಾ ನಿನ್ನ ಹೃದಯದ ಮೇಲಿದೆ. ನನ್ನ ವಚನಗಳು ಪ್ರಾಜ್ಞನಿಗೆ ಹೊಳೆಯುವ ಮುತ್ತುಗಳಿಗಿಂತಲೂ ಅಧಿಕ ಅಮೂಲ್ಯವಾಗಿವೆ. ಆದರೆ ಅಜಾಗರೂಕನಿಗೆ ಕವಡೆಯ ಸಮಾನವೂ ಅಲ್ಲ.

ಓ ದೇವರೇ, ನೀನು ಸದಾ ದೇವನಾಗಿರು,
ಅಲ್ಲಾಹನು ನಿನ್ನಿಗಿಂತ ಇರುವುದಿಲ್ಲ ಬೇರೆ,

ಇದರ ಮರ್ಮವನ್ನು ಕೇಳುವುದಾದರೆ, ನೀ ಅರಿ,
ನಿನ್ನ ಶಿರವನ್ನು ಅವನ ಮಾರ್ಗದಲಿ ಇರಿಸು

ಆಭರಣ–೭

‘ಶರೀಯತ್’ನ (ಆತ್ಮಶುದ್ಧಿ ಕಾಂಡದ) ವರ್ಣನೆ ಬಗ್ಗೆ

ತರೀಖ಼ತ್ (ಕರ್ಮಕಾಂಡ) ಹಾಗೂ ಹಕೀ಼ಕತ್ (ಬ್ರಹ್ಮಕಾಂಡ)ಗಳು ಶರೀಯತ್‌ನ (ಆತ್ಮಶುದ್ಧಿ ಕಾಂಡ) ಅಧೀನವಾಗಿವೆ. ಈ ಅರ್ಥದಲ್ಲಿ ಜನರು ಸಂಸ್ಥಾಪಿತ ವಸ್ತುಸ್ಥಿತಿಯ ಶೋಧದಲ್ಲಿರುತ್ತಾರೆಯೇ ವಿನಃ ನಾಸ್ತಿಗೊಳಿಸಲ್ಪಟ್ಟ ಸ್ಥಿತಿಯ ಬಗ್ಗೆ ಅಲ್ಲ. ಶರೀಯತ್‌ನ (ಆತ್ಮಶುದ್ಧಿ) ಸತ್ಯಶೋಧನೆಯಲ್ಲಿ ‘ಸತ್ಯ’ದ ಅಸ್ತಿತ್ವವು ಪ್ರಮಾಣೀಕೃತವಾಗುತ್ತದೆ. ಇದರ ನಂತರದ್ದು, ತರೀಖ಼ತ್‌ನ (ಕರ್ಮಕಾಂಡ) ಸ್ಥಿತಿಯಾಗಿದ್ದು, ಇದರಲ್ಲಿ ‘ಸತ್ಯ’ ಶೋಧನೆಯು ಕಡ್ಡಾಯವಾಗಿದೆ. ಆದುದರಿಂದ ನಾಸ್ತಿಕನು (ದಹರಿಯಾ) ಸತ್ಯ ಸಾನ್ನಿಧ್ಯದ ಅಸ್ತಿತ್ವದ ಪ್ರಾಪ್ತಿಯ ಅಂಗೀಕಾರ ಸಮ್ಮತಿ ಹಾಗೂ ಒಡಂಬಡಿಕೆಯನ್ನು ಮಾಡುವುದಿಲ್ಲ.

ಶರೀಯತ್ತನು ನೀ ಜೀವದ ಶ್ರಮವೆಂದು ತಿಳಿ
‘ಶರೀಯತ್’ ನಿಜದಲ್ಲಿ ದಿವ್ಯಜ್ಞಾನದ ತಿರುಳು

ನಾಳೆಯ ಮೂಲೋದ್ದೇಶವಾಗಿದೆ ಶರೀಯತ್
ಪುಷ್ಪ ಪರಿಮಳದ ಫಲಪ್ರಾಪ್ತಿಯ ಹಕೀಕತ್

ಶರೀಯತ್‌ನ ಸಂಕೇತವು ಪ್ರಕಾಶಮಾನವಾದಾಗ
ಇದರಿಂದ ತೊಲಗಿತು ನಾಸ್ತಿಕತೆಯ ಕತ್ತಲು

‘ಬಹರಿ’ ನಿನಗಿರಲಿ ಶರೀಯತ್ತಿನ ನಿಜಪ್ರಜ್ಞೆ
ಮನದೊಳಗೆ ನೆಲಸಲಿ ‘ಏಕತ್ವ’ದ ಚೈತನ್ಯ.

ಆಭರಣ–೮

‘ಪರಂ ಸತ್ಯ’ದ ನಿರ್ಮಲತೆಯನ್ನು ಅರಿಯುವುದು

ಕುರಾನಿನ ದೈವಾಜ್ಞೆಗಳು ಹಾಗೂ ಗೌರವಾನ್ವಿತ ವಚನಗಳಿಂದ ಪ್ರಮಾಣಿತವಾಗುವುದೇನೆಂದರೆ ‘ಪರಂ ಸತ್ಯ’ವು ‘ಜಿಲ್ಲತ್ – ಅಜ್ಮತ್’ (ಪ್ರಕಾಶವೂ, ಮಹೋನ್ನತವೂ)ವಾಗಿದ್ದು, ಸಮಸ್ತ ಪದಾರ್ಥಗಳಲ್ಲಿ ಧಾರಣವಾಗಿದೆ. ಹಾಗೂ ‘ಅವನ’ ಅಸ್ತಿತ್ವವು ವಿಶ್ವದ ಸಮಸ್ತ ಅಸ್ತಿತ್ವದಲ್ಲಿ ಸಮ್ಮಿಳಿತವಾಗಿದೆ. ‘ಅವನ’ ಅಸ್ತಿತ್ವವು ಎಷ್ಟು ಪ್ರಮಾಣದಲ್ಲಿ ಪರ್ವತದಲ್ಲಿದೆಯೋ, ಅಷ್ಟೇ ಪ್ರಮಾಣದಲ್ಲಿ ಸೂಕ್ಷ್ಮ ಕಣದಲ್ಲಿಯೂ

ಇದೆ. ಇದರಲ್ಲಿ ಕಡಿಮೆ, ಅದರಲ್ಲಿ ಹೆಚ್ಚು ಎಂಬುದಾಗಿ ಇಲ್ಲ. ಯಾಕೆಂದರೆ 'ಸತ್ಯ'ವು ಕಡಿಮೆ ಹಾಗೂ ಹೆಚ್ಚಳದಿಂದ ಅತೀತವಾಗಿದ್ದು, ಪವಿತ್ರವಾಗಿದೆ. ಒಂದು ರಾತ್ರಿ ಮನಸ್ಸಿನಲ್ಲಿ ಒಂದು ಯೋಚನೆ ಸುಳಿದು ಹೋಯಿತು. ಅದೇನೆಂದರೆ 'ಸತ್ಯ'ವು ಸಮಸ್ತವಾಗಿದೆ, ಹಾಗೂ ಲೋಕವು ಅಂಶವಾಗಿದೆ. ಹಾಗಿದ್ದರೆ ಈ ಅಂಶದಲ್ಲಿ ಸಮಸ್ತವು ಹೇಗೆ ಧಾರಣವಾಗಿದೆ.. ಸಾಗರದಲ್ಲಿ ಚಿಪ್ಪೆ ಹಾಗೂ ಸೂರ್ಯನಲ್ಲಿ ಕಣವು ಧಾರಣವಾಗಬಹುದು. ಆದರೆ ಇದರ ಪ್ರತಿಬಿಂಬ ಅರ್ಥಾತ್ ಅನುಲೋಮ ಸ್ಥಿತಿ ಅಸಾಧ್ಯವಾಗಿದೆ. ಯಾಕೆಂದರೆ ಸಮಸ್ತ ಜೀವಿಗಳು ದೈವಿ ಅಸ್ತಿತ್ವದಿಂದ ಪ್ರಕಟಗೊಂಡಿವೆ. – ಮೀನುಗಳು ನೀರಿನಲ್ಲಿರುವಂತೆ ಆಗ ನಾನು ಮನಸ್ಸಿನಲ್ಲಿ ಯೋಚಿಸಿದೆ, ಇದು ಸಾಧ್ಯವಾದರೆ 'ಸತ್ಯ'ದ ಅಸ್ತಿತ್ವವು ಮಧ್ಯದಿಂದ ಶೂನ್ಯವಾಗಬಹುದು. ಇದು ಸಹ ಸರಿ ಅಲ್ಲ, ಯಾಕೆಂದರೆ ಸತ್ಯದ ಅಸ್ತಿತ್ವವು ಆಂತರ್ಯ, ಬಾಹ್ಯ, ಪಾರ್ಶ್ವ, ಆಳ ತಳಗಳಿಂದ ಶುದ್ಧವಾಗಿದೆ. ಹೀಗಾಗಿ ವಿಶ್ವಾಸಪೂರ್ಣವಾಗಿ ಅರಿತೇನೆಂದರೆ 'ಅವನು ಎಲ್ಲದರಲ್ಲಿ ಇಲ್ಲ, ಎಲ್ಲವೂ ಅವನಲ್ಲಿ ಇಲ್ಲ' ಮತ್ತೆ ಯೋಚಿಸಿದೆ ವಾಸ್ತವವಾಗಿ ಹೀಗಿದ್ದರೆ ಜೀವಿಗಳು ದೇವರಿಂದ ಪ್ರತ್ಯೇಕವಾಗುತ್ತಾರೆ. ಹಾಗೂ ದೇವರು ಜೀವಿಗಳಿಂದ ಪ್ರತ್ಯೇಕ ಜೀವಿಗಳಿಗೆ ದೇವರ ಹೊರತಾಗಿ ಖಂಡಿತವಾಗಿಯೂ ಅಸ್ತಿತ್ವವೇ ಇಲ್ಲ.

ಹೀಗಾಗಿ ದೇವರು ತನ್ನ ಅಸ್ತಿತ್ವದ ಅನಿವಾರ್ಯತೆಯಿಂದ ಏಕನಾಗಿದ್ದು, ಅವನ ಅನುಪಸ್ಥಿತಿ ಇಲ್ಲದೇ ಇರುವುದು ಅರ್ಥಾತ್ ಸಮಸ್ತವು ಅವನೇ ಆಗಿದ್ದಾನೆ ಎಂದು ನಾನು ಪ್ರಮಾಣೀಕರಿಸಿದರೆ ಈ ನಂಬಿಕೆಯು ಯುಕ್ತವಾಗಿದೆ ಮತ್ತೆ ವಿಚಾರ ಹೊಳೆಯಿತು, ಅಕಸ್ಮಾತ್ ಇದು ಹೀಗೆಯೇ ಇದ್ದರೆ ಪ್ರಚಲಿತ ವಿಶ್ವದ ಚಿತ್ರಶಾಲೆಯು ಸಾವಿರಾರು ವರ್ಣಗಳನ್ನು ಹೊಂದಿದೆ. ಪ್ರತಿ ಬಣ್ಣವೂ ಸಾವಿರಾರು ಬಣ್ಣಗಳನ್ನು ಪ್ರದರ್ಶಿಸುತ್ತದೆ. ಯಾವುದೇ ನಿರ್ದಿಷ್ಟ ವರ್ಣವು ತನ್ನ ಬಣ್ಣದಿಂದ ದೈವಾನುಗ್ರಹವಿಲ್ಲದೆ, ಅವನ ಸ್ಥಿರತೆರಹಿತ ಸ್ಥಿತಿಯಿಂದ ಶಾಶ್ವತವಾಗಿರುವುದಿಲ್ಲ. ಹೀಗಾಗಿ ಇವೆಲ್ಲವುಗಳ ಅಸ್ತಿತ್ವದ ವಾದ ಮಂಡನೆಯು ಯಾವ ರೀತಿಯಿಂದ ಶೋಭಿತವು ಹಾಗೂ ಯಾವುದು ಮಧ್ಯಮ ಸ್ಥಿತಿಯು ಹೇಳುವುದು ಕಷ್ಟ.

ತಾತ್ಪರ್ಯವೆಂದರೆ 'ಸತ್ಯ'ದ ಅಸ್ತಿತ್ವವು ಅಪರಿಮಿತ ಜ್ಯೋತಿಯಾಗಿದ್ದು, ಹೃದಯಕ್ಕೂ ಇದರ ಪರಿಜ್ಞಾನವಿಲ ಹಾಗೂ ಆತ್ಮದ ಮಧ್ಯಪ್ರವೇಶವೂ ಇಲ್ಲ. ಮತ್ತೆ ನನ್ನ ಮನಸ್ಸಿನಲ್ಲಿ ಈ ಅಪಾಯ ಭಾವ ಸುಳಿಯಿತು. ಅದೇನೆಂದರೆ ಜ್ಯೋತಿಯು ಸಹ ವಿವೇಚನೆಯ ಸೆರೆಯಲ್ಲಿ ಬಂಧಿಯಾಯಿತು. ಇಲ್ಲವಾದರೆ ಅದು ನಾಮದ ಸೆರೆಯಲ್ಲಿ ಹೇಗೆ ಬಂಧಿತವಾಯಿತು. ಅಂತಿಮವಾಗಿ ತೀರ್ಮಾನವಾಯಿತೇನೆಂದರೆ ಯಾವುದನ್ನು ಸತ್ಯವು ಅರಿಯುತ್ತದೆಯೋ ಅದೇ ಪರಮ ಸತ್ಯವಾಗಿದೆ. ಹಾಗೂ ಯಾವುದನ್ನು ನಾವು ಸತ್ಯವೆಂದು ಅರಿತ್ತಿದ್ದೇವೊ ಅದು ಸತ್ಯವಲ್ಲ ಬದಲಾಗಿ ಅದು ಮಿಥ್ಯವಾಗಿದೆ.

ಸ್ವಯಂ ದೇವನು ದೇವನನ್ನು ಅರಿಯುತ್ತಾನೆ.
ನಾನರಿತರೆ – ಅದನು, ಅವನು ದೇವನಲ್ಲ

ಆದಿಯಲ್ಲಿಯೇ ಮತಿಯು ದಿಗ್ಭ್ರಾಂತಗೊಂಡಿದೆ,
ಮತಿಗೆ ಜ್ಞಾನದ ಪರಾಕಾಷ್ಠೆಯ ದರ್ಶನವಿಲ್ಲ.

ದುರ್ನೋಟವು ಅಪ್ರಯೋಜವಾಗಿ ಇರುವವರೆಗೆ,
ಕವಿದನ್ವಯ ಅದು ತಲುಪಲಿಲ್ಲ ಅಲ್ಲಿಯವರೆಗೆ.

ನನ್ನ ವ್ಯಕ್ತಿತ್ವವೇ ನಾಸ್ತಿಯಾಗಿತ್ತು ಮೂಲದಲಿ,
ಇದರಿಂದ ಅವನ ಅಸ್ತಿತ್ವದಿಂದ ಪರಿಚಿತನಾಗಲಿಲ್ಲ.

ಈ ತ್ರಿಭುಜದ ಮರ್ಮವನು ಅರಿಯದವನಿಗೆ,
ನಿಜಾರ್ಥದ ದ್ವಾರವು ತೆರೆಯಲಿಲ್ಲ ಅವನಿಗೆ,

'ಶಿರ್ಕ್'[೧] ನ ದುರ್ಗುಣದಿಂದ ಪವಿತ್ರವು ಅವನಸ್ತಿತ್ವ
ಅದೊಂದು ಮೋಜಾಯಿತು, ರಾಗವಾಗಲಿಲ್ಲ.

ಏಕತೆಯ ಮಾರ್ಗದ ಚರಮದ ಜ್ಞಾತನು
ಭಾವೋದ್ವೇಗ ಗಮ್ಯನು, ಗುರಿಯಿಂದ ಅಜ್ಞಾತನು

ದೇವ ಪರಿಚಿತನು ಅವನು ಹೇ 'ಬಹರಿ'ಯೇ,
ಆದರೆ ಎಂದೂ ಅರಿಯಲಿಲ್ಲ ತನ್ನನು ಮಾತ್ರ.

ಶಿರ್ಕ್ ದೇವರ ಜತೆ ಅನ್ಯರನ್ನು ಸಹಭಾಗಿಸಿ ಉಪಾಸಿಸುವುದು, ಇದು ಇಸ್ಲಾಂ ಧರ್ಮದ ಪ್ರಕಾರ ಘೋರ ಪಾಪವಾಗಿದೆ.

ಆಭರಣ–೯

'ಸತ್ಯ'ದ ಪರಂ ಜ್ಞಾನ

'ಸತ್ಯ'ವೆಂಬ ಅವನ (ಅಲ್ಲಾಹನ) ಹೆಸರಿನ ಗೌರವಗಿರುವ 'ಪರಂ ಸತ್ಯ'ವು (ಮ್ವಾರಿಫತ್) ಯಾವ ಸೀಮೆಯನ್ನು ಹೊಂದಿರುವುದಿಲ್ಲ ಹಾಗೂ ಸಮಸ್ತ ಬ್ರಹ್ಮಾಂಡದ ತತ್ವಮೀಮಾಂಸೆ ಹಾಗೂ ಇಂದ್ರಿಯಾನುಭವಕ್ಕೆ ಗ್ರಾಹ್ಯವಾಗದ್ದು, ಬುದ್ಧಿಗೆ ನಿಲುಕದ್ದಾಗಿದೆ. ಇದೇ ಕಾರಣದಿಂದ ಮ್ವಾರಿಫತ್‌ಗೆ (ಪರಂ ಜ್ಯೋತಿಗೆ) ನಿರ್ದಿಷ್ಟ ಮಾರ್ಗವಾಗಲಿ, ರೀತಿ–ನೀತಿ ನಡವಳಿಕೆಯಾಗಲಿ ನಿರ್ಧಾರಿತವಾಗಿಲ್ಲ. ಅಕಸ್ಮಾತ್ ವ್ಯಕ್ತಿಯೊಬ್ಬನು ನಾನೇನನ್ನು ನೋಡಿದ್ದೇನೆ ಹಾಗೂ ಅರಿತಿದ್ದೇನೆ ಅದನ್ನು ಅನ್ಯರು ನೋಡಿರುವುದಿಲ್ಲ ಎಂದು ನುಡಿದರೆ ಅದು ಅತಿಶಯೋಕ್ತಿಯಾಗುತ್ತದೆ.

ಪವಿತ್ರನು ಆ ಪವಿತ್ರನು, ಯಾವನು ಪವಿತ್ರತೆಯ ಅರ್ಥದಿಂದ ಪವಿತ್ರನು
ಇದರ ಅನ್ವೇಷಣೆಯು ಈ ಜ್ಞಾನ ಜ್ಯೋತಿ ಹಾಗೂ ಅಂತರ್ದೃಷ್ಟಿಯಲಿ ಮಾತ್ರ

'ಸೀಮರಫ್'[ii] ನ ಭೇಟಿಯ ಅದ್ದೇಗೆ ಸಾಧ್ಯ ಹೇ ಬಹರಿ
'ಅವನಿ'ಹನು 'ಖಾಫ್'[iii] ನಲಿ, ನೀನ್ಹುಡುಕುವೆ ಅವನನು ಸಗರಿನ ಪರ್ವತದಲಿ

ನಿಜವಾಗಿ ಹೇಳುವುದಾದರೆ ಪ್ರತಿ ಸಮೂಹವು ತಮ್ಮ ಬುದ್ಧಿಯ ಮೇರೆಗೆ ಅವನನ್ನು ಕಂಡಿರುತ್ತಾರೆ. ಹಾಗೂ ತಿಳಿದಿರುತ್ತಾರೆ. ಆದರೆ ಕೆಲವರು ಪವಿತ್ರತೆಯಲಿ, ಕೆಲವರು ಅನುಸರಣೆಯಲಿ ಅವನನ್ನು ಅರಿತಿರುತ್ತಾರೆ. ಆದುದರಿಂದ ಸರಳ ಹೃದಯಿ ವ್ಯಕ್ತಿಯಾಗಿದ್ದ ಹಯಾತ್ ಖಾನ್ ಎಂಬ ಹೆಸರಿನ ಮುಸ್ಲಿಂ ಪಠಾಣನು, ಆವೇಶಭರಿತ ಸ್ಥಿತಿಯಲ್ಲಿದ್ದಾಗ, ಅತಿ ಸಂತೋಷಭರಿತನಾಗಿ ಹೀಗೆ ನುಡಿಯುತ್ತಿದ್ದನು. ಈ ಸಮಯದಲ್ಲಿ ಅಲ್ಲಾಹನು ಸ್ವಾದಿಷ್ಟಕರವಾದ ಖಾದ್ಯಗಳನ್ನು ಸವಿಯುತ್ತಿದ್ದಾನೆ ಹಾಗೂ ವೈಭವೋಪಿತ, ರಾಜ ವಸ್ತ್ರಭೂಷಿತನಾಗಿ, ರತ್ನಖಚಿತವಾದ ಕಿರೀಟವನ್ನು ಶಿರದ ಮೇಲೆ ಧರಿಸಿ, ಮಹೋನ್ನತ ಉತ್ಕೃಷ್ಟವಾದ ಸಿಂಹಾಸನದ ಮೇಲೆ ವಿರಾಜಮಾನನಾಗಿದ್ದಾನೆ. ಜಿಬ್ರಾಯಿಲ್, ಮಿಖಾಯಿಲ್ ಹಾಗೂ ಇನ್ನಿತರ ದೈವೀದರ್ಬಾರಿನ ಸಾಮಿಪ್ಯ ಹೊಂದಿರುವರು, ತಮ್ಮ ಎದೆಯ ಮೇಲೆ ಕೈಗಳನ್ನು ಬಂಧಿಸಿಟ್ಟುಕೊಂಡು ವಿನಮ್ರರಾಗಿ ನಿಂತಿರುತ್ತಾರೆ. ದೈವಾಜ್ಞೆಗಳು ಸತತವಾಗಿ ಅವನಿಚ್ಛೆಯಂತೆ ಸರ್ವತ್ರವಾಗಿ ಜಾರಿಯಾಗುತ್ತಿವೆ.

ಫಕೀರನು (ಬಹರಿಯು) ಅವನ ಈ ಮಾತುಗಳನ್ನು ಕೇಳಿ ದುಃಖಿತನಾಗುತ್ತಾನೆ ಹಾಗೂ ಅದನ್ನು ನಿಂದಿಸಲು ಯೋಚನಾ ಹಂತದಲ್ಲಿರುತ್ತಾನೆ. ಯಾಕೆಂದರೆ ಅದರ

ಪರಿಣಾಮ ಸ್ವರೂಪವಾಗಿಯಾದರೂ ಅವನು ಇಂತಹ ನಿಷೇಧಿತ ವಚನಗಳನ್ನು ತನ್ನ ಬಾಯಿಯಿಂದ ಹೊರಹಾಕದಿರಲಿ ಮತ್ತೆ ಮನದಲ್ಲಿ ಒಂದು ವಿಚಾರ ಸುಳಿಯುತ್ತದೆ, ಅದೇನೆಂದರೆ ತನ್ನ ಅವಿವೇಕತನದಿಂದ ಈ ವ್ಯಕ್ತಿಯೊಬ್ಬ ಮಾತ್ರನೆ ಆ ಪರಂ ಅಸ್ತಿತ್ವವನ್ನು ನಿಂದಿಸುತ್ತಿಲ್ಲ ಬದಲಾಗಿ ಗ್ರಂಥದ (ಕುರಾನಿನ) ಕೃಪೆಯಿಂದ ಜ್ಞಾನ ಪ್ರಾಪ್ತಿಸಿ, ಅದನ್ನು ಮುಕ್ತಿಯ ಮಾರ್ಗ ಎಂದು ಹೆಸರು ನೀಡಿ, ತರ್ಕ–ವಾದಗಳಲ್ಲಿ ಅದನ್ನು ಸಲುದಾಹರಣಾರ್ಥವಾಗಿ ಅತ್ಯಂತ ಮನೋರಮೆಯಾಗಿ ಉಲ್ಲೇಖಿಸಿ, ಆದರೆ ಅನುಸರಣೆಯಲ್ಲಿ ಅದು ಅಸಾಧ್ಯವೆನ್ನುವುದು ಶುದ್ಧ ಮಿಥ್ಯೆಯಾಗಿದೆ.

ಆದರೆ 'ಸಾಲಿಕ್'ರ (ದೈವಿ ವ್ಯಕ್ತಿಗಳ) ಬಳಿ ನೇರ ಮಾರ್ಗವು (ಸಿರಾತೇ ಮುಸ್ತಖೀಮ್) ಏಕ ಮಾರ್ಗವಾಗಿದೆ (ಸಿರಾತೇ ವಹದತ್) ಅದರ ಪ್ರತಿ ಶಿಷ್ಟಾಚಾರವು ಸಮರ್ಪಕವಾಗಿದ್ದು, ಅವರ ಹೃದಯದೊಳಗೆ 'ಶಿರ್ಕ್'ನ ಕುತಂತ್ರ ಯಾವ ರೀತಿಯಿಂದಲೂ ತಲುಪಲು ಸಾಧ್ಯವಾಗಿಲ್ಲ ಹಾಗೂ ಯಾವ ಕಾಲದಲ್ಲಿಯೂ ಅನ್ಯತ್ವದ ಬಾತುಕೋಳಿಯು ಅವರ ದೃಷ್ಟಿಯ ಹೊಳೆಯಲ್ಲಿ ಈಜಾಡಲಿಲ್ಲ. ಇವರ ಬಳಿ, ಇವುಗಳಲ್ಲಿ ಯಾವ ವಸ್ತುವೂ ಅಸಮರ್ಪಕ ಎಂಬುದಾಗಿಲ್ಲ. ಇದರ ಕಾರಣವೆಂದರೆ 'ಏಕತ್ವ'ದಲ್ಲಿ ವಾದ–ವಿವಾದಗಳ ಶಿಷ್ಟಾಚಾರವು ದುಷ್ಟಾಚಾರವಾಗಿದೆ. ಈ ಮಾರ್ಗವು ವಿಚಿತ್ರವೂ ಹೌದು, ಮಾರ್ಗ ತಡೆಗಳೂ ವಿಚಿತ್ರವೂ ಹೌದು.

ಈ ಮಾರ್ಗವು ನೇರವೂ ಸುವ್ಯಕ್ತವೂ ಆಗಿದೆ.,
ಇದು ಅನಂತ ಸಂತಸ ಪ್ರಾಪ್ತಿಯ ಮಾರ್ಗವೂ ಆಗಿದೆ.

ನುಡಿಯಲಾರೆ ಇಂಥಿಂಥ ಮಾರ್ಗ ಅಸೂಕ್ತವೆಂದು,
'ಅವನು' ಪ್ರತಿಯೊಬ್ಬನನ್ನು ಸನ್ಮಾರ್ಗದಲ್ಲಿ ಕಾಣುತ್ತಾನೆ.

ನುಡಿಯನವನು ಇದು ಶ್ರೇಷ್ಠ, ಅದು ಅಧಮವೆಂದು,
ಅವನು ನಡೆಯುವ ಮಾರ್ಗ ನಿಜಕೂ ನೇರವಾಗಿದೆ.

ಅವನು ಏಕಕಾಲಕೆ ಜ್ಞಾನಿ, ಅಜ್ಞಾನಿಯ ಮಿತ್ರನು,
ಏಕಕಾಲಕೆ ಬರುವವರು ಅವನ ಬಳಿ ಅತ್ತಾರ್ – ಕಮ್ಮಾರರು

ಹೇ ಬಹರಿ, ನೀ ಸದಾ ನೀಡು ಎಲ್ಲರ ಜತೆಯನು
ಹಗಲಿರುಳು ಜತೆ ನೀಡಿ, ನೀ ಮಾದರಿಯಾಗು ಜಗದಿ

- ಸೀಮರಫ್ – ಒಂದು ಕಾಲ್ಪನಿಕ ಪಕ್ಷಿಯ ಹೆಸರು
- ಖಾಫ್ – ಒಂದು ಪರ್ವತದ ಹೆಸರು

ಆಭರಣ–೧೦

‘ಪರಂಸತ್ಯ’ದ ಅಸ್ತಿತ್ವವು ‘ಕ್ರಿಯ’ ಹಾಗೂ ‘ಫಲ’ಗಳಿಂದ ಪವಿತ್ರವಾಗಿದೆ.

ಹಿಂದಿನ ಹಾಗೂ ಮುಂದಿನ ಸಂಶೋಧಕರು, ಸಮಸ್ತ ಸೃಷ್ಟಿಯು ‘ಅವನ’ ಅಸ್ತಿತ್ವದ ಪ್ರಕಟರೂಪವಾಗಿವೆ ಹಾಗೂ ‘ಅವನು’ ಸಮಷ್ಟಿಯಲ್ಲಿ ಸುಪ್ತನಾಗಿದ್ದಾನೆ ಎಂಬ ವಿಶ್ವಾಸವನ್ನು ಹೊಂದಿದವರಾಗಿದ್ದು ಆದರೆ ‘ಫಕೀರ’ನು ಈ ಸೀಮಿತ ಆವರಣತ್ವವನ್ನು ಒಪ್ಪುವುದಿಲ್ಲ, ಯಾಕೆಂದರೆ ಸೃಷ್ಟಿಕರ್ತನ ಅಸ್ತಿತ್ವದ ‘ಪರಂಜ್ಯೋತಿ’ಯ ಆಂತರ್ಯ ಅಥವಾ ಬಾಹ್ಯದಿಂದ ಸಂಲಗ್ನವಾಗಿರುವುದಿಲ್ಲ ಹಾಗೂ ಅವನ ಅಸ್ತಿತ್ವದ ಜತೆ ಅವನ ‘ಅಸ್ತಿತ್ವರಹಿತತೆ’ಯ ಅಸ್ತಿತ್ವವು ದುಸ್ಸಾಧ್ಯವಾಗಿದೆ. ಯಾಕೆಂದರೆ ಮಹ್ಮದಪುರ ಎಂಬ ಪ್ರದೇಶದಲ್ಲಿ ಒಂದು ವರ್ಣರಂಜಿತ ಗೋಷ್ಠಿ ನಡೆದಿತ್ತು, ಅದರಲ್ಲಿ ವೇಶ್ಯೆಯರು ನರ್ತನ ಮಾಡುತ್ತಿದ್ದರು. ಆಗ ಒಬ್ಬ ವ್ಯಕ್ತಿ ನುಡಿದನು, ಬಹುತೇಕ ಜನರು ವೇಶ್ಯೆಯರನ್ನು ದ್ವೇಷಿಸುತ್ತಾರೆ ಹಾಗೂ ಅವರನ್ನು ಅಪವಿತ್ರವೆಂದು ತಿಳಿಯುತ್ತಾರೆ. ಆದರೆ ನನಗೆ ಇವರಲ್ಲಿ ಪವಿತ್ರ ದೇವರು ಗೋಚರಿಸುತ್ತಾನೆ. ಅದೇ ಗೋಷ್ಠಿಯಲ್ಲಿ ಪರಿಪೂರ್ಣ ಏಕದೇವ ವಿಶ್ವಾಸಿಯೊಬ್ಬನಿದ್ದನು. ಅವನು ಆ ವ್ಯಕ್ತಿಗೆ ನುಡಿದನು, ನೀನು ತಪ್ಪಾಗಿ ಹೇಳುತ್ತಿರುವೆ. ನೀನು ದೇವರನ್ನು ನೋಡಿರುವುದಿಲ್ಲ. ಯಾಕೆಂದರೆ ‘ನಾನು’[೧] ಮಧ್ಯದಲ್ಲಿದ್ದೇನೆ, ಯಾಕೆಂದರೆ ‘ನಾನು’ ನಿನ್ನ ಉದ್ದಿಷ್ಟದ ಮಧ್ಯೆ ಒಂದು ಸುಭದ್ರ ಗೋಡೆಯ ರೀತಿಯಲ್ಲಿದ್ದೇನೆ. ಸುಸ್ಪಷ್ಟ ವಿಷಯವೆಂದರೆ, 'ಈ ಗೋಡೆಯು ನಿನ್ನ ಎದುರುಗಡೆಯಿಂದ ಎಲ್ಲಿಯವರೆಗೆ ಸರಿಯುವುದಿಲ್ಲವೋ, ಅಲ್ಲಿಯವರೆಗೆ ನೀನು ನಿನ್ನ ‘ಇಷ್ಟಾರ್ಥ’ದ ಮುಖ ದರ್ಶನ ಮಾಡುವುದು ಅಸಾಧ್ಯವಾಗಿದೆ. ಈ ಹಂತದಲ್ಲಿ ‘ಅಜ಼್ ಅವ್’ (ಅವನಿಂದ), ‘ದರ್ ಅವ್’ (ಅವನಲ್ಲಿ) ಹಾಗೂ ‘ಹಮ್ ಅವ್’ (ಸಮಸ್ತವೂ ಅವನೇ) ಎಂಬುದರ ಸರ್ವಥಾ ಸಾಧ್ಯತೆಯಿಲ್ಲ.

ಪವಿತ್ರವಾಗಿದೆ ಸಮಸ್ತ ಕೊಳೆಯಿಂದ ಮಿತ್ರನ ಬದಿಯು
ಈವರೆಗೆ ಹೇಗೆ ಸಾಧ್ಯವೊ ಜ್ಞಾನ–ಪ್ರಾಜ್ಞನ ಸಾನ್ನಿಧ್ಯವು

ಅತ್ತಾರ್‌ನ ಉಗುರು ಬಿಚ್ಚಿದೆ ಅವನ ಕ್ಲಿಷ್ಟ ಗಂಟನು
ಈ ಅ–ಯೋಗ್ಯ ಮತಿಹೀನನ ಯತ್ನ ಇಹುದು ವ್ಯರ್ಥವು

- ಅವನು – ಅಂದರೆ ‘ಬಹರಿ’
- ಅತ್ತಾರ್ – ಸುಗಂಧ ದ್ರವ್ಯ ಮಾರುವವನು

- ಆ ವ್ಯಕ್ತಿಯ ವಿಚಾರದಲ್ಲಿ 'ನಾನು' ಪವಿತ್ರ ದೇವರ ಗೋಚರಿಸುವ ದಿಶೆಯಲ್ಲಿ ಸಂಜ್ಞೆಯಾಗಿದೆ.
- ಅತ್ತಾರ್- ಹಜ್ರತ್ ಖ್ವಾಜಾ ಫರೀದುದ್ದೀನ್ ಅತ್ತಾರ್.

ಆಭರಣ-೧೧

ಬ್ರಹ್ಮಾಂಡದಲ್ಲಿ ಪರಂಸತ್ಯ'ರಹಿತನ ಅಸ್ತಿತ್ವವಿಲ್ಲ

'ಪರಂಸತ್ಯ'ವಾಗಿರುವ ದೇವರು ತನ್ನ ನಾಮದ ಸ್ತುತಿಯ ಅಸ್ತಿತ್ವದಿಂದ ಪವಿತ್ರನೂ, ಪರಿಪೂರ್ಣನೂ ಆಗಿದ್ದು, ಕೇವಲ ಅವನು ಮಾತ್ರ ತನ್ನನ್ನು ಸಂಪೂರ್ಣವಾಗಿ ಅರಿಯುವವನಾಗಿದ್ದಾನೆ ಹಾಗೂ ಸಮಸ್ತ ಅರ್ಹತೆಗಳು ಹಾಗೂ ಗುಣವಿಶೇಷಗಳು ಅದಕ್ಕೆ ಸಂಬಂಧಿಸಿದ ನಾಮಗಳ ಮೂಲವನ್ನು ಅರಿಯುವವನಾಗಿದ್ದಾನೆ. ಸಮಸ್ತ ಸೃಷ್ಟಿ ಕಾರ್ಯಗಳು ಹಾಗೂ ದೈವೀ ಆದೇಶಗಳು ಅವನಿಂದಲೇ ಉದ್ಭವವಾಗಿವೆ. 'ಅವನ' ಹೊರತಾಗಿ ಯಾವುದೇ 'ಶೂನ್ಯತೆ'ಯ ಅಸ್ತಿತ್ವವಿಲ್ಲ ಹಾಗೂ 'ಅವನ' ಹೊರತಾಗಿ ಯಾರ ಅಸ್ತಿತ್ವವೂ 'ಶೂನ್ಯ'ವಲ್ಲ. ಇದು ಅತೀವ ಅದ್ಭುತ ಹಾಗೂ ವಿಸ್ಮಯಕಾರಕ ವಿಷಯವಾಗಿದೆ. ಇನ್ನೂ ಆಶ್ಚರ್ಯಕರ ನಿಯಮವೆಂದರೆ ಸಮಸ್ತ ಸೃಷ್ಟಿಗಳು ಪ್ರಕಟ ಸ್ಥಿತಿಯಲ್ಲಿದ್ದು ಹಾಗೂ 'ಪರಂಸತ್ಯ'ವು 'ರಹಸ್ಯ'ವಾಗಿದೆಯೆಂದು ಅರಿವಾಗುತ್ತದೆ. ಪ್ರತಿ ಸೃಷ್ಟಿಯು ತನ್ನ ವಿರುದ್ಧದಿಂದ ಪ್ರಕಟವಾಗುತ್ತವೆ. ಆದರೆ 'ಪರಂಸತ್ಯ'ಕ್ಕೆ ಯಾರ ವಿರುದ್ಧವೂ ಇಲ್ಲ ಅರ್ಥಾತ್ ಸತ್ಯರಹಿತವೆಂಬ ಯಾವುದೇ ಅಸ್ತಿತ್ವವೂ ಇಲ್ಲವೇ ಇಲ್ಲ. ಅದು ಇದ್ದಿದ್ದರೆ ನಿಶ್ಚಿತವಾಗಿ ಪ್ರಕಟವಾಗುತ್ತಿತ್ತು.

'ವಿರುದ್ಧ'ದ ಅಸ್ತಿತ್ವವು ಎಲ್ಲಿ ಶೋಭಾಯಮಾನವಾಗಿದೆ?
ಅವನ ಹೊರತಾಗಿ ಯಾರಿಹರು ಈ ಬ್ರಹ್ಮಾಂಡದಲ್ಲಿ

'ಬಹರಿ'ಯೇ ಆ ಸಮಸ್ತ ಗೂಢದ ಜ್ಞಾತನು
ನೋಡಿರದಿದ್ದರೆ ನೋಡು ನೀ ಈ ಬ್ರಹ್ಮಾಂಡದಲಿ.

ಆಭರಣ–೧೨

ದೈವ ದರ್ಶನದ ಕುರಿತು

ನನ್ನ ಪೀರ್ ಮುರ್ಷದರು (ಅಲ್ಲಾಹನು ಅವರ ಗೋರಿಯ ಮೇಲೆ ಪ್ರಕಾಶವನ್ನು ಬೀರಲಿ) ಅಸದುಲ್ ಔಲಿಯಾ ಶೇಖ್ ಮಹ್ಮದ್ ಮಹಮೂದ್ ಸೂಫಿ ಸರಮಸ್ತ ಸಂತರ 'ಉರ್ಸ'ನಲ್ಲಿ ಭಾಗವಹಿಸಲು ಸಗರ ಗ್ರಾಮಕ್ಕೆ ಪ್ರಯಾಣ ಬೆಳೆಸಿದರು. ನನ್ನ ಪೀರ್ ಮುರ್ಷಿದ್‌ರ ಅವರ ಜತೆ ಸಂಬಂಧವೇನೆಂದರೆ, ಪೀರ್ ಮುರ್ಷಿದ್‌ರು ಹಜ್ರತ್ ಸೂಫಿ ಸರಮಸ್ತರ ಮೊಮ್ಮಗನಾಗಿದ್ದರು (ಮಗಳ ಮಗ). ಪ್ರಯಾಣದ ಮಧ್ಯೆ ಒಂದು ಸ್ಥಳದಲ್ಲಿ, ಪ್ರಯಾಣಿಕರ ಮಾಮೂಲಿನಂತೆ, ತಮ್ಮ ಸಹಚರರ ಜೊತೆ ವಿಶ್ರಾಂತರಾದರು. ಒಬ್ಬ ಮೃದು ಹೃದಯಿ ಆದರೆ ಒರಟು ನಾಲಿಗೆಯುಳ್ಳ ಒಬ್ಬ ದರ್ವೇಶನು ಅಲ್ಲಿ ತಲುಪಿದನು. ಹಾಗೂ ತಿನ್ನಲು ಏನನ್ನಾದರೂ ನೀಡುವಂತೆ ಬೇಡಿಕೆ ಇಟ್ಟನು. ಹಜ್ರತ್ ಅವನನ್ನು ಉದ್ದೇಶಿಸಿ ನುಡಿದರು 'ಶಾಹ ಸಾಹೇಬರೇ, ಈ ಸಮಯದಲ್ಲಿ ಇಲ್ಲಿ ತಿನ್ನಲು ಏನೂ ಇಲ್ಲ' ಆಗ ನಿಜವಾಗಿಯೂ ಅಲ್ಲಿ ತಿನ್ನಲು ಏನೂ ಉಳಿದಿರಲಿಲ್ಲ. ಆ ಫಕೀರನು ಇವರನ್ನು ಒಬ್ಬ ಸಾಮಾನ್ಯ ವ್ಯಕ್ತಿಯೆಂದು ತಿಳಿದು 'ಇಷ್ಟು ಜಿಪುಣತನ ಯಾಕೆ ಮಾಡುತ್ತಿರುವಿ? ಸುಳ್ಳನ್ನು ಯಾಕೆ ಹೇಳುತ್ತಿರುವಿ? ಎಂದು ಒರಟಾಗಿ ನುಡಿದನು. ಪ್ರತ್ಯುತ್ತರವಾಗಿ ಮುರ್ಷದರು ನುಡಿದರು 'ಇದರ (ಊಟದ) ಅಲಭ್ಯತೆಯ ಬಗ್ಗೆ ದೇವರು ಸಾಕ್ಷಿಯಾಗಿದ್ದಾನೆ ಹಾಗೂ ದೇವರಿಗೆ ಸುಳ್ಳು ನುಡಿಯುವುದು ಅಪ್ರಿಯವಾಗಿದೆ' ಆಗ ಫಕೀರನು 'ದೇವರು, ದೇವರು ಎಂದು ಬಹಳ ನುಡಿಯುತ್ತಿದ್ದಿ, ದೇವರನ್ನು ಎಂದಾದರೂ ಕಂಡಿದ್ದಿಯಾ?' ಆಗ ಮುರ್ಷದರು ನುಡಿದರು 'ಅವನನ್ನು ನೋಡುವ ನನ್ನದೇನು ಸಾಮರ್ಥ್ಯ? ಅವನ ಸೃಷ್ಟಿಯಾದ ಈ ಸೂರ್ಯನನ್ನೇ ನನ್ನಿಂದ ನೋಡಲಾಗುವುದಿಲ್ಲ, ಕೇವಲ ಅವನು ಮಾತ್ರ 'ಅವನ'ನ್ನು ನೋಡುವವನಾಗಿದ್ದಾನೆ, ಆಗ ಫಕೀರನು ನುಡಿದನು 'ಕೇಳಿದ್ದನ್ನು ಹೇಳುತ್ತಿದ್ದಿಯಾ? ನೋಡಿದ್ದನ್ನು ಅಲ್ಲ!

'ಪಲೇದ್ ಅಸ್ತ್ ತಾಬಿಶ್ ಚೂ ಆಬ್ ಮನಿ
ಬೂ ದಹರ್ ಕೆ ದರ್ ಅಬ್ ವ್ರೋ ತಾಬ್ ಮನಿ'

(ಯಾವನು ಅಹಂಕಾರದ ಹಾವಭಾವವನ್ನು ತೋರಿಸುತ್ತಾನೆ ಅವನು ಈ ತರಹ ಕೊಳಕಾಗಿದ್ದಾನೆ).

ಹಜ್ರತ್‌ರು ನುಡಿದರು 'ಪ್ರತಿಯೊಬ್ಬ ವ್ಯಕ್ತಿಯೂ ಕೇಳಿದ್ದನ್ನೇ ನುಡಿಯುತ್ತಾನೆ. ಇಲ್ಲವಾದರೆ ಅವನು ಕಿವುಡನಾಗುತ್ತಿದ್ದನು. ಯಾಕೆಂದರೆ ಕೇಳುವ ಸ್ಥಾನವು ಬಹು

ದೊಡ್ಡದಿದ್ದು, ಅತಿ ಉನ್ನತವಾಗಿದೆ. ಬ್ರಹ್ಮಾಂಡದ ಸಮಸ್ತ ಶೋಧವು ಸಹ ಕೇವಲ ಕೇಳುವುದರಿಂದಲೇ ವ್ಯಕ್ತ ರೂಪದಲ್ಲಿವೆ. ಫಕೀರನು ಇದನ್ನು ಕೇಳಿ ಅತೀವ ಸಂತುಷ್ಟನಾದನು. ತನ್ನ ಅಚಾತುರ್ಯಕ್ಕಾಗಿ ಕ್ಷಮೆ ಕೋರಿ ಹೊರಟು ಹೋದನು.

'ಪರಂಸತ್ಯ'ವನ್ನು ನೋಡುವುದು ಇದು ನನ್ನ ಸಾಹಸವೆಲ್ಲಿ?

ಆಭರಣ–೧೩

ದೈವತ್ವ ಹಾಗೂ ತಂತ್ರತ್ವದ ವಿವರಣೆ

'ಪರಂಸತ್ಯ'ದ ದಿವ್ಯಜ್ಯೋತಿಯ ದೈವಿಸಂಭೂತವು ಒಂದು ಕಣದಿಂದ ಸಮಸ್ತ ಪದಾರ್ಥಗಳ ಸೃಷ್ಟಿಯನ್ನು ಮೂರ್ತರೂಪದಲ್ಲಿ ವ್ಯಕ್ತಗೊಳಿಸಿದನು. ಆದರೆ ಅವುಗಳನ್ನು ಒಂದು ನಿಶ್ಚಿತ ತಂತ್ರದಡಿ ಸ್ವಯಂಚಾಲಿತವಾಗಿ ಚೈತನ್ಯಮಯಗೊಳಿಸಿ ಶಾಶ್ವತಗೊಳಿಸಿದನು. ಆದುದರಿಂದ ದೈವತ್ವ ಹಾಗೂ ತಂತ್ರತ್ವವು ಎರಡೂ ಏಕಕಾಲಕ್ಕೆ ನಿರಂತರ ಚಟುವಟಿಕೆಯಲ್ಲಿವೆ. ಅರ್ಥಾತ್ ಒಂದನ್ನು ಇನ್ನೊಂದರರಿಂದ ಪ್ರಾಪ್ತಿಯಾಗದಂತೆ ಗತಿಶೀಲಗೊಳಿಸಿದನು. ಹೀಗಾಗಿ ಸಮಸ್ತ ಜೀವಾತ್ಮರನ್ನು ಮಣ್ಣಿನಿಂದ, ಮಣ್ಣನ್ನು ನೀರಿನಿಂದ ನೀರನ್ನು ಅಗ್ನಿಯಿಂದ, ಅಗ್ನಿಯನ್ನು ಮಾರುತದಿಂದ, ಮಾರುತವನ್ನು ಗಾಳಿಯಿಂದ, ಗಾಳಿಯನ್ನು ನಿರ್ಮಲತೆಯಿಂದ, ನಿರ್ಮಲತೆಯನ್ನು ದೈವತ್ವದಿಂದ, ದೈವತ್ವವನ್ನು ಅಸ್ತಿತ್ವದಿಂದ ಸೃಷ್ಟಿಸಿದ್ದಾನೆ. ಹೇ ಮಿತ್ರನೆ, ಈ ಮಣ್ಣೆ ಸಮಸ್ತ ಜೀವಾತ್ಮಗಳ ದೇವಾತ್ಮವಾಗುತ್ತಿದ್ದರೆ, ಅದು ಇಂದ್ರಿಯಗಳಿಂದ ನಿರ್ಮಿತವಾಗುತ್ತಿದ್ದರೆ ಹಾಗೆಯೇ ಇದೇ ನೀರು ತನ್ನಿಂದ ನಿರ್ಮಿತವಾಗುತ್ತಿದ್ದರೆ ಅದು ಮಣ್ಣಿನ ಮಿಶ್ರಣವಾಗುತ್ತಿತ್ತು. ಇದೇ ಅಸ್ತಿತ್ವವು ಕಲ್ಪನಾತರ್ಕದಿಂದ ಸ್ವಯಂನಿಂದ ನಿರ್ಮಿತವಾಗುತ್ತಿತ್ತೆ ವಿನಃ ಬೇರೆಯಿಂದ ಅಲ್ಲ. 'ತಾಲಹ ಶಾನಹ ಅಮಾಯಖೂಲೂನ್' (ಅದ್ಯಾವ ಜನರು ಹೇಳುತ್ತಾರೆ, ಅವನಿಗಿಂತಲೂ ಅವನ ಭವ್ಯತೆಯು ಉನ್ನತವಾಗಿದೆ)

ಒಂದು ಅಸ್ತಿತ್ವವು ಇಹುದು ಇನ್ನೊಂದರಿಂದ ಅಸ್ತಿತ್ವದಲಿ,
ಇದರ ಸತ್ಯದಲಿ ಮೂಲವನೆ ದೇವರೆಂದು ಅರಿ.

ಅವನಿಗಿಲ್ಲ ತನ್ನ ಆಶ್ರಯ ಸ್ಥಳ ತಾಣದ ಚಿಂತೆ,
ತಾಣದ ಚಿಂತಿ ಬಿಡು ನೀ, ಮೊದಲು ಅವನನ್ನು ಅರಿ.

ವಾಸ್ತವದಿ 'ಪರಂಸತ್ಯ'ವು ಶಾಶ್ವತವಾಗಿದೆ ಹೇ, ಬಹರಿ,
ಅದು ಸಮರ್ಪಕವಾಗಿದೆ, ಅದನೆ ದೇವರೆಂದು ಅರಿ.

ಆಭರಣ–೧೪

ದೈವೀಪ್ರಭೆಯ ಕುರಿತು ತಕರಾರಿಲ್ಲ

ಒಬ್ಬ ಸ್ನೇಹಿತನು ನನ್ನಿಂದ ಈ ಕವನ ಚರಣದ ಭಾವಾರ್ಥವನ್ನು ಕೇಳಿದನು.

"ಬೇಜಾರಮ್ ಅಜಾಂ ಕಹ್ನಾ ಖುದಾಯಿಕಾ ತೂ ದಾರಿ,
ಹರ್ ಲಖ್ತಾ ಮೆರಾ ತಾಜ಼ಾ ಖುದಾಯೇ ದಿಗರ್ ಅಸ್ತ್".

ನಾನು ಹೇಳಿದುದೇನೆಂದರೆ, 'ಹಳೆಯ ದೇವರು' ಎಂಬುದರ ತಾತ್ಪರ್ಯವೆಂದರೆ ಜನಸಾಮಾನ್ಯರು ದೇವರ ಗುಣವಿಶೇಷನಾಮಗಳನ್ನು ತಮ್ಮ ತಂದೆ–ತಾತನವರು, ತಾಯಿ–ಮಾವಂದಿರುಗಳ ಆಣೆ–ಪ್ರಮಾಣಗಳ ಅಭ್ಯಾಸಬಲದ ಅನಿವಾರ್ಯತೆಯಿಂದ, ಗತಕಾಲದಿಂದ ಕೇಳುತ್ತಾ ಬಂದುದರಿಂದ, ಅದೇ ಅಭ್ಯಾಸ ಬಲದಿಂದ ತಮಗರಿವಿಲ್ಲದೆ ನಾಲಿಗೆಯ ಮೇಲೆ ಅನಾಯಾಸವಾಗಿ ಮೂಡಿ ಬರುತ್ತದೆ. ಆದರೆ ಇದರ ನೈಜತೆ ಹಾಗೂ ವಾಸ್ತವಿಕತೆ ಏನೆಂಬುದು ಅವರಿಗೆ ಗೊತ್ತಿರುವುದಿಲ್ಲ. ಹೇಗೆಂದರೆ 'ಸಿಮ್ರುಘ್'ನ ಪ್ರಸ್ತಾಪ ಮಾಡುವವರು, ಅದನ್ನೂ ನೋಡಿಯೂ ಇಲ್ಲ. ಹಲವರು ಅದನ್ನು ನೋಡುವ ಮಾತಿರಲಿ, ಅದರ ಬಗ್ಗೆ ಕೇಳಿಯೂ ಇಲ್ಲ. ಆದರೆ ಪುರಾತನ ಕಾವ್ಯಗಳಲ್ಲಿ ಪ್ರತಿಕಾತ್ಮವಾಗಿ ಅದರ ಅತ್ಯಧಿಕ ಪ್ರಸ್ತಾಪವಿದೆ. 'ಹೊಸ ದೇವರು'ಗಳು ಏನೆಂದರೆ 'ಪರಂಸತ್ಯ'ವು ಒಂದೇ ರೂಪದಲ್ಲಿ ಎಂದಿಗೂ ಎರಡು ಸಲ ದೈವಿಕ ಪ್ರಭೆಯನ್ನು ಪ್ರಕಟಗೊಳಿಸುವುದಿಲ್ಲ. ಆದರೆ ಅದರ ಪ್ರತಿರೂಪವು ನವನವೀನವಾಗಿದ್ದು ವಿನೂತನವಾಗಿದೆ.

ಅನುಕರಣೆಯಿಂದಾಗಿ ಒಂದರಲ್ಲಿ ಸ್ವತಂತ್ರನು ನಾನು,
ಆದರೆ ತಂದೆ–ತಾತರ ನಂಬಿಕೆಯ ಅಭಿಮಾನಿಯು ನಾನು.

ಆಭರಣ–೧೫

'ಪರಂಸತ್ಯ'ವು ದಿಕ್ಕುದಿಶೆಯಿಂದ ಪವಿತ್ರವಾಗಿದೆ

ಒಂದು ದಿನ ನಾನು, ದೈವೀಪ್ರಕಾಶದ ಕೃಪೆಗೆ ಪಾತ್ರರಾದ ನನ್ನ ಹಜ್ರತ್ ಪೀರ್–ಮುರ್ಷದ್‌ರಲ್ಲಿ, ಹಜ್ರತ್ ಸಯ್ಯದ್ ಮಹ್ಮದ್ ಹುಸೇನಿ ಗೇಸುದರಾಜರ ತಂದೆಯರಾದ ಶಾಹ ರಾಜು ಮಾನ್ಯರು ತಮ್ಮ ಕೃತಿ 'ತೊಹಫಾತುಲ್–ನಸಾಯಿಖ್'ನಲ್ಲಿ 'ಪರಂಸತ್ಯ'ದ ಬಗ್ಗೆ ಮಾಡಿರುವ ಉಲ್ಲೇಖಕ್ಕೆ ಸಂಬಂಧಿಸಿದಂತೆ 'ನೇ ಪೇಶ್ ವೊ ಪಸ್, ನೆ ರಾಸ್ತ್ ವೊ ಚುಪ್, ನೇ ಜ್ಹೇರ್‌ಗೋಯಿ ನೆ ರಬರ್'.

ವಾಸ್ತವಿಕವಾಗಿ ದೇವರ ಅಸ್ತಿತ್ವವು ಹಜ್ರತ್ ಬಂದೇ ನವಾಜರು ಪ್ರಸ್ತಾಪಿಸಿದಂತೆಯೇ ಇದ್ದರೆ, ಅದು ಅಸ್ತಿತ್ವವಲ್ಲ, ಬದಲಾಗಿ ಅದು ನಾಸ್ತಿತ್ವವಾಗಿದೆ. ಇದರಿಂದ ದೈವ ಅನ್ವೇಷಕರ ಹುಡುಕಾಟವು ನಿರರ್ಥಕವೂ, ಅಪ್ರಯೋಜಕವು ಆಗುತ್ತದೆ. ಇದು ಹೇಗೆ ಸಾಧ್ಯ? ಎಂದು ವಿಚಾರಿಸಲು, ಆಗ ಪೀರರ ಆದೇಶವಾಯಿತೇನೆಂದರೆ, 'ಶಾಹ ಸಾಹೇಬರು (ಬಂದೇ ನವಾಜರು) ಅದರ ಸುತ್ತಲಿನ ಪ್ರಸ್ತಾಪ ಮಾಡಿರುತ್ತಾರೆ, ಆದರೆ ಕೇಂದ್ರವನ್ನು ಬಿಟ್ಟಿರುತ್ತಾರೆ. ಆದರೆ ಉದ್ದಿಷ್ಟವು ಕೇಂದ್ರವೇ ಆಗಿದೆ. ಯಾವ ರೀತಿ ವ್ಯಕ್ತಿಯೊಬ್ಬನು, ಒಂದು ಸ್ಥಳದಲ್ಲಿ ಕುಳಿತುಕೊಂಡರೆ, ಅದರ ಸಾದೃಶ್ಯ (ಸಂಬಂಧ)ಗಳು ಮೇಲೆ–ಕೆಳಗೆ ಹಾಗೂ ಬಲಗಡೆ, ಎಡಗಡೆ ಮೂಡುತ್ತದೆ. ಆದರೆ ಅವನು ಕೆಳಗೂ ಇರುವುದಿಲ್ಲ, ಮೇಲೂ ಇರುವುದಿಲ್ಲ, ಬದಲಾಗಿ ಮಧ್ಯದಲ್ಲಿ ಇರುತ್ತಾನೆ.

ಗುರಿ ಇಹುದು ಮಧ್ಯದಲಿ, ಮೇಲೂ ಅಲ್ಲ, ಕೆಳಗೂ ಇಲ್ಲದಿರುವಂತೆ,
ಜೀವವು ಹೃದಯದಲ್ಲಿ ಹಾಗೂ ಹೃದಯವು ದೇಹದಲಿ ಇರುವಂತೆ.

ಆಭರಣ–೧೬

ಅಸ್ತಿತ್ವದ ವಾಸ್ತವಿಕತೆಯ ವರ್ಣನೆ

ನನಗೆ ವಿಶ್ವಾಸವಿದೆ, ಇಹುದು ಅವನ ಅಸ್ತಿತ್ವ,
ಅವನಿಗೆ ಸಂಬಂಧಿತವು ಸಮಸ್ತ ಗುಣವಾಚಕಗಳು.
ಅಸ್ತಿತ್ವ ಹಾಗೂ ನಾಸ್ತಿತ್ವದ ಕೇಂದ್ರವೇ ಇಹುದು,
ನಿರಾಕರಣೆ ಹಾಗೂ ದೃಢೀಕರಣದ ಪ್ರಕಾಶಮಾನವು.

'ಪರಂಸತ್ಯದ' ಅಸ್ತಿತ್ವವೇ ಸತ್ಯದ ವಾಸ್ತವಿಕತೆಯಾಗಿದೆ. ಹಾಗಾದರೆ ವಾಸ್ತವಿಕತೆಯಾದರೂ ಏನು? ವೃಕ್ಷದ ವಾಸ್ತವಿಕತೆಯು ಬೀಜವಾಗಿದೆ, ಎಂದು ಭಾವಿಸಿರಿ, ಆದರೆ ಮಹಾಮಹಿಮನೂ ಸರ್ವಶಕ್ತ ಸ್ವರೂಪನು ಆದ ಆ ದೇವನ ವಿಶೇಷ ಅಸ್ತಿತ್ವವು ನಮ್ಮ ಅಸ್ತಿತ್ವದ ಸಾದೃಶ್ಯದಂತೆ ನಾಸ್ತಿಯಲ್ಲ.

"ಕೇವಲ ವಾಸ್ತವಿಕತೆಯ ಅಸ್ತಿತ್ವದಿಂದಲೆ ಸತ್ಯಕ್ಕೆ ನೈಜತೆಯು ಪ್ರಾಪ್ತಿ,
ಆ ವಾಸ್ತವಿಕತೆ ನಮ್ಮಿಂದ, ವ್ಯಕ್ತವಾದರೆ ಅದು ವಾಸ್ತವವಲ್ಲ".

ಅರ್ಥಾತ್ ನಾಸ್ತಿಗೆ 'ಅವನ' ಸನಿಹದ ದರ್ಶನವಿಲ್ಲ. 'ಅವನು' ಪವಿತ್ರನೂ ಪರಮೋನ್ನತ್ತನು ಆಗಿದ್ದಾನೆ. ಪಾರಮಾರ್ಥದ ಅನ್ವೇಷಕನು ಇದರಿಂದಾಗಿ ಪಾರಮಾರ್ಥವನ್ನು ಪ್ರಾಪ್ತಿಸುವುದಾದರೂ ಹೇಗೆ? ಪರಮಾನಂದ ಪಡೆಯುವುದಾದರೂ

ಹೇಗೆ? ಯಾವ ಕಣ್ಣುಗಳಿಂದ ಅವನನ್ನು ನೋಡಬಹುದಾಗಿದೆ? ಹಾಗೂ ಯಾವ ಪಾದಗಮನದಿಂದ ಅವನ ಸಾಮಿಪ್ಯ ಸಾಧ್ಯವಿದೆ? ಹೀಗೆ ಯಾರಾದರೂ ಪ್ರಶ್ನಿಸಿದರೆ, ಹೇಳಿ,! ಅವನು ಬುದ್ಧಿಯ ವಿವೇಚನಾಸಾಮರ್ಥ್ಯದಿಂದ ಅತೀತನೂ, ಪವಿತ್ರನೂ ಆಗಿದ್ದಾನೆ.

ಹೇ ಆತ್ಮೀಯರೇ, ಪ್ರತಿಯೊಂದು ಜೀವಿಯೂ, ಅದು ಗಿಡ–ಮರಗಳೇ ಆಗಿರಲಿ, ಪ್ರಾಣಿಗಳೇ ಆಗಿರಲಿ, ತಮ್ಮ ಸ್ಥಾನದಲ್ಲಿ ಒಂದು ಹೆಸರಿನಿಂದ ಅಸ್ತಿತ್ವದಲ್ಲಿವೆ. ಕೆಲವು ಜೀವಿಗಳು ಆಳದಲಿ ಸಾಗರದ ಮತ್ತೆ ಕೆಲವು ಗಾಳಿಯಲ್ಲಿ ಸಿಮ್ರುಫ್[1] ಪಕ್ಷಿಯು ಖಾಫ್[2] ಪರ್ವತದದಲ್ಲಿದೆ. ಆದರೆ ಅಲ್ಲಿಯವರೆಗೆ ಮನುಷ್ಯನು ತಲುಪುವುದು ಅಸಾಧ್ಯವಾಗಿದೆ. ಇದರಿಂದ ಈ ಅಲ್ಪನು ಅರಿಯುವುದೇನೆಂದರೆ ಅದರ ಅಸ್ತಿತ್ವದಿಂದ ಮನುಷ್ಯನವರೆಗೆ ಸಂಬಂಧಿತವಾದ ಒಂದು ಮಾರ್ಗವಿದೆ. ಅದು ತುಂಬಾ ಸೂಕ್ಷ್ಮವೂ, ಅಪಾಯಕಾರಿಯೂ ಆಗಿದೆ. ಆದರೆ ಅದರ ಪ್ರಾಪ್ತಿಯ ಆಕಾಂಕ್ಷೆಯು ತನ್ನ ಚರಮಸ್ಥಿತಿಯನ್ನು ಆ ಹಂತಕ್ಕೆ ಒಯ್ಯುವುದಾದರೆ, ಅಲ್ಲಿಗೆ ತಲುಪುವಂತಾದರೆ ಅದು ತುಂಬಾ ಉತ್ತಮವಾಗಿದೆ. ಕಲ್ಪಿಸಿಕೊಳ್ಳಿ, ಅಕಸ್ಮಾತ್ ಯಾವನೊಬ್ಬನು ಅಲ್ಲಿಯವರೆಗೆ ತಲುಪದಿದ್ದರೆ ಸೀಮ್ರುಫ್‌ನನ್ನು ಸೀಮ್ರುಫ್ ಎಂದು ಯಾರು ಕರೆದರು? ಹಾಗೂ ಖಾಫ್ ಪರ್ವತವನ್ನು ಖಾಫ್ ಎಂದು ಯಾರು ಅದನ್ನು ಹೆಸರಿಸಿದರು, ಮನುಷ್ಯನ ಹೊರತು ಬೇರ್‍ಯಾರು ಅಲ್ಲ. ಈ ವಸ್ತುಸ್ಥಿತಿಯು ಬುದ್ಧಿಗೆ ಅತೀತವಾಗಿಲ್ಲ. ಆದುದರಿಂದ ಮನುಷ್ಯನಿಗೆ ಸತ್ಯತೆಗಳು ಸಮಸ್ತ ಪ್ರಕೃತಿಯಲ್ಲಿ ಅಂತರ್ಗತವಾಗಿವೆ, ಇದನ್ನು ಇನ್ನು ಸ್ಪಷ್ಟವಾಗಿ ಗಮನಿಸುವಂತಿದ್ದರೆ, ಅರಿವಾಗುವುದೇನೆಂದರೆ ಸಮಸ್ತ ಪ್ರಕೃತಿಯು ಈ ವಾಸ್ತವಿಕತೆಯ ಶಿಫಾರಸ್ಸಿನಂತೆ ಪ್ರಕಟವಾಗಿ ವ್ಯಕ್ತರೂಪ ಪಡೆದಿವೆ.

- ಸಿಮ್ರುಫ್ : ಒಂದು ಕಾಲ್ಪನಿಕ ಪಕ್ಷಿ
- ಖಾಫ್ : ಒಂದು ಪರ್ವತದ ಹೆಸರು. ಅಲ್ಲಿ ಸೀಮ್ರುಫ್ ಇರುತ್ತದೆಂದು ಹೇಳಲಾಗುತ್ತದೆ.

ಪರಿಪೂರ್ಣ ದೈವಾನ್ವೇಷಕರಾದವರು ತಮ್ಮ ಸಾಮಾನ್ಯ ಅಸ್ತಿತ್ವವನ್ನು, ಯಾವುದು ಅದೇ ಅಸಾಮಾನ್ಯ ಅಸ್ತಿತ್ವದಿಂದ ಹೊರಹೊಮ್ಮಿದೆಯೋ, ಖಂಡಿತವಾಗಿಯೂ ಇವರೆಡರಲ್ಲೂ ಒಂದು ಮಾರ್ಗವನ್ನು ಹೊಂದಿರುತ್ತದೆ. ಇದೇ ಮಾರ್ಗದಿಂದ ಅಲ್ಲಿ ತಲುಪಿ ವಿಶೇಷ ಅಸ್ತಿತ್ವವೆಂಬ ಹೆಸರನ್ನು ಪಡೆದುಕೊಳ್ಳುತ್ತದೆ. ಈಗ ಮಾಡುವುದಾದರೂ ಏನು? ಬಹುಶಃ ಅದೇನೆಂದರೆ ಸಮಸ್ತ ಅರ್ಹತೆಗಳ ಚಿಲುಮೆಯಾಗಿರುವ ತನ್ನ ಅಸ್ತಿತ್ವಕ್ಕೆ ಅರ್ಥಾತ್ 'ನಾನು ಬುದ್ಧಿವಂತನಾಗಿದ್ದೇನೆ' 'ನಾನು ದೃಷ್ಟಿಯುಳ್ಳವನಾಗಿದ್ದೇನೆ', ನಾನು ಸದೃಢನಾಗಿದ್ದೇನೆ, 'ನಾನು ಇದಾಗಿದ್ದೇನೆ' ಮುಂತಾದವುಗಳಲ್ಲಿ ಅರ್ಹತೆಗಳಾದ

ಬುದ್ಧಿವಂತ, ದೃಷ್ಟಿವಂತ, ಸದೃಢ, ಅದು-ಇದು ಇತ್ಯಾದಿಗಳಿಂದ 'ನಾನು' ಎಂಬುದನ್ನು ಬೇರ್ಪಡಿಸಿ, ಕೇವಲ 'ನಾನು ಇದ್ದೇನೆ' ಎಂಬುದನ್ನು ಉಳಿಸಿಕೊಳ್ಳಬೇಕಾಗಿದೆ. ಕೇವಲ ಇದೇ ಕಾರ್ಯದ ಅಭ್ಯಾಸ (ಮಶ್ಖ್) ಮಾಡಿದರೆ, ಮನುಷ್ಯನು ಸಮಸ್ತದಿಂದ ಬಿಡುಗಡೆಯಾಗುತ್ತಾನೆ. ಮತ್ತು ಎಲ್ಲಾ ವ್ಯಾಧಿಗಳು ಅಳಿದುಹೋಗುತ್ತವೆ. ಇದರಿಂದಾಗಿ ಈ ಸಾಮಾನ್ಯ ಅಸ್ತಿತ್ವವು ಒಂದು ದಿನ ವಿಶೇಷ ಅಸ್ತಿತ್ವದ ವಿಶಾಲ ಸಾಗರದಲ್ಲಿ ಮುಳುಗು ಹಾಕಿ ಸ್ವಯಂವನ್ನು ನಿರ್ವಾಣ (ಫನಾ)ಗೊಳಿಸುತ್ತಾನೆ.

ವಾಸ್ತವವಾಗಿ ಅಸ್ತಿತ್ವದಿಂದ ಅವನೇ "ಆರಿಫ್",
ಯಾವನಾಗುತ್ತಾನೆ ಅನುಪಮ ಅರ್ಹತೆಯುಳ್ಳವನು.

ಸಾಧಕನು (ಸಾಲಿಕ್) ಈ ಅವಸ್ಥೆಯನ್ನು ದಾಟಿದರೆ ಪರಿಪೂರ್ಣತೆಯ ಹಂತವನ್ನು ತಲುಪುತ್ತಾನೆ. ಆಗ ಪರಿಪೂರ್ಣನಾದ ಅವನು ಯಾವುದೇ ಹಿಡಿತಗಳಿಂದಲೂ ಪಾರಾಗುತ್ತಾನೆ. ಆಗ ಸ್ವಯಂ ಹುಟ್ಟಿ, ಬೆಳೆದಂತಿರುತ್ತಾನೆ. ಸಂರಕ್ಷಿತನು, ಆನಂದತುಂದಿಲನು ಅಲ್ ಇಲ್ಮ್ ಇಂದಲ್ಲಾಹಿ.

ಇಲ್ಲವೆಂದೂ ತೆರಳದೇ ಇರಬಹುದೆಂದು ಭಾವಿಸಿದ್ದೆ,
ಸುಸ್ವಪ್ನವೂ, ಮಂದಗಾಮಿಯೂ, ಸಹವಾಸಿ ಎಂದು ಭಾವಿಸು.

ಪವಿತ್ರ ಪ್ರೇಮಿಯ ಅವನೆಂದು ಇಂದಾಗಿದೆ ನಿಶ್ಚಿತ,
ವರ್ಣಿಸಲು ಅಸಾಧ್ಯವು ಆ ಕಲ್ಪಿತ ಕಥನವು.

ಆಭರಣ-೧೭

'ಪರಂಸತ್ಯ' ಅಸ್ತಿತ್ವದ ಪ್ರಯೋಜನಗಳು

ಪ್ರೇಮ ಸಾಗರ, ದಿವ್ಯಜ್ಞಾನದ ಆಗಸರಾದ, ಹಜ್ರತ್ ಶಾಹ ಬುರಾಹನುದ್ದೀನ್[೧] ರವರು ಹಜ್ರತ್ ಶಾಹ ಮೀರಾಂಜಿ ಶಮ್ಸುಲ್ ಅಷ್ಬಾಖ್ 'ನೂರೆ ಮರ್‌ಖ಼ದಾ'ರ ಪುತ್ರರಾಗಿದ್ದರು. ಅವರ ಸಮಾಧಿಯು ಬಿಜಾಪುರ ನಗರದಲ್ಲಿದೆ. ಹಿಂದಿ ಭಾಷೆಯಲ್ಲಿ ಅವರು ಸೂಕ್ತಿಯಲ್ಲಿ ಈ ಕೆಳಗಿನಂತೆ ನುಡಿದಿರುತ್ತಾರೆ. ಅಥವಾ ಬಹುಶಃ ಅವರ ಅನುಯಾಯಿಗಳೊಬ್ಬರಲ್ಲಿ ಯಾರದೋ ಒಬ್ಬರ ಸೂಕ್ತಿಯು ಆಗಿರಬಹುದು ಅದೇನೆಂದರೆ-

'ತೇರಾ ಮೈ, ಪನ್ ಗ್ಯಾನ್ ಭೀತರ್ ಇಸ್‌ಕಾ,
ಮೈ ಪನ್ ಗ್ಯಾನ್ ಉಪರ್'.

ಅರ್ಥಾತ್ ನಿನ್ನ ಅಸ್ತಿತ್ವವು ಆಂತರ್ಯದ ದೈವೀ ಪ್ರಭೆಯಾಗಿದೆ. ಆದರೆ 'ಅವನ' ಅಸ್ತಿತ್ವವು ದಿವ್ಯಜ್ಞಾನದ ಅತೀತವಾಗಿದೆ. ನಿಸ್ಸಂದೇಹವಾಗಿ! ಆದರೆ ಅವನ ಆರಾಧಕನು ತನ್ನ ಅಸ್ತಿತ್ವವನ್ನು ದೈವೀ ಜ್ಞಾನದ ಮಧ್ಯಸ್ಥಿಕೆಯಿಂದಲೇ 'ಅವನ'ನ್ನು ಶೋಧಿಸುತ್ತಾನೆ. ಹಾಗೂ ಅಸ್ತಿತ್ವದ ಕುರಿತು ಹೀಗೆ ನುಡಿಯುತ್ತಾನೆ.

ನೀ ಆದಷ್ಟು ಬೇಗ ನಿನ್ನ ಅಸ್ತಿತ್ವದಿಂದ ಹೊರಗೆ ಬಾ
ಯಾಕೆಂದರೆ 'ಬಹರಿ'ಯು ರಕ್ತದಿಂದಾವೃತ ನದಿಯಾಗಿದ್ದಾನೆ.

ತಾತ್ಪರ್ಯವೆಂದರೆ ಮನುಷ್ಯನಿಗೆ ಮೊದಲು ಬುದ್ಧಿಯ ಪ್ರಭೆಯು ಪ್ರಾಪ್ತಿಯಾಯಿತು, ತದನಂತರ ಅಸ್ತಿತ್ವದ್ದು. ವ್ಯಕ್ತಿತ್ವದ ಕೊನೆರಹಿತ ಹೊಳೆಯಲ್ಲಿ, ಶಾಶ್ವತ ದೈವೀ ಪ್ರಭೆಯ ಪರಿಣಾಮವಾಗಿ ಸಾಮಾನ್ಯವಾಗಿ ಮೊದಲು ಅಸ್ತಿತ್ವದ ಬಿರುಅಲೆಗಳು ಏಳುತ್ತವೆ; ತದನಂತರ ಜ್ಞಾನದ್ದು. ಯಾಕೆಂದರೆ **"ಕುಂತ್ ಕನ್‌ಜನ್ ಮಖಫಿಯಾನ್"** ಅರ್ಥಾತ್ 'ನಾನು' ಏಕಾಂತ ರಹಸ್ಯವಾಗಿದ್ದೆ, ಅದರಲ್ಲೆ ಅರ್ಥಾತ್ ಅಸ್ತಿತ್ವದಲ್ಲೇ ಅದು ಶರಾಬಿನ ನಶೆಯ ಅಮಲೇರಿದ ಸ್ಥಿತಿಯಲ್ಲಿತ್ತು ಹಾಗೂ ಪರಿಪೂರ್ಣ ಅಸ್ತಿತ್ವವು ತನ್ನ ಜತೆ ಇತರರೊಂದಿಗೆ ಸಂಬಂಧ ಹೊಂದಿರುವ ಕಾರಣ, ಈ ದುರುಳ ನಶೆಯನ್ನು ರಹಸ್ಯ ಖಜಾನೆಯಲ್ಲಿಡಲಾಯಿತು. ಈ ರಹಸ್ಯ ರಾಶಿಯ ಅಗ್ಗಿಷ್ಟಿಕೆಯ ಅಗ್ನಿಕಿಡಿಯಲ್ಲಿ ಬೆಂದು, ಅಸ್ತಿತ್ವವು ಪವಿತ್ರವಾಗಿ ಮಹೋನ್ನತ ಸ್ಥಾನವನ್ನು ಪಡೆದು, ಸ್ವಯಂ ತನ್ನ ಅರ್ಹತೆಗಳನ್ನು ವೀಕ್ಷಿಸಿ, 'ಇನ್ನಿ ಅನಾಲ್ಲಾಹು ರಬ್ಬುಲ್ ಆಲಾಮೀನ್' ಎಂದಾಯಿತು.

ಬಹುತೇಕ ಜನರು ಇದು ಆರಾಧಕನ ಅಸ್ತಿತ್ವದ ಉದಯಸ್ಥಾನವೆಂದು ದೈವೀ ಆದೇಶವಾಗಿ ಭಾವಿಸಿದರು. ಹಾಗೂ ಬಹಳ ಕಡಿಮೆ ಜನರು ಮಹಾಮಹಿನ ಘನವಂತ ದೇವರ ಅಸ್ತಿತ್ವ ಅರಿವುಳ್ಳವರಾಗಿದ್ದಾರೆ. ಈಗಲೂ ಅದೇ ಅಸ್ತಿತ್ವವು ಪ್ರಕೃತಿ ವ್ಯವಸ್ಥೆಯ ಸಮಸ್ತವೂ, ಆಂಶಿಕವೂ ಹೊಣೆಗಾರವಾಗಿದೆ. ಇದರ ಫಲಸ್ವರೂಪವಾಗಿ ಅದು ವಾಸ್ತವವಾಗಿ ಪವಿತ್ರವೂ, ಸಂಪೂರ್ಣವು ಇರುವಂತೆ, ಸಮಸ್ತ ಪದಾರ್ಥಗಳು ನಿರಂತರ ಬದಲಾವಣೆಯ ಪ್ರಕ್ರಿಯೆಯಲ್ಲಿವೆ, ಆದರೆ 'ಅಸ್ತಿತ್ವ'ದ ಹೊರತಾಗಿ, ಅದು ಮಾತ್ರ ತನ್ನ ಸ್ಥಿತಿಯಲ್ಲಿ ಶಾಶ್ವತವಾಗಿದೆ. ಅದು ಸತ್ಯತೆಯ ವ್ಯಕ್ತ ಸ್ಥಿತಿಗೆ ತಲುಪುತ್ತಿದ್ದಂತೆಯೆ ಅದು ಅಳಿಸಲ್ಪಡುತ್ತದೆ. ಅದು ಹೇಗೆಂದರೆ ಕತ್ತಲೆಯಲ್ಲಿ ನೋಟವು, ಪದಾರ್ಥದ ಅಸ್ತಿತ್ವದ ಸ್ಥಿತಿತ್ವದ ಹೊರತಾಗಿಯೂ ಅದು ಅಸ್ತಿತ್ವರಹಿತವಾಗಿ ಗೋಚರಿಸುತ್ತದೆ.

- ಶಾಹ ಬುರಾಹನುದ್ದೀನ್ ಜಾನಂ, ಮೀರಾಂಜಿ ಶಮ್ಸುಲ್ ಅಷ್ಹಾಖ್‌ರವರ ಹಿರಿಯ ಪುತ್ರರಾಗಿದ್ದರು. ಬಿಜಾಪುರವು ಇವರ ಜನ್ಮಸ್ಥಳ. ಇವರ ಜನ್ಮವು ಹಿ.ಶ.೯೭೦ರಲ್ಲಾಯಿತು. ತಮ್ಮ ತಂದೆಯು ಮುರೀದ್ ಹಾಗೂ ಖಲೀಫಾರಾಗಿದ್ದರು.

ಇವರು ತಮ್ಮ ಸೂಫಿ ಪರಂಪರೇ (ಸಿಲ್‌ಸಿಲಾ)ಯ ಅತ್ಯಧಿಕ ಪ್ರಗತಿಯಾಗುವಂತೆ ಮಾಡಿದರು. ಸುಲ್ತಾನ್ ಇಬ್ರಾಹೀಂ ಆದಿಲ್ ಶಾಹ ದ್ವಿತೀಯ ಇವರ ಶ್ರದ್ಧಾಳಾಗಿದ್ದನು. ಹಿ.ಶ. ೧೧೦೭ರಲ್ಲಿ ನಿಧನವಾಯಿತು. ತಮ್ಮ ತಂದೆಯವರ ಸಮಾಧಿಯ ಬಳಿ ಚಿರ ನಿದ್ರೆಯಲ್ಲಿದ್ದಾರೆ. ಇವರ ನಿಧನದ ವರ್ಷವು 'ದಿಲ್‌ಖುಶ್ ಬದಾಫ್ ಜಾನಂ ದರ್ ಯತೀಂ ಗಶ್ತಾ' ಎಂಬ ಉಕ್ತಿಯಿಂದ ಹೊರಹೊಮ್ಮುತ್ತದೆ.

ವಿಶೇಷ ನೋಟವನು ವಿಶೇಷವೆಂದು ತಿಳಿ,
ಇದರಲಿ ಇಹುದು ಸಮಸ್ತ ಯುಕ್ತಗಳ ಮುಕ್ತಿ,

ಅದಕೆ ಬುದ್ಧಿಯ ಸಂಬಂಧವೇ ಇಲ್ಲ,
ಅದರಲಿ ಚತುರನಿಗೆ ಮಾರ್ಗವೇ ಇಲ್ಲ.

ತೀರವಿಲ್ಲದ, ಅಲೆರಹಿತವಾಗಿಹುದು ಈ ಕಡಲು,
ಹೃದಯವೆಂದಿಗೂ ತಲುಪದು ಇದರ ಒಡಲು.

ಕೋಳಿಯ ಹೃದಯದ ನೆಗೆತದಂತೆ ವಿಫಲ,
ಈ ಕಡಲಿನ ಮುತ್ತೇ ಇರುವುದು ವಿಚಿತ್ರ.

ಆದರೆ ಈ ಕಡಲಿಗೆ ಇರುವುದಿಲ್ಲ ಗೌರವ,
ಯಾಕೆಂದರೆ ತೀರವು ಇಹುದು ಪಾದದಡಿ ಇದರ.

ಒಳಗೂ ಇಲ್ಲ ಹೊರಗೂ ಇಲ್ಲ ಈ ಕಡಲು 'ಬಹರಿ'
ಇರುವುದು ಅದು ಒಳಗೂ ಹಾಗೂ ಹೊರಗಿನ ಮಧ್ಯೆ.

ಆಭರಣ–೧೮

ವಿಶೇಷ ಅಸ್ತಿತ್ವ ಹಾಗೂ ಪವಿತ್ರ ದಿವ್ಯಜ್ಞಾನ

ವಿಶೇಷ ಅಸ್ತಿತ್ವದ ದೈವೀಜ್ಯೋತಿಯಾಗಿದೆ ಹಾಗೂ ಪವಿತ್ರ ದಿವ್ಯಜ್ಞಾನವು ಮಹ್ಮದ್‌ರ ಜ್ಯೋತಿಯಾಗಿದೆ. ಆದುದರಿಂದ ದೈವೀ ಪ್ರಾರ್ಥನೆ ಹಾಗೂ ಅಸ್ತಿತ್ವವು ಅದೇ ವ್ಯಕ್ತಿಯಾಗಿದ್ದಾರೆ, ಯಾರು ದಿವ್ಯಜ್ಞಾನವನ್ನು ತನ್ನಿಂದ ಪ್ರತ್ಯೇಕಿಸಿ, ಸ್ವಯಂ ಬೇರ್ಪಡಿಸಿದ ದೈವೀಜ್ಞಾನವಾಗಿದೆ. ಹೇ ಆತ್ಮೀಯನೇ, ಈ ದಿವ್ಯಜ್ಞಾನವು ಪುಷ್ಪಗಳ ಸುಗಂಧದಂತೆ ಒಳಗೆ, ಹೊರಗೆ ಹಾಗೂ ಸರ್ವವ್ಯಾಪಿಯಾಗಿ ಆವರಿಸಿದೆ. ಈ ಆಪೇಕ್ಷಿಗೆ ಮಾಡಬೇಕಾಗಿರುವುದೇನೆಂದರೆ ಸಮಸ್ತ ದೈವೀಜ್ಞಾನವನ್ನು ಒಂದು ಸ್ಥಾನದಲ್ಲಿ

ಏಕತ್ರಗೊಳಿಸಿ, ಈ ದಿವ್ಯಜ್ಞಾನದ ಸ್ವಯಂ ಅವಧಿಯು ಕಳೆದ ಬಳಿಕ ದಿವ್ಯಜ್ಞಾನವನ್ನು ತೊರೆದು ಸ್ವಯಂ ಪರಂಜ್ಞಾನಿಯಾಗಬೇಕು. ಕೆಲವು ದಿನಗಳ ಬಳಿಕ, ದಿವ್ಯಜ್ಞಾನವನ್ನು ಅಸ್ತಿತ್ವದಲ್ಲಿ ಮುಳುಗು ಹಾಕಿಸಿ, ಸ್ವಯಂ 'ಅಸ್ತಿತ್ವ'ವಾಗಬೇಕು. ಅರ್ಥಾತ್ ಏಕತ್ವದ ಚರಮ ಸ್ಥಾನವಾಗಿರುವ 'ಸ್ವಯಂ'ವು, ಅಂತಿಮವಾಗಿ ಅದು ಅಸ್ತಿತ್ವದಿಂದ ಸ್ವತಂತ್ರವಾಗಿ, ಪವಿತ್ರವಾಗಿ, ಬಹುಶಃ ಅದು ಸಮಸ್ತವೂ ಪರಿಪೂರ್ಣವೂ ಆಗುತ್ತದೆ. ಇದೇ ವಿಶ್ವದ ಪರಿಶುದ್ಧತೆ ಹಾಗೂ ಜಗತ್ತಿನ ಸೌಂದರ್ಯವಾಗಿದೆ.

ದೈವವು ಅಸ್ತಿತ್ವವಾಗಿದ್ದಾನೆ ಹಾಗೂ ಆರಾಧಕನು ದಿವ್ಯಜ್ಞಾನ,
ಇದರಿಂದಾಗಿ ದಿವ್ಯಜ್ಞಾನವು ಜೀವದ ಸ್ವಮಾನಾರ್ಥವಾಗಿದೆ.

ಇದೇ ಮಹ್ಮದರ ಜ್ಯೋತಿಯಾಗಿದೆ ಎಷ್ಟು, ಎಂತಿಹದು?
ಇದು ವಿಶೇಷ ಅಸ್ತಿತ್ವವು ಹೊರಹೊಮ್ಮಿತು ಸಮಸ್ತವು.

ಆಭರಣ–೧೯

ದೈವೀಪ್ರೇಮ, ದೈವೀಜ್ಞಾನ ಹಾಗೂ ದೈವೀ ಅಸ್ತಿತ್ವವೆಂಬ ತ್ರಿವಳಿ ರತ್ನಗಳು

ಏನೂ ಇಲ್ಲದಿದ್ದಾಗ ಮೇಲೆ ದೈವೀ ಪ್ರೇಮವಿತ್ತು. ಕೆಳಗೆ ದೈವೀಜ್ಞಾನವಿತ್ತು ಹಾಗೂ ಇವುಗಳ ಮಧ್ಯೆ ದೈವೀ ಅಸ್ತಿತ್ವದ ರತ್ನವಿತ್ತು.

ಒಂದೇ ಜಾಗದಲಿ ಒಂದಾಗಿದ್ದವು, ಹೇ, ಅಜ್ಞಾತನೆ,
ಈ ಮೂರು ರತ್ನಗಳು, ಮೂರು ಮುತ್ತಾಕ್ಷರದಂತೆ.

ಪರವಶತೆಯ ಸ್ಥಿತಿ ತಲುಪಿದಾಗ, ಅವ್ಯಕ್ತ ಜ್ಞಾನದ ನಿಧಿಯ ಹರಿವಾಣವನ್ನು ತಲೆಯ ಮೇಲೆತ್ತಿಕೊಂಡೆ ರಹಸ್ಯ ಜ್ಞಾನದ ಸಾಕ್ಷ್ಯತೆಯ ಈ ಕಾರ್ಯಸ್ಥಳವನ್ನು ಸಂಯೋಜಿಸಿದೆ. ಈಗ ಈ ಮೂರು ವಿಶೇಷ ರತ್ನಗಳೇ ಕಾಲ್ಪನಿಕ ವಿಶ್ವದ ನಿರ್ಮಾತೃ ಹಾಗೂ ಸತ್ಯ ಅದೃಷ್ಟದ ಬರಹ ಪತ್ರದ ಜ್ಯೋತಿಷ್ಯವಾಗಿದೆ. ಪರಂಜ್ಞಾನಿಯ ಸಾಮಿಪ್ಯದ ಹಾಗೂ ಬುದ್ಧವಂತಿಕೆಯ ಪ್ರಮಾಣವೇನೆಂದರೆ, ಇಂತಹ ಸೂಕ್ಷ್ಮ ಜ್ಞಾನಂಶವನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲಿ ಹಾಗೂ ಸೂಕ್ಷ್ಮ ಜ್ಞಾನ ಹಸ್ತಪ್ರತಿಯನ್ನು ಚೆನ್ನಾಗಿ ಓದಿಕೊಳ್ಳಲಿ.

ನಿನ್ನಲ್ಲಿ ನೀ ತನ್ಮಯನಾಗಿರದಿದ್ದರೆ, ಈ ಮೂರು ರತ್ನಗಳು ವ್ಯರ್ಥ.

ಪ್ರಾಣ ನೀಡಿಯೂ ಇದನು ಪಡೆಯದವನು, ಸರಿಯಿಲ್ಲದ್ದಿದ್ದರು ಖಂಡಿತಾ ಗಾರ್ದಭನು.

ಆಭರಣ–೨೦

ದೈವೀ ರಹಸ್ಯಕೋಶ (ಕಣಜ) ದ ವರ್ಣನೆಯಲ್ಲಿ

ಒಂದು ದಿನ ನನ್ನ ಮನದಲ್ಲಿ ಹೊಳೆಯಿತೇನೆಂದರೆ, ಅನ್ವೇಷಕರು (ದೈವೀ) ರಹಸ್ಯಕೋಶದ ಕುರಿತು ಯಾವುದರಲ್ಲಿ ನಾನು ಹಾಗೂ 'ಅವನು' ಮತ್ತು ಅಸ್ತಿ ಮತ್ತು ನಾಸ್ತಿಯ ಅವಕಾಶವಿಲ್ಲವೋ, ಅದನ್ನು ಯಾವ ರೀತಿಯಾಗಿ ಲೇಖನಿಯಿಂದ ಅಚ್ಚೊತ್ತಲಾಯಿತು ಹಾಗೂ ಇದರ ಹೆಸರನ್ನು 'ಗಂಜೆ–ಮಖ್ಫ಼ಿ' ಅರ್ಥಾತ್ (ದೈವೀ) ರಹಸ್ಯಕೋಶವೆಂದು ಇಡಲಾಯಿತು?; ಇದು ಎಲ್ಲಿ? ಗಂಜೆ–ಮುಖ್ಫ಼ಿ ಎಲ್ಲಿ? ಸ್ವಪ್ನದಲ್ಲಿ ಕಂಡಿರುವುದಾದರೆ ಸ್ವಪ್ನವು ಶಿಕ್ಷಾರ್ಹವಾಗಿದೆ – ನಂಬಲರ್ಹವಲ್ಲ. ಮತ್ತೆ ವಿಚಾರ ಸುಳಿದುಹೋಯಿತು. ಈ ಜನರು ಬರೆದಿದ್ದೆಲ್ಲಾ ಸರಿಯಾಗಿದೆ. ಮಹಾಮಹಿಮ ದೈವನು ಸ್ವಾತಂತ್ರ್ಯದಿಂದ ಸೆರೆಯಾಧೀನದವರೆಗೂ, ಸಮಸ್ತ ಅರ್ಹತೆಗಳಲ್ಲಿ ಪರಿಪೂರ್ಣ ಪ್ರಾಪ್ತನಾಗಿದ್ದಾನೆ. ಬಹುತೇಕವಾಗಿ ತನ್ನ (ದೈವೀ) ರಹಸ್ಯಕೋಸದ ಸತ್ಯತೆಯಿಂದ (ದೈವೀ) ರಹಸ್ಯಕೋಶ ಅನ್ವೇಷಣೆ ಮಾಡಿ ಲಿಖಿತಗೊಳಿಸಿದ್ದಾನೆ.

ಮನುಜನು ಉತ್ತಮನು ಹಾಗೂ ಸಮಸ್ತವೂ ಉತ್ತಮವು,
ಇದೇ ಆಗಿದೆ ಉಭಯ ಲೋಕಗಳ ಯಥಾರ್ಥವು.

ಇದೇ ಇಹುದು 'ಆ' ಅಸ್ತಿತ್ವದ ಬಹಿರಂಗ ರೂಪ,
ಉಳಿದಿದ್ದು ಬ್ರಹ್ಮಾಂಡದ ಅರ್ಹತೆಯ ನಿಜರೂಪ ಸ್ವರೂಪ.

ಅವನು ಪರಿಚಿತನು, ಜ್ಞಾತನು, 'ಏಕ'ನೂ ಇಹನು,
ಅನ್ಯ ಇದನರಿತು ಅಚ್ಚರಿಯಲಿ ಇಹರು.

ಪಲಾಯನ ಮಾಡು ಈ ಕ್ರೂರಿಗಳಿಂದ ಬಲುದೂರ 'ಬಹರಿ'
ನೀನಿರು ಸದಾ ಪರಮ ಪುರುಷರ ಮಾರ್ಗದ ಸನ್ನಿಧಿಯಲಿ.

ಆಭರಣ-೨೧

ದೈವೀ ಸಂದೇಶದ ಕುರಿತಾದ ವರ್ಣನೆ

ಯಾವ ಸಮಯದಲ್ಲಿ 'ಸತ್ಯರೂಪಿ' ಮಹಾಮಹಿಮನು ಅವ್ಯಕ್ತ ಕೋಶವಾಗಿದ್ದಾಗ ಅವನ ಜತೆ ಯಾರೂ ಇರಲಿಲ್ಲ. ಈ ಸಂದರ್ಭದಲ್ಲಿ ಒಂದು ಪ್ರಶ್ನಾರ್ಹತೆಯ ಅವಕಾಶವಿದ್ದು, ಖಂಡಿತವಾಗಿಯೂ ಅಲ್ಲಿ ಯಾರೂ ಇರದಿದ್ದರೆ, ಆ ಸತ್ಯ ಅವ್ಯಕ್ತವು ಯಾರಿಂದ ಇತ್ತು, ಹೇ ಆತ್ಮೀಯನೇ, ಸತ್ಯವು ಅವ್ಯಕ್ತವಾಗಿದ್ದರೆ ಅದು ಕೇವಲ ತನ್ನಿಂದಲೆ, ಅದು ಪ್ರಕಟವಾದಾಗಲೂ ಕೇವಲ ತನಗಾಗಿ, ಯಾಕೆಂದರೆ 'ಅವನ' ಪರ್ಯಾಯ ಯಾರೂ ಇಲ್ಲವೇ ಇಲ್ಲ. ಇದರ ಅಸ್ತಿತ್ವವು ತನ್ನ ಮಡಿಲಲ್ಲಿ ನಾಸ್ತಿಗೆ ಸ್ಥಳಾವಕಾಶವನ್ನೇ ನೀಡುವುದಿಲ್ಲ. ಅದು ಎಲ್ಲಾ ಸ್ಥಿತಿಗಳಲ್ಲಿಯೂ ತನ್ನ ಸ್ಥಿತಿಯ ಮೇಲೆಯೇ ಆಗಿದ್ದು, ಪರಿಪೂರ್ಣತೆಯಲ್ಲಿಯೂ, ನಿಯಮ ಪಾಲನೆಯಲ್ಲಿಯೂ ಶಾಶ್ವತವೂ, ಚಿರಂತನವೂ ಆಗಿದೆ. ಆದರೆ ಸ್ಪಷ್ಟವಾಗುವುದೇನೆಂದರೆ ಅವ್ಯಕ್ತ ಕೋಶದಲ್ಲಿ ಕೇವಲ ಅಸ್ತಿತ್ವವಿದ್ದು, ಅದರ ಇರುವಿಕೆಯ ಹೊರತಾಗಿಯೂ ಜ್ಞಾನವಿರಲಿಲ್ಲ, ಆದರೆ ಇವರೆಡುಗಳು ಒಂದು ಇನ್ನೊಂದರಲ್ಲಿ ಸಮ್ಮಿಳಿತವಾಗಿದ್ದವು. ಇದರ ತಾತ್ಪರ್ಯವೆಂದರೆ ಆ ಅಸ್ತಿತ್ವದ ಸ್ಥಾನವು ವರ್ಣರಹಿತವಾಗಿದ್ದು, ತನ್ನ ಜ್ಞಾನದಿಂದಲೇ ಅವ್ಯಕ್ತವಾಗಿತ್ತು (ರಹಸ್ಯಾತ್ಮಕವಾಗಿತ್ತು). ಜ್ಞಾನವನ್ನು ತನ್ನ ಆವೇಶದಿಂದ ಪ್ರಕಟಗೊಳಿಸಿದಾಗ ಅದು ತನ್ನದೇ ಜ್ಞಾನದ ಮೇಲೆ ಪ್ರಕಟಗೊಂಡಿತು. ಈ ರಹಸ್ಯಾತ್ಮಕವೂ ಸಾಕ್ಷ್ಯ ವಚನದ ವರ್ಣವು ಅದೇ ವರ್ಣರಹಿತತೆಯಿಂದ ಅರ್ಥಾತ್ ಅರಿವಿನ ಅಸ್ತಿತ್ವದ ಮಧ್ಯಸ್ಥಿಕೆಯಿಂದ ಲಾಂಛನವಾಗಿ ಪ್ರಕಟವಾಯಿತು. ಅಕಸ್ಮಾತ್ ಅಲ್ಲಿರದಿದ್ದರೆ ಇಲ್ಲಿ ಹೇಗೆ ಜನ್ಮ ತಾಳುತ್ತಿದ್ದರು.

'ನಾರಂಗಿ'ಯನ್ನು ಕಂಡಾಗ 'ರಂಗರಹಿತ'ನ ರಹಸ್ಯ ಬಯಲಾಯಿತು.
ಇದರ ಹೆಸರನ್ನು ತಪ್ಪಾಗಿ ಇಡಲಾಗಿದೆ, ವಸ್ತುತಃ ಇದು ರಂಗುರಂಗಾಗಿದೆ.

ಇದೊಂದು ಲೌಕಿಕ ಉಪಮೆಯಾಗಿವೆ, ಆದರೆ ಸಂದರ್ಭದ ಸೂಕ್ಷ್ಮತೆಯಿಂದ ಅದರ ಪ್ರಸ್ತಾಪವು ಅಪ್ರಸ್ತುತವಾಗಿದೆ. ಆದರೆ ಆಗ್ರಹದ ಅವಶ್ಯಕತೆಗನುಗುಣವಾಗಿ ಬರೆಯಲಾಗಿದೆ. ಯಾಕೆಂದರೆ ದಿವ್ಯವಾಣಿಯು ಒಂದು ದೀಪವಾಗಿದೆ. ಅದರ ಹೊರತು ದಿವ್ಯವಾಣಿಯ ವಾಸ್ತವಿಕತೆಯು ಸಂಪೂರ್ಣವಾಗಿ ಅರ್ಥವಾಗುವುದಿಲ್ಲ. ಉದಾಹರಣೆಗೆ ಒಬ್ಬ ವ್ಯಕ್ತಿಯು ತನ್ನ ಅಂದಾಜಿಗಿಂತಲೂ ಅಧಿಕವಾಗಿ ಮದ್ಯವನ್ನು ಸೇವಿಸಿದರೆ, ಅವನ ಬುದ್ಧಿಯು ನಾಶವಾಗುತ್ತದೆ. ಈ ಸ್ಥಿತಿಯಲ್ಲಿ ಅವನ ನಡುವಿನಲ್ಲಿ ಕಟ್ಟಿಕೊಂಡಿರುವ ಬಂಗಾರದ ನಾಣ್ಯಗಳ ಚೀಲವನ್ನು ಬಿಚ್ಚಿಕೊಂಡರೂ, ಅದರ ಪ್ರಜ್ಞೆ ಅವನಿಗಿರುವುದಿಲ್ಲ. ಹಾಗಾದರೆ ಮೃತವ್ಯಕ್ತಿ ಹಾಗೂ ಅವನ ಮಧ್ಯೆ ಏನು ಅಂತರವಿದೆ.

ಆದರೆ ಅವನು ಮೃತನ ಜೀವವನ್ನು ಹೊಂದಿದವನಾಗಿದ್ದಾನೆ. ಅರ್ಥಾತ್ ಆತ್ಮದ ವಿಶೇಷ ಹಂತವಾಗಿರುವ ಅವನ ಅಸ್ತಿತ್ವವು ತನ್ನ ಸ್ಥಾನದಲ್ಲಿ ಇದ್ದೆ ಇದೆ. ಅವನ ದೈವೀಜ್ಞಾನವು ಮದ್ಯದ ಅಮಲಿನ ಪ್ರಭಾವದಿಂದ ಅವನ ಅಸ್ತಿತ್ವದಲ್ಲಿ ಅಂತರ್ಗತವಾಗಿದೆ. ಒಂದೆರೆಡು ತಾಸುಗಳಲ್ಲಿ ಪ್ರಜ್ಞೆ ಮರಳಿ ಬರುತ್ತದೆ. ಅರ್ಥಾತ್ ಅವನ ಬುದ್ಧಿಯು ಮರಳಿ ವ್ಯಕ್ತವಾಗುತ್ತದೆ. ಆಗ ಅವನಿಗೆ ಅರಿವಾಗುತ್ತೆ 'ನಾನು ಇದ್ದೇನೆ ಹಾಗೂ ಈ ವಸ್ತುಗಳು ನನ್ನವಿವೆ. ಫಲಸ್ವರೂಪ ಅವನ ಅಸ್ತಿತ್ವವು ಮದಿರೆಯ ವರ್ಣರಹಿತತೆಯಲ್ಲಿ ಪ್ರಮತ್ತವಾಗಿ ಬೋಧರಾಹಿತ್ಯವಾಗಿತ್ತು. ಇದು 'ಸಹಭಾಗಿ ವಿರಹಿತ ಸ್ಥಿತಿ'ಯಾಗಿವೆ. ತನ್ನ ಉಪಸ್ಥಿತಿಯ ಅರಿವಿನ ಸ್ಥಿತಿಯಲ್ಲಿ ಮರಳಿದಾಗ ಅದು 'ಏಕತ್ವ'(ವಹದತ್)ವಾಯಿತು ಅದು ತನ್ನ ಅಸ್ತಿತ್ವದಲ್ಲಿದ್ದ ತನ್ನ ಅರ್ಹತೆಗಳನ್ನು ಒಂದೊಂದಾಗಿ ಪ್ರತ್ಯೇಕಗೊಳಿಸಿ, ವೀಕ್ಷಿಸಿದಾಗ ಅದು 'ಏಕಮಾತ್ರ' (ವಾಹೀದಿಯತ್) ವಾಯಿತು. ಈ ಮೂರು ಅರ್ಹತೆಗಳ ಪ್ರಕಟ ಸ್ಥಿತಿಯ ಜತೆಗೆ ಮತ್ತೆ ಮೂರು ಅರ್ಹತೆಗಳು ಪ್ರಕಟವಾದವು. ಅವೆಂದರೆ ಆಂತರ್ಯ ಬಯಕೆ, ದೃಷ್ಟಾಂತ ಹಾಗೂ ಸಾಕ್ಷವಚನ, ಆಂತರ್ಯ ಬಯಕೆಯು ಸಹಭಾಗಿ ವಿರಹಿತ ಸ್ಥಿತಿಯಾದರೆ, ದೃಷ್ಟಾಂತವು ಏಕತ್ವ ಹಾಗೂ ಸಾಕ್ಷ್ಯವಚನ ಏಕಮಾತ್ರತ್ವದ ನಿದರ್ಶನವಾಗಿದೆ.

ಯಾವುದು ಸುಪ್ತವಾಗಿತ್ತು ವಿರಹಿತ ಸ್ಥಿತಿಯಲ್ಲಿ ಮಿತ್ರ
ಅದೇ ಪ್ರಕಟರೂಪದಲ್ಲಿದೆ ಏಕತ್ವ ಸ್ಥಿತಿಯಲ್ಲಿ

'ಏಕತ್ವ'ವು ಮರೆಯಾಗಿ ಆಯಿತು 'ಏಕಮಾತ್ರ'ತ್ವ
ಇಲ್ಲಿ ವರ್ಣಿಸಲಾಗಿದೆ ಎಲ್ಲದರ ಪ್ರಕಟ ರೂಪ

ಈ ಮೂರು ಅರ್ಹತೆಗಳು ವಾಸ್ತವದಲಿ ಒಂದೇ
ಮೂಲದಲಿ ಬೀಜದಂತೆ, ಇದರಿಂದ ಸಸಿ ಹಾಗೂ ಮರದಂತೆ

ಹೀಗಾಗಿ ವಿರಹಿತ ಸ್ಥಿತಿಯು ವಸ್ತುತಃ ಏಕತ್ವವು
ಇದನು ಕಾಣಬೇಕಷ್ಟೆ ಅರಿವಿನ ನೇತ್ರದಿಂದ ಮಾತ್ರ

ಮೂಲದ ಕಡೆ ಹೊರಳಿ ಸಂಬಂಧ ಬೆಳೆಸು ಹೇ 'ಬಹರಿ'
ಎಲೆ, ಹೂಗಳ ಮೋಹದಲಿ ಆಗಬೇಡ ಬಂಧಿತನು.

ಆಭರಣ–೨೨

ರಹಸ್ಯಕೋಶದಲ್ಲಿ 'ಸ್ವಯಂ'ನ ಶೋಧ

ಹೇ ಆತ್ಮೀಯನೇ, ರಹಸ್ಯಕೋಶದ ಅಮೃತ ರತ್ನದ ಮೇಲೆ ಪ್ರಭುತ್ವ ಸಾಧಿಸುವ ನಿನ್ನ ಪ್ರಯತ್ನವನ್ನು ಬಿಟ್ಟು ಬಿಡು, ಯಾಕೆಂದರೆ ನೀನು ನಿಯಮಪಾಲಕನಾಗಿದ್ದಿ. ಆದರೆ ಅವನು ನಿಯಮದ ಸೃಷ್ಟಿಕರ್ತನಾಗಿದ್ದಾನೆ. ನಿನ್ನ ಚಿಂತನೆಯ ವ್ಯಾಪ್ತಿಯಲ್ಲಿ ಅದ್ಹೇಗೆ ಅವನು ಸಂಪೂರ್ಣವಾಗಿ ಬರಬಹುದು. ಈ ಸೂಕ್ಷ್ಮವನ್ನು ನಾನು ಕವನರೂಪದಲ್ಲಿ ಬರೆದಿದ್ದೇನೆ. ಇದರ ಬಗ್ಗೆ ಆಲೋಚಿಸು ಹಾಗೂ ನಿನ್ನ ಮನಸ್ಸಿಗೆ ನೆಮ್ಮದಿಯನ್ನು ಪಡೆಯುವಂತಾಗು.

ಹೀಗಾಗುತ್ತೆ ಮೈಮರೆವಿನಲ್ಲಿ ಹಲವು ಸಲ ಮಿತ್ರ
ಆಗವನು ಮನುಜನು ಶಿಲೆಯಂತೆ ಆಗ

ಜ್ಞಾನವೂ ಇಲ್ಲ, ಹೃದಯವೂ, ಜಾಣ್ಮೆಯ ನೋಟವೂ ಇಲ್ಲ
'ಸ್ವಯಂ'ವೂ ಇಲ್ಲ, ಸೃಜನನ ಆಲೋಚನೆಯೂ ಇಲ್ಲ.

ಅಲ್ಪ ಪ್ರಮಾದದಿಂದ, ವಿಶ್ವವಿಡಿ ಆವರಿಸುವುದು ನಿಶೆಯು
ಶ್ರೇಷ್ಠನ ಬಗ್ಗೆ ಭಯಪಡು, ಹಟಮಿಲನಕ್ಕೆ ಅಲ್ಲ.

ಈ ಸ್ಥಿತಿಯಲ್ಲಿ ಬೇಡ, ಹಣಧನದ ಬಯಕೆ;
ದುಃಖ ನೆಮ್ಮದಿಯ ಸಾಮಿಪ್ಯವು ಬೇಡ.

ಈ ಸಮಯದಲ್ಲಿ ಇಲ್ಲ ಪರವಶತೆಯೂ, ದೈವಿ ಸಂವಾದವೂ
ಭೂತವೂ ಇಲ್ಲ, ಭವಿಷ್ಯವೂ ಇಲ್ಲ,–ಇಲ್ಲ ವರ್ತಮಾನವೂ

ಆಗುವುದು ಅದರೊಳಗೆ ಜ್ಞಾನದ ಪ್ರಕಟ
ಅದರ ಕೃಪೆಯಿಂದ ಸಿಗುವುದು 'ಸ್ವಯಂ'ನ ದರ್ಶನ

ಅಸ್ತಿತ್ವದ ಯೋಚನೆ ತಲೆಯಲಿ ವ್ಯಾಪಿಸಿತು.
ಕೋಣೆಯಿಂದ ಹೊರಬಂದೆ ದ್ವಾರಕೆ ನಾನು.

ಜ್ಞಾನವು ತನ್ನ ಮೂಲದಿಂದ ಹೊರಹೊಮ್ಮಿದಾಗ
ಕ್ರಮಬದ್ಧವಾಗಿ ಅಲ್ಲಿಂದಲೆ ಅದಾಯಿತು ಪ್ರಕಟ

ಬಾಹ್ಯದಲ್ಲಿ ಆಂತರ್ಯದಲ್ಲಿ ಇರುವ ಪ್ರತಿ ವಸ್ತುವೂ

ಈ ರೀತಿಯಲಿ ಆಗುವುದು ಪ್ರಕಟರೂಪದಲಿ ಪ್ರತ್ಯಕ್ಷ

ಆಗಿದೆ ರಹಸ್ಯ ಲೋಕದ ರೇಖಾ ಚಿತ್ರವು ಇದು
ಅದುವೇ ಆಗಿದೆ ರಹಸ್ಯಕೋಶದ ವೃತ್ತಾಂತವು.

ಈ ಕೋಶದ ನೆರವಿಂದ ನೀ ಸ್ವಯಂ ಪ್ರಯತ್ನಿಸು
ಸೂರ್ಯನು, ಸ್ವಯಂವನ್ನು ಎದುರುಬದುರಾಗಿ ನಿಲ್ಲಿಸು.

'ಬಹರಿ' ಇದು ಅಲ್ಲಾ ಸತ್ಯದ ಶೋಧವು
ನಿನ್ನ ಪ್ರತಿಮಾತು ಇಹುದು ಬರಿ ಕಲ್ಪಿತವು.

ಆಭರಣ-೨೩

'ದಿವ್ಯಪ್ರಭೆ'ಯ ಅಸ್ತಿತ್ವ ಹಾಗೂ ದಿವ್ಯಜ್ಞಾನದಿಂದ ಪವಿತ್ರವಾಗಿರುವ ಬಗ್ಗೆ ವ್ಯಾಖ್ಯಾನ

ದಿವ್ಯಪ್ರಭೆಯು, ಅಸ್ತಿತವ ಹಾಗೂ ದಿವ್ಯಜ್ಞಾನ ಇವೆರಡವುಗಳಿಂದಲೂ ಪವಿತ್ರವಾಗಿವೆ. ಒಂದು ಮುಗ್ಧ ಮಗುವಿನ ತರಹ. ಯಾಕೆಂದರೆ ಮುಗ್ಧ ಮಗುವಿಗೆ, ನೀರು ಹಾಗೂ ಅಗ್ನಿಯ ಮಧ್ಯದ ಬೇಧದ ಅರಿವು ಇರುವುದಿಲ್ಲ. ಯಾವ ರೀತಿಯಿಂದ ಅವನು ನೀರಿನಲ್ಲಿ ಕೈ ಹಾಕುತ್ತಾನೋ, ಅದೆ ತರಹ ಅಗ್ನಿಯಲ್ಲೂ ಸಹ ಹಗ್ಗ ಹಾಗೂ ಹಾವು ಎರಡೂ ಅವನಿಗೆ ಒಂದೇ ಆಗಿರುತ್ತವೆ. ಹಾವಿನ ಕಡಿತ, ಹಾಗೂ ಅಗ್ನಿಯ ಸುಡುವಿಕೆ ಇವೆರಡರ ಅರಿವು ಅವನಿಗಿರುವುದಿಲ್ಲ. ಯಾಕೆಂದರೆ ಅವನ ಅಸ್ತಿತ್ವವೂ ಹಾಗೂ ದಿವ್ಯಜ್ಞಾನವೂ ತನ್ನ ಪರಾಕಾಷ್ಠೆಯನ್ನು ತಲುಪಿರುವುದಿಲ್ಲ, ಅದು ಹಾಗಾಗಿದ್ದರೆ ಅವನು ತನ್ನ ರಕ್ಷಣೆಯ ಭಾವವನ್ನು ಅರಿತವನಾಗಿರುತ್ತಿದ್ದನು, ಯಾರಾದರೂ ಈ ವಿಷಯದಲ್ಲಿ ಅಸ್ತಿತ್ವ ಹಾಗೂ ದಿವ್ಯಜ್ಞಾನದ ಪಾತ್ರವಿಲ್ಲವೆಂದು ವಾದಿಸಿದರೆ, ಮಗುವು ತಾಯಿಯ ಸ್ತನದಿಂದ ಹಾಲನ್ನು ಹೇಗೆ ಹೀರುತ್ತದೆ? ಹೇ ಆತ್ಮೀಯನೇ! ಅಸ್ತಿತ್ವ ಹಾಗೂ ದಿವ್ಯಜ್ಞಾನ ಅವನ ವೈಯಕ್ತಿಕ ಅರ್ಹತೆಗಳಾಗಿವೆ. ಈ ಎರಡೂ ವಿಷಯಗಳು ಅವನಲ್ಲಿ ಇಲ್ಲವೆಂದು ಈ ಅಲ್ಪನು ಸುತಾರಾಂ ನುಡಿಯನು. ಬದಲಾಗಿ ಅದು ಅವನ ಸ್ಥಿತಿಗೆ ಅನುಗುಣವಾಗಿದ್ದು, ದಿನದಿಂದ ದಿನಕ್ಕೆ ಪ್ರಗತಿಯಲ್ಲಿದೆ. ಅವನು ಪ್ರೌಢನಾದಾಗ ಈ ಪ್ರವೃತ್ತಿಗಳು ತಮ್ಮ ಚರಮಕ್ಕೆ ತಲುಪುತ್ತವೆ. ಬದಲಾಗಿ ಆದಿ ಹಾಗೂ ಅನಂತ ಮಧ್ಯದ ಚರಮ ಸ್ಥಿತಿಯೇ ಯೌವನವಾಗಿದ್ದು, ಮತ್ತೆ ಇಲ್ಲಿಂದಲೇ ಅದರ ಅವನತಿ ಪ್ರಾರಂಭವಾಗುತ್ತದೆ. ಹೇ ಧಾರ್ಮಿಕ ನಡೆಯವನೇ! ಪ್ರಯತ್ನಿಸು,

ಪ್ರಭೆಯಾಗುವಂತೆ ನೀನು, ಮತ್ತು ಹೃದಯ ಹಾಗೂ ಆತ್ಮದಿಂದ ದೂರಾಗುವಂತೆ, ಯಾಕೆಂದರೆ ಪ್ರಭೆಯಲ್ಲಿ ಮಾತ್ರ ಸಮ್ಮಿಳನವಿದೆ. ಉಳಿದವುಗಳೆಲ್ಲೆಲ್ಲಾ ವಿಭಜನೆ ಇದೆ.

ಪ್ರಭೆಯಂತೂ ಪ್ರಭೆಯಾಗಿದೆ. ಅಂಧಕಾರ ಮುಕ್ತವಾಗಿದೆ.
ಇದರ ಲಾಭದಿಂದ ವಿವೇಚನೆಯು ವಿವಶವಾಗಿದೆ.

ವಿವೇಚನೆಯು ಇದರಲ್ಲಿ ಸಮ್ಮಿಳಿತವಾದಾಗ
ಅಲ್ಲಿಯೇ ಆಗುವುದು ಆತ್ಮವು ನಿರ್ಭೀತ

ಯುಕ್ತಿಗಳು ಭೋಗ-ವಿಲಾಸದಲಿ ಸಿಲುಕಿಕೊಂಡಾಗ,
ಆತ್ಮವಾಗುವುದು ಆಗ ಮಣ್ಣಿನ ಸರಿ ಸಮಾನ.

ಈ ಅರ್ಹತೆಗಳು ನಾಮಗಳು ಇಹುದು ಮೂರು,
ಇದಿಲ್ಲವಾದರೆ ಪ್ರಭೆಯು ಆಗುವುದು ಸಮಸ್ತದಿಂದ ಮುಕ್ತ.

ಪ್ರಭೆಯಾಗು ನೀನು, ಆತ್ಮವಲ್ಲಾ; ಹೇ ಬಹರಿ!
ಪ್ರಭೆ ಮದಿರೆಯಾಗಿದೆ, ಆತ್ಮವು ಬರಿ ದ್ರಾಕ್ಷಿ.

ಆಭರಣ-೨೪

'ದಿವ್ಯಪ್ರಭೆ' ಬುದ್ಧಿವಂತನೂ ಅಲ್ಲ ಬುದ್ಧಿಹೀನವೂ ಅಲ್ಲ

'ದಿವ್ಯಪ್ರಭೆ'ಯನ್ನು ಸಜ್ಜನರು ತೀರ್ಮಾನಿಸಿದರೇನೆಂದರೆ 'ದಿವ್ಯಪ್ರಭೆ'ಯು ಬುದ್ಧಿವಂತವೂ ಅಲ್ಲ, ಬುದ್ಧಿಹೀನವೂ ಅಲ್ಲ, ನಿಸ್ಸಂದೇಹವಾಗಿ ದಿವ್ಯಪ್ರಭೆಯು ಬುದ್ಧಿರಹಿತವಲ್ಲ. ಯಾಕೆಂದರೆ ಇದರ ಸಂಬಂಧವು ಮುಕ್ತಿಯ ಜತೆಗಿದೆ, ಆದರೆ ಬುದ್ಧಿವಂತನ ಸಂಬಂಧವು ಎಚ್ಚರಿಕೆಯ ಜತೆಗಿದೆ. ಹೀಗಾಗಿ ದಿವ್ಯಪ್ರಭೆಯನ್ನು ಬುದ್ಧಿವಂತ ಎಂದು ಹೇಗೆ ಕರೆಯಬಹುದು? ಆದರೆ ಬುದ್ಧಿಹೀನವೂ ಅಲ್ಲ ಎಂಬುದಕ್ಕೆ ಜನರು ಪ್ರಶ್ನಿಸುತ್ತಾರೆ, ಇದ್ದೇಗೆ ಸಾಧ್ಯ? ಬುದ್ಧಿಹೀನವಿಲ್ಲವೆಂದ ಬಳಿಕ ಖಂಡಿತವಾಗಿಯೂ ಬುದ್ಧಿವಂತನಾಗಿರಲೇಬೇಕು. ಬುದ್ಧಿವಂತರು ಇದುರ ಬುದ್ಧಿವಂತಿಕೆಯಾಗಿರುವುದನ್ನು ಸ್ವೀಕರಿಸುವುದಿಲ್ಲ. ಆದರೆ ಈ ಹುಚ್ಚನು, ತನ್ನ ಬುದ್ಧಿಹೀನತೆಯಿಂದ ಇದನ್ನು ಸರಿ ಎಂದು ಭಾವಿಸುತ್ತಾನೆ. ಯಾಕೆಂದರೆ ಫಕೀರನ ಧರ್ಮಶಾಲೆಯಲ್ಲಿ ಒಂದು ಬಾವಿ ಇದೆ. ಫಕೀರನು ಒಂದು ದಿನ ಬಾವಿಯ ಬಳಿ ಕುಳಿತುಕೊಂಡಾಗ ಒಬ್ಬ ಯಾತ್ರಿಕನು ಅಲ್ಲಿಗೆ ಬಂದನು ಮತ್ತು ಪ್ರಶ್ನಿಸಿದನು. 'ಈ ಬಾವಿಯ ನೀರು ಸಿಹಿಯಾಗಿದೆಯೋ

ಅಥವಾ ಉಪ್ಪು' ನಾನು ನುಡಿದೆ 'ಸಿಹಿ ಇಲ್ಲ, ಆದರೆ ಉಪ್ಪೂ ಇಲ್ಲ' ಇದನ್ನು ಕೇಳಿ ಅವನು ನಸುನಕ್ಕನು. ಸುಮ್ಮನೆ ಕುಡಿದು ಹೋದ. ಮಾತು ಖಾರವಾಗಿದ್ದರೆ ಸುತಾರಾಂ ನೀರು ಕುಡಿಯುತ್ತಿರಲಿಲ್ಲ.

ದಿವ್ಯಪ್ರಭೆಯು ಬುದ್ಧಿವಂತವೂ ಹೌದು ಬುದ್ಧಿಹೀನವೂ ಹೌದು,
ಸದಾ ಸ್ಥಿರ ವಿವರಣೆಯ ಖನಿಯಂತೆ ಇಹುದು ಅದು.

ಅವನಾಗಿದ್ದಾನೆ ಇವೆರಡರಿಂದ ಬಹುತೇಕ ಪವಿತ್ರ ಸದಾ,
ದಿವ್ಯಪ್ರಭೆಯಿಂದ ಜ್ಞಾನವು ಇಹುದು ಅರಿವಿಲ್ಲದೆ ಸದಾ.

ನಾನೇನು ಅರಿತಿದ್ದೇನೆ ಅದನು ಕೇಳು ಹೇ ಸಜ್ಜನನೇ,
ಜ್ಞಾನದಿಂದಲೇ ಇಹುದು ಹೂವಿನಲಿ ವರ್ಣವೂ ಸುಗಂಧವೂ.

'ಬಹರಿ' ವ್ಯರ್ಥವು 'ದಿವ್ಯಪ್ರಭೆ' ಪ್ರಾಪ್ತಿಯ ಯತ್ನವೂ,
ಇದೇ ಸೂಕ್ತವು ತಿಳಿ, ಮಾಡದಿರು ಇದರ ವಾಗ್ವಾದವನು.

ಆಭರಣ–೨೫

'ದಿವ್ಯಪ್ರಭೆ'ಯು ಯಾಕೆ 'ಏಕ'ವಾಗಿದೆ

ಒಂದೇ 'ದಿವ್ಯಪ್ರಭೆ'ಯು ಹಲವು ವಿಧದ ಶರೀರಗಳಿಂದ ಆವೃತ್ತವಾಗಿದೆ. ಅಕಸ್ಮಾತ್ ಯಾವನೊಬ್ಬನು ಈ ಪ್ರಶ್ನೆ ಕೇಳಿದರೆ 'ದಿವ್ಯಪ್ರಭೆ'ಯು 'ಏಕ'ವಾಗಿದ್ದರೆ, ಒಬ್ಬ ವ್ಯಕ್ತಿ ಮದಿರೆಪಾನ ಮಾಡಿದರೆ ಮತ್ತೊಬ್ಬ ವ್ಯಕ್ತಿ ಪ್ರಮತ್ತವೇಕೆ ಆಗುವುದಿಲ್ಲ.

ಹೇ ಆತ್ಮೀಯನೇ! ಮನುಷ್ಯರಿಗೆ ಮೂನ್ನೂರ ಅರವತ್ತು ಅಂಗಗಳನ್ನು ನೀಡಲಾಗಿದೆ. ಆದರೆ ಒಂದೇ ಜೀವವು ಎಲ್ಲದರಲ್ಲೂ ನಿರಂತರ ಚೈತನ್ಯಮಯವಾಗಿದೆ. ಅಕಸ್ಮಾತ್ ಎಡಗಾಲಿಗೆ ಮುಳ್ಳು ಚುಚ್ಚಿದರೆ ಬಲಗಾಲಿನಿಂದ ರಕ್ತಸ್ರಾವ ಏಕೆ ಆಗುವುದಿಲ್ಲ? ಬಲಗೈಗೆ ಗಾಯವಾದರೆ ಅದು ಎಡಗೈ ಮೇಲೆ ಯಾಕೆ ಪ್ರಕಟವಾಗುವುದಿಲ್ಲ ಅದರಲ್ಲೂ ಅದೇ ಜೀವವಿದೆ. ಇದೇ ರೀತಿ ದಿವ್ಯಪ್ರಭೆಯು 'ಏಕ'ವಾಗಿದೆ.

ಇಹದೊಂದೆ 'ಪರಂಜ್ಯೋತಿ'ಯು ಸಮಸ್ತ ಜೀವಿಗಳನು ಆವೃತ
ಜೀವಕೆ ದೇಹ, ದೇಹಕೆ ವಿಶ್ವವು ಇರುವಂತೆ ಆವೃತ

'ಬಹರಿ'ಯೇ ನಿನಗೆ ಕಡ್ಡಾಯ, ಎಲ್ಲರ ಗೌರವ–ಮರ್ಯಾದೆ
ಈ ದಿವ್ಯಪ್ರಭೆಯು ಬಡ ಬಲ್ಲಿದರಿಗೆ ಇಹುದು ಸಮವಾಗಿ ಆವೃತ

ಆಭರಣ–೨೬

'ಸಹಭಾಗಿ ವಿರಹಿತ ಸ್ಥಿತಿ'ಯ ಜ್ಯೋತಿಯ ಸರ್ವತ್ರವಾಗಿದೆ

ನಾನು ಒಂದು ದಿನ, ನನ್ನ ಪೀರ್–ಮುರ್ಷದ್ ಮಾನ್ಯರ ಸಮಕ್ಷಮ ಹಾಜರಾಗಿದ್ದೆ, ಆಗ ಸಹಭಾಗಿ ವಿರಹಿತ ಸ್ಥಿತಿಯ ಜ್ಯೋತಿಯ ಪ್ರಸ್ತಾಪವಾಯಿತು. ಮುರ್ಷದರು ಇದಕ್ಕೆ ಪ್ರತಿಕ್ರಿಯಿಸಿ ನುಡಿದರು. ಇದು ಸಮಸ್ತ ಪದಾರ್ಥಗಳನ್ನು ಆವರಿಸಿದೆ. ಆಕಸ್ಮಿಕವಾಗಿ ಕೈ ಉದ್ದದ ಒಣಗಿದ ಕಟ್ಟಿಗೆಯ ತುಂಡು ಅಲ್ಲಿ ಬಿದ್ದಿತ್ತು. ಒಬ್ಬ ವ್ಯಕ್ತಿಯು ಅದನ್ನು ಎತ್ತಿಕೊಂಡು 'ಏನು ಇದರಲ್ಲೂ 'ಸಹಭಾಗಿ ವಿರಹಿತ ಸ್ಥಿತಿ'ಯ ಜ್ಯೋತಿ ಇದೆಯೇ?' ಎಂದು ಪ್ರಶ್ನಿಸಿದ, ಅದಕ್ಕವರು "ಹೌದು ಇದೆ" ಎಂದು ಉತ್ತರಿಸಿದರು. ಅವನು ಪ್ರಶ್ನಿಸಿದ "ಅದ್ಹೇಗೆ" ಆಗ ಮುರ್ಷದರು ಉತ್ತರಿಸಿದರು" ಇದು ಹಸಿರಿದ್ದಾಗ ಇದರಲ್ಲಿ ಆತ್ಮವು ವನಸ್ಪತಿಯ ರೂಪದಲ್ಲಿತ್ತು, ಇದು ಒಣಗಿ ಅದರ ಆತ್ಮವು ಜಡರೂಪಿಯಾಗಿದೆ. ಪ್ರತಿಯೊಂದು ವಸ್ತವು ಅದು ಶಾರೀರಿಕವಾಗಿ, ಆಧ್ಯಾತ್ಮಿಕವಾಗಿ ಇವೆಲ್ಲವುಗಳಲ್ಲಿ ಜೀವಾತ್ಮವು ಜಡ, ಸಸ್ಯರೂಪಿ, ಹಾಗೂ ಮೃಗರೂಪದಲ್ಲಿ ಅವಶ್ಯವಾಗಿ ಅಸ್ತಿತ್ವದಲ್ಲಿದೆ ಹಾಗೂ 'ಸಹಭಾಗಿ ವಿರಹಿತ ಸ್ಥಿತಿ'ಯು ಪ್ರತಿಯೊಂದು ತರಹದ ಆತ್ಮದ ಉಪಸ್ಥಿತಿಯ ಸಾಕ್ಷಿಯಾಗಿದೆ.

ನಾಸೂತ್ ಹಾಗೂ ಮಲಕೂತ್‌ಗಳಲ್ಲಿ ಇರುವ ಪ್ರತಿಯೊಂದು ವಸ್ತುವು
ಅದು ಭೂ ತಳದಿಂದ ಆಕಾಶದವರೆಗೆ ನಿಶ್ಚಿತವಾಗಿ ಇದೆ.

'ಬಹರಿ' ಈ ಮೂರು ಆತ್ಮಗಳೇ ಹಾಜರಿವೆ ಸಮಸ್ತದಲಿ ಸದಾ
ಅದು ಹಿಮದಲ್ಲೂ ಅಥವಾ ಮಳೆಯಲ್ಲೂ ಅಥವಾ ಉಪ್ಪಿನಲ್ಲೂ ಇದೆ.

ಆಭರಣ–೨೭

'ಮನುಷ್ಯ ಸೃಷ್ಟಿ'ಯ ಸಾರಾಂಶವು 'ಅಳಿವು' ಆಗಿದೆ

ಬ್ರಹ್ಮಾಂಡದ ಸಮಸ್ತ ಸೃಷ್ಟಿಯ ಸಾರಾಂಶವು ಮನುಷ್ಯನಾಗಿದ್ದಾನೆ. ಮನುಷ್ಯನ ಮೂಲೋದ್ದೇಶವು ದೈವೀಜ್ಞಾನ, ದೈವೀಜ್ಞಾನದ ಪ್ರಾಪ್ತಿಯ ದೈವೀಜ್ಯೋತಿ, ಹಾಗೂ ದೈವಿಜ್ಯೋತಿಯ ಗುರಿ ಪರಮ ಪ್ರಿಯಕರ.

ಸೃಷ್ಟಿಯಿಂದ ಅಧಿಕವಾಗಿ ಪಡೆದವರು ಯಾರಿಹರು?
ದೈವೀಜ್ಞಾನದ ಹೊರತು ಮನಜನ ಗುರಿ ಬೇರೆ ಏನಿಹುದು?

ಜ್ಯೋತಿಯೇ ಆಗಿ ದೈವೀಜ್ಯೋತಿಯ ಮೂಲ ಹೇ 'ಬಹರಿ'
ಸಾಕ್ಷಾತ್ಕಾರ ಹೊರತು ಜ್ಯೋತಿಗೆ ಮಹತ್ವ ಏನಿಹುದು?

ಆಭರಣ–೨೮

'ಪರಿಪೂರ್ಣತೆ'ಯ ಚರಮ ಘಟ್ಟವು 'ಅಹಂ'ನಲ್ಲಿ ಸ್ಥಿರನಾಗಿರುವುದು ಆಗಿದೆ

ಒಂದು ದಿನ ಕನಸಿನ ಸ್ಥಿತಿಯಲ್ಲಿ ನಾನು ದೈವೀ ದರ್ಬಾರಿನಲ್ಲಿ ನನ್ನ ಮುರ್ಷದ್ ಮಾನ್ಯರು ಒಂದು ಕಡೆ ಕುಳಿತಿರುವುದನ್ನು ಕಂಡೆ. ಅಲ್ಲಿ ನಾನೂ ಇದ್ದೆ. ಅಲ್ಲಿ ಒಬ್ಬ ವಯೋವೃದ್ಧ ವ್ಯಕ್ತಿಯೊಬ್ಬರು ಸ್ವಲ್ಪ ದೂರದಲ್ಲಿ ನನ್ನ ಎದುರು ಕುಳಿತ್ತಿದ್ದರು. ಅವರ ಮತ್ತು ನನ್ನ ಮಧ್ಯ ಮಹ್ಮದರ ಜ್ಯೋತಿ ಹಾಗೂ ಇಬ್ಲೀಸಿನ (ಶೈತಾನ್) ಜ್ಯೋತಿಯ ರಹಸ್ಯತೆ ಕುರಿತು ವಾಗ್ವಾದ ನಡೆದಿತ್ತು. ಮುರ್ಷದ್ ಹಜ್ರತರು ಈ ಬಿರುಸಿನ ವಾಗ್ವಾದವನ್ನು ಆಲಿಸಿಯೂ ಮೌನವಾಗಿ ಕುಳಿತಿದ್ದರು. ಸಮಸ್ತವು ಮಹ್ಮದರ ಜ್ಯೋತಿಯ ಕಾರಣವಾಗಿವೆ ಎಂದು ನಾನು ತೀವ್ರತರವಾಗಿ ವಾದಿಸುತ್ತಿದ್ದೆ. ಆದರೆ ಅವರು ಅದು ಇಬ್ಲೀಸಿನ ಕಾರಣದಿಂದ ಎಂದು ನುಡಿಯುತ್ತಿದ್ದರು. ನನ್ನ ವಾದದ ಸಮರ್ಥನೆಯಲ್ಲಿ ನಾನು ಸಾವಿರಾರು ಆಧಾರ ಪ್ರಮಾಣಗಳನ್ನು ಉಲ್ಲೇಖಿಸಿದ್ದೆ. ಅವನು ಸಾವಿರಾರು ಸಾಕ್ಷ್ಯಗಳನ್ನು ಪ್ರಸ್ತುತ ಪಡಿಸಿ, ತನ್ನ ವಾದವನ್ನು ಸುಸ್ಥಿರಗೊಳಿಸುತ್ತಿದ್ದನು. ಅಂತಿಮವಾಗಿ ನಾನು ಆ ಅಪ್ರಿಯ ವಾಗ್ವಾದದಿಂದ ಜಿಗುಪ್ಸೆಗೊಂಡು, ನಾನು ದೈವೀಜ್ಞಾನದ ಗಣಿಯನ್ನು ಸಂಪರ್ಕಿಸಿದೆ ಮತ್ತು ಅರಿಕೆಮಾಡಿಕೊಂಡೆ 'ಹೇ ಒಳಿತು ಕೆಡುಕಿನ ವಿವೇಚಕನೇ, ಈ ಮಹನೀಯರು ನುಡಿಯುತ್ತಿರುವುದು ನಿರರ್ಥಕವಾಗಿದೆಯೇ ಅಥವಾ ವಾಸ್ತವಾಗಿದೆಯೇ? ಎಂದು ಆಗ ನುಡಿಯಲಾಯಿತು. 'ಹಾಂ! ಇದೆ" ನಾನು ಗೌರವ ಶಿಷ್ಟಾಚಾರಗಳ ಕಾರಣದಿಂದಲೂ ಚರ್ಚೆಯನ್ನು ಸ್ಥಗಿತಗೊಳಿಸಿದೆ ಹಾಗೂ ಅದೇ ಸ್ವಪ್ನದಲ್ಲಿ ನಾನು ಮನದಲಿ ಆಲೋಚಿಸಿದೆ. ಪ್ರತಿಯೊಂದು ಧರ್ಮಾಚರಣೆಯಲ್ಲಿ ಹಾಗೂ ಪ್ರತಿಯೊಂದು ಪಂಥದಲ್ಲೂ ಸಮಸ್ತ ಸೃಷ್ಟಿಯೂ ಮಹ್ಮದರ ಜ್ಯೋತಿಯಿಂದ ಅಸ್ತಿತ್ವದಲ್ಲಿ ಬರಲೆಂದು ಶೋಧನೆಯಿಂದ ಸುಸ್ಪಷ್ಟವಾಗಿದೆ ಹಾಗೂ ಇಬ್ಲೀಸನು ಮಹ್ಮದರ ಜ್ಯೋತಿಯ ರೋಷದ ಉತ್ಪತ್ತಿಯಾಗಿದೆ. ನನ್ನ ಮುರ್ಷದ್ ಹಜ್ರತರು ಈ ವಾಗ್ವಾದದ ಅಂತಿಮ ಹಂತದಲ್ಲಿ ಯಾವ ಪಕ್ಷವನ್ನು ವಹಿಸಿದರು ಗೊತ್ತೆ? 'ಅಹಂ'ನ ಜ್ಯೋತಿಯಾಗಿರುವ ಇಬ್ಲೀಸ್‌ನ ಪಕ್ಷವನ್ನು ಹಾಗೂ

• ಇಬ್ಲೀಸ – ಶೈತಾನ

'ಏಕತ್ವ'ದ ಪರಮೋಚ್ಛ ಸ್ಥಾನವನ್ನು. ಅದು ಯಾಕೆಂದರೆ ಇಬ್ಲೀಸನು 'ಅಹಂ'ಭಾವದ ಸತ್ಯತೆಯನ್ನು ಪರಿಪೂರ್ಣವಾಗಿ ಸಾಧಿಸಿದ್ದನು. ಇದಕ್ಕಾಗಿ ಅವನು ಅಭಿಶಾಪದ ರಾಜುಡುಪು ಧರಿಸಿದ್ದಾನೆ ಆದರೆ 'ಅನಾ ಖೈರ್ ಮಿನ್ನಾ' ದ ಮಾರ್ಗವನ್ನು ತ್ಯಜಿಸಿರುವುದಿಲ್ಲ. ಆದುದರಿಂದ 'ಅಹಂ'ಭಾವವು ಶ್ರೇಷ್ಠವಾಗಿದೆ ಹಾಗೂ ಇದರ 'ರಹಿತತೆ'ಯ ರಹಿತವಾಗಿದೆ. ಜ್ಞಾನ ಹಾಗೂ ಅರಿವಿನ ಶ್ರೇಷ್ಠ ರತ್ನಗಳು ಈ 'ಅಹಂ'ಭಾವದಿಂದಲೇ ಹೊರಬಂದಿವೆ. ಅದೂ ಅಲ್ಲದೆ ಇದನ್ನು 'ಸಹಭಾಗಿ ವಿರಹಿತ ಸ್ಥಿತಿಯ ಜತೆ ಸಮೀಕರಿಸಿ, ಒಮ್ಮತಾಭಿಪ್ರಾಯ ಹೊಂದಿರುತ್ತಾರೆ. ಇಲ್ಲವಾದರೆ 'ಅಯಾಜ಼ನ್ ಬಾ ಅಲ್ಲಾಹ ಎಲ್ಲಿ? ಇಬ್ಲೀಸ್ ಎಲ್ಲಿ? ಹಾಗೂ ಇಬ್ಲೀಸ್‌ನ ಜ್ಯೋತಿ ಎಲ್ಲಿ? ಹೇ ಆತ್ಮೀಯನೇ! ಒಬ್ಬ ಸನ್ಮಾರ್ಗಿಯು ನನ್ನ ಪೀರ್-ಮುರ್ಷದ್‌ನನ್ನು ವಿಚಾರಿಸಿದನೇನೆಂದರೆ' 'ಪರಿಪೂರ್ಣತೆ'ಯು ಯಾವ ಸ್ಥಿತಿಯಲ್ಲಿ ಪ್ರಾಪ್ತವಾಗುತ್ತದೆ. ಆಗ ನುಡಿದರು 'ಅಹಂಭಾವ'ದ ಸ್ಥಿತಿಯಲ್ಲಿ ಅದು ಬಹುತ್ವ ಅಳಿಸುವ ಸಾಧನವಾಗಿದೆ ಹಾಗೂ 'ಏಕತ್ವ'ವನ್ನು ಪ್ರತಿಪಾದಿಸುವ ಹಾಗೂ ಸ್ಥಾಪಿಸುವವನಾಗಿದ್ದಾನೆ. ಮತ್ತೇ ಪುನಃ ಪುನಃ ನುಡಿದರು' ಗೋಗಿಯಲ್ಲಿ ಕೊಲೆ ಮಾಡುವವರೂ ಇಲ್ಲ, ಪಶ್ಚಾತ್ತಾಪ ಪಡುವವರೂ ಇಲ್ಲ, ಆದುದರಿಂದ ನಾನು ರಾಜಧಾನಿಯಾದ ಬಿಜಾಪುರಕ್ಕೆ ಹೋಗಿ, ಅಲ್ಲಿ ಹೊಸದಾಗಿ 'ಮನ್ಸೂರ'ನ ಕೋಲಾಹಲವನ್ನು ಸೃಷ್ಟಿಸಿ, ನನ್ನ 'ಅಹಂಭಾವ'ವನ್ನು ಪರೀಕ್ಷೆಗೆ ಒಳಪಡಿಸಲು ಬಯಸುತ್ತೇನೆ.

ಸರ್ವರಿಗೆ ಸೂರ್ಯವಾಗಿದೆ ಈ 'ಅಹಂ'ಭಾವ
ಶಾಹನ ಶಿರದ ಕಿರೀಟವಾಗಿದೆ ಈ 'ಅಹಂ'ಭಾವ

ಇದು ಬೀಜವಾಗಿದೆ ಹಾಗೂ ಕಿರುವೃತ್ತಾಂತವೂ ಆಗಿದೆ.
ಇದರಿಂದಾಗಿ ಸಮಸ್ತ ವಿಶ್ವವೂ ಒಂದು ವೃಕ್ಷವಾಗಿದೆ.

ಇವರೆಡೂ ಇದರಿಂದಲೆ ಆಗಿವೆ ಜ್ಞಾನವೂ ಅರಿವೂ
ಇಂದ್ರಿಯ ಹಾಗೂ ಹೃದಯದ ಜೀವಸಾರವೂ ಆಗಿದೆ.

ಇದರಿಂದಲೇ ಇರುವುದು ಸಕಲ ಅರ್ಥಗಳು, ರೂಪಗಳು
ಇದರಿಂದಲೇ ಇಹವು ಕೋಮಲತೆಗಳು, ಹಗೆ-ಸಾಧನೆಗಳು

ಚಂದ್ರ ತಾರೆಗಳು ಶೋಭಿತವು ಇದರಿಂದಲೇ
ಶೋಭಿತರು ಇದರಿಂದ ನರರು ದೇವದೂತರು

ಸಾಧಕನು ಮದೋನ್ಮತ್ತನು ಈ ಅಹಂಭಾವದಲಿ
ಇದರಿಂದಲೇ ಗಲ್ಲಿಗೇರಿದರು ಮನ್ಸೂರ ಮಾನ್ಯರು

ಅಧಿಕವಾಗಿದೆ ಈ ರಾತ್ರಿಯ ಅಂಧಕಾರ
ಸೂರ್ಯನು ಆಗಿರುವನು ಅಹಂಭಾವದ ಪ್ರತೀಕ

'ಬಹರಿ' ನೀನಂತು 'ಅಹಂ'ಭಾವದ ಪರಿಚಿತನು
ನಿನಗಿರಲಿ ಸೀಮಿತವು ಆದರೆ ಛಾಯೆಯು ಮಾತ್ರ

ಆಭರಣ-೨೯

'ಸಹಭಾಗಿ ವಿರಹಿತ ಸ್ಥಿತಿ'ಯು ಸಮಸ್ತ ಸೃಷ್ಠಿಯನ್ನು ಆವೃತ್ತವಾಗಿಯೂ ಪರಿಶುದ್ಧವಾಗಿದೆ.

'ಸಹಭಾಗಿ ವಿರಹಿತ ಸ್ಥಿತಿ'ಯು ಬ್ರಹ್ಮಾಂಡದ ಸಮಸ್ತ ಸೃಷ್ಟಿಯಲ್ಲಿ ಆವೃತ್ತವಾಗಿದೆ. ಆದರೂ ಅದು ಪರಿಶುದ್ಧ ಹಾಗೂ ಪವಿತ್ರವಾಗಿದೆ. ಹೇಗೆ ಬೀಜವು ಫಲದೊಳಗಿದ್ದು ಫಲದ ರಸದಿಂದ ಹೊರತಾಗಿದೆ? ಅದೇ ಸಮಯಕ್ಕೆ ಅದು ಫಲದೊಳಗೂ ಇದೆ.

ಅಸ್ತಿತ್ವದ ಜ್ಯೋತಿ ನಿಶ್ಚಿತವಾಗಿ ಬ್ರಹ್ಮಾಂಡದಲ್ಲಿ ಆವೃತವಾಗಿದೆ.
ಆದರೂ ಅದು ಕುಂಬಳಕಾಯಿಯ ಬೀಜದಂತೆ ಸ್ವತಂತ್ರವೂ ಇದೆ.

ಆಭರಣ-೩೦

'ಆತ್ಮದ ವಾಸ್ತವಿಕತೆ ಅರಿಯುವುದು ಅಸಾಧ್ಯ'

ಸಂಕ್ಷಿಪ್ತ ಅವಧಿಗೆ ಬಿಜಾಪುರದ ಶಾಹ ಸಿಕಂದರ್ ಖಾನ್[೧] (ಅಂತಿಮ)ರ ಸಾಮಿಪ್ಯ ದೊರೆಯಿತು, ಅರ್ಥಾತ್ ಒಂದೆರಡು ವರ್ಷ ಶಾಹಿ ಆಸ್ಥಾನದಲ್ಲಿ ನೆಲೆಸಿದ್ದೆ. ಒಂದು ದಿನ ಸಿಕಂದರ್ ಖಾನರು ಅತೀವ ಗೌರವಾದರಗಳಿಂದ 'ಆತ್ಮ ಎಂದರೇನು?' ಎಂದು ಪ್ರಶ್ನಿಸಿದರು. ಅದರ ಸತ್ಯತೆಯ ಸಾಮರ್ಥ್ಯವನ್ನು ಶಬ್ದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುವಂಥ ವಸ್ತುವು ಆತ್ಮವಲ್ಲ ಹೀಗಾಗಿ ಬುದ್ಧಿಗೆ ಅದನ್ನು ಅರ್ಥೈಸಿಕೊಳ್ಳುವಷ್ಟು ಸಾಹಸವೆಲ್ಲಿ? ಆದರೆ ಇದು ಅಸ್ತಿತ್ವವನ್ನು ಹೊಂದಿದೆ. ಮತ್ತು ತನ್ನ ಕೋಮಲತೆಯ ಗುಣವಿಶೇಷತೆಯಿಂದಾಗಿ ಅಸ್ತಿತ್ವ ರೂಪವಾಗಿ ಸಮಸ್ತ ಕಲ್ಪನೆ ಹಾಗೂ ವಿಚಾರಗಳಿಂದ ಮುಕ್ತವಾಗಿದೆ. ವಿವೇಕದ ಹಗ್ಗವನ್ನು ಇದರ ಉನ್ನತವಾದ ಮೀನಾರದವರೆಗೆ ಒಗೆಯಲಾಗುವುದಿಲ್ಲ ಹಾಗೂ ಭ್ರಮೆಯ ಕುದುರೆಯು ಇದರ ಮೈದಾನದ ಕಡೆ ಸುಳಿಯುವುದಿಲ್ಲ. ಯಾವನಿಗೆ ಆತ್ಮದ ಪರಿವೀಕ್ಷಣೆಯು ಯೋಗವನ್ನು

ದಯಪಾಲಿಸಲಾಗುತ್ತಿದ್ದೆಯೋ ಮೊದಲಿಗೆ ಅವನ ಬಾಯಿಗೆ ಮೊಹರನ್ನು ಹಾಕಲಾಗುತ್ತದೆ.

ಆತ್ಮದ ಬಗ್ಗೆ ಅರಿಯೆನು ನಾನು, ಆದರೆ ಇದನಂತೂ ಅರೆಯುವೆ ನಾನು
ದೇವರು ರೌದ್ರತೆಯ ಭವ್ಯತೆಯಾದರೆ, ಆತ್ಮವು ಸೌಂದರ್ಯ ಭವ್ಯತೆಯಾಗಿಹುದು.

ಆದರೆ ಯಾವನಾದರೂ ಮೂರ್ಖನು ನಾನು ಅದನ್ನು ನೋಡಿದ್ದೇನೆ ಹಾಗೂ ಇತರರಿಗೂ ತೋರಿಸಬಹುದೆಂದು ನುಡಿದರೆ, ಆ ಮಾತಿನ ಪ್ರಮಾಣವೇನೆಂದರೆ ಅವನು ನಿಶ್ಚಿತವಾಗಿ ಸುಳ್ಳನ್ನು ನುಡಿಯುತ್ತಿದ್ದಾನೆ ಹಾಗೂ ನೈಜ ಅಸ್ತಿತ್ವದ ಕುರಿತು ಮಿಥ್ಯಾರೋಪ ಮಾಡುತ್ತಿದ್ದಾನೆ. ಹೇಳುವವನ ನಾಲಿಗೆಯೂ ಬೀಳಲಿ ಹಾಗೂ ಕೇಳುವವನ ಕಿವಿಗಳು ಕಿವುಡಾಗಲಿ.

ಶಿಷ್ಟಾಚಾರದ ಉದಾಹರಣೆಯಾಗಿರು ಹೇ ಹೃದಯ ಸ್ನೇಹಿತನೆ,
ಅಶಿಷ್ಟನಿಗೆ ಗೌರವವಿಲ್ಲ ಗೋಷ್ಠಿಯಲಿ ಹೇ ಸ್ನೇಹಿತನೆ.

ಯಾವನ ಕಣ್ಣುಗಳು ಹೊಂದಿಹವು ಅವನಲ್ಲಿ ಅಂತರ್ ದೃಷ್ಟಿಯನು,
ಅಶಿಷ್ಟನು ಪುಷ್ಪವಾದರೆ, ಶಿಷ್ಟನು ಪುಷ್ಪದ ನೋಟವು ಹೇ ಸ್ನೇಹಿತನೆ.

- ಸಿಕಂದರ ಆದಿಲ್ ಶಾಹ ಹಿಜರಿ (೧೦೮೩ರಿಂದ ೧೯೭೭)ರವರೆಗೆ ಬಿಜಾಪುರವನ್ನು ಆಳಿದನು. ಬಿಜಾಪುರದ ಸಂಸ್ಥಾನದ ಅವನತಿಯ ಬಳಿಕ ಬಂಧನದಲ್ಲೆ ೧೪ ವರ್ಷದ ಬಳಿಕ ಹಿ.೧೧೧೧ರಲ್ಲಿ ನಿಧನ ಹೊಂದಿದನು. ಹಜ್ರತ ಶಾಹ ನಯೀಮುಲ್ಲಾ ಬುಖಾರಿ(ರ.ಅ)ರವರ ಶಿಷ್ಯನಾಗಿದ್ದನು. (ಡಾ.ಹಫೀಜ್ ಸಯ್ಯದ್‌ರವರು 'ಕುಲಿಯಾತೆ ಬಹರಿ'ಯಲ್ಲಿ ಇವರ ಹೆಸರನ್ನು ಫಹೀಮುಲ್ಲಾ ಎಂದು ಬರೆದಿರುತ್ತಾರೆ. ಆದರೆ ಅಂಥ ಹೆಸರಿನ ಯಾವ ಧಾರ್ಮಿಕ ಸಂತರು ಬಿಜಾಪುರದಲ್ಲಿರಲಿಲ್ಲ). ಅವನ ಉಯಿಲಿನಂತೆ ತಮ್ಮ ಪೀರರ ಬಳಿಯಲ್ಲಿಯೇ ಧಪನ ಮಾಡಲಾಯಿತು. ಹಜ್ರತ್ ಬಹರಿಯವರ ಬಗ್ಗೆ ಇವನಿಗೆ ಅತೀವ ಗೌರವಭಾವವಿತ್ತು.

ಆಭರಣ–೩೧

ದುಃಖ ಹಾಗೂ ನೆಮ್ಮದಿಯನ್ನು ಅರಿಯದ ವಸ್ತು ಜೀವವಾಗಿದೆ

ಹೇ ಜೀವದ ಗೆಳೆಯನೇ, ನೀನು ಜೀವವು ಏನೆಂದು ಸದಾ ಪ್ರಶ್ನೆ ಕೇಳುತ್ತಿ? ಇದನ್ನು ಪ್ರಶ್ನಿಸುವ ಹಾಗೂ ಅದಕ್ಕೆ ಉತ್ತರಿಸುವುದು ಅದೇ ಆಗಿದೆ. ಆಕಾಶದ ಜೀವ,

ಭೂಮಿಯ ಜೀವ, ಆದಿಯ ಜೀವ, ಅನಂತತೆಯ ಜೀವ, ರಹಸ್ಯದ ಜೀವ, ಪ್ರಕಟದ ಜೀವ ಇವೆಲ್ಲವುಗಳು ಒಂದೇ ಜೀವವಾಗಿದೆ. ಯಾವ ರೀತಿ ಕಂದೀಲಿನ ಬೆಂಕಿ, ದೀಪದ ಬೆಂಕಿ, ಒಲೆಯ ಬೆಂಕಿ, ಮೇಣದ ಬತ್ತಿಯ ಬೆಂಕಿ ಎಲ್ಲವೂ ಒಂದೇ ಬೆಂಕಿಯಾಗಿದೆ. ಯಾವನು ಜೀವದ ನೈಜತೆಯನ್ನು ಅದು ಇರುವ ರೂಪದಲ್ಲಿ ಅನ್ವೇಷಿಸಿದನೋ, ಅವನು ವಾಸ್ತವದಲ್ಲಿ ಜೀವವನ್ನು ಬುದ್ಧಿಯ ವರ್ತುಲದಲ್ಲಿ ಬಂಧಿಯಾಗಿಸಿದ್ದಾನೆ. ಯಾವ ಸ್ಥಿತಿಯಲ್ಲಿದ್ದರೂ ಅದು ಸಮಸ್ತ ಜೀವಗಳ ದೊರೆಯಾಗಿದ್ದಾನೆ. ಇದು ಅತ್ಯಂತ ಪವಿತ್ರವೂ ಹಾಗೂ ಕೋಮಲವೂ ಆಗಿದ್ದು, ದೈವೀ ಜ್ಯೋತಿಯ ಪ್ರೇಮ ಸೌಂದರ್ಯವನ್ನು ಹೊಂದಿದೆ. ಆದರೆ ಈ ಸುಂದರ ಪ್ರೇಮ ಜ್ಯೋತಿಯು ಎಲ್ಲಿದೆ ಎಂಬ ಅಂಶವನ್ನು ಬೇರೆ ಕಡೆ ಪ್ರಸ್ತಾಪಿಸಲಾಗಿದೆ.

ಒಂದು ರಾತ್ರಿ ನಾನು ಕೇಳಿದೆ ನನ್ನ ಶೇಖ್‌ರನ್ನು
ಆವಾಗ ನನಗೆ ವ್ಯಕ್ತವಾಯಿತು ಜೀವದ ರಹಸ್ಯವು.

ಎರಡು ಬೆರಳುಗಳಿಂದ ಮಾಡಿದರು ಅವರು ಮಾಲಿಷ್
ನನ್ನ ಹೆಗಲಿಗೆ ನೀಡಿದರು ತಮ್ಮ ಕೃಪೆಯನು.

ಉಗುರಿನಿಂದ ಹಿಂಬದಿಗೆ ಜೋರಾಗಿ ಚುಚ್ಚಿದರು.
ನೋವಿನಿಂದ ನನ್ನ ಸ್ಥಿತಿಯಾಯಿತು ವಿಚಿತ್ರವು.

ನುಡಿದರು ಯಾವನಿಗೆ ಆಗಿದೆ ನೋವು –ನೆಮ್ಮದಿ
ಅದಕೆ ನೀಡಬಹುದಾಗಿದೆ, ಜೀವವೆಂಬ ಹೆಸರು.

ಇದೇ ಆಗಿದೆ 'ಜೀವ' ಹೇ 'ಬಹರಿ' ನೀ ಅರಿ
ವಾಗ್ವಾದವನು ಬಿಡು, ಕೇಂದ್ರದಿಂದ ಜಾಗೃತನಾಗಿರಲಿ.

ಆಭರಣ–೩೨

'ಜೀವ'ದ ರೂಪವು ಹೇಗಿದೆ

ಒಬ್ಬ ಫಕೀರನು 'ಜೀವ'ದ ರೂಪವು ಹೇಗಿರುತ್ತದೆ ಎಂದು ಪ್ರಶ್ನಿಸಿದನು. ನಾನು ಉತ್ತರಿಸಿದೆ. ಜೀವದ ರೂಪವು ಮನುಷ್ಯನ ರೂಪವಾಗಿದೆ. ಮನುಷ್ಯನ ಬಾಹ್ಯರೂಪವು ಮಣ್ಣಿನ ರೂಪದ್ದಾಗಿದೆ. ಅದ್ಹೇಗೆ ಇದು ಜೀವದ ರೂಪವಾಗುತ್ತದೆ? ಜೀವವು ಸಮಸ್ತ ಮಾಲಿನ್ಯಗಳಿಂದ ಪವಿತ್ರವಾಗಿದೆ. ಎಂದು ನುಡಿದನು. ನಾನು ನುಡಿದೆ ಅಂತರಂಗ ಹಾಗೂ ಬಹಿರಂಗದಲ್ಲಿ ಅದು ಒಂದೇ ರೂಪವನ್ನು ತಾಳಿದೆ. ಇದೂ

ಯಾವುದೇ ಬೇರೆ ರೂಪದಲ್ಲೂ ಇಲ್ಲ. ಅಥವಾ ಯಾವುದೇ ನೇರ ಮಾರ್ಗದ ಆಕಾಂಕ್ಷಿಯೂ ಅಲ್ಲ. ಅರ್ಥಾತ್ ಅದು ಮಲಕೂತ್ ಆಗಿರಲಿ ಅಥವಾ ನಾಸೂತ್ ಆಗಿರಲಿ ಅಸ್ತಿತ್ವ ಒಂದೇ ಇದೆ. ಅದೂ ಪ್ರಾಚೀನದಲ್ಲಿರುವಂತೆ ಯಾವನೊಬ್ಬನ ಜೀವದ ಹುಡುಕಾಟದಲ್ಲಿ ಹೊರಟರೆ ಅವನಿಗೆ ಶರೀರವು ಪ್ರಾಪ್ತಿಯಾಗುತ್ತದೆ. ಹಾಗೂ ಶರೀರದ ಹುಡುಕಾಟದಲ್ಲಿ ಹೊರಟರೆ ಜೀವವು ಪ್ರಕಟರೂಪವಾಗುತ್ತದೆ. ಹೀಗಾಗಿ ಶರೀರ ಮತ್ತು ಜೀವಗಳು ಮಣ್ಣು ಹಾಗೂ ನೀರು ಇವುಗಳಂತೆ ಒಂದು ಇನ್ನೊಂದರಲ್ಲಿ ಯಾವ ರೀತಿಯಿಂದ ಸಮ್ಮಿಳನಗೊಂಡಿದೆಯೆಂದರೆ, ಇವುಗಳನ್ನು ಬೇರ್ಪಡಿಸುವುದು ಅಸಾಧ್ಯವಾಗಿದೆ. ಆದರೆ ವಾಸ್ತವದಲ್ಲಿ ಇವು ಒಂದೇ ಆಗಿವೆ.

ನಾನು ಸಂಪೂರ್ಣವಾಗಿ ಆತ್ಮವಾಗಿದ್ದೇನೆ, ಮಣ್ಣಿನ ಪ್ರಕಟ ರೂಪದಲ್ಲಿದ್ದೇನೆ,
ಸುಡುವ ಕೆಂಡವಾಗಿದ್ದೇನೆ, ಆದರೆ ಬೂದಿಯಲ್ಲಿ ಅಡಗಿದ್ದೇನೆ.

ಹಲವು ಮಹನೀಯರು ನುಡಿಯುತ್ತಾರೆ, ಈ ಮಲಿನ ಶರೀರವನ್ನು ಶುಭ್ರಗೊಳಿಸಿ, ಅದನ್ನು ಪ್ರಾಪ್ತಿಸಿಕೊಳ್ಳಬಹುದಾಗಿದೆ. ಯಾಕೆಂದರೆ ಇದೇ ಜೀವದ ರೂಪವಾಗಿದೆ. ಹೀಗಾಗಿ ಯಾವುದೇ ಒಬ್ಬ ವ್ಯಕ್ತಿ ಬಾಹ್ಯ ನೋಟದಿಂದ ಅಗೋಚರವಾದ ಇನ್ನೊಬ್ಬ ವ್ಯಕ್ತಿಯನ್ನು ನೆನೆಸಿಕೊಂಡಾಗ, ಅವನ ರೂಪವು ಅವನ ಆಂತರ್ಯ ನೋಟದಲ್ಲಿ ನೆಲೆಸಿರುತ್ತದೆ. ಇದೇ ರೂಪವು ಅವನ ಜೀವದ ರೂಪವಾಗಿದೆ.

ಜೀವದ ರೂಪದ ಆಕೃತಿಯೇ ಈ ನನ್ನ ಶರೀರವು
ನನ್ನ ಗುರಿಯ ಹೂವು ಹೊಂದಿರುವ ಈ ತೋಟವು.

ಆಭರಣ–೩೩

ಆತ್ಮದ ಮೂರು ಆಯ್ದ ಅರ್ಹತೆಗಳು

ಆತ್ಮಕ್ಕೆ ಅನೇಕ ಅರ್ಹತೆಗಳಿವೆ. ಅದರಲ್ಲಿ ಆಯ್ದ ಮೂರು ಅರ್ಹತೆಗಳೆಂದರೆ ೧) ಬೌದ್ಧಿಕತೆ ೨) ಚಲನಶೀಲತೆ ಹಾಗೂ ೩) ವಾಕ್ಶೀಲತೆ. ಜಡವು ಬೌದ್ಧಿಕವಾಗಿದೆ. ಮರಗಿಡಗಳು ಬೌದ್ಧಿಕ ಶೀಲವೂ , ಚಲನಶೀಲವೂ ಆಗಿವೆ. ಮೃಗವು ಬೌದ್ಧಿಕವೂ ಚಲನಶೀಲವೂ ಹಾಗೂ ವಾಕ್ಶೀಲವೂ ಆಗಿದೆ. ಆದರೆ ಮನುಷ್ಯನು ಸಮಸ್ತ ಪ್ರಾಣಿಗಳ ಸಾರವೂ ಆಗಿದ್ದಾನೆ, ಜತೆಗೆ ಸಮಸ್ತ ಸಂಭವತೆಗಳ ಒಕ್ಕೂಟವೂ ಆಗಿದ್ದಾನೆ.

ಸಂಭವ ಲೋಕದಲ್ಲಿ ಏನೆಲ್ಲಾ ಇದೆಯೋ ಅದು ಮನುಜನಲ್ಲಿದೆ.
ಮನುಜನಲ್ಲಿ ಏನಿದೆಯೋ ಅದು ಸಂಭವ ಸಮೂಹದಲ್ಲಿಲ್ಲ.

ಆಂತರ್ಯ ಸಾಮ್ರಾಜ್ಯದ ನಿಜ ಅಧಿಪತಿಯೇ ಮನುಜನು
ಮನುಜನ ಗೌರವವು ಆದ್ಯವು, ಭೇದವಿಲ್ಲ ಮನುಜರ ಮಧ್ಯವು.

ಮನುಜನು ಜೀವದ ರೂಪವಾದರೆ, ಅವನಿಹನು ಮನುಜನು
ಇಲ್ಲವಾದರೆ ಭೇದವಿಲ್ಲ ಮೃಗದಲಿ ಮತ್ತು ಮನುಜನಲಿ.

ಆಭರಣ-೩೪

ನೋಟ ಹಾಗೂ ಬುದ್ಧಿವಂತಿಕೆ

ನೋಟಕೆ ರೂಪವು ಇಲ್ಲ ಆಕೃತಿಯೂ ಇಲ್ಲ, ಆದರೆ ಅದರ ಅಸ್ತಿತ್ವದ ಕುರಿತು ಸಂಶಯವಿಲ್ಲ . ಆದರೆ ಇದರ ವೀಕ್ಷಣೆಯು ಬುದ್ಧಿವಂತಿಕೆಯ ದರ್ಪಣವಿಲ್ಲದೆ ಖಂಡಿತವಾಗಿಯೂ ಸಾಧ್ಯವಿಲ್ಲ. ಬುದ್ಧಿವಂತಿಕೆಯನ್ನು ಚತುರತೆಯ ತನ್ನ ಅಸ್ತಿತ್ವದಿಂದ ಹೊರಹೊಮ್ಮಿಸುತ್ತವೆ. ಅದು ಹೇಗೆಂದರೆ ಸಮುದ್ರವು ಅಲೆಗಳ ಮುಖಾಂತರ ತನ್ನ ಅಸ್ತಿತ್ವವನ್ನು ಕಂಡಂತೆ ಚತುರತೆಯ ಹೊರತಾಗಿ ಬುದ್ಧಿವಂತನ ಅಸ್ತಿತ್ವವೇ ಇಲ್ಲ ಹಾಗೂ ಬುದ್ಧಿವಂತನ ಹೊರತಾಗಿ ಚತುರತೆಯು ಪ್ರಕಟವಾಗುವುದಿಲ್ಲ. ಆದರೆ ಹಲವರ ಪ್ರಕಾರ ಚತುರತೆಯು ಪ್ರತಿ ಬುದ್ಧಿವಂತನ ವೈಶಿಷ್ಟ್ಯವಾಗಿದೆ. ಅರ್ಹತೆಗಳ ಅನುಕ್ರಮದಲ್ಲಿ ಆದ್ಯತೆಯಾಗಿ ನಿರ್ಣಾಯಿಸಿ ಪ್ರಪ್ರಥಮವಾಗಿ ಬಂಧಿತವಾದದ್ದು ಬುದ್ಧಿಯೇ ಆಗಿದೆ. 'ಅರ್ಥಾತ್' ಯಾವುದು ಆಂತರ್ಯದಲ್ಲಿತ್ತು, ಅದೇ ಪ್ರಕಟವಾಯಿತು. ಹೇ ಆತ್ಮೀಯನೇ, ಚತುರತೆಯ ಅರ್ಹತೆಯು, ನಿರ್ಧಾರಿತ ಅರ್ಹತೆಯಾಗಿದೆ. ಈಗಲೂ ಬುದ್ಧಿಯೂ ಚತುರತೆಯ ಹಂತವನ್ನು ತಲುಪುತ್ತಿದ್ದಂತೆ, ಅದು ಮೈಮರೆಯುತ್ತದೆ. ಇದೇ ಸಹಭಾಗಿ ವಿರಹಿತ ಸ್ಥಿತಿಯಾಗಿದೆ. ಬುದ್ದಿಯು ಭಿನ್ನ ಭಿನ್ನವಾಗಿದೆ. ಆದರೆ ಚತುರತೆಯು ಪ್ರತಿ ಸ್ಥಾನದಲ್ಲೂ ಹಾಗೂ ಪ್ರತಿ ಹಂತದಲ್ಲೂ ಒಂದೇ ಆಗಿದೆ. ಹೀಗಾಗಿ ಪ್ರತಿಯೊಂದು ಚತುರತೆಯ, ಸತ್ಯದ ಚತುರತೆಯಾಗಿವೆ. ಹೀಗಾಗಿ ಅದು ನದಿಯ ಅಭದ್ರ ದಡದಂತಿದ್ದು, ಅಲೆರಹಿತವಾಗಿದೆ. ಇದೇ ಶ್ರೇಷ್ಠಾತಿಶ್ರೇಷ್ಠ ಅರ್ಹತೆಯಾಗಿದೆ. ಈ ಸಾಗರವನ್ನು ತಲುಪಿ, ಅದರಲ್ಲಿ ಮುಳುಗಿದವನೇ ದೈವೀಕೋಶವನ್ನು ಪ್ರಾಪ್ತಿಸಿಕೊಂಡವನಾಗಿದ್ದಾನೆ.

ದೈವೀಕೋಶದಲಿ ಎಲ್ಲಿಹುದು ಆಸ್ತಿ-ನಾಸ್ತಿಯ ಸಂಬಂಧ
ತನ್ನನ್ನು ಮೀರಿ ಹೋದವನೇ ಆ ಕೋಶದ ರತ್ನವಾದನು.

ದೈವೀಕೋಶದ ಸ್ಥಾನವು ಅರಿವಿನಿಂದಾಯಿತು ದೂರ
ನೋಟದ ಆಂತರ್ಯ ಕಂಡವನೇ ಅರಿತನು ಈ ಮರ್ಮವನು

ಜ್ಞಾನದಿಂದ ಕಂಡದ್ದು ಅದು ನೋಟವಲ್ಲ 'ಬಹರಿ'
ನೋಟ ಅವನಾದಾಗಿದೆ, ಯಾವನು ಜ್ಞಾನವನು ಮೀರಿ ನಡೆದನು.

ಆಭರಣ–೩೫

'ಪರಮ ಸತ್ಯ'ದ ದರ್ಶನ

ನನ್ನ ಪೀರ್ ಮುರ್ಷದರ ಅಂತ್ಯದ ಕಾಲ ಸಮೀಪಿಸುತ್ತಿದ್ದಂತೆ ನಾನು ಸದಾ ಅವರ ಹತ್ತಿರವೇ ಇರಹತ್ತಿದೆ. ಅವರ ವಿಯೋಗದ ಆಲೋಚನೆಯು ನನ್ನನ್ನು ದಿಗ್ಭ್ರಾಂತಗೊಳಿಸುತ್ತಿತ್ತು ಹಾಗೂ ನಾನು ಕಕ್ಕಾಬಿಕ್ಕಿಯಾಗಿರುತ್ತಿದ್ದೆ. ನನ್ನ ಮನದಲ್ಲಿ ಸುಳಿಯಿತು ಕೊನೆಯ ಈ ಸಮಯದಲ್ಲಿ ಅವರನ್ನು ಏನನ್ನಾದರೂ ಅಂತಿಮವಾಗಿ ಪ್ರಶ್ನಿಸಲೇ ಎಂದು? ನಾನು ಅವರನ್ನು ಪ್ರಶ್ನಿಸಿದೆ– ನಾನು ಯಾರ ಆಸ್ತಿಯಾಗಿದ್ದೇನೆ. ಮುರ್ಷದ್‌ರು ನುಡಿದರು ನೀನು ದೇವರ ಆಸ್ತಿಯಾಗಿದ್ದಿ. ನಾನು ಕೇಳಿದೆ– ಅವನೆಲ್ಲಿದ್ದಾನೆ? ನುಡಿದರು– ಎಲ್ಲರಲ್ಲಿ. ನಾನು ಕೇಳಿದೆ– ನನ್ನನ್ನು ತೋರಿಸಿ. ನುಡಿದರು– ಅವನ ಕಣ್ಣಿನಿಂದ ಮಾತ್ರ ಸಾಧ್ಯ. ನಾನು ನುಡಿದೆ ಅಕಸ್ಮಾತ್ ಅವನನ್ನು ಪಡೆಯದೆ ಇದ್ದರೆ? ಅವರು ನುಡಿದರು– ನಿನ್ನ ಕಣ್ಣನ್ನೆ ನೀಡಿಬಿಡು ಹಾಗೂ ನಂತರ ನೋಡು ಈ ಸಂವಾದದ ಬಳಿಕ ಅರಿವಾಯಿತೇನೆಂದರೆ ಕಣ್ಣು ನೋಟ ವಿಶೇಷವಾಗಿದೆ, ಹಾಗೂ ದಿವ್ಯ ವೀಕ್ಷಣೆಯ ಸ್ಥಾನವಾಗಿದೆ. ಪರಿಪೂರ್ಣತೆಯ ಆಕಾಂಕ್ಷಿಯು ತನ್ನ ಸ್ಥಿತಿಯ ಚರಮದಲ್ಲಿ ಸದರಿ ನೋಟವನೆ ತನ್ನ ನಿವಾಸವನ್ನಾಗಿಸುವುದೇ ಸೂಕ್ತವಾಗಿದೆ. ಹಾಗೂ ಸದಾ ಇದೇ ನಿವಾಸದಲ್ಲಿ ವಾಸಿಸುವಂತಾಗಲಿ, ಇದರಿಂದಾಗಿ ಅಭಿಲಾಷೆಯೂ ಪೂರ್ಣವಾಗುವುದು ಹಾಗೂ ಗುರಿಯನ್ನೂ ತಲುಪುವನು.

ಪ್ರತಿಯೋರ್ವನು ತಿಳಿದಿಹನು ಶರೀರವೀ ಆಶ್ರಯತಾಣವು ನನ್ನ
ನನ್ನ ಕಣ್ಣಲಿ ನೆಲೆಸಿಹನು ಆ ಪರಮ ಪ್ರೇಮಿಯು ನನ್ನ.

ನನ್ನಲಿ ನೆಲೆಸಿರುವ ನನ್ನಿತನವು ಇಲ್ಲವೇ ಇಲ್ಲ ನನ್ನ,
ನಾನು ಆಗಿಹೆನು ಲೋಕ, ಅದರೊಡಯನು ಒಡೆಯ ನನ್ನ.

'ಏಕ'ದ ಬೆಳಕು ಹಬ್ಬಿದೆ ಒಳಗೆ, ಹೊರಗೆ ಸುತ್ತುವರೆದಿದೆ ಲೋಕವನು,
ಕಂಡು ಬಂದರೆ ಅದು, ದರುಶನ ಆಗುವುದು ಪ್ರೇಮಿಯ ನನ್ನ.

ಸತ್ಯಕೆ ಧನ್ಯತೆಯು, ಪರಮ ಸತ್ಯ ಪ್ರಭೆಯಿಂದ ನಶ್ವರ ಶೂನ್ಯವಾಗಿದೆ ನಾನು
ಸೂರ್ಯನೇ ಬಂದಿಹನು, ನೆರಳ ರೂಪದಲಿ, ಪಾದದಡಿಯಲಿ ನನ್ನ.

ವೈರಿಯ ನುಡಿಯಿಂದ ಕೊನೆಯಾಗದು ಎಂದೂ ಆಶಾಭಾವ ಅಧ್ಯಾಯ
ನಿನ್ನ ಕೃಪೆಯು ಇರುವರೆಗೆ, ಮನವಿರುವುದು ಗರ್ವಿತವು ನನ್ನ

ನಿನ್ನ ಮಾರ್ಗವ ತೊರೆದು, ಅನ್ಯರ ಕದ-ಹೊಸ್ತಿಲನು ದಾಟುವುದು
ಇಂತಹ ನಿಲುವಿಗಿಂತ, ವ್ಯರ್ಥವಾಗುವುದು ಬದುಕೇ ನನ್ನ.

ಯಾವನಾದರೂ ವಿಶೇಷ ಪರಮ ಜ್ಞಾನ ಪಡೆದರೆ ನೀನರಿ 'ಬಹರಿ'
ನನಗೆ ಸಾಗರ ಸಿಗಲಿ, ಲೋಕಕೆ ಸಿಗಲಿ ಒಂದು ಹನಿಯು ನನ್ನ.

ಆಭರಣ-೩೬

ದೃಷ್ಟಿ ಮತ್ತು ಜ್ಞಾನ

ದೃಷ್ಟಿಯು ಪುರಾತನವಾಗಿದೆ. ಮೊದಲು ದೃಷ್ಟಿಯಾಯಿತು ನಂತರ ಅದು ವೀಕ್ಷಕವಾಯಿತು. ಅದು 'ಸಹಭಾಗಿತ್ವ ರಹಿತ ಸ್ಥಿತಿ' ಇದು 'ಏಕ'ದ ಸ್ಥಿತಿ ಇಂತಹ ಕಾಲದಲ್ಲಿ ಜ್ಞಾನವು ದೃಷ್ಟಿಯಲ್ಲಿ ಅದೃಶ್ಯವಾಗಿತ್ತು ಹಾಗೂ ಅದು ವೀಕ್ಷಕವಾದಾಗ ಜ್ಞಾನ ಅದರ ಜೊತೆಯಲ್ಲಿಯೇ ಆಗಮಿಸಿತು. ಹೀಗಾಗಿ ಆ ದೃಷ್ಟಿಯೇ ಜ್ಞಾನವಾಗಿದೆ. ಹಾಗೂ ವಿಶ್ವವೂ ಅದರ ವೀಕ್ಷಕ ಸಾದೃಶ್ಯವಾಗಿದೆ. ಹೀಗಾಗಿ ಯಾವನಾದರೂ ವಿಶೇಷ ವ್ಯಕ್ತಿಯು ಜ್ಞಾನದಿಂದ ಅತೀತನೆಂದು ನುಡಿದರೆ ಅದೇ ದೃಷ್ಟಿಯಾಗಿದೆ. ಕೆಲವರು ವಿಶೇಷ ದೃಷ್ಟಿಯೆಂದು ಕರೆದರು, ಕೆಲವರು ವಿಶೇಷ ವ್ಯಕ್ತಿಯೆಂದು ಕರೆದರು. ಹೀಗಾಗಿ ಆ ವ್ಯಕ್ತಿ ವಿಶೇಷನು ಸರ್ವ ಸ್ಥಿತಿಯಲ್ಲಿ ಉಪಸ್ಥಿತವಾಗಿದ್ದಾನೆ. ಅದೆಂತಹ ಪವಿತ್ರತೆಯಲ್ಲಿ ಹಾಗೂ ಅದೆಂತಹ ಉಪಮೆ ಸಾದೃಶಗಳಲ್ಲಿ ಫಕೀರನು (ಬಹರಿಯು) ಈ ವ್ಯಕ್ತಿ ವಿಶೇಷವನ್ನು ನಿಸರ್ಗದತ್ತ ತನ್ನ ಅಜ್ಞಾನದಿಂದ ಇದಕ್ಕೆ ಜ್ಞಾನದ ಹೆಸರನ್ನು ನೀಡುತ್ತಾನೆ. ಆದರೆ ಅದು ಎಂಥಾ ಜ್ಞಾನ? ಪುರಾತನ ಜ್ಞಾನ! ಅದರ ಗೂಢವನ್ನು (ಚರಮ) ಸರ್ವಜ್ಞನ ಹೊರತು ಬೇರಾರು ಅಲ್ಲಿಗೆ ತಲುಪರು. ತಲುಪುವುದಾದರೂ ಹೇಗೆ? ಪ್ರಥಮವಾಗಿ ಅಲ್ಪ ಆಯುಷ್ಯ, ಎರಡನೇಯದಾಗಿ ಜುಜುಬಿ ಪ್ರೇಮ, ಮೂರನೆಯದಾಗಿ ಅತ್ಯಲ್ಪ ದೈವಜ್ಞಾನ ಈ ಹಂತದಲ್ಲಿ ಅಲ್ಲಾಹನ ಕೃಪೆಯೇ ಅವಶ್ಯಕವಾಗಿದೆ. ಒಬ್ಬ ಹೃದಯವುಳ್ಳವನ ಹೃದಯವು ಹೃದಯ ರಹಸ್ಯತೆಯನ್ನು ಚೆನ್ನಾಗಿ ಅರಿತವನಾಗಿದ್ದರೆ, ಇದರಲ್ಲಿ ಆಶ್ಚರ್ಯವೇನಿಲ್ಲ! ಅದೇನೆಂದರೆ ಅವನ ಹೃದಯದ ಮೇಲೆ ಜ್ಞಾನದ ಪರಿಪೂರ್ಣತೆಯು ಪ್ರತಿಬಿಂಬಿತವಾಗಿ ಅವನ ಹೃದಯವು ಪ್ರಕಾಶಮಯವಾಗುವುದು. ಒಂದು ವೇಳೆ ನನ್ನನ್ನೆ ಕೇಳುವಂತಿದ್ದರೆ ಹೃದಯವೇ ಜ್ಞಾನವಾಗಿದೆ.

'ಸತ್ಯ'ದ ಅಸ್ತಿತ್ವವು ಇದೇ ಹೃದಯದಿಂದ ಇದೆ.
ಇದುವೇ ಸಮಸ್ತ ಬ್ರಹ್ಮಾಂಡದ ಪ್ರಾಪ್ತಿಯೂ ಆಗಿದೆ.

ದೇಹ ತಲ್ಲಣ, ಹೃದಯ ಪರಿಶುದ್ಧಿ ಮದಿರೆಯಾಗಿದೆ.
ನೀ ದೇಹದಿಂದ ದೂರವಿರು, ಹೃದಯದಿಂದ ತನ್ಮಯನಾಗಿರು.

ತಲೆ-ತಲಾಂತರದಿಂದ ಈ ಹೃದಯವೇ ಏಕಮಾತ್ರ ಜ್ಞಾನವಾಗಿದೆ.
ಈ ಜ್ಞಾನವು ಪ್ರಕಟವೂ ಇದೇ, ಅವಶ್ಯಕವೂ ಇದೆ.

ಇದುವೇ ಭವಿಷ್ಯತ್ತು, ಭೂತಕಾಲವೂ ಇದಾಗಿದೆ.
ಇದುವೇ ಹೃದಯ ನಗರದ ನ್ಯಾಯಾಧೀಶನು ಇಹನು.

ಇದುವೇ ಆಸ್ಥಾನ ಕಲೆಗಳ ಸ್ನೇಹಿತನಾಗಿದ್ದಾನೆ.
ಇದುವೇ ಅಸ್ತಿತ್ವವು, ಧನಸಿರಿಯೂ ಉನ್ನತಿಯೂ ಆಗಿದೆ.

ಇದುವೇ ಬಂಧಿತ ಕೈದಿಯು ಹಾಗೂ ಸರ್ವಸ್ವತಂತ್ರನು ಇದುವೆ.
ಇದುವೇ ಸಾಗರದ ಅಲೆಯಾಗಿದೆ, ಇದುವೆ ಶಕ್ತಿ ಆಗಿದೆ.

ಇದೇ ಅಧೋಗತಿಯೂ, ಉನ್ನತಿಯೂ, ಭೂಮಿಯೂ, ಆಕಾಶವು
ಈ ಎಲ್ಲಾ ಜ್ಞಾನಗಳಿಹವು ಆ ದೈವೀ ಸಿಂಹಾಸನದ ಫಲವು

ಈ ಜ್ಞಾನದಿಂದ ನೀ ಮಾರ್ಗದರ್ಶನ ಪಡೆಯುವುದಾದರೆ
ಹೇ 'ಬಹರಿ' ನೀ ಮೊದಲು ನಿನ್ನರಿವಿನ ಜ್ಞಾನ ಪಡೆ.

ಆಭರಣ-೩೭

'ಸ್ವಯಂ ರಹಿತತೆ' ಹಾಗೂ ಮಿಲನ (ವಸ್ಲ್)

ಯಾವ ರೀತಿ ವಿಯೋಗದಿಂದ ಬೆಂದಿದವನು ಮಿಲನದ ಆಕಾಂಕ್ಷಿಯಾಗಿರುತ್ತಾನೆ, ಯಕಶ್ಚಿತ್ ಅದೇ ರೀತಿ ಮಿಲನದಿಂದ ಸಂತೃಪ್ತನು ವಿಯೋಗದ ಅನ್ವೇಷಕನು ಯಾಕೆಂದರೆ ನಿಜವಾದ ಸುಖವು ವಿಯೋಗದಲ್ಲಿದೆ. ಆದರೆ ಮಿಲನವು (ವಸ್ಲ್) ಮಿಲನದ ಅಧೀನವೂ ಅಲ್ಲ, ವಿಯೋಗದ ಅಧೀನವೂ ಅಲ್ಲ 'ವಸ್ಲ್'ನ ಮಾಧ್ಯಮವು 'ಏಕತ್ವ'ದ ಉತ್ಕೃಷ್ಟತೆಯಾಗಿದೆ. ಪರಮಾತ್ಮನ 'ಏಕತ್ವ'ವು ಎಂಥ ಬೆಂಕಿಯಾಗಿದೆಯೆಂದರೆ ಅದು ಅನೇಕತೆಯ ಮುಳ್ಳು ಮತ್ತು ಒಣಹುಲ್ಲಿನ ರಾಶಿಯನ್ನು ಸುಟ್ಟು ಹಾಕಿ, ಅದನ್ನು ಶುದ್ಧ-ಪವಿತ್ರಮಯಗೊಳಿಸುತ್ತದೆ ಹಾಗೂ 'ಏಕ'ವಾಗುತ್ತದೆ. ಇದೇ 'ಏಕತೆ'ಯು

ತನ್ನ ಚರಮವನ್ನು ತಲುಪಿ 'ಪರಿಪೂರ್ಣ' ಎಂದೆನೆಸಿಕೊಳ್ಳುತ್ತದೆ. ಈ ಉತ್ಕೃಷ್ಟತೆಯೇ 'ಪರವಶತೆ'ಯ ಉತ್ಕೃಷ್ಟವಾಗಿದೆ. ಈ 'ಪರವಶತೆ'ಯು ಪರಂಸತ್ಯ ದೈವನ ವಿಶೇಷ ಆಕರ್ಷಣೆಯ ಹೊರತು ಸಾಧ್ಯವೇ ಇಲ್ಲ. ಇದು ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿಯೊಂದು ಸಮಯದಲ್ಲಿ ಪ್ರಾಪ್ತವಾಗುವುದು ಹೇಗೆ ಸಾಧ್ಯ? ಆದುದರಿಂದಲೇ ತನಗೆ ಅಥವಾ ಅನ್ಯರಿಗೆ ಜ್ಞಾನವು ಜೊತೆ ಇರುವವರೆಗೆ ಅದನ್ನು ಸುಪ್ತವಾಗಿರಿಸಲು ಸಾಧ್ಯವಿಲ್ಲ. ಮತ್ತೆ ದರ್ವೇಶನು ಅಸ್ತಿತ್ವ ರಹಿತ ಸ್ಥಿತಿಯನ್ನು ಯಾವ ರೀತಿಯಿಂದ ಕಾಣಬಹುದು ಹಾಗೂ ಇದರಿಂದ ಅವನು ಯಾವ ರೀತಿಯಿಂದ ಜ್ಞಾನವನ್ನು ಇಂಗಿಸಿಕೊಳ್ಳಬಹುದು. ಯಾಕೆಂದರೆ ಅವನೇ ಈಗ ಜ್ಞಾನವಾಗಿದ್ದಾನೆ. ಜ್ಞಾನ ಹೋದ ತತ್‌ಕ್ಷಣದಲ್ಲೆ ತಾನೂ ಹೋದ, ಹೀಗಾಗಿ 'ಅಸ್ತಿತ್ವ ರಹಿತತೆ'ಯ ಆವೃತವಾಗುವುದು ಕಷ್ಟಕರವಾಗಿದೆ, ಆದರೆ ಮುರ್ಷದರ್ ಬಳಿ ಇದು ಸುಲಭ ಸಾದ್ಯವಾಗಿದೆ. ಜ್ಞಾನ ಹಾಗೂ ದೃಢ ನಂಬಿಕೆಯ ಸೂರ್ಯರಾದ ಮಿಂಯಾ ಶಹಾ ಅಮೀನುದ್ದೀನ್೧ (ತಂದೆ ಹಜ್ರತ್ ಶಾಹ ಬುರಾಹುನುದ್ದೀನ್) ರವರು ಕೆಲವು ದಿನಗಳವರೆಗೆ ತಮ್ಮ ತಂದೆಯವರ ಗುಂಬಜ್‌ನಲ್ಲಿ ವಾಸಿಸುತ್ತಿದ್ದರು. ಒಂದು ಸಲ, ರಾತ್ರಿಯ ಸಮಯವಿತ್ತು. ಎಲ್ಲೆಡೆ ಬೆಳೆದಿಂಗಳು ಹರಡಿತ್ತು ಆಗ ಆಕಸ್ಮಿಕವಾಗಿ ಹಜ್ರತ್ ಅಮೀನುದ್ದೀನ್ ಅಲಿ ಆಲಾ ಅವರು ಹೊರಗೆ ಬಂದರು ಹಾಗೂ ಅಲ್ಲಿ ಕುಳಿತಿದ್ದ ತಮ್ಮ ಅನುಯಾಯಿ ಹಾಗೂ ಖಲೀಫಾರನ್ನು ಉದ್ದೇಶಿಸಿ ನುಡಿದರು "ಆತ್ಮೀಯರೇ, ದೈವೀ ಮಿಲನವು (ವಸ್ಲ್-ಹಖ್) ಅಸ್ತಿತ್ವರಹಿತತೆಯ ಹೊರತು ಸಾಧ್ಯವಿಲ್ಲ. ತಕ್ಷಣವೇ ಎಲ್ಲರೂ ತಮ್ಮ ಶಿರಗಳನ್ನು ಭೂಮಿಗೆ ಬಾಗಿಸಿದರು ಹಾಗೂ ನುಡಿದರು 'ಹೇ ದಸ್ತಗೀರರೇ (ಸಹಾಯಕರೇ), ಇದು ನಿಸ್ಸಂದೇಹವಾಗಿ ಸರಿಯಾಗಿದೆ' ಆಗ ಹಜ್ರತರು ಮತ್ತೊಮ್ಮೆ ಗುಂಬಜ್‌ನಲ್ಲಿ ಪ್ರವೇಶಿಸಿದರು. ಆ ಖಲೀಫಾ ಅನುಯಾಯಿಗಳ ಸಮೂಹದಲ್ಲಿ ಒಬ್ಬ ಹೊಸ

- ಹಜ್ರತ್ ಅಮೀನುದ್ದೀನ್ ಅಲಿ ಆಲಾ ರವರು ಹಜ್ರತ್ ಬುರಾಹುನುದ್ದೀನ್ ಜಾನಂ (ರ.ಅ) ರವರ ಪುತ್ರರೂ, ಮಾತೃ ಉದರದಿಂದಲೆ ಸಂತರಾಗಿ ಜನಿಸಿದವರಾಗಿದ್ದರು. ತಂದೆಯವರ ನಿಧನದ ಬಳಿಕ ಪವಿತ್ರ ರಮ್ಜಾನಿನಲ್ಲಿ (ಹಿಜರಿ ೧೦೦೭)ರಲ್ಲಿ ಇವರ ಜನ್ಮವಾಯಿತು. ತಂದೆಯವರ ಖಲೀಫಾರಾಗಿದ್ದ ಹಜ್ರತ್ ಶಾಹ ಮಹಮೂದ್ ಚಿಶ್ತಿ ಉರ್ಫ ಮಹಮೂದ್ ಖುಷ್‌ವಹಾಂ ರವರಿಂದ ಚಿಶ್ತಿಯಾ ಹಾಗೂ ಖಾದರಿಯಾ ಸಂತರ ಪರಂಪರೆಯ ದೀಕ್ಷೆ ಹಾಗೂ ಖಿಲಾಫತ್‌ನ್ನು ಪಡೆದಿದ್ದರು. ಇವರು ಸದಾ ಧ್ಯಾನಾಸಕ್ತ ಸಮಾಧಿ ಹಾಗೂ ಪರವಶತೆಯ ಸ್ಥಿತಿಯಲ್ಲಿರುತ್ತಿದ್ದರು. ದಖನ್ನಿನ ಪುಣ್ಯಭೂಮಿಯಲ್ಲಿ ಇವರ ಧಾರ್ಮಿಕ ಕೃಪೆಯು ಸರ್ವೇ ಸಾಮಾನ್ಯವಾಯಿತು. ಇವರ ಅನುಯಾಯಿಗಳ ಸಂಖ್ಯೆ ಸುಮಾರು ಒಂದು ಲಕ್ಷವಿತ್ತು. ಹಿಜರಿ ೧೦೭೮ರಲ್ಲಿ ಇವರ ನಿಧನವಾಯಿತು.

ಇವರ ಸಮಾಧಿಯು ಬಿಜಾಪುರದ ಹೊರವಲಯದಲ್ಲಿ 'ಅಮೀನ್ ದರ್ಗಾ' ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ಶಿಷ್ಯರು ಇದ್ದರು. ಅವರು ತಮ್ಮ ಮೇಲ್ವಿಚಾರಕರನ್ನು ವಿಚಾರಿಸಿದರು. 'ಹೇ ಪೀರರೇ, "ಸ್ವಯಂ"ವೇ ಇರದಿದ್ದರೆ ಮಿಲನ (ವಸ್ಲ್) ಹೇಗಾಗುತ್ತೇ? ಆಗ ನುಡಿಯಲಾಯಿತು, ಹಜ್ರತ್ ದಸ್ತಗೀರರು ನುಡಿದಿರುವ ಈ ಅಸ್ತಿತ್ವ ರಹಿತತೆ ವಿಷ ಸೇವಿಸುವುದು ಅಥವಾ ಸಾಯುವುದು ಅಲ್ಲ. ಬದಲಾಗಿ 'ಸ್ವಯಂ'ದ ಪ್ರತಿ ಸ್ಥಿತಿಯಲ್ಲೂ ಅಸ್ತಿತ್ವದಲ್ಲಿದೆ. ಅದು ಬದುಕಿನಲ್ಲಿ ಹಾಗೂ ಮೃತ್ಯುವಿನ ನಂತರವೂ ಮಿಯಾಂ, ಹೊಸ ಫಕೀರರೇ, ಈ 'ಸ್ವಯಂ ರಹಿತತೆ'ಯೂ ವಿಚಿತ್ರ ವೈಶಿಷ್ಟ್ಯದ್ದಾಗಿದೆ. ಅರ್ಥಾತ್ ಅದು ಇಲ್ಲವೂ ಇದೆ, ಇದ್ದಂತೆಯೂ ಇದೆ. ಈ ತಿಳುವಳಿಕೆಯ ಬಗ್ಗೆ ಹೀಗೆ ಶ್ಲಾಘಿಸಲಾಗಿದೆ.

'ಸ್ವಯಂ'ದಿಂದ 'ಸ್ವಯಂ ರಹಿತ' ಆಗಲಿಲ್ಲ ಸತ್ಯದ ಪರಂಜ್ಯೋತಿ ಹೇಗೆ ಕಾಣಲಿ,
'ಮಿಲನ' ಗುರಿಗೆ ಪ್ರಜ್ಞಾಪೂರ್ವಕವಾಗಿ ಯಾವನು ತಲುಪಿಹನು.

ವಾಸ್ತವದಲಿ ಗರ್ವಿತನು ತನ್ನ 'ಅಹಂ'ನಲಿ ಮನುಜನು
ತನ್ನ 'ಅಹಂ'ನಿಂದ ಹೊರಬರುವರೆಗೆ ಮಿಲನ ಎಲ್ಲಿ ಸಾಧ್ಯವು?

ಅಸ್ತಿತ್ವ ರಹಿತತೆ ಎಂದರೆ 'ಈ ಎಲ್ಲವೂ ನೀನೇ ಎಂದಂತೆ'
ಸಾಯುವುದು ಅಥವಾ ಮರಣಾಂತಿಕ ಮದಿರೆ ಕುಡಿಯುವುದಲ್ಲ.

ದೈವೀ ಕೃಪೆಯ ಸಹಾಯ ಹಸ್ತ ದೊರೆತರೆ, ಯಾವುದಿಲ್ಲ ಕಠಿಣ,
ಇಲ್ಲವಾದರೆ ಪ್ರತಿ ಮನುಜನು ಈ ತೋಟದಿ ಹೂ ಪಡೆಯುತ್ತಿರಲಿಲ್ಲ.

'ಪರಂ ಸತ್ಯ' ವೆಂದರೆ ಮಾಧ್ಯಮ ರಹಿತವೂ ಸಂವಾದ ಸಾಧ್ಯ,
'ಬಹರಿ' ಆದರೆ, ಆ ಹಂತವು ಇಹುದು ಬಹು ಎತ್ತರದಲಿ.

ಆಭರಣ–೩೮

'ಸ್ವಯಂ ರಹಿತತೆ'ಯ ರಹಸ್ಯಗಳು

ಯಾವ 'ಸ್ವಯಂ ರಹಿತ' ಸ್ಥಿತಿಯು ಸಾಧಕನ ಸಾಧನೆಯ ಫಲವಾಗಿ ಪ್ರಾಪ್ತಿಯಾಗುತ್ತದೆಯೋ, ಅದು ನೈಜ 'ಸ್ವಯಂ' ಆಗಿದೆ. ಅದು ದೈವೀಸಂದೇಶದ ಉನ್ನತ ಹಂತವಾಗಿದೆ. ಅದೆಷ್ಟು ಉನ್ನತವಾಗಿದೆಯೆಂದರೆ ಆ ಸ್ಥಿತಿಯಲ್ಲಿ 'ಸ್ವಯಂ' ಹಾಗೂ 'ಸ್ವಯಂ ರಹಿತತೆ'ಯ ಬಾಹುಗಳು ಅದರ ಸೆರಗಿನವರೆಗೆ ತಲುಪುವುದಿಲ್ಲ.

ನಿನ್ನ 'ಸ್ವಯಂ'ದಿಂದ ಹೊರಕ್ಕೆ ಬಾ ಹಾಗೂ 'ಸ್ವಯಂ ರಹಿತತೆ' ಯನ್ನು ತ್ಯಜಿಸು. ಯಾಕೆಂದರೆ ಸತ್ಯಪ್ರೇಮಿಯು 'ಸಾಂಗತ್ಯ' (ಶಿರ್ಕ್) ವನ್ನು ಎಂದೆಂದಿಗೂ ಇಷ್ಟಪಡುವುದಿಲ್ಲ.

ಮಾರ್ಗವೂ ತೀರಾ ಕಿರಿದಾಗಿದೆ ಹಾಗೂ ವೀಕ್ಷಣೆಗೆ ಅಸಾಧ್ಯವಾದ ಅಮೃತವು ಕರಾಳ ಕತ್ತಲೆಯ ಸ್ಥಳದಲ್ಲಿ ಅಡಗಿದೆ. ಯಾವನೋ ಪರಾಕ್ರಮಿ ಸಿಕಂದರನೇ ಬೇಕಾಗಬಹುದು. ಆ ಅಮೃತದ ಬಳಿ ತಲುಪಲು,- ಯಾವನಾದರೂ ಸ್ವಯಂ ಆ ಅಮೃತಕ್ಕೆ ತಲುಪಿ, ಮೈಮರೆತು, ಒಂದು ಹನಿಯನ್ನು ಬೇರ್ಯಾವನ ಗಂಟಲಲ್ಲಿ ಚೆಲ್ಲಬಹುದು. ಇಲ್ಲವಾದರೆ ಇಂತಹ ಸೂಕ್ಷ್ಮ ಬಿಂದುವಿನೆಡೆಗೆ ಯಾವನ ದೃಷ್ಟಿಯು ತಲುಪುವುದಿಲ್ಲ, ಪ್ರತಿಯೊಬ್ಬನ ಸಾಮರ್ಥ್ಯವು ಈ ಕ್ಷೇತ್ರದಲ್ಲಿ ಸಾಧ್ಯವೇ ಇಲ್ಲ.

ಕೆಪ್ಪು ಹೃದಯದವನಾಗಿದ್ದೆ, ಕೇಶರಾಶಿಯನು ಕಸ್ತೂರಿಯ ಕಂಪೆಂದು ಭಾವಿಸಿದೆ
ನಿಮ್ಮ ಆಲೋಚನೆಯನ್ನು ಮುಳ್ಳುಹಂದಿಯ ನೋವೆಂದು ಭಾವಿಸಿದೆ.

ಆಭರಣ-೩೯

'ಪ್ರೇಮಿ'ಯ ಎರಡು ವಿಧಗಳು

'ಪ್ರೇಮಿ'ಯ ಎರಡು ವಿಧಗಳಿವೆ. ಪ್ರಥಮ ಪ್ರೇಮಿ ಹಾಗೂ ದ್ವಿತೀಯ ಪ್ರೇಮಿ. ಪ್ರಥಮ ಪ್ರೇಮಿಯ ಸಂಬಂಧವು 'ಸಹಭಾಗಿ ರಹಿತ ಸ್ಥಿತಿ'ಯಿಂದಾಗಿದೆ ಹಾಗೂ ದ್ವಿತೀಯ ಪ್ರೇಮಿಯ ಸಂಬಂಧವು ಮಹ್ಮದರ ಜತೆಗಿದೆ. ನಾನು ದೈವೀ ಮದಿರೆಯ ಅನಂತ ಸ್ವಾದದಿಂದ ಪ್ರಮತ್ತನಾಗಿ, ಮೈಮರೆತಾಗ, ತಕ್ಷಣವೇ ನನ್ನ 'ಅಸ್ತಿತ್ವ'ದಿಂದ ಪರಿಚಿತನಾಗಿ ನುಡಿದೆ. 'ನಾನು ಇದ್ದೇನೆ' ಇದಕ್ಕೆ ಪ್ರಥಮ ಪ್ರೇಮ, ಪ್ರಥಮ ನಿರ್ಣಯ ಅಥವಾ 'ಸಹಭಾಗಿರಹಿತ ಸ್ಥಿತಿ' ಎಂದು ಕರೆಯುತ್ತಾರೆ. ಇದರ ಜ್ಞಾನಮೂಲದ ಅಥವಾ ಪವಿತ್ರ ಅಸ್ತಿತ್ವದಿಂದ ತಲೆ ಎತ್ತಿದ ಅರ್ಹತೆಯನ್ನು ದ್ವಿತೀಯ ಪ್ರೇಮಿ ಎಂತಲೂ 'ಏಕತ್ವ' ಎಂದು ಅಥವಾ ಹಜ್ರತ್ ಮಹ್ಮದರ ಸತ್ಯತೆ ಎಂದೂ ಕರೆಯುತ್ತಾರೆ. ಸಮಸ್ತ ಶ್ರೇಷ್ಠತೆ ಹಾಗೂ ಅರ್ಹತೆಗಳನ್ನು ಅರಿತವನಾದಾಗ, ನಾನು ಇವೆಲ್ಲವನ್ನು ನನ್ನ ಜ್ಞಾನದಲ್ಲಿ ಸಮ್ಮಿಳಿತಗೊಳಿಸಿದೆನು.

ಹೀಗಾಗಿ ಇಳಿಜಾರಾದ ಭೂಮಿಯನ್ನು ಸಮತಲಗೊಳಿಸಿದೆನು ಹಾಗೂ ಔನ್ನತ್ಯವಾದ ಆಕಾಶವನ್ನು ಶಾಮಿಯಾನಾವನ್ನಾಗಿಸಿದೆನು. ಈ ರೀತಿಯಾಗಿ ಪ್ರತಿಯೊಂದು ವಸ್ತುವನ್ನು ಸೂಕ್ತ ಹಾಗೂ ಅದರನುಗುಣವಾದ ಸ್ಥಾನದಲ್ಲಿಟ್ಟು ವೀಕ್ಷಿಸಿದೆನು. ಇದು 'ಏಕತ್ವ'ದ

ಜ್ಞಾನಕಹಳೆಯ ಸೂಚಕವಾಗಿದೆ. ಸ್ವತಂತ್ರ ವೀಕಕ್ಷನು ಆಗ ಮೆಚ್ಚುಗೆಯ ನೋಟ ಬೀರಿದಾಗ, ಜ್ಞಾನದಿಂದ ಅದು ರೂಪವಾಗಿ ಪ್ರಕಟವಾದವು ಹಾಗೂ ಜ್ಞಾತ ಅನುಕ್ರಮದಲ್ಲಿ ಈ ವ್ಯಕ್ತ ಬ್ರಹ್ಮಾಂಡದಲ್ಲಿ ಪ್ರಕಟರೂಪವಾದವು ನಿಜವಾಗಿ ಹೇಳುವುದಾದರೆ, ಇದು ಅವನ ಜ್ಞಾನದಿಂದ ಬಾಹ್ಯವು ಆಗಲಿಲ್ಲ, ಸೇರ್ಪಡೆಯೂ ಆಗಲಿಲ್ಲ. ಅದು ಯಾವ ರೀತಿಯಲ್ಲಿ ಇತ್ತು, ಯಾವ ಸ್ಥಳದಲ್ಲಿ ಇತ್ತು, ಅಲ್ಲಿಯೇ ಅದೇ ರೀತಿಯಲ್ಲಿದೆ. ಯಾವ ಸ್ಥಳದಿಂದಲೂ ಅದು ಹೊರಬರಲಿಲ್ಲ. ಅಥವಾ ಯಾವುದೆ ಸ್ಥಳವನ್ನು ಸೇರಲಿಲ್ಲ.

ಹೇ ಆತ್ಮೀಯನೇ, ಈ ಸತ್ಯವನ್ನು ಇಂಥ ವ್ಯಕ್ತಿಗೆ ಯಾವನು ಒಡಂಬಡಿಕೆಯ ದಿನ ಹಾಗೂ ಅಂತಿಮ ನ್ಯಾಯ ನಿರ್ಣಯದ ಅನಂತ ದೂರವನ್ನು ತನ್ನ ಜೀವಿತಾವಧಿಯ ಒಂದು ವಾರವೂ ಅಲ್ಲ, ಒಂದು ದಿನವೆಂದು ಪರಿಗಣಿಸುತ್ತಾನೋ ಮತ್ತು ಸ್ವರ್ಗದ ಜಲವನ್ನು ಹಾಗೂ ನರಕದ ಅಗ್ನಿಯನ್ನು ಕ್ರಮವಾಗಿ ತನ್ನ ಕಣ್ಣಿನ ಆರ್ದ್ರತೆ ಹಾಗೂ ಹೃದಯದ ಶೋಕಗೀತೆಯೆಂದು ಭಾವಿಸುತ್ತಾನೆ, ಅವನನ್ನೇ ಕೇಳಬೇಕಾಗುತ್ತದೆ. ಇವುಗಳ ಕುರಿತು.

'ದೈವೀ ಭಂಡಾರ'ವು, ಏಕ ಅಸ್ತಿತ್ವವು ಪ್ರಥಮ ಪ್ರೇಮಿ,
'ಸೃಷ್ಟಿಕರ್ತ'ನ 'ಪರಮ ಸೃಷ್ಟಿ' ಮಹ್ಮದರ ಜ್ಯೋತಿಯು ದ್ವಿತೀಯ ಪ್ರೇಮಿ.

ಪ್ರಥಮ ಪ್ರೇಮಿಯನು ನಿಜಾರ್ಥದಲ್ಲಿ ಭವನವಾಸಿಯೆಂದು ತಿಳಿ,
ದ್ವಿತೀಯ ಪ್ರೇಮಿಯನು ಈಗ ಭವನದ ಆರದ ದೀಪವೆಂದು ತಿಳಿ.

ಭವನವು ಅಂಧಕಾರಮಯ ಇದ್ದಾಗ ವಸ್ತುಗಳು ಹರಡಿದ್ದವು ಅನೇಕ,
ಬೆಳಕು ಹರಡಿದಂತೆ ಕಂಡುಬಂದವು ಅದರ ಕೆಡಕು ಒಳಿತುಗಳು.

ಆಭರಣ–೪೦

'ಪ್ರೇಮಿ'ಯ ಚಿಂತನೆ

'ಪ್ರೇಮಿಯು ಸಾನ್ನಿಧ್ಯಕ್ಕಾಗಿ ಸಂಪರ್ಕಿಸಿದಾಗ, ಇತರ ಅಂಗಾಂಗಗಳು ನಿದ್ರೆಯ ಅವಸ್ಥೆಯಲ್ಲಿ ಇರುತ್ತವೆ. ಸ್ವಪ್ನವನ್ನು ಈ ರೀತಿಯಾಗಿ ಗುರುತಿಸು. ಹೇಗೆಂದರೆ 'ಪ್ರೇಮಿ'ಯ ಅಸ್ತಿತ್ವವು, ತನ್ನ ಗಮನವನ್ನು ಸಂಪೂರ್ಣವಾಗಿ ಈ ಮಣ್ಣಿನ ಅಸ್ತಿತ್ವದಿಂದ ಬೇರೆಡೆಗೆ ಹರಿಸಲಿಲ್ಲವೋ ಆಗ ನಿದ್ರೆಯ ವಶವಾಗುತ್ತಾನೆ ಇಲ್ಲವೆ ಮೃತ್ಯುವಿನ ವಶ. ಯಾಕೆಂದರೆ ವಾಸ್ತವವಾಗಿ ನಿದ್ರೆಯು ಮೃತ್ಯುವಿನ ಸಹೋದರವಾಗಿದ್ದಾನೆ ಅರ್ಥಾತ್ ಅದರ ಸಮವರ್ಣ.

ಜೀವ ಇರುವರೆಗೆ ಜತೆಯಿರು, ಹೇ ಪ್ರೇಮಿಯೇ
ಪ್ರೇಮವೇನು? ದೈವೀ ಪ್ರೇಮದ ಜ್ಞಾನವೇನು?

'ಪ್ರೇಮ'ವೇನು ಹೇ ಜೀವವೇ, ಜೀವಾತ್ಮವೇ ಹೇಳು,
ನಿರ್ಭಯವೂ, ನಿಸ್ಸಂಕೋಚವೂ, ನಿಸ್ಸಂಶಯವಾಗಿ ಹೇಳು.

'ಬಹರಿ' ನೀನಿರಬೇಕು, ಪರಮ ಪ್ರೇಮಿಯ ಸಾಕ್ಷಿ,
ಆವಾಗಲೇ, ನೀನನಿಸುವೆ ಪ್ರೇಮ ನಗರದ ದೊರೆಯು.

ಆಭರಣ–೪೧

ಹೃದಯವುಳ್ಳ ವ್ಯಕ್ತಿ (ಅಹ್ಲೆ ದಿಲ್) ಯಾರು?

ಸದಾ ಹೃದಯದ ಅಧೀನ ಇರುವ ವ್ಯಕ್ತಿಯೇ ಹೃದಯವುಳ್ಳ ವ್ಯಕ್ತಿಯಾಗಿದ್ದಾನೆ. ಹೃದಯವು 'ಪರಮ ಸತ್ಯ'ದ ವಿಶೇಷ ಪ್ರಕಟರೂಪವಾಗಿದೆ. ಅದು ಸದ್ಗುಣಗಳ ಆಜ್ಞೆಯನ್ನು ಮಾಡುತ್ತದೆ, ಆದರೆ ಇಂದ್ರಿಯದಂತೆ ಕೆಡುಕಿನ ತರಹ ಅಲ್ಲ.

ಹೃದಯವುಳ್ಳ ಪ್ರತಿಯೊಬ್ಬನು ನಿಶ್ಚಿತವಾಗಿ ಹೃದಯ ಅಧೀನನು,
ಹೃದಯವುಳ್ಳವರು, ಹಾಗೂ ಇಂದ್ರಿಯಾಸಕ್ತರ ಮಧ್ಯೆ ಇಹುದು ಅಂತರ.

ಹೃದಯದ ಗಮನವು ಸದಾ ಒಳಿತಿನ ಕಡೆಗೆ, ಅದರದು ಕೆಡುಕಿನ ಕಡೆಗೆ,
ಇಹಪರಗಳ ಸುರಂಗದಲ್ಲಿ ಇರುವ ಭಾಗ್ಯಶಾಲಿ ಈ ಹೃದಯವು.

ಆಭರಣ–೪೨

ಹೃದಯವು ಉತ್ತಮ ಸ್ನೇಹಿತನಾಗಿದ್ದಾನೆ.

ಒಬ್ಬ ಸ್ನೇಹಿತನು, ಒಂದು ಕೈಯಲ್ಲಿ ಹೃದಯ ಹಾಗೂ ಇನ್ನೊಂದು ಕೈಯಲ್ಲಿ ಸ್ನೇಹವನ್ನು ಇಟ್ಟುಕೊಂಡು ನನ್ನ ಮುಂದೆ ಬರುತ್ತಾನೆ ಹಾಗೂ ಕೇಳುತ್ತಾನೆ. ಇವೆರಡರಲ್ಲಿ ನಿನ್ನ ಮನಸ್ಸು ಯಾವದನ್ನು ಬಯಸುತ್ತದೆಯೋ ಅದನ್ನು ಆಯ್ದುಕೊಳ್ಳು. ಈಗ ನಾನೇನು ಮಾಡಲಿ? ಹೃದಯವನ್ನು ಆಯ್ದುಕೊಳ್ಳಲೇ? ಅಥವಾ ಸ್ನೇಹವನ್ನು ಆ ಸ್ನೇಹಿತನ ಬಳಿಯೇ ಬಿಡಲೇ? ಆದರೆ 'ಮುರ್ಷದ'ರ ಕೃಪೆಯಿಂದ ಈ ವಿಷಯವು ಶತಸಿದ್ಧವಾಯಿತು, ಅದೇನೆಂದರೆ ಹೃದಯವೇ ಉತ್ತಮ ಹಾಗೂ ನಿಜ ಸ್ನೇಹಿತನಾಗಿದ್ದಾನೆ.

ಹೃದಯದ ಸಮ್ಮುಖ ಲಜ್ಜಿತನಾಗುವ ಪ್ರತಿಯೊಬ್ಬನು,
ಹೃದಯದ ಹಿತಚಿಂತಕನು ನಿಶ್ಚಿತ ಲಜ್ಜಿತನಾಗುವನು.

ಹೀಗಾಗಿ ಸ್ನೇಹಿತನು ಅಕಸ್ಮಾತ್ ನಿಸ್ಸಂಶಯವಾಗಿ ಹೃದಯಕ್ಕೆ ತನ್ನ ದರ್ಶನವನ್ನು ನೀಡಿದರೆ, ಇದು ರಹಸ್ಯದ ಪರಮ ಸೌಂದರ್ಯದ ಕಲ್ಪಿತ ರೂಪವಾಗಿದೆ.

ನೀನು ಹೃದಯವಂತರನ್ನು ಕೇಳು, ಹೃದಯವು ನೈಜ ಸ್ನೇಹಿತನೇ ಎಂದು?
ಆ ಜನರು ಹೃದಯದ ಕಣ್ಣಿನಿಂದ ಹೃದಯದ ಆಸ್ತಿತ್ವವನ್ನು ಕಾಣುತ್ತಾರೆ.

'ದಿಲ್'[೧] ವಾಸ್ತವದಲಿ 'ದಾಲ್' ಹಾಗೂ 'ಲಾಮ್' ಗಳೆಂಬ ಎರಡಕ್ಷರಗಳು,
ಕೇವಲ ಹೃದಯವಂತರೆ ಅರಿಯುತ್ತಾರೆ ತನ್ನ ಹೃದಯದ ಗೂಢವನು.

ಆಭರಣ–೪೩

ಹೃದಯದ ರಹಸ್ಯತೆ

ಹೇ, ಹೃದಯದ ಹುಚ್ಚನೇ, ಹೃದಯವು ಸ್ನೇಹಿತನಿಗಿಂತ ಹೊರತಾಗಿಲ್ಲ ಹಾಗೂ ಸ್ನೇಹಿತನು ಹೃದಯದಿಂದ ಬೇರೆ ಇಲ್ಲ. ಹೀಗಾಗಿ ಅವನು ಸ್ನೇಹಿತನಿಂದ ಪ್ರಕಟಗೊಂಡಿದ್ದಾನೆ ಹಾಗೂ ಸ್ನೇಹಿತನು ಅವನಿಂದ ಆಗಮಿಸಿದ್ದಾನೆ. ನಿನ್ನ ಸ್ನೇಹಿತನ ಹೃದಯದ ಗುಟ್ಟನ್ನು ಅರಿಯುವುದಾದರೆ ಹಾಗೂ ಸ್ನೇಹಿತನ ರಹಸ್ಯವನ್ನು ಪ್ರಾಪ್ತಿಸಿಕೊಳ್ಳಲು ಹಾಗೂ ಅದೇನೆಂದು ಅರಿಯಲು, ವಿಸ್ಮಯದ ಸಾಗರದಿಂದ ಆವೃತ್ತನಾಗಿದ್ದರೆ, ಈ ಚರಣವನ್ನು ಗಮನವಿಟ್ಟು ಓದು, ಇದರಲ್ಲಿ ಆಶ್ಚರ್ಯವೇನಿಲ್ಲ, ಖಂಡಿತವಾಗಿಯೂ ತಕ್ಷಣವೇ ನಿನ್ನ ಆತ್ಮ ತೃಪ್ತಿಯ ಅಲ್ಪ ಪರಿಕರವಾದರೂ ನಿನಗೆ ದೊರೆಯುತ್ತದೆ.

ಗರ್ ಕಿಸೀ ಪರ್ ಸದಾ ಅಝಮನ್ ನಾದಾನ್
ದೋಸ್ತ್ ಹಸ್ತಿ ಅಸ್ತ್, ದಿಲ್ ಬೂದ್ ಇರ್ಫಾನ್.

[ನನ್ನಂಥ ತಿಳಿಗೇಡಿಗೆ ಯಾರಾದರೂ ಕೇಳಿದರೆ ತಕ್ಷಣ ಹೇಳುವೆ,
ಹೃದಯವು ದಿವ್ಯಜ್ಞಾನವಾಗಿದೆ ಹಾಗೂ ಸ್ನೇಹಿತನು ಅಸ್ತಿತ್ವನಾಗಿದ್ದಾನೆ]

---

೧. ದಿಲ್ ಎಂದರೆ ಹೃದಯವು ಉರ್ದು ಹಾಗೂ ಫಾರ್ಸಿಗಳಲ್ಲಿ 'ದಾಲ್' ಹಾಗೂ 'ಲಾಮ್' ಎಂಬ ಅಕ್ಷರಗಳನ್ನು ಸೇರಿಸಿದರೆ 'ದಿಲ್' ಎಂಬ ಶಬ್ದವಾಗುತ್ತದೆ.

ಆಭರಣ–೪೪

ಬುದ್ಧಿಯ ಕುರಿತಾದ ಒಂದು ಗಜ಼ಲ್

ಒಂದು ಸಲ ಪರಿಪಕ್ವ 'ಬುದ್ಧಿ'ಯ ಕುರಿತಾದ ಒಂದು ಗಜ಼ಲ್ ಈ ಹುಚ್ಚನ ತಲೆಯಲ್ಲಿ ಆವರಿಸಿತು. ಹೀಗಾಗಿ ಅನಿವಾರ್ಯವಾಗಿ ಲೇಖನಿಗೊಳಿಸಬೇಕಾಯಿತು. ಆದರೆ ಈ 'ಹುಚ್ಚ'ನ ಹೊರತಾಗಿ ಯಾವ ಬುದ್ಧಿವಂತನು ಎಂದೂ ಇದನ್ನು ಮೆಚ್ಚಲಿಲ್ಲ.

ಪರಿಪೂರ್ಣ ಬುದ್ಧಿಯೇ ಉದ್ಯಾನವಾಗಿ, ಅರ್ಥಾತ್ ಅದರ ಹೂವಾಯಿತು,
ಪರಿಪೂರ್ಣ ಬುದ್ಧಿಯೇ ಪುಷ್ಪ ಸೌಂದರ್ಯ ಹಾಗೂ 'ಬುಲ್ ಬುಲ್'ನ ಪ್ರೇಮವಾಯಿತು.

ಪರಿಪೂರ್ಣ ಬುದ್ಧಿಯೆಂದರೆ ಲೋಕದ ಸಮಸ್ತ ಮತಿಗಳು ಒಂದೆಡೆ ಕೂಡುವಂತಾಯಿತು
ಯಾವ ರೀತಿ ಲಕ್ಷಾಂತರ ಕೇಶ ಸಮೂಹಗಳು ಸೇರಿ ಜಡೆಯಾಯಿತು.

ನಿಸ್ಸಂಶಯವಾಗಿ ಈ ಲೋಕದಲಿ ಬಿತ್ತನೆ ಬೀಜವಾಗಿದೆ ಪರಿಪೂರ್ಣ ಬುದ್ಧಿಯು,
ದೈವೀಕತೆ ಹಾಗೂ ಚತುರತೆಯ ಮುಷ್ಟಿಯಲ್ಲಿದೆ ಈ ಪರಿಪೂರ್ಣ ಬುದ್ಧಿಯು.

ದೈವೀಕೋಶವು ಹೂಜಿಯಾಗಿದೆ, ಪರಿಪೂರ್ಣ ಬುದ್ಧಿಯ ಅದರೊಳಗಿನ ಮದಿರೆಯಾಗಿದೆ,
ಈ ಹೂಜಿಯ 'ಕುನ್' ಸ್ವರವು, ಮದಿರೆ ಹೊರಹುಯ್ಯುವ ಸ್ವರವಾಗಿದೆ.

ಆತ್ಮದ ಸಭೆಯೊಳಗೆ ಬೆಳಕು ನೀಡುವ ಉರಿದೀಪವಾಗಿದೆ ಪರಿಪೂರ್ಣ ಬುದ್ಧಿಯು,
ಪರಿಪೂರ್ಣ ಬುದ್ಧಿಯು ದೈವೀಸಿಂಹವಾದರೆ, ಹೃದಯವು ಆನೆಮೈಯ ಹೊದಿಕೆಯಾಗಿದೆ.

ಪರಿಪೂರ್ಣ ಬುದ್ಧಿಯ ಸಲುವಾಗಿ ಸಮಸ್ತ ಸೃಷ್ಟಿಯ ಜನ್ಮವಾಯಿತು, ಸಾಗರಕ್ಕಾಗಿ ನೀರ್–ಕುದುರೆಯಾಗಲಿಲ್ಲ, ಕುದುರೆಯ ಸಲುವಾಗಿ ನೀರು ಸೃಷ್ಟಿಯಾಯಿತು.

ಹೇ ಸ್ನೇಹಿತನೇ, ಹೃದಯದ ಎರಡು ಹೋಳುಗಳಿವೆ 'ದಾಲ್' ಹಾಗೂ 'ಲಾಮ್'. 'ದಾಲ್' ಶಬ್ದವು ಬ್ರಹ್ಮಾಂಡದ ಭಾವಾರ್ಥವಾಗಿದೆ ಹಾಗೂ 'ಲಾಮ್' ಲೋಕ ಸೌಂದರ್ಯ'ದ ದ್ಯೋತಕವಾಗಿದೆ. ಈ ಒಂದೇ ಹೃದಯವು ಸ್ನೇಹಿತನಾಗುವ ವಾದವನ್ನು ಮಾಡುತ್ತದೆ ಹಾಗೂ ಹೃದಯದ ಅನಿವಾರ್ಯತೆಯೂ ಇದೇ ಆಗಿದೆ.

ಹೃದಯವು ಉತ್ತಮ ಸ್ನೇಹಿತ, ಸ್ವಯಂ ಸ್ನೇಹಿತನು ಉತ್ತಮ ಹೃದಯವು
ಎರಡರಲ್ಲಿ ಮಿಲನವಾಗಿವೆ. ಅಸ್ತಿತ್ವ ಹಾಗೂ ದೈವೀಜ್ಞಾನಗಳು.

ಈ ನಾಲ್ವರಿಂದ ನಿನಗಾಯಿತು ಒಂದು ರಹಸ್ಯದ ಅರ್ಥ,
ಇವೆರೆಡನ್ನು ಇವೆರಡರ ಹತ್ತಿರ ತಂದು ನೋಡು ನೀನು.

ಹೇ ಹೃದಯವೇ, ನೀ ಹೃದಯವಂತನಾದರೆ ದೊರೆಯುವನು ನಿನಗೆ ಹೃದಯವಂತನು
ಹೃದಯವುಳ್ಳ ವ್ಯಕ್ತಿಗಳ ಮಧ್ಯೆ ಹೃದಯಹೀನನು ಲಜ್ಜಿತನು

ಹೃದಯವು ನಿವಾಸಿ, ನಿವಾಸದಲ್ಲಿ ಅದು, ಇದನ್ನು ನೀನು ಅರಿತುಕೋ
ಹಗಲು ರಾತ್ರಿಯೂ ಪ್ರಜ್ವಲಿಸು ನೀ, ನಿನ್ನ ಹೃದಯದಲಿ ಸತತ.

ಈ ಲೌಕಿಕ ಜನರಿಂದ ನಿನ್ನ ಹೃದಯವನ್ನು ದೂರವಿರಿಸು ಹೇ ಬಹರಿ,
ಈ ಜನರು ಹೂವಿನ ಸುವಾಸನೆಯ ಸ್ನೇಹಿತರು ಮಾತ್ರ.

ಆಭರಣ–೪೫

'ಜೀವ'ವು ಸೃಷ್ಟಿಗಳ ದಿವ್ಯಜ್ಞಾನವಾಗಿದೆ

ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಕೇಳಿದನು – ಅಕಸ್ಮಾತ್ ದಿವ್ಯಜ್ಞಾನವೇ ಇರುತ್ತಿರಲಿಲ್ಲವಾದರೆ, ದೇವರ ದಾಸರು ಯಾವ ರೀತಿಯಿಂದ ದೇವರನ್ನು ಗುರುತಿಸುತ್ತಿದ್ದರು. ಇವರಲ್ಲಿ ಒಬ್ಬನು ದೈವಜ್ಞಾನಿಯಾಗಿದ್ದನು. ಅವನು ನುಡಿದನು– ದಿವ್ಯಜ್ಞಾನವಿರದಿದ್ದರೆ ದಾಸನೂ ಇರುತ್ತಿರಲಿಲ್ಲ. ದೇವರೂ ಇರುತ್ತಿರಲಿಲ್ಲ. ಯಾಕೆಂದರೆ ಇವೆರಡೂ ದೈವಿಜ್ಞಾನದ ಮೂಲವಾಗಿವೆ. ಎಂದು ಒಬ್ಬನು ಕೇಳಿದನು. ಅಕಸ್ಮಾತ್ ನೀರು ಇರದಿದ್ದರೆ, ಜನರು ತಮ್ಮ ಹೊಲಸನ್ನು ಯಾವುದರಿಂದ ತೊಳೆದುಕೊಳ್ಳುತ್ತಿದ್ದರು. ಇನ್ನೊಬ್ಬನು ಉತ್ತರಿಸಿದನು ಅಕಸ್ಮಾತ್ ನೀರು ಇರದಿದ್ದರೆ ಕೇವಲ ಹೊಲಸು ಇರುತ್ತಿತ್ತು, ಶುದ್ಧತೆಯಂತೂ ಇಲ್ಲವೆ ಇಲ್ಲ.

ಜೀವ ಸೃಷ್ಟಿಗಳು ನೆಲೆಸಿಹುದು ದಿವ್ಯಜ್ಞಾನದಿ ಮಾತ್ರ,
ಜೀವಿಗಳ ಮೆದಳು ಇಹುದು ದಿವ್ಯಜ್ಞಾನದಿ ಮಾತ್ರ

ಮರವೇನು? ಬೀಜವೇನು? ಶರೀರವೇನು? ಹಾಗೂ ಜೀವ,
ಅರ್ಹತೆಯೇ, ಅಸ್ತಿತ್ವವೇನು ಇಹುದು ದಿವ್ಯಜ್ಞಾನದಿ ಮಾತ್ರ

ಈ ತಾರೆಗಳು, ಈ ಗಗನವು ಈ ಸೂರ್ಯ ಚಂದ್ರರು,
ಈ ಎಲ್ಲಾ ಕಣಗಳು ವಾಸ್ತವದಲಿ, ಇಹುದು ದಿವ್ಯಜ್ಞಾನದಿ ಮಾತ್ರ.

ಆಭರಣ-೪೬

'ದೈವೀ ಜ್ಞಾನ'ವು ಆತ್ಮದ ವೈಯಕ್ತಿಕ ಅರ್ಹತೆಯು

ನನ್ನ ಪೀರ್-ಮುರ್ಷದ್‌ರಾಗಿದ್ದ ಹಜ್ರತ್ ಬಾಖ಼ರ್‌ರವರು ಒಂದು ಸಲ ಹೀಗೆ ನುಡಿದರು 'ದೈವೀಜ್ಞಾನವು ಸಮಸ್ತ ಸೃಷ್ಟಿಗಳು ಹಾಗೂ ಜೀವಿಗಳ ಮೇಲೆ ಸ್ವಾಧೀನತೆಯನ್ನು ಹೊಂದಿದೆ. ಆದುದರಿಂದ ಒಬ್ಬ ವ್ಯಕ್ತಿಯು ಒಂದು ಬಂಡೆಯ ಮೇಲೆ ಕುಳಿತಿದ್ದರೆ, ತನ್ನ ಮೇಲೆ ಒಬ್ಬ ವ್ಯಕ್ತಿಯು ಕುಳಿತುಕೊಂಡಿರುವನು ಅಥವಾ ಎದ್ದಿರುವನು ಎಂಬುದನ್ನು ಆ ಬಂಡೆಯು ಅರಿಯುತ್ತದೆ. ಹೇ ಸ್ನೇಹಿತನೇ! ದೈವೀಜ್ಞಾನವು ಆತ್ಮದ ವೈಯಕ್ತಿಕ ಅರ್ಹತೆಯಾಗಿದೆ. ಇದ್ಹೇಗೆ ಸಾಧ್ಯ? ಜೀವವಿದ್ದು ದೈವೀಜ್ಞಾನ ಇರದೆ ಇರುವುದು, ಯಾವ ಪದಾರ್ಥವು ಜೀವವಿಲ್ಲದೆ ಅಸ್ತಿತ್ವದಲ್ಲೇ ಇಲ್ಲ. ಎಲ್ಲಿ ಶರೀರವಿದೆಯೋ ಅಲ್ಲಿ ಜೀವವಿದೆ, ಎಲ್ಲಿ ಜೀವವಿದೆಯೋ ಅಲ್ಲಿ ದೈವೀಜ್ಞಾನವಿದೆ. ಹಾಗೂ ಅಲ್ಲಾಹನ ಪ್ರಕಾಶವು ದೈವಿಜ್ಞಾನದ ಸಾಕ್ಷಿಯಾಗಿದೆ.

ನನ್ನ ಮುರ್ಷದರು ದೈವೀಜ್ಞಾನದ ಅರ್ಥವಾಗಿದ್ದಾರೆ,
ಅವರು ಸಮಸ್ತ ಜೀವಗಳ ಜೀವವಾಗಿದ್ದಾರೆ.

ಲೋಕವು, ಶರೀರವೂ ಅದರಲ್ಲಿದೆ, ಜೀವವೂ ಹೌದು,
ಎಲ್ಲಿರುವುದು ಜೀವವು, ಅಲ್ಲಿರುವುದು ದಿವ್ಯಜ್ಞಾನವು ನಿಶ್ಚಿತ.

ಸೂರ್ಯ ಚಂದ್ರ ಎಲ್ಲದರಲ್ಲೂ ಇದೆ ದೈವೀಜ್ಞಾನ,
ತೂಬಾ[೧], ಫಿರ್ದೋಸ್[೨], ತಾರೆ, ಗಗನಗಳಲ್ಲೂ ಇಹುದು.

ಬೆಳಕು, ಅಗ್ನಿಗೆ ಮೂಲವಾಗಿದೆ ದಿವ್ಯಜ್ಞಾನವು ನಿಜದಲಿ,
ನವಿಲು, ಸರ್ಪಗಳಲ್ಲಿ ಇಹುದು ಚೇತನ ದಿವ್ಯಜ್ಞಾನದಿಂದಲೆ.

ಸರ್ವವ್ಯಾಪಿಯಾಗಿ ಇಹುದು ದಿವ್ಯಜ್ಞಾನದ ಜ್ಯೋತಿಯು,
ದೇಶದಲಿ, ಯಕ್ಷರಲಿ, ಅಪ್ಸರೆಯಲಿ, ಊರ್ವಶಿಯ ಸೌಂದರ್ಯದಲಿ.

---

೧. ತೂಬಾ – ಸ್ವರ್ಗದ ಒಂದು ಉದ್ಯಾನ

೨. ಫಿರ್ದೋಸ್– ಸ್ವರ್ಗೋದ್ಯಾನ

ದಿವ್ಯಜ್ಞಾನವು ಇಹುದು ಪವಿತ್ರ ಚಂದಿರನ ಬೆಳದಿಂಗಳಂತೆ,
ಇದರ ಬೆಳಕಿನ ಅನುಗ್ರಹವನು ಪಡೆವರು ಅಲ್ಪರೂ ಶ್ರೇಷ್ಠರೂ.

ವಿಶೇಷ ವ್ಯಕ್ತಿಯನ್ನು ನೀನು ಎಂದೂ ನೋಡಿರದೇ ಇದ್ದರೆ,
ವಿಶೇಷ ಅಸ್ಥೆಯಿಂದ ನೋಡು, 'ಪೀರ್'ನ ಮುಖ ಚಹರೆಯನು,

ಆದಷ್ಟು ಬೇಗ ಮುಳುಗಿಬಿಡು ನೀ ದಿವ್ಯಜ್ಞಾನದ ಸಾಗರದಿ 'ಬಹರಿ',
ಸಮುದ್ರ ಅಲೆಗಳಂತೆ ತೋರಬೇಡ ನೀ ನಿನ್ನ ಅಬ್ಬರವನು.

ಆಭರಣ-೪೭

ಜ್ಞಾನದ ವೈವಿಧ್ಯತೆಗಳು

ಗೌರವಾನ್ವಿತ, ಮಹೋನ್ನತ ಆ ಶ್ರೇಷ್ಠತಮನ ಏಳು ವೈಯಕ್ತಿಕ ಅರ್ಹತೆಗಳಿವೆ. ಇವುಗಳಿಗೆ ಅರ್ಹತೆಗಳ ಮಾತೆಯರು (ಇಮಿಹಾತುಲ್ ಸಿಫಾತ್) ಎಂದು ಕರೆಯುತ್ತಾರೆ. ಬ್ರಹ್ಮಾಂಡದ ಸಮಸ್ತ ಸೃಷ್ಟಿಗಳ ಸತ್ಯತೆಯಾದ ಅವನ ಒಟ್ಟು ಎಪ್ಪತ್ತು ಸಾವಿರ ಅರ್ಹತೆಗಳಿವೆ. ಅವುಗಳಲ್ಲಿ ಅದೆಷ್ಟೋ ಅವನ ರೌದ್ರತೆಗೆ ಹಾಗೂ ಅದೆಷ್ಟೋ ಅವನ ಸೌಂದರ್ಯದ ಸಂಬಂಧಿತವಾಗಿದೆ. ಆದರೆ ಅವೆಲ್ಲವುಗಳು ಏಳು ವಿಭಿನ್ನ ಅರ್ಹತೆಗಳಲ್ಲಿ ಪ್ರಕಟರೂಪವಾಗಿವೆ. ಅವೆಂದರೆ ಜ್ಞಾನ, ಸಂಕಲ್ಪ, ಸಾಮರ್ಥ್ಯ, ಕೇಳುವಿಕೆ, ದೃಷ್ಟಿ, ವಾಣಿ ಹಾಗೂ ಜೀವ. ಅಲ್ಲಾಹನು ಹಜ್ರತ್ 'ಆದಂ'ರನ್ನು ತನ್ನ ಚಹರೆಯಂತೆ ಸಾದೃಶವಾಗಿ ಹುಟ್ಟಿಸಿದನು ಹಾಗೂ ಅಗಣಿತ ಕೃಪೆಗಳನ್ನು ಅರ್ಹತೆಯ ಪ್ರತಿಬಿಂಬಗಳನ್ನು ದಯಪಾಲಿಸಿದನು. ಇದೇ ಕಾರಣಕ್ಕಾಗಿ ಅವರ ದೈವಿಕ ಜ್ಞಾನದ ಬೋಧಕರು ಹಾಗೂ ದಿವ್ಯಜ್ಞಾನ ಶಾಲೆಯ ಅಧ್ಯಾಪಕರಾಗಿ ನಿರ್ಣಯಿಸಲ್ಪಟ್ಟರು. ಹಾಗೂ ಅಂತರಂಗ ಮತ್ತು ಬಹಿರಂಗ ರಹಸ್ಯಗಳ್ನು ಏಕರೂಪದಲ್ಲಿ ಅರಿಯುವಂತಾದರು. ಇದಕ್ಕಾಗಿ ಅವರನ್ನು 'ಮಹಮೂದ್ ಅಲ್ ತರ್ಫೈನ್' ಎಂದು ಕರೆಯಲಾಯಿತು. ಮ್ವಾರಿಫತ್‌ನ ಸತ್ಯತೆಯನ್ನು ಯಾವ ರೀತಿಯಲ್ಲಿ ಪ್ರಕಟಿಸಬೇಕಾಗಿತ್ತೋ ಹಾಗೆಯೆ ಪ್ರಕಟಿಸಿದರು. ಮ್ವಾರಿಫತ್‌ನ ಸತ್ಯತೆಯ ಭಾರವನ್ನು ಭೂಮಿ, ಆಕಾಶ ಹಾಗೂ ಪರ್ವತಗಳು ಹೊರಲು ಅಸಮರ್ಥರಾದಾಗ, ಅದನ್ನು ತಮ್ಮ ಭುಜದ ಮೇಲೆ ಎತ್ತಿಕೊಂಡರು. ಈ ಏಳೂ ಅರ್ಹತೆಗಳು ವಾಸ್ತವದಲ್ಲಿ ಒಂದಕ್ಕಿಂತ ಇನ್ನೊಂದಕ್ಕೆ ಭಿನ್ನವಾಗಿವೆ. ಯಾವುದೇ ರೀತಿಯಿಂದಲೂ ಒಂದು ಅರ್ಹತೆ ಇನ್ನೊಂದರ ಸಾದೃಶವನ್ನು ಹಾಗೂ ಸಾಮ್ಯತೆಯನ್ನು ಹೊಂದಿರುವುದಿಲ್ಲ. ಹೀಗಾಗಿ ಕಣ್ಣು, ಕಿವಿಯ ಕಾರ್ಯವನ್ನು ಮಾಡಲು ಅಸಮರ್ಥವಾಗಿದೆ ಹಾಗೂ ಕಿವಿಯು, ಕಣ್ಣಿನ ಕಾರ್ಯವನ್ನು ನಿಭಾಯಿಸುವುದಿಲ್ಲ. ಆದರೆ ಅಂಗಗಳು ಅಧಿಕವಾಗಿ ಸೃಷ್ಟಿಸಲು ಕಾರಣವೇನೆಂದರೆ ಇವು ಪರಸ್ಪರ

ಮಿಶ್ರಗೊಳ್ಳದಿರಲೆಂದು ಮಾತ್ರ. ಹೀಗಿದ್ದರೆ ಏಕತ್ವದ ವಾಸ್ತವಿಕತೆ ಎಲ್ಲಿಹುದು? ನೈಜವಾಗಿ ಇವುಗಳ ಕ್ರಿಯಾನ್ವಯವು ಏಕತ್ವದಿಂದಲೇ ಇದೆ. ಹೇ ಆತ್ಮೀಯನೇ, ದೈವೀಜ್ಞಾನದ ಪ್ರತಿಬಿಂಬವಾದ ಮಾನವನ ಜ್ಞಾನವು, ಸಮಸ್ತ ಅರ್ಹತೆಗಳ ಮೇಲೆ ಪ್ರಭುತ್ವವನ್ನು ಹೊಂದಿದೆ. ಅನೇಕತೆಯ ನಾಸ್ತಿತ್ವವು ಹಾಗೂ ಏಕತ್ವದ ಸಮರ್ಥನೆಗಳು ಈ ಜ್ಞಾನದ ಆಧಾರದಿಂದಲೇ ಬ್ರಹ್ಮಾಂಡವನ್ನು ಆವರಿಸಿದೆ.

ಹೀಗಾಗಿ ಅವೆಲ್ಲವು 'ಆದಂ'ರ ರೂಪದಲ್ಲಿ ಪ್ರಜ್ವಲಿತವಾಗಿವೆ. ಈ ವಿಷಯವು ಅನುಭವದಿಂದ ಸಾಬೀತಾಗಿದೆ. ಅದ್ಹೇಗೆ ಎಂದರೆ ಒಬ್ಬ ವ್ಯಕ್ತಿಯು ಒಂದು ಧ್ವನಿಯನ್ನು ಕೇಳುತ್ತಾನೆ. ಅವನು ಶಬ್ದ ಜ್ಞಾನವನ್ನು ಹೊಂದಿರದೇ ಇದ್ದಲ್ಲಿ ಇದು ಮದ್ದಳೆಯ ಉತ್ಪತ್ತಿಯೋ ಅಥವಾ ತಂಬೂರಿಯ ತಂತಿಯ ಮೂಲವೋ ಎಂದು ಅರಿಯಲು ಅಸಮರ್ಥನಾಗಿರುತ್ತಿದ್ದನು. ಇದೇ ರೀತಿಯಾಗಿ ವಾಕ್ಸಾಮರ್ಥ್ಯ ಹಾಗೂ ದೃಷ್ಟಿಸಾಮರ್ಥ್ಯದ ಅರ್ಹತೆಗಳ ಬಗ್ಗೆಯೂ ಊಹಿಸಬಹುದು.

ಹೇ ಆತ್ಮೀಯನೇ, ಹಲವು ಫಕೀರರು ನಾಲ್ಕು ಗಜಕ್ಕಿಂತಲೂ ಅಧಿಕವಾಗಿರದ ಹಾಗೂ ಮೂರು ಗಜಕ್ಕಿಂತಲೂ ಕಡಿಮೆಯಾಗಿರದ, ಇಕ್ಕಟ್ಟಾದ ಹಾಗೂ ಕತ್ತಲು ಭರಿತ ತಮ್ಮ ಕೋಣೆಯಲ್ಲಿ, ಆಕಾಶವನ್ನು ಭೂಮಿಯ ಜೊತೆ, ಆದಿಯನ್ನು ಅನಂತದ ಜೊತೆ ಒಂದು ಗಂಟಿನ ತರಹ ಕಟ್ಟಿ, ತಮ್ಮ ಮುಂದೆ ಹಾಕಿ, ನೋಡುತ್ತಿರುತ್ತಾರೆ. ಇವರ ಕೈಗಳಲ್ಲಿ ಅನುಭವಿ ಸಾಧಕರ 'ಇಸ್ತರ್‌ಲಾಬ್'[೧] (೧ಣಡಿಂಟಚಿಭಜ) ಇರುತ್ತದೆ. ಸಿದ್ಧ ಜ್ಯೋತಿಷ್ ಶಾಸ್ತ್ರಜ್ಞನು ಬೆಳಗು ಸಾಯಂಕಾಲದ ಸಮಯದ ನಿಖರತೆಯನ್ನು ಹೇಳುವುದಂತೂ ದೂರದ ಮಾತು, ಎಂದೂ ಕಡಿಮೆ ಎತ್ತರದ ಗೋಡೆಯನ್ನು ಏರಲು ಸಹ ಅಸಮರ್ಥನಾದಾಗ, ನಾಲ್ಕನೆಯ ಆಕಾಶದ ಮೇಲೆ ಸೂರ್ಯನಿಗೆ ಸಂಬಂಧಿಸಿದಂತೆ ನಿಖರವಾಗಿ ಆಜ್ಞಾಪಿಸುವುದೇನೆಂದರೆ ಇಂಥ ತಾರೀಖು ಹಾಗೂ ಇಂತಹ ಸಮಯದಲ್ಲಿ ಗ್ರಹಣವಾಗುವುದು. ಅವರು ಹೇಳಿದ ಸಮಯದಲ್ಲಿ ಕಿಂಚಿತ್ತು ವ್ಯತ್ಯಾಸವಾಗುವುದಿಲ್ಲ. ಈ ಆಜ್ಞೆಯ ಸಾದರದ ಮೂಲವೂ ಅದೇ ಹಳೆಯ ಜ್ಯೋತಿಷ್ ಶಾಸ್ತ್ರಜ್ಞರ ನಿಯಮಗಳಿವೆ. ಆದರೆ ಅದರ ಪ್ರಾಪ್ತಿಯಲ್ಲಿ ಇವರು ಪ್ರಿಯವಾದ ತಮ್ಮ ಆಯುಷ್ಯದ ಅಮೂಲ್ಯ ಭಾಗವನ್ನು ಹಾಳುಮಾಡಿಕೊಂಡಿರುತ್ತಾರೆ. ಆದರೆ ಅವರು ಸುತಾರಾಂ ತಮ್ಮ ಬುದ್ಧಿಯಿಂದ ಏನನ್ನು ಮಾಡುವುದಿಲ್ಲ.

ಢೋಲಾಗಲಿ ಅಥವಾ ತಂಬೂರಿನ ನಾವೇ ಆಗಿರಲಿ ,
ಭೋಗವಿರಲಿ, ದುಗುಡವಿರಲಿ, ಕತ್ತಲೆಯಿರಲಿ ಅಥವಾ ಬೆಳಕಿರಲಿ.

ದುಃಖ–ಸಂತಸ, ಹೆಚ್ಚು–ಕಡಿಮೆ, ಅದೃಷ್ಟ–ದುರಾದೃಷ್ಟವಿರಲಿ,
ಮದಿರೆ ಇರಲಿ, ಹುಳಿ ಇರಲಿ, ಸಕ್ಕರೆ ಇರಲಿ, ಅಥವಾ ಉಪ್ಪಿರಲಿ.

ರೋಗವಿರಲಿ, ಆರೋಗ್ಯವಿರಲಿ, ಜತೆಗೆ ನೂರು ಉಪದ್ರವಗಳಿರಲಿ,
ಅರಿಯಲಾರಿರಿ ಎಂದಿಗೂ ಅದನು ದಿವ್ಯಜ್ಞಾನದ ಹೊರತು ನೀವು.

ಅವನೇ ದಿವ್ಯಜ್ಞಾನಿ, ಎಲ್ಲರನು ಒಂದಾಗಿ ಮಾಡುವನು,
ಹೀಗಾಗಿ ದೂರವಿಡಿ, ಸಂಶಯ, ಆತಂಕವನು ದೈವೀಜ್ಞಾನದಿಂದ.

ವಾಸ್ತವದಲಿ ಯಾವ ವ್ಯಕ್ತಿಯೂ ದೈವೀಜ್ಞಾನಿಯು ಅಲ್ಲ,
ಎಲ್ಲವನೂ ಬಿಸಿ ಅಥವಾ ತಂಪು ಮಾಡುವವನಲ್ಲ.

ಕೊನೆಯಿಲ್ಲದೆ ಸಾಗಿಹುದು ದಿವ್ಯಜ್ಞಾನವು ಒಂದರ್ಥದಲಿ,
'ಅದರಿಂದ' ಹಾಗೂ 'ಅದರಲ್ಲಿ' ನೆಲೆಸಿಹುದು ಭೂಮಿ ಮತ್ತು ಕಾಲಗಳು.

ಇಂಥ ರತ್ನವು ಇರುವ ಗಣಿಯೇ ಇರದು ಜಗದಿ,
ಇಂಥ ಮುತ್ತಿರುವ ಚಿಪ್ಪು ಇಲ್ಲವೆ ಇಲ್ಲ ಸಾಗರದಿ.

ಕಣ್ಣಿನಲ್ಲಿ ಇದರ ಹೊಳಪು ಇರುವವರೆಗೆ ಮಾತ್ರ,
ಬರಿದಿಹುದು ಮದ್ಯದ ಬಟ್ಟಲು, ಮದಿರೆ ಇಲ್ಲದೆ.

ಯಾವ ಸೃಷ್ಟಿಯಿಂದಲೂ ಹೊರತಾಗಿಲ್ಲ ದಿವ್ಯಜ್ಞಾನ,
ಇದು ತುಂಬಿಹುದು ಎರಡೂ ಲೋಕಗಳು ಸಮೃದ್ಧ.

ಧ್ವನಿಯೂ ಕೇವಲ ಮುರ್ಷದರದು ಆಗಿದೆ,
ಆದರೆ ಈ ಮಾತು ಏಕದೇವ ವಿಶ್ವಾಸಿಗಳದು ಇಹುದು.

ಅದರ ವಚನಗಳು ದರುಶನದ ಮಾಧ್ಯಮವು ಆಗಿಹುದು,
ಅರಿವರು ಇದನ್ನು ಏಕದೇವ ಮಾರ್ಗದ ಸಹಚರರು.

ನೀನು ಶರೀರಕ್ಕೂ ಮರಳಾಗದಿರು, ಜೀವಕ್ಕೂ ಮರಳಾಗದಿರು,
'ಬಹರಿ' ನೀ ಬಲಿಯಾಗು, ಆಗುವದಾದರೆ ದಿವ್ಯಜ್ಞಾನಕ್ಕೆ ಮಾತ್ರ.

ಆಭರಣ–೪೮

'ದೇವನ' ಅರ್ಹತೆಗಳ ಅನುರೂಪತೆಗಳ ನಾಶ

ಒಂದು ದಿನ ನನ್ನ ಪೀರ್–ಮುರ್ಷದರು ನುಡಿದರು. ಅದೇನೆಂದರೆ ಒಬ್ಬ ಹೃದಯರಹಿತನು ಹೃದಯದ ಹುಡುಕಾಟದಲ್ಲಿ ನಮ್ಮ ಹೊಸ್ತಿಲಿಗೆ ಬಂದು ತಲುಪಿದನು. ಆಗ ಜ್ಞಾನಗೋಷ್ಠಿಯು ಮುಕ್ತಾಯವಾಗಿ ಜನಸಮೂಹ ಹೊರಟು ಹೋಗಿದ್ದಿತು.

ಇದನ್ನು ಕಂಡು ವಿಚಾರಿಸಿದನು. 'ಹೇಳಲಾಗುತ್ತದೆ, ಕತ್ತಲು ರಾತ್ರಿಯಲ್ಲಿ ಕರಿಯ ಬಂಡೆಯ ಮೇಲೆ, ಕಪ್ಪು ಇರುವೆಯು ಓಡಾಡುತ್ತಿದೆ. ಗೌರವಾನ್ವಿತ ಪರಮ ಸತ್ಯನು ಅದರ ಕಾಲುಗಳ ಶಬ್ದವನ್ನು ಕೇಳುತ್ತಾನೆ. ವಾಸ್ತವಿಕವಾಗಿ ಇರುವೆಯ ಕಾಲುಗಳ ಶಬ್ದವು ಖಂಡಿತ ಉತ್ಪತ್ತಿಯಾಗುವುದಿಲ್ಲ. ಆದರೆ ಪರಮ ಪವಿತ್ರ ಸತ್ಯನು ಕಿವಿಗಳಿಂದ ಹೊರತಾಗಿದ್ದಾನೆ. ಇದರಿಂದಾಗಿ ನನ್ನ ಬುದ್ಧಿಯ ಮೇಲೆ ಒಂದು ಶಂಕೆ ಆವೃತ್ತವಾಗುತ್ತಿತ್ತು. ಹಾಗೂ ಹೃದಯಾಂತರಾಳದಲ್ಲಿ ಸಂಶಯ ಹಾಗೂ ಆಶಂಕೆಗಳು ಸುಳಿಯ ಹತ್ತಿದವು. ದೇವರ ಕೃಪೆಯಿಂದ ಈ ಸಂಶಯ ಶಂಕೆಗಳನ್ನು ದೂರಮಾಡಿ, ಇಲ್ಲವಾದರೆ ನಾನು ಮತಿಭ್ರಾಂತನಾಗಬಹುದು. ಹೇ! ಮತಿಭ್ರಾಂತ 'ಪವಿತ್ರ ಕುರಾನಿನ ಅರ್ಥವನ್ನು ತಿಳಿದಿದ್ದಿಯಾ" ನಾನು ನುಡಿದೆ 'ಹಾಂ, ಹಾಂ, ಸ್ವಲ್ಪ ಮಟ್ಟಿಗೆ ತಿಳಿದ್ದದ್ದೇನೆ ಆಗ ನುಡಿದರು,

'ಹುವಾಲ್ ಅವ್ವಲು ವೊ ಆಖೀರವು ವ ಅಲ್ ಜಾಹೀರುವಅಲ್ ಬಾತಿನ ವ ಹುವಾ ಬಿಕುಲ್ಲಿ ಸೈನ್ ಅಲೀಮ್' ಇದರ ಅರ್ಥವೆಂದರೆ – ಆದಿಯೂ, ಅಂತ್ಯವೂ, ಪ್ರಕಟವೂ, ಸುಪ್ತವೂ ಅವನೇ ಆಗಿದ್ದಾನೆ ಹಾಗೂ ಸಮಸ್ತ ಜೀವಿಗಳ ಅರಿವುಳ್ಳವನು ಅವನೇ ಆಗಿದ್ದಾನೆ.

ಮುಂದುವರೆಯುತ್ತಾ ಮತ್ತೆ ನುಡಿದರು 'ಆನೆಯು ದೊಡ್ಡ ಗಾತ್ರದ ಪ್ರಾಣಿಯಾಗಿದೆ. ಹಾಗೂ ಅದು ನರಹಂತಕ ಸ್ವಭಾವದ ಪ್ರಾಣಿಯಾಗಿದೆ. ಆದರೆ ಈ ವಿಷಯ ಸರ್ವತ್ರವಾಗಿದೆಯೆಂದರೆ ಆನೆಯು ನಡೆಯುವಾಗ ಅದರ ಪಾದದ ಶಬ್ದವು ಇಷ್ಟು ಕ್ಷೀಣವಾಗಿರುತ್ತದೆ, ಅದು ಇಲ್ಲ ಎನ್ನುವಂಥ ಮಟ್ಟದಾಗಿರುತ್ತದೆ. ಅದಕ್ಕಾಗಿ ಅದಕ್ಕೆ ಗಂಟೆಗಳನ್ನು ಕಟ್ಟಲಾಗುತ್ತದೆ. ಇದರಿಂದ ಆ ಪ್ರಾಣಿಯ ಆಗಮನದ ಸೂಚನೆ ದೊರೆಯಲಿ ಎಂದು ಹಾಗೂ ಇದರಿಂದ ಬರುವ ಅಪಾಯದಿಂದ ಪಾರಾಗಲಿ ಎಂದು. ವಸ್ತುತಃ ಅದರ ಶಬ್ದವು ಬೇರೆಯವರಿಗೆ ಕೇಳುವುದಿಲ್ಲ. ಆದರೆ ಅದು ತನ್ನ ಶಬ್ದವನ್ನು ಕೇಳುತ್ತದೆಯೋ ಅಥವಾ ಇಲ್ಲವೋ? ಆಗ ನಾನುಡಿದೆ. 'ಅದಕ್ಕೆ ಕೇಳಿಸುತ್ತದೆ' ಎಂದು. ಮುರ್ಷದರು ಮತ್ತೆ ನುಡಿದರು. 'ಅಕಸ್ಮಾತ್, ನೀನು ಭೂಮಿಯ ಮೇಲೆ ಮೆಲ್ಲನೆ ನಡೆದರೆ, ನಿನ್ನ ಪಾದದ ಶಬ್ದವನ್ನು ಬೇರೆಯವರಿಗೆ ಕೇಳಿಸದಿದ್ದರೂ ನೀನು ಕೇಳುವಿಯೋ ಅಥವಾ ಇಲ್ಲವೋ? ಆಗ ನಾನು 'ಹಾಂ' ಎಂದು ನುಡಿದೆ. ಮುರ್ಷದರು ಮತ್ತೆ ನುಡಿದರು. 'ಯಾವ ರೀತಿ ಇರುವೆಯ ಪಾದದ ಶಬ್ದವು ಬೇರೆಯವರಿಗೆ ಕೇಳಿಸುವುದಿಲ್ಲವೋ, ಆದರೆ ಇರುವೆಗೆ, ಅದೇ ತರಹ ನಿನಗೆ ಮತ್ತೆ ಆನೆಗೆ ಅವರವರ ಹೆಜ್ಜೆಯ ಶಬ್ದ ಕೇಳಿಸುತ್ತದೆಯೋ ಅಥವಾ ಇಲ್ಲವೋ?' ಆಗ ನಾನು ನುಡಿದೆ 'ಖಂಡಿತವಾಗಿ ಕೇಳಿಸುತ್ತದೆ. ಆಗ ಮುರ್ಷದರು ನುಡಿದರು. 'ಈ ರೀತಿಯಾಗಿ ಸಮಸ್ತ ಜೀವಿಗಳು, ಅದು ಹಾವಿರಲಿ, ಅಥವಾ ನವಿಲಿರಲಿ ಮೇಲೆ ಉಲ್ಲೇಖಿಸಿದ

ಕುರಾನಿನ ಸ್ತೋತ್ರದಂತೆ ಆ ಪರಮಸತ್ಯನು ಸರ್ವಜ್ಞನು, ಸಶಕ್ತನು, ಎಲ್ಲರ ಅಹವಾಲನ್ನು ಕೇಳುವವನು ಹಾಗೂ ಸರ್ವವೀಕ್ಷಕನೂ ಆಗಿದ್ದಾನೆ.

ಬ್ರಹ್ಮಾಂಡದ ಚತುರತೆಯೂ, ವೀಕ್ಷಣೆಯೂ ಅವನಿಂದಲೇ
ಆದಮರ ವಾಕ್ಚಾತುರ್ಯವೂ, ಶ್ರವಣಶಕ್ತಿಯೂ ಅವನಿಂದಲೇ
ಅವನ ಹೊರತು ಆ ಸ್ಥಾನದಲಿ ಯಾರ ಅಸ್ತಿತ್ವವಿಹುದು ಗೆಳೆಯ,
ನಷ್ಟವೂ, ಚಾತುರ್ಯ, ಸಂತಸವೂ ಹಾಗೂ ದುಃಖವೂ ಅವನಿಂದಲೇ

ಆಭರಣ-೪೯

ಆತ್ಮ ಹಾಗೂ ದಿವ್ಯಜ್ಞಾನ ಜತೆ ಜತೆಗಿವೆ.

ಮುಂದೆ ಬರುವವರ ಆತ್ಮಗಳು 'ಆತ್ಮಲೋಕ'ದಲ್ಲಿ (ಆಲಂ-ಎ-ಮಿಸಾಲ್) ಇರುತ್ತವೆ. ಹಾಗೂ ಆ ಲೋಕದಲ್ಲಿ ಆತ್ಮಗಳು ದೈವೀಜ್ಞಾನದ ಪಾನದ ಪ್ರಮತ್ತ ಸ್ಥಿತಿಯಲ್ಲಿ ಇರುತ್ತವೆ. ಈ ದೈವೀಜ್ಞಾನದಿಂದಲೇ ಸಮಸ್ತ ಅರ್ಹತೆಗಳ ಪ್ರಭುತ್ವವನ್ನು ಸಾಧಿಸುತ್ತದೆ. ಬ್ರಹ್ಮಾಂಡ ಮತ್ತು ಅರಿವು-ಇವೆರಡು ದಿವ್ಯಜ್ಞಾನದ ಅನುರೂಪಗಳಾಗಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದೇ ದೈವೀಜ್ಞಾನದಿಂದಲೇ 'ಅಲಾಅಸ್ ಬಿರಾಬುಕುಮ್'ನ ಉತ್ತರವನ್ನು 'ಖಾಲುವಬಲಿ' ಎಂಬ ರೂಪದಲ್ಲಿ ನೀಡಲಾಯಿತು. ಆಗ ಘನವಂತ ಪರಮಸತ್ಯನು ಬಯಸಿದಾಗ, ಅದನ್ನು ನಿರ್ಣಾಯಕ ಲೋಕದಲ್ಲಿ ತರುತ್ತಾನೆ. ಆಗ ಸದರಿ ಆತ್ಮವು ಜನ್ಮ ಪಡೆವ ಮಗುವಿನ ತಂದೆಯ ಕಣ್ಣನ್ನು ಪ್ರವೇಶಿಸುತ್ತದೆ. ಅದು ಕಣ್ಣಿನಿಂದ ಬೆನ್ನಿನ ಮೂಲಕವಾಗಿ 'ವೀರ್ಯ'ದ ಜತೆ ತಾಯಿಯ ಗರ್ಭಾಶಯವನ್ನು ಪ್ರವೇಶಿಸುತ್ತದೆ. ಈ ಹಂತದ ಆತ್ಮಕ್ಕೆ 'ರೂಹ್ ನಾಮಿಯಾ' ಎಂಬ ಹೆಸರನ್ನು ನೀಡಲಾಗಿದೆ. ತದನಂತರ ಅದು ಬೆಳವಣಿಗೆಯ ಕಡೆ ಗಮನ ಹರಿಸಿ 'ಚಲನಶೀಲ ಆತ್ಮ' (ರೂಹೇ ಮುತಹರಿಕಾ) ಎಂದು ಕರೆಸಿಕೊಳ್ಳುತ್ತದೆ. ನಾಲ್ಕುವರೆ ತಿಂಗಳ ನಂತರ ಕಣ್ಣು ಹಾಗೂ ಕೈಗಳು ಪರಿಪೂರ್ಣವಾದಾಗ ಅದು 'ವಾಕ್‌ಶಕ್ತಿ ಆತ್ಮ' (ರೂಹೇ ನಾತೇಖಾ) ಆಗುತ್ತದೆ. ಇದೇ ಹಂತದಲ್ಲಿ ಅದು ತನ್ನ ರೂಪದ ಪೂರ್ಣತೆಯ ಸ್ಥಿತಿಗೆ ತಲುಪಿಸುತ್ತದೆ. ಅರ್ಥಾತ್ ಆಗ ಮನುಷ್ಯನ ಅವಶ್ಯಕ ಅಂಗಗಳಲ್ಲಿ ಆತ್ಮದ ಜೊತೆ ದಿವ್ಯಜ್ಞಾನವು ಆ ಸ್ಥಿತಿಯ ಅನುಗುಣವಾಗಿ ಬೆರೆಯುತ್ತದೆ. ಹೀಗಾಗಿ ಜಗಲೋಕದಲ್ಲಾಗಲಿ, ದೇವಲೋಕದಲ್ಲಾಗಲಿ ಯಾವ ವಸ್ತುವು ಆತ್ಮದ ಹೊರತಾಗಿ ಇರುವುದು ಸಾಧ್ಯವೇ ಇಲ್ಲ ಹಾಗೂ ಆತ್ಮವು ದಿವ್ಯಜ್ಞಾನದ ಹೊರತಾಗಿ ಇಲ್ಲವೇ ಇಲ್ಲ. ನವಮಾಸಗಳು ತುಂಬಿದಾಗ ಸರ್ವಸಮರ್ಥನ, ಮಹಾಮಹಿಮನ ಅಜ್ಞಾನುಸಾರ, ಅದು ಸ್ವಯಂ ತನ್ನ ಇಚ್ಛೆಯಿಂದ ಹೊರಬರುತ್ತದೆ. ಸೂಲಗಿತ್ತಿಯು ಅದನ್ನು ತನ್ನ

ಕೈಯಲ್ಲಿ ಹಿಡಿದು, ತನ್ನ ಸ್ವಲ್ಪ ಶಕ್ತಿ ಪ್ರಯೋಗಿಸಿ ಹೊರ ಎಳೆಯುತ್ತಾಳೆ. ಅದು ಕೆಲವೊಮ್ಮೆ ಅಳುತ್ತದೆ. ಕೆಲವೊಮ್ಮೆ ನಗುತ್ತದೆ ಹಾಗೂ ತಾಯಿಯ ಮೊಲೆಯಿಂದ ಹಾಲನ್ನು ಚೀಪುತ್ತದೆ. ಹೊರಬರುವ, ಅಳುವ, ನಗುವ, ಹಾಲನ್ನು ಚೀಪುವ ಈ ಅರಿವು ಮಗುವಿಗೆ ಹೇಗೆ ತಿಳಿಯಿತು. ಇದು ದೈವೀಜ್ಞಾನದಿಂದಲೇ ಮಾತ್ರ ಸಾಧ್ಯ. ಅವನು ಯೌವನಾವಸ್ಥೆಗೆ ತಲುಪಿದಾಗ ಈ ದೈವೀಜ್ಞಾನವು ತನ್ನ ಚರಮಸ್ಥಾನವನ್ನು ತಲುಪುತ್ತದೆ. ಸಾವಿನ ನಂತರ 'ಮುನ್‌ಕಿರ್ ವ ನಕೀರ್'ರ ಪ್ರಶ್ನೋತ್ತರಗಳು ಸಹ ದಿವ್ಯಜ್ಞಾನದಿಂದ ಹೊರತಾಗಿರುವುದಿಲ್ಲ. ಹೀಗಾಗಿ ಪ್ರತಿ ಕಾಲ-ಹಂತದಲ್ಲೂ ಪ್ರತಿ ಸ್ಥಿತಿ-ಗತಿಯಲ್ಲೂ ದಿವ್ಯಜ್ಞಾನವು ಅವನ ಜೊತೆಯಲ್ಲಿಯೇ ಜೊತೆಯಾಗಿ ಇರುತ್ತದೆ.

ದೈವೀಜ್ಞಾನವು ಎಲ್ಲರ ಜತೆ ಇದೆ ಹಾಗೂ ಎಲ್ಲಾ ಕಾಲದಲೂ
ವೀರ್ಯದಲಿ, ಗರ್ಭದಲಿ, ಮಗುವಿನಲಿ, ಪ್ರೌಢನಲ್ಲೂ ಇವೆ.

ದೈವೀಜ್ಞಾನವು ನಿಸ್ಸಂದೇಹವಾಗಿ ಇಹುದು ಪ್ರತಿಕ್ರಿಯೆಯಲಿ ಮಿಲನದಲಿ,
ಆದಿ-ಅನಂತದಲೂ ದೈವೀಜ್ಞಾನವಿದೆ. ಅದರ ಮಧ್ಯದಲಿ ದೈವೀಜ್ಞಾನವಿದೆ.

'ಬಹರಿ' ನೀ ಕೇವಲ ದೈವೀಜ್ಞಾನದ ಬಗ್ಗೆಯೇ ಅರ್ಪಿತನಿಲ್ಲ
ನಿನ್ನ ಹೃದಯದ ಗುರಿ ಇಹುದು 'ಬರ್ಜಗ್'[2]ನ ದೈವೀಜ್ಞಾನದ ದಿಶೆಯಲಿ

ಆಭರಣ-೫೦

ದಿವ್ಯಜ್ಞಾನದ ವರ್ಣಸೌಂದರ್ಯ

ಒಂದೇ ವಸ್ತು ಲಕ್ಷಾಂತರ ಉಡುಪಿನಲ್ಲಿ ವ್ಯಕ್ತವಾಯಿತು. ಅದೇ ದೈವೀಜ್ಞಾನದ ವಿಶೇಷತೆಯಿದೆ. ಆದರೆ ಈ ನುಡಿಯ ಆಳದವರೆಗೆ ತಲುಪಲು ದಿವ್ಯಪೂರ್ಣ ಜ್ಞಾನಿಯ ಅವಶ್ಯಕತೆಯಿದೆ. ಯಾಕೆಂದರೆ ಇಲ್ಲಿಯೂ ಅದಕ್ಕೊಂದು ಹೃದಯದ ಸಂಬಂಧವಿದೆ. ಯಾವ ಸಂಬಂಧವು ತಾಯಿ ಮತ್ತು ಮಗುವಿನ ಮಧ್ಯೆ ಇದ್ದು, ಅದು ಪ್ರಕಟರೂಪವಾದಾಗ ಅದನ್ನು ಮಮತೆ ಎಂತೆಯೂ ಅದು ಪೀರ್-ಮುರೀದ್‌ರ (ಗುರು-ಶಿಷ್ಯರ) ಮಧ್ಯೆ ಇದ್ದರೆ ನಂಬಿಕೆ ಎಂತಲೂ, ಅದು ಪ್ರಿಯಕರ ಹಾಗೂ ಪ್ರಿಯತಮೆಯ ಮಧ್ಯೆ ಇದ್ದರೆ 'ಪ್ರೇಮ'ವೆಂದೂ ಕರೆಯಲ್ಪಡುತ್ತದೆ ಅಥವಾ ಮತ್ತೆ ಅದೇ ಒಂದು ರಕ್ತವಿದ್ದು, ಅದು ದುಃಖಿತನ ಕಣ್ಣಿನ ಮಾರ್ಗವಾಗಿ ಕಣ್ಣೀರ ಹನಿಯಾಗಿ

೧. 'ಮುನ್‌ಕಿರ್ ವ ನಕೀರ್'- ಗೋರಿಯಲ್ಲಿ ಮೃತನೊಡನೆ ಅವನ ಕರ್ಮಗಳ ಬಗ್ಗೆ ಪ್ರಶ್ನಿಸುವ ಇಬ್ಬರು ದೇವಚರರು.
೨. ಬರ್ಜಗ್ - ಮರಣಾನಂತದರಿಂದ ಪ್ರಳಯದ ಕಾಲದವರೆಗಿನ ಕಾಲಾವಧಿ.

ಬೀಳುತ್ತದೆ. ಅದೇ ತಾಯಿಯ ಮಮತೆಯ ಆವೇಗದಲ್ಲಿ ಹಾಲಾಗಿ ಎದೆಯಿಂದ ಹೊರಬರುತ್ತದೆ ಹಾಗೂ ಪ್ರೇಮದ ಉತ್ಕರ್ಷೆಯಲಿ ಅದು ವೀರ್ಯವಾಗಿ ಹೊರಬರುತ್ತದೆ.

ವಾಸ್ತವದಲಿ ಉಷ್ಣ ಹಾಗೂ ಬೆಳಕಾಗಿದೆ ದಿವ್ಯಜ್ಞಾನ,
ಇದರ ವ್ಯಕ್ತವು ಅದರ ರೂಪ ಹಾಗೂ ಅರ್ಥದ ಪರಿಯಲಿ.

ದಿವ್ಯಜ್ಞಾನದಿಂದಲೇ ಇಹುದು ಅಸ್ತಿತ್ವದಲಿ ಜೀವ ಹಾಗೂ ದೇಹವು,
ಈ ಒಂದು ಮೀನು, ಮತ್ತು ಅದು ಇರುವ ಸಾಗರವೂ ದಿವ್ಯಜ್ಞಾನ.

'ಅನುರಾಗಿ'ಯ ಹೊರತು ಯಾರಿಹರು ದೈವೀಜ್ಞಾನದ ಆಸಕ್ತರು,
ದೈವೀ ಸಾಮಿಪ್ಯದ ನುಡಿಯ ಅರಿವನು ಪರಿಪೂರ್ಣನು ಮಾತ್ರ.

ಕೇಳು 'ಬಹರಿ' ನಿಜದಲಿ ಅಶಕ್ತ ಮಯೂರನಂತೆ ನೀನು,
ಆದರೆ ದಿವ್ಯಜ್ಞಾನವು ಇಹುದು ತೀರರಹಿತ ಮಹಾಸಾಗರವು.

ಆಭರಣ–೫೧

ದೈವೀಜ್ಞಾನದ ವೈಶಾಲ್ಯತೆ

ಕುರಾನಿನ ಸ್ತೋತ್ರ **'ಇನ್ನಾ ಅಲ್ಲಾಹ ಖದಾ ಅಹಾತಾ ಬಿಕುಲ್ಲಿ ಶೈಯಿನ್ ಇಲ್ಮಾ'**ದಂತೆ ಹಾಗೂ ಪ್ರವಾದಿ ಮಹ್ಮದರ ಹದೀಸ್ **'ಇನ್ ಮಿನಲ್ ಇಲ್ಲಿ ಕಹೈ ಅತಿಲ್ ಮಕನೂನ್ ಲಾಯಲಮಲೂ ಇಲ್ಲಲ್ ಇಲ್ಮಾಹಿ'** ದ ಪ್ರಕಾರ, ಅಲ್ಲಾಹನಿಂದ ಸುಸ್ಪಷ್ಟವಾಗುವುದೇನೆಂದರೆ, ಪರಂಜ್ಞಾನದ ಮಹಾ ಜ್ಞಾನ ಪ್ರತಿಬಿಂಬ ಸಮಸ್ತ ಬ್ರಹ್ಮಾಂಡವನ್ನೇ ಆವರಿಸಿದೆ ಹಾಗೂ ಸಮಸ್ತದ ಮೇಲೆ ಪ್ರಭುತ್ವವನ್ನು ಸಾಧಿಸಿದೆ. ನಿಸ್ಸಂದೇಹವಾಗಿ ಕೆಲವು ಅರ್ಹತೆಗಳು ಕೆಲವು ವಸ್ತುಗಳಲ್ಲಿ ಮಾತ್ರ ನೆಲೆಸಿರುತ್ತವೆ. ಮತ್ತೆ ಕೆಲವುದರಲ್ಲಿ ಅದು ನೆಲೆಸಿರುವುದಿಲ್ಲ. ಆದರೆ ವಿವೇಕವು ಈ ಜ್ಞಾನದ ವಿಶೇಷ ಮಜಲಾಗಿದೆ. ಅದು ಸಮಸ್ತ ಸೃಷ್ಟಿಗಳಲ್ಲಿ ನೆಲೆಸಿದ್ದು, ವ್ಯಕ್ತವಾಗಿರುತ್ತದೆ. ಅನ್ವೇಷಕ ದೃಷ್ಟಿಯಿಂದ ನೋಡಿದಾಗ ಸಮಸ್ತ ಪದಾರ್ಥಗಳು ಅಡಿಯಿಂದ ಮುಡಿಯವರೆಗೆ ವಿವೇಕವೇ ತುಂಬಿದೆ. ಅರ್ಥಾತ್ ಇದು ವಿವೇಕದ ಅಸ್ತಿತ್ವವು ಪದಾರ್ಥಗಳ ರೂಪದಲ್ಲಿ ಅವಿರ್ಭಾವಗೊಂಡು ಪ್ರಜ್ವಲಿತವಾದವು. ಮನುಷ್ಯನ ಪರಿಪೂರ್ಣ ಹಾಗೂ ನಿರ್ಣಾಯಕ ವ್ಯಕ್ತಿತ್ವ ಹಾಗೂ ಪ್ರವಾದಿ ಮಹ್ಮದರ ಜ್ಯೋತಿಯೂ ಇದೇ ಆಗಿದೆ. ಇಲ್ಲದಿದ್ದರೆ. ನಾನಂತು ಭಾಂಗ್ ಕುಡಿಯುವವನಾಗಿದ್ದು, ಭಾಂಗನ ಪ್ರಮತ್ತೆಯಲ್ಲಿ ಯಾವ ಅಂಶವು ಅದ್ಯಾವ ರೀತಿಯಲ್ಲಿ ನನ್ನ ಮುಂದೆ ಗೋಚರವಾಗುತ್ತದೆಯೋ, ನಾನು ಅದನ್ನು ಹಾಗೆಯೇ ಬರವಣಿಗೆಯಲ್ಲಿ ತರುತ್ತೇನೆ.

ಆದರೆ ದೇವರಾಣೆಗೆ ಜನರು ಇದನ್ನು ನಂಬುವುದಿಲ್ಲ. ಆದರೆ ಪ್ರಜ್ಞಾವಸ್ಥೆಯಲ್ಲಿ ಬುದ್ಧಿವಂತರು, ವಿನಮ್ರಭಾವದಲ್ಲಿ ನುಡಿದ ವಚನಗಳು ಪ್ರಕಟಗೊಂಡಾಗ, ನಾನು ಹೇಳಿದ್ದೂ ಉಪಯುಕ್ತಕರವೆಂದು ಸಾಬೀತಾಗುತ್ತದೆ.

ಅಸ್ತಿತ್ವದ ನಿರ್ಣಾಯಕ ರೂಪವೇ ಮನುಷ್ಯನು, ಹೃದಯವೆ ಪ್ರವಾದಿಜ್ಯೋತಿಯು,
ಶಬ್ದಗಳು ಬೇರೆ ಬೇರೆ ಇರಬಹುದು, ಅರ್ಥವಿರುವುದು ಒಂದೇ.

ಅಂತದೃಷ್ಟಿಯಿಂದ ದೈವೀಜ್ಞಾನದ ರೂಪವನು ವೀಕ್ಷಿಸು,
ದೈವೀಮಾರ್ಗದದ ಹೆಜ್ಜೆಗುರುತನು ಸಾಧಕರಿಂದ ಕೇಳಿ ಅರಿ.

ಆಭರಣ–೫೨

ಜ್ಞಾನಪ್ರಾಪ್ತಿಯ ತಲ್ಲೀನತೆ

ಮ್ವಾರಿಫತ್‌ನ ಪ್ರಾಪ್ತಿಯ ಆಕಾಂಕ್ಷಿಗೆ ಅವಶ್ಯಕವೇನೆಂದರೆ ಅವನು ಅನೇಕ ದಿನಗಳವರೆಗೆ ಸತತವಾಗಿ ಅದರ ಅಭ್ಯಾಸದಲ್ಲಿ ತಲ್ಲೀನನಾಗಿರಬೇಕು. ಇಲ್ಲವಾದರೆ ಅವನ ಕಾರ್ಯಯೋಜನೆಯು ಸತ್ಯದ ಗುರಿಯನ್ನು ತಲುಪುದಿಲ್ಲ. ಪ್ರಥಮವಾಗಿ ಅವನು ತನ್ನ ಸಪ್ತ ಅರ್ಹತೆಗಳನ್ನು, ಯಾವುದು ಅಸ್ತಿತ್ವದ ಸಪ್ತ ಅರ್ಹತೆಗಳ ಪದರಾಗಿದೆಯೋ ಅದನ್ನು ಕೇವಲ 'ಏಕ'ಜ್ಞಾನದಿಂದ ವೀಕ್ಷಿಸಬೇಕು. ಅದು ಹೇಗೆಂದರೆ, ನೋಡುವುದು ಕಣ್ಣಿನ ಅರ್ಹತೆಯಾಗಿದೆ. ಆದರೆ ಅದು 'ಸುಂದರವಾಗಿದೆ' ಅಥವಾ 'ಕುರೂಪವಾಗಿದೆ' ಎಂಬ ಭಿನ್ನತೆಯ ಅರಿವು ಜ್ಞಾನದ ಕಾರಣವಾಗಿದೆ. ಕೇಳುವುದು ಕಿವಿಯ ಅರ್ಹತೆಯಾಗಿದೆ. ಆದರೆ ಇದು ಇಂಥ 'ರಾಗ ಅಥವಾ ರಾಗಿಣಿ' ಎಂಬುದು ಹಾಗೂ ಸಂಗೀತ ಶಾಸ್ತ್ರದ ಪ್ರಕಾರ ಇದು 'ಲಯಬದ್ಧ' ಅಥವಾ 'ಲಯರಹಿತ'ವಾಗಿದೆ ಎನ್ನುವಂತಹ ಈ ವ್ಯತ್ಯಾಸ ಹಾಗೂ ಯುಕ್ತಾಯುಕ್ತತೆಯು ಜ್ಞಾನದ ಕೊಡುಗೆಯಾಗಿದೆ. 'ಅಘ್ರಾಣಿಸುವುದು ಮೂಗಿನ ಅರ್ಹತೆಯಾಗಿದೆ. ಆದರೆ ಇದು ಸೇವಂತಿಗೆಯ ಸುವಾಸನೆ ಅಥವಾ ಮಲ್ಲಿಗೆಯ ಕಂಪು ಎಂಬ ಸೂಕ್ಷ್ಮ ವ್ಯತ್ಯಾಸವನ್ನು ಜ್ಞಾನದಿಂದಲೇ ಪರಿಚಿತವಾಗುತ್ತದೆ. ನುಡಿಯುವುದು ನಾಲಿಗೆಯ ಅರ್ಹತೆಯಾಗಿದೆ. ಆದರೆ ಆ ನುಡಿಯನ್ನು ಸಾಹಿತ್ಯಮಯಗೊಳಿಸುವುದು ಅಥವಾ ಸರಳವಾಗಿ ಹೇಳುವುದು ಅಥವಾ ಅತ್ಯಂತ ಮನೋರಮೆ ಹಾಗೂ ಶೃಂಗಾರಮಯವಾಗಿ ಪ್ರಕಟಗೊಳಿಸುವುದು ಹಾಗೂ ಯಾವುದೇ ಆಭರಣವನ್ನು ಮತ್ತು ರತ್ನಗಳಿಂದ ಒಂದು ಸುವ್ಯವಸ್ಥಿತ ಅನುಕ್ರಮಗೊಳಿಸಿ, ಅದರ ಸೌಂದರ್ಯಕ್ಕೆ ಗಮನ ನೀಡಲಾಗುತ್ತವೆಯೋ. ಇದೇ ರೀತಿ ಶಬ್ದಾನುಶಬ್ದವಾಗಿ ಸುಂದರವಾಗಿ ಜೋಡಿಸಿ, ಕಾವ್ಯಮಯ ಪ್ರಕಟಿಸುವುದು ಜ್ಞಾನದ ಕೃಪೆಯಾಗಿದೆ.

ನಡಿಗೆಯು ಪಾದದ ಅರ್ಹತೆಯಾಗಿದೆ, ಆದರೆ ದುಷ್ಕರ್ಮದ ಕಡೆ ನಡೆಯುವುದು ಅಥವಾ ಸತ್ಕರ್ಮಗಳ ಕಡೆ ಹೆಜ್ಜೆ ಹಾಕುವುದೂ ಸಹ ಜ್ಞಾನದ ಔದಾರ್ಯವಾಗಿದೆ. ಇದೇ ರೀತಿಯಾಗಿ ನಮ್ಮ ಸಮಸ್ತ ಅಂಗಾಂಗಗಳ ಅರ್ಹತೆಯ ಬಗ್ಗೆ ಚಿಂತನೆ ಮಾಡಿ. ನೀವು ಮಣ್ಣಿನ ಮೇಲೆ ಬಂಡೆಗಲ್ಲಿನ ಮೇಲೆ ಅಥವಾ ಹಚ್ಚುಹಸಿರಾದ ವೃಕ್ಷಗಳ ಮೇಲೆ ಕುಳಿತುಕೊಂಡರೆ ಅಥವಾ ಏರಿದರೆ, ಅವೂ ಅದೇ ರೀತಿಯಲ್ಲಿ ಅರಿಯುತ್ತವೆ. ಯಾವ ರೀತಿಯಲ್ಲಿ ನಾವು ಅರಿಯುತ್ತೇವೆ. ಯಾಕೆಂದರೆ ಅವು ಸಹ ಜೀವವನ್ನು ಹೊಂದಿವೆ ಹಾಗೂ ಜ್ಞಾನವು ಜೀವದ ಮೂಲ ಅರ್ಹತೆಯಾಗಿದೆ. ವಾದಕನು ಅತ್ಯಂತ ಮೋಹಕವಾಗಿ ಹಾಗೂ ಸುಶ್ರಾವ್ಯವಾಗಿ ಸುಮಧುರ ಸಂಗೀತವನ್ನು ನುಡಿಸುತ್ತಿದ್ದರೆ, ಇದು ಸಹ ಒಂದು ಜ್ಞಾನವೆಂದು ನೀವು ಭಾವಿಸಿ, ಹಾಗೂ ಶ್ರೋತೃವು ಆ ಗಾಯನವನ್ನು ಅರಿಯುತ್ತಿದ್ದರೆ, ಅದು ಸಹ ಜ್ಞಾನದಿಂದಲೇ ಆಗಿದೆ. ಹೀಗಾಗಿ ಜ್ಞಾನವು 'ಏಕ'ವಾಗಿದೆ. ಅದು ತನ್ನದಾಲಿ ಅಥವಾ ಅನ್ಯರದಾಗಲಿ. ಚೌಪಾಯಿಗಳಾಗಲಿ, ಪಕ್ಷಿಗಳಾಗಲಿ ಹಸಿವಾದಾಗ ತಮ್ಮ ತಾಣದಿಂದ ಕಾಡು ಅಥವಾ ಹೊಲಗಳ ಕಡೆ ಹಾರುತ್ತವೆ. ತಮ್ಮ ಆಹಾರ ಪಡೆದು ಸಂತೋಷಪಡುತ್ತವೆ ಹಾಗೂ ತಮಗಾದ ನಷ್ಟದ ಬಗ್ಗೆ ಅಸಂತುಷ್ಟಗೊಳ್ಳುತ್ತವೆ. ಅವು ತಮಗೆ ಅನಾನುಕೂಲಕರ ಸ್ಥಳವಾದ ಮುಳ್ಳಿನ ಗುಂಪಿನಲ್ಲಿ ತಮ್ಮ ಆಹಾರವನ್ನು ಹುಡುಕುವುದಿಲ್ಲ. ಬದಲಾಗಿ ಆಹಾರವಿರುವ ಬಯಲು ಪ್ರದೇಶವನ್ನೇ ಆಯ್ಕೆ ಮಾಡಿಕೊಳ್ಳುತ್ತವೆ. ಕೆರೆಯಿಂದ ನೀರು ಕುಡಿಯುತ್ತವೆ, ಬಾವಿಯಿಂದಲ್ಲ. ತಮ್ಮ ಮರಿಗಳನ್ನು ಅತ್ಯಂತ ಜಾಗೂರಕತೆಯಿಂದ ಸಂರಕ್ಷಿಸಿ, ಅವುಗಳ ಪಾಲನೆ ಪೋಷಣೆ ಮಾಡಲು ಹಾಲು ಕುಡಿಸಿ ಅಥವಾ ಆಹಾರವನ್ನು ನೀಡುತ್ತವೆ. ಇದೆಲ್ಲವೂ ಜ್ಞಾನದಿಂದಾಗಿದೆ.

ಸೂರ್ಯ–ಚಂದ್ರರು ಹಾಗೂ ಆಕಾಶ–ತಾರೆಗಳು
ಈ ಸ್ವರ್ಗವು, ಬೆಂಕಿಯೋ ಅಥವಾ ನರಕವೋ.

ಈ ಸದ್ರಹ[೧], ಜಿಬ್ರಾಯಿಲ್[೨] ಹಾಗೂ ತೂಬಾ[೩] ವೃಕ್ಷವು
ಈ ಅಸೀಮ, ಉನ್ನತ, ಕಲ್ಪನಾತೀತವಾಗಿದೆ.

ಇವೆಲ್ಲ ರೂಪಗಳಾಗಿವೆ ಜ್ಞಾನ ವಿವೇಕದ ಮಾತ್ರ
ಫಲಕಗಳು, ಲೇಖನಿಗಳು ಗಗನವು ಹಾಗೂ ದಿವ್ಯಪೀಠವು.

---

೧. ಸದ್ರಹ – ಮುಸ್ಲಿಂರ ನಂಬಿಕೆಯ ಪ್ರಕಾರ ಸ್ವರ್ಗದಲ್ಲಿರುವ ಬೋರೆ ಹಣ್ಣಿನ ಗಿಡ.
೨. ಜಿಬ್ರಾಯಿಲ್ – ಒಬ್ಬ ದೇವದೂತ.
೩. ತೂಬಾ – ಸ್ವರ್ಗದಲ್ಲಿರುವ ಒಂದು ಸುಗಂಧಿತ ಮರ.

ಈ ರೀತಿಯಿಂದ ಸದಾ ನಾವು ಈ ಜ್ಞಾನವನ್ನು ಬ್ರಹ್ಮಾಂಡದಲಿ, ಭೂಮಿಯಿಂದ ಆಕಾಶದೆತ್ತರಕೆ, ಹೃದಯದ ಕಲ್ಪನೆಯೊಂದಿಗೆ ವೀಕ್ಷಿಸಬೇಕಾಗಿದೆ. ಎಲ್ಲಿಯವರೆಗೆಂದರೆ ಅದು 'ದೈವ ಸಹಭಾಗಿ ರಹಿತ' ಲೋಕ ಹಾಗೂ ದೌರ್ಜನ್ಯಗಳಿಂದ ಬೇರ್ಪಟ್ಟು ಪ್ರಕಟವಾಗಿರುವಂತಿರಬೇಕು.

ಕೆಲವು ದಿನಗಳ ಮುಂಚೆ, ಒಂದು ದಿನ ಹಜ್ರತ್ ಪೀರ್-ಮುರ್ಷದರನ್ನು ವಿನಮ್ರನಾಗಿ ಪ್ರಶ್ನಿಸಿದೆ. ಅದೇನೆಂದರೆ ಸಮಸ್ತ ಜ್ಞಾನಗಳು ಒಂದು ಜ್ಞಾನದಲ್ಲಿ ಅದ್ಹೇಗೆ ಸಮಾವೇಶವಾಗುತ್ತವೆ. ಅದಕ್ಕೆ ಅವರು ನುಡಿದರು- ಇಲ್ಲಿ ಕಾಣುತ್ತಿರುವ ನೀರಿನ ಹೂಜಿಯುನ್ನು ಹೂಜಿಯೆಂದು ಗುರುತಿಸುವರು. ಇದರಿಂದ ಸ್ಪಷ್ಟವಾಗುವದೇನೆಂದರೆ ಸಮಸ್ತ ಜ್ಞಾನಗಳು ಸಹ ಒಂದೇ ಜ್ಞಾನವಾಗಿದೆ. ಆದುದರಿಂದ ಎಲ್ಲರು ಇದನ್ನು ಸ್ಪಷ್ಟವಾಗಿ ನೀರಿನಂತೆ ತಿಳಿಯುತ್ತಿದ್ದರೆ, ಇಲ್ಲವಾದರೆ ಒಬ್ಬರು ಇದನ್ನು ನೀರಿನ ಹೂಜಿಯೆಂತಲೂ ಅಥವಾ ಬೆಂಕಿಯ ಅಗ್ನಿಷ್ಟಿಕೆಯೆಂತಲೂ ಭಾವಿಸುತ್ತಿದ್ದರು.

ಎಲ್ಲಾ ಜ್ಞಾನವನು ಒಂದು ಜ್ಞಾನದಲಿ ಸಮಾವೇಶಗೊಳಿಸಿದವನು,
ಕೊರಳ ಆಭರಣದ ಚಿನ್ನವನು ಅಪ್ಪಟಗೊಳಿಸಿದನು.

ಮ್ವಾರಿಫತ್ ಮಾರ್ಗದಿ ಅವನ ಕರ್ಮಗಳೇಕೆ ಸರಿಯಾಗಿಲ್ಲಹುದು?
'ಏಕತ್ವ'ದಿಂದ ಯಾವನು ಅನೇಕತೆಯ ಅಳಿಸಿ ನಡೆದನು.

ಅತ್ಯಂತ ಕೋಮಲವಾಗಿಹವು ಅಂತರಂಗದ ಈ ರಹಸ್ಯಗಳು 'ಬಹರಿ'
ದೃಷ್ಟಿದಾತನು ಅದನು ತೋರಿಸಿ, ನಿನಗೆ ಒಳಿತನ್ನೆ ಮಾಡಿರುವನು.

ಹೇ ಆತ್ಮೀಯನೇ, ಜ್ಞಾನವು ವಾಸ್ತವದಲಿ ಒಂದೇ ಆಗಿತ್ತು. ಆದರೆ ಆ ಪರಮ ಜ್ಞಾನಿಯು, ಅದರ ಚಿಕ್ಕ ಚಿಕ್ಕ ತುಣುಕುಗಳನ್ನಾಗಿ ಮಾಡಿ, ಪ್ರತಿಯೊಂದು ಬಗೆಯ ಅಭಿರುಚಿಯನ್ನು ಆಸ್ವಾದಿಸಲು ಪ್ರತಿ ತುಣುಕನ್ನು ಅವಶ್ಯಕವೆನಿಸಿದಂತೆ ಅದಕ್ಕೆ ಅಸ್ತಿತ್ವವನ್ನು ದಯಪಾಲಿಸಿ, ಲೌಕಿಕ ಪ್ರಪಂಚದಲ್ಲಿ ವ್ಯಕ್ತಗೊಳಿಸಿದನು. ಪ್ರತಿಯೊಂದು ಶರೀರವನ್ನು ಸಹ ವಿಭಿನ್ನವಾಗಿಯೂ, ಒಂದು ಇನ್ನೊಂದರಿಂದ ಬೇರೆಯಾಗಿರುವಂತೆ ಸೃಷ್ಟಿಸಿದನು. ಸೂಜಿಯಿಂದ ಖಡ್ಗದ ಕೆಲಸವನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಖಡ್ಗದಿಂದ ಸೂಜಿಯ ಕೆಲಸವಾಗದು, ಸೊಳ್ಳೆಯಿಂದ ಆನೆಯ ಬಲಪ್ರದರ್ಶನವಾಗದು, ಆನೆಯಿಂದ ಸೊಳ್ಳೆಯ ಹಾರಾಟ ಸಾಧ್ಯವಾಗದು. ಇದು ತನ್ನ ಅಂತಃಸತ್ವ ವಿಶೇಷವಾಗಿದೆ, ಅದು ತನ್ನ ಸ್ಥಿತಿಯಿಂದ ಅನಿವಾರ್ಯವಾಗಿದೆ.

ಸತ್ಯತೆಯ ಜ್ಞಾನದ ಸೂರ್ಯನು, ದೈವೀಜ್ಞಾನಿಯ ಎದೆಯೊಳಗೆ ಉದಯವಾದಾಗ, ಬ್ರಹ್ಮಾಂಡದ ಸಮಸ್ತ ಸೃಷ್ಟಿಗಳು, ಅಸ್ತಿತ್ವ ಹೊಂದಿಯೂ ನಾಸ್ತಿಯಾಗಿರುತ್ತದೆ ಹಾಗೂ

ಜ್ಞಾನದ ಹೊರತು ಅವನಿಗೆ ಮತ್ತೇನೂ ಕಂಡು ಬರುವುದಿಲ್ಲ. ಹೀಗಾಗಿ ಆದಿಯೂ ಜ್ಞಾನ ಹಾಗೂ ಅಂತ್ಯವೂ ಜ್ಞಾನವೇ ಆಗಿರುವುದು.

ಕೆಲವು ಸ್ನೇಹಿತರು ನುಡಿದರು, ಜ್ಞಾನದ ಮನೋಗತವೇ ಅನೇಕತೆಯಾಗಿದೆ. ನಾನೂ ಸಹ ಇದನ್ನು ಒಪ್ಪುತ್ತೇನೆ. ಆದರೆ ಇದರ ಶೋಧದಿಂದ ಅರಿವಾದ ವಿಷಯವೇನೆಂದರೆ ಜ್ಞಾನದ ಹೊರತು ಎಲ್ಲವೂ ಅಂಧಕಾರವಾಗಿದೆ. ಇನ್ನು ವಿಶೇಷವಾಗಿ ಹೇಳಬೇಕಾದರೆ ಅಂಧಕಾರದ ಅರಿವೂ ಜ್ಞಾನದಿಂದಾಗಿದೆ. ಆದರೆ ಹಿರಿಯರ ಅನುಸರಣೆಯನ್ನು ಕಡ್ಡಾಯವೆಂದು ಭಾವಿಸುತ್ತೇನೆ. ಸತ್ಯಾನ್ವೇಷಿಗಳ ವಿಧೇಯತೆಯ ಅನಿವಾರ್ಯತೆಯಿಂದಾಗಿ ನಾನು ಅವರ ಅಲ್ಪ ಅನುಯಾಯಿಯಾಗಿದ್ದೇನೆ. ಈಗ ಮಾಡಬೇಕಾಗಿರುವದೇನೆಂದರೆ, ತನ್ನ ಜ್ಞಾನವನ್ನು ಬಾಹ್ಯದಿಂದ ನೇತಾಡುವುದನ್ನು ಸಾವಧಾನವಾಗಿ ಹೊರತೆಗೆಯಬೇಕಾಗುತ್ತದೆ. (ಪ್ರತಿ ಪರಿಪೂರ್ಣ ಜ್ಞಾನಿಗೂ ಈ ಕಾರ್ಯದಲ್ಲಿ ಪರಿಪೂರ್ಣತೆ ಅಸಾಧ್ಯವಾಗಿರುತ್ತದೆ) ನೋಟದಿಂದ ಜ್ಞಾನವು ಪ್ರತ್ಯೇಕವಾಗಿದೆಯೆಂದು ಸ್ಪಷ್ಟವಾದಾಗ, ವಿಶ್ವಾಸ ಹೊಂದಿ ಆ ಬೆಳಕು ಪವಿತ್ರವಾಯಿತು. ಇಲ್ಲಿ–ವಿವಾದವೂ ಇಲ್ಲ? ಎಂತು–ಎಷ್ಟುಗಳು ಇಲ್ಲ? ಯಾವ ಕ್ಷಣದಲ್ಲಿ ಜ್ಞಾನ ಹೋಯಿತು, ಅದರ ಜತೆ ಎಲ್ಲವೂ ಹೋಯಿತು. ಮತ್ತೆ ಮೊದಲಿನ ಸ್ಥಿತಿಯೇ ಸ್ಥಿರವಾಯಿತು.

ಎಲ್ಲಿಯವರೆಗೆ ಈ ಕೋಲಾಹಲರಹಿತ ವಾದವಿವಾದವು 'ಬಹರಿ'
ನೀನು ವ್ಯರ್ಥವಾಗಿ ಜ್ಞಾನವನು ಅಪಖ್ಯಾತಿಗೊಳಿಸುವೆ ನೀನು.

ನಿನಗೆ ಸುಖ–ನೆಮ್ಮದಿಗಳೇ ಸ್ವೀಕಾರ್ಹವಾಗಿದ್ದರೆ 'ಬಹರಿ'
ತಿಳಿಗೇಡಿಯಾಗಿ ನೀನಾಗು, ಜ್ಞಾನದಿಂದ ದೂರ ಹೇ 'ಬಹರಿ'

ಆಭರಣ–೫೩

'ದೈವೀಜ್ಞಾನ'ದ ಎರಡು ಪ್ರಕಾರಗಳು

ಹೇ, 'ದೈವೀಜ್ಞಾನಿ'ಯೇ ದೈವೀಜ್ಞಾನ ಎರಡು ವಿಧಗಳಿವೆ. ಒಂದು 'ದೈವೀಜ್ಞಾನ' ಉಪಜೀವನ ಅದೇನೆಂದರೆ ಮನುಷ್ಯ ಹಾಗೂ ಬ್ರಹ್ಮಾಂಡದ ತನ್ನ ಪ್ರತಿ ಕ್ರಿಯೆಗಾಗಿ ಹಾಗೂ ವ್ಯವಹಾರಕ್ಕಾಗಿ ಇದಕ್ಕೆ ಅವಲಂಬಿತವಾಗಿದೆ. ಇದರ ಹೊರತು ಯಾವ ಕಾರ್ಯವು ಪರಿಪೂರ್ಣವಾಗುವುದಿಲ್ಲ. ಎರಡನೆಯದು ಪರಲೋಕ ಗಮನದ ದೈವೀಜ್ಞಾನ. ಅದು ದೈವೀಜ್ಞಾನದ ಸಾಕ್ಷಾತ್ಕಾರವಾಗಿದೆ. ಯಾವಾಗ ದೈವೀಜ್ಞಾನಿಯು, ದೈವೀಜ್ಞಾನದ ಸತ್ಯತೆಯನ್ನು, ಅದನ್ನು ಪ್ರಾಪ್ತಿಸಿಕೊಳ್ಳುವ ನಿಬಂಧನೆಗನುಗುಣವಾಗಿ

ಪಾಲಿಸಿ, ಅದನ್ನು ಪ್ರಾಪ್ತಿಸಿಕೊಳ್ಳುತ್ತಾನೋ, ಆಗ ಅವರ ಮುಖಚರ್ಯೆಯೇ ಸ್ವಯಂ ದಿವ್ಯಜ್ಞಾನವಾಗುತ್ತದೆ.

ದಿವ್ಯಜ್ಞಾನಿಯ ಮೂರುತಿಯನು ನೋಡುವುದಾದರೆ,
ನೋಡು ನೀ ಮಹಾ ಪರಿಣತ ದಿವ್ಯಜ್ಞಾನಿಯ ಚಹರೆಯನು.

ದಿವ್ಯಜ್ಞಾನವೇ ಇಹುದು ಅಂತಿಮವು, ನಿರ್ಣಾಯಕವೂ,
ಇದು ಮೂರುತಿಯಲ್ಲ ದಿವ್ಯಜ್ಞಾನಿ, ಅಸಲಿ ಇದು ದಿವ್ಯಜ್ಞಾನವು.

ಆಭರಣ–೫೪

ಅಸ್ತಿತ್ವ, ಅಸ್ತಿತ್ವದ ಅರ್ಹತೆ ಹಾಗೂ ಅರ್ಹತೆಯ ಅರ್ಹತೆ

ಅರ್ಹತೆಯ ಅಸ್ತಿತ್ವ, ಅಸ್ತಿತ್ವದ ಅರ್ಹತೆ ಹಾಗೂ ಅಸ್ತಿತ್ವವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದರೆ, ಒಬ್ಬ ವ್ಯಕ್ತಿಯು ತನ್ನ ಕಲಾಜ್ಞಾನದಿಂದ ಕೆತ್ತನೆ ಹಾಗೂ ಲೇಪನಗಳಿಂದ ಒಂದು ಪಲ್ಲಕ್ಕಿಯನ್ನು ಶೃಂಗರಿಸಿದಾಗ, ಯಾವನು ಆ ಪಲ್ಲಕ್ಕಿಯನ್ನು ಆಕರ್ಷಕ ಶೃಂಗಾರಮಯಗೊಳಿಸಿದವನು ಅಸ್ತಿತ್ವವಾಗಿದ್ದಾನೆ. ಅಸ್ತಿತ್ವದ ಅರ್ಹತೆಯು ಅವನ ಕಲಾಜ್ಞಾನವಾಗಿದೆ ಹಾಗೂ ಪಲ್ಲಕ್ಕಿಯ ಅರ್ಹತೆಯ ಅರ್ಹತೆಯಾಗಿದೆ. ವಾಸ್ತವದಲ್ಲಿ ಇವು ಮೂರು ಒಂದೇ ಆಗಿದೆ.

ದೇವನು ಅಸ್ತಿತ್ವವಾಗಿದ್ದಾನೆ, ಜ್ಞಾನವು ಅಸ್ತಿತ್ವದ ಅರ್ಹತೆಯಾಗಿದೆ.
ಎರಡೂ ಲೋಕಗಳು ಅವನ ಅರ್ಹತೆಯ ಅರ್ಹತೆಯಾಗಿದೆ ಗೆಳೆಯ.

ಸಾಮಾನ್ಯ ನೋಟದಲ್ಲಿ ಈ ಮೂರು ಬೇರೆ ಬೇರೆಯಾಗಿಹವು
ಸಾಧಕನ ದೃಷ್ಟಿಯಿಂದ ಗಮನವಿಟ್ಟು ನೋಡು, ಇವು ಒಂದೇ ಆಗಿದೆ.

ಆಭರಣ–೫೫

ಜ್ಞಾನದ ಸ್ಥಾನವಿಶೇಷಗಳು

ಬ್ರಹ್ಮಾಂಡ, ಜ್ಞಾನ, ಪರಂಜ್ಞಾನಿ ಈ ಮೂರನ್ನು ಫಕೀರನು (ಬಹರಿ) ತನ್ನ ರಹಸ್ಯೋದ್ಘಾಟನೆಯಿಂದ ಹಾಗೂ ಶೋಧದಿಂದ ತಿಳಿದಿರುವುದೇನೆಂದರೆ, ಈ ಮೂರರ ಸ್ಥಾನಗಳು, ಮದಿರೆಯ ಪಾತ್ರೆ (ಜಾಮ್), ಮದಿರೆ (ಶರಾಬ್) ಹಾಗೂ ಮದಿರೆ ಕುಡಿಸುವವನ (ಸಾಕಿ) ಸಾದೃಶ್ಯವಾಗಿದೆ. ಅರಿಯುವ ಹಾಗೂ ಗುರುತಿಸುವ ಸ್ವಾಮ್ಯಕ್ಕೆ

ಪ್ರತಿಬದ್ಧನಾಗುವ ಅವಕಾಶಗಳನ್ನು ಅಲ್ಲಾಹನು ನೀಡಲು ಬಯಸಿದರೆ, ಯಾವ ದೈವೀ ರಹಸ್ಯಗಳು ಹಾಗೂ ಮ್ವಾರಿಫತ (ದೈವಿಜ್ಞಾನಿ) ತಿಲಮಾತ್ರ ಅಂಶವೂ ಗೂಢವಾಗಿ ಉಳಿಯುವುದಿಲ್ಲ. ಹೇ ಆತ್ಮೀಯನೇ, ಬ್ರಹಾಂಡವು ಜ್ಞಾನದಿಂದ ತುಂಬಿದೆ ಹಾಗೂ ಜ್ಞಾನವು ಪರಂಜ್ಞಾನದಿಂದ ಮದೋನ್ಮತ್ತವಾಗಿದೆ. ಈ ಮೂರು ಒಂದು ಇನ್ನೊಂದರಿಂದ ಹೊರಹೊಮ್ಮಿದೆ. ಅರ್ಥಾತ್ ಜ್ಞಾನವು ಪರಂಜ್ಞಾನದಿಂದ ಹಾಗೂ ಬ್ರಹ್ಮಾಂಡವು ಜ್ಞಾನದಿಂದ ಸತ್ಯಾನ್ವೇಷಿಯೂ ಏಕತ್ವವನ್ನು ಪಡೆಯಲು ಹಾಗೂ ಬಹುತ್ವವನ್ನು ನಾಶಗೊಳಿಸುವುದಾದರೆ, ಬ್ರಹ್ಮಾಂಡವನ್ನು ಜ್ಞಾನದಲ್ಲಿ ವಿಲೀನಗೊಳಿಸಬೇಕಾಗುತ್ತದೆ (ಫನಾ), ಹಾಗೂ ಜ್ಞಾನವನ್ನು ಪರಂಜ್ಞಾನದಲ್ಲಿ ಸಮ್ಮಿಳಿತಗೊಳಿಸಬೇಕಾಗುತ್ತದೆ. ಇದು ಸಾಕಷ್ಟು ಅವಶ್ಯಕತೆಯಾಗಿದ್ದೂ, ಅವಶ್ಯಕತೆಗಿಂತಲೂ ಅಧಿಕವಾಗಿದೆ.

ಆಭರಣ–೫೬

ದೇವರ ಬಗ್ಗೆ ಜನಸಾಮಾನ್ಯರ ಹಾಗೂ ವಿಶೇಷರ ನಂಬಿಕೆ

ನಾನು ಮಹ್ಮದ್‌ರ ಜ್ಯೋತಿಯ ಪದರಾಗಿರುವ ನನ್ನ ದೇವರನ್ನು ದೈವೀಜ್ಞಾನದ ಮೂಲಕ ಕಾಣುತ್ತೇನೆ. ಆದರೆ ಅವನು ಹೇಗಿರುವನೋ ಹಾಗೆ ಅವನನ್ನು ಗುರುತಿಸುವುದಿಲ್ಲ. ಆದರೆ ದೇವರ ಸಂಬಂಧವಾಗಿ ಜನರು ಯಾವ ರೀತಿ ಕಲ್ಪಿಸಿಕೊಳ್ಳುತ್ತಾರೆ ಹಾಗೂ ನಂಬುತ್ತಾರೋ ಅದು ಯಾವ ರೀತಿಯಿಂದಲೂ ತನ್ನ ತಿಳಿವಿಗೆ ಬರುವುದಿಲ್ಲ, ಯಾವ ಚಿಕಿತ್ಸೆ ಮಾಡಲಿ? ಯಾವ ತಂತ್ರವನ್ನು ಬಳಸಲಿ? ಹೇ, ದೇವರೇ, ನೀನು ನನಗೆ ಜನಸಾಮಾನ್ಯರಂಥ ಹೃದಯವನ್ನು ದಯಪಾಲಿಸು, ಯಾಕೆಂದರೆ ನಾನು ನಿನ್ನ ಬಗ್ಗೆ ಭಯಪಡುವಂತಾಗಲಿ ಹಾಗೂ ನಿನ್ನ ಉಪಾಸನೆ ಮಾಡುವಂತಾಗಲಿ.

ಹೇ ಆತ್ಮೀಯನೇ, ಸಾರ್ವಜನಿಕ ಕೃಪೆಯನ್ನು ಧಾರಳವಾಗಿ ನೀ ದಯಪಾಲಿಸು,
ಪ್ರೌಢತೆಯಿಂದ ಹೊರತೆಗೆದು ಅಪಕ್ವಗೊಳಿಸು ನಮ್ಮನ್ನು.

ನಿನ್ನ ಶಿಕ್ಷೆಯಿಂದ ಭಯಭೀತರಾಗಿ ನಾವು, ನಿನ್ನ ಆರಾಧನೆ ಮಾಡುವಂತಾಗಲಿ,
ಸರದಾರನ ಬದಲಾಗಿ ನಿಮ್ಮ ಗುಲಾಮನನ್ನಾಗಿ ಮಾಡು ನಮ್ಮನ್ನು.

ಆಭರಣ–೫೭

ಎರಡೂ ಲೋಕದಲಿ ಜ್ಞಾನದ ಸಾಮ್ರಾಜ್ಯ

ದೇವರು ಏನು? ಹಾಗೂ ದೇವರ ಜ್ಞಾನ ಏನಾಗಿದೆ? ಅದು ಪರಿಪೂರ್ಣ ಮನುಷ್ಯ ಜ್ಞಾನದ ಪ್ರತಿಬಿಂಬವಾಗಿದೆ. ಪರಿಪೂರ್ಣ ಮನುಷ್ಯನ ಜ್ಞಾನವೇಂದರೇನು? ಅದೇನೆಂದರೆ ಯಾವುದರ ಕೃಪೆಯಿಂದ ಸೃಷ್ಟಿಯ ಜ್ಞಾನವಿದೆ. ಹಾಗಾದರೆ ಸೃಷ್ಟಿಯ ಜ್ಞಾನವೆಂದರೇನು? ಅದು ಅದೇ, ಯಾವುದು ಸುಖ–ದುಃಖಗಳನ್ನು ಅರಿಯುವವನು ಹಾಗೂ ಅಂತರಂಗ ಮತ್ತು ಬಹಿರಂಗವನ್ನು ತಿಳಿಯುವವನು. ನಾನು ಜ್ಞಾನದಿಂದಲೇ ನನ್ನ ಲೇಖನಿಯನ್ನು ಮುನ್ನಡೆಸುತ್ತಿದ್ದೇನೆ. ಆದರೆ ಅದು ಬೆಳಕು ಮತ್ತು ಕತ್ತಲಿನ ಬೇಧವನ್ನು ಅರಿವು ನೀಡುವ ಜ್ಞಾನವಲ್ಲ. ಬದಲಾಗಿ ಜ್ಞಾನದ ಜ್ಞಾನವಾಗಿದೆ.

ಹೇ ಗೆಳೆಯನೇ, ಇದು ಆ ಜ್ಞಾನವೇ ಆಗಿದೆ, ಯಾವುದು ಏಕತೆಯ ವಿವಿಧ ವೇಷಭೂಷಣಗಳಿಂದ ಅಲಂಕೃತವಾಗಿ ವಿಜೃಂಭಿತವಾಯಿತು. ಅದು ಏಕತೆಯಿಂದ ಬಹುತ್ವದಲ್ಲಿ ಅಡಿಯಿಟ್ಟಿತು. ಕುರುಡನ ಮುಂದೆ ಜ್ಞಾನಿಯು ಪ್ರಕಟರೂಪದಲ್ಲಿದ್ದು, ಜ್ಞಾನವು ಸುಪ್ತರೂಪದಲ್ಲಿದೆ ಹಾಗೂ ಕಣ್ಣಿರುವವನ ಮುಂದೆ ಜ್ಞಾನಿಯು ಸುಪ್ತವಾಗಿದ್ದು, ಜ್ಞಾನವು ಪ್ರಕಟರೂಪದಲ್ಲಿದೆ.

ಜ್ಞಾನವು ನಡೆಸುತಿಹುದು ಸಾಮ್ರಾಜ್ಯ ಎರಡೂ ಲೋಕದಲಿ,
ಎರಡು ಲೋಕಗಳು ಏನಿಹವು, ಅದು ಒಂದೇ ದೈವೀಜ್ಞಾನವು.

ಆಭರಣ–೫೮

ದೇವ ಸಹಭಾಗಿತ್ವ ರಹಿತತೆ ಹಾಗೂ ಏಕಮಾತ್ರತ್ವದ ಜ್ಞಾನವು ಎರಡು ವಿಭಿನ್ನ ಅರ್ಹತೆಗಳ ಮಧ್ಯದ ತಡೆಯಾಗಿದೆ

ದೇವ ಸಹಭಾಗಿತ್ವ ರಹಿತತೆಯು ಹಾಗೂ ಏಕಮಾತ್ರತ್ವದ ಮಧ್ಯೆ 'ಏಕತ್ವ'ದ ಸ್ಥಾನವಿದೆ 'ಏಕತ್ವ'ವು ಮಧ್ಯದಿಂದ ಮರೆಯಾದರೆ ದೇವ ಸಹಭಾಗಿತ್ವರಹಿತತೆ ಹಾಗೂ ಏಕಮಾತ್ರತ್ವದ ಸ್ಥಿತಿಗಳು ಪರಸ್ಪರ ಮಿಲನವಾಗಬಹುದು ಅರ್ಥಾತ್ ಬಹುತ್ವದ ಹೊಳೆಯು ಏಕಮಾತ್ರತ್ವದ ಸಾಗರದಲ್ಲಿ ಸಮಾವೇಶಗೊಂಡು ನಾಸ್ತಿಯಾಗಲಿ ವ್ಯಕ್ತವು ಅವ್ಯಕ್ತದಲ್ಲಿ ವಿಲೀನವಾಗಲಿ ಹಾಗೂ ಪ್ರಳಯವು ಉಂಟಾಗಲಿ ತಾತ್ಪರ್ಯವೆಂದರೆ ಜ್ಞಾನವು ಮಧ್ಯದಲಿ ಇರದಿದ್ದರೆ ಸೃಷ್ಟಿಕರ್ತನೂ ಇರುವುದಿಲ್ಲ, ಸೃಷ್ಟಿಯೂ ಇರುವುದಿಲ್ಲ.

ಹೇ ಆತ್ಮೀಯನೇ ಏಕಮಾತ್ರದಲ್ಲಿ ಅನೇಕತೆ ಹಾಗೂ ಅನೇಕತೆಯಲ್ಲಿ ಏಕಮಾತ್ರತ್ವ ಏನಿದು? ಅದು ಬೀಜದಲ್ಲಿ ವೃಕ್ಷದಂತೆ ಹಾಗೂ ವೃಕ್ಷದಲ್ಲಿ ಬೀಜವಿದ್ದಂತೆ, ಅನೇಕತೆಯ ಬೀಜವು ಏಕಮಾತ್ರತ್ವದಲ್ಲಿ ಹಾಗೂ ಏಕಮಾತ್ರತ್ವದ ವೃಕ್ಷವು ಅನೇಕತ್ವದಲ್ಲಿವೆ. ಏಕಮಾತ್ರದಲ್ಲಿ ಅನೇಕತ್ವವಿತ್ತು ಅರ್ಥಾತ್ ಬ್ರಹ್ಮಾಂಡವು ಜ್ಞಾನದಲ್ಲಿತ್ತು. ಆದರೆ ಇಂದು ಅನೇಕತ್ವದಲ್ಲಿ ಏಕಮಾತ್ರತ್ವವಿದೆ. ಅರ್ಥಾತ್ ಬ್ರಹ್ಮಾಂಡದಲ್ಲಿ ಜ್ಞಾನವಿದೆ ನಿಗದಿಪಡಿಸಲಾಗದ ಅರ್ಹತೆಯಿಂದ ಪ್ರಥಮವಾಗಿ ನಿಗದಿಗೊಳಿಸಲ್ಪಟ್ಟ ಸ್ಥಿತಿಯಲ್ಲಿ ಹೊರಹೊಮ್ಮಿದ್ದು, ಇದೇ ಜ್ಞಾನವಾಗಿದೆ.

ಹೃದಯ ಸ್ನೇಹಿಯೇ, ಪ್ರಥಮವಾದ ಆ ರತ್ನ ಯಾವುದಿದೆ,
ಪರಂಜ್ಞಾನದ ಕೋಶದಿಂದ ಹೊರಹೊಮ್ಮಿತು ಯಾರ ಶಿರವು.

ಜ್ಞಾನವೇ ಆಗಿದೇ ಅದು– ಜ್ಞಾನದ ಹೊರತು ಮತ್ಯಾವುದು ಇಹುದು,
ಇದರಿಂದಲೇ ಎರಡೂ ಲೋಕಗಳು ಆದವು ಬಹಿರಂಗ

ಜ್ಞಾನದಿಂದಲೇ ತುಂಬಿಹುದು ಸಮಸ್ತ ಬ್ರಹ್ಮಾಂಡವು,
ಜ್ಞಾನದಿಂದಲೇ ಸ್ಥಾಪಿತವು ಈ ಸಮಸ್ತ ಲೋಕ ವ್ಯವಸ್ಥೆಯು

ಜ್ಞಾನವೊಂದು ನದಿಯು ಆದರೆ ಬ್ರಹ್ಮಾಂಡ ಬರೀ ನೀರ್ಗುಳ್ಳೆ,
ಅರ್ಥಾತ್ ಎಲ್ಲವೂ ಹುಲುಕಣಗಳು, ಇದು ಮಾತ್ರ ಸೂರ್ಯವು.

ದಿವ್ಯಜ್ಞಾನಿಯು ನೋಟ ಬೀರುವುದಿಲ್ಲ ಬ್ರಹ್ಮಾಂಡದ ಕಡೆ,
ಜ್ಞಾನವು, ಜ್ಞಾನವನ್ನು ನೋಡುತ್ತದೆ ಹಗಲಿರುಳು ಮಿತ್ರ.

ಇಲ್ಮ್[೧]ನಲ್ಲಿ ಯಾವ ಸ್ಥಾನದಲ್ಲಿ ಇಹುದು 'ಲಾಮ್'[೨]ನ ಪ್ರಸ್ತಾಪವು,
ಇಲ್ಮ್ ಮಾತ್ರ ಅದನು ಅರಿವುದು, ಅದನು ಹೊರೆವುದು ಗೆಳೆಯನೆ.

'ಆದಂ'ನ ಮುಖ ಚಹರೆಯು, ಜ್ಞಾನದ ಮುಖಚಹರೆಯಾಗಿತ್ತು,
ಅಲ್ಲಿಯವರೆಗೆ ಹೇಗೆ ತಲುಪಬಹುದು ಕಿನ್ನರರು, ಅಪ್ಸರೆಯರು.

'ಆದಮ್'ರು ಮೂಲತಃ ಉತ್ತಮರು, ಅವರನ್ನು ಉತ್ತಮರೆಂದು ತಿಳಿ,
ಅನ್ಯರನು ನೀನು ಸದಾ ಸಾಮಾನ್ಯರೆಂದು ಅರಿ.

ಕೇವಲ 'ಆದಂ'ರಿಗೆ ಲಭಿಸಿತ್ತು ಈ ದೈವೀಗೌರವ,
ಅಸ್ತಿತ್ವವು ಅವರ ವಾರೀಸು, ಎಲ್ಲಾ ದಿಶೆಯಿಂದ.

---

೧. ಇಲ್ಮ್ ಎಂದರೆ ಜ್ಞಾನ ಇಲ್ಮ್‌ನಲ್ಲಿ 'ಐನ್', 'ಲಾಮ್' ಮತ್ತು 'ಮೀಮ್' ಎಂಬ ಮೂರು ಅಕ್ಷರಗಳಿವೆ. 'ಲಾಮ್' ಅಕ್ಷರವು ಐನ್ ಮತ್ತು ಮೀಮ್' ನ ಮಧ್ಯದಲ್ಲಿದೆ.

ಏಕ ಪರಂಜ್ಯೋತಿಯ ಕಿರಣವಾಗಿಹನು ಮನುಜನು,
ಪ್ರವಾದಿಯ ದೈವೀರಹಸ್ಯಗಳ ನಿಧಿಯಾಗಿಹನು ಮನುಜನು.

ಪ್ರವಾದಿಯ ಜ್ಯೋತಿ ನಿಸ್ಸಂದೇಹ ಮೂಲವೇ ಮನುಜನು,
'ಆದಂ'ನ ಜ್ಞಾನವೈಶಾಲ್ಯತೆಯ ಮುಂದೆ ಬ್ರಹ್ಮಾಂಡವು ಕಿರಿದಾಯಿತು.

ಸ್ಥಾನದಲಿ ಬ್ರಹ್ಮಾಂಡಗಿಂತಲೂ ಉನ್ನತರು ಆದಮರು,
ಸಮಸ್ತ ಬ್ರಹ್ಮಾಂಡದ ಸೃಷ್ಟಿಯ ಅವರಿಗೆ, ಅಂತ್ಯವು ಅವರಿಗೆ.

ಅವರಾಗಿಹರು ಶುದ್ಧ ಪ್ರಾಮಾಣಿಕತೆಗೆ ಅರ್ಹರು ನಿಸ್ಸಂದೇಹ,
ಅರ್ಥಾತ್ ಎಲ್ಲಾ ರೀತಿಯಿಂದಲೂ ಪರಿಪೂರ್ಣರು ಅವರು.

ಜ್ಞಾನವಾಗಿಹುದು ದೇವರ ಇಡಗಂಟು ಹೇ 'ಬಹರಿ',
ಅರಿತಿರುವುದರಿಂದ ಅರಿತಿರುವೆ ಈ ಮರ್ಮವನು ನಾನು.

ಆಭರಣ-೫೯

ಯಾವ ನಾಮವು ಶ್ರೇಷ್ಠನಾಮವಾಗಿದೆ

ಶ್ರೇಷ್ಠನಾಮದ ಕುರಿತು ಕೇಳುವುದಾದರೆ, ನಿಸ್ಸಂದೇಹವಾಗಿ ಆ ನಾಮವು ಅಲ್ಲಾಹನ ನಾಮವೇ ಆಗಿರಬೇಕು, ಯಾಕೆಂದರೆ ಅದು ಅವಲಂಬಿತವು, ಸಮಸ್ತ ಅರ್ಹತೆಗಳ ನಾಮವಿಶೇಷವಾಗಿದೆ. ಇದಕ್ಕಿಂತಲೂ ಮುಂದುವರಿದು ಕೇಳುವುದಾದರೆ, ನಾನಿಷ್ಟೆ ಹೇಳಬಲ್ಲೆ ಯಾವ ವ್ಯಕ್ತಿಯು ಯಾವ ನಾಮದಿಂದ ಅವನ ಸಂಬಂಧ ಹೊಂದಲು ಆಶಿಸುತ್ತಾನೋ ಅವನಿಗೆ ಅದೇ ಶ್ರೇಷ್ಠನಾಮವಾಗಿದೆ. ಅರ್ಥಾತ್ ಯಾವನೇ ಒಬ್ಬ ವ್ಯಕ್ತಿಯ ಹೃದಯವು ಆ ಮಹಾಮಹಿಮನ ಕಡೆ ಆಕರ್ಷಿತವಾದರೆ, ಅವನಿಗೆ ಅಲ್ಲಾಹನು ಶ್ರೇಷ್ಠನಾಮವಾಗಿರುವುದಿಲ್ಲ. ಅದೇ ರೀತಿ, ಯಾವುದೇ ಒಂದೇ ನಾಮವು ಶ್ರೇಷ್ಠನಾಮವೆಂದು ಪರಿಗಣಿಸಲ್ಪಡುವುದಿಲ್ಲ. 'ಶಬೆ ಖದರ್'[೧] ಶ್ರೇಷ್ಠನಾಮನ ಹಾಗೂ ಸತ್ಯತೆಯ ಮಹಾನ್ ತೇಜಸ್ ಆಗಿದ್ದು, ಜನಸಾಮಾನ್ಯರ ದೃಷ್ಟಿಯಲ್ಲಿ ದೈವಿ ರಹಸ್ಯವಾಗಿದೆ. ಅಸ್ತಿತ್ವವನ್ನು ಹೊಂದಿಯೂ ಅದನ್ನು ಸ್ಪಷ್ಟತೆಯಿಂದ ಗುರುತಿಸಲಾಗುವುದಿಲ್ಲ. ಅಕಸ್ಮಾತ್ ಅದರ ಅಸ್ತಿತ್ವ ಇಲ್ಲದಿದ್ದರೆ, ಅದಕ್ಕೆ ಆ ನಾಮವೇ

೧. ಶಬೇ ಖದರ್- ರಮಜ಼ಾನ್ ತಿಂಗಳ ೨೧, ೨೩, ೨೫, ೨೭, ೨೭, ೨೯ರ ರಾತ್ರಿಗಳಲ್ಲಿ ಪವಿತ್ರವಾಗಿರುವ ಒಂದು ರಾತ್ರಿಯು ಶಬೇ ಖದರ್ ಅನಿಸಿಕೊಳ್ಳುತ್ತದೆ ಬಹುಶಃ ಅದು ೨೭ರ ರಾತ್ರಿಯಾಗಿದ್ದು, ಆ ರಾತ್ರಿಯಲ್ಲಿ ಕುರಾನ್ ಪರಿಪೂರ್ಣವಾಗಿ ಪ್ರಕಟವಾಯಿತು. ಇದನ್ನು ಅತಿ ಪವಿತ್ರ ರಾತ್ರಿಯಂದು ಭಾವಿಸಲಾಗುತ್ತದೆ. ಇದನ್ನು ಪ್ರತಿಷ್ಠಿತ ರಾತ್ರಿ ಎಂದು ಕರೆಯಲಾಗುತ್ತದೆ.

ಬರುತ್ತಿರಲಿಲ್ಲ. ಯಾವುದೋ ಒಂದು ರಾತ್ರಿ ಯಾವನೊಬ್ಬ ಫಕೀರನು, ಶ್ರೇಷ್ಠನಾಮದ ಕೃಪೆಯಿಂದ, ಆ ಪರಮ ಸತ್ಯದ ಅಸ್ತಿತ್ವದ ಮಿಲನ ಸಂಪತ್ತಿನಿಂದ ಸಮೃದ್ಧನಾಗುತ್ತಾನೋ ಆ ರಾತ್ರಿಯು ಶಬೇ ಖದರ್ ಆಗಿದೆ.

ಆದುದರಿಂದ ಈ ಮೂರು ಭಾಗಗಳು (ಶಬೇ ಖದರ್, ಶ್ರೇಷ್ಠನಾಮ, ಹಾಗೂ ದೈವೀ ಮಿಲನ) ಪರಸ್ಪರ ಮಿಲನ ಹೊಂದಿ ಒಂದಾಗಿವೆ. ಒಂದು ಸಲ ನಾನು ಶ್ರೇಷ್ಠ ನಾಮದ ಹುಡುಕಾಟದಲ್ಲಿ ನಿರತನಾಗಿದ್ದೆ, ಧರ್ಮಶಾಸ್ತ್ರದ ನಂಬಿಕೆಯ (ಶರೀಯತ್‌ನ) ಪರಿಜ್ಞಾನ ನನ್ನಿಂದ ಹೋಗಹತ್ತಿತ್ತು. ಆಗ ನನಗೆ ದೈವೀ ಪ್ರೇರಣೆ (ಇಲ್‌ಹಾಮ್) ಆಯಿತು. ಅದೇನೆಂದರೆ ಆ ನಾಮವು ಸರ್ವಜ್ಞ (ಅಲ್-ಅಲೀಮ್) ಆಗಿದೆ. ಆದರೆ ನನಗೆ ಪ್ರಜ್ಞೆಯು ಮರಳಿ ಬಂದಾಗ, ನಾನು ಯೋಚಿಸಿದೆ – ಅದೇನೆಂದರೆ ಒಂದು ಅರ್ಹತೆಯ ನಾಮವು ಶ್ರೇಷ್ಠನಾಮ ಹೇಗಾಗುತ್ತದೆ. ಯಾಕೆಂದರೆ ಜ್ಞಾನ ಅಸ್ತಿತ್ವದ ಏಳು ಅರ್ಹತೆಗಳಲ್ಲಿ ಇದೊಂದು ಅರ್ಹತೆಯಾಗಿದೆ. ಮತ್ತೆ ನನ್ನ ಮನದಲ್ಲಿ ಒಂದು ಆಲೋಚನೆ ಸುಳಿಯಿತು. ಅದೇನೆಂದರೆ ದೈವೀಪ್ರೇರಣೆಯ ಪರೋಕ್ಷ ಜ್ಞಾನವನ್ನು ಗ್ರಂಥಶೈಲಿಯ ರೀತಿಯಿಂದ ಅನುಕ್ರಮಣೀಯವಾಗಿ ವ್ಯವಸ್ಥಿತಗೊಳಿಸುವುದು ಸರಿ ಅಲ್ಲ. ನಾನು ಇದನ್ನು ನನ್ನ ಬೌದ್ಧಿಕ ಪ್ರಯತ್ನದ ಫಲವಾಗಿಯೂ ಪಡೆದಿರುವುದಿಲ್ಲ. ಆದರೆ ಇದಂತೂ ಅದೃಶ್ಯವಾಣಿಯಾಗಿದೆ. ಈ ಆಲೋಚನೆಯ ಬಳಿಕ, ನಾನು ಅನುಭವಿಸಿದ್ದೇನೆಂದರೆ, ದಿನದಿಂದ ದಿನಕ್ಕೆ 'ಸರ್ವಜ್ಞನ ನಾಮ'ದಿಂದ ನನಗೆ ಆಕರ್ಷಣೆ ವೃದ್ಧಿಸತೊಡಗಿತು. ಇದೇ ನಾಮವೇ ನನ್ನ ಅನುಭಾವದ ಪ್ರಕಾರ ಶ್ರೇಷ್ಠನಾಮವೆಂದು ಪರಿಗಣಿತವಾಯಿತು– ಆದರೆ ಅನ್ಯರಿಗಾಗಿ ಸುತಾರಾಂ ಅಲ್ಲ. ಹೀಗಾಗಿ ಇದು ಶ್ರೇಷ್ಠನಾಮವಾಗುವ ಪರ ವಾದವು ಹೇಗಾಯಿತೆಂದರೆ, ಇಂದ್ರಿಯಾನುಭವಕ್ಕೆ ಅರಿವಾಗುವ ಹಾಗೂ ಸ್ಪಷ್ಟರೂಪವಾಗಿ ಗೋಚರಿಸುವ ವಸ್ತುಗಳ ಪರಿಪೂರ್ಣ ಜ್ಞಾನವೇ ದೈವೀಜ್ಞಾನವಾಗಿದೆ. ಈ ಜ್ಞಾನವೇ ಸಾವಿರಾರು ರೂಪ-ವೇಷ-ಲಾವಣ್ಯ ಪಡೆದು ಪರಿಮಾರ್ಜಿತಗೊಂಡಿದೆ. ನನ್ನ ಈ ಮಾತಿನ ವಿಶ್ವಾಸವು ಕೇವಲ ಆ ವ್ಯಕ್ತಿಗೆ ಮಾತ್ರ ಆಗಬಹುದು, ಯಾವನು ತನ್ನ ಪ್ರೇಮ ಹಾಗೂ ದೈವೀಜ್ಞಾನವನ್ನು ಪರಮೋಚ್ಛ ಸ್ಥಾನಕ್ಕೆ ತಲುಪಿಸಿದ್ದಾನೆ.

ಜೀವನು, ಪ್ರಿಯಕರನೂ ಆಗಿಹನು ಅನುರಾಗಿ ಹಾಗೂ ದಿವ್ಯಜ್ಞಾನ,
ಒಬ್ಬನು ವಿದ್ಯೆಯ ಕಣಜವಾಗಿದ್ದರೆ, ಮತ್ತೊಬ್ಬನು ದೈವೀಯಾತನೆ.

'ಬಹರಿ' ನಿನ್ನ ವಿಧವು ಆಗದು ಒಂದು ಅನುರಾಗಿಯಂತೆ,
ನಿನ್ನಂತೆ ದೈವೀಜ್ಞಾನವನು ಪಡೆದವರು ಇರುವರು ಸಾವಿರ.

ಆಭರಣ-೬೦

ಒಂದು ಪವಿತ್ರ ದ್ವಿಪದಿಯ ಚರಣದ ವಿವರಣೆ

ಸ್ನೇಹಿತರೊಬ್ಬರು ನನ್ನನ್ನು ಮೌಲ್ವಿ ಮಾನೂವಿ ಅಲೆ-ಅಲ್ ರಹೀಮಾರವರ ಕೆಳಗಿನ ಚರಣದ ಕುರಿತು ವಿವರಣೆ ಕೇಳಿದರು.

ಇಲ್ ಹಕ್ ದರ್, ಇಲ್ಮ್ ಸೂಫ಼ಿ ಗುಮ್ ಶೂದ್,
ಅಯ್ ಸುಖನ್ ಕೆ ಬಾವರೇ ಮರ್ದುಮ್ ಶೂದ್

ನಾನು ನುಡಿದೆ, 'ಸತ್ಯತೆಯ ಜ್ಞಾನವು ಪರಂಸತ್ಯನ ಸತ್ಯತೆಯಾಗಿದೆ ಹಾಗೂ ಸೂಫಿಯ ಜ್ಞಾನವು ಸೂಫಿಯ ಸತ್ಯತೆಯಾಗಿದೆ.' ಮೂಲದಲಿ ಸೂಫಿಯ ಜ್ಞಾನದ ಕಿಡಿ, ಪರಂಸತ್ಯದ ಜ್ಞಾನದ ಅಗ್ನಿಯಿಂದಾಗಿದೆ. ಸೂಫಿಯು ಎಲ್ಲಿಯವರೆಗೆ ಸಾಧನೆಯ ಮಾರ್ಗದಲ್ಲಿದ್ದಾನೋ ಹಾಗೂ ಅವರಿಗೆ ಏಕತ್ವದ ಸೌಂದರ್ಯದ ಅನುರಾಗಿಯು ಆಗಿರುವುದಿಲ್ಲವೋ, ಆಗ ನಿರಂತರವಾಗಿ ತನ್ನ ಜ್ಞಾನವನ್ನು ಅವನು ಸರ್ವಜ್ಞ ಪರಮನ ಜ್ಞಾನದಲ್ಲಿ ಲೀನಗೊಳಿಸುವ ಸತತ ಪ್ರಯತ್ನದಲ್ಲಿರುತ್ತಾನೆ. ಕಾರ್ಯವು ಪರಿಪೂರ್ಣವಾದಾಗ ಭೂತಕಾಲಕ್ಕೆ ವ್ಯತಿರಿಕ್ತವಾಗಿ ಪರಂಸತ್ಯದ ಜ್ಞಾನವನ್ನು ತನ್ನ ಜ್ಞಾನದಲ್ಲಿ ಸೆಳೆದುಕೊಳ್ಳುತ್ತದೆ. ಅರ್ಥಾತ್ ಎರಡು ಲೋಕಗಳಿಂದ ಸಹಭಾಗಿತ್ವದ ಸಂಶಯ ಜನ್ಮ ಪಡೆಯುತ್ತದೆ. ಆದರೆ ಅದನ್ನು ದಾಟಿ, ಒಂದೇ ಜ್ಞಾನದ ಪರಿಚಿತನಾಗುವನು.

ಹೇ ಆತ್ಮೀಯನೇ, ಸೂಫಿಯು ತನ್ನ ಜ್ಞಾನದಿಂದ ಹೊರತಾಗಿರುವುದಿಲ್ಲ ಬದಲಾಗಿ ಜ್ಞಾನವೇ ಸೂಫಿಯ ನಾಮವನ್ನು ಪಡೆದುಕೊಳ್ಳುತ್ತದೆ. ಯಾವ ಜ್ಞಾನವು ಸೇರ್ಪಡೆಯಿಂದ ಹಾಗೂ ಸಂಬಂಧದಿಂದ ಹೊರತಾಗಿ ಪವಿತ್ರವಾಗಿದೆಯೋ, ಅದೇ 'ಪರಂಸತ್ಯ'ದ ಹೆಸರನ್ನು ಪಡೆದುಕೊಂಡಿತು. ಯಾವ ರೀತಿ ಪರಮಪ್ರೇಮ ಹಾಗೂ ಪರಂಜ್ಞಾನದ ಸನದನ್ನು ಪಡೆದಂತಹ ಹಜ್ರತ್ ಶಾಹ ಬುರಾಹನುದ್ದೀನ್ ಅವರು ದಖ್ಖನಿ ಭಾಷೆಯಲ್ಲಿ ಹೀಗೆ ನುಡಿದಿರುತ್ತಾರೆ.

ಜಾನಮ್ ಫಿದಾ ಹೋ ಇಸ್ ಮೇ
ಯಾ ಇಸ್ 'ಅಪನ್' ಮೇ, ಲೇನಾ.

ಅರ್ಥಾತ್, ಹೇ ಬುರ್‌ಹಾನ್, ನಿನ್ನನ್ನು ನೀನು ನಿನ್ನ ಆ ದೇವನಲ್ಲಿ ನಶ್ವರಗೊಳಿಸು. ಇಲ್ಲವಾದರೆ ದೇವರನ್ನೇ ನಿನ್ನಲ್ಲಿ ಆವರಿಸಿಕೊಳ್ಳು. ಒಬ್ಬ ವ್ಯಕ್ತಿಯು ಒಂದು ಸಲ ಹಜ್ರತ್ ಜಾನಮ್‌ರವರ ಸುಪುತ್ರರಾದ ಹಜ್ರತ್ ಅಮೀನುದ್ದೀನ್ ಅವರನ್ನು

ವಿಚಾರಿಸಿದನು. ಹಜ್ರತರು (ಬುರಾಹನುದ್ದೀನ್ ಜಾನವ್‌ರವರು) ಎರಡು ಮಾರ್ಗಗಳನ್ನು ಸೂಚಿಸಿದ್ದಾರೆ. ಇವೆರೆಡರಲ್ಲಿ ಯಾವ ಮಾರ್ಗವು ಸೂಕ್ತವಾಗಿದೆ. ಆಗ ಅವರು ನುಡಿದರು. ದಾಸನು ದೈವ ಅಸ್ತಿತ್ವದಲ್ಲಿ ಲೀನವಾಗುವುದು ಅವನ ಐಚ್ಛಿಕವಾಗಿದೆ. ಆದರೆ ದೇವರನ್ನು ತನ್ನಲ್ಲಿ ಆವರಿಸಿಕೊಳ್ಳುವುದು, ಅದು ಅವನ ಕೃಪೆಯಾದರೆ ಮಾತ್ರ ಸಾಧ್ಯವಾಗುತ್ತದೆ. ಹೀಗಾಗಿ ಅವರ ಈ ಹೇಳಿಕೆಯಿಂದ ವೇದ್ಯವಾಗುವುದೇನೆಂದರೆ ಸೂಫಿಯೂ ಅಂತಿಮವಾಗಿ 'ಪರಂಸತ್ಯ'ವನ್ನು ತನ್ನಲ್ಲಿ ಆವರಿಸಿಕೊಳ್ಳುತ್ತಾನೆ. ಕೆಲವರು 'ಅನಲ್ ಹಕ್' (ಅಹಂ ಬ್ರಹ್ಮಾಸ್ಮಿ) ಎಂದು ಘೋಷಿಸಿಕೊಂಡಿರುವರೋ ಅದು ಇದೇ ಸ್ಥಾನವೆಂದು ಒಪ್ಪುವುದಿಲ್ಲ. ಅವರು ಒಪ್ಪದೇ ಇರುವುದರಲ್ಲಿ ಸತ್ಯಪರವಾಗಿದ್ದಾರೆ– ಯಾಕೆಂದರೆ ಆ ಮನುಜರ ಜ್ಞಾನವು ಹನಿ ಸಮಾನವಾಗಿದೆ – ಆದರೆ ಪರಂಜ್ಞಾನವು ಮಹಾಸಾಗರವಾಗಿದೆ. ಸಾಗರವು ಹನಿಯನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡರೆ, ಅದು ಸಾಧ್ಯತೆಯಾಗಿದೆ. ಆದರೆ ಹನಿಯು ಸಾಗರವನ್ನು ತನ್ನಲ್ಲಿ ಆವರಿಸಿಕೊಳ್ಳುವುದು ಅಸಾಧ್ಯದ ಮಾತಾಗಿದೆ. ಆದರೆ ಜನ್ಮ ಸಂಬಂಧವು ಹನಿ ಮತ್ತು ಸಾಗರದಲ್ಲಿ ಒಂದೇ ಆಗಿದೆ. ನೀರಿನಲ್ಲಿರುವ ಹನಿಯು ಯಾವಾಗ ತನ್ನ ಸತ್ಯತೆಯನ್ನು ಅರಿತುಕೊಳ್ಳುತ್ತದೆಯೋ, ಆಗ ಅದು ಸಾಗರವಾಗುತ್ತದೆ. ಆಗ ಅದು ನೀರ್ಗುಳ್ಳೆ, ಉಪ್ಪಿನ ರಾಶಿ ಹಿಮ, ಆಲಿಕಲ್ಲು, ಮೋಡ, ಮಳೆ ಹಾಗೂ ಪ್ರವಾಹ ಇವೆಲ್ಲವನ್ನು ತನ್ನ ಅರ್ಹತೆಯನ್ನಾಗಿಸಿಕೊಳ್ಳುತ್ತದೆ.

ಅರ್ಹತೆಯಿಂದಾಗಿ ಎಲ್ಲರೊಳಗಿಹನು, ಆದರೆ ಅಸ್ತಿತ್ವದ ರೂಪದಲಿ ನನ್ನಲಿ ಪ್ರಕಟನಾದನು,
ಮಿತವುಳ್ಳವನು ಎಲ್ಲವನೂ ಆದನು, ಅಶಕ್ತನು ಎಂದು ಉಳ್ಳವನಾದನು.

ನನ್ನ ಹೃದಯವು ಬ್ರಹ್ಮಾಂಡದ ಆ ಸುಲ್ತಾನನ ಸಿಂಹಾಸನವನು ಕಂಡಾಗ,
ಆಸೀನನಾಗಿದ್ದನು ಅವನು ತನ್ನ ಪೀಠದಲಿ, ಸಮಸ್ತ ವೈಭವದ ಲಷ್ಕರ್ ಜತೆಯಲಿ.

ಪರಂಸತ್ಯದ ಅರ್ಥವು ಯಾವ ರೂಪದಲ್ಲಿದೆ, ಅದುವೇ ಆಗಿದೆ ಪವಿತ್ರ ಜ್ಞಾನವು,
ಇಲ್ಲವಾದರೆ ಮನುಷ್ಯನೆಲ್ಲಿ ಪರಿಪೂರ್ಣನು, ಕಿವುಡನು, ಕುರುಡನು ಅಶಕ್ತನು ಇಹನು.

ನನ್ನ ಆತ್ಮವು ಹಾಗೂ ಆ ಪಾವನಾತ್ಮವೂ ಈ ರೀತಿಯಾಗಿ ಒಂದಾದವು,
ಇದು ಪ್ರಿಯತಮೆಯಾದರೆ, ಅದು ಶೃಂಗಾರದ ಆಭರಣದಂತೆ ಶೋಭಿತವು.

ಮಣ್ಣಿನ ರೂಪದಲಿ ಪ್ರಕಟವಾಯಿತು ನನ್ನ ಪ್ರತಿಷ್ಠೆ –ಗೌರವವು,
ಅಗ್ನಿಯ ಜ್ವಾಲೆಯು ಭುಗಿಲೆದ್ದು, ಭಸ್ಮರೂಪವಾಯಿತು ಅದು (ವಿಭೂತಿ)

ಮೌನದಿಂದ ಏಕಿರಿವೆ? ಕರೆ ನೀಡು 'ಏಕ' ನ ಕಡೆ ನೀನು,
ಗಂಟಲಿನ ನಾಳವಾಯಿತು, ಪ್ರತಿ ಶ್ವಾಸಕೆ ಒಂದು ಖಡ್ಗದಂತೆ.

'ಏಕ'ದ ಲೇಖನಿಯನ್ನು ಎಲ್ಲ ಅಕ್ಷರದ, ಮೇಲೆ ತೀಡಿ ನೋಡಿದೆ ನಾನು,
'ಬಹರಿ' ಶಬ್ದ ಬಂದಾಗ ಮಾತ್ರ ಅದರ ಅರ್ಥವು ಪ್ರಕಟವಾಯಿತು.

ಆಭರಣ–೬೧

ಮಹ್ಮದರ ಸತ್ಯತೆ

ಹದಿನೆಂಟು ಸಾವಿರ ಬ್ರಹ್ಮಾಂಡಗಳಲ್ಲಿ ಮಹ್ಮದರು ಒಬ್ಬರೇ ಇರುವರು– ಖಂಡಿತವಾಗಿಯೂ, ನಿಸ್ಸಂದೇಹವಾಗಿಯೂ ಆದರೆ ತಮ್ಮ ಬುದ್ಧಿ ಹಾಗೂ ತಿಳುವಳಿಕೆಯ ಆಧಾರದಿಂದ ಜನರು ಅವರನ್ನು ಎರಡು ಆಗಿ ಮಾಡಿರುತ್ತಾರೆ. ಒಂದು ಕಾಲ್ಪನಿಕ, ಎರಡನೆಯದು ಅರ್ಥರೂಪಕ. ಕಾಲ್ಪನಿಕವೆಂದರೆ, ಚಂದ್ರನನ್ನು ಎರಡು ಹೋಳಾಗಿಸಿದವರು[೧] ಅವರಿಂದ ಅನೇಕ ಮಹಾನ್ ಪವಾಡಗಳು ಜರುಗಿದವು. ಇದರ ಉದ್ದೇಶವು ದೈವಸಂದೇಶಕ್ಕೆ ಅಹ್ವಾನ ಹಾಗೂ ಇತರ ದೈವೀಧರ್ಮದ ಧರ್ಮಗ್ರಂಥಗಳಲ್ಲಿ ಉಂಟುಮಾಡಿದ್ದ ಲೋಪ–ದೋಷಗಳನ್ನು ಸರಿಪಡಿಸುವುದಾಗಿತ್ತು. ಅರ್ಥರೂಪವೆಂದರೆ ಯಾವದು 'ಪರಂಜ್ಞಾನ'ದ ಪವಿತ್ರ ಜ್ಞಾನವಾಗಿದೆ, ಅದಾಗಿದೆ. ಹಾಗೂ ಹೃದಯಗಳಲ್ಲಿ ರಹಸ್ಯಮಯಗೊಳಿಸಲಾಗಿದೆ. ಭೌತಿಕವಾಗಿ ಅಸ್ತಿತ್ವ ಹೊಂದಿರುವ ಬ್ರಹ್ಮಾಂಡದಲ್ಲಿ ಅವನು ಶೋಭಾಯಮಾನವಾಗಿರದ ಯಾವ ಕಣ ಮಾತ್ರವು ಇಲ್ಲ. ಪ್ರತಿಯೊಂದು ಕಣದಲ್ಲಿ ಮಹ್ಮದ ಸಲ್ಲಾಲ್ಲಾಹು ಅಲೈಹು ಸಲ್ಲಂ ಅವರ ಪ್ರತಿಬಿಂಬವಿದೆ. ಇದೇ ಕಾರಣಕ್ಕಾಗಿ ರಸೂಲರ (ದೈವಿಗ್ರಂಥ ಹೊಂದಿರುವ ಪ್ರವಾದಿ) ದಾಸರೆಂದು ಒಡಬಂಡಿಕೆ ಮಾಡಿಕೊಂಡಿರುವ ಒಂದು ಪಂಥ ಸಮೂಹವೇ ಇದೆ. ಮತ್ತೊಂದು ಪಂಥ ಸಮೂಹವು ತಮ್ಮ ಹೃದಯದ ಧ್ವನಿಯನ್ನು ಸಮ್ಮತವೆಂದು ನಂಬುತ್ತವೆ. 'ಅಹದ್' ಹಾಗೂ 'ಅಹಮದ್'ನ ಮಧ್ಯೆ 'ಮೀಮ್'[೧]ನ ಪರದೆಯಿದೆ ಆದರೂ 'ಮೀಮ್'ನಲ್ಲಿ ಎರಡು 'ಮೀಮ್'ಗಳಿದ್ದು, ಅದು ಒಂದೇ 'ಮೀಮ್'[೨] ಆಗಿದೆ.

ಹೀಗಾಗಿ ಸಯ್ಯದ್ 'ಜೈನುಲ್–ಆಬೆದೀನ್' ಎಂಬ ವ್ವಾರಿಫತ್ ಅನ್ನು ಅರಿತುಕೊಂಡಿರುವ ವ್ಯಕ್ತಿಯೊಬ್ಬರು ಸಗರಿನ ಜಾಮೀಯಾ ಮಸೀದಿಯಲ್ಲಿ ಒಂದು ಸಮೂಹದ ಸಮ್ಮುಖ ಹೀಗೆ ನುಡಿಯುತ್ತಿದ್ದರು. ಪ್ರವಾದಿ ಹಜ್ರತ್ ಮಹ್ಮದ್ (ಸ.ಅ)ರವರು ಮೃತ್ಯು ಸನಿಹವಾದ ಸಮಯದಲ್ಲಿ, ತಮ್ಮ ಅನುಯಾಯಿಗಳಿಗೆ ತಮ್ಮ ನಿಲುವಂಗಿಯನ್ನು ಖ್ವಾಜಾ ಉವೇಸ್ ಖರ್ನಿ (ರ.ಅ) ಅವರನ್ನು ತಲುಪಿಸಲು ಸೂಚಿಸಿದರು. ಮೃತ್ಯುವಿನ

ಬಳಿಕ ಆ ಪವಿತ್ರ ನಿಲುವಂಗಿಯನ್ನು ಖ್ವಾಜಾ ಉವೇಸ್ ಬಳಿ ಒಯ್ದರು. ಹಾಗೂ ಇದನ್ನು ಜಗದ್ಗುರುಗಳಾದ ಹಜ್ರತ್ ಮಹ್ಮದ್‌ರವರು ಕಳುಹಿಸಿದ್ದಾರೆ ಎಂದು ನುಡಿದರು. ಆಗು ಖ್ವಾಜಾ ಉವೇಸ್ ರವರು ನಾನು ಇದನ್ನು ಸಂತೋಷಪೂರ್ವಕವಾಗಿ ಸ್ವೀಕರಿಸಿದ ಭಾಗ್ಯಶಾಲಿಯಾಗಿದ್ದೇನೆ ಎಂದು ನುಡಿದರು.

ತದನಂತರ ಖ್ವಾಜಾ ಉವೇಸರವರು ಆ ಅನುಯಾಯಿಗಳನ್ನು 'ನೀವು ಎಂದಾದರೂ ಪ್ರವಾದಿಯನ್ನು ನೋಡಿದ್ದೀರಾ?' ಎಂದು ವಿಚಾರಿಸಿದರು. ಇದರಿಂದ ಆಶ್ಚರ್ಯಗೊಂಡ ಆ ಅನುಯಾಯಿಗಳು 'ನೋಡುವುದೇನು? ಸೇವೆಗಾಗಿ ಅವರ ಅತಿ ಸಮೀಪದಲ್ಲಿರುವ ಸೌಭಾಗ್ಯ ದೊರೆಯಿತು. ಪ್ರತಿ ಕ್ಷಣವನ್ನೂ ನಾವು ಅವರಿಗಾಗಿ ಸವೆಸಿದ್ದೇವೆ ಎಂದು ನುಡಿದರು. ಆಗ ಉವೇಸ್ ಅವರು ನಿಮ್ಮಲ್ಲಿ ಯಾರೂ ಅವರನ್ನು ಕಂಡಿಲ್ಲ. ಸಮಸ್ತ ಅರಬ್ಬರಲ್ಲಿ ಯಾರೂ ಅವರನ್ನು ನೋಡಿಲ್ಲ, ಕೇವಲ ಹಜ್ರತ್ ಖೈರುನ್ನಿಸಾ ಬೀಬಿ ಫಾತೀಮಾ[೩] ಅವರ ಹೊರತಾಗಿ. ಬೀಬೀ ಫಾತೀಮಾ ಬಾಲ್ಯದಲ್ಲಿ ಅವರನ್ನು ಕಂಡಿದ್ದರು' ಎಂದು ನುಡಿದರು. ತದನಂತರ ಆ ಅನುಯಾಯಿ ಮಹನೀಯರು ಹಿಂತಿರುಗಿದರು. ಅಮೀರುಲ್ ಮೋಮಿನೀನ್ ಎಂದು ಖ್ಯಾತರಾಗಿದ್ದ 'ಹಜ್ರತ್ ಅಲಿ' ಅವರು ತಮ್ಮ ಪತ್ನಿ ಬೀಬೀ ಫಾತೀಮಾ ಅವರನ್ನು 'ಇಂದು ಖ್ವಾಜಾ ಉವೇಸ್ ಖರ್ನಿಯವರು ನುಡಿದದ್ದೇನೆಂದರೆ, ಪ್ರವಾದಿ ಮಹ್ಮದರನ್ನು ಸಮಸ್ತ ಅರಬ್‌ರಲ್ಲಿ ಹಾಗೂ ಅವರ ಅನುಯಾಯಿಗಳಲ್ಲಿ, ಯಾರೂ ಅವರನ್ನು ನೋಡಿರುವುದಿಲ್ಲ. ಕೇವಲ ಹಜ್ರತ್ ಬೀಬೀಯ ಹೊರತಾಗಿ, ಅವರು ಬಾಲ್ಯದಲ್ಲಿ ಒಂದು ಸಲ ಮಹ್ಮದರನ್ನು ಕಂಡಿದ್ದರು' ಎಂದು ನುಡಿದ ಈ ವಿಷಯವನ್ನು ಪ್ರಸ್ತಾಪಿಸಿದರು. ಹಾಗೆಯೇ 'ಇದರ ರಹಸ್ಯವೇನು?'

---

೧. ಮಹ್ಮದರು ತಮ್ಮನ್ನು ಪ್ರವಾದಿ ಎಂದು ಘೋಷಿಸಿಕೊಂಡ ನಂತರ, ತಮ್ಮ ಪ್ರವಾದಿತ್ವ ಸಾಬೀತು ಪಡಿಸಲು ಪವಾಡವನ್ನು ಮಾಡಬೇಕೆಂದು ಅರಬರು ಮಹ್ಮದರನ್ನು ಒತ್ತಾಯಿಸಿದ್ದರು. ಯಾಕೆಂದರೆ ಈ ಹಿಂದಿನ ಪ್ರವಾದಿಗಳಾದ ಮೋಸಸ್, ಸುಲೇಮಾನ್, ಯೂಸೂಫ್ ಇತ್ಯಾದಿ ನಬಿಗಳು ತಮ್ಮ ಪವಾಡಗಳಿಗೆ ಪ್ರಸಿದ್ಧರಾಗಿದ್ದರು. ಆದರೂ ಅವರ ಕಾಲದ ಜನರಲ್ಲಿ ಹಲವರು ಅವರನ್ನು ಪ್ರವಾದಿಗಳೆಂದು ನಂಬಲಿಲ್ಲ. ಪವಾಡವನ್ನು ಸೃಷ್ಟಿಸಲಿಲ್ಲವೆಂದು ಜನರು ಏಸು-ಕ್ರಿಸ್ತರನ್ನು ಪ್ರಶ್ನಿಸುತ್ತಿದ್ದರು. ಆಗ ಪ್ರವಾದಿಗಳು ಒಮ್ಮೆ ಚಂದ್ರನನ್ನು ಎರಡು ಹೋಳಾಗಿಸಿ, ಅದನ್ನು ಜೋಡಿಸಿದ ಪವಾಡವನ್ನು ಪ್ರದರ್ಶಿಸಿದ್ದರು ಎಂದು ಹೇಳಲಾಗುತ್ತದೆ.

೧. 'ಅಹದ್' ಅಂದರೆ ಏಕೈಕ ದೇವ, 'ಅಹ್ಮದ್' ಅಂದರೆ ಮಹ್ಮದರು ಅರಬ್ಬಿ ಭಾಷೆಯಲ್ಲಿ 'ಅಹದ್' ಮತ್ತು 'ಅಹ್ಮದ' ಶಬ್ದಗಳ ಮಧ್ಯೆ ಕೇವಲ 'ಮೀಮ್' ಅಕ್ಷರದ ವ್ಯತ್ಯಾಸವಿದೆ. ಅಹದ್‌ಗೆ 'ಮೀಮ್' ಸೇರಿಸಿದರೆ 'ಅಹ್ಮದ್' ಶಬ್ದವಾಗುತ್ತದೆ.

೨. ಮೀಮ್ ಅರಬ್ಬಿ ಭಾಷೆಯ ಒಂದು ಅಕ್ಷರ 'ಮೀಮ್' ಶಬ್ದವು ಸ್ವರರೂಪದಲ್ಲಿ ೧ಮೀಮ್, ೧೩, ಹಾಗೂ ೧ಮೀಮ್ ಎಂದು ಸೇರಿದರೂ 'ಮೀಮ್' ಆಗುತ್ತದೆ. ಹೀಗಾಗಿ 'ಮೀಮ್'ನಲ್ಲಿ ಪ್ರಾರಂಭದಲ್ಲಿ ಹಾಗೂ ಅಂತ್ಯದಲ್ಲಿ ಮೀಮ್ ಇದ್ದರು. ಅಕ್ಷರ ರೂಪದಲ್ಲಿ ಅದು ಒಂದೇ ಮೀಮ್ ಆಗಿದೆ.

೩. ಬೀಬೀ ಫಾತೀಮಾ- ಪ್ರವಾದಿಯವರ ಪುತ್ರಿ ಹಾಗೂ ಹಜ್ರತ್ ಅಲಿಯವರ ಪತ್ನಿ.

ಎಂದು ಪ್ರಶ್ನಿಸಿದರು. ಸ್ವಲ್ಪ ಸಮಯ ಯೋಚಿಸಿದ ನಂತರ, ಬೀಬೀ ಸಾಹೇಬಾ ಅವರು 'ಖ್ವಾಜಾ ಅವರು ಸತ್ಯವನ್ನು ನುಡಿಯುತ್ತಿದ್ದಾರೆ' ಎಂದು ಉತ್ತರಿಸಿದರು. ಆಯಿತೇನೆಂದರೆ ಒಂದು ದಿನ ಅಲ್ಲಾಹನ ರಸೂಲರಾದ ಮಹ್ಮದ್‌ರು ವುಜೂ[೪] ಮಾಡುತ್ತಿದ್ದರು. ನಾನು ಅವರ ಬಳಿ ನಿಂತಿದ್ದೆ ವುಜೂ ಮಾಡುತ್ತಿದ್ದ ಸಮಯ ತಲೆಗೆ ನೀರು ಚಿಮುಕಿಸುವ ಮಸ್‌ಅ ಹಂತಕ್ಕೆ ಬಂದಾಗ, ತಮ್ಮ ನಿಡಿದಾದ ಟೋಪಿಯನ್ನು ತಲೆಯಿಂದ ತೆಗೆದು ನನ್ನ ತಲೆಯ ಮೇಲಿಟ್ಟರು. ದೇವರು ಹಾಗೂ ಅವರ ಪ್ರವಾದಿಯ ಆಣೀ! ಎಷ್ಟು ಸಮಯ ಆ ನಿಡಿದಾದ ಪವಿತ್ರ ಟೋಪಿ ನನ್ನ ತಲೆಯ ಮೇಲಿತ್ತು, ಅಷ್ಟೂ ಸಮಯ ಬ್ರಹ್ಮಾಂಡದ ಕಣಕಣವೂ ನನಗೆ ಗೋಚರಿಸಿತು. ಆ ಪ್ರತಿ ಕಣದಲ್ಲಿಯೂ ಮಹ್ಮದ್‌ರ ಸಾಕ್ಷಾತ್ ಚಹರೆಯನ್ನು ಕಂಡೆ. ಆಗ ನನಗೆ ಅರಿವಾಯಿತು, ಜಗದ್ಗುರುಗಳ ಮೂಲ ರೂಪವು ಅದೇ ಆಗಿದೆ.

ಲೋಕಕೆ ಪೂರ್ಣಚಂದ್ರರು, ಪರಮ ಗುರುಗಳು ಅವರು,
ಸಮಸ್ತ ನಬಿಗಳು ತಾರೆಗಳು, ಇವರು ಅದೇ ಸೂರ್ಯ.

ಆ ಬೆಳಕಿನಿಂದ ಪ್ರಕಾಶಮಾನವಾಗಿವೆ ಸಮಸ್ತ ಅಗ್ನಿ ಜ್ಯೋತಿಗಳು,
ಹವಾಗುಣವು, ಹೂವು, ಉದ್ಯಾನ ಹಾಗೂ ವಸಂತವು.

ಅಹ್ಮದ, ಮಹಮೂದ ಹಾಗೂ ಮಹಮ್ಮದರು ಅವರೇ,
ವಿಷನಿವಾರಕ ಅನಂತ ಮದಿರೆಯು ಅವರೇ.

'ಸಹಭಾಗಿತ್ವ'ದಿಂದ ಮಹ್ಮದರ ತಲೆಯು ಹೊರಬಂದ ಕ್ಷಣ,
ಅದೃಶ್ಯದ ಸಾಕ್ಷಾತ್ಕಾರವಾಗಿ ಪ್ರಕಟವಾದರು ಇದರಿಂದ.

ಜೀವ ವೈಭವವು, ಅದರ ಮೇಲಿದೆ ದೇಹ ಸೌಂದರ್ಯವು,
ಸಮಗ್ರಕ್ಕೂ, ಅಲ್ಪಂಶಕೂ ಇದರಿಂದಲೇ ಇಹುದು ಉತ್ಕೃಷ್ಟತೆಯು.

ಈ 'ಸಹಭಾಗಿತ್ವ'ದಿಂದ ಅಹ್ಮದ್‌ರಿಂದ ಇದೆ ಎರಡು ರೂಪ
ಶಬ್ದಗಳು ಇಹವು ಎರಡು, ಆದರೆ ಅರ್ಥ ಎಂದಿಗೂ ಒಂದೇ.

ಲವಣವೆನ್ನುವರು ಕೆಲವರು, ಕೆಲವರೆನ್ನುವರು ಉಪ್ಪು,
ಶಬ್ದಗಳು ಇಹವು ಎರಡು, ಅರ್ಥವು ನಿಸ್ಸಂದೇಹ ಒಂದು.

ಅಲೆಯಿಂದ ಸಾಗರವು, ಅದರಂತೆ ಕಿಡಿಯಿಂದ ಬೆಂಕಿಯು,
ಎಲ್ಲಿದೆ ಪ್ರತ್ಯೇಕ, ಹೃದಯದಿಂದ ಗಮನಿಸಿ ನೋಡು ಗೆಳೆಯ.

---

೪. ವುಜೂ–ನಮಾಜಿಗಿಂತಲೂ ಮುಂಚೆ ನೀರಿನಿಂದ ನಿಶ್ಚಿತ ಕ್ರಮದಲ್ಲಿ ಕೈ ಕಾಲು ಮುಖ ತೊಳೆದುಕೊಂಡು ಶುಚಿಯಾಗುವುದು.

ಸಂಶಯವಿಲ್ಲ ಇದರಲ್ಲಿ, ಈ ಎರಡೂ ಒಂದೇ ಆಗಿಹುದು,
'ಮೀಮ್'ನಿಂದ ಎರಡಾದವು ನಿಜದಲ್ಲಿ ಒಂದೇ ಅಗಿಹುದು.

'ಮೀಮ್' ಏನಾಗಿದೆ? ಅರಿ ಇದನು ಜ್ಞಾನದಿಂದ ಮಾತ್ರ,
ಜ್ಞಾನವನ್ನು ಈ ಜ್ಞಾನದಿಂದಲೇ ಅರಿಯಲು ಪ್ರಯತ್ನಿಸು.

ಕರ್ತನ ಹಾಗೂ ಸೃಷ್ಟಿಯ ಕುರಿತಾದ ಈ ವಿಶ್ವಾಸವು,
ಆಗಿಹುದು ಇದು ಜ್ಞಾನದ ಕೃಪೆಯಿಂದ ಪ್ರಕಟರೂಪವು.

ಬ್ರಹ್ಮಾಂಡದಲಿ ಸಾಧ್ಯವಿದೆ ಸೈನಿಕರ ರಕ್ಷಣೆಯು,
ಜ್ಞಾನವು ಧ್ವಜವಾಹಕ, ಪರಮಜ್ಞಾನಿಯು ಇವರ ಬಾದಶಾಹ

ಮಧ್ಯದಲ್ಲಿ ಈ ಜ್ಞಾನದ ಅಸ್ತಿತ್ವ ಎಲ್ಲಿಯೂ ಇರದಿದ್ದರೆ,
ಜ್ಞಾನ ಹೊತ್ತಿಗೆಯು ಪ್ರಕಟವಾಗುತ್ತಿರಲಿಲ್ಲ ಈ ಜಗದಿ.

ಜ್ಞಾನ ತೋಟವು, ಜ್ಞಾನ ಪುಷ್ಪವು, ಜ್ಞಾನ ಅದರ ಮುಳ್ಳು ಹೌದು
ಜ್ಞಾನವು ಸ್ವಯಂ ನೀರಾಗಿದೆ, ಸ್ವಯಂ ನೀರಾವರಿಯೂ ಹೌದು.

ಜ್ಞಾನದಿಂದಲೇ ನಡೆಯುತಿಹುದು, ಬ್ರಹ್ಮಾಂಡದ ಈ ಪಾಠಶಾಲೆ,
ಪ್ರಮತ್ತ ಆದಮ್‌ನ ಪ್ರಶಂಸೆಯ ಹಾಡನು ಹಾಡು.

'ಬಹರಿ' ನೀ ಈ ಜ್ಞಾನದ ಸಹಗಾಯಕನು ಆಗು,
ಯಾವನು ಆಗಿಹನು ಸರ್ವಜ್ಞ, ಅವನ ರಹಸ್ಯವನ್ನು ಹೊಂದು.

ಆಭರಣ–೬೨

ಬ್ರಹ್ಮಾಂಡ ಹಾಗೂ 'ಆದಂ'ರ ವಿವರಣೆ

ನಾನು ನನ್ನ ಪೀರ್ ಮುರ್ಷದ್ ಹಜ್ರತ್ ಬಾಖಿರ್ ಅವರಿಂದಲೂ, ಸ್ವಾರ್ಜನೆಯಿಂದಲೂ, ಜ್ಞಾನ ಸಂಪತ್ತು ಸಂಪಾದಿಸಿದ್ದೇನೆ. ಇದರ ಹೊರತಾಗಿ ಹಜ್ರತ್ ಶಾಹ ಮೀರಾಂಜಿ ಶಮ್ಸ್‌ಲ್ ಅಶ್ಶಾಖ್ ಇವರ ಪುತ್ರರಾಗಿದ್ದ ಹಜ್ರತ್ ಶಾಹ ಬುರಾಹನುದ್ದೀನ್‌ರವರ ಗತಕಾಲದ ಗ್ರಂಥಗಳನ್ನು ಹಾಗು ಪತ್ರಿಕೆಗಳನ್ನು ನನ್ನ ಅರ್ಹತೆಗೆ ಅನುಗುಣವಾಗಿ ಅಧ್ಯಯನ ಮಾಡಿದ್ದೇನೆ. ಅವು ಅಲ್ಲದೇ ಸಮಸ್ತ ಜೀವನವನ್ನು ಚರ್ಚೆ ಹಾಗೂ ಸಂಭಾಷಣೆಯಲ್ಲಿ ಕಳೆದಿದ್ದೇನೆ. ಈ ತರಹದ ಹುಡುಕಾಟದಲ್ಲಿ ಜೀವನವನ್ನು ವ್ಯಯಿಸಿ, ಹಾಳು ಮಾಡಿಕೊಂಡಿದ್ದೇನೆ. ಕೊನೆಯಲ್ಲಿ ಇಷ್ಟೇ

ವೇದ್ಯವಾಯಿತು – ಬ್ರಹ್ಮಾಂಡ ಹಾಗೂ 'ಆದಂ'ರ ಸಾರಾಂಶವೇ ಜ್ಞಾನವಾಗಿದೆ. ಪರಂಜ್ಞಾನವು ಇದೇ ಜ್ಞಾನಸೌಂದರ್ಯದ ಸಾಕ್ಷೀರೂಪವಾಗಿವೆ. ಅದಲ್ಲದೆ ಇದೇ ಜ್ಞಾನ, ಜ್ಞಾನವೂ ಆಗಿವೆ,– ಇದೇ ಜ್ಞಾನವೂ, ಬ್ರಹ್ಮಾಂಡವೂ ಆಗಿದೆ ಹಾಗೂ ಇದೇ ಜ್ಞಾನದ ಅರಿವೂ ಆಗಿದೆ. ಕೆಲವು ವ್ಯಕ್ತಿಗಳು ಈ ಜ್ಞಾನವನ್ನು ಕಡೆಗಣಿಸಿ ಮುಂದೆ ಸಾಗುತ್ತಾರೆ. ಅವರ ಮೇಲೆ ಏನು ಪ್ರಕಟವಾಗುವುದು ಹಾಗೂ ಯಾವ ರೀತಿ ಅಂತರ್ಯದಲ್ಲಿ ಪ್ರಕಾಶ ಪ್ರಾಪ್ತಿಯಾಗುವುದು ಗೊತ್ತಿಲ್ಲ. ಆದರೆ ಯಾವನೇ ಒಬ್ಬನು ಇದಕ್ಕಿಂತಲೂ ಉನ್ನತ ಹಾರಾಟ ಮಾಡಬಹುದಾಗಿದೆ. ನೋಡಲಾಗಿ ಏನು? ಅದೇ ಈ ಪರಮಸೌಂದರ್ಯವಾಗಿದೆ. ಆದರೆ ಈ ಬುದ್ಧಿಗೇಡಿ ಅಲ್ಪನನ್ನು ಕೇಳುವುದಾದರೆ, ಪ್ರಕಟವೂ ಜ್ಞಾನದಿಂದ ಹೊರತಾಗಿಲ್ಲ. ಯಾವ ಕಾಲವೂ ಇದರಿಂದ ಅತೀತವಾಗಿಲ್ಲ. ಜ್ಞಾನವಿಲ್ಲದ ಪ್ರಕಟರೂಪವೂ ಯಾವ ಪ್ರಯೋಜನಕ್ಕಾಗಿ? ನೋಟವುಳ್ಳವನು ಸ್ವಯಂ ನಿಜಜ್ಞಾನವಾಗಿದ್ದಾನೆ. ಯಾವ ಆರೀಫನು (ಪರಂಜ್ಞಾನಿಯ) ಪರಿಪೂರ್ಣ ನಾಗಿದ್ದಾನೆಯೋ ಅವನು ತಕ್ಷಣವೇ ಈ ಗೂಢಕ್ಕೆ ತಲುಪುತ್ತಾನೆ. ಆದರೆ ಅಜ್ಞಾನಿಗೆ ಪ್ರಳಯದವರೆಗೂ ಅದು ಸಾಧ್ಯವಾಗುವುದಿಲ್ಲ. ಅಕಸ್ಮಾತ್ ಯಾರಾದರೂ ಸತ್ಯದ ಸತ್ಯವು ಇದಕ್ಕಿಂತಲೂ ಉನ್ನತ ಸ್ಥಾನದಲ್ಲಿದೆ ಎಂದು ನುಡಿದರೆ, ಆಶ್ಚರ್ಯವಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವನು ನುಡಿದಂತೆ ಸಾಧಿಸಿ ತೋರಸಲೇಬೇಕು. ಆದರೆ ಒಪ್ಪಂದ ಏನೆಂದರೆ ಅವನೂ ಜ್ಞಾನದಿಂದ ಪರಿಶುದ್ಧನಾಗಿರಬೇಕು. ಹಾಗೆ ಇರಬೇಕಾಗಿರುವುದು ಅನಿವಾರ್ಯವೂ ಆಗಿದೆ.

ಮ್ವಾರಿಫತ್‌ನ ಮಧುಪಾತ್ರೆಯನ್ನು ಕೈಯಲ್ಲಿ ಹಿಡಿದು ಪ್ರಮತ್ತರಾಗಿರುವವರೇ, ನನ್ನ ಸ್ಥಿತಿಯು ಎರಡು ಬಗೆಯದಾಗಿದೆ. ಕೆಲವೊಮ್ಮೆ ನಾನು ಜಾಗೃತಾವಸ್ಥೆಯಲ್ಲಿರುತ್ತೇನೆ. ಮಗದೊಮ್ಮೆ ನಿದ್ರಾವಸ್ಥೆಯಲ್ಲಿ ಈಗ ನಾನೇನು ನುಡಿಯುತ್ತಿದ್ದೇನೆ, ಅದನ್ನು ನಿದ್ರೆಯಲ್ಲಿ ನುಡಿಯುತ್ತಿದ್ದೇನೆ. ಯಾವನಾದರು ಮಂಪರಿನಲ್ಲಿ ಏನಾದರೂ ನುಡಿದರೆ, ಅದರ ಅರಿವು ಹೇಳುವವನಿಗೂ ಇರುವುದಿಲ್ಲ. ಕೇಳುವವನಿಗೂ ಯಾವುದೇ ಇದರ ಪ್ರಭಾವವು ಆಗುವುದಿಲ್ಲ. ದೇವರಾಣೆ ಜನರು ಇದನ್ನು ನಂಬುವುದಿಲ್ಲ.

ದೇಹದ ಆಕಾರವು ಬೇರೆಯಾಗಿದೆ, ಜೀವದ ಅರ್ಥವು ಬೇರೆಯಾಗಿದೆ,
ಲೋಕರೂಢಿಯು ಬೇರೆಯಾಗಿದೆ, ದೈವೀಮಾರ್ಗವು ಬೇರೆಯಾಗಿದೆ.

ಯಾವಾಗ ತಲುಪುವುದು ಬಂಧಿ ವಿಶ್ವವು ಸೊಗಸಿನ ಸ್ಥಿತಿಗೆ,
ದೈವನಿಷ್ಠನ ರಹಸ್ಯತೆ ಬೇರೆಯಾಗಿದೆ, ಉಂಡಾಡಿಯ ಶಿರವು ಬೇರೆಯಾಗಿದೆ.

ಅಂತ್ಯದಲ್ಲಿ ಇವೆರಡೂ ಹೇಗಾಗಬಹದು ಒಂದು ಹೇ 'ಬಹರಿ'ಯೇ!
ಪಾಶವೀ ಆತ್ಮ ಬೇರೆಯಾಗಿದೆ, ಮನುಜನ ರೂಪ ಬೇರೆಯಾಗಿದೆ.

ಹೀಗಾಗಿ ನನ್ನ ಮಾತುಗಳ ಅಲ್ಲಗಳೆಯುವಿಕೆ ಹಾಗೂ ಸ್ವೀಕಾರ್ಹವನ್ನು ವೃಥಾ ಸುಮ್ಮನೆ ಮಾಡದಿರಿ, ಅವುಗಳನ್ನು ಹಾಗೆಯೇ ಬಿಟ್ಟುಬಿಡಿ. ಪ್ರಾರ್ಥಿಸುವುದೇನೆಂದರೆ, ಪರಮ ದೈವನು ಹಜ್ರತ್ ಶೇಖ್ ಮಹ್ಮದ್ ಬಾಖರ್ ಖಾದ್ರಿಯವರ ಸಂಬಂಧದಿಂದ ಆದಿಜ್ಞಾನದ ದೈವೀಜ್ಞಾನಿಯನ್ನಾಗಿಸಲಿ.

ಜ್ಞಾನದಿಂದ ಬರಿದು ಇಲ್ಲಿ ಯಾರೂ ಇಲ್ಲ,
ಜ್ಞಾನದ ಹೊರತಾಗಿ ಇಲ್ಲಿ ಯಾರೂ ಇಲ್ಲ.

ಅಸ್ತಿತ್ವದ ಆದಿಯಲಿ ಹೊರಹೊಮ್ಮಿದ್ದು ಜ್ಞಾನವೇ ಆಗಿಹುದು,
ನಂತರ ಜ್ಞಾನಕ್ಕೆ, ಜ್ಞಾನವು ಪ್ರಾಪ್ತಿಯಾಯಿತು.

ಜ್ಞಾನದಿಂದಲೇ ಅಸ್ತಿತ್ವಕ್ಕೆ ಇರುವುದು ಜೀವವು,
ಹೃದಯದಲ್ಲಿ ಇದರ ಪ್ರಕಾಶದ ವೈಭವವಿದೆ.

ಎರಡು ಕಮಾನುಗಳು ಸೇರಿ, ವರ್ತುಲವಾಯಿತು,
ಯಾವುದು ಗೂಢವಾಗಿತ್ತು, ಅದು ಸ್ಪಷ್ಟರೂಪವಾಯಿತು.

ಕತ್ತಲೆಯಲ್ಲಿ ಇದ್ದವು, ಭೂಮಿ ಹಾಗೂ ಆಕಾಶಗಳು,
ದೈವೀ ಜ್ಞಾನದಿಂದ, ಅಜ್ಞಾನವು ದೂರವಾಯಿತು.

ಜ್ಞಾನವನು ಈ ರೀತಿಯಲಿ ಪ್ರಕಟಿಸಬೇಡ ಹೇ ಆತ್ಮೀಯನೇ,
ನನ್ನಂತೆ ಲಜ್ಜಿತಗೊಳಿಸಬೇಡ, ಸುಸಂಸ್ಕೃತನಾಗು ಸ್ವಲ್ಪ.

ಕುಡಿಯಲಾರೆ ನೀನು ಸಾಗರದ ಆ ಅಲೆಗಳನು,
ಯಾಕೆ ತೋರುವೆ ನೀ ಸಮುದ್ರದ ಕೋಲಾಹಲ.

ದೈವೀಜ್ಞಾನದ ನದಿಯ ಸೆಲೆಯಾಗಿ ಪವಿತ್ರ ಜಲವಾಗು ನೀ,
ದಿವ್ಯಜ್ಞಾನದ ಸಲುವಾಗಿ ನೀ ಬಿದ್ದಿರು ಮಣ್ಣಿನ ತರಹ.

ಜ್ಞಾನಕೆ ಅವಶ್ಯಕವು ಸುಸಂಸ್ಕೃತಿಯು ಹೇ 'ಬಹರಿ'
ಪವಿತ್ರ ನೋಟದಲಿ 'ಕತ್ತೆ' ಇಹನು ಅಸಂಸ್ಕೃತನು.

ಆಭರಣ-೬೩

'ದೈವೀ ಜ್ಞಾನ'ದ ವಾಸ್ತವಿಕತೆ

ಅಕಸ್ಮಾತ್ ಯಾರಾದರೂ ನಿಮ್ಮನ್ನೂ ಈ ರೀತಿ ಕೇಳಿದರೆ ಅರ್ಥಾತ್ ನೀವು ದಿವ್ಯಜ್ಞಾನವನ್ನು ಸಮಸ್ತ ಜೀವಾತ್ಮಗಳ ಸಾರವೆಂದು ನಿರ್ಣಯಿಸುವುದಾದರೆ, ಸಾಧಕನಿಗೆ ಮದಿರೆಯು ಪ್ರಮಾಣಕ್ಕಿಂತಲೂ ಅಧಿಕವಾದರೆ, ಅಥವಾ ಅವನ ಬೌದ್ಧಿಕ ಸ್ಥಿಮಿತದಲ್ಲಿ ವ್ಯತ್ಯಯ ಉಂಟಾದರೆ, ದೈವೀಜ್ಞಾನವು ಅವನಿಂದ ದೂರವಾಗುತ್ತದೆ. ಅದೇಕೆ? ಹೇ ಆತ್ಮೀಯನೇ, ದೈವೀಜ್ಞಾನವು ದೂರವಾದರೆ, ಬುದ್ಧಿಹೀನತೆಯು ತನ್ನ ಮುಖದರ್ಶನವನ್ನು ಮಾಡಿಸುತ್ತದೆ. ಈ ಬುದ್ಧಿಹೀನತೆಯ ಕಲ್ಪನೆಯು ದೈವೀಜ್ಞಾನದ ಹೊರತಾಗಿ ಬೇರೆ ಯಾವುದರಿಂದಲೂ ಆಗುವುದಿಲ್ಲ. ಬುದ್ಧಿವಂತಿಕೆಯು ದೈವೀಜ್ಞಾನದ ಪ್ರತಿರೂಪವಾಗಿವೆ. ಆದರೆ ಬುದ್ಧಿಹೀನತೆಯು ಸ್ವಯಂ ದೈವಿಜ್ಞಾನವಾಗಿದೆ. ಈ ರೀತಿಯಾಗಿ ದೈವೀಜ್ಞಾನವು ಆದಿಯಲ್ಲಿ ಬುದ್ಧಿಹೀನತೆಯ ಮದಿರೆಯಿಂದ ಪ್ರಮತ್ತ ಹಾಗೂ ಭ್ರಮಾಧೀನ ಸ್ಥಿತಿಯಲ್ಲಿತ್ತು ಯಾವ ರೀತಿ ಬುದ್ಧಿವಂತಿಕೆಗೆ ಒಂದು ರೂಪವಿದೆಯೋ ಹಾಗೆಯೇ ಬುದ್ಧಿಹೀತನತೆಗೂ ಒಂದು ರೂಪವಿರುವುದು.

ಜ್ಞಾನವಿರಲಿ, ಅಜ್ಞಾನವಿರಲಿ, ಕೇಳು ಹೇ ಆತ್ಮೀಯನೇ,
ಇವರೆಡರ ಮೂಲವಾಗಿದೆ, ನಿಸ್ಸಂದೇಹ ದೈವೀಜ್ಞಾನವು.

ಜೀವದ ಹುಡುಕಾಟ ಏಕೆ? ಕರೆ ಕಳಿಸು ದೈವೀಜ್ಞಾನವನು,
ನಿಜದಲಿ ದೈವೀಜ್ಞಾನವೇ ನಿನ್ನ ಜೀವವಾಗಿದೆ.

ಜೀವ ಏನಾಗಿಹುದು? ವಾಸ್ತವದಲಿ ದೈವೀಜ್ಞಾನದ ಗುಪ್ತಚರವು,
ಹಾಗೂ ದೈವೀಜ್ಞಾನವು ಜೀವದ ಪ್ರಕಟಣೆಯ ವೇದಿಕೆಯು.

ಬಹರಿ ನೀನು ದೈವೀಜ್ಞಾನದ ಕಿರೀಟರಹಿತ ವ್ಯರ್ಥನು,
ಆದರೆ ಆಗಿರುವೆ ನೀ ಹೃದಯಸಾಮ್ರಾಜ್ಯದ ಸಾಮ್ರಾಟನು.

ಆಭರಣ – ೬೪

ಆಯ್ದ ಮೂರು ರತ್ನಗಳು – ವಿವೇಕ, ಅಂತರ್ದೃಷ್ಟಿ ಹಾಗೂ ಅಸ್ತಿತ್ವ

ನಿನ್ನನ್ನು ನೀ ಅರಿ, ಮೊದಲು ನೀ ಹೇ ಹೃದಯವೇ
'ಮ್ವಾರಿಫತ್'ನ ಮಾರ್ಗವು ತಲುಪುವುದು ಗುರಿಯನು.

ಊರುಸೇ-ಇರ್ಫಾನ್ (ಮನ್ ಲಗನ್) / ೧೪೫

ಮನುಜರಲಿ ಹಲವರು ಇರುವರು ರತ್ನಗಳು,
ಅವರಿಂದಲೇ ಉಜ್ವಲವಾಗಿಹರು ಶ್ರೇಷ್ಠರು ಹಾಗೂ ಅಲ್ಪರು.

ಅವರಲ್ಲಿ ಮೂವರು ಇರುವರು ಆಯ್ದ ರತ್ನಗಳು,
ಇವರಿಂದಲೇ ಮನುಜನು ಆಗಿಹನು ಪರಿಪೂರ್ಣ

ಎರಡು ಲೋಕದ ಒಡೆಯನಾಗುವನು ಅವನು
ಯಾವನು ಈ ಮೂರು ರತ್ನಗಳಿಂದ ಐಶ್ವರ್ಯ ಪಡೆಯುವನು.

ವಿವೇಕ, ಅಂತರ್ದೃಷ್ಟಿ ಹಾಗೂ ಅಸ್ತಿತ್ವಗಳು ಇಹವು
'ಬಹರಿ' ಈ ಮೂರು ರತ್ನಗಳು ನಿಜಕೂ ಅಮೂಲ್ಯವು

ಮನುಜನ ಈ ರತ್ನಪೆಟ್ಟಿಗೆಯ ಬಗ್ಗೆ ನಕ್ಷತ್ರರಾಶಿಗಳೂ ಅಸೂಯೆ ಪಡುತ್ತಾರೆ. ಯಾಕೆಂದರೆ ಇದರಲ್ಲಿ ಅನೇಕ ಚಿತ್ರ-ವಿಚಿತ್ರ, ವಿಸ್ಮಯಕಾರಕ ವಿವಿಧ ಬಹುಮೂಲ್ಯ ರತ್ನಗಳಿವೆ. ಆದರೆ ಈ ರತ್ನಗಳಲ್ಲಿ ಮೂರು ಆಯ್ದ ರತ್ನಗಳಾಗಿವೆ. ಅವು ವಿವೇಕ, ಅಂತರ್ದೃಷ್ಟಿ ಹಾಗೂ ಅಸ್ತಿತ್ವ ಆಪೇಕ್ಷಿತ ವಾಸ್ತವಿಕತೆಯು ಇವುಗಳಿಂದ ಹೊರತಾಗಿಯೂ ಇಲ್ಲ ಹಾಗೂ ಇವುಗಳಲ್ಲಿ ಸೇರಿಯೂ ಇಲ್ಲ. ಹಲವು ಸತ್ಯಾನ್ವೇಷಿಗಳು ಸ್ವಯಂ ಆಗಿ ಇದನ್ನು ಈ ರೀತಿಯಾಗಿ ನಿರ್ಣಯಿಸಿದ್ದಾರೆ. ಅದೇನೆಂದರೆ ಅಸ್ತಿತ್ವವು ಪರಿಪೂರ್ಣ ಮನೋಗತವಾಗಿದ್ದು ಮೂಲದಲ್ಲಿ ಅದು ಮುಳ್ಳು ಹಾಗೂ ಹೂವಾಗಿದೆ. ವಿವೇಕನಾಗಿದ್ದರೆ ಅದರ ಅಸ್ತಿತ್ವವು ಅದರಿಂದಲೇ ಇದೆ. ಅಂತರ್ದೃಷ್ಟಿಯಾಗಿದ್ದರೆ ಅದರ ವಾಸ್ತವಿಕತೆಯು ಇದರಿಂದಲೇ ಇದೆ. 'ಏಕತ್ವ'ದ ಚರಮ ಹಂತಗಳು ಇವೇ ಆಗಿವೆ.

ಹಲವರು ಅಂತರ್ದೃಷ್ಟಿಯನ್ನು ಭೂಲೋಕ ಹಾಗೂ ದೇವಲೋಕಗಳೆಂದು ಪರಿಗಣಿಸಿದ್ದಾರೆ. ಅಸ್ತಿತ್ವ ಹಾಗೂ ವಿವೇಕಗಳೂ ಇವೇ ರೂಪಗಳಲ್ಲಿ ಪ್ರಕಟವಾಗಿವೆ ಹಾಗೂ ಪ್ರಕಾಶದ ಸಾಗರವು ಯಾವುದರ ಬಣ್ಣ ಕಪ್ಪಾಗಿದೆಯೋ ಅದೂ ಇದಾಗಿದೆ.

ಹಲವರು ವಿವೇಕವನ್ನು ಪರಂಸತ್ಯದ ಅಸ್ತಿತ್ವ ಹಾಗೂ ಅಸ್ತಿತ್ವದ ಮೂಲ (ಅಸಲ್) ಎಂದು ಒಪ್ಪಿಕೊಳ್ಳುತ್ತಾರೆ ಹಾಗೂ ಅಂತರ್ದೃಷ್ಟಿ ಇತ್ಯಾದಿಗಳನ್ನು ಅದರ ಶಾಖೆಗಳೆಂದು ಭಾವಿಸುತ್ತಾರೆ. ಆದರೆ ವಿವೇಕವು ಮಧ್ಯದಲ್ಲಿ ಇರದಿದ್ದರೆ, ಅಸ್ತಿತ್ವವನ್ನು ಯಾರು ಗುರುತಿಸುತ್ತಿದ್ದರು ಹಾಗೂ ಅಂತರ್ದೃಷ್ಟಿಯನ್ನು ಅಂತರ್ದೃಷ್ಟಿಯೆಂದು ಯಾರು ಹೆಸರಿಡುತ್ತಿದ್ದರು. ನಂಬಿಗೆಯಿಂದ ಗುರುತಿಸು, ಹಾಗೂ ಸಂಶೋಧನೆಯಿಂದ ವಿಚಾರಿಸು, ವಿವೇಕದ ಸೂರ್ಯನು ಉದಯನಾಗದೇ ಇರುತ್ತಿದ್ದರೆ, ಜೀವದಿಂದ ದೇಹ ಹಾಗೂ ದೇಹದಿಂದ ಜೀವದ ಪ್ರತ್ಯೇಕತೆ ಅಂಧಕಾರದ ಕೊಠಡಿಯಲ್ಲಿ ಅಡಗಿರುತ್ತಿತ್ತು. ಇದುವೆ ಸೃಷ್ಟಿಸಿದವನನ್ನು ಸೃಷ್ಟಿದವನಿಂದ ಪರಿಚಿತಗೊಳಿಸಿದನು ಹಾಗೂ ಜೀವಿಗಳನ್ನು ದಾಸ್ಯಾರಾಧನೆಗಾಗಿ ನಿಯಮಿತಗೊಳಿಸಿದನು.

ಹೇ ಆತ್ಮೀಯನೇ! ಈ ಮೂರು ರತ್ನಗಳು, ರತ್ನಗಳ ಜ್ಞಾನವುಳ್ಳವನ ದೃಷ್ಟಿಯಲ್ಲಿ ನಿಸ್ಸಂದೇಹವಾಗಿ ಒಂದೇ ಆಗಿವೆ.

ಜ್ಞಾನವು ಅಂತರ್ದೃಷ್ಟಿಯಿಂದಾಗಿವೆ ಹಾಗೂ ಅಂತರ್ದೃಷ್ಟಿಯು ಅಸ್ತಿತ್ವದಿಂದ ಪ್ರಕಟವಾಗಿದೆ.

ಹೇ ಪರಿಶುದ್ಧ ಅಲೆಗಳೇ, ಈ ಮೂರು ಮುತ್ತುಗಳು ಒಂದೇ ಸಾಗರದಲ್ಲಿವೆ.

ಉದಾಹರಣೆಗೆ ಕಟ್ಟಿಗೆ, ತಂತಿ ಹಾಗೂ ಧ್ವನಿ ಅಥವಾ ಕಣ್ಣು, ಕಣ್ಣುಗೊಂಬೆ ಹಾಗೂ ನೋಟ ಇವು ಒಟ್ಟಾರೆಯಾಗಿ ಧ್ವನಿ ಹಾಗೂ ನೋಟಗಳ ವಿವೇಕ ಸಾದೃಶ್ಯವಾಗಿವೆ ಹಾಗೂ ಅವರೆಡರ ಕ್ರಮವಾಗಿ ಅರ್ಥಾತ್ ಅಂತರ್ದೃಷ್ಟಿ ಹಾಗೂ ಅಸ್ತಿತ್ವದ ಸಾದೃಶವಾಗಿವೆ. ಉಳಿದ ನಾಲ್ಕು ಅರ್ಥಾತ್ ಕಟ್ಟಿಗೆ ಮತ್ತು ತಂತಿ ಅಥವಾ ಕಣ್ಣು ಹಾಗೂ ಕಣ್ಣುಗೊಂಬೆ ಈ ನಾಲ್ಕು ಧ್ವನಿ ಅಥವಾ ನೋಟಕ್ಕಾಗಿ ಇವೆ ವಿನಾಃ ಇವೆರಡು (ಧ್ವನಿ ಮತ್ತು ನೋಟ) ಆ ನಾಲ್ಕುಗಾಗಿ ಇರುವುದಿಲ್ಲ.

ಪ್ರತಿ ಔನ್ನತ್ಯ ಹಾಗೂ ಅಧಮತೆಯ ಶೋಭೆಯು ಯಾವುದು?
ವಿವೇಕ, ಅಂತರ್ದೃಷ್ಟಿ ಹಾಗೂ ಅಸ್ತಿತ್ವದ ಹೊರತು ಮತ್ಯಾವುದು?

ಮೂರು ರತ್ನಗಳು ಒಂದೇ ಇಹವು, ಹೇ ಸವಿ ಸ್ವಭಾವಿಯೇ,
ನೋಡುಗನಿಗೆ ಇಲ್ಲ ಇದರಲಿ ಸಂಶಯವು ಹೇ ಗೆಳೆಯನೇ.

ವಿವೇಕವಾಗಿಹುದು ಸ್ವರವು, ಉಳಿದ ಎರಡು ಏನೆಂದು ತಿಳಿ,
ಮರದ ತುಂಡು, ಹಾಗೂ ತಂತಿ, ಇದರಿಂದಲೇ ಮುಖಾಮುಖಿ

ಜೀವ ಅಂತರ್ದೃಷ್ಟಿ, ಇದರಿಂದಲೇ ಅಸ್ತಿತ್ವ ಪ್ರಾಪ್ತಿ,
ಈ ಸುರೆ-ಮದಿರೆಯ ಇದೇ ಇಹುದು ಪ್ರಮತ್ತತೆಯು.

ವಿವೇಕರಿಗೆ ತೆನೆಭಾರ ಗೊಂಚಲಿನಂತೆ ಶರಣಾಗತನು ಈ ಬಹರಿಯೂ,
ಆದರೆ ಕುತಂತ್ರಿ-ವಂಚಕರಿಗೆ ಎಂದೂ ಮಣಿಯನು ಈ ಬಹರಿಯು.

ಆಭರಣ-೬೫

ಅಗೋಚರ ಜ್ಞಾನದ ಪ್ರತಿಬಿಂಬಗಳು

ನನ್ನ ಈ ನಿರರ್ಥಕ ಸಂಕಲನದಲ್ಲಿ, ಹಲವೆಡೆ ಜ್ಞಾನದ ಪ್ರಸ್ತಾಪವಿದೆ. ಇದರ ಕಾರಣವೇನೆಂದರೆ ನನ್ನ ಬಾಹ್ಯಜ್ಞಾನದ ಆಕಾಶದಲ್ಲಿ ಅಗೋಚರ ಜ್ಞಾನಸೂರ್ಯನ ಪ್ರತಿಬಿಂಬವು ಪ್ರತಿಫಲಿತವಾಗಿ ನನ್ನ ಹೃದಯವನ್ನು ಪ್ರಕಾಶಮಾನಗೊಳಿಸಿದೆ.

ಜ್ಞಾನದಿಂದ ಆ ದಿನ ನಾನು ಅಡಿಯಿಂದ ಮುಡಿಯವರೆಗೆ
ಯಾವ ದಿನ ದೈವಿಕ ಜ್ಞಾನಛಾಯೆಯು ಈ ಹೃದಯವನ್ನು ಬೆಳಗಿತು.

ಇಲ್ಲವಾದರೆ ಈ ಅಸಂಸ್ಕೃತನೆಲ್ಲಿ? ಜ್ಞಾನದ ಗುರಿಯೆಲ್ಲಿ?
ಆದರೆ ಅಡಿಯಿಂದ ಮುಡಿವರೆಗೆ ಜ್ಞಾನದ ವರದಾನವಾಯಿತು.

ಜನ ನುಡಿವರು, 'ಬಹರಿ' ಮಾನ್ಯರು, ಅಚಲ ವಿಶ್ವಾಸಿಗಳೆಂದು,
ಭಯವಾಗುವುದು ಎನಗೆ, ನನ್ನ ನಿಷ್ಠೆ ಶಂಕಿತವಾಗದಿರಲೆಂದು.

ಆಭರಣ–೬೬

ಸತ್ಯದ ದೈವೀಜ್ಞಾನವು ಬುದ್ಧಿಯಿಂದ ಹೊರತಾಗಿದೆ

ಈ ಪುಸ್ತಕ 'ಉರುಸೇ–ಇರ್ಫಾನ್'ನಲ್ಲಿ ಅತ್ತ್ಯುತ್ಸಾಹದಿಂದ ಹಾಗೂ ಅತಿಯಾದ ಮಹತ್ವವನ್ನು ವ್ಯಾಪಕವಾಗಿ ದಿವ್ಯಜ್ಞಾನಕ್ಕೆ ನೀಡಲಾಗಿದೆ. ಕಟ್ಟಿಗೆಯ ಮೇಲೆ ಕುಸುರಿನ ಕೆಲಸ ಮಾಡುವುದು, ಅಥವಾ ಚಿನಿವಾರನು ಚಿನ್ನದ ಹಾಳೆಯಿಂದ ಮನಮೋಹಕ ಆಭರಣಗಳ ರೂಪು ನೀಡುವುದು ಅಥವಾ ಗಾಯಕನು ತನ್ನ ಕಂಠಸಿರಿಯನ್ನು ಪ್ರದರ್ಶಿಸುವುದು. ನೇಕಾರನು ತನ್ನ ಕೈಚಳಕದಿಂದ ಚಿತ್ತಾರದ ಬಟ್ಟೆಯನ್ನು ತಯಾರಿಸುವ ಕಲೆ ಇವೆಲ್ಲವೂ ಜ್ಞಾನ ಅಲ್ಲವೇ ಅಲ್ಲ. ಮನುಷ್ಯರ ಕೈ–ಕಾಲು ಮಸ್ತಿಷ್ಕಗಳಿಂದ ಪ್ರಕಟವಾದ ಯಾವುದೂ ದಿವ್ಯಜ್ಞಾನವಲ್ಲ. ದಿವ್ಯಜ್ಞಾನವು ಬೇರೆಯೇ ಆಗಿದೆ. ಜ್ಞಾನದ ಜೀವ, ವ್ಯಕ್ತದ ಪ್ರಭು, ವ್ಯಕ್ತಿತ್ವದ ಮಾರ್ಗದರ್ಶಕ ಹಾಗೂ ನೋಟದ ಪ್ರಕಟರೂಪವಾಗಿರುವ ದಿವ್ಯಜ್ಞಾನವು ಬೇರೆಯೇ ಆಗಿದೆ. ಅರ್ಥಾತ್ ಅದು ಪವಿತ್ರದಲ್ಲೂ ಪವಿತ್ರ, ಕೋಮಲದಲ್ಲೂ ಸುಕೋಮಲವಾಗಿದೆ. ಇಲ್ಲಿ ಬುದ್ಧಿಯು ಅಂಧ ಹಾಗೂ ಕಿವುಡಾಗಿದೆ. ಹಾಗೂ ತಿಳುವಳಿಕೆಯ ಶಿರದ ಮೇಲೆ ಬೂದಿ ಇದೆ.

ಹೇ, ಪ್ರೇಮ ಸ್ವಭಾವಿಯೇ, ನೀ ಎಲ್ಲಿರುವೇ?
ಹೇ, ಶೋಕದಲಿ ಮಿಂದವನೇ, ನೀ ಎಲ್ಲಿರುವೇ?

ನನ್ನ ತೋಟವನು ನೀ ತೊರೆದಾಗಿನಿಂದ,
ಎಲ್ಲಾ ಉತ್ಸಾಹವು ನಿನ್ನನ್ನು ತೊರೆದು ಹೊರಟಿದೆ.

ಹೃದಯದ ಕೋಲಾಹಲವು ತಣ್ಣಗಾಗಿದೆ.
ದರಿದ್ರನ ಒಲೆಯಂತೆ ತಣ್ಣಗಾಗಿದೆ.

ಕಡಿಮೆಗೊಳಿಸುವ ಅಹಂಭಾವ ನನ್ನಲಿ ಹೇ ಪ್ರಭು,
ಜಾಗೃತಗೊಳಿಸು ಬೆಂಕಿಯ ಕಿಡಿಯನು ನನ್ನಲಿ.

ನನ್ನ ಅರ್ಹತೆಗಳನು ಆ ಅಗ್ನಿಗೆ ಅರ್ಪಿಸಿ,
ಅದನು ಅಪ್ಪಟ, ಅತಿ ಅಪ್ಪಟಗೊಳಿಸು ಹೇ ಪ್ರಭು.

ಆಭರಣ-೬೭

'ದಿವ್ಯಜ್ಞಾನ' ವಿಶ್ವಾಸದ ಸ್ಥಾನಮಾನಗಳು

ಎಲ್ಲಿಯವರೆಗೆ ಸಾಧಕನು ವಿವೇಕದ ವ್ಯಾಪ್ತಿಯ ನಿಯಮ ಪಾಲಕನಾಗಿರುತ್ತಾನೋ ಅಲ್ಲಿಯವರೆಗೆ 'ಶಿರ್ಕ'ನ ಕೆಡಕಿನಿಂದ ಸ್ವತಂತ್ರನಾಗುವುದಿಲ್ಲ ಹಾಗೂ ಅಂತರ್ದೃಷ್ಟಿಯ ಪರಿಪೂರ್ಣತೆಯಾಗಿರುವ 'ಏಕತೆ'ಯ ಔನ್ನತ್ಯಕ್ಕೆ ತಲುಪುವುದಿಲ್ಲ. ಹೃದಯದ ಅಲೆಗಳು ತಲುಪವಂತಹ ಸಾರವು ಇದಾಗಿದೆ. ಹಲವರು ಇದಕ್ಕೆ ಉತ್ತಮರಲ್ಲಿ ಅತ್ಯುತ್ತಮ (ಐನುಲ್-ಐನ) ಎಂದು ಕರೆಯುತ್ತಾರೆ. ಇನ್ನೂ ಹಲವರು ಇದನ್ನು ಮಹಮ್ಮದರ ಯಾಥಾರ್ಥತೆ ಎಂದು ಉಳಿದ ಹಲವರು ಪವಿತ್ರಾತ್ಮ (ರೂಹೆ ಖುದ್ಸಿ) ಎಂದು ಕರೆದರು.

ಪವಿತ್ರ ಆತ್ಮದ ಸಾಕ್ಷಾತ್ಕಾರವು ಯಾರ ನೋಟದಲಿ ಗೂಢವಾಗಿದೆ,
ಬ್ರಹ್ಮಾಂಡದ ಅಂತರ್ದೃಷ್ಟಿಯಾಗಿದೆ ಅವರ ಅರೆ ತೆರೆದ ನೋಟವು.

ಈ ವಿವೇಕರೂಪದ ಅಂತರ್‌ದೃಷ್ಟಿಯು, ವಿವೇಕದಿಂದ ಪವಿತ್ರವಾಗಿದ್ದು, ಅಂತರ್‌ದೃಷ್ಟಿಯಿಂದ ಶುಭ್ರವಾಗಿದೆ. ಇದನ್ನು ವಿವೇಕವೆಂದೂ ಹೇಳಲಾಗದು, ಅಂತರ್‌ದೃಷ್ಟಿಯೆಂದೂ ಹೇಳಲಾಗದು. ಅದು ಅಸ್ತಿತ್ವವೇ ಆಗಿದೆ. ಅದು ತನ್ನನ್ನು ತಾನೆ ಅರಿಯುವಂತಹದು ಹಾಗೂ ತನ್ನನ್ನು ತಾನೇ ಕಾಣುವಂತಹುದು. ಆದರೆ ಇಲ್ಲಿ ಅಸ್ತಿತ್ವದ ಪಾತ್ರವೂ ಇಲ್ಲ. ಅಥವಾ ಮತ್ಯಾವುದೇ ಅರ್ಹತೆಯ ಸಾಧ್ಯತೆಯೂ ಇಲ್ಲ. ಇದೊಂದು ಬೆಳಕಾಗಿದೆ, ಆದರೆ ಈ ಬೆಳಕನ್ನು ಬೆಳಕೆನ್ನುವುದು ಅಂಧಕಾರಮಯವಾಗಿದೆ. ಅರ್ಥಾತ್ ಅದು ಪರಿಪೂರ್ಣವೂ ಸ್ವತಂತ್ರವೂ ಅಲ್ಲ, ನಿಯಮ ಪಾಲಕನೂ ಅಲ್ಲ. ಇವರಲ್ಲಿ ಕೆಲವರಿಗೆ ಮಾತ್ರ 'ಅದ್ವೇಗೊ' ಮಾರ್ಗ ದೊರೆಯುತ್ತದೆ. ಈ ಸ್ಥಾನವು ಸಂಪಾದನೆಯಿಂದ ಎಂದೂ ದೊರೆಯುವುದಿಲ್ಲ, ಬದಲಾಗಿ ಕೇವಲ ಕೃಪೆಯಿಂದ ದೊರೆಯುತ್ತದೆ. ಯಾಕೆಂದರೆ ಸಂಪಾದನೆಯಲ್ಲಿ ಭ್ರಮೆಯು ಮಿಶ್ರಿತವಾಗಿರುತ್ತದೆ. ಆದರೆ ಕೃಪೆಯು ವಿಶ್ವಾಸದ ಉತ್ಕೃಷ್ಟತೆಯಾಗಿದೆ. ಈ ವಿಶ್ವಾಸವೇ ದೈವೀಪರಮದ ವಿಶ್ವಾಸಕ್ಕೆ ಕಾರಣಕರ್ತವಾಗಿದೆ. ನಾವು ಇದರ

ವಿರುದ್ಧದ ಸ್ಥಿತಿಯಾಗಿದ್ದೇವೆ. 'ಮ್ವಾರಿಫತ್'ನ ಬೋಧನೆ ಮಾಡುವ ಇಂತಹ ಮುರ್ಷದರು ಅಧಿಕವಾಗಿದ್ದಾರೆ. ಆದರೆ ಪರಮಾರ್ಥ ತಥ್ಯದ ಆಕಾಂಕ್ಷಿಗಳು ವಿರಳರಲ್ಲಿ ವಿರಳವಾಗಿದ್ದಾರೆ. ವಿಶ್ವಾಸವು ಅದೆಂತಹ ಅರ್ಹತೆಯೆಂದರೆ ಅದು ಕಣಕ್ಕೂ ಸೂರ್ಯಶಕ್ತಿಯನ್ನು ದಯಪಾಲಿಸುತ್ತದೆ ಹಾಗೂ ಇರುವೆಗೂ ಸುಲೇಮಾನಿನನ ಉನ್ನತ ಸ್ಥಾನವನ್ನು ದಯಪಾಲಿಸುತ್ತದೆ.

ಜೀವದಲಿ ವಿಶ್ವಾಸ ಉತ್ಪತ್ತಿಯಾಗದಿದ್ದರೆ ಅದು ಜೀವವಲ್ಲ.
ಎಲ್ಲಿಯವರೆಗೆ ದಿವ್ಯಜ್ಞಾನದಲಿ ಸಂಶಯವಿದೆ ಅದು ದಿವ್ಯಜ್ಞಾನವಲ್ಲ.

ಹೆಜ್ಜೆಯನ್ನು ಸ್ಥಿರಗೊಳಿಸದೇ ಇದ್ದರೆ, ಅದು ದಿವ್ಯಜ್ಞಾನವಲ್ಲ,
ತನ್ನ ಸಿಂಹಾಸನದಲ್ಲಿ ಇರದಿದ್ದರೆ, ಆ ಸುಲ್ತಾನನು ಸುಲ್ತಾನನಲ್ಲ.

ವಿಶ್ವಾಸ ಅಚಲವಿದ್ದರೆ ತಟ್ಟೆಯು ಪ್ರಕಾಶಮಯ ಪೂರ್ಣಚಂದಿರ,
ವಿಶ್ವಾಸರಹಿತನಾಗಿದ್ದರೆ, ತೇಜರಹಿತ, ಮಣ್ಣು ತುಂಬಿದ ಬಟ್ಟಲದು.

ಶಂಕಿತನು ವಿಮುಖನಾಗುವನು ವಿಶ್ವಾಸದ ಹಟದಿಂದ,
ಅವನು ತೋಳಿನಂತವನು, ಕನ್ನಾನಿನ* ಯೂಸೂಫನಂತಹವನಲ್ಲ.

ವಿಶ್ವಾಸದ ಮಾರ್ಗದಿಂದ ವಿಮುಖನಾದವನಿಗೆ ಏನೆಂದು ಹೆಸರಿಸಲಿ,
ಕಾಫೀರನು ಅವನು, ಹೇ ಬಹರಿ, ವಿಶ್ವಾಸಿಕನು ಅಲ್ಲ.

ಆಭರಣ–೬೮

'ಏಕತ್ವ'ದಲ್ಲಿ ಚಿರಂತನ ವಿಲೀನ ಸಾಧ್ಯವಿಲ್ಲ

ಒಬ್ಬ ಸ್ನೇಹಿತನು ಈ ಬಡಪಾಯಿ, ಹತಭಾಗ್ಯನ ಬಳಿ ಒಂದು ಪ್ರಶ್ನೆಯನ್ನು ನಗದಾಗಿ ಕೈಯಲ್ಲಿ ಹಿಡಿದುಕೊಂಡು ತಲುಪಿ, ಈ ರೀತಿ ವಿಚಾರಿಸಿದನು. ಅದೇನೆಂದರೆ 'ಏಕತ್ವ'ದಲ್ಲಿ ಚಿರಂತನ ವಿಲೀನ (ಮಿಲನ) ಸಾಧ್ಯವಿಲ್ಲ? ಇದರ ಕಾರಣವೇನು? ಇದಕ್ಕೆ ಉತ್ತರವಾಗಿ ನುಡಿಯಲಾಯಿತು. ಅದೇನೆಂದರೆ ವಿಲೀನತೆ (ಮಿಲನದ)ಯ ವಾಸ್ತವಿಕತೆಯು ಲಿಖಿತ ಅಥವಾ ಸಂವಾದದ ಬಂಧನದಿಂದ ಅತೀತವಾಗಿದೆ. ಹಾಗೂ ಅದು ಜ್ಞಾನ ಅಥವಾ ಪ್ರಜ್ಞೆಯ ವಲಯದಿಂದ ಬಾಹಿರವಾಗಿದೆ. ಒಂದು ಸ್ಥಿತಿಯ ಅಡಿಯಿಂದ ಮುಡಿಯವರೆಗೆ ಆನಂದಕ್ಕೆ ಸಂಬಂಧಿಸಿದೆ. ಮತ್ತೊಂದು ಕಾಲವಿದೆ, ಅದು ಸಹಜ ಪ್ರವೃತ್ತಿಯ ಆಂತರ್ಯದಲ್ಲೂ ಇದೆ. ಬಾಹ್ಯದಲ್ಲೂ ಇದೆ. ಹೀಗಾಗಿ ಯಾವ ದೈವೀ ಆಜ್ಞಾಪಾಲಕನು ಪರಂಸತ್ಯದ ತೇಜಸ್ಸಿನ ನೈಪುಣ್ಯತೆಯ

ಕೃಪೆಯಿಂದ, ಆನಂದ ಸ್ಥಿತಿಯು ದಿವ್ಯಜ್ಞಾನದ ವಾಸ್ತವಿಕ ಸತ್ಯವಾಗಿ ತಲುಪುತ್ತದೆ. ಈ ಸ್ಥಿತಿಯು ಅಜ್ಞಾಪಾಲಕನನ್ನು ದೇವರಲ್ಲಿ ವಿಲೀನಗೊಳಿಸುತ್ತದೆ. ಅರ್ಥಾತ್ ದಿವ್ಯಜ್ಞಾನವು ಅಂತರ್ದೃಷ್ಟಿಯ ಶಾಶ್ವತ ಸಾಗರದಲ್ಲಿ ಪ್ರಚಂಡ ಅಲೆಗಳ ಅಬ್ಬರವನ್ನು ಹುಟ್ಟುಹಾಕುತ್ತದೆ ಹಾಗೂ ಅರಿವಿನ ಸಾಗರದಲ್ಲಿ ಮುಳುಗಿಸಿಬಿಡುತ್ತದೆ. ಆಗ ಅಂತರ್ದೃಷ್ಟಿಯು ಎಂಥ ಕ್ರಿಯಾತ್ಮಕ ಪರಿಣಾಮ ನೀಡುವುದೆಂದರೆ ಅದು ಗಾಳಿಯ ದೀಪವನ್ನು ಜ್ವಾಲೆಯ ರೂಪ ನೀಡುವ ಪ್ರಕ್ರಿಯೆದಂತಿರುತ್ತದೆ. ಇದೇ ದೈವಿಜ್ಞಾನವಾಗಿದೆ. ಇದು ಮಧ್ಯದಿಂದ ಉದ್ಭವವಾದ ಕಾಲದಲ್ಲಿ, ಸಮಸ್ತ ಸೃಷ್ಟಿಗಳು ಶೂನ್ಯತೆಯತ್ತ ಮರಳುತ್ತವೆ. ಈ ದೈವೀ ಸೌಂದರ್ಯವು ದೈವಿ ರೌದ್ರತೆಯಲ್ಲಿ ವಿಲೀನವಾಗುತ್ತದೆ. ಇದನ್ನು ಏಕತ್ವದ ಪರಮೋಚ್ಛ ಸ್ಥಿತಿ ಎಂದರೆ ಅದು ಅನುಮತಿಸಬಹುದಾದದ್ದು ಎನ್ನಬಹುದು. ಆದರೆ ಇದನ್ನೇ ವಿಲೀನವೆಂದು ಕರೆದರೆ, ಅದು ನಿಜಕ್ಕೂ ಪ್ರಮಾದಮಯವಾಗುತ್ತದೆ.

ಯಾಕೆಂದರೆ ಈ ಪರಾಕಾಷ್ಠೆಯ ಸ್ಥಿತಿಯಲ್ಲಿ ಸಾಂಗತ್ಯ (ಶಿರ್ಕನ)ದ ಪ್ರಭಾವ ಶಾಶ್ವತವಾಗಿ ಇಲ್ಲವೆನ್ನಬಹುದು. ವಿಲೀನ ('ವಸ್ಲ್'ನ)ದ ಕೊಂಬೆಯು 'ಪರವಶತೆ'ಯ ಬೇರಿನಿಂದ ಉತ್ಪತ್ತಿಯಾಗುತ್ತದೆ. 'ಪರವಶತೆ'ಯು ಇರುವುದಾದರು ಏನು? ತನ್ನ ಕಣ್ಣಿನಿಂದ ಅಗೋಚರವಾಗುವುದು ಅರ್ಥಾತ್ ದೈವೀಜ್ಞಾನದ ಅಂತರ್ದೃಷ್ಟಿಯಲ್ಲಿ ಶಾಶ್ವತವಾಗಿ ಸೇರಿಕೊಳ್ಳುವುದು. ಇದೊಂದು ಕಠಿಣತಮ ಕ್ರಿಯೆ ಹಾಗೂ ದುಸ್ಸಾಧ್ಯವಾದ ಪ್ರಕ್ರಿಯೆಯಾಗಿದೆ. ಹೀಗಾಗಿ ಇಂತಹ 'ಪರವಶತೆ'ಯ ಸ್ಥಿತಿ ಎಲ್ಲಾ ಸಮಯದಲ್ಲೂ, ಎಲ್ಲಾ ಸ್ಥಾನಗಳಲ್ಲೂ ಜರುಗುವುದು ಸಾಧ್ಯವಿಲ್ಲ. ಆದರೆ ಅನಿರೀಕ್ಷಿತವಾಗಿ ಕಣ್ಣು ರೆಪ್ಪೆ ಹೊಡೆಯುವಷ್ಟರ ಕಾಲ ಮಾತ್ರ ಇದ್ದು, ಇದು ನಿರಂತರವಾಗಿ ಎಂದೂ ಇರುವುದಿಲ್ಲ ಹೀಗಾಗಿ ಸತ್ಯಪೀಠದ ಚಕ್ರವರ್ತಿಯಾದ ಪ್ರವಾದಿ ಮಹ್ಮದ ಸಲ್ಲಲ್ಲಾಹು ಅಲೈಹು ಸಲ್ಲಂ ನುಡಿದಿರುತ್ತಾರೆ, ಅದೇನೆಂದರೆ 'ಲಿ ಮೋವ್ ಅಲ್ಲಾಹ ವಕ್ತ್' ಅರ್ಥಾತ್ 'ಒಂದೇ ಸಲಕ್ಕಾಗಿ ಮಾತ್ರ ಇದು' ಜರಗುತ್ತದೆ. ಆದುದರಿಂದ ಏಕತ್ವದಲ್ಲಿ ಚಿರಂತನ ವಿಲೀನದ ಅಸಾಧ್ಯತೆಯ ಕಾರಣವು ಇದೇ ಆಗಿದೆ.

ಸಮಸ್ತ ಆಯುಷ್ಯವು ದಿವ್ಯಜ್ಞಾನದಲಿ ವ್ಯತಿತವಾದರೂ,
ಮನುಜನಿಗೆ ಸಾಧ್ಯವಿಲ್ಲ 'ಏಕತ್ವದಲಿ' ಶಾಶ್ವತ ವಿಲೀನ.

ಸ್ವಯಂಯಿಂದ ಅಗೋಚರವಾಗದ ಹೊರತು ಅವನಿಗೆ,
ಅವನ ಸತ್ಯದಲಿ ಪರಮಸತ್ಯದ ವಿಲೀನವು ನಿಷಿದ್ಧ.

ಪರವಶತೆಯೆಂದರೆ ಅರಿವಿನಿಂದ ಹಾದು ಹೋಗುವ ಸ್ಥಿತಿಯು,
ಅದ್ವೇಗೆ ಸಾಧ್ಯವು ಇದು ಪ್ರತಿ ಸಂಜೆ, ಮುಂಜಾನೆಯಲಿ.

ಕಾಲವಾಗಿಹುದು ಅದು, ಯಾವುದು ಅಗೋಚರದಿಂದ ಗೋಚರವು,
ಕಾಲವೇ ಆಗಿಹುದು ಬಾದಶಹಾ, ಉಳಿದೆಲ್ಲಾ ಅದರ ಗುಲಾಮ.

'ಬಹರಿ'ಯೇ ಈ ಪರವಶತೆಯು ಇಹುದು 'ಸ್ವಯಂ'ದಲಿ,
ನೀನು 'ಸ್ವಯಂ'ದಲ್ಲಿ ಜಾಗೃತನಾಗಿದ್ದು, ಆಗು ಪರವಶ ಶುಭಮಸ್ತು.

ಆಭರಣ-೬೯

ಪರಂಸತ್ಯತೆಯ ಅಸ್ತಿತ್ವವು ಎಚ್ಚರಗೇಡಿತನದಿಂದ ಕಾಣುವುದಿಲ್ಲ

ಪರಂಸತ್ಯದ ಅಸ್ತಿತ್ವವು ವಾಸ್ತವಿಕವಾಗಿ ವಿವೇಕದ ಸಂಬಂಧದಿಂದ ದೂರ ಹಾಗೂ ಅಂತರ್ದೃಷ್ಟಿಯ ಬಂಧನದಿಂದ ಮುಕ್ತವಾಗಿದೆ. ಆದರೆ ಮಹೋನ್ನತ ಸ್ಥಾನದಲ್ಲಿರುವ ಬ್ರಹ್ಮಜ್ಞಾನಿಯ ದೃಷ್ಟಿಯ ಸಮ್ಮುಖದಲ್ಲೇ ಹಾಜರಿದ್ದು ಅದು ಸ್ಪಷ್ಟವಾಗಿ ನೋಡುತ್ತದೆ.

ದೈವೀದೃಷ್ಟಿಯ ಕಣ್ಣುಗಳಿಗೆ ವ್ಯಕ್ತವಾಗಿಹನು ಅವನು,
ದೈವನು ಪ್ರಕಟರೂಪಿಯು, ಪ್ರಕೃತಿ ಜೀವ ಸೃಷ್ಟಿಯಲಿ ವ್ಯಕ್ತನು ಅವನು.

ಅಜ್ಞಾನಿಗೆ ಕಣ್ಣು ಕಾಣಿಸುವುದಿಲ್ಲ, ಇದಕ್ಕೆ ಕಾರಣವೇನೆಂದರೆ ಅವನ ಕಣ್ಣುಗಳ ಮೇಲೆ ಎಚ್ಚರಗೇಡಿತನದ ಪರದೆ ಬಿದ್ದಿರುತ್ತದೆ. ಅದು ಮಧ್ಯದ ತಡೆಯಾಗಿದೆ. ಹೀಗಾಗಿ ನನ್ನ ಬಳಿ ಒಂದು ಉಂಗುರವಿತ್ತು. ಅದು ಹೇಗಿತ್ತೆಂದರೆ ಎಪ್ಪತ್ತು ಬೇರೆ ಬೇರೆ ತರಹದ ಉಂಗುರಗಳನ್ನು ಒಂದೆಡೆ ಸೇರಿಸಿದರೂ, ಒಂದು ಸಹ ಅದರ ಹೊಳಪು ಹಾಗೂ ಸುಂದರ ಕೆತ್ತನೆಯ ಕಲಾತ್ಮಕತೆಗೆ ತಲುಪುತ್ತಿರಲಿಲ್ಲ. ಆ ಕಾಲದಲ್ಲಿ ನಾನು ಆ ಉಂಗುರದಿಂದ ಅತ್ಯಧಿಕ ಮೋಹಿತನಾಗಿದ್ದೆ. ನಾನು ಅದನ್ನು ಬಲ ಹೆಬ್ಬರಳಿನಲ್ಲಿ ಧರಿಸುತ್ತಿದ್ದೆ. ಒಂದು ದಿನ ಊಟದ ಸಮಯದಲ್ಲಿ ಅದರ ವರ್ಣ ಹಾಗೂ ಹೊಳಪಿನ ರಕ್ಷಣೆಗಾಗಿ ಅದನ್ನು ತೆಗೆದು ಎಡ ಹೆಬ್ಬರಳಿನಲ್ಲಿ ಧರಿಸಿದೆ ಊಟದ ಬಳಿಕ ಅದು ಕಾಣದಿದ್ದಾಗ ಖಿನ್ನ ಹೃದಯದವನಾದೆ. ಅದನ್ನು ಎಲ್ಲಾ ಕಡೆ ಹುಡುಕಿದೆ ಆದರೆ ಅದು ಸಿಗದಂತಾಯಿತು. ಒಂದು ಉಂಗುರಕ್ಕಾಗಿ ೬೦ ಸಾವಿರ ದುಃಖ-ಕ್ಲೇಶಗಳು ಹೃದಯವನ್ನು ಕಂಗೆಡಿಸಿದವು ಅನೀರಿಕ್ಷಿತವಾಗಿ ಒಬ್ಬ ಹೃದಯಶಾಲಿ ಸ್ನೇಹಿತನು ದೂರದಿಂದ ನನ್ನ ಬಳಿಗೆ ಬಂದನು ಮತ್ತು 'ವಿಷಯವೇನು? ಬಹಳ ಚಿಂತಾಕ್ರಾಂತವಾಗಿದ್ದೀರಿ? ಎಂದು ವಿಚಾರಿಸಿದನು. ನಾನು ನುಡಿದೆ ಉಂಗುರ ಕಳೆದು ಹೋಗಿದೆ – ಕೇಳಿದರು. ಹಳೆಯದಾ ಅಥವಾ ಹೊಸದಾ? ನಾನುಡಿದೆ 'ಹಳೆಯದು' ಅವರು ಆಶ್ಚರ್ಯಚಕಿತ ಆದರಲ್ಲದೆ ಸಾವಿರ ಪಟ್ಟು ಸೋಜಿಗರಾಗಿ

ನುಡಿದರು. 'ಉಂಗುರವು ನಿಮ್ಮ ಎಡ ಹೆಬ್ಬಟ್ಟಿನಲ್ಲಿದೆ ಎಚ್ಚರಗೇಡಿತನದ ಪ್ರಭಾವದ ಕಾರಣ ನೀವು ಎಡ-ಬಲ ಹುಡುಕುತ್ತಿದ್ದಿರಿ ಹಾಗೂ ಚಿಂತಾಕ್ರಾಂತರಾಗಿದ್ದೀರಿ'.

ಸತ್ಯವು ಅಸ್ತಿತ್ವದಲ್ಲಿದೆ, ಆರೀಫ್‌ನು ನೋಡುತ್ತಾನೆ ಅದನ್ನು ಸದಾ,
ಆದರೂ ಎಚ್ಚರಗೇಡಿತನದಿಂದ ಅದು ಕಣ್ಣಿಗೆ ಕಾಣುವುದಿಲ್ಲ.

ದೈವೀ ಜ್ಞಾನದ ಸಂಬಂಧ ದೊರಕುವುದು ಯಾರಿಗೆ?
ಯಾರಿಗೆ ಅದರ ಪ್ರಾಪ್ತಿಯ ಯೋಗವಿದೆ. ಖಂಡಿತಾ ಅವರಿಗೆ ಸಿಗುವುದು.

ಆಭರಣ-೭೦

ಹಜ್ರತ್ ಖ್ವಾಜಾ ಬಂದೇ ನವಾಜರ ಒಂದು ಕವನೋಕ್ತಿಯ ವಿವರಣೆ

ಪ್ರತಿ ಹಂತದಲ್ಲೂ ನನ್ನ ಮಾರ್ಗದರ್ಶಕರಾದ, ನನ್ನ ಪೀರ್-ಮುರ್ಷದರನ್ನು ಒಂದು ದಿನ ಪ್ರಶ್ನಿಸಿದೆ ಹೇ ದಸ್ತಗೀರರೇ, ಹಜ್ರತ್ ಸಯ್ಯದ್ ಮಹ್ಮದ್ ಹುಸೇನಿ ಗೇಸುದರಾಜರವರು ಹೀಗೆ ನುಡಿದಿರುತ್ತಾರೆ.

ಬೇ ನೀಸ್ತ್ ಕೆ ಸರ್‌ಗಶ್ತಾ ಬೂದ್ ತಾಲಿಬ್ ದೋಸ್ತ್,
ಅಜಬ್ ಐನ್ ಅಸ್ತ್ ಕೆ ಮನ್ ವೊ ಅಸಲ್ ವೋ ಸರ್‌ಗರ್‌ದಾನಮ್.

ಅಚ್ಚರಿಯೇನು? ದಿಗ್ಭ್ರಾಂತನು ಒಬ್ಬ ಸ್ನೇಹ ಆಕಾಂಕ್ಷಿಯು ನಾನು
ತನ್ನ ಬಗ್ಗೆಯ ಅಚ್ಚರಿಯೇಕೆ? ಬೇಟೆಯಲಿ ನಾನಿಹೇನು, ದಿಗ್ಭ್ರಾಂತನೂ ನಾನಿಹೆನು.

ಹೇ ದಸ್ತಗೀರರೇ, ಈ ಕವನೋಕ್ತಿಯ ಭಾವಾರ್ಥವು ಯಾಕೋ ಮನಕ್ಕೆ ತಾಕುತ್ತಿಲ್ಲ. ಅದು ಏಕೆಂದರೆ ವ್ಯಾಕುಲತೆ ಹಾಗೂ ತಲ್ಲಣವು ವಿರಹದಲ್ಲಿಯೇ ವಿನಃ ಮಿಲನದಲ್ಲಿ ಅಲ್ಲ. ಆದರೆ ಹಜ್ರತರು ಮಿಲನದ ಹೊರತೂ ಚಿಂತಿತರಾಗಿದ್ದಾರೆ ಇದೇನು ಮರ್ಮ? ಆಗ ನುಡಿಯಲಾಯಿತು. ಅದೇನೆಂದರೆ ಹಜ್ರತ್ ಬಂದೇ ನವಾಜ್ ಗೇಸುದರಾಜರು ಅತಿ ಉತ್ತಮವಾಗಿ ನುಡಿದಿರುತ್ತಾರೆ. ಅರ್ಥಾತ್ ನಾನು ಮಿಲನದ ಪ್ರಾಪ್ತನಾಗಿದ್ದೇನೆ., ಇದೇ ನನ್ನ ವ್ಯಾಕುಲತೆಯಾಗಿದೆ ಎಂಬುದು ನನಗೆ ಅರಿವಿದೆ. ಜನ ಕೆಲವೊಮ್ಮೆ ನುಡಿಯುತ್ತಾರೆ. ಇಂತಹವನು ಸತ್ಯ ಪ್ರಾಪ್ತನು ಮತ್ತು ಇಂತಹವನು ಸತ್ಯ ಪ್ರಾಪ್ತನಲ್ಲ ಎಂದು ಇದೇ ರೀತಿಯ ಚರ್ಚೆಯಿಂದ ನಾನೂ ಪ್ರಾಪ್ತನೆಂಬ ಶಂಕೆಯನ್ನು ಹೊಂದಿದ್ದೇನೆ. ವಿಸ್ತೃತ ಗಂಭೀರ ಚರ್ಚೆ-ವಿಚಾರದ

---

* ಕನ್ಆನ್: ಪ್ರವಾದಿ ಯೂಸೂಫ್‌ರ, ಪಾಲೆಸ್ಟೀನ್‌ನಲ್ಲಿರುವ ಜನ್ಮನಾಡು.

ಬಳಿಕ ನಾನು ಈ ನಿರ್ಧಾರಕ್ಕೆ ಬಂದೆ. ಮಿಲನ ಮತ್ತು ಸತ್ಯ ಪ್ರಾಪ್ತ ಈ ಎರೆಡರ ಅರಿವಿರಲಿಲ್ಲ. ಅರ್ಥಾತ್ ಸತ್ಯಪ್ರಾಪ್ತನಾರು ಮಿಲನ ಯಾರ ಜತೆ? ಎಂದು.

ಹೀಗಾಗಿ ತೋರು ಬೆರಳು ಹಾಗೂ ಮಧ್ಯದ ಬೆರಳು ಎರಡನ್ನು ಒಟ್ಟಿಗೆ ಜೋಡಿಸಿ, ಇದು ಮಿಲನ ಎಂದೂ, ಅದನ್ನು ಬೇರ್ಪಡಿಸಿ, ಅದನ್ನು ವಿರಹವೆಂದು ಭಾವಿಸುವುದಾದರೆ, ದೇವರು ಮತ್ತು ಅವನ ನಿಯಮಪಾಲಕನ ಮಿಲನ ಎಂದಿಗೂ ಈ ಎರಡು ಬೆರಳುಗಳ ಸೇರಿವಿಕೆಯ ತರಹವಿರುವುದಿಲ್ಲ. ಹೇ ಸ್ನೇಹಿತನೇ, ಈ ಹಂತದಲ್ಲಿ ಮಿಲನವೂ ಇಲ್ಲ, ವಿರಹವೂ ಇಲ್ಲ, ಬದಲಾಗಿ ಅದು ಇದಕ್ಕಿಂತಲೂ ಭಿನ್ನವಾಗಿದೆ. ಅರ್ಥಾತ್ ತನ್ನನ್ನು ನೀಡುವುದು ಹಾಗೂ ದೇವರನ್ನು ಪಡೆಯುವುದು ಬುದ್ಧಿಯಿಂದ ಸಾವಿರಾರು ಗಜದೂರವಿರುವ ಇದೊಂದು ನಿಗೂಢ ರಹಸ್ಯವಾಗಿದೆ. ಇದು ನಮ್ಮ ತರ್ಕಕ್ಕೂ ನಿಲುಕದ ಒಂದು ಗುಹ್ಯವಾಗಿದೆ. ಇದನ್ನು ಅರಿಯಬಹುದಾದವರೇ ಅರಿಯಬಹುದು.

ಸೃಷ್ಟಿಯು ಯಾವುದನು ದೇವ–ಮಿಲನ ಎನ್ನುತ್ತಿದೆ ಮೂಲದಲಿ,
ದೇವ ಕೃಪೆಯಾಗದ ಹೊರತು, ಅದು ಅದರ ಬದಲಾಗಿದೆ.

ಈ 'ಬದಲು' ಏನಿಹುದು, ಅರಿ ನೀ ಪರಮ ಪ್ರೇಮಿಯಾಗಿದ್ದರೆ,
ನಿನ್ನ ಬದಲು ದೇವರನು ಪಡೆಯುವುದೇ ದೇವವಿಲನವಾಗಿದೆ.

ಆಭರಣ–೭೧

ಜೀವಿಗಳ ಹುಟ್ಟಿನ ಕುರಿತಂತೆ

ಒಬ್ಬ ವ್ಯಕ್ತಿಯು ತನ್ನ ಚಹರೆಯನ್ನು ಯಾವುದು ಹೃದಯದ ಸಾದೃಶ ರೂಪವಾಗಿದೆಯೋ, ಅದನ್ನು ನೋಡಲು ವ್ಯಥಿತನಾಗಿರುತ್ತಿದ್ದನು. ಆ ವ್ಯಥೆಯು ಅವನ ಜೀವದ ಮೇಲೆ ಒಂದು ಭಾರದಂತೆ ತೋರುತ್ತಿತ್ತು. ಸಾವಿರಾರು ಉಪಾಯಗಳ ಬಳಿಕ ಅವನು ಒಂದು ಕನ್ನಡಿಯನ್ನು ತಯಾರಿಸಿದನು. ಅದರಲ್ಲಿ ಅವನು ತನ್ನ ಮುಖದ ಪ್ರತಿಬಿಂಬವನ್ನು ಕಂಡನು. ಮತ್ತು ಸಂತುಷ್ಟನಾದನು. ಆದರೆ ಈ ಆಲೋಚನೆಯಿಂದ ಮತ್ತೆ ಅಧಿಕವಾಗಿ ನೊಂದುಕೊಂಡನು. ಅದೇನೆಂದರೆ ಏಕತ್ವದಲ್ಲಿ ನೆಮ್ಮದಿಯಿದೆ, ಆದರೆ ಬಹುತ್ವವು ನಿಂದನೆಗೆ ಕಾರಣವಾಗಿದೆ. ಹೀಗಾಗಿ ಎರಡನ್ನು ಒಂದಾಗಿಸಬೇಕಾಗಿದೆ. ಒಂದನ್ನು ಎರಡಾಗಿ ಅಲ್ಲ. ಒಮ್ಮಿಂದೊಮ್ಮೆಲೆ ಅವನ ಅಭಿಮಾನದಲ್ಲಿ ಸಾಗರದಂತೆ ಆವೇಶ ಜನ್ಮತಾಳಿತು, ಮತ್ತೆ ಏನು ಯೋಚಿಸದೇ ಆ ಕನ್ನಡಿಯನ್ನು ಬಂಡೆಗೆ ಹೊಡೆದು ಒಡೆದನು. ಕನ್ನಡಿ ಮೊದಲು ಏಕವಾಗಿತ್ತು ಈಗ

ಸಾವಿರಾರು ತುಣುಕುಗಳಾದವು. ಪ್ರತಿ ಕನ್ನಡಿ ಚೂರುಗಳಲ್ಲಿ ಅವನ ಚಹರೆ ಕಾಣಿಸಹತ್ತಿತ್ತು. ಈ ರೀತಿಯಾಗಿ ಬಹುಲೋಕದ ಸೃಷ್ಟಿಗಾಗಿ ಇದೇ ತರಹದ ವಿಕಾರರೂಪವು ರೂಪ ತಳೆಯಿತು.

ನೀ ನೋಟವಾಗು, ಮತ್ತೆ ನೋಡು ಉರಿಯುವ ದೀಪವನ್ನು,
ಕಾನನವಿರಲಿ, ಉದ್ಯಾನವಿರಲಿ, ಪ್ರತಿಯೊಂದು ಇಹುದು ಉರಿಯುವ ದೀಪ.


ಹೇ ಆತ್ಮೀಯನೇ, ಈ ಸಾಕ್ಷ್ಯಲೋಕವು ಮೇಣದ ಪಗಡೆಯಂತಿದೆ, ತಿಳಿಗೇಡಿಗೆ ಸರ್ವಥಾ ಮೇಣದ ಅರಿವಿಲ್ಲ. ಅವನು ಭಾವಿಸುವುದೇನೆಂದರೆ ಇದು ಆನೆಯಾಗಿದೆ. ಅದು ಪದಾತಿಯಾಗಿದೆ. ಆದರೆ ಬುದ್ಧಿವಂತನಾದವನಿಗೆ ದಾಳಗಳ ವಿಭಿನ್ನ ಆಕೃತಿಗಳು ಮೇಣದ ವಿವಿಧ ರೂಪಗಳಾಗಿವೆ. ಅವನು ಬೇರೆನನ್ನೂ ಒಪ್ಪುವುದಿಲ್ಲ. ಕೇವಲ ಶುದ್ಧ ಮೇಣದ ದರ್ಶನ ಅವನಿಗಾಗುತ್ತದೆ. ದಾಳಗಳ ಮೇಣದ ವಿವಿಧ ಹೆಸರುಗಳ ಅರ್ಹತೆಯನ್ನು ಅರಿಯುತ್ತಾನೆ ಹಾಗೂ ಮೇಣದ ಈ ನಾಮ ವಿಶೇಷತೆಯ ವೈಶಿಷ್ಟ್ಯವನ್ನೂ ಅರಿಯುತ್ತಾನೆ. ಆದರೆ ನಿಜವೇನೆಂದರೆ, ಬಣ್ಣ ಬಣ್ಣದ ಈ ದಾಳಗಳು ಮೂಲದಲಿ ಮೇಣವೇ ಆಗಿದೆ. ಆದರೆ ಮೂಲದ ಪ್ರಕಟರೂಪ ಅಲ್ಲ. ಇದೊಂದು ಅಪೂರ್ವ ರಹಸ್ಯವಾಗಿದೆ ಹಾಗೂ ಅಪರೂಪದ ಉಪಕರಣವಾಗಿದೆ.

ಮೇಣದ ಹೊರತಾಗಿ ಎಲ್ಲವೂ ಸುಳ್ಳು ಮತ್ತು ಭ್ರಮೆ,
ಮೂಲ ಹಾಲಾಗಿದೆ, ಮೊಸರೂ ಅಲ್ಲ, ಮಜ್ಜಿಗೆಯೂ ಅಲ್ಲ.

ಎಲ್ಲವೂ ಇಹವು ಮೇಣದ ವಿವಿಧ ರೂಪಗಳು,
ಒಂದು ಸೂರ್ಯದಿಂದ, ಎಲ್ಲಾ ಆಕಾಶಕಾಯ ಬೆಳಗಿದಂತೆ.

ಸರ್ವಶಕ್ತನೂ ಮಹಾಮಹಿಮನೂ ಈ ನರಲೋಕ (ನಾಸೂತ್)ದಂತೆ ಹಲವು ಲೋಕಗಳನ್ನು ಸೃಷ್ಟಿಸಿದನು ಹಾಗೂ ಪ್ರತಿ ಲೋಕದಲ್ಲಿ ದೈವತ್ವದ ಲಕ್ಷಾಂತರ ಚಮತ್ಕಾರಗಳು ಹಾಗೂ ತನ್ನ ಸೃಷ್ಟಿಯ ಕೋಟ್ಯಂತರ ಮಾದರಿಗಳನ್ನು ನಿರ್ಮಿಸಿದನು. ಆದರೆ ನಾಸೂತ್ ಅವೆಲ್ಲವುಗಳ ಸಾರವಾಗಿದೆ. ಅದಕ್ಕಾಗಿ ಅದು ಮಧ್ಯದಲ್ಲಿ ಸ್ಥಿತವಾಗಿದೆ. ನಾಸೂತ್‌ನ ಸಾರವೇ ಮನುಷ್ಯನ ಅಸ್ತಿತ್ವವಾಗಿದೆ. ಮನುಷ್ಯನ ಅಸ್ತಿತ್ವದ ಸಾರವೇ ಬೇಳಕಾಗಿದೆ. ಬೆಳಕಿನ ಮುಂಚೆ ಬೆಳಕಿನ ಹೊರತು ಮತ್ತೇನೂ ಇರಲಿಲ್ಲ ಎಂಬುದು ಪರಂಪರೆಯಿಂದ ಬಂದ ನಂಬಿಕೆಯಾಗಿದೆ.

ಲಾಹೂತ್



ನಾಸೂತ್

ಹೇ ಆತ್ಮೀಯನೇ, ನಾಸೂತ್, ಲಾಹೂತ್‌ನ (ಮಾಧುರ್ಯಲೋಕ) ಸಮ್ಮುಖ ಉದ್ಭವವಾಯಿತು. ನಂತರ ತನ್ನ ಚರಮವನ್ನು ತಲುಪಿತು (ಈ ಹೋಲಿಕೆಯ ಚಿತ್ರದಲ್ಲಿರುವ ವೃತ್ತದಿಂದ ಸ್ಪಷ್ಟವಾಗುತ್ತದೆ) ಯಾವ ರೀತಿ ಚಂದ್ರನು ಸೂರ್ಯನ ನೇರಕ್ಕೆ ಬಂದಾಗ ಅದು ಪರಿಪೂರ್ಣ ಎನಿಸುತ್ತಾನೆ. ಅದಕ್ಕೆ ಹುಣ್ಣಿಮೆ ಅಥವಾ ಪೂರ್ಣ ಚಂದ್ರ ಎಂದೂ ಕರೆಯುತ್ತಾರೆ. ಮೂಲವಾಗಿ ಕಣ್ಣಿನಂತೆ ಚಂದ್ರನಿಗೂ ಸ್ವಯಂ ಪ್ರಕಾಶವಿಲ್ಲ ಸೂರ್ಯನ ಹೊರತಾಗಿ. ಇದೇ ರೀತಿ ಲಾಹೂತ್‌ನ ಹೊರತಾಗಿ ನಾಸೂತ್‌ಗೂ ಯಾವುದೇ ಅಸ್ತಿತ್ವವಿಲ್ಲ. ತಮ್ಮ ತಮ್ಮ ಶೋಧದಂತೆ ಹಲವರು ಇದನ್ನು ಛಾಯೆ ಅಥವಾ ಪ್ರತಿಬಿಂಬವೆಂದು ಭಾವಿಸಿದರು.

ಸ್ವಯಂ ತನ್ನ ರೌದ್ರತೆಯನ್ನು ಕಾಣುವ ಸಲುವಾಗಿ,
ಕಣ್ಣಿನ ಮಾರ್ಗದಿಂದ ಅದು ಸೌಂದರ್ಯವೆನಿಸಿತು.

ಇದಕೆ ಸರ್ವಥಾ ಇಷ್ಟವಿರಲಿಲ್ಲ ಅವನತಿ,
ಹೀಗಾಗಿ ಅವನು ನಿಪುಣ ವ್ಯಕ್ತಿಯಾದನು.

ಈ ರೌದ್ರತೆ ಹಾಗೂ ಸೌಂದರ್ಯದ ಬಗ್ಗೆ ಕೇಳು ಗೆಳೆಯನೆ,
ದೈವೀಜ್ಞಾನವು ಕೋಳಿಯ ರೆಕ್ಕೆ-ಪುಕ್ಕಗಳಾದವು.

ಆದರೆ ಮನುಷ್ಯನು ಈ ಸೌಂದರ್ಯದಿಂದಲೇ,
ಗೌರವಾದರ ಹಾಗೂ ಮಿಲನದ ಅರ್ಹನಾದನು.

ವಿಶ್ವಾಸವಿರಿಸು, ಹೇ ಚಿತ್ರಕಾರನೇ, ಆ ಹಂತದವರೆಗೆ,
ಅವನ ಪ್ರತಿ ಚಿತ್ರವೂ ಅವನತಿಯಿಂದ ಹೊರತಾಗಿರಲಿ.

ಬಹರಿ 'ನಾಸೂತ್'ನ ವರ್ಣನೆಯಲ್ಲೂ ಸಹ,
ನಿನ್ನ ವಚನಗಳು ಮಾಣಿಕ್ಯದಂತಾದವು.

ಆಭರಣ-೭೨

ಸೃಷ್ಟಿಯ ಹಂತಗಳು

ಅಸ್ತಿತ್ವ ಪೀಠದ ಚಕ್ರವರ್ತಿಯು ಸ್ವಯಂ ತನ್ನನ್ನು ಪ್ರಕಟಪಡಿಸುವ ಇಚ್ಛುಕನಾದಾಗ, ಅರ್ಥಾತ್ ಯಾರಾದರೂ ಇವನನ್ನೂ ಅಲ್ಲಾಹನೆಂದು ನಂಬಲಿ ಹಾಗೂ ಅವನ ದಾಸ್ಯರಾಧನೆಯನ್ನು ಸ್ವೀಕರಿಸುವಂತಾಗಲಿ ಎಂದು ಭಾವಿಸಿದಾಗ, ತನ್ನ ಸರ್ವಶಕ್ತತೆಯ ಹಾಗೂ ನೈಪುಣ್ಯತೆಯ ಸಾಮರ್ಥ್ಯದಿಂದ ನಾಲ್ಕು ಲೋಕಗಳನ್ನು ಸೃಷ್ಟಿಸಿದನು. ಲಾಹೂತ್ (ಮಾಧುರ್ಯ ಲೋಕ), ಜಬರೂತ್ (ಐಶ್ವರ್ಯ ಲೋಕ), ಮಲಕೂತ್ (ದೇವಲೋಕ) ಹಾಗೂ ನಾಸೂತ್ (ನರಲೋಕ). ಲಾಹೂತ್‌ನಲ್ಲಿ ಏನು ಇಷ್ಟವೋ ಅದೆಲ್ಲಾ ಸಾಧ್ಯವಾಗುತ್ತಿದ್ದರೆ, ಜಬರೂತ್‌ನ ಅವಶ್ಯಕತೆಯೇ ಇರಲಿಲ್ಲ ಜಬರೂತ್‌ನಲ್ಲಿ ಅದೆಲ್ಲಾ ಸಾಧ್ಯವಾಗುತ್ತಿದ್ದರೆ, ಮಲಕೂತ್‌ನ ಸೃಷ್ಟಿಯಾಗುತ್ತಿರಲಿಲ್ಲ. ಇದೇ ರೀತಿ ನಾಸೂತ್‌ದವರೆಗೆ ಕಲ್ಪಿಸಿಕೊಳ್ಳಬಹುದು. ಅಕಸ್ಮಾತ್ ನಾಸೂತ್‌ನಿಂದಲೂ ದರ್ಶನವಾಗದಿದ್ದರೆ, ಮತ್ತೊಂದು ಐದನೆ ಲೋಕದ ಅವಶ್ಯಕತೆ ತಲೆದೋರುತ್ತಿತ್ತು. ಆದರೆ ನಾಸೂತ್‌ನಲ್ಲಿ ಆದಿಯಿಂದ ದೈವೇಚ್ಛೆಯ ಅನುಸಾರ ಪರಿವೀಕ್ಷಣೆಯಾಯಿತು. ವಾಸ್ತವವಾಗಿ ನಾಸೂತ್ ಸಮಸ್ತ ಹಂತಗಳ ಸಂಗ್ರಾಹಕವಾಗಿದೆ ಹಾಗೂ ಸಮಸ್ತ ಅಸ್ತಿತ್ವ ಪದವಿಗಳ ಜೀವವಾಗಿದೆ. ವಾಸ್ತವವಾಗಿ ಯಾವುದನ್ನು ಅಸ್ತಿತ್ವವೆಂದು ಕರೆಯಬಹುದು, ಅದು ಇದೇ ಸ್ಥಳದಲ್ಲಿ ಪೋಷಣೆಯನ್ನು ಪಡೆಯಿತು. ಹೀಗಾಗಿ 'ವ್ಯಾರಿಫತ್'ನ ಸತ್ಯತೆಯ ಮೇಲೆ ಚರ್ಚಿಸಲಾದ ಮೂರು ಅರ್ಹತೆಗಳಲ್ಲಿ ಅಸಾಧ್ಯವಾಗಿತ್ತು. ಅದು ಇದೇ ಅರ್ಹತೆ (ನಾಸೂತ್)ಯಲ್ಲಿ ಉದ್ದಿಷ್ಟದಂತೆ ನೆರವೇರಿದೆ.

ಹೇ 'ಏಕತ್ವ' ಸೂರ್ಯದ ಆದಿ ಪ್ರಾಸವೇ,
ಹೇ ಆದಿಪ್ರಾಸದ ಸಾಕ್ಷಿ ಅಂತ್ಯ ಪ್ರಾಸವೇ.

ಆದಿ–ಅಂತ್ಯ ಪ್ರಾಸಗಳಲ್ಲಿ ಇಹುದು ಗುಟ್ಟು,
ಸವಿನಯದಿಂದ ಕೇಳು, ತೋರಬೇಡ ಬೆಡಗು.

ಆದಿಪ್ರಾಸ ಆಗಿಹುದು ಲಾಹೂತ್‌ನ ಅರ್ಹತೆಯು,
ಅಂತ್ಯಪ್ರಾಸ ಆಗಿಹುದು ಈ ಭುವನ ನಾಸೂತ್.

ಆದಿಪ್ರಾಸಕೆ ಉಂಟು ದೀರ್ಘ ನೆಲೆಯು,
ಅಂತ್ಯಪ್ರಾಸದಲಿ ಬಂಧಿತವು ಸಮಸ್ತ ಕಥನ.

ಆದಿಪ್ರಾಸವು ಆಗಿಹುದು ಹಾಲುಕುಡಿವ ಶಿಶು,
ಅಂತ್ಯಪ್ರಾಸವು ಆಗಿಹುದು ನವಚೇತನ ಯೌವ್ವನ.

ಸಮಯೋಚಿತ ರುಬಾಯಿ[೧] ಆಗಿಹುದು ಪರಿಪೂರ್ಣ,
ಅದರ ಅಂತ್ಯಪ್ರಾಸವು ಆಗಿಹುದು ಸಮಸ್ತ ಸಾರ.

ಭೂಮಿಯೊಳಗಿರುವ ಬೀಜವು ಆಗಿಹುದು ಆದಿಪ್ರಾಸ,
ಪ್ರಕಟವಾದ ಹೂ, ಹಣ್ಣು ಆಗಿಹುದು ಅಂತ್ಯಪ್ರಾಸ.

ಅಂತ್ಯ ಪ್ರಾಸದ ಹೊರತು, ಬಯಸುವುದಾದರೂ ಏನನ್ನು,
ಸಂಪರ್ಕವಿಡು ನೇರವಾಗಿ ಆದಿಪ್ರಾಸದ ಜೊತೆ.

ಹೀಗಾಗಿ ಅಸಾಧ್ಯವಿರುವುದು ಇದು ಹೇ 'ಬಹರಿ',
ಜೀವ ನೀಡಿಯಾದರೂ ಪ್ರಾಪ್ತವಾಗಲಿ ಆ ಆಪೇಕ್ಷೆಯು.

ಹೀಗಾಗಿ ಈ 'ನಾಸೂತ್' ನಿಜಕ್ಕೂ ಚಿತ್ರ–ವಿಚಿತ್ರ ಹಂತವಾಗಿದೆ. ಇದು ಆದಿ ಹಾಗೂ ಅಂತ್ಯದ ಮಧ್ಯವಾಗಿದ್ದು, ಬಾಲ್ಯ ಹಾಗೂ ಮುಪ್ಪಿನ ಮಧ್ಯದ ಯೌವ್ವನದಂತಿದ್ದು, ಅದು ಆರಂಭ ಹಾಗೂ ಅಂತ್ಯದ ಸಾರದಂತಿದೆ.

ಹೇ ಆತ್ಮೀಯನೇ, ಈ ನಾಲ್ಕು ಹಂತಗಳಿಂದ ಅರಿವಾಗುವುದೆನೆಂದರೆ ಯಾವುದು ನೋಟ ಹಾಗೂ ಸ್ಪರ್ಶಕ್ಕೆ ಅರಿವಾಗುವುದು ಅದು ನಾಸೂತ್ ಆಗಿದೆ. ಮಲಕೂತ್ ಸರ್ವ ರೀತಿಯಿಂದಲೂ ನಾಸೂತ್ ತರಹವೇ ಇದೆ. ಇವೆರಡರ ಮಧ್ಯೆಯ ರೇಖೆಯು, ದರ್ಪಣದ ಪ್ರತಿಬಿಂಬ ಹಾಗೂ ಮೂಲ ಆಕೃತಿಯದಾಗಿದೆ. ಯಾವುದೇ ವ್ಯಕ್ತಿಯು

---

೧. ರುಬಾಯಿ – ಚತುಷ್ಪದಿ ಕವನ

ಈ ಲೋಕವನ್ನು ಪ್ರಕಟ ಕಣ್ಣಿನಿಂದ ಕಂಡರೆ ಅದು 'ನಾಸೂತ್' ಆಗಿದೆ. ಕಣ್ಣನ್ನು ಮುಚ್ಚಿ, ಅಂತರ್ದೃಷ್ಟಿಯಿಂದ ನೋಡಿದರೆ ಅದು ಮಲಕೂತ್' ಆಗಿದೆ. ಜಬರೂತ್ ಅಂಧಕಾರದ ಸ್ಥಳವಾಗಿದ್ದು, ಅದು ಅಸ್ತಿತ್ವದಿಂದ ನಿರೋಧಿಸಲ್ಪಟ್ಟಿದ್ದು ಆಗಿದೆ. ಅರ್ಥಾತ್ ಯಾವುದೇ ಅಸ್ತಿತ್ವಕ್ಕೆ ಇದರಲ್ಲಿ ದರ್ಶನ ಪ್ರಾಪ್ತಿ ಸಾಧ್ಯವಿಲ್ಲ. ಲಾಹೂತ್ ಈ ಅಂಧಕಾರ (ಜಬರೂತ್)ವನ್ನು ನೋಡುವನಾಗಿದ್ದಾನೆ ಹಾಗೂ ಸಾಕ್ಷ್ಯ ಪವಿತ್ರವಾಗಿದೆ. ಹೇ ಆತ್ಮೀಯನೆ, ಲಾಹೂತ್ ಪ್ರಕಾಶವಾಗಿದೆ. ಜಬರೂತ್ ಆತ್ಮ ಮಲಕೂತ್ ಹೃದಯ ಹಾಗೂ ನಾಸೂತ್ ದೇಹವಾಗಿದೆ.

ನಾಸೂತ್ ಲೋಕವು ಆದಿ ಮತ್ತು ಅಂತ್ಯದ ಮಧ್ಯೆವಿದೆ.
ಹುಡುಗತನ ಹಾಗೂ ಗುರುತನದ ಮಧ್ಯೆ ಇರುವುದೆ ತಾರುಣ್ಯ.

ಹುಡುಗತನ ಹಾಗೂ ಗುರುತನದ ಸಂಬಂಧವನ್ನು ನೀಡಲಾರೆ ಅರ್ಧಾಣೆ,
ಜೀವ ನೀಡಿಯಾದರೂ ಖರೀದಿಸುವೆ ನನ್ನ ಈ ತಾರುಣ್ಯ.

ವೃದ್ಧ, ಬಾಲನಿಗೂ ಎಲ್ಲಿದೆ ತನ್ನ ಹಾಗೂ ಅನ್ಯರ ಅರಿವು,
ತನ್ನರಿವಿದ್ದರೆ ಸೃಷ್ಟಿಕರ್ತನು ಅರಿವುದು ಈ ತಾರುಣ್ಯ.

ಪ್ರತಿ ಸಂಬಂಧವು ಮುರಿಯವವನೇ ಆಗಿಹನು ವೃದ್ಧ,
ಹುಬ್ಬಿನ ಕಮಾನಿಗೆ ಮನ ಸೋಲುವ ಪ್ರಮತ್ತು ಈ ತಾರುಣ್ಯ,

ನೋವಿದೆ ಇಂದು, ಇರಲಿಲ್ಲ ನಿನ್ನೆ, ಇರಲಾರದು ನಾಳೆ 'ಬಹರಿ'
ಮತಪಂಥಗಳ ಗೊಂದಲದಿ, ನೋವಿನಲಿ ಇಹುದು ಈ ತಾರುಣ್ಯ.

ಆಭರಣ-೭೩

'ಷರಿಯತ್' (ಧಾರ್ಮಿಕ ವಿಧಿವಿಧಾನಗಳು) ನೈಜವಾಗಿ ಪರಂಸತ್ಯವಾಗಿದೆ.

ಯಾವುದೇ ವ್ಯಕ್ತಿ ಈ ಮಾತನ್ನು ಗ್ರಹಿಸುವವನಾಗಿದ್ದರೆ, ಅಥವಾ ಕನಿಷ್ಟಪಕ್ಷ ಅವನು ಊಹಿಸುವಂತನಾಗಿದ್ದರೂ ಈ ವಿಷಯವನ್ನು ಚೆನ್ನಾಗಿ ಅರಿಯಬಲ್ಲನು, ಅದೇನೆಂದರೆ ಧಾರ್ಮಿಕ ವಿಧಿವಿಧಾನಗಳ ಅನುಸರಣೆ ನೈಜವಾಗಿ ಪರಂಸತ್ಯದ ಸಾಕ್ಷಾತ್ಕಾರವಾಗಿದೆ. ಇವುಗಳ ಮಧ್ಯೆ ಕೂದಲೆಳೆಯ ವ್ಯತ್ಯಾಸವೂ ಇಲ್ಲ. ಸದ್ಯಕ್ಕೆ ಇಸ್ಲಾಮಿನ ಪವಿತ್ರ ವಚನವನ್ನೇ (ಕಲಿಮಾ-ಎ-ತಯ್ಯಾಬಾ) ತೆಗೆದುಕೊಳ್ಳಿ. ಇದು ಇಸ್ಲಾಮಿನ ಬುನಾದಿಯಾಗಿದೆ. ಆದರೆ ಜನರು ಇದರ ಕುರಿತಾಗಿ ಕೇವಲ ಇಷ್ಟೇ

ಅರಿಯುತ್ತಾರೆ, ಅದೇನೆಂದರೆ ಇದು ಶುದ್ಧವಾಗಿ ಷರಿಯತ್ತಿನ ಅನುಮೋದಕವಾಗಿದೆ. ಆದರೆ ಇದು ಷರಿಯತ್ತಿನ ಅನುಮೋದಕವು ಆಗಿವೆ, ಜತೆಗೆ ಪರಂಸತ್ಯದ ಸಾಕ್ಷಾತ್ಕಾರದ ಕಡೆ ತಲುಪಿಸುತ್ತವೆ ಎಂದು ಅರಿಯಲಾರರು.

ಕೊನೆಯದಾಗಿ ಅದೇ ನೇರಮಾರ್ಗವು ನಿಜವ್ಯಕ್ತವಾಗಿಹುದು ಹೇ ಸ್ನೇಹಿತನೇ,
ಪರಮಪ್ರೇಮಿ ಇರದಿದ್ದರೆ ಈ ಸಮಸ್ತವು ಕೆಡಕು ಆಗಿರುತ್ತಿತ್ತು.

'ಷರಿಯತ್ತ್'ನಲ್ಲಿ ದೇವರು ಶತಸಿದ್ಧನಾಗಿದ್ದಾನೆ, ಅನ್ಯರ ಜೊತೆ ಆದರೆ ವಾಸ್ತವಿಕವಾಗಿ. ಅನ್ಯ ರಹಿತತೆಯ ಪವಿತ್ರ ವಚನ (ಕಲೀಮಾ)ದಲ್ಲಿ ಸುಸ್ಪಷ್ಟ ಸಾಕ್ಷ ನುಡಿಯಲಾಗಿದೆ, ಅದೇನೆಂದರೆ 'ಬೇರೆ ಯಾರೂ ಇಲ್ಲ, ಆದರೆ ಅಲ್ಲಾಹನ ಹೊರತಾಗಿ' ಅರ್ಥಾತ್ ಇಲ್ಲ ಅನ್ಯರ ನಿರಾಕರಣೆಯಾಗಿದೆ ಹಾಗೂ ಸತ್ಯತ್ವದ ಸಾಕ್ಷ್ಯವನ್ನು ಒದಗಿಸುತ್ತದೆ. ಇದೇ ಮ್ವಾರಿಫತ್‌ನ ಸಾರಾಂಶವಾಗಿದೆ.

ಎರಡು ಲೋಕದಲೂ, ಬುದ್ಧಿವಂತನಾಗಿರುವವನು,
ಅರಿಯುವನು ಅವನ ಪ್ರಕಟ ನಾಮಗಳನ್ನು.

ಎಲ್ಲವೂ ಸತ್ಯದ ಪ್ರಕಟರೂಪದಿಂದ ಪ್ರಕಟವಾಗಿವೆ,
ಇಲ್ಲವಾದರೆ ಏನಿಹುದು ಈ ಚಂದ್ರ, ಈ ಮೀನು, ಈ ಆಕಾಶ?

ಆಭರಣ–೭೪

ಮನುಷ್ಯನು ರೌದ್ರತೆ ಹಾಗೂ ಸೌಂದರ್ಯದ ಸಂಮಿಶ್ರಣವಾಗಿದ್ದಾನೆ

ನೀನು ಪ್ರೇಮಿಯ ಸೌಂದರ್ಯವನ್ನು ವೀಕ್ಷಿಸಬಯಸಿದರೆ, ಕಣ್ಣನು ತೆರೆ ಹಾಗೂ ಈ ಲೋಕ ಚಿತ್ರಶಾಲೆಯ ಪ್ರವಾಸ ಮಾಡು ಮತ್ತು ನಿನ್ನ ಹೃದಯವು ರೌದ್ರತೆಯ ದರ್ಶನ ಬಯಸಿದರೆ ಕಣ್ಣನ್ನು ಮುಚ್ಚಿಕೊಳ್ಳು ನೀನು ಇವರೆಡನ್ನು (ಜಲಾಲ್ ಹೂ ಜಮಾಲ್–ಅರ್ಥಾತ್ ಸೌಂದರ್ಯ ಮತ್ತು ರೌದ್ರತೆ) ಒಂದೇ ಸ್ಥಾನದಲ್ಲಿ ನೋಡಬಯಸುವುದಾದರೆ, ನಿನ್ನನ್ನೆ ನೋಡು, ಯಾಕೆಂದರೆ ನೀನೆ ಜಲಾಲ್ ಹಾಗೂ ಜಮಾಲ್‌ನ ಸಮ್ಮಿಶ್ರಣವಾಗಿದ್ದೀಯ.

ಹೇ ಬುದ್ಧಿವಂತನೇ, ಈ ಏಕತ್ವ ಹಾಗೂ ಬಹುತ್ವ,
ಕಣ್ಣುರೆಪ್ಪೆಯ ತೆರೆಯುವಿಕೆ ಹಾಗೂ ಮುಚ್ಚುವಿಕೆಯಲ್ಲಿ ಬಂಧಿಯಾಗಿದೆ.

ಆಭರಣ–೭೫

ಮನುಷ್ಯನು ಜತೆಜತೆಯೂ ಜತೆರಹಿತವೂ ಆಗಿರುವನು

ಪರಂಸತ್ಯದ ಹೊರತು ಏನೆಲ್ಲಾ ಇದೆಯೋ ಅದೇ ಬ್ರಹ್ಮಾಂಡವಾಗಿದೆ. ಬ್ರಹ್ಮಾಂಡವು ಸೆರೆಯಾಳಾದ ಶರೀರವಾಗಿದೆ ಹಾಗೂ ಈ ಶರೀರದ ಜೀವವು ಮನುಷ್ಯನಾಗಿದ್ದಾನೆ. ಮನುಷ್ಯನ ಜೀವಕ್ಕೆ ಪರಂಸತ್ಯನ ಅನುಭಾವದ ಪ್ರಕಾಶದಿಂದ ಮುಂದಾಳತ್ವದ ಕೊಡುಗೆಯಾಯಿತು. ಇದು ಅಸಂಗತ ಸಂದೇಹಗಳಿಂದ ಹಾಗೂ ತುಚ್ಛ ವಿಚಾರಗಳಿಂದ ಮುಕ್ತವಾಗಿ ಪವಿತ್ರವಾಗಿದೆ. ಚಂದ್ರನಿಂದ ಮೀನಿನವರೆಗೆ ಪ್ರತಿ ವಸ್ತುವೂ ಅರ್ಹತೆಯ ಪ್ರಕಟರೂಪದಲ್ಲಿ ದೇದೀಪ್ಯಮಾನವಾಗಿವೆ. ಇದೇ ಪ್ರಕಟರೂಪ ಸಂಬಂಧವೇ ದೇವರ ಜತೆಗಿದೆ. ಹೀಗಾಗಿ ಪರಿಪೂರ್ಣ ಮನುಷ್ಯನಿಗೆ ಅವಶ್ಯಕವೇನೆಂದರೆ ಎಲ್ಲವನ್ನೂ ತನ್ನ ತಿಳಿವಿನ ಪ್ರಕಾರ ಅರಿತಿರಬೇಕು. ಹಾಗೆಯೇ ಎಲ್ಲರಿಂದ ಪರಿತ್ಯಾಗಿಯೂ ಆಗಿರಬೇಕು. ಹೀಗಾಗಿ ಪರಿಪೂರ್ಣ ಮನುಷ್ಯನು ಜತೆಜತೆಯೂ ಹಾಗೂ ಜತೆರಹಿತತೆಯೂ ಇದೇ ತೆರೆಯಿಂದ ಪ್ರಕಟನಾಗುತ್ತಾನೆ. ಅಂತರ್ದೃಷ್ಟಿಯ ಕಣ್ಣಿನಿಂದ ನೋಡುತ್ತಾ ಇರು ನೀನು.

ಬ್ರಹ್ಮಾಂಡ ಶರೀರವು, ಜೀವವಾಗಿದ್ದಾನೆ ಮನುಜನು,
ಪ್ರಕಟರೂಪವೂ ಮನುಜನು, ಸುಪ್ತರೂಪವೂ ಮನುಜನು.

ಮನುಜ ಜೀವವು ಆಗಿಹುದು ವಿಶೇಷ ಏಕಾಂತಧಾಮ,
ನೆಲೆಸಿಹುದು ಇವರಲ್ಲಿ ಪ್ರೇಮ ಹಾಗೂ ನಿಷ್ಕಪಟ ಆರಾಧನೆ.

ಯಾವ ಜೀವ ಇರಲಿ, ಗುರುತು ಹಾಗೂ ನಾಮವು,
ಇದರಲಿ ಇದೆ ಪಕ್ವವೂ, ಇಹುದು ನಿಶ್ಚಿತ ಅಪಕ್ವವೂ.

'ಆರಿಫ್'ನು ಅವನು ಯಾವನು ಅರಿಯನು ನಾಳೆಯನು,
ತನ್ನ ಹೊರತು ಬೇರೆಡೆಗೆ ಹರಿಸನು ತನ್ನ ನೋಟವನು.

ಆದರೆ ತನ್ನ 'ಸ್ವಯಂ' ಬಗ್ಗೆ ಗರ್ವಿತನಾಗದಿರಲಿ ಅವನು,
'ಸ್ವಯಂ' ಅನ್ನು 'ಸತ್ಯ'ದಲಿ ಅಳಿಸಲಿ 'ಸ್ವಯಂ' ಅನ್ನು ಮರೆಯಲಿ.

ಇದು ಹಾಗಲ್ಲ, ಅದನು ಅವನು ಸರಿಯಾಗಿ ಅರಿಯನು,
ಇದು ಸುಸ್ಪಷ್ಟ, ನಿಷ್ಕಳಂಕ, ಪಾತಕವನ್ನು ಅರಿಯನು ಅವನು.

'ಬಹರಿ' ನೀ 'ಸ್ವಯಂ' ಅನ್ನು 'ಸ್ವಯಂ' ಆಗಿ ಅರಿಯಲಿಲ್ಲ,
ಹಾಂ! ಬಂದಿಹುದು ಅರಿವು ಅವನಿಗೆ, ಅವನ ದೇವರಿಂದ.

ಊರುಸೇ–ಇರ್ಫಾನ್ (ಮನ್ ಲಗನ್) / ೧೬೧

ಆಭರಣ-೭೬

ಅಸ್ತಿತ್ವವು, ಪ್ರಕಟರೂಪದ ನಂತರವೂ ಆನೆ ಕಾಲಿನ ಸರಪಳಿಯಂತಿದೆ

ಜಗತ್ತು ಒಂದು ಭ್ರಾಮಕ ಪ್ರತಿರೂಪವಾಗಿದೆ, ಹಗಲು, ರಾತ್ರಿ, ಬೆಳಗು, ಪೂರ್ವಾಹ್ನ, ಮಧ್ಯಾಹ್ನ, ಅಪರಾಹ್ನ, ಸಾಯಂಕಾಲ-ಗಳು ಸೂರ್ಯನ ಚಲನೆಯಿಂದ ನಿರ್ಭರವಾಗಿವೆ. ಆದರೆ ಇವುಗಳಿಗೆ ಯಾವುದೇ ಅಸ್ತಿತ್ವವಿಲ್ಲ, ಸೂರ್ಯನ ಹೊರತಾಗಿ. ಅದಲ್ಲದೆ ಪ್ರತಿಯೊಂದರ ಕಾರ್ಯದಲಿ ಭಿನ್ನತೆ ಇದ್ದು, ಅವುಗಳ ಪ್ರಾಕೃತಿಕ ಸ್ಥಿತಿಯು ಬೇರೆ ಬೇರೆಯಾಗಿದೆ. ಹೀಗಾಗಿ ಬೆಳಗಿನ ನಮಾಜನ್ನು ಸಾಯಂಕಾಲ ಸ್ವೀಕಾರ್ಹವಿಲ್ಲ. ಇವೆಲ್ಲವುಗಳ ಪ್ರಕಟರೂಪದಲ್ಲಿ ಸೂರ್ಯನ ವ್ಯಯ ಏನೂ ಇಲ್ಲ. ಅವನಲ್ಲಿ ಯಾವುದೇ ಕೊರತೆಯಾಗುವುದಿಲ್ಲ. ಅರ್ಥಾತ್ ಸತ್ಯದ ಅಸ್ತಿತ್ವದಿಂದ ಇತರ ಅಂಗ-ಅಂಶಗಳ ವ್ಯಕ್ತತೆ ಇದೆಯೇ ವಿನಾಃ ಪರಮಸತ್ಯದಲ್ಲಿ ಏನೂ ಕೊರತೆ ಉಂಟಾಗುವುದಿಲ್ಲ.

ಸಮಸ್ತ ಕಾಲಮಾನಗಳು ಸೂರ್ಯನ ಗತಿಯಿಂದ ನಿರ್ಮಿತವಾಗಿವೆ ಬೆಳಗು, ಪೂರ್ವಾಹ್ನ, ಮಧ್ಯಾಹ್ನ, ಅಪರಾಹ್ನ, ಸಾಯಂಕಾಲದ ಆವಸ್ಥೆಗಳು ಆದರೆ ಸೂರ್ಯನ ಅಸ್ತಿತ್ವವು ತಿಲಮಾತ್ರವೂ ಕ್ಷೀಣಿಸುವುದಿಲ್ಲ. ಆದರೆ ಇದರಿಂದ ಪ್ರಕಾಶದ ಗತಿಗಳು ಇಹವು ಭಿನ್ನಭಿನ್ನ.

ಆಭರಣ-೭೭

ವ್ಯಕ್ತರೂಪದ ಮೂರು ಮಜಲುಗಳು

ಮಹಾಮಹಿಮ ಪರಂಸತ್ಯನು ತನ್ನನ್ನು ವ್ಯಕ್ತರೂಪಗೊಳಿಸಲು ಇಚ್ಛುಕನಾದಾಗ, ತನ್ನ ಪವಿತ್ರ ಅಸ್ತಿತ್ವದಿಂದ ಪರಮ ಪ್ರೇಮವನ್ನು ಸೃಷ್ಟಿಸಿದನು ಹಾಗೂ ಪರಮಪ್ರೇಮದಿಂದ ದಿವ್ಯಜ್ಞಾನ, ದಿವ್ಯಜ್ಞಾನದಿಂದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಮತ್ತೆ ಅವನಿಗೆ ಇದು ಬೇಡವೆನಿಸಿದಾಗ ಇವೆಲ್ಲವನ್ನು ಶೂನ್ಯಗೊಳಿಸಬಹುದು ದೈವಾಜ್ಞೆಯಾದಾಗ ದಿವ್ಯಜ್ಞಾನ ಬ್ರಹ್ಮಾಂಡವನ್ನು ನುಂಗಬಹುದು. ಅದೇ ರಿತಿ ಪರಮಪ್ರೇಮ ದಿವ್ಯಜ್ಞಾನವನ್ನು, ದಿವ್ಯಜ್ಞಾನ ಅಸ್ತಿತ್ವವನ್ನು ನುಂಗಿ, ಆದಿಯಲ್ಲಿ ಯಾವ ಸ್ಥಿತಿಯಿತ್ತು ಮತ್ತೆ ಅಲ್ಲಿಗೆ ತಲುಪಬಹುದು. ಇದೊಂದು ತ್ರಿಕೋಣದಂತಿದೆ.

ದಿವ್ಯಜ್ಞಾನದಿಂದಲೇ ಪ್ರಕಟ ಇಹುದು ಸಮಸ್ತ ಬ್ರಹ್ಮಾಂಡವು,
ಪರಂಸತ್ಯ ಬಯಸಿದರೆ ಇದಾಗಬಹುದು ಸರ್ವನಾಶ.

ನುಂಗಿ ಜೀರ್ಣಿಸಬಹುದು, ಬ್ರಹ್ಮಾಂಡವನು ಈ ದೈವೀಜ್ಞಾನ,
ಅದೇ ತರಹ ಪರಮ ಪ್ರೇಮವನು ಈ ದೈವೀಜ್ಞಾನವು.

'ಏಕ'ನ ಅಸ್ತಿತ್ವವು ಹೀರುವುದು ಪರಮಪ್ರೇಮವನು,
'ಬಹರಿ' ಅದೇ ಆಗುವುದು ಅಸ್ತಿತ್ವದ ಪ್ರಾಮುಖ್ಯವು.

ಆಭರಣ–೭೮

ಬ್ರಹ್ಮಾಂಡವು ಜೀವದ ದರ್ಪಣವಾಗಿದೆ, ಹಾಗೂ ಜೀವವು 'ಪರಮಪ್ರೇಮಿ'ಯ ದರ್ಪಣವಾಗಿದೆ.

ಮೂಲಭೂತ ಪದಾರ್ಥ ಘಟಕಗಳಿಂದಾದ ದೇಹದಿಂದ ಪರಮೋಚ್ಚ ಸತ್ಯ ಅಸ್ತಿತ್ವದವರೆಗೆ ಅಸಂಖ್ಯಾತ ಹಂತಗಳು, ಅಗಣಿತ ಮಜಲುಗಳಿವೆ. ಆದರೆ ಬ್ರಹ್ಮಜ್ಞಾನಿಗಳ ಎದೆಯಿಂದ ಎದೆಗೆ ಇದು ಜ್ಞಾನರೂಪವಾಗಿ ಪ್ರವಹಿಸಿತು. ಇದಕ್ಕೆ ನಿಶ್ಚಿತ ಎಲ್ಲೆಕಟ್ಟುಗಳನ್ನು ನಿಶ್ಚಯಿಸಲ್ಪಟ್ಟವು, ಅವು ಕೆಲವರ ಪ್ರಕಾರ ಹದಿನೈದಾದರೆ ಮತ್ತೆ ಕೆಲವರ ಪ್ರಕಾರ ಐದು. ಒಟ್ಟಾರೆ ಈ ಅಲ್ಪ ನೋಡುಗನ ದೃಷ್ಟಿಯಲ್ಲಿ ಒಂದು ತ್ರಿಕೋನದಂತೆ ಕಂಡಿತು. ಅವೆಂದರೆ ಬ್ರಹ್ಮಾಂಡ, ಜೀವ ಹಾಗೂ ಪರಮಪ್ರೇಮಿ. ಬ್ರಹ್ಮಾಂಡವು ಜೀವದ ದರ್ಪಣ ಹಾಗೂ ಜೀವವು, ಪರಮಪ್ರೇಮಿಯ ದರ್ಪಣವಾಗಿ ತೋರಿತು. ಅಸ್ತಿತ್ವವು ಕೇವಲ ಮಹಾಮಹಿಮ ಪರಮಸತ್ಯದ ಶೋಭಿತವಾಗಿದ್ದು, ಉಳಿದೆರಡು ಅದರ ದರ್ಪಣಗಳಾಗಿವೆ. ಹೀಗಾಗಿ ಬ್ರಹ್ಮಾಂಡವು ದರ್ಪಣದ, ದರ್ಪಣವಾದ ಜೀವದ್ದಾಗಿದೆ ಹಾಗೂ ಜೀವವು ಪರಮಪ್ರೇಮ ಸೌಂದರ್ಯದ ದರ್ಪಣವಾಗಿದೆ.

ಹೇ ಪ್ರಿಯ ಹೃದಯಗಳೇ, ಈ ಹಂತದಿಂದ ಮುಂದೆ ಅಡಿಯಿಟ್ಟಾಗ ಮಾತ್ರ ಅರಿವಾಗುವುದು, ಇದೆಲ್ಲವೂ ಒಂದೇ ಪರಮ ಸೌಂದರ್ಯವಾಗಿದೆ. ಚತುರಮಯ ಪರಮಸೌಂದರ್ಯವು ಆಂತರ್ಯದಿಂದ ಹಾಗೂ ಬಾಹ್ಯದಿಂದ ಚತುರಮಯವಾಗಿದೆ. ಆದರೆ ಇದರಲ್ಲಿ ಯಾವುದೇ ಚ್ಯುತಿ ಇಲ್ಲ ಇದು ನಿತ್ಯನೂತನ ಸದಾ ಶಾಶ್ವತವೂ ಆಗಿದೆ. ಅರ್ಥಾತ್ ಅದು ಸದಾ ಇತ್ತು ಹಾಗೂ ಸದಾ ಇರುತ್ತದೆ.

ವೃಕ್ಷ ಹಾಗೂ ಫಲ, ಫಲದಿಂದ ಆಗುವುದು ಬೀಜ,
ಇದೊಂದು ತ್ರಿಕೋಣ, ಇದನು ನೀ ಚೆನ್ನಾಗಿ ಅರಿ.

ಇದೇ ಪರಮಪ್ರೇಮಿಯೂ, ಜೀವವೂ, ಶರೀರವೂ ಆಗಿಹುದು,
ಇದು ಆಂತರ್ಯದಲ್ಲೂ ಇದೆ. ಬಾಹ್ಯದಲ್ಲೂ ಪ್ರಕಟವಿದೆ.

ನಿಸ್ಸಂದೇಹವಾಗಿ ಈ ಮೂರು ಒಂದೇ ಆಗಿಹವು,
ಇವು ಒಂದರಿಂದ ಇನ್ನೊಂದು ಭಿನ್ನವಾದರೂ ಸಹ.

ದೋಷರಹಿತವು ಇದೊಂದು ಏಕತ್ವದ ವಿಶೇಷವು,
ಏಕದೇವಾರಾಧನೆಗೆ ನಿಷ್ಠನಾದವನು ನಿಜದಲಿ ಆನಂದಿತನು.

ಕುತಂತ್ರ, ಚತುರತೆಯನು ನೀ ದಾಟಿ ಸಾಗು ಹೇ 'ಬಹರಿ'
ನಿನ್ನಲಿ ಇದರಿಂದ ನೆಲಸುವಂತಾಗಲಿ, ದೇಹ, ಜ್ಞಾನ ಹಾಗೂ ಅಸ್ತಿತ್ವ

ಆಭರಣ–೭೯

'ಏಕತ್ವ' ಹಾಗೂ 'ಬಹುತ್ವ'ದ ವಿಶ್ವಾಸ

ಇತ್ತೀಚಿಗೆ ಒಂದು ಅರ್ಥಪೂರ್ಣವಾದಂತಹ ಹೊಸ 'ರುಬಾಯಿ' (ಚತುಷ್ಪದಿ) ಸಹಜ ಪ್ರವೃತ್ತಿಯ ಪರದೆಯಿಂದ ಹೊರಹೊಮ್ಮಿತ್ತು. ಇದರಿಂದ ಹೃದಯದ ಮೇಲೆ ಭಾರವೇನು ಅನಿಸಲಿಲ್ಲ. ಆದರೆ ಇದರ ಅಧ್ಯಯನದಿಂದ ಅದರ ಪಾರಮಾರ್ಥತೆಯ ಮೂಲತಾತ್ಪರ್ಯ ಇಂದಿಗೂ ಗೋಚರಿಸಲಿಲ್ಲ. ಇದರಿಂದ ಪ್ರಾಪ್ತವಾಯಿತೇನೆಂದರೆ ಅಲ್ಲಾಹನು ನಿಸ್ಸಂದೇಹವಾಗಿ ಅನನ್ಯ ಪರಮ ಪ್ರೇಮದ ಸತ್ಯತೆಯಿಂದ, ಪರಮ ಸ್ಥಿತಿಯ ಉತ್ಸಾಹವು ಸಮುದ್ರದ ಅಲೆಗಳ ಬೋರ್ಗರೆತ ಸಾದೃಶ ತರಂಗೋತ್ಕರ್ಷವನ್ನು ಪ್ರಕಟಪಡಿಸಿದಂತಿತ್ತು. ಅದೊಂದು ವಿಲಕ್ಷಣ ರುಬಾಯಿಯಾಗಿತ್ತು. ಇದರ ಅರ್ಥ ವೈಶಾಲ್ಯದಲ್ಲಿ ವಿಹರಿಸಿದಾಗ, ದೇವರಾಣಿ, ಪ್ರಶಂಸೆಯ ಮಗದೊಮ್ಮೆ ದೇವರಾಣಿ, ಅದೇನೆಂದರೆ ಸಮಸ್ತ ಸೃಷ್ಟಿಗಳು ದೈವಭಕ್ತ ಜೀವಿಯ ತರಹ ದೃಷ್ಟಿಯ ಸಮ್ಮುಖದಲ್ಲಿದ್ದವು. ಅದು ಪರಮ ಸತ್ಯದ ಏಕ ಅಸ್ತಿತ್ವವೇ ಆಗಿತ್ತು. ಸೂರ್ಯನ 'ಸಹಭಾಗಿತ್ವ ರಹಿತ ಅಸ್ತಿತ್ವ'ದಂತೆ ತನ್ನ ಸ್ವಯಂ ಅಸ್ತಿತ್ವದಲ್ಲಿ 'ಏಕ'ವಾಗಿತ್ತು. ಅದರ ತೇಜಸ್ಸಿನಲ್ಲಿ ಅನ್ಯತೆಯ ಸ್ವೀಕಾರಾರ್ಹತೆ ಖಂಡಿತವಾಗಿಯೂ ಸಾಧ್ಯವಿರಲಿಲ್ಲ. ಆದರೆ ಅದು ಸಮಸ್ತ ದಿಕ್ಕುಗಳಲ್ಲಿ ತೇಜೋಮಯವಾಗಿತ್ತು. ಇದರಿಂದಾಗಿಯೇ ಬಹುಶಃ ಅವನ ಹೊರತು ಸಮಸ್ತದ ಅಸ್ತಿತ್ವರಹಿತತೆಯ ಶಬ್ದವು ಲೋಕದಲ್ಲಿ ಚಲಾವಣೆಯಲ್ಲಿದ್ದಂತಿತ್ತು. ಅದು ಅದರ ತೇಜೋಪುಂಜಗಳ ಸಂಬಂಧದಿಂದ ಅಸ್ತಿತ್ವದಲ್ಲಿ ಇದ್ದಂತಿದ್ದವು. ಹೀಗಾಗಿ ಲೋಕದಲ್ಲಿ ಕೇವಲ ಏಕತ್ವದ ಶಬ್ದವು ಅವನ ಅಸ್ತಿತ್ವದ ವಿಶ್ವಾಸ–ನಿಷ್ಠತೆಯಿಂದ ಪ್ರಚಲಿತವಾಗಿದೆ. ಪ್ರಕಾಶವು ಸೂರ್ಯನಿಂದ ಬೇರೆಯಾಗುವುದು ಸಾಧ್ಯವೇ ಇಲ್ಲ. ಒಟ್ಟಾರೆ ಏನೆಲ್ಲಾ ಇದೆಯೋ ಅದು ಸೂರ್ಯನಿಂದಲೇ ಇದೆ.

ತಂಪು, ಬಿಸಿ, ಪ್ರಕಾಶ, ಉಷ್ಣ ಇದೆಲ್ಲ ಸೂರ್ಯವಾಗಿಹನು,
ಸೂರ್ಯವಾಗಿಹನು, ಸೂರ್ಯವಾಗಿಹನು ಅವನು ಸೂರ್ಯವಾಗಿಹನು.

ಆಭರಣ–೮೦

ಪರಿಶುದ್ಧಾತ್ಮ ಅಸ್ತಿತ್ವದ ಭೂಮಿಕೆಗಳು

ಏಕದೇವಾರಾಧನೆಯ ವಿಶ್ವಾಸಿಗಳು ಪರಿಶುದ್ಧಾತ್ಮನ ಅಸ್ತಿತ್ವದ ದರ್ಶನದ ನಾಲ್ಕು ಭೂಮಿಕೆಗಳನ್ನು ಪರಿಗಣಿಸುತ್ತಾರೆ. ಅವೆಂದರೆ ನಾಸೂತ್ (ನರಲೋಕ), ಮಲಕೂತ್ (ದೇವಲೋಕ), ಜಬರೂತ್ (ಐಶ್ವರ್ಯ ಲೋಕ) ಹಾಗೂ ಲಾಹೂತ್ (ಮಾಧುರ್ಯ ಲೋಕ). ಯಾವ ರೀತಿ ಹತ್ತಿಯ ಬೀಜದ ಹೊರತು ಹತ್ತಿಯ ನೂಲಿನ ಹಾಗೂ ನೂಲಿನ ಹೊರತು ಬಟ್ಟೆಯ ಅಸ್ತಿತ್ವವಿಲ್ಲ, ಫಲಸ್ವರೂಪ ಹತ್ತಿಯ ಹೊರತು ನೂಲಿನ ಅಸ್ತಿತ್ವವಿಲ್ಲ ಹಾಗೂ ಹತ್ತಿಯ ಬೀಜದ ಹೊರತು ಹತ್ತಿಯ ಅಸ್ತಿತ್ವವಿಲ್ಲ. ಹತ್ತಿಯ ಬೀಜ, ಹತ್ತಿ ಹಾಗೂ ನೂಲು– ಇವು ಮೂರು ಬಟ್ಟೆಯ ಅಸ್ತಿತ್ವದಲ್ಲಿವೆ. ಅರ್ಥಾತ್ ಮೂರು ಶಾಶ್ವತವಾಗಿವೆ. ಯಾವನೇ ವ್ಯಕ್ತಿ ಈ ಮೂರನ್ನು ಶೋಧಿಸಲು ಹೊರಟರೆ ಅವನಿಗೆ ಬಟ್ಟೆಯ ಹೊರತಾಗಿ ಮತ್ತೇನೂ ಸಿಗದು. ಆದರೆ ನನ್ನಂಥ ಅಧಿಕ ಪ್ರಸಂಗಿ ಬುದ್ಧಿಯುಳ್ಳವನು, ಬಟ್ಟೆಯನ್ನು (ಹತ್ತಿಯ) ಬೀಜವೆಂದು ಕರೆದರೆ, ಅವನು ಹುಚ್ಚರ ಸಮೂಹದಲ್ಲಿ ಪರಿಗಣಿಸಲ್ಪಡುತ್ತಾನೆ. ಏಕದೇವ ವಿಶ್ವಾಸಿಗಳ ಸರದಾರರೆಂದು ಪ್ರಸಿದ್ಧರಾದ ಮಾನ್ಯ ಮನ್ಸೂರರು ಸಹ ಈ ಸ್ಥಾನದ ಚರಮದಿಂದಲೇ 'ಅಹಂ' (ಅನಲಹಕ್) ಅನ್ನು ಪ್ರಾಪ್ತಿಸಿದ್ದರು.

ಹೇ ಆತ್ಮೀಯರೇ, ದೇವರನ್ನು ನೋಡಬಹುದಾಗಿದೆ ಹಾಗೂ ಅರಿಯಬಹುದಾಗಿದೆ. ಆದರೆ ವಿಧೇಯ ಮನುಜರಿಗಲ್ಲ. ಯಾಕೆಂದರೆ ವಿಧೇಯತೆಯ ಸಂಬಂಧ ಹೊಂದಿದವನಿಗೆ ವಿಧೇಯ ಎನ್ನುತ್ತಾರೆ. ವಿಧೇಯತೆಯು ಅಸ್ತಿತ್ವದ ಮೂಲಭೂತ ಸಂಬಂಧಕ್ಕೆ ಕಡ್ಡಾಯವೂ ಅನಿವಾರ್ಯವೂ ಆಗಿದೆ.

ಬಾಹ್ಯ ಪ್ರಕಟರೂಪದಲಿ ವಿಧ್ವಂಸಕವಾಗಿರುವೆನು ನಾನು,
ಆಜ್ಞಾಪಾಲನೆಯ ವಿಷಯದಲಿ ಬಾದಶಾಹನು ನಾನು.

ಆದರೆ ಈ ಶರೀರವು, ಆ ದೇವ ಇಚ್ಛೆಯ ಕೃಪೆ,
ಜ್ಞಾನದ ಸೈನ್ಯ, ದೈವೀಜ್ಞಾನವಾಗಿಹೆನು ನಾನು.

ಹೀಗಾಗಿ ಮನುಷ್ಯನು ದೈವೀಸೌಂದರ್ಯದ ದರ್ಪಣ ವಿವೇಕ ಚತುರತೆಯ ಅರ್ಹತೆಗಳ ಮನೋಗತ, ದೈವೀ ರಹಸ್ಯಗಳ ಒಂದು ಗೂಢ, ಒಂದು ದೈವಿಕ ಲಲಿತ ಪ್ರಸಂಗ, ಒಂದು ಕಿರು ಹೃದಯಂಗಮ ಯಕ್ಷಿಣಿ ವಿಸ್ಮಯವಾಗಿದ್ದಾನೆ.

ದೈವೀ ಮರ್ಮಗಳ ರಹಸ್ಯವಾಗಿಹನು ಮನುಜನು,
ಸನ್ಮಾರ್ಗದರ್ಶನ ತೇಜದ ಪ್ರಕಾಶವಾಗಿಹನು ಮನುಜನು.

ಆಕಾಶವು ಯಾವುದನ್ನು ಭರಿಸಲು ಅಸಮರ್ಥವಾಗಿತ್ತು,
ಆ ಭಾರವನು ಶಿರದ ಮೇಲೆ ಹೊತ್ತಿಹನು ಮನುಜನು.

ಲೋಕವೊಂದು ಒಂದು ಶಿಲೆಯಾಗಿಹುದು ಮೇಲ್ನೋಟಕೆ,
ಆದರೆ ಬಹುಮೂಲ್ಯ ರತ್ನವಾಗಿಹನು ಮನುಜನು.

ಅವನ ಮೌಲ್ಯವನ್ನು ಅರಿಯಲಿಲ್ಲ ನೀ 'ಬಹರಿ'
ಭೂಮಿ-ಆಕಾಶಗಳ ಅಹಂಕಾರ ಆಗಿಹನು ಮನುಜನು.

ಆಭರಣ-೮೧
ಪರಿಶುದ್ಧಾತ್ಮದ ಒಂದು ನಿದರ್ಶನ

ಪರ್ಯಟನೆ ಹಾಗೂ ದೇವಸಾಮಿಪ್ಯದ ಕರ್ಮಾಚರಣೆಯ ಅವಧಿಯಲ್ಲಿ, ನಾನು ಹತ್ತಿಯ ಒಳಅಂಗಿಯನ್ನು ಧರಿಸಿದ್ದೆನು. ಹತ್ತಿಯ ಬೀಜವೊಂದು ಅದರ ಒಂದು ಭಾಗದಲ್ಲಿ ಹಾಗೆಯೇ ಉಳಿದಿತ್ತು. ನಾನು ಯೋಚಿಸಹತ್ತಿದೆ, ಮೊದಲು ನದಾಫ್‌ನು (ಹತ್ತಿ ಶುದ್ಧೀಕರಿಸುವವನು) ತುಂಬಾ ಜಾಗರೂಕತೆಯಿಂದ ಹತ್ತಿಯನ್ನು ಬೇರ್ಪಡಿಸಿದನು. ಮತ್ತೇನಾದರೂ ಬಾಕಿ ಉಳಿದಿದ್ದರೆ ಅದನ್ನು ದರ್ಜಿಯು ಸ್ವಚ್ಛಗೊಳಿಸಿರಬೇಕು. ಹೀಗಾಗಿ ನಿಯಮಾನುಸಾರ ಹತ್ತಿ ಬೀಜವು ಉಡುಪಿನಲ್ಲಿ ಇರಬಾರದಾಗಿತ್ತು. ಆದರೆ ಇದು ಇವರಿಬ್ಬರ ದೃಷ್ಟಿಯಿಂದ ಅಗೋಚರವಾಗಿತ್ತು! ನನಗೆ ಅರ್ಥವಾಯಿತೇನೆಂದರೆ ಅಂತರ್ ಸೌಂದರ್ಯವು (ಅರ್ಥಾತ್ ಅಸ್ತಿತ್ವವು) ವಾಸ್ತವಿಕವಾಗಿ ಸ್ಥಿತಿರೂಪದಲ್ಲಿದೆ, ಆದರೆ ಬಾಹ್ಯ ದೃಷ್ಟಿಗೆ ಅದು ಕಂಡು ಬರುವುದಿಲ್ಲ.

ಹೇ ಆತ್ಮೀಯನೇ, ಹತ್ತಿ ಬೀಜವು ಸುತ್ತವರಿದ ಹತ್ತಿಯನ್ನು ತನ್ನಿಂದ ಬೇರ್ಪಡಿಸಿತ್ತು. ಅದು (ಆವರಣವು) ತಾಗಿಕೊಂಡಿಯೂ ಇದೆ. ಪ್ರತ್ಯೇಕವಾಗಿಯೂ ಇದೆ. ಈ ರೀತಿಯಾಗಿ ಹತ್ತಿಯು ಉಡುಪಿಗೆ ತನ್ನ ಅಸ್ತಿತ್ವವನ್ನು ದಯಪಾಲಿಸಿತು ಹಾಗೂ ಬಟ್ಟೆಯ ಮಧ್ಯೆ ತನ್ನ ಸ್ಥಾನವನ್ನು ಪ್ರಾಪ್ತಿಸಿಕೊಂಡಿತು. ಬಟ್ಟೆಯು ಹತ್ತಿಯಿಂದ

ನಿರ್ಮಿತವಾಗಿದೆ ಹಾಗೂ ಹತ್ತಿಯು ಹತ್ತಿಯ ಬೀಜದಿಂದ, ದೇಹ, ಜೀವ ಹಾಗೂ ಪರಮಪ್ರೇಮಿಯ ಸಂಬಂಧವನ್ನು ಇದೇ ಆಧಾರದನ್ವಯ ಕಲ್ಪಿಸಿಕೊಳ್ಳಿ.

ಈ ತ್ರಿಕೋಣ ಚಕ್ರವು ಚಿತ್ರ–ವಿಚಿತ್ರವಾಗಿದೆ,
ಇದರಿಂದಲೇ ಅರ್ಥೈಸಬಹುದು ಪರಮಪ್ರೇಮಿಯ ಮಿಲನದ ಬಗೆ.

ಹತ್ತಿ ಬೀಜವು, ಹತ್ತಿಯನು ತನ್ನಿಂದ ನೀಡಿತು,
ತನ್ನ ಬಂಡವಾಳವನೆಲ್ಲೋ ಮಧ್ಯದಲಿ ಅಡಗಿಸಿತು.

ಮತ್ತೆ ಹತ್ತಿ ಬೀಜವು ತಾಳಿತು ಪ್ರಕಟರೂಪವನು,
ಉಪಯುಕ್ತತೆ ಆಸಕ್ತಿಯಿಂದ ಸ್ವಯಂ ಬಾಹ್ಯ ಪ್ರಕಟವಾಯಿತು.

ಉಡುಪಿನಲಿ ತನ್ಮಯವಾಗಿ ಮೈಮರೆತಿದೆ ಹತ್ತಿಯು,
ಯಾವ ರೀತಿ ಜೀವಿಯಲಿ ಪರಮದೈವನು ನೆಲೆಸಿಹನು.

ಮೂರು, ಉಳಿದೆರಡರ ನಿರೀಕ್ಷೆಯಲಿ ಇರುವವು,
ಅರ್ಥಾತ್ ಈ ಮೂರು ದೇಹ, ಜೀವ ಹಾಗೂ ಪರಮಪ್ರೇಮಿ ಆಗಿಹವು.

'ಬಹರಿ'ಯೇ ಈ ಅಂಶವನು ಚಿನ್ನದ ಸರಿಗೆಯಿಂದ ಬರೆ,
ನಿರಂತರವಾಗಿ ಇದನು ಅರಿಯುವಂತೆ ಧೀಮಂತಿಕೆಯಿಂದ ಬರೆ.

ಆಭರಣ–೮೨

ನಶ್ವರ ಹಾಗೂ ಪುರಾತನ

ಒಬ್ಬ ವ್ಯಕ್ತಿಯು ಮತ್ತೊಬ್ಬ ಗೌರವಾನ್ವಿತ ವ್ಯಕ್ತಿಗೆ ಕೇಳಿದನು. ಈ ಲೋಕವು ಪುರಾತನವೋ ಅಥವಾ ನಶ್ವರವೋ? ಆ ಹಿರಿಯರು ನುಡಿದರು, ನಶ್ವರವಾಗಿದೆ, ಆದರೆ ಪುರಾತನದಂತೆ ಪ್ರಶಂಸಾಯೋಗ್ಯವಾಗಿದೆ. ಎಂಥಾ ಉತ್ಕೃಷ್ಟ ಉತ್ತರ ! ನಶ್ವರವೂ ಹೇಳಲಿಲ್ಲ, ಪುರಾತನವೆಂದೂ ಸ್ಪಷ್ಟವಾಗಿ ಹೇಳಲಿಲ್ಲ.

ಲೋಕವು ನವೀನ ನಿಜ, ಆದರೆ ನಿರ್ಮಾಣದ ಬಗೆಯಿಂದ ಪುರಾತನ,
ಈ ಅಗ್ನಿಯು ಪುರಾತನವಾಗಿದ್ದರೆ, ಇದರ ಜ್ವಲನ ಅವಧಿಯೂ ಪುರಾತನ.

ಆಭರಣ–೮೩

ಸತ್ಯತೆ ಹಾಗೂ ಕಾಲ್ಪನಿಕತೆಯ ರಹಸ್ಯತೆ

ಸತ್ಯದ ಅಸ್ತಿತ್ವವನ್ನು ಕಾಲ್ಪನಿಕತೆಯಿಂದ ಬಹುಶಃ ಯಾರಾದರೂ ಬೇರ್ಪಡಿಸಿ ನೋಡಿದ್ದಾನೆಂದು ನುಡಿದರೆ ಇದರಲ್ಲಿ ಅಚ್ಚರಿ ಪಡುವಂತಹದೇನು ಇಲ್ಲ. ಬಹುಶಃ ನೋಡಿರಬಹುದು. ಆದರೆ ನನ್ನ ನಿರುಪಯುಕ್ತ ಹೃದಯವು ಇದನ್ನು ಸ್ವೀಕರಿಸುವುದಿಲ್ಲ. ಯಾಕೆಂದರೆ ಅದೇ ಸೌಂದರ್ಯಮಯ ಸತ್ಯವು ಕಾಲ್ಪನಿಕತೆಯ ರೂಪವನ್ನು ಕಾಲ್ಪನಿಕತೆಯ ಹೆಸರಿನಿಂದ ಗುರುತಿಸಿಕೊಂಡಿತು. ಈ ಸ್ಥಾನದಲ್ಲಿ ತುಂಬಾ ಗಂಭೀರವಾಗಿ ಆಲೋಚಿಸಿದಾಗ, ಇದು ಕಾಲ್ಪನಿಕತೆಯ ಚಾತುರ್ಯದ ಹಂತವಾಗಿದೆಯೇ, ವಿನಃ ಹಲವು ಜನರ ಅಭಿಪ್ರಾಯದಂತೆ ಆ ಹಂತದ ಕ್ಷೀಣತೆಯಲ್ಲ. ಇದರ ಭಾವವನ್ನು ಅರಿಯಲು ಮರ್ಮ ಜ್ಞಾನದ ಅವಶ್ಯಕತೆಯಿದೆ. ಆದರೆ ನನಗೆ ಇದರ ಅರಿವು ನನ್ನ ಪೀರ್–ಮುರ್ಷದ್ ಕೃಪೆ ಹಾಗೂ ಪರಂಸತ್ಯನ ಸನ್ಮಾರ್ಗದರ್ಶನವಾಗಿದೆ.

ನಾನೇನು ಹೇಳಲಿ ಸ್ನೇಹಿತನೇ, ತೇಜಸ್ಸು ಹಾಗೂ ಸೌಂದರ್ಯದ ಅರ್ಥವನು!

ಅಲ್ಲಿ ಯಾವುದು ತೇಜೋಮಯವಾಗಿತ್ತು, ಅದು ಇಲ್ಲಿ ಸೌಂದರ್ಯದ ವೈಭವವಾಗಿದೆ.

ಆಭರಣ–೮೪

ಬ್ರಹ್ಮಾಂಡವು ಪ್ರತಿ ಕಾಲದಲ್ಲೂ ನಾಸ್ತಿಗೊಳಿಸಲ್ಪಟ್ಟು ಸ್ಥಿರವಾಗಿ ಏಕಿಹುದು?

ಯಾರೋ ಒಬ್ಬ ಮಹನೀಯರು ಈ ಫಕೀರನನ್ನು ಪ್ರಶ್ನಿಸಿದರು, 'ಜನ ಹೇಳುವುದೇನೆಂದರೆ, ಬ್ರಹ್ಮಾಂಡವು ಸದಾ ನಾಸ್ತಿಗೊಳಿಸಲ್ಪಡುತ್ತವೆ. ಮತ್ತೆ ಸ್ಥಿರವಾಗಿ ನೆಲೆಸಿರುತ್ತದೆ. ಇದು ಹೇಗೆ ಸಾಧ್ಯ?' ನಾನು ನುಡಿದೆ, ಈ ಬ್ರಹ್ಮಾಂಡವು ಮಹಾಮಹಿಮ ಪರಂಜ್ಯೋತಿಯ ಒಂದು ಕ್ಷಣದಲ್ಲಿ ಸಾವಿರಾರು ಸಲ ಜ್ಯೋತಿರ್ಕಿರಣಗಳ, ಕಿರಣಗಳು ಹೊರಹೊಮ್ಮುತ್ತವೆ. ಪ್ರತಿಯೊಂದು ಜ್ಯೋತಿರ್ಕಿರಣವು ಹೊಚ್ಚು ಹೊಸದಾಗಿ, ನವನವೀನವಾಗಿರುತ್ತವೆ. ಯಾವುದೇ ಜ್ಯೋತಿರ್ಕಿರಣವು ಮತ್ತೆ ಪುನರಾವರ್ತನೆ ಯಾಗುವುದಿಲ್ಲ. ಇದು ಅಚ್ಚರಿಯ ಸಂಗತಿಯಲ್ಲವೆ? ಅವನ ಅಸ್ತಿತ್ವವು ಅಸಂಖ್ಯಾತ ಅಗಣಿತ, ಹಾಗೂ ಅಮಿತ ಅರ್ಹತೆಗಳನ್ನು ಹೊಂದಿವೆ. ಅವನ ಅರ್ಹತೆಗಳು,

ಗಣನೆಯ ಮಿತಿಯಲ್ಲಿ ಇರುತ್ತಿದ್ದರೆ, ಅವನ ಜ್ಯೋತಿರ್ಕಿರಣಗಳ ಪುನರಾವರ್ತನೆ ಇರುತ್ತಿತ್ತು. ಒಬ್ಬ ನುರಿತ ಹಾಡುಗಾರನು, ತನ್ನ ಹಾಡುಗಾರಿಕೆಯ ಕಲೆಯಲ್ಲಿ ಅಗಾಧತೆಯನ್ನು ಹೊಂದಿದ್ದರೆ, ಅವನ ಗಾಯನದಲ್ಲಿ ಕವನಗಳ ಪುನರಾವರ್ತನೆಯು ಇರುವುದಿಲ್ಲ. ಒಂದು ಸಲ ಬಳಿಸಿದ ರಾಗವನ್ನು ಮತ್ತೆ ಬಳಿಸುವುದಿಲ್ಲ. ತಾತ್ಪರ್ಯವೆಂದರೆ ವರ್ತಮಾನದ ಜ್ಯೋತಿಯು ಸ್ಥಿರವಾಗಿದೆ. ಗತಕಾಲದ ಜ್ಯೋತಿಯ ನಾಶಗೊಳಿಸಲ್ಪಟ್ಟಿದೆ. ಹೀಗಾಗಿ ಪ್ರಸಕ್ತವಾಗಿ ಸ್ಥಿರವಾಗಿರುವುದು ನಾಶಗೊಳಿಸಲ್ಪಡುತ್ತದೆ. ಈ ರೀತಿಯಲ್ಲಿ ಪರಂಸತ್ಯವು ಬ್ರಹ್ಮಾಂಡದಲ್ಲಿ ಪ್ರತಿ ಕ್ಷಣವು ಹಾಜರಿರುವ ಸಾಕ್ಷೀಭೂತವಾಗಿದೆ. ಇದರ ಎರಡನೇ ಕಾರಣವೇನಂದರೆ, ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ಜೀವಿಯ ಇರುವಿಕೆಯು ಹೆಚ್ಚು ಅಥವಾ ಕಡಿಮೆ, ಆಗುತ್ತಾ ಇರುತ್ತದೆ. ಉದಾಹರಣೆಗಾಗಿ, ವೃಕ್ಷವು ಫಲ ನೀಡುವವರೆಗೆ, ಪ್ರತಿ ಕ್ಷಣವೂ ಸತತವಾಗಿ, ನಿರಂತರವಾಗಿ ಬೆಳೆಯುತ್ತಿರುತ್ತದೆ. ಯಾವಾಗ ಅದು ಹಣ್ಣು ನೀಡುವ ಹಂತಕ್ಕೆ ತಲುಪತ್ತಿದೆಯೋ ಅದರ ಬೆಳವಣಿಗೆಯು ಒಮ್ಮೆಲೆ ಕ್ಷೀಣಿಸುತ್ತವೆ. ಹೇ ಆತ್ಮೀಯನೇ, ಕ್ಷೀಣವಾಗುವುದು ಬೇರೆ ವಿಷಯವಾಗಿದೆ, ಅಧಿಕವಾಗುವುದು ಬೇರೆ ವಿಷಯವಾಗಿದೆ. ಒಟ್ಟಾರೆ ಒಂದು ನಿರ್ದಿಷ್ಟ ಕಾಲ ಹಾಗೂ ಹಂತದಲ್ಲಿ ಇದಾಗುವುದಿಲ್ಲ ಈ ರೀತಿಯಿಂದ ಬ್ರಹ್ಮಾಂಡದ ಪ್ರತಿ ಕ್ಷಣವೂ ನವನವೀನ ಎಂದೆನಿಸಿಕೊಳ್ಳುತ್ತದೆ.

ದಿವ್ಯಜ್ಯೋತಿಯಾಗಿಹುದು ಈ ಲೋಕವು ಎಲ್ಲಾ ದಿಶೆಗಳಲ್ಲಿ,
ಆದರೆ ಕಾಣವುದು ಇದನು, ಅಂತಹ ದೃಷ್ಟಿದಾತನು ಮಾತ್ರ

ದಿವ್ಯಜ್ಯೋತಿ ಸುಪ್ತವಾಗಿಹುದು, ಪ್ರತಿ ಬಾಲವೃದ್ಧನಲಿ,
ಇಹುದು ಇದು ಪ್ರತಿ ಸುಖ-ದುಃಖ, ಬಡವ-ದೊರೆಯಲಿ.

ದಿವ್ಯಜ್ಯೋತಿ ಇಹುದು ಸಮಸ್ತ ಎಚ್ಚರಿಕೆ, ಉಲ್ಲೇಖಗಳಲ್ಲಿ,
ಅದು ಪ್ರಕಾಶವಿರಲಿ, ಅಂಧಕಾರವಿರಲಿ ಸೂರ್ಯನಿರಲಿ, ಚಂದ್ರನಿರಲಿ.

ದಿವ್ಯಜ್ಯೋತಿ ಇಹುದು ಸೌಂದರ್ಯದಲಿ ಪ್ರೇಮಭಾವದಲಿ,
ಆ ಪ್ರೇಮಿಯಲಿ, ಪ್ರಿಯತಮೆಯಲಿ, ಆ ವಿರಹದ ಉದ್ಗಾರದಲಿ.

ದಿವ್ಯಜ್ಯೋತಿ ಇಹುದು ಈ ಉದ್ಯಾನದಲಿ, ನಿರ್ಜನ ಏಕಾಂತದಲಿ,
ಈ ಸ್ವರ್ಗದ ಅರಣ್ಯದಲಿ, ಹುಲಿಯಲಿ ಹಾಗೂ ನರಿಯಲಿ.

ದಿವ್ಯಜ್ಯೋತಿ ಇಹುದು "ಖಾಫ್" ಪರ್ವತದಲಿ ಹಾಗೂ 'ಸಿಮ್ರುಘ'ನಲಿ,
ಈ ಸಾಗರದಲಿ, ಗಗನದಲಿ, ಭೂಮಿಯಲಿ, ಕಾಲದಲಿ, ಶಿಖರದಲಿ.

ದಿವ್ಯಜ್ಯೋತಿ ಇಹುದು ಸಮಸ್ತ ಜ್ಞಾನಿಗಳಲಿ ಅಜ್ಞಾನಿಗಳಲಿ,
ಈ ಜೀವದಲಿ, ದೇಹದಲಿ, ಕೈಕಾಲಲಿ, ಈ ಕಾಲಿನ ಮೆಟ್ಟಿನಲಿ.

ದಿವ್ಯಜ್ಯೋತಿ ಇಹುದು ನಿಸ್ಸಂದೇಹವಾಗಿ ಸಮಸ್ತದಲಿ ಹೇ 'ಬಹರಿ',
ಈ ಸೈನ್ಯದಲಿ, ಸೀಮಾತೀತ ಜ್ಞಾನ ಕಣಜದಲಿ, ಬಾದಶಾಹನಲಿ.

ಆಭರಣ-೮೫

ವಿಶೇಷ ಹಾಗೂ ಸಾಮಾನ್ಯ ಜ್ಯೋತಿಯಲಿ ಅಂತರ

ಸಮಕಾಲೀನ ಒಬ್ಬ ವ್ಯಕ್ತಿಯು ನನ್ನ ಗೌರವಾನ್ವಿತ ಪೀರ್-ಮುರ್ಷದರನು ಪ್ರಶ್ನಿಸಿದನು, ಅದೇನೆಂದರೆ ಸಮಸ್ತ ಸೃಷ್ಟಿಗಳಲ್ಲಿ ದಿವ್ಯ ಅಸ್ತಿತ್ವದ ಜ್ಯೋತಿಯು ಸಮಾನಾಂತರ ಹಾಗೂ ಏಕರೂಪವಾಗಿದೆ. ಕೆಲವರಲ್ಲಿ ಹೆಚ್ಚು ಇಲ್ಲ, ಕೆಲವರಲ್ಲಿ ಕಡಿಮೆಯೂ ಇಲ್ಲ. ಹೀಗಿದ್ದಾಗ ಜನರು 'ಸಾಮಾನ್ಯ' ಮತ್ತು ವಿಶೇಷವೆಂದು, ನುಡಿದರು- 'ನಿವೇನು ಹೇಳುತ್ತಿದ್ದೀರಿ; ಅದು ಸೂಕ್ತವಾಗಿದೆ. ಆದರೆ ವಿಶೇಷ ಹಾಗೂ ಸಾಮಾನ್ಯದಲ್ಲಿ ಅತ್ಯಲ್ಪ ಅಂತರವಿದೆ. ಅದೇನೆಂದರೆ ಸಾಮಾನ್ಯರಲ್ಲಿ ದೇವರಿದ್ದಾನೆ, ಆದರೆ ದೇವರಲ್ಲಿ ವಿಶೇಷವಿದ್ದಾರೆ. ಹೀಗಾಗಿ ಸಾಮಾನ್ಯರು ಅಧಿಕವಾಗಿದ್ದಾರೆ. ವಿಶೇಷರು ಅಲ್ಪವಾಗಿದ್ದಾರೆ.

ನನ್ನ ಸ್ನೇಹಿತರೊಬ್ಬರು ಮುರ್ಷದರನು ಕೇಳಿದರು ಒಂದು ಸಲ,
ಏನು ಪ್ರತಿ ವಿಶೇಷ - ಸಾಮಾನ್ಯರು ಇರುವುದೇ ಸತ್ಯದ ತೇಜಸ್ಸು.

ಈ ವಿಶೇಷ ತೇಜಸ್ಸು ಸಾಮಾನ್ಯ ಹೇಗಾಯಿತು?
ನನ್ನ ಹೃದಯದ ದಿಶೆಯು ಈ ಯೋಚನೆಯಲಿ ಮಗ್ನವಾಗಿದೆ.

ನನ್ನ ವಿಚಾರದಲಿ ಇದು ಸೂಕ್ತವಾಗಿಹುದು ಎಂದರು ಮುರ್ಷದರು,
ಯಾಕೆಂದರೆ ದೇವನು ಪ್ರತಿ ವಿಶೇಷ - ಸಾಮಾನ್ಯರಲಿ ಸಮನಾಗಿಹನು.

ನೀ ಬಹರಿಯಂತೆ, ಜ್ಞಾನ ಸಾಗರದಲಿ ಮುಳಗುವವನಾಗು,
ಪಡೆಯಬೇಕಿದ್ದರೆ ಆ ಸಾಗರದ ಮುತ್ತು ಹವಳಗಳು ವಿಶೇಷವನು.

ಆಭರಣ-೮೬

ಮ್ವಾರಿಫತ್ (ಸೂಫಿ ಅನುಭಾವ ಜ್ಞಾನ)ನ ಮೂರು ಬಗೆಗಳು

ಮ್ವಾರಿಫತ್ ಮೂರು ಬಗೆಯದ್ದಾಗಿದೆ. ಸಾಮಾನ್ಯ ಮ್ವಾರಿಫತ್, ವಿಶೇಷ ಮ್ವಾರಿಫತ್, ಪರಮೋಚ್ಛ ಮ್ವಾರಿಫತ್ ಸಾಮಾನ್ಯ ಮ್ವಾರಿಫತ್ ಎಂದರೆ, ಒಬ್ಬ ವ್ಯಕ್ತಿ ಮತ್ತೊಬ್ಬ ಸಾಮಾನ್ಯ ವ್ಯಕ್ತಿಯನ್ನು ನೀನು ಯಾರೆಂದು ಕೇಳಿದರೆ, ಅವನು ನುಡಿಯುತ್ತಾನೆ. ನಾನು ದೇವರ ವಿಧೇಯನು ಎಂದು ಉತ್ತರಿಸುತ್ತಾನೆ. ಮತ್ತೇ ದೇವರು ಯಾರು ಎಂದು ಪ್ರಶ್ನಿಸಿದರೆ, ಯಾವನು ಅಸ್ತಿತ್ವದಲ್ಲಿ 'ಏಕ'ನಾಗಿದ್ದು, ಪ್ರಕಾಶ ಹಾಗೂ ಅಗ್ನಿಯ ಜನಕ, ನವಿಲು ಹಾಗೂ ಹಾವನ್ನು ಹುಟ್ಟಿಸಿದವನು, ಹಾಗೂ ಸಮಸ್ತ ಜೀವಿಗಳಿಗೆ ಅನ್ನ ನೀಡುವವನು. ಎಂದು ಉತ್ತರಿಸುತ್ತಾನೆ. ಆ 'ಏಕ'ನು ಎಲ್ಲಿದ್ದಾನೆ ಎಂದು ಕೇಳಿದರೆ, ಅವನು ನುಡಿವನು ಅವನು ಎಲ್ಲರಲ್ಲಿದ್ದಾನೆ. ಎಂದು ಮುಂದುವರೆದು ಮತ್ತೆ 'ಏಕ'ನಾದ ಅವನು ಎಲ್ಲರಲ್ಲಿ ಹೇಗಿರುತ್ತಾನೆ ಎಂದು ಕೇಳಿದರೆ, ಯಾವುದೇ ಉತ್ತರ ಬರುವುದಿಲ್ಲ. ಇಲ್ಲಿಗೆ ಅವನು ಮೌನವಾಗುತ್ತಾನೆ. ಸಾಮಾನ್ಯ ಮ್ವಾರಿಫತ್ ಇಲ್ಲಿಯವರೆಗೆ ಸೀಮಿತವಾಗಿದ್ದು, ಇದರ ಮುಂದೆ ಸಾಗುವುದಿಲ್ಲ. ವಿಶೇಷ ಮ್ವಾರಿಫತ್ ಏನೆಂದರೆ ಒಬ್ಬ ವಿಶೇಷ ವ್ಯಕ್ತಿಯನ್ನು ಇದರ ಕುರಿತಂತೆ ಎಲ್ಲವೂ ಒಂದರಲ್ಲಿ ಹೇಗೆ ನೆಲೆಸುತ್ತದೆ ಎಂದು ವಿಚಾರಿಸಿದಾಗ, ಅವನು ನುಡಿವನು, ಯಾವ ರೀತಿ ಒಂದು ಜೀವವು ಹೇಗೆ ಶರೀರದ ಸಮಸ್ತ ಅಂಗಾಂಗಗಳಲ್ಲಿ ವ್ಯಾಪಿಸಿದೆಯೋ ಅಥವಾ ನೀರು ಯಾವ ರೀತಿ ಸಮಸ್ತ ಅಲೆಗಳಲ್ಲಿ ತುಂಬಿಕೊಂಡಿದೆಯೇ ಹಾಗೆಯೇ ಇದು ಸಹ ಎಂದು ಹೇಳುವನು, ಆದರೆ ಮೂಲಭೂತ ವಿಷಯವೇನೆಂದರೆ ಅಂಗಾಂಗಗಳ ಹೊರತು ಜೀವದ ಅಸ್ತಿತ್ವವೇ ಇಲ್ಲ. ಹಾಗೆಯೇ ನೀರಿನ ಹೊರತಾಗಿ ಅಲೆಗಳ ಅಸ್ತಿತ್ವವೇ ಇಲ್ಲ, ಅಸ್ತಿತ್ವ ಹಾಗೂ ಅರ್ಹತೆಯ ನಿದರ್ಶನವು ನೀರು ಹಾಗೂ ಅಲೆಗಳು ಸೂಕ್ತವಾಗಿ ಹೊಂದುವುದಲ್ಲದೆ, ಇದಕ್ಕಿಂತ ಸೂಕ್ತವಾಗಿ ಬೇರ್ಯಾವ ನಿದರ್ಶನ ನಿಮಗೆ ದೊರೆಯದು. ಆದರೆ ಪರಮೋಚ್ಛ ಮ್ವಾರಿಫತ್ ಏನೆಂದರೆ ಅದು ಉಳಿದೆರಡು ಮ್ವಾರಿಫತ್‌ಗಳಿಗಿಂತ ಸರ್ವಥಾ ಭಿನ್ನವಾಗಿದೆ. ಹೀಗಾಗಿ ಯಾರಾದರೂ ಪರಮೋಚ್ಛನನ್ನು ನೀನ್ಯಾರು ಎಂದು ಪ್ರಶ್ನಿಸಿದರೆ, ಅವನು ನುಡಿವನು ಇದೊಂದು ಇಂಥಾ ರಹಸ್ಯವಾಗಿದೆ, ಅದರ ಮೇಲೆ ಮೊಹರು ಹಾಕಲಾಗಿದೆ. ಅರ್ಥಾತ್ ಅವನು 'ಅದು' ಅಥವಾ 'ಇದು'ಗಳಿಂದ ಪವಿತ್ರನಾಗಿದ್ದು, ಈ ತರಹ ಅಥವಾ ಆ ತರಹದಿಂದ ಸ್ವತಂತ್ರವಾಗಿದ್ದಾನೆ. ಇದರ ಸತ್ಯತೆಯನ್ನು ಸಾಮಾನ್ಯನು ಅರಿಯನು ಹಾಗೂ ವಿಶೇಷನು ಇದೇನೆಂದು ತಿಳಿಯನು.

ಪರಮೋಚ್ಛನ ದೃಷ್ಟಿಯು, ಪರಮೋಚ್ಛನ ಮೇಲೆ ಬಿದ್ದರೆ,
ಒಬ್ಬ ರತ್ನವ್ಯಾಪಾರಿಯು ರತ್ನದ ಮೌಲ್ಯವನ್ನು ಅರಿದಂತೆ.

ಆಭರಣ–೮೭

'ಪರಮಸತ್ಯ ಮ್ವಾರಿಫತ್'ನ ವಿರೋಧಾಭಾಸದ ವಾಸ್ತವಿಕತೆಗಳು (ವಸ್ತುಸ್ಥಿತಿಗಳು)

ಇದೇ ಗೋಗಿಯಲ್ಲಿ ಅಂತರಂಗ ಮಹನೀಯರ ಗೋಷ್ಠಿ ನಡೆಯಿತು. ಅದರಲ್ಲಿ ಭಾಗವಹಿಸಿದ್ದ ಪ್ರತಿ ವ್ಯಕ್ತಿಯೂ ಅತ್ಯಂತ ಕುಶಾಗ್ರಮತಿಯೂ, ಜ್ಞಾನಚಕ್ಷು ಹಾಗೂ ದೂರದರ್ಶಿತ್ವ ಹೊಂದಿದವನಾಗಿದ್ದನು. ಸಭೆಯಲ್ಲಿ ಈ ಫಕೀರನನ್ನು ಪ್ರಶ್ನಿಸಲಾಯಿತು. ಅದೇನೆಂದರೆ.

'ಮನ್ ಅರಫಾ ಅಲ್ಲಾಹು ತಾಲಾಹ್ ಲಿಸಾನಹಾ'

(ಅರ್ಥಾತ್: ಯಾವನು ಅಲ್ಲಾಹನನ್ನು ಅರಿತನು, ಅವನ ನಾಲಿಗೆಯು ದೀರ್ಘವಾಯಿತು)

ಮತ್ತೆ ಹೀಗೂ ನುಡಿಯಲಾಯಿತು.
'ಮನ್ ಅರಫಾ ಅಲ್ಲಾಹು ಕುಲ್ಲಾ ಲಿಸಾನಹಾ'

(ಅರ್ಥಾತ್: ಯಾವನು ಅಲ್ಲಾಹನನ್ನು ಅರಿತನು, ಅವನ ನಾಲಿಗೆಯು ಸ್ತಬ್ಧವಾಯಿತು)

ಈ ಎರಡೂ ವಚನಾಮೃತಗಳು ಪ್ರಸಿದ್ಧ ಹದೀಸ್* ಗ್ರಂಥ, 'ಮಿಷ್ಕಾತ್' ನಿಂದ ವಿಶ್ವಸ್ಥವೆನಿಸಿ ದೃಢಪಟ್ಟಿವೆ.

ಇದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಚರ್ಚೆ ಒಂದು ಭಿನ್ನ ವಿಷಯವಾಗಿದೆ. ಹಾಗೂ ಮೌನ ಇನ್ನೊಂದು ಭಿನ್ನ ವಿಷಯವಾಗಿದೆ. ಇವು ಒಂದು ಇನ್ನೊಂದರ ವಿರೋಧವಾಗಿದೆ. ಎಲ್ಲಿ 'ಇದು' ಇರುತ್ತದೆ ಆ ಸ್ಥಾನದಲ್ಲಿ 'ಅದು' ಸರ್ವಥಾ ಇರುವುದಿಲ್ಲ. ಹೀಗಾಗಿ ಪರಂಜ್ಞಾನಿಗೆ ತೇಜೋಮಯ ಮಹಾಮಹಿಮನಾದ ಅಲ್ಲಾಹನ ಜ್ಞಾನ ಪ್ರಾಪ್ತಿಗಾಗಿ ಯಾವ ವಸ್ತು ಅಥವಾ ಮಾರ್ಗ ಸೂಕ್ತವಾಗಿದೆ. ಅದು ಚರ್ಚೆಯೋ ಅಥವಾ ಮೌನವೋ? ಹೀಗಾಗಿ ಪ್ರಾಯಶಃ ಇವೆರಡು ಒಂದೇ ಕಾರ್ಯ

ಹದೀಸ್ – ಪ್ರವಾದಿಗಳ ವಚನಾಮೃತ ಹಾಗೂ ನಡೆಗಳ ಸಂಗ್ರಹ ಗ್ರಂಥ

ಮಾಡುವಂತಿದ್ದರೆ ಎರಡನೇ ಹದೀಸ್ ನಿರರ್ಥಕವಾಗಿದೆ. ಈ ನಿಲುವೂ ಅನುಚಿತವಾಗಿದೆ. ಎರಡೂ ಸ್ವೀಕಾರಯೋಗ್ಯವಾಗಿದ್ದರೆ, ದೈವಾಜ್ಞೆಯು ಯಾವ ವಸ್ತುವಿಗಾಗಿ ಇದೆ. ದೇವರ ಕೃಪೆಯಿಂದ ಇದನ್ನು ನಿರ್ಣಯಿಸಿ ಹಾಗೂ ನಮ್ಮನ್ನು ಈ ಆಲೋಚನೆಯಿಂದ ಮುಕ್ತಗೊಳಿಸಿ.

ನಾನು ಈ ಸಂದರ್ಭದಲ್ಲಿ, ಇದರ ಉತ್ತರವಾಗಿ ಹಜ್ರತ್ 'ಶೇಖ್ ಸಾದಿ'ಯವರ ಈ ಕವನದ ಸಾಲನ್ನು ಓದಿದೆ.

'ಚೂ ಬುಲ್ ಬುಲ್ ರೂಯೇ ಗುಲ್ ಬನೀದ್ ಜಬಾನಿಷ್ ದರನವಾ ಆಯದ್;
ಮೆರಾ ಅಜ್ ದೀದನ್ ರೋವಿಷೇ ಫರ್ದಬಸ್ತ ಅಸ್ ಮೇರಿ ಗೋಯಿ'

(ಪುಷ್ಪದ ದಿಶೆಯನ್ನು ಕಂಡು ಬುಲ್‌ಬುಲ್ ಈ ರೀತಿ ಫಿರ್ಯಾದು ಮಾಡುತಿದೆ,
ಅದನು ಕಂಡ ನಾನು, ಕಳೆದುಕೊಂಡೆನು ನನ್ನ ವಾಕ್ಸಾಮರ್ಥ್ಯವನು).

ಸಭಿಕರಲ್ಲಿ ಒಬ್ಬನು ನುಡಿದನು. ಅದೇನೆಂದರೆ ಒಂದೇ ಕವನದ ಸಾಲಿನ ಉಲ್ಲೇಖವು ಎರಡೂ ಹದೀಸ್‌ಗಳ ಸಾರವಾಗಿದೆ. ವಿವರಣಾತ್ಮಕವಾಗಿ ಈ ರೀತಿ ನುಡಿಯಲಾಯಿತು. ಅದೇನೆಂದರೆ ಪರಮ ಸತ್ಯದ ಅಸ್ತಿತ್ವವೂ ಕಾರಣಾಂತರಗಳಿಂದ ಅನುಗ್ರಹಿತನಾದಾಗ ಸಾಧಕನ ಸಾಂಗತ್ಯದ ಸ್ಥಿತಿಯಾಗುತ್ತಾನೆ. ಇದಕ್ಕಾಗಿ ಅವನು ಮೊದಲು ಇಂದ್ರಿಯಾಸಕ್ತಿಯ ವಸ್ತುಸ್ಥಿತಿಯನ್ನು ತಲುಪುತ್ತಾನೆ. ಹೀಗಾಗಿ ಈ ಮೂರರ ಅರ್ಥ ಒಂದೇ ಆಗಿದೆ. ಆದರೆ ಆತ್ಮವು ಅಸ್ತಿತ್ವದ ಅವಲಂಬನವಾಗಿದೆ. ಶರೀರವು ಇದರ ಮೂರ್ತ ಅಸ್ತಿತ್ವವಾಗಿದೆ. ವ್ಯಕ್ತಿಯು ಆತ್ಮದ ಸತ್ಯತೆಯನ್ನು ಅದರ ಅಸ್ತಿತ್ವದ ಅನುಗುಣವಾಗಿ ಪರಿಚಿತನಾದಾಗ ಅವನು ನೈಜ ಆತ್ಮವಾಗುತ್ತಾನೆ. ಇದೇ ಚರಮ ಸ್ಥಿತಿಯಲ್ಲಿ ಮನ್ಸೂರರು ಹಾಗೂ 'ಐನುಲ್ ಖಿಜ್ಞಾತಾ'ರವರ ತರಹ ತನ್ನ ಅಸ್ತಿತ್ವದಲ್ಲಿ ಸ್ಥಿರವಾಗುತ್ತಾನೆ ಹಾಗೂ ತನ್ನ ನಾಲಿಗೆಯಿಂದ ಕಠೋರ ವಚನಗಳನ್ನು ನುಡಿಯುತ್ತಾನೆ. ಈ ಅಪರಾಧವು ನುಡಿಯುವವನಿದ್ದು ಆಗಿರುವುದಿಲ್ಲ. ಓದಲಾಗಿ ಇದು ಸ್ವಯಂ ಅಪರಾಧದ ಸ್ಥಿತಿಯು ನುಡಿಯುತ್ತಿರುತ್ತದೆ. ಈ ತರಹದ ಆತ್ಮದ ಚರಮ ಸ್ಥಿತಿಯ ಜೇಡರ ಹುಳುವನ್ನು ಪರಿಶ್ರಮಿಯನ್ನಾಗಿಸುತ್ತವೆ ಹಾಗೂ ಪಾರಿವಾಳವನ್ನು ಮಹಾನ್ ಗಿಡುಗವನ್ನಾಗಿಸುತ್ತವೆ. ಅಳಿವಿನಿಂದ (ಫನಾ) ಅನಂತದ ಸ್ನೇಹಿತವನ್ನಾಗಿಸುತ್ತವೆ. 'ಅಂತಾ' (ನೀನು) ಗೆ ಅನಾ 'ನಾನು' ಸಹಗಾಮಿಯನ್ನಾಗಿಸುತ್ತದೆ. ಇದೇ 'ತಾಅಲಾ ಲಿಸಾನಿಹು' ಆಗಿರುತ್ತದೆ. ತೇಜೋಪ್ರಭೆಯ ಉತ್ಕರ್ಷದಿಂದ ಯಾವ ಅಸ್ತಿತ್ವವು ಅನಂತವಾಗಿದೆಯೋ, ಆಗ ಆತ್ಮ ಪರಿಣಾಮ ಕ್ಷೀಣವಾಗುತ್ತದೆ. ಅರ್ಥಾತ್ ಅದು ದೈವಿಜ್ಯೋತಿಯಲ್ಲಿ ಕಾಣೆಯಾಗುತ್ತದೆ. ಈ ಸಮಯದಲ್ಲಿ ದೈವೀಜ್ಞಾನಿಯು ದಿವ್ಯ ಮೌನಿಯಾಗುತ್ತಾನೆ. 'ಕುಲಿ ಲಿಸಾನಹು' ಇದೇ ಆಗಿದೆ.

ದೇವರು ದೈವೀಜ್ಞಾನವು ಎರಡು ರೀತಿಯಿಂದ ಪ್ರಕಟವಾಗುತ್ತದೆಂದು ಹೇಳಲಾಗುತ್ತಿದೆ. ಒಂದು, ಇದು ಕೆಲವರಿಗೆ ಸ್ಮರಣಾಧೀನವಾಗುತ್ತದೆ. ಅದು ಹಜ್ರತ್ ಜುನೈದ್ ಷಿಬ್ಲಿ ಮುಂತಾದವರಂತೆ, ಇವರ ಸನ್ಮಾರ್ಗದರ್ಶನದ ಹಲವು ಗ್ರಂಥಗಳು ಇತರರ ಮಾರ್ಗದರ್ಶನಕ್ಕಾಗಿ ಲಭ್ಯವಿದೆ. ಆದರೆ ಇನ್ನೂ ಹಲವರಿಗೆ ಇದು ಕಿವುಡನ್ನಾಗಿಸುತ್ತದೆ. ಮಜ್‌ಜೂಬ್ (ಸೂಫಿ ಸನ್ಯಾಸಿ)ಗಳ ತರಹ ಇವೆರಡು ಗುಂಪುಗಳು ಆ ಎರಡು ಹದೀಸ್‌ಗಳ ಯಥಾವತ್ತತೆಯಂತಿವೆ.

ಈ ಎರಡು ಹದೀಸ್‌ಗಳ ಕುರಿತು ನಿನಗೆ ಒಡಂಬಡಿಕೆ ಇದ್ದರೆ,
ನಾನೀಡುವ ಅದರರ್ಥ ನಿಜಕೂ ಸಂಪ್ರೀತಗೊಳಿಸುವುದು ನಿನ್ನನ್ನು.

ನನ್ನರ್ಥ ನಿನಗೆ ಒಪ್ಪಿಗೆಯಾಗದಿದ್ದರೂ ಸ್ವಯಂ ನೀ ಹೇಳು,
ಗೊತ್ತಿದ್ದರೆ ಆ ಎರಡು ರಹಸ್ಯಗಳ ಮರ್ಮ ನಿನಗೆ.

ನನ್ನ ಪೀರ್-ಮುರ್ಷದರು, ಆ ಸೂಫಿ ಫಕೀರರನ್ನು (ಮಜ್‌ಜೂಬ್) ನೋಡುತ್ತಿದ್ದಾಗ, ಅವರಿಗೆ ಅನಿಸುತ್ತಿತ್ತು. ಇವರು ದೈವೀ ಅಸ್ತಿತ್ವದ ಮದಿರೆಯಲ್ಲಿ ಪ್ರಮತ್ತರಾಗಿ ಪ್ರಫುಲ್ಲಿತರಾಗಿದ್ದಾರೆ. ಹೀಗಾಗಿ ಅವರು ಬುದ್ಧಿ ಭ್ರಮಿತ ಸ್ಥಿತಿಯಲ್ಲಿರುತ್ತಿದ್ದರೆ, ಅವರ ಸೇವೆಯನ್ನು ಮಾಡುತ್ತಿದ್ದರು. ಅವರಿಗೆ ಅತ್ಯಧಿಕ ರಿಯಾಯಿತಿಗಳನ್ನು ನೀಡುವ ಮನೋಭಾವ ಹೊಂದಿರುತ್ತಿದ್ದರು. ಆ ಸಮಯದಲ್ಲಿ ಕೆಲವರು, ಈ ಬುದ್ಧಿ ಭ್ರಮಿತ ಹುಚ್ಚರ ಹಾಗೂ ಅಯೋಗ್ಯರ ಬಗ್ಗೆ ಈ ರೀತಿಯ ಗೌರವಾದರಗಳನ್ನು ಏಕೆ ನೀಡಲಾಗುತ್ತದೆ ಎಂದು ಪ್ರಶ್ನಿಸುತ್ತಿದ್ದರು. ಇದರ ಮರ್ಮ ಏನೆಂದು ವಿಶದೀಕರಿಸಿ ಹೇಳುತ್ತಾ ನುಡಿಯುತ್ತಿದ್ದರು. 'ನೀವು ನುಡಿದಂತೆ, ಹಾಗೆಯೇ ಇದ್ದರೂ, ಆಗಲೂ ಸಹ ಇವರು ನಮಗಿಂತಲೂ ನೂರು ಪಟ್ಟು ಉತ್ತಮರಾಗಿದ್ದಾರೆ. ಯಾಕೆಂದರೆ ನಾವು ಕೊಡು-ಕೊಳ್ಳಾಟದ ವ್ಯವಹಾರದಲ್ಲಿ ಬಂಧಿತರಾಗಿದ್ದೇವೆ, ಆದರೆ ಅವರು ಈ ವ್ಯವಹಾರದಿಂದ ಮುಕ್ತರಾಗಿದ್ದಾರೆ.

ಯಾವನು ಪ್ರೇಮಭಾವದಲಿ ಮೈಮರೆತವನೂ ಹುಚ್ಚನು ಆಗಿದ್ದಾನೆ,
ಅವನು ಜಗದವರಿಂದ ನೂರು ಪಟ್ಟು ಶ್ರೇಷ್ಠನಾಗಿದ್ದಾನೆ.

ಅವನು ತನ್ನ ಅಭಿಲಾಷೆಗಳನ್ನು ತ್ಯಜಿಸಿ ದಡ ಸೇರಿರುವನು,
ಇವನು ತನ್ನ ಅಭಿಲಾಷೆಗಳಲಿ ಮುಳುಗಿ ತೊಳಲುತಿರುವನು.

ಆಭರಣ–೮೮

ಚಿತ್ತ, ಹೃದಯ, ಆತ್ಮ, ಪ್ರಕಾಶದ ಕುರಿತು

ಈ ನಶ್ವರಲೋಕದಿಂದ ಪರಮ ಪವಿತ್ರ ಲೋಕದವರೆಗೆ ನಾಲ್ಕು ಹಂತಗಳಿವೆ. ನಫ್ಸ್ (ಚಿತ್ತ), ಹೃದಯ, ಆತ್ಮ ಹಾಗೂ ಬೆಳಕು, 'ಈ ತರಹ' ಹಾಗೂ 'ಆ ತರಹ'ಗಳಲ್ಲಿ ಇರುತ್ತಾ ತನ್ನ ವಾಸ್ತವಿಕ ಸತ್ಯತೆಯಿಂದ ಪರಿಪೂರ್ಣ ಅರಿವವುಳ್ಳವನಾಗಿ ಹೃದಯವಾಗುತ್ತಾನೆ. ಹೃದಯವು ಆಗ ಜ್ಞಾನದಿಂದ ಪವಿತ್ರನಾದ ತನ್ನ ಬಂಡವಾಳವನ್ನು ನೋಡುವಂತಾಗುತ್ತದೆ. ಆಗ ಅದು ಆತ್ಮವಾಗುತ್ತದೆ. ಆತ್ಮಕ್ಕೆ ತನ್ನ ಆಂತರ್ಯದ ಅಂತರ್ದೃಷ್ಟಿಯಿಂದ ತನ್ನ ಮೂಲದ ವಿವೇಚನೆಯಾಗುತ್ತದೆ. ಆಗ ಅದು ಬೆಳಕಿನ (ನೂರ್) ಅಂತಸ್ತನ್ನು ತಲುಪುತ್ತದೆ. ಅರ್ಥಾತ್ ತನ್ನ ಸತ್ತೆ (ಜಾತ್)ಯಲ್ಲಿದ್ದ ಅಸ್ತಿತ್ವವನ್ನು ಅದಕ್ಕೆ ಒಪ್ಪಿಸುತ್ತದೆ. ಅರ್ಥಾತ್ ತನ್ನ ಅಸ್ತಿತ್ವನ್ನು ಸತ್ಯದ ಅಸ್ತಿತ್ವದಲ್ಲಿ ಬದಲಾಯಿಸುತ್ತದೆ ಅದೂ ಅಲ್ಲದೆ ಅದನ್ನು ಸಮಸ್ತವಾಗಿ ಸುತ್ತುವರಿಯುತ್ತವೆ. ಇದನ್ನೇ 'ಗಂಜೇ ಮಖಫಿ' (ಅವ್ಯಕ್ತ ಕೋಶ) ಎಂದು ಕರೆಯಲಾಗುತ್ತದೆ. ಈ ಸ್ಥಿತಿಯಲ್ಲಿ ಆದಿಯೂ ಇರುವುದಿಲ್ಲ, ಅಂತ್ಯವೂ ಇರುವುದಿಲ್ಲ, ಅದು ಯಾವ ಸ್ಥಿತಿಯಲ್ಲಿತ್ತು, ಅದೇ ಸ್ಥಿತಿಯಲ್ಲಿತ್ತು ಅದೇ ಸ್ಥಿತಿಯಲ್ಲಿ ಇರುತ್ತದೆ.

ಆಭರಣ–೮೯

ಒಳಿತು–ಕೆಡಕು ಅವನಿಂದಲೇ ಉಂಟಾಗುವ ಗೂಡಾರ್ಥದ ವಿವರಣೆ

'ಒಳಿತ'ನ ಪ್ರಕಟರೂಪವು ದೇವರಿಂದ ಇರುವುದಾಗಿ ಹೇಳಲಾಗುತ್ತದೆ ಹಾಗೂ ಕೆಡಕು ಚಿತ್ತದ ದುರಹಂಕಾರದಿಂದಾಗಿದೆ. ನನ್ನ ಪ್ರಿಯತಮನು ಸತ್ಯದ ಪ್ರತಿರೂಪವಾಗಿದ್ದಾನೆ. ಅವನ ಪಾವನ ಅಸ್ತಿತ್ವವು ಈ ತರಹದ ಕೆಡಕುಗಳು, ದುರ್ಗುಣಗಳಿಂದ ಸಂಬಂಧವಿಹೀನವಾಗಿದೆ. ಅವರು ಉಷ್ಟ್ರ ಪಕ್ಷಿಯಂತೆ ಅಂತರಂಗ ರೂಪದಲ್ಲಿ ಕುತಂತ್ರಿಯಾಗಿದ್ದರೆ, ಇದು ನಿಜಕ್ಕೂ ವಿಚಿತ್ರವಾಗಿದೆ. ಅದು ಈ ರೀತಿಯಾಗಿ ಮಹಾಮಹಿಮನು ಅಲ್ಲಾಹನ ಆಂಶಿಕ ಹಾಗೂ ಸಂಪೂರ್ಣ, ಮತ್ತು ಹೂವು ಹಾಗೂ ಮುಳ್ಳಿನ ಮೇಲೆ ಸ್ವಯಂ ಅಧಿಕಾರವುಳ್ಳವನಾಗಿದ್ದಾನೆ. ಅವನ ಅಧಿಕಾರ ವ್ಯಾಪ್ತಿಯಲ್ಲಿ ಇನ್ನೊಬ್ಬನು ಹಸ್ತಕ್ಷೇಪ ಮಾಡುವ ದುಸ್ಸಾಹಸವಾದರೂ ಯಾರಲ್ಲಿ ಇದೆ? ಕೆಡುಕಿನ ಕರ್ತನು ಅದೇ ಲಂಪಟನಾಗಿದ್ದರೆ, ಸತ್ಯದ ಕಣ್ಣಿನಿಂದ ನೋಡು, ಇದರ ಅರ್ಥವು, ಅವುಗಳ ಅರ್ಥಗಳಿಂದ ಭಿನ್ನವಾಗಿಲ್ಲ. ಯಾವನಾದರೂ ಸಂಕುಚಿತ

ದೃಷ್ಟಿಯುಳ್ಳ ಮಹಮೂದನ (ಬಹರಿ) ಈ ಚರ್ಚೆಯನ್ನು ಕೇಳಿ, ಅಸಭ್ಯವೆಂದು ಭಾವಿಸಿ, ಇವನೇ ಕೆಡಕಿನ ಮೂಲವೆಂದು ನುಡಿದರೆ, ನಾನು ಪ್ರಥಮವಾಗಿ ಅವನ ಒಳಿತನ್ನು ಹಾಗೂ ಅಂತ್ಯದಲ್ಲಿ ಕೆಡಕನ್ನು ಅರಿಯಲು ಪ್ರಯತ್ನಿಸುವೆನು. ಅರ್ಥಾತ್ ಬುದ್ಧಿಯು ಒಳಿತಿನ ಮೂಲವಾಗಿಯೂ, ಹಾಗೂ ಕೆಡಕು ಅಲ್ಲಾಹನು ಇಚ್ಛಿಸದೇ ಇರುವ ಭಾವವು ಪ್ರಕಟರೂಪವಾಗುತ್ತದೆ. ಆಗ ಪರಮ ದೈವಿಜ್ಞಾನಿ ಪ್ರೇಮಿಯ ಪ್ರಮತ್ತತೆ ಹಾಗೂ ತಲ್ಲೀನತೆಯ ಭಾವದಲ್ಲಿ ಬೆಂಕಿ ಹಾಗೂ ನೀರಿನ ಭೇದವನ್ನು ಅರಿಯದವನಾಗುತ್ತಾನೆ. ಈ ಸ್ಥಿತಿಯೂ ಮುಗ್ಧ ಮಗುವಿನಂತೆ ಅಥವಾ ದೈವಿಧ್ಯಾನದಲ್ಲಿ ಮೈಮರೆತ ಮಜಜ್ಹೂಬ್‌ನದಾಗುತ್ತದೆ. ಹೀಗಾಗಿ ನನ್ನ ಮುರ್ಷದ್ ಮಹೋದರು ಕೆಲವೊಮ್ಮೆ ಈ ರೀತಿಯಾಗಿ ಉದ್ಘೋಷಿಸುತ್ತಿದ್ದರು, ಅದೇನೆಂದರೆ ನಾನು ಈ ಕಾಲದಲ್ಲಿ ಫಕೀರರ ಫಕೀರತ್ವವನ್ನು ಮಜಜ್ಹೂಬ್‌ಗಳ ಹೊರತಾಗಿ ಬೇರ್‍ಯಾರಲ್ಲು ಕಂಡಿಲ್ಲವೆಂದು, ಇದರ ಹೊರತಾಗಿ ಪ್ರತಿಯೊಂದು ಪ್ರದರ್ಶನ ಹಾಗೂ ತೋರ್ಪಡಿಕೆಗಳಾಗಿವೆ ಹಾಗೂ ಸೂಫಿ ಮಠಗಳ ಭವ್ಯತೆ ಹಾಗೂ ಶೃಂಗಾರವಾಗಿ ಕಂಡು ಬರುತ್ತವೆ.

ಆಭರಣ–೯೦

ಚಿತ್ತ, ಹೃದಯ ಹಾಗೂ ಆತ್ಮದ ಚಮತ್ಕಾರಗಳು

ಚಿತ್ತ, ಹೃದಯ, ಆತ್ಮ ಹಾಗೂ ಬೆಳಕು– ಈ ನಾಲ್ಕು ಸದಾ ಮನುಷ್ಯನಲ್ಲಿ ನೆಲೆಸಿವೆ. ಇದೇ ಕ್ರಮದಲ್ಲಿ ಇವುಗಳಲ್ಲಿ ಚಮತ್ಕಾರವು ಪ್ರಕಟವಾಗುತ್ತದೆ. ಯಾವಾಗ ಜೀವನ ನಿರ್ವಹಣೆಯ ಚಿಂತೆ ಉದ್ಭವವಾಗುತ್ತದೆ, ಆಗ ಅದು ವಾಸ್ತವಿಕವಾಗಿ ಚಿತ್ತವಾಗಿರುತ್ತದೆ. ಈ ಸ್ಥಿತಿಯಲ್ಲಿ ಹೃದಯವೂ ಇರುವುದಿಲ್ಲ, ಆತ್ಮವೂ ಇರುವುದಿಲ್ಲ.

ಚಿತ್ತದ ಪ್ರಭಾವದಲಿ ಈ ಶುಭಮರ್ಮವನು ನೆನಪಿಡು,
ಹೃದಯವನ್ನು ಪ್ರತಿ ಚಿಕ್ಕ–ದೊಡ್ಡ ಚಿಂತೆಯಿಂದ ಮುಕ್ತವಾಗಿಡು.

ಜ್ಞಾನದ ಮಾರ್ಗದಲ್ಲಿ ಸಾಗಿ, ಜ್ಞಾನಿಯಾದಾಗ ನೀನು ಹೃದಯವಾಗುತ್ತಿ. ಈ ಜ್ಞಾನವು ಅನಿವಾರ್ಯತೆ ಹಾಗೂ ಸಾಧ್ಯತೆಗಳ ಮಧ್ಯದ ತಡೆಯಾಗಿದೆ. ಹೀಗಾಗಿ ಜ್ಞಾನದ (ಸತ್ತೆಯ ಜೊತೆಗೆ) ಹೊರತಾಗಿ ಅನಿವಾರ್ಯತೆಯ ಪ್ರಕಟರೂಪವೂ ಇಲ್ಲ ಸಾಧ್ಯತೆಯ ಅಸ್ತಿತ್ವವೂ ಇಲ್ಲ. ಬ್ರಹ್ಮಾಂಡದ ಸೃಷ್ಟಿಯ ಇರುವಿಕೆಯ ವಿವಿಧ ಕಣಕಣಗಳು ಜ್ಞಾನದಿಂದ ತುಂಬಿದೆ. ಇದು ಹೇಗೆಂದರೆ ಯಾವ ರೀತಿ ವಿವಿಧ ಬಗೆಯ ಪಾತ್ರೆಗಳು ಒಂದೇ ನೀರಿನಿಂದ ತುಂಬಿರುವಂತೆ ಇದೆ.

ಹೀಗಾಗಿ ಜ್ಞಾನದ ಕೃಪೆಯಿಂದ ಅಂತರ್ದೃಷ್ಟಿಯನ್ನು ನೋಡುವವನಾಗುತ್ತಾನೆ. ಇದರಿಂದ ಅವನು ಅರಿಯುವುದೇನೆಂದರೆ ಇದೇ ಅಭಿಲಾಷೆಯು ಅಂತರ್ದೃಷ್ಟಿಯಾಗಿದ್ದರೆ, ಆತ್ಮವಾಗುತ್ತಾನೆ. ಆಗ ವಿವೇಕವು ಅಂತರ್ದೃಷ್ಟಿಯಿಂದ ಮೇಲೆಳಿದಾಗ ಅದು ಪ್ರಕಾಶವಾಗುತ್ತವೆ. ಆರಿಫ್‌ನ (ದೈವೀಜ್ಞಾನಿಯ) ವಿಕಾಸ ಇಲ್ಲಿಯವರೆಗೆ ಮಾತ್ರ ಸೀಮಿತವಾಗಿರುತ್ತದೆ.

ನಾಲ್ಕು ಈ ಅಂಗಗಳ ಹೊರತು ಇಲ್ಲ ಪ್ರಭುತ್ವ ಗಗನ ಪೃಥ್ವಿಯದು
ಮನುಷ್ಯನಾಗಲಿ, ಜಿನ್[೧] ಆಗಲಿ ಇಲ್ಲ. ಇವುಗಳ ಹೊರತು ಕ್ರಿಯಾಶೀಲ

ಈ ನಾಲ್ಕರ ಹೊರತು ಎಲ್ಲಿಹುದು ಬ್ರಹ್ಮಾಂಡದ ಅಸ್ತಿತ್ವ,
ಆ ನಾಲ್ಕು ಅಂಗಗಳೆ ಚಿತ್ತ, ಹೃದಯ,ಆತ್ಮ ಹಾಗೂ ಬೆಳಕು.

ಆಭರಣ–೯೧

ಚಿತ್ತದ ವಾಸ್ತವಿಕತೆ

'ಫಾ ಅಹಬತ್ತು' ಮಹ್ಮದರ ವಾಸ್ತವಿಕತೆಯಾಗಿದೆ. ಅರ್ಥಾತ್ 'ಬಯಸಿದೆ'. ಒಂದು ವೇಳೆ ಇದರ ಬಗ್ಗೆ ನನ್ನನ್ನು ಕೇಳಿದರೆ, ಇದೇ ಚಿತ್ತದ ಬಯಕೆಯು ದುಷ್ಕರ್ಮಗಳನ್ನು ಮಾಡಲು ಮಾನವನನ್ನು ಪ್ರೇರೇಪಿಸುವ 'ನಫ್ಸೆ ಅಮ್ಮಾರಾ' ವಾಗಿದೆ. ಅವನ ಅಸ್ತಿತ್ವದಲ್ಲಿ ಈ ದುಷ್ಕರ್ಮ ಎಸಗುವ ಚಿತ್ತವಿರವಿದ್ದರೆ, ಅದು ಹೇಳಿಕೆಯ ಕೋಣೆಯಲ್ಲಿಯೇ ಸುರಕ್ಷಿತವಾಗಿರುತ್ತಿತ್ತು. ಪಾವಿತ್ರ್ಯತೆ ಮತ್ತು ಪರಿಶುದ್ಧತೆಯ ಏಕಾಂತತೆಯಲ್ಲಿ ಗುಪ್ತವಾಗಿರತ್ತಿತ್ತು ಹಾಗೂ ಜೀವರಾಶಿಯನ್ನು ಪ್ರಕಟರೂಪದ ಪೋಷಾಕನ್ನು ದಯಪಾಲಿಸುತ್ತಿರಲಿಲ್ಲ ಹಾಗೂ ಸೌಂದರ್ಯ್ಯದ ತೇಜಸ್ಸನ್ನು ಪ್ರಕಟಪಡಿಸುತ್ತಿರಲಿಲ್ಲ. ಬದಲಾಗಿ 'ಇನ್ನಿ ಅನಲ್ಲಾಹು ಲಾ ಇಲ್ಲಾಹ ಇಲ್ಲಾ ಅನಾ' ಎಂದು ನುಡಿಯುತ್ತಿರಲಿಲ್ಲ. ಈಗ ಸಮಸ್ತ ಸೃಷ್ಟಿಗಳ ಸಾರ ಆ ಅನಂತ ಪ್ರಕಾಶವೇ ಆಗಿದೆ. ಅನಪೇಕ್ಷಿತ ಹಾಗೂ ಅನುಪಯುಕ್ತನು ಯಾವಾಗ ಬೇಕಾದರೂ ಪ್ರಕಟವಾಗುತ್ತಾನೆ ಹಾಗೂ ಕಾರ್ಯ ಪ್ರವೃತ್ತನಾಗುತ್ತಾನೆ. ಇದಕ್ಕಾಗಿಯೇ ಹೇಳಲಾಗುತ್ತದೆ ಚಿತ್ತವೇ ಮೂಲವಾಗಿದೆ. ಉಳಿದವುಗಳಾದ ಹೃದಯವಾಗಲಿ ಅಥವಾ ಆತ್ಮವಾಗಲಿ ಇದರ ವಿಕಾಸ ಪ್ರಕ್ರಿಯೆಯಲ್ಲಿವೆ. 'ಆರಿಫ್'ನ (ಬ್ರಹ್ಮಜ್ಞಾನ) ನಕರಾತ್ಮಕತೆಯ ಪರಿಪೂರ್ಣತೆಯು 'ಚಿತ್ತ'ದಿಂದಾಗಿದೆ. ಒಂದು ವೇಳೆ ಚಿತ್ತದ ನಿರಾಕರಣೆಯಾದರೆ, ಚಿತ್ತವೆಲ್ಲ ಬಾಕಿ

---

೧. ಜಿನ್ – ಒಂದು ಬಗೆಯ ಸೈತಾನ್

ಇರುತ್ತದೆ. ಚಿತ್ತದ ನಿರಾಕರಣೆಯೆಂದರೆ ಕೆಟ್ಟ ಅರ್ಹತೆಗಳ ನಿರಾಕರಣೆ ಹೀಗಾಗಿ ಒಂದು ರೀತಿಯಲ್ಲಿ ಸ್ವಯಂ "ಆರೀಫನ' ಚಿತ್ತವಾಗಿದ್ದಾನೆ.

ಚಿತ್ತ ಮೂಲವಾಗಿಹುದು ಉಳಿದೆಲ್ಲಾ ಛಾಯೆ,
ಇವೆಲ್ಲ ಮಕ್ಕಳಿದ್ದಂತೆ, ಅದು ದಾದಿ ಇದ್ದಂತೆ.

ಆತ್ಮ ಹಾಗು ಹೃದಯ, ಇರಬಹುದು ಗೌರವಾನ್ವಿತ,
ಆದರೆ ಆ ಚಿತ್ತವೇ ಆಗಿಹುದು ಇವೆರಡ ಬಂಡವಾಳ.

ಇವೆರಡು ಆಗಿಹವು ಅರ್ಹತೆಯ ಅಸ್ತಿತ್ವಗಳು,
ಇವು ಹದೀಸ್‌ಗಳಾಗಿವೆ ಅವು ಕುರಾನಿನ ಸೂತ್ರ.

ನಿಸ್ಸಂದೇಹವಾಗಿ ಚಿತ್ತವು ಅಸ್ತಿತ್ವವಾಗಿಹುದು 'ಬಹರಿ',
ಬಾವುಟದ ಛಾಯೆ, ಸೈನಿಕ ಛಾವಣಿಯ ಗೌರವದಂತೆ.

ಆಭರಣ-೯೨

ಚಿತ್ತದ ಇನ್ನಷ್ಟು ವಿವರಣೆ

ನನ್ನ ಪೀರ್-ಮುರ್ಷದ್‌ರಾದ ಹಜ್ರತ್ ಬಾಖಿರ್ (ಅಲ್ಲಾಹನು ಅವರ ಗೋರಿಯನ್ನು ಪ್ರಕಾಶದಿಂದ ಬೆಳಗಿಸಲಿ) ಮಾನ್ಯರು ಗೋಗಿಯಿಂದ ಆರು ಮೈಲಿ ದೂರವಿರುವ ಅಣಬ್ ಎಂಬ ಗ್ರಾಮದಲ್ಲಿ ಹಜ್ರತ್ ಶಾಹ್ ಮೋಮಿನ್ ತವಕ್ಕಲ್‌ರವರ ಉರುಸ್‌ನಲ್ಲಿ ಭಾಗವಹಿಸಲು ಹೋಗಿದ್ದರು (ಇವರು ಹಜ್ರತರ ತಾತರಾಗಿದ್ದರು) ಆ ಸಮಯದಲ್ಲಿ ಸ್ವೇಚ್ಛಾಚಾರದ ಸಾರಾಂಶದಂತೆ ಹಾಗೂ ತಲೆಹಿಡುಕರ ಸರದಾರ ಎನಿಸಿಕೊಂಡಿದ್ದ, ಹೃದಯದಲ್ಲಿ ಗ್ರಂಥ ಪಾರಂಗತನಾಗಿದ್ದು, ಆದರೆ ಕೈಯಲ್ಲಿ ಮದಿರೆಯ ಪಾತ್ರೆಯನ್ನು ಹೊಂದಿರುವುವವನಾಗಿದ್ದ 'ಹಸನ್ ಚಾಬುಕ್ ಬನುವಾ' ಎಂಬುವವನು ಕೆಲವು ದಿನಗಳಿಂದ ಆ ಗ್ರಾಮದಲ್ಲಿಯೇ ವಾಸ್ತವ್ಯ ಹೂಡಿದ್ದನು. ಮಾನ್ಯ ಪೀರ್ ಹಜ್ರತ್‌ರು ಫಕೀರಿಯ ಶಿಷ್ಟಾಚಾರದಂತೆ ಅವನನ್ನು ಭೇಟಿಯಾಗಲು ಹೋದರು ಹಾಗೂ ಅವನ ಹಸ್ತವನ್ನು ಚುಂಬಿಸಲು ತಮ್ಮ ಕೈಗಳನ್ನು ಮುಂದಕ್ಕೆ ಚಾಚಿದರು. ಆದರೆ ಮೃಗೀಯ ಸ್ವಭಾವದವನಾದ ಅವನು ತಕ್ಷಣವೇ ತನ್ನ ಪಾದಗಳನ್ನು ಮುಂದಕ್ಕೆ ಚಾಚಿದನು. ಹಜ್ರತ್‌ರ ಎದೆಯಾಳವು ನಿಷ್ಕಪಟವಾಗಿತ್ತು ಹಾಗೂ ಹೃದಯವು ಕನ್ನಡಿಗಿಂತಲೂ ಅಧಿಕ ಶುಭ್ರವಾಗಿತ್ತು. ಈ ತತ್‌ಕ್ಷಣದ ಘಟನೆಯಿಂದ ಸ್ವಲ್ಪವು ವಿಚಲಿತರಾಗದೆ, ಅವನ ಕಾಲನ್ನು ಅವನ ಶಿರಗಿಂತಲೂ ಶ್ರೇಷ್ಠವೆಂದು ಭಾವಿಸಿ

ಚುಂಬಿಸಿದರು. ಆ ಸ್ವೇಚ್ಛಾಚಾರಿಯ ಹೃದಯದಲ್ಲಿ ಏನಿತ್ತೆಂದರೆ, ಇವರು ಯಾವುದೇ ಕಾರಣ ನೀಡಿ, ತಪ್ಪಿಸಿಕೊಂಡಿದ್ದರೆ, ಆ ಮಾತಿನಿಂದಲೇ ಇವರನ್ನು ಬಂಧಿಯಾಗಿಸಲು ಯೋಚಿಸಿದ್ದನು. ಜತೆಗೆ ಏಕತ್ವದ ಘೋಷಣೆ ಹಾಗೂ ನಂತರ ತನ್ನತನ ಹಾಗೂ ಪರಕೀಯತೆಯ ಸ್ಥಿತಿ ಗತಿಯಲ್ಲಿ ಅವರ ಪರಿಪೂರ್ಣತೆಯನ್ನು ಪರೀಕ್ಷಿಸಿದ ನಂತರ, ಮತ್ತೆ ಇಂತಹ ಕುಚೋದ್ಯದ ಕೃತ್ಯವನ್ನು ಎಸಗಲಿಲ್ಲ. ಆದರೆ ನಂತರ ಚರ್ಚೆ ವಾಗ್ವಾದಗಳು ಪ್ರಾರಂಭವಾಯಿತು. ಅದೇನೆಂದರೆ ಚಿತ್ತ, ಹೃದಯ ಹಾಗೂ ಆತ್ಮ ಇವು ಪರಮೋಚ್ಛ ಚಿತ್ತಸ್ಥಿತಿಯಲ್ಲಿ ಒಂದೇ ಆಗಿರುತ್ತವೆಯೋ ಅಥವಾ ಬೇರೆ ಬೇರೆಯಾಗಿರುತ್ತವೆ. ಅಕಸ್ಮಾತ್ ಇವು ಬೇರೆ ಬೇರೆಯಾಗಿದ್ದರೆ, ಇವುಗಳ ಮಧ್ಯೆ ಎಷ್ಟು ಗಜದ ಅಂತರವಿರುತ್ತದೆ. ಎರಡು, ನಾಲ್ಕು ಅಥವಾ ಐದು ಗಜದ ಅಂತರ? ಉತ್ತರವಾಗಿ ಪೀರ್ ಹಜ್ರತ್‌ರು ಈ ರೀತಿ ನುಡಿದರು 'ಅಲ್ಲಾಹನ ವತಿಯಿಂದ ನನಗೆ ಈ ಸಂಬಂಧ ಯಾವುದೇ ತಿಳುವಳಿಕೆ ಇಲ್ಲ. ಆದರೆ ತಮ್ಮಂಥ ಫಕೀರ ಶ್ರೇಷ್ಠರ ಸಾನಿಧ್ಯಭಾಗ್ಯ ನನ್ನ ಪಾಲಿನಲ್ಲಿದ್ದರೆ, ಈ ಅಲ್ಪನು ಹೃದಯ ಹಾಗೂ ಆತ್ಮದ ಕುರಿತು ನನ್ನ ತಿಳುವಳಿಕೆಗೆ ತಕ್ಕಂತೆ ತಮ್ಮಲ್ಲಿ ಅರುಹುವೆ, ಆದರೆ ಚಿತ್ತದ ಅಸ್ತಿತ್ವದ ಬಗ್ಗೆ ನಾನು ಸಂಪೂರ್ಣ ಅನಭಿಜ್ಞನಾಗಿದ್ದೇನೆ. ನನ್ನ ದೈವೀಜ್ಞಾನದ ಹಸ್ತ ಎಂದಿಗೂ ಅದರ ಸೆರಗಿಗೆ ತಲುಪಲಿಲ್ಲ ಹಾಗೂ ನನ್ನ ವಿವೇಚನೆಯ ಪಕ್ಷಿಗೆ ಅದರ ಗಾಳಿಗಂಧದ ಪರಿಚಯವೂ ಆಗಲಿಲ್ಲ. ಇದನ್ನು ಕೇಳಿ ಬನುವಾ ನುಡಿದನು– ನೀವಂತೂ ತೀರಾ ವಿರುದ್ಧವಾದ ವಿಷಯವನ್ನು ಹೇಳುತ್ತಿದ್ದೀರಿ? ಆಗ ಪೀರರು ಪ್ರಶ್ನಿಸಿದರು 'ಅದ್ಹೇಗೆ'? ಅವನು ನುಡಿದನೇನೆಂದರೆ ಚಿತ್ತದ ಮನೋಸ್ಥಿತಿಯನ್ನು ಎಲ್ಲರೂ ಅರಿತವರಾಗಿರುತ್ತಾರೆ. ಆದರೆ ಹೃದಯ ಹಾಗೂ ಆತ್ಮದ ವಾಸ್ತವಿಕತೆಯ ಬಗ್ಗೆ ಅರಿತವರು ಹುಡುಕಿದರೆ ಒಬ್ಬರೋ, ಇಬ್ಬರೋ ಸಿಗಬಹುದು ಯಾಕೆಂದರೆ ಇವೆರಡು (ಹೃದಯ ಮತ್ತು ಆತ್ಮ) ಯೋಚನಾಪರತೆಯ ಊಹೆಯಿಂದ ಹೊರತಾಗಿವೆ. ಯಾವುದು ಸರಳವಾಗಿದೆಯೋ ಅದನ್ನು ನೀವು ಕಠಿಣವೆಂದು ತಿಳಿಯುತ್ತೀದ್ದಿರಿ ಹಾಗೂ ಕಠಿಣವಾದುದನ್ನು ನೀವು ಸರಳವೆನ್ನುತ್ತೀದ್ದೀರಿ. ಆಗ ಪೀರ್ ಹಜ್ರತರು ನುಡಿದರು ಆಕಾಶವು ಅಲ್ಲಾಹನ ಬೃಹತ್ ಕುರುಹುಗಳಲ್ಲಿ ಒಂದಾಗಿದೆ. ಎಷ್ಟು ಬೃಹತ್ ಎಂದರೆ, ಅದು ಸಮಸ್ತವನ್ನು ಆವರಿಸಿಕೊಂಡಿದೆ ಸಮಸ್ತ ಪದಾರ್ಥಗಳ ಸ್ಥಿತಿಯು ಇದರಿಂದಲೇ ಇದೆ. ಇದರಿಂದ ಸೂರ್ಯನು ಲೋಕವನ್ನು ಬೆಳಗಿಸುತ್ತಾನೆ ಹಾಗೂ ಇದರ ಪ್ರಕಾಶವು ಅಂಧಕಾರವನ್ನು ನಿವಾರಿಸುತ್ತದೆ ಹಾಗೂ ಆದಂನಿಗೆ (ಮನುಷ್ಯನಿಗೆ) ದಾರಿಯನ್ನು ತಿಳಿಸಿಕೊಡುತ್ತಾನೆ ಅಥವಾ ಸಮುದ್ರವನ್ನೇ ತೆಗೆದುಕೊಳ್ಳಿ, ಏನೆಲ್ಲಾ ಭೂಲೋಕದಲ್ಲಿ ಇದೆಯೋ ಅದೆಲ್ಲವೂ ಸಮುದ್ರದಲ್ಲಿದೆ. ಭೂಲೋಕದಲ್ಲಿ ಇರಲಾರದ್ದು, ಸಹ ಸಮುದ್ರದಲ್ಲಿದೆ. ಹಿಂದೂಗಳ ಧಾರ್ಮಿಕ ನಂಬಿಕೆಯ ಪ್ರಕಾರ ಬ್ರಹ್ಮಾಂಡದ ಹುಟ್ಟಿನ ಮೂಲವೇ ಸಮುದ್ರವಾಗಿದೆ. ಅಥವಾ ಆತ್ಮವನ್ನೇ ತೆಗೆದುಕೊಳ್ಳಿ, ಇದು ಮಹಾಮಹಿಮೆ ಪರಂಸತ್ಯದ ಅಸ್ತಿತ್ವದ

ಪದರಾಗಿದೆ. ಸಮಸ್ತ ಜೀವರಾಶಿಯ ಸಾರಾಂಶವಾಗಿದೆ. ಅಥವಾ ಹೃದಯ ನರಲೋಕ (ನಾಸೂತ)ದ ಮಾವನಾದ ಹಾಗೂ ಮಲಕೂತ್ (ದೈವೀಲೋಕ)ದ ಚಕ್ರವರ್ತಿಯಾಗಿದೆ. ಅಥವಾ ಪ್ರಕಾಶ, ಇದು ಮಣ್ಣಿನಿಂದ ಪವಿತ್ರವಾಗಿದ್ದು, ಬುದ್ಧಿಯ ಗಡಿಯಿಂದ ಬಹುದೂರವಿದೆ. ಹೀಗಾಗಿ ಇವೆಲ್ಲವುಗಳಲ್ಲಿ ಅಲ್ಲಾಹನ ದೊಡ್ಡ ದೊಡ್ಡ ಕುರುಹುಗಳಿವೆ. ಯಾವ ಒಂದು ವಸ್ತುವಿನ ಕುರಿತಾಗಿ ಪ್ರವಾದಿಗಳ ಹದೀಸ್ (ವಚನಾಮೃತ ಗ್ರಂಥ)ನಲ್ಲಿ ಉಲ್ಲೇಖವಾಗಿರುವುದಿಲ್ಲ. ಅದೇನೆಂದರೆ ಯಾವನೇ ವ್ಯಕ್ತಿ ಆಕಾಶ, ಸೂರ್ಯ ಅಥವಾ ಆತ್ಮವನ್ನು ಗುರುತಿಸಿದರೆ ಅವನು ತೇಜೋಮಯ ದೇವರನ್ನು ಗುರುತಿಸಿದಂತೆ ಎಂದು ಉಲ್ಲೇಖಿತವಾಗಿರುವುದಿಲ್ಲ. ಆದರೆ ಇವೆಲ್ಲವನ್ನು ಬಿಟ್ಟು, ಚಿತ್ತದ ಕುರಿತಾಗಿ ಹದೀಸ್ ಜಾರಿಯಾಯಿತು. ಅದೇನೆಂದರೆ 'ಮನ್ ಅರಫಾ ನಫ್‌ಸಾ ಫಕದ್ ಅರಫಾ' ಅರ್ಥಾತ್ ಯಾವನು ಚಿತ್ತವನ್ನು ಅರ್ಥೈಸಿಕೊಂಡಂತೆ ಎಂದು, ಆದುದರಿಂದ ಯಾವ ಚಿತ್ತವನ್ನು ಅವನು ದೇವರನ್ನು ಅರ್ಥೈಸಿಕೊಂಡಂತೆ ಎಂದು ಆದುದರಿಂದ ಯಾವ ಚಿತ್ತವನ್ನು ಅರ್ಥೈಸಿಕೊಳ್ಳುವುದರಿಂದ, ದೇವಜ್ಞಾನ ಪ್ರಾಪ್ತಿ ಸಾಧ್ಯವೋ, ಅದು ಈ ಅಲ್ಪಮತಿಯ ಸಾಮರ್ಥ್ಯದಲ್ಲಿ ಅದ್ಹೇಗೆ ಧಾರಣಗೊಳ್ಳಬಹುದು. ಹೀಗಾಗಿ ಚಿತ್ತವೂ ಅದ್ಹೇಗೆ ನನಗೆ ಸರಳವಾಗಿ ಅರ್ಥವಾಗಬಹುದು? ಆ ಫಕೀರನಿಗೆ ಈ ಅಪರೂಪದ ವ್ಯಾಖ್ಯಾನ ಅತೀವ ಮೆಚ್ಚುಗೆಯಾಯಿತು. ಅವನು ತನ್ನ ಸ್ಥಾನದಿಂದ ಎದ್ದು ವಿನಮ್ರನಾಗಿ ನಿಗ್ರಹರಹಿತನಾಗಿ ಹಜ್ರತ್ ಪೀರರ ಪಾದಕ್ಕೆ ಎರಗಿದನು ಹಾಗೂ ನುಡಿದನು. "ನಾನು ಅತಿ ಹೆಚ್ಚು ದೇಶಪರ್ಯಟನೆ ಮಾಡಿದ್ದೇನೆ, ಆದರೆ ಜ್ಞಾನಪುರುಷರಲ್ಲಿ ನಿಮ್ಮಂತಹ ವ್ಯಕ್ತಿತ್ವ ಸ್ಥಾನವನ್ನು ಕಂಡಿರಲಿಲ್ಲ. ನನ್ನ ಅಸಭ್ಯತೆಯನ್ನು ಕ್ಷಮಿಸುವಿರೆಂದು ಕೋರಿಕೊಳ್ಳುತ್ತೇನೆ".

ಚಿತ್ತವು ಕೋಮಲವಾಗುವುದಿಲ್ಲ, ಗುಪ್ತ ಜ್ಞಾನದ ಹೊರತು,
ಕೋಮಲವಾದಾಗ ಅವನು ಹೇಳವನು ಅದಕ್ಕೆ ಕೋಮಲವೆಂದು.

ಆಭರಣ–೯೩

ಚಿತ್ತ ಹಾಗೂ 'ಅಹಂ' ಭಾವ

'ನಾನು ತಿನ್ನುತ್ತೇನೆ' ಅಥವಾ 'ನಾನು ತೆಗೆದುಕೊಂಡು ಹೋಗುತ್ತೇನೆ, ಈ ತರಹದ ಉಚ್ಚಾರಗಳು ಸರ್ವೇ ಸಾಮಾನ್ಯವಾಗಿ ಎಲ್ಲರ ಬಾಯಿಯಿಂದ ಹೊರಬರುತ್ತವೆ. ಇದು ಕೇವಲ ಚಿತ್ತದ ಕಾರಣದಿಂದಾಗಿದೆ. ಬದಲಾಗಿ ಅದೇ ಸ್ವಯಂ ಚಿತ್ತವಾಗಿದೆ. ಈಗ ನಾನು ಈ 'ನಾನು' ಎಂಬ ಅಹಂ ಭಾವದಿಂದ ಚಿತ್ತವನ್ನು ಕಸಿದುಕೊಂಡು, ಅದನ್ನು ಝಾತ್‌ನ (ಪರಮ ಸತ್ಯತೆಯ) ಸುಪರ್ದಿಗೆ ವಹಿಸಿದಾಗ ಈ 'ನಾನು'

ಎಂಬುದು ಅದರದೇ ಅಪರಾಧಿಯಾಗಿದೆ. ಪ್ರತಿ ಜೀವಿ ಅದು ಪ್ರಾಣಿಯಿರಲಿ, ಗಿಡ-ಮರವಿರಲಿ, ತನ್ನನ್ನು ತನ್ನ ಸ್ಥಾನದಲ್ಲಿ ಸ್ಥಿರವೆಂದು ಭಾವಿಸುತ್ತದೆ. ಅದು 'ಮನಮ್' (ನಾನಾಗಿರುತ್ತೇನೆ) ಎಂದು ನುಡಿಯುತ್ತದೆ ಹಾಗೂ ತನ್ನ ರೀತಿಯಲ್ಲಿ ಇತರರನ್ನು ಇಷ್ಟಪಡುವುದಿಲ್ಲ. ಈ 'ನಾನು' ಎಂಬ ಭಾವವು ಕೇವಲ ಮಹಾಮಹಿಮ ದೇವನ ಹೊರತು ಯಾರಿಗೂ ಶೋಭಿತವಲ್ಲ. ಹೀಗಾಗಿ ಪ್ರತಿ ಸ್ಥಾನದಲ್ಲಿಯೂ ಸತ್ಯದ ಪ್ರಕಟರೂಪವು ಅದರ ಉದ್ದೇಶದ ಅನುರೂಪವಾಗಿ, ಯೋಗ್ಯ ರೀತಿಯಲ್ಲಿತ್ತು. ಹೇ ಆತ್ಮೀಯನೇ, ನನ್ನ ವಿಸ್ಮಯವೇನೆಂದರೆ, ಈ ಚಿತ್ತವು ಎಲ್ಲಿಂದ ಹೊರಹೊಮ್ಮಿತು. ಹಾಗೂ ಪರಂಸತ್ಯತೆಯು (ಜಾತ್) ಎಲ್ಲಿಂದ ಪ್ರಕಟವಾಯಿತು. ಆದರೆ ನನಗೆ ಅರಿವಾಯಿತೇನೆಂದರೆ ಚಿತ್ತದ ನಿರಾಕರಣೆಯೇ ಅದರ ದೃಢೀಕರಣವಾಗಿದೆ. ಅದ್ಹೇಗೆ ಎಂದರೆ ಸಕ್ಕರೆಯು ನೀರಿನಲ್ಲಿ ಕರಗಿದಾಗ ಅದು ಪಾನಕವೆನಿಸಿಕೊಳ್ಳುವಂತೆ.

ಚಿತ್ತವೇನಿಹುದು? ಅದು ಮನುಜನ ಸಾರಾಂಶವಾಗಿದೆ,
ಜೀವದ ಹೃದಯವಾಗಿದೆ ಅದು ಹೃದಯದ ಜೀವವಾಗಿದೆ.

ಇದರ ಅರ್ಹತೆಯು ಹೃದಯವಿರಲಿ ಅಥವಾ ಜೀವವಿರಲಿ,
ಎರಡೂ ಲೋಕಗಳಲೂ ಇಹುದು ಇದರದೇ ಗುರಿಯು.

ವಿಶೇಷ ಅಸ್ತಿತ್ವದ ಇಹುದು ಚಿತ್ತದ ನಿಯಂತ್ರಣದ ಗುರಿ,
ವಿಶೇಷ ಸಾಮಾನ್ಯರಿಬ್ಬರು ಹೊಂದಿಹರು ಇದರ ಸಂಬಂಧ.

ಬಹರಿ ಏನಿಹುದು? ಚಿತ್ತ? ಇದು ವಾಸ್ತವದಲಿ ಪ್ರಕಾಶ
ಅದು ಯಾವಾಗ ಎಂದರೆ ಇದರಿಂದ ಮುಕ್ತವಾದಾಗ ಮಾತ್ರ.

ಆಭರಣ-೯೪

ಹಜ್ರತ್ ಜಾನಮ್ (ರ.ಅ) ಅವರ ಬೋಧನೆಗಳಲ್ಲಿ ಮನುಷ್ಯನ ಐದು ಅಸ್ತಿತ್ವಗಳು

ಹಜ್ರತ್ ಶಾಹ ಮೀರಾಂಜಿ ಶಂಷುಲ್ ಅಷ್ವಾಖ್ ಮಾನ್ಯರ ಪುತ್ರರಾಗಿದ್ದ ಹಜ್ರತ್ ಶಾಹ ಬುರಾಹನುದ್ದೀನ್ ಜಾನಮ್ ಅವರ ಪರಿಭಾಷೆಯಲ್ಲಿ ಮನುಷ್ಯನಿಗೆ ಐದು ಅಸ್ತಿತ್ವಗಳನ್ನು ನಿರ್ಣಯಿಸಲಾಗಿದ್ದು, ಅವು ಹೀಗಿವೆ.

ಪ್ರಥಮವಾದದ್ದು ಕಡ್ಡಾಯ ಅಸ್ತಿತ್ವ (ಲಾಜ಼ಿಮುಲ್ ವುಜೂದ್)-ಇದು ದೃಷ್ಟಿಗೆ ಗೋಚರವಾಗುತ್ತದೆ. ಇದು ಪೃಥ್ವಿ, ಜಲ, ತೇಜ, ವಾಯು ಎಂಬ ಚತುರ್ಭೂತಗಳ ವಾಹನವಾಗಿದೆ. ಇದನ್ನು ಸ್ಪರ್ಶಿಸಿ, ಇಂದ್ರಿಯಾನುಭವಕ್ಕೆ ಒಳಪಡಿಸಬಹುದು.

ದ್ವಿತೀಯವಾದದ್ದು ಸಾಧ್ಯತಾ ಅಸ್ತಿತ್ವ (ಮುಮ್‌ಕಿನುಲ್ ವುಜೂದ್) ಮೂಲಭೂತ ಅಸ್ತಿತ್ವದ ಚಲನಶೀಲತೆಯು ಇದರಿಂದಲೇ ಉಂಟಾಗುತ್ತದೆ. ಇದು ಸ್ವಪ್ನದಲ್ಲಿ ವಿಹರಿಸುತ್ತದೆ. ಆದಿ ಕರಾರಿನ ದಿನ ಇದರ ಜನ್ಮವಾಯಿತು 'ಅಲಸ್ತು ಬಿರಬ್ಬಿಕುಂ ಖಾಲೂ ಬಿಲಾ' ದಿಂದ ಉತ್ತರಿಸಲಾಯಿತು. ರೂಪ ಚಹರೆಯಲ್ಲಿ ಇದು ಮಣ್ಣಿನ (ಮಾನವನ) ರೂಪದಂತಿದೆ.

ಮೂರನೆಯದು ನಿರೋಧಿಸಲ್ಪಟ್ಟ ಅಸ್ತಿತ್ವ (ಮುಮ್ತನ-ಅಲ್-ವುಜೂದ್)-ಇದು ಕ್ರೌರ್ಯ ಅಥವಾ ಅಂಧಕಾರವಾಗಿದೆ. ಇದು ಅಸ್ತಿತ್ವದ ನಿರಾಕರಣವಾಗಿದೆ. ಈ ಸ್ಥಾನದಲ್ಲಿ 'ಸ್ವಯಂ'ವೂ ಇರುವುದಿಲ್ಲ ಅದರ 'ಅನ್ಯ'ವೂ ಇರುವುದಿಲ್ಲ. ಆದಾಗ್ಯೂ ಇದು ಅಸ್ತಿತ್ವದ ನಂಬಿಕೆಯನ್ನು ಉಲ್ಲಂಘಿಸುವುದಿಲ್ಲ.

ನಾಲ್ಕನೇಯದು ಬ್ರಹ್ಮಜ್ಞಾನ ಅಸ್ತಿತ್ವ (ಆರಿಫುಲ್-ವುಜೂದ್) ಇದು ನಿರೋಧಿಸಲ್ಪಟ್ಟ ಅಸ್ತಿತ್ವದ ಅಂಧಕಾರದಲ್ಲಿ ಅಮೃತಧಾರೆಯಂತಿದೆ. ಈ 'ಆರಿಫುಲ್-ವುಜೂದ್'ನ ಹೊರತು ಅನ್ಯ ಮೂರು ಅಸ್ತಿತ್ವಗಳು ನಿರುಪಯುಕ್ತವಾಗಿವೆ.

ಐದನೆಯದು 'ಏಕ' ಅಸ್ತಿತ್ವವಾಗಿದೆ (ವಾಹಿದುಲ್ ವುಜೂದ್) ಇದು ಆರಿಫುಲ್ ವುಜೂದ್ (ಸೌಂದರ್ಯ) ಸಾಕ್ಷ್ಯವಾಗಿದೆ.

ಈ ಐದು ಅಸ್ತಿತ್ವಗಳು ಸಮಸ್ತ ಪದಾರ್ಥಗಳಲ್ಲಿ ನೆಲೆಸಿವೆ. ಆದರೆ ಮನುಷ್ಯನಲ್ಲಿ ಅದು ತನ್ನ ಪರಾಕಾಷ್ಠತೆಯಲ್ಲಿ ಪ್ರಕಟವಾಗಿದೆ. ಆಕಾಂಕ್ಷಿಯು ಎಲ್ಲಿಯವರೆಗೆ ವಿಹರಿಸುತ್ತಾ ಸಮಸ್ತ ಅಸ್ತಿತ್ವಗಳನ್ನು ದಾಟುವುದಿಲ್ಲವೋ, ಅಲ್ಲಿಯವರೆಗೆ ತನ್ನ ಮೂಲ ಸ್ಥಾನವಾದ ದೈವೀಜ್ಞಾನಕೋಶಕ್ಕೆ ತಲುಪುವುದಿಲ್ಲ ಹಾಗೂ ಪರಿಪೂರ್ಣನಾಗುವುದಿಲ್ಲ.

ಯಾವನಿಗೆ ಪ್ರಾಪ್ತವೋ ಸ್ನೇಹಿತನ ಸವಿ ಸಂಬಂಧ,
ಅವನಿಗುಂಟು ಈ ಐದೂ ಅಸ್ತಿತ್ವಗಳ ಅರಿವು.

ಈ ಐದೂ ಅಸ್ತಿತ್ವಗಳಿಂದ ಪರಿಚಿತನಾದವನಿಗೆ
ಮಾರ್ಗವೇ ತಂದಿಹುದು ಅವನನ್ನು 'ಮ್ಹಾರಿಫತ್'ನ ಗುರಿಗೆ.

ಈ ಐದೂ ಅಸ್ತಿತ್ವಗಳಲಿ ಒಂದನೂ ಒಪ್ಪದಿದ್ದರೆ,
ಅರಿಯನು ಅವನು ಸಮಗ್ರವಾಗಿ ಅದನು

ಅಪಕ್ವವೆನಿಸುವುದು ಅವನ ದೈವಿಕ ಜ್ಞಾನವು,
ವಂಚಿತನು ಅವನು ದೇವದರ್ಶನದಿಂದ.

ಐದನೇ ಅಸ್ತಿತ್ವದ ಪ್ರಾಪ್ತಿಗಾಗಿ ದುಃಖವನು ಸಹಿಸು,
'ಬಹರಿ' ಅದು ದುಃಖವಲ್ಲ, ವಾಸ್ತವದಲಿ ದಿವ್ಯಜ್ಞಾನ ಪ್ರಾಪ್ತಿ.

ಆಭರಣ-೯೫

ಕಡ್ಡಾಯ ಅಸ್ತಿತ್ವದ ವಿಕಾಸ

ಬ್ರಹ್ಮಜ್ಞಾನಿಯ ದೇಹವು ಭೌತಿಕ ಅರ್ಥಾತ್ ನರಲೋಕ ದೇಹವು ಜ್ಯೋತಿರ್ಮಯವಾಗದ ಹೊರತು ಹಾಗೂ ಆತ್ಮವು ವಿಭುವಿನ ತಾದ್ಯಾತ್ಮವಾಗದ ಹೊರತು, ಅವನ ಕಾರ್ಯವು ಯಾವ ರೀತಿಯಿಂದಲೂ ಮುಕ್ತಾಯವಾಗುವುದಿಲ್ಲ ಹಾಗೂ ಪರಾಕಾಷ್ಟೆಗೆ ತಲುಪುದಿಲ್ಲ. ಇದರಲ್ಲಿ ಯಾವುದೇ ಅಚ್ಚರಿಯ ವಿಷಯವಿಲ್ಲ.

ತನ್ನ ಜೀವವನು ನೋಡುವುದಾದರೆ, ನೋಡು ನನ್ನ ಜೀವವನು
ನನ್ನ ದೇಹದ ಪ್ರತಿರೂಪವಾಗಿ ನನ್ನ ಜೀವವೂ ಸಹ.

ಯಾಕೆಂದರೆ ಬ್ರಹ್ಮಜ್ಞಾನಿಯು ಸದಾ ಪರಂಸತ್ಯತೆಯಲ್ಲಿ ಚಿಂತನೆಯಲ್ಲಿ ತಲ್ಲೀನನಾಗಿರುತ್ತಾನೆ. ಮತ್ತು ಅವನ ಆತ್ಮವೂ ಅವನಲ್ಲಿ ತಲ್ಲೀನವಾಗಿರುತ್ತದೆ. ಮಣ್ಣಿನಿಂದಾದ ಈ ದೇಹವು ಜ್ಯೋತಿರ್ಮಯವಾಗಿ, ಈ ರೀತಿಯಾಗಿ ಆತ್ಮದಲ್ಲಿ ತಲ್ಲೀನವಾಗಿ, ಲೋಕ, ಆತ್ಮ ಹಾಗೂ ಈ ಎರಡು ದೇಹಗಳು (ಮಣ್ಣಿನ ಹಾಗೂ ಜ್ಯೋತಿರ್ಮಯ) ಇದರ ಜತೆಯಾಗುತ್ತವೆ. ಅಂದರೆ ಈ ನಾಲ್ಕೂ ಕರಗಿ ಒಂದಾಗಿ, ಚಿನಿವಾರನ ಮೂಸೆಯಲ್ಲಿ ಬೆಂದ ಅಚ್ಚಚಿನ್ನದ ತುಣುಕುಗಳಂತೆ ಆಗುತ್ತವೆ. ಈ ದೈವೀ ಅದ್ಭುತವು, ಪರಿಪೂರ್ಣನ ಹೊರತು ಬೇರೆ ಯಾವನಲ್ಲೂ ಜರಗಲು ಸಾಧ್ಯವಿಲ್ಲ. ಹೀಗಾಗಿ ಒಂದು ಸಲ ಒಬ್ಬ ಫಕೀರರು ಈ ನಿರಾಶ್ರಿತನ ತಾಣಕ್ಕೆ ಆಗಮಿಸಿದರು, ಎರಡು-ಮೂರು ದಿನ ತಂಗಿದ್ದರು. ಒಂದು ದಿನ ಒಂದು ವಿಚಿತ್ರ ಪ್ರಸಂಗವನ್ನು ಪ್ರಸ್ತಾಪಿಸಿದರು. ಅದೇನೆಂದರೆ ಒಬ್ಬ ಮಹಾನ್ ಪುರುಷರ ನಿಧನ ಬಳಿಕ, ಅವರ ಸಮಾಧಿಯ ಸುತ್ತ-ಮುತ್ತ ಜನರು ಮಲ-ಮೂತ್ರ ವಿಸರ್ಜನೆ ಮಾಡುತ್ತಿದ್ದರು. ಇದರಿಂದಾಗಿ ಅಲ್ಲಿ ದುರ್ವಾಸನೆ ಹಬ್ಬುತ್ತಿತ್ತು. ಆಗ ಅವರು ತಮ್ಮ ಸೇವಕರ ಸ್ವಪ್ನದಲ್ಲಿ ಬಂದು, ತಮ್ಮನ್ನು ಈ ಮಲಿನ ಸ್ಥಳದಿಂದ ಅವರು ತಿಳಿಸಿದ ಒಂದು ತೋಟಕ್ಕೆ ಸ್ಥಳಾಂತರಿಸಲು ಸೂಚಿಸಿದರು. ಆದರೆ ಜತೆಗೆ ಅವರು ವಿಧಿಸಿದ ಷರತ್ತೇನೆಂದರೆ, ಈ ಸ್ಥಳಾಂತರವೂ ತೆರೆಯ ಮರೆಯಲ್ಲಿ ಆಗಬೇಕು. ಅಂತಿಮವಾಗಿ ಅವರ ಸೂಚನೆಯ ಪಾಲನೆಯು ಮನುಷ್ಯ ಎತ್ತರದ ಪರದೆಗಳ ವ್ಯವಸ್ಥೆ ಮಾಡಿ, ಅತ್ಯಂತ ಜಾಗರೂಕತೆಯಿಂದ ಅವರ ಕಳೇಬರ ತೆಗೆದುಕೊಂಡು ಹೋಗಿ, ಅವರ ಅಪೇಕ್ಷೆಯ ಸ್ಥಳದಲ್ಲಿ ಹೊಸ ಸಮಾಧಿಯನ್ನು ತೋಡಿ ದಫನ್ ಮಾಡಲಾಯಿತು.

ಆದರೆ ಈ ಅರೆಬರೆ ಜ್ಞಾನಿಯು ಯೋಚನಾಮಗ್ನ ಆದನೇಕೆಂದರೆ, ಯಾವಾಗ ದೇಹವೇ ಕೊಳೆತ ಮೇಲೆ ಒಳಿತು ಕೆಡಕಿನ ಪ್ರಶ್ನೆ ಏನು? ದೈವೀಲೋಕದ ಶರೀರವು

ದೇವಲೋಕವನ್ನು ಸೇರಿಕೊಳ್ಳುತ್ತದೆ. ಖಂಡಿತವಾಗಿಯೂ ದೈವೀ ಶರೀರವು ಬಾಹ್ಯ ಕಣ್ಣುಗಳಿಗೆ ಗೋಚರವಾಗುವುದಿಲ್ಲ. ಇಂತಹದರಲ್ಲಿ ಪರದೆಯ ಮರೆಯಲ್ಲಿ ಮೃತಶರೀರವು ಒಯ್ಯುವ ಉದ್ದೇಶವಾದರೂ ಏನು? ಬಹುಶಃ ಮಣ್ಣು ನಿರ್ಮಿತ ಶರೀರವು ಜತೆಯಲ್ಲೇ ಇರಬೇಕು.

ಯಾವ ರೀತಿ ಸೌಭಾಗ್ಯವು ಆತ್ಮದ ಸತ್ತೆಯ ಮೇಲಿದೆ,
ದೇಹದ ಮೇಲೆ ಆತ್ಮದ ಪ್ರಭಾವ ಸೌಭಾಗ್ಯವಿದೆ.

ಅಲ್ಲಾಹ ಅಲ್ಲಾಹ ಜೀವನವಿಡಿ ಆಗಲಿಲ್ಲ ನಿನ್ನ ಭೇಟಿ,
ಆದರೆ ಕೆಲವೊಮ್ಮೆ ಈ ಒಂದಕ್ಷರವು ಮಾರ್ಗದರ್ಶಕವಾಯಿತು.

ಸದಾ ಸಂಗಾತಿಯಾಗಿರುತ್ತದೆ. ಆಧ್ಯಾತ್ಮಿಕ ದೇಹವು,
ಮನೆಯಲ್ಲಿ ವಿಶ್ರಾಂತನಾಗಿರಲಿ ಅಥವಾ ಸಂಚಾರದಲ್ಲಿರಲಿ

ಈ ಅರ್ಹತೆಗಳು ಉಂಟು ಕೇವಲ ಪರಿಪೂರ್ಣನಿಗೆ ಮಾತ್ರ,
ಇದನ್ನು ನೋಡುವ ಅರ್ಹತೆಯಲ್ಲಿದೆ ಸಾಮಾನ್ಯರ ನೋಟಕೆ.

ಅವನು ಪಡೆವನು ಅಹಂ ಚಿತ್ತಭಾವದಿಂದ ಇಷ್ಟಾರ್ಥ
ಆದರೆ ಅವನ ದೃಷ್ಟಿ ಇಹುದು ದಿವ್ಯದಿಂದ ಹೊರತು.

ಏನು ಯಾಚಿಸಿದರೂ ಖಂಡಿತಾ ಸಿಗುವುದು, ಹೇ 'ಬಹರಿ';
ಮನುಜನ ವಿಭುವಾದ ಆ ಸೃಷ್ಟಿಕರ್ತನಿಂದ ಯಾಚಿಸು.

ಆಭರಣ–೯೬

'ವೇಷಧಾರಿ' 'ಆದಂ' ಏನಿಹುದು?

ನನ್ನ ಪೀರ್–ಮುರ್ಷದ್ ಮಾನ್ಯರು (ಅಲ್ಲಾಹನು ಅವರ ಗೋರಿಯಲ್ಲಿ ಪ್ರಕಾಶದ ವೃಷ್ಟಿಗೈಯಲಿ) ಒಂದು ದಿನ ನುಡಿದರು. ಅದೇನೆಂದರೆ ಇದೇ ಗೋಗಿಯಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಮಸ್ತ ದಿವ್ಯಜ್ಞಾನಿಗಳು ನೆರೆದಿದ್ದರು. ಅಲ್ಲಿ ಸೃಷ್ಟಿ, ಅಸ್ತಿತ್ವ ಹಾಗೂ ಇದರ ದೈವೀರಹಸ್ಯಗಳ ಕುರಿತು ಚರ್ಚೆ ನಡೆದಿತ್ತು. ಈ ಸಮಯದಲ್ಲಿ ಒಬ್ಬ ಮಹನೀಯರು ಈ ಕವನೋಕ್ತಿಯನ್ನು ಓದಿದರು.

'ಆಂ ಬಾದಶಾಹ ಆಜಂ ದರ್‌ಬಸ್ತಾ ಬೂದ್ ಮಹಕಮ್
ಪೋಷೀದಾ 'ದಲಿಖ್ ಆದಂ' ನಾಗಹ ಬೂದರ್ ಆಮದ್'

(ಆ ವಿಶ್ವಬಾದಶಾಹನು ತನ್ನ ಕೋಣೆಯಲಿ ಅಡಗಿದ್ದನು. 'ಆದಂ'ನ ವೇಷದಲಿ ಆಗುಂತಕ ಅನಿರೀಕ್ಷಿತವಾಗಿ ಬಾಗಿಲಿಗೆ ಬಂದನು)

ನಾನು ಪ್ರಶ್ನಿಸಿದೆ ಈ 'ದಲಿಖ್ ಆದಂ' (ವೇಷಧಾರಿ ಆದಂ) ಎಂದರೆ ಏನು? ಬಹಳಷ್ಟು ಚರ್ಚೆ-ವಿಮರ್ಶೆಯ ನಂತರ ಇದು 'ಅಸ್ತಿತ್ವದ ಬಾಹ್ಯ ಪ್ರಕಟರೂಪ' ಎಂಬ ಒಮ್ಮತಕ್ಕೆ ಬರಲಾಯಿತು. ಆಗ ನಾನು ನುಡಿದೆ. ಅಸ್ತಿತ್ವವು ಪ್ರಕಟರೂಪವೂ ರಹಸ್ಯಾತ್ಮಕ ಅಸ್ತಿತ್ವವೂ ಆಗಿದೆ. ಅದರ ಪರಿಪೂರ್ಣತೆಯ ವ್ಯಾಖ್ಯಾನದಲ್ಲಿ ಸತ್ಯತೆಯು ಆರಂಭಿಕವಾಗಿದ್ದು, ವಾಸ್ತವಿಕತೆಯು ಅಂತ್ಯದಲ್ಲಿದ್ದು, ದೈವೀಪ್ರಾಜ್ಞರ ಅಧೀನವಾಗಿ ಪ್ರಕಟರೂಪವಾಯಿತು. ಇದರಿಂದಾಗಿ ಚಿರಂತನ ಸೌಂದರ್ಯದ ನಿಯಮಪಾಲಕನಾಗಿ, ಅದರ ದಿವ್ಯವೀಕ್ಷಣೆ ಸಾಧ್ಯವಾಯಿತು, ಹೀಗಾಗಿ ಒಂದು ಲೆಕ್ಕಾಚಾರದ ಪ್ರಕಾರ ಮೂಲಭೂತ ಅಸ್ತಿತ್ವವು ಗೋಚರ ಸ್ಥಿತಿಯಲ್ಲಿದ್ದು, ಉಳಿದೆಲ್ಲವೂ ಅಗೋಚರ ಅಥವಾ ಕಾಲ್ಪನಿಕವಾಗಿವೆ. ಹೀಗಾಗಿ ಈ 'ದಲಿಖ್' (ವೇಷಧಾರಿ) ಅದ್ಹೇಗೆ ಸಾಧ್ಯವಾಗಬಹುದು? ಅಂತಿಮವಾಗಿ ಸಮಸ್ತ ಸಭೆಯ ಗಮನವು ನನ್ನ ಕಡೆ ಕೇಂದ್ರಿಕೃತವಾಯಿತು. ಉತ್ತರಿಸಲು ನನಗೆ ಒತ್ತಾಯಿಸಲಾಯಿತು. ಆಗ ನಾನು ನುಡಿದೆ. ಈ 'ದಲಿಖ್ ಆದಮ್' (ಆದಂನ ಪ್ರತಿರೂಪ) 'ಆದಂ'ನ ಅಸ್ತಿತ್ವವಲ್ಲ. ಬದಲಾಗಿ 'ಆದಂ' ಎಂಬ ಹೆಸರು ಹೊಂದಿತ್ತು. ಮೂಲ'ಆದಂ'ನ ಹೆಸರು ಹೇಳಿ ಪ್ರಕಟವಾದನು. ಈ ಹಂತದಲ್ಲಿ ಇಬ್ಲೀಸನೂ ಮೋಸ ಹೋದನು. ಅರ್ಥಾತ್ 'ಆದಂ' ಎಂದು ತಿಳಿದು ಸಾಷ್ಟಾಂಗದಿಂದ ವಂಚಿತನಾದನು.

ಹೇ ಆತ್ಮೀಯನೇ, ಮಹಾಮಹಿಮನಾದ ಪರಂಸತ್ಯನು ತನ್ನ ದೈವೀ ಅರ್ಹತೆಗಳನ್ನು ಪ್ರಚುರಪಡಿಸಲು ಇಚ್ಛುಕನಾದಾಗ ಸಮಸ್ತ ಜೀವಾತ್ಮರನ್ನು ಸೇರಿಸಿದನು. ಯಾವಾಗ ತನ್ನ ಅಸ್ತಿತ್ವದ ಸತ್ಯತೆಯನ್ನು ಪ್ರಕಟ ಪಡಿಸಲು ನಿರ್ಧರಿಸಿದಾಗ 'ಆದಂ'ನನ್ನು ಪ್ರಕಟಪಡಿಸಿದನು.

ಅವನು ಬಿಲ್ಲು ಬಾಣಗಳನ್ನು ತ್ಯಜಿಸಿ, ಜ್ಞಾನಕೋಶದಲ್ಲಿ ಇದ್ದನು.
ಬೇಟೆಯಾಡುವ ಇಚ್ಛೆಯಿಂದ ಬಂದು ಪ್ರಕಟರೂಪ ತಾಳಿದನು.

ತನ್ನ ಹೊರತಾಗಿ ಯಾರನ್ನು ಪಡೆಯಲಿಲ್ಲ, ಅಂತಿಮವಾಗಿ ಅಲ್ಲಿ,
ಹೀಗಾಗಿ ತಾನೇ ಬೇಟೆಯಾದನು, ಬೇಟೆಗಾರನು ಆದನು ಮಾನ್ಯನು.

ಆಭರಣ–೯೭

ಮೂಲಭೂತ ಅಸ್ತಿತ್ವ ಹಾಗೂ ಅಸ್ತಿತ್ವದ ಸತ್ಯತೆ

ಖ್ವಾಜಿ ಬಹರುದ್ದೀನ್ ಎಂದೇ ಖ್ಯಾತರಾಗಿ, ನಿರ್ಮಲ ಸಾಗರದಲ್ಲಿ (ಸೂಫಿ ಜ್ಞಾನ) ಮುಳುಗೆದ್ದ ಖ್ವಾಜಿ ದರಿಯಾರವರು ಈ ಫಕೀರರ ತಂದೆಯವರಾಗಿದ್ದರು.

ಬಂದಿಹೆನು ನಾನು ಸಾಗರದಿಂದ ಇದು ನಿಶ್ಚಿತವು
ಹೀಗಾಗಿ ತಂದೆಯ ಹೆಸರಿಂದ 'ಬಹರ್' ಪಡೆದಿರುವೆನು.

ಈ ಮಧ್ಯೆ ಖಲೀಫರೂ ಆಗಿದ್ದ ಹಜ್ರತ್ ಶಾಹ ಮೀರಾಂಜಿ ಷಮಸುಲ್ ಅಷ್ವಾಖ್‌ರವರ ಪುತ್ರರಾದ ಹಜ್ರತ್ ಶಾಹ ಬುರಾಹನುದ್ದೀನ್‌ರವರು, ಒಂದು ದಿನ ನನ್ನ ಪೀರ್–ಮುರ್ಷದ್ (ಪ್ರಕಾಶದ ಭಾಗ್ಯರು) ರಿಗೆ ಪ್ರಶ್ನಿಸಿದರು. ಮೇಲೆ ಪ್ರಶಂಶಿಸಲ್ಪಟ್ಟ ಖಲೀಫಾರವರು ತಮ್ಮ ಶಿಷ್ಯರಿಗೆ ಪ್ರಥಮವಾಗಿ ಪಂಚಭೂತಗಳು, ತದನಂತರ ಇವುಗಳ ಇಪ್ಪತ್ತೈದು ವೈಶಿಷ್ಟ್ಯಗಳ ಪರಿಚಯ ಮಾಡಿಸುತ್ತಿದ್ದರು. ಇದರ ಕಾರಣವೇನು? ಇದರಿಂದ ಸುಲೂಕ್ (ಧರ್ಮಮಾರ್ಗ)ವೂ ಪರಿಪೂರ್ಣವಾಗುವುದಿಲ್ಲ. ಮ್ವಾರಿಫತ್ ಸಹ ಪರಿಪೂರ್ಣವಾಗುವುದಿಲ್ಲ. ಉತ್ತರವಾಗಿ ಮುರ್ಷದರು ನುಡಿದರು, ಅದಕ್ಕೆ ತನ್ನ ಮೂಲ ಅಸ್ತಿತ್ವದ ಅನ್ವೇಷಣೆಯ ಗುರಿಯಿದೆ. ಹೀಗಾಗಿ ಕೈಯ ಚಲನೆ ಅಥವಾ ಉದರದಲ್ಲಿ ಹಸಿವು ತೀವ್ರವಾದಾಗ, ಅರಿವಾಗಬೇಕೆನೆಂದರೆ ಚಲನೆಯು ಗಾಳಿಯ ವಿಶೇಷತೆಯಾಗಿದೆ ಹಾಗೂ ಈ ಹಸಿವು ಅಗ್ನಿಯ ಸ್ವಭಾವವಾಗಿದೆ ಹಾಗೂ ಸ್ವಯಂ ಅವನು ಇವುಗಳಿಗಿಂತ ಭಿನ್ನವಾಗಿದ್ದಾನೆ.

ಇರುವನು ಮರ್ಮಜ್ಞಾನಿಯು ಎರಡು ಲೋಕಗಳಿಂದ ಮುಕ್ತನು,
ಈ ಭೂಮಿಯಿಂದ ಸ್ವತಂತ್ರನು ಕಾಲದಿಂದ ಅತೀತನು.

ಆದರೆ ಎಲ್ಲವೂ ಅದರಲ್ಲಿಗೆ ಗುಪ್ತವಾಗಿ ಇಥುದು ನಿಶ್ಚಿತ,
ತೆರೆಯು ಇರುತ್ತದೆ. 'ಅದು' ಮತ್ತು 'ಇದು' ಗಳ ಹೊರತು.

ಆಭರಣ–೯೮

ಮಲಕೂತ್ (ದೇವಲೋಕದ) ವರ್ಣನೆ

ನಾಸೂತ್ (ನರಲೋಕ) ಮತ್ತು ಜಬರೂತ್‌ನ (ಸೌಂದರ್ಯಲೋಕ) ಮಧ್ಯೆ ಮಲಕೂತ್ (ದೈವಲೋಕ) ಎಂಬ ಒಂದು ಮಧ್ಯದ ಸ್ಥಿತಿ ಇದೆ. ಅರ್ಥಾತ್

ಇವೆರಡು ಇನ್ನೊಂದರ ಅವಲಂಬಿತವಾಗಿವೆ. ಮತ್ತು ಇದು ಇವೆರೆಡರ ಸಹಾಯದ ಆಕಾಂಕ್ಷಿಯಾಗಿದೆ. ಅದು ಹೇಗೆಂದರೆ ಕುಳಿತುಕೊಳ್ಳುವ ಅವಸ್ಥೆಯು ನಿಲ್ಲುವ ಹಾಗೂ ಮಲಗುವ ಅವಸ್ಥೆಯ ಮಧ್ಯದ ಅನಿವಾರ್ಯತೆಯಾಗಿದೆ. ಅರ್ಥಾತ್ ನಿಂತುಕೊಂಡ ಒಬ್ಬ ವ್ಯಕ್ತಿ, ಮಲಗಲು ಬಯಸಿದರೆ, ಅವನು ಮೊದಲು ಅವಶ್ಯವಾಗಿ ಕುಳಿತುಕೊಳ್ಳಬೇಕಾಗುತ್ತದೆ. ಅವನು ಒಮ್ಮೆಲೆ ಬಿದ್ದು ಬಿಟ್ಟರೆ ಮಾತ್ರ ಮಲಗುವ ಅವಸ್ಥೆಗೆ ತಲುಪಬಹುದು. ಆದರೆ ಇದು ಅಸಮಂಜಸವಾಗಿದೆ. ಅಕಸ್ಮಾತ್ ಮಲಗಿದ್ದರೆ, ಅವನು ಎದ್ದು ನಿಲ್ಲಲು ಬಯಸಿದರೆ, ಅವನಿಗೆ ಅನಿವಾರ್ಯವಾಗಿ ಕುಳಿತುಕೊಳ್ಳಬೇಕಾಗುತ್ತದೆ ಹೀಗಾಗಿ ಮಲಗುವುದು, ಕುಳಿತುಕೊಳ್ಳುವ ಅವಸ್ಥೆಯ ಬದಲು ಸಾಧ್ಯವೇ ಇಲ್ಲ. ಹೀಗಾಗಿ ಕುಳಿತುಕೊಳ್ಳುವ ಅವಸ್ಥೆಯ ಹೊರತು ನಿಲ್ಲುವುದಾಗಲಿ, ಮಲಗುವುದಾಗಲಿ ಸಾಧ್ಯವೇ ಇಲ್ಲ.

ಹೇ ಆತ್ಮೀಯನೇ, ಮಲಕೂತ್‌ಗೆ (ದೇವಲೋಕಕ್ಕೆ) ಮಧ್ಯದ ಸ್ಥಿತಿ ಎಂದು ಕರೆಯಲು ಕಾರಣವೆನೆಂದರೆ ಆತ್ಮಗಳಿಂದ ದೇಹಗಳವರೆಗೆ ತಲುಪುವುದು ಅಥವಾ ದೇಹಗಳಿಂದ ಆತ್ಮಗಳವರೆಗೆ ತಲುಪುವ ವಿಕಾಸ ಕ್ರಿಯೆಯು ಮಲಕೂತ್ (ದೇವಲೋಕ) ಮಧ್ಯಸ್ಥಿಕೆಯಿಂದ ಮಾತ್ರ ಸಾಧ್ಯವಿದೆ. ಜನರು ಸಾವನಪ್ಪಿದಾಗ ಅವರು ಈ ನಾಸೂತ್ (ನರಲೋಕ)ದಿಂದ ದೇವಲೋಕದ (ಮಲಕೂತ್) ಕಡೆಗೆ- ಯಾವುದು ನಾಸೂತ್‌ನ ಮಾದರಿಯಾಗಿದೆ.-ಅದರ ಕಡೆ ಗಮನವನ್ನು ಕೇಂದ್ರಿಕರಿಸಿ, ಇದೇ ಲೋಕದಲ್ಲಿ ವಾಸಿಸುತ್ತಾರೆ. ಎಚ್ಚರಗೊಂಡು ಪ್ರಜ್ಞಾವಂತರಾದ ಅವರು ಆತ್ಮಗಳ ಲೋಕವನ್ನು ಪ್ರವೇಶಿಸುತ್ತಾರೆ. ಸ್ವರ್ಗ ಹಾಗೂ ನರಕಗಳು ಸಹ ಆತ್ಮ ಲೋಕದಲ್ಲೇ ಇವೆ.

ಹೇ ಆತ್ಮೀಯನೇ, ಮಲಕೂತಿ ದೇಹದಲ್ಲಿ ನಾಸೂತಿ ದೇಹವು ಯಾವ ರೀತಿಯಲ್ಲಿ ಇದೆಯೆಂದರೆ ಕಿಡಿಯಲ್ಲಿ ಜ್ವಾಲೆ ಅಥವಾ ತಂತಿಯಲ್ಲಿ ನಾದ ಇದ್ದಂತೆ. ಅದು ನಿದ್ರಾಹೀನತೆಯಿಂದ ಪ್ರಕಟವಾಗುವುದಿಲ್ಲ ಇವೆರಡು ಗಾಳಿ ಹಾಗೂ ಎರಡು ವಸ್ತುಗಳ ಸ್ಪರ್ಶದ (ಘರ್ಷಣೆಯ) ಹೊರತು ಉತ್ಪತಿಯಾಗುವುದಿಲ್ಲ. ಮಲಕೂತ ಶರೀರವು ಬಾಹ್ಯ ರೂಪರೇಷೆಯಲ್ಲಿ ಇದ್ದು 'ನಾಸೂತಿ' ಶರೀರದಂತಿದೆ. ಇವೆರಡರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ವ್ಯತ್ಯಾಸ ಇರುವುದಾದರೆ ಅದು ಇಷ್ಟೇ ಅದು ಕೋಮಲವಾಗಿದ್ದು, ಕಾಂತಿಯುಕ್ತವಾಗಿದೆ. ಇದು ಮಲಿನ ಹಾಗೂ ದೂಳಿನಿಂದಾವೃತ್ತವಾಗಿದೆ. ಅದು ಯೋಚನೆ ಹಾಗೂ ನೋಟದಂತೆ ಅಪಮಾನಿತನಾಗಿ ಒಂದೇ ಕ್ಷಣದಲ್ಲಿ ಆಕಾಶದಿಂದ ಭೂವಿಯ ಕಡೆ ಎರಡು ನೂರು ಸಲ ಕೆಳಗೆ ಮೇಲೆ ಬಂದು ಹೋಗಬಹುದಾಗಿದೆ. ಅದೂ (ಅರ್ಥಾತ್ ನಾಸೂತ್) ಬೆಳಗಿನಿಂದ ಸಂಜೆಯವರೆಗೆ ಸುಮಾರು ಹದಿನಾರು ಕೋಸು ಅಥವಾ ಇನ್ನೂ ಅಧಿಕ ಸಮಯ ಕ್ರಮಿಸಬಹುದಾಗಿದೆ. ಆದುದರಿಂದ ಸಾಧಕನು ನಶ್ವರ ಶರೀರದಿಂದ ದೃಷ್ಟಿಯನ್ನು ಬದಲಾಯಿಸಬೇಕು ಹಾಗೂ ಈ

ಪ್ರಕಾಶಮಯ ಶರೀರದ ಮೇಲೆ ಗಮನವನ್ನು ಕೇಂದ್ರೀಕರಿಸಿ, ನಾನು ಇದೇ ಆಗಿದ್ದೇನೆ ಹಾಗೂ ಸತ್ಯವಾಗಿದೆ ಎಂದು ವಿಶ್ವಾಸವಿಡಬೇಕು. ಈ ಅಭ್ಯಾಸವು ಒಂದು ಉನ್ನತ ಹಂತವನ್ನು ತಲುಪಿ ಯಶಸ್ವಿಯಾದಾಗ, ಅದು ಅಂತರಂಗ–ಬಹಿರಂಗ ಬಂಧನದಿಂದ ಬಿಡುಗಡೆಯಾಗುತ್ತದೆ. ಜತೆಗೆ ಜೀವನ್ಮರಣ ಪ್ರಕ್ರಿಯೆಯಿಂದಲೂ ವಿಮೋಚನೆಗೊಳ್ಳುತ್ತದೆ. ಮತ್ತು ಸದಾ ಸಜೀವ 'ಅವ್‌ಲಿಯಾ'ದ (ಪುಣ್ಯಪುರುಷರ) ಸಮೂಹದಲ್ಲಿ ಸೇರಿಕೊಳ್ಳುತ್ತಾರೆ.

ನಿನ್ನ ನೆಲೆಯಾಗಿಹುದು ಒಂದು ಸಾಗರವು,
ನೀ ತಿಳಿದಿರುವೆ ಇದನು ಚರ್ತುಭುಜಗಳು.

ಈ ದ್ವಿತೀಯ ದೇಹವು ಅನಂತವಾಗಿಹುದು,
ಅಡಗಿರಬಹುದು ಅದು ಮಣ್ಣಿನ ಕುಪ್ಪೆಯಲಿ.

ಆತ್ಮದ ಮರ್ಮ ಅರಿಯುವ ಮಹನೀಯರು,
ಇದನು 'ಮಲಕೂತ್'ಎಂದು ತಿಳಿಯುವರು.

ಬೆಳದಿಂಗಳ ಹೊರತು ಏನಿಹುದು ರಾತ್ರಿಯಲಿ?
ಆತ್ಮವಿಲ್ಲದ ಹೊರತು ಏನಿಹುದು ದೇಹದಲಿ?

ದೇಹ ಇಂದ್ರಿಯ ಆಗಿಹುದು, ಕೋಳಿಯ ಪ್ರಾಣದಂತೆ,
ಇಂಧನವಾಗಿಹುದು ಸತತ ಉರಿಯುವ ಜ್ವಾಲೆಗೆ.

ಕುದುರೆಯಾಗಿದ್ದರೆ ಇದು, ಇರುವವನು ಸವಾರ,
ಈ ಭವನ, ಮೆಟ್ಟಿಲು, ಆ ರಾತ್ರಿ ತಾರೆಗಳು.

ಅದು ದೇಹವಾಗಿತ್ತು, ಇದು ಅದರ ಪೋಷಾಕು,
ಅದು ಅರ್ಥವಾಗದಿದ್ದರೆ, ಇದು ಅದರ ವಿವರ.

ಇದು ಮಣ್ಣಲ್ಲ, ಮಹ್ಮದರ ಪವಿತ್ರ ಜ್ಯೋತಿ,
ನಿನ್ನ ದೇಶವಾಗಿಹದು ಆ ಪವಿತ್ರ ಲೋಕ.

ಹಸಿಬೆಯೊಳಗೆ ಏಕಿಹುದು ಕುರಾನಿನ ಸಂಗ್ರಹ,
ಅರ್ಥದ ರೂಪದಲಿ ಬಯಲಿನಲಿ ಬರಲಿ.

ಈ ದೇಹದ ಜೊತೆ ಕಟ್ಟಿಕೊಂಡು ಬಿಡು ಹಾಸಿಗೆಯನು,
ನೀನಾಗು ಈ ದೇಹದ ಜತೆಗಾರನು ಸದಾ.

ಸಹಜನೀತನ ತರಹ ಸದಾ ಜೊತೆಯಾಗಿರು,
ಮತ್ತು ಅವನ ಯೋಚನೆ ಹೃದಯದಿಂದ ಸ್ವಚ್ಛಗೊಳಿಸು.

ಅರ್ಥಾತ್ ನೀನಾಗಿಹುದು 'ಅದು' 'ಇದು' ಅಲ್ಲ ಅರಿತುಕೋ,
ನೀನು ಹಸ್ತವಾಗಿಹುದು ದೇಹವು ಆಗಿಹುದು ಬಾಹ್ಯ.

'ಬಹರಿ' ಯಾವನು ಆ ದೇಹವನು ಪಡೆದಿರುವನು,
ಅವನು ಮೃತ್ಯುವಿನ ಕಪಿಮುಷ್ಟಿಯಿಂದಲೂ ಮುಕ್ತನು.

ಆಭರಣ-೯೯

'ಮಲಕೂತ್'ನ ಪರೋಕ್ಷಜ್ಞಾನ ತತ್ವಗಳು

ಸಂತತ್ವದ ಆಶ್ರಿತರು ಸನ್ಮಾರ್ಗದರ್ಶನದ ಶಕ್ತಿಕೇಂದ್ರವೂ ಆಗಿದ್ದ ಹಜ್ರತ್ ಶಾಹ ಅಹ್ಮದ್ (ಹಜ್ರತ್ ಚಂದಾ ಹುಸೇನಿ ದರ್ಗಾದ ಸಜ್ಜಾದಾ)ಅವರ ಒಂದು ಧಾರ್ಮಿಕ ಸಭೆಯಲ್ಲಿ ಗೋಗಿಯ ಸಮಸ್ತ ಪ್ರಜ್ಞಾವಂತ ಹೃದಯವಂತರು ಹಾಜರಿದ್ದರು. ಅದರಲ್ಲಿ ನಾನೂ ಸಹ ಉಪಸ್ಥಿತನಿದ್ದೆನು. ಆದರೆ ತುಂಬಾ ಬಾಲಿಶನಾಗಿದ್ದೆನು. ಹಜ್ರತ್ ಶಾಹ ಮಹ್ಮದ್‌ರ ಮುರ್ಷದರು, ಚಿಕ್ಕಪ್ಪನವರೂ ಆಗಿದ್ದ ಸಾದಾತ್ ವಂಶದ ಧಾರ್ಮಿಕ ನಾಯಕರಾಗಿದ್ದ ಸಯ್ಯದ ಮಹ್ಮದರವರು, ತಮ್ಮ ಸಂಭಾಷಣೆಯಲ್ಲಿ ನುಡಿಯಹತ್ತಿದರು. ಅದೇನೆಂದರೆ ಸಾಧಕನು (ಸಾಲಿಕ್) ತಾನು ಉಟ್ಟ ವಸ್ತ್ರವನ್ನು ಶರೀರದಿಂದ ಬಿಚ್ಚಿ, ನೆಲದ ಮೇಲೆ ಬೀಸಾಕಿ, ಸ್ವಯಂ ದೂರದಿಂದ ಅದನ್ನು ನೋಡುವಂತೆ, 'ನಾಸೂತಿ' ಸಿಪ್ಪೆಯನ್ನು 'ಮಲಕೂತ್' ಶರೀರದಿಂದ ಬೇರ್ಪಡಿಸಬಾರದು, ಮತ್ತೆ ಈ ಮುಂಚೆ ಪ್ರಸ್ತಾಪಿಸಿದಂತೆ ದೂರ ನಿಂತು ವೀಕ್ಷಿಸಬಾರದು. ಮಲಕೂತ್ ಲೋಕವು ಆ ಸಮಯದವರೆಗೆ ಬೇರ್ಪಡಲು ಸಾಧ್ಯವಿಲ್ಲ. ಯಾವರೆಗೆ ಮಲಕೂತ್ ಬೇರ್ಪಡಿಸುವುದಿಲ್ಲ ಹೀಗಾಗಿ ಅದರ ಕಾರ್ಯೋದ್ದೇಶವು ಸತ್ಯತೆಯ ಕಡೆ ಮುಂದೆ ಸಾಗುವುದಿಲ್ಲ. ಈ ವ್ಯಾಖ್ಯಾನವನ್ನು ಕೇಳಿ ಎಲ್ಲ ಕಡೆಯಿಂದ 'ನಿಸ್ಸಂದೇಹ, ನಿಸ್ಸಂದೇಹ' ಎಂಬ ಘೋಷದ ಅಬ್ಬರವಾಯಿತು. ವಾಸ್ತವಿಕತೆಯೂ ಹೀಗೆಯೇ ಇತ್ತು. ಆ ಸಮಯದಲ್ಲಿ ನಾನು ಸಯ್ಯದ್ ಜಲಾಲ್‌ರ ಬಳಿ ಕುಳಿತಿದ್ದೆ. ನಾನು ಮೂರ್ಖತೆಯಿಂದ ಸಯ್ಯದ್ ಸಾಹೇಬರಿಗೆ ಕಿರುದನಿಯಲ್ಲಿ ನುಡಿದೆ. 'ನಾಸೂತಿ' ಸಿಪ್ಪೆಯನ್ನು ಸುಲಿದು, ದೂರದಿಂದ ಸ್ವಯಂ ವೀಕ್ಷಿಸುವ ಅವಶ್ಯಕತೆಯಾದರು ಏನು? ಯಾವನೇ ವ್ಯಕ್ತಿಯು ತನ್ನ ಶರೀರದ ಮೇಲೆ ದೃಷ್ಟಿ ಹಾಯಿಸಿ, ಈ ಶರೀರವು 'ಮಲಕೂತಿ'ಯಾಗಿದ್ದು, ಈ 'ನಾಸೂತಿ' ಸಿಪ್ಪೆಯು ಅವನಿಗೆ ಇಷ್ಟವಿಲ್ಲದಿದ್ದರೆ ಬಹುಶಃ ಅವನ ಭೂತಿತ ಸಿಪ್ಪೆಯನ್ನು ತನ್ನ

ಯೋಚನಾ ಪ್ರಜ್ಞೆಯಿಂದ ಹೊರತೆಗೆದು, ತನ್ನ ಗಮನವನ್ನು ಬೇರೆಡೆಗೆ ಕೇಂದ್ರೀಕರಿಸಿ, ಅದನ್ನು ಬಿಟ್ಟು ಬಿಟ್ಟರೆ ಸಾಕು. ಆಗ ಉಳಿದ ಶೇಷಮಾತ್ರವು 'ಮಲಕೂತಿ' ಶರೀರವಲ್ಲದೆ ಮತ್ತೇನು? ಎಂದು ನುಡಿದೆನು. ಇದನ್ನು ಕೇಳಿದ ಸಯ್ಯದ ಸಾಹೇಬರು ಏರಿದ ದನಿಯಲ್ಲಿ ಭಾಷಣವನ್ನು ಮಾಡಿ, ಈ ಬಾಲಕನು, ಇಷ್ಟು ಚಿಕ್ಕ ವಯಸ್ಸಿನ ಹೊರತಾಗಿಯೂ, ಇಂಥ ಮಾತುಗಳನ್ನು ಹೇಳುವಂತಿದ್ದರೆ ನಿಸ್ಸಂದೇಹವಾಗಿ ಭವಿಷ್ಯತ್ತಿನಲ್ಲಿ ಇವನು ಏನಾಗಬಹುದೆಂದು ಊಹಿಸುವುದು ಕಷ್ಟ ಮತ್ತು ಆ ಸ್ಥಾನವನ್ನು ತಲುಪಬಹುದೆ? ಇದನ್ನು ದೇವರೆ ಬಲ್ಲ' ಎಂದು ನುಡಿದರು.

ದೇವರ ಸತ್ಯತೆಯ ಕೃಪೆಯು ಹಿರಿ-ಕಿರಿಯಾಗಿರುವುದಿಲ್ಲ,
ಯಾವನಿಗೆ ಕೃಪೆಯಾಗಿದೆಯೋ ಅವನೇ ವಿಜೇತನು.

ಅರ್ಥಾತ್ ಸಮಸ್ತ ಯತ್ನಗಳು, ಕರ್ಮಗಳು ವಾಸ್ತವದಲ್ಲಿ ವ್ಯರ್ಥ,
ಆಗದಿದ್ದರೆ ಆ ಒಡೆಯನ ಸಕಾಲದಲಿ ಕೃಪೆಯು.

ನೇರನಾಗು ನಡೆ-ನುಡಿಯಲಿ ಹೇ 'ಬಹರಿ' ಚಾಬೂಕಿನ ವೃಕ್ಷದಂತೆ,
ಸದಾ ಅವನ ಕೃಪೆಯ ಆಕಾಂಕ್ಷಿಯಾಗಿರು ನೀನು.

ಆಭರಣ-೧೦೦

ದೇವಲೋಕ (ಮಲಕೂತಿ) ಶರೀರದ ಭ್ರಾಂತತೆಗಳು

ಇಚ್ಛಾಶಕ್ತಿಯ ಹೊರತು, ಗೌರವಾನ್ವಿತನ ಸ್ಪಷ್ಟ ವಿವರಣೆಯೆಂದರೆ, ಅದರ ಒಂದು ಅಂಗವನ್ನು ಆಕಾಶದ ಹಾಳೆಗಳ ಮೇಲೆ ಬರೆದರೆ, ಅದರ ವೈಶಾಲ್ಯತೆಯ ಹೊರತಾಗಿಯು ಪೂರ್ಣವಾಗಿ ಬರೆಯಲಾಗುವುದಿಲ್ಲ. ಇದರ ಪ್ರಾಪ್ತ ಸಂದೇಶವೇನೆಂದರೆ, ಈ ದುಃಖತಪ್ತ ಕಣ್ಣುಗಳು ವಿವೇಕ ವರ್ತುಲದ ಕೇಂದ್ರ ಬಿಂದುವಿನ ದರ್ಶನಕ್ಕಾಗಿ ಅತ್ಯಂತ ವಿಹ್ವಲವಾಗಿದೆ. ಆದರೆ ಹೃದಯವು ಈ ಕಾರಣದಿಂದಾಗಿ ಸಂತೃಪ್ತವಾಗಿದೆ. ಅದೇನೆಂದರೆ ಆಧ್ಯಾತ್ಮಿಕ ಅಸ್ತಿತ್ವವು (ಅರ್ಥಾತ್ ಮಲಕೂತಿ ಶರೀರ) ನಾಸೂತಿ ಶರೀರಗಳ ಅವಲಂಬಿತನದ ಹೊರತು, ಸಾವಿರಾರು ಮೈಲಿಗಳ ದೂರವನ್ನು ಕ್ಷಣ ಮಾತ್ರದಲ್ಲಿ ಕ್ರಮಿಸಿ, ಒಬ್ಬರಿಗೊಬ್ಬರು ಭೇಟಿಯಾಗುತ್ತಾರೆ ಹಾಗೂ ಪ್ರಯೋಜನವನ್ನು ಪಡೆಯುತ್ತಾರೆ. ಸತ್ಯದ ಉದ್ದಿಷ್ಟವೆಂದರೆ ಅದು ಅಂತರಂಗ ಶರೀರವಾಗಿದೆಯೇ ಹೊರತು ಬಹಿರಂಗ ಶರೀರವಲ್ಲ. ಅಂತರಂಗ ಶರೀರವು ಉದಾಹರಣಾರ್ಥವಾಗಿ ಕೈಯಂತೆ ಇದೆ ಹಾಗೂ ಬಹಿರಂಗ ಶರೀರರವು ತೋಳಿನಂತಾಗಿದೆ. ತೋಳು ಕೈಗಳ ಉದ್ದೇಶಕ್ಕಾಗಿದೆಯೇ ವಿನಃ ಕೈಗಳು ಬಾಹುಗಳಿಗಾಗಿ

ಅಲ್ಲ. ಸೃಷ್ಟಿಗಳ ಸಾರಾಂಶವಾಗಿರುವ 'ಏಕತ್ವ'ದ ಅನ್ವೇಷಕರ ಪ್ರಕಾರ, ಮೂಲಭೂತಗಳ ಸಿಪ್ಪೆಗಳು ನಶ್ವರವಾಗಿದ್ದು, ತನ್ನ ಸಂಪತ್ತಿನಿಂದ ಅದನ್ನು ದೂರ ತಳ್ಳಿವೆ ಹಾಗೂ ಇದೇ ಸದಾ ಚಿರಂತನವಾಗಿರುವ ಅಸ್ತಿತ್ವದಲ್ಲಿರುವ ಆತ್ಮದ ಸಂಬಂಧವು ಇದರಿಂದಲೇ ಇದ್ದು, ತಮ್ಮ ಜೀವನವನ್ನು ನಿರ್ವಹಿಸುತ್ತಾರೆ ಯಾಕೆಂದರೆ ಸಾಮಾನ್ಯ ಜನರು ನಾಲ್ಕು ಭೂತಗಳ ಕೂಪದಲ್ಲಿ ತಲ್ಲೀನರಾಗಿದ್ದಾರೆ ಆದುದರಿಂದ ಇನ್ನು ಅದೇ ರೀತಿಯಾಗಿ ಭಾವಿಸುತ್ತಾರೆ. ಹೇ 'ಬಹರಿ' ನೀ ಎಲ್ಲಿರುವಿ? ಈ ಚರ್ಚೆಯು ಎಲ್ಲಿ? ಮುಕ್ತಾಯಗೊಳಿಸು ಇದನ್ನು ಹಾಗೂ ವಿಶೇಷ ಪ್ರಾಮಾಣಿಕ ವ್ಯಕ್ತಿಗಳಿಗಾಗಿ ಪ್ರಾರ್ಥಿಸಿ, ಅಲ್ಲಾಹನಿಗೆ ಅಪ್ರಿಯವಾದ ಮಾತುಗಳಿಂದ ಅವನು ತನ್ನ ಕೃಪೆಯಿಂದ ನಿನ್ನನ್ನು ದೂರವಿಡಲಿ.

ಹೇ ನನ್ನ ಜೀವವೇ, ಶರೀರವೆಂಬ ಹೊಳಪು ಪುಷ್ಪದಿಂದ ಹಾಯ್ದು ಹೋಗು,
ಊಟ ಮತ್ತು ನಿದ್ರೆಯು ಆಗಿಹುದು ಇದರ ವಾಸಸ್ಥಳವು.

ಈ ನಶ್ವರ ದೇಹದಿಂದ ನೀ ಹೊರ ಬಂದಾಗ,
ನಿನಗಾಗುವುದು ಪ್ರಕಾಶಮಯ ಶರೀರದ ಪರಿಚಯ.

ಶರೀರದ ಚಟುವಟಿಕೆಗಳು ಜರಗುವವು ಇದರಿಂದಲೇ,
ಇದು ವಾದ್ಯ ಬಾರಿಸುವ ವಸ್ತು, ಅದು ಆಗಿಹುದು ತಂತಿ.

ಅದು ಪ್ರಮತ್ತತೆಯಾಗಿದೆ, ಇದು ಮದ್ಯಪಾತ್ರೆಯ ಓರೆಯಾಗಿದೆ,
ಅದು ಬೀಜವಾಗಿದ್ದರೆ ಇದು ಆಗಿಹುದು ವೃಕ್ಷದ ಸಾದೃಶ.

'ಬಹರಿ' ಈ ಶರೀರದಲ್ಲಿ ಇರುವುದು ಪ್ರಕಾಶ ಅವನದೇ,
ಅದು ಪ್ರೀತಿಯಾಗಿದ್ದರೆ, ಇದು ಪ್ರೀತಿ ಬೆಳಗುವ ಚಂದ್ರವಾಗಿದೆ.

ಆಭರಣ–೧೦೧

ಶರೀರ ಲೋಕವು, ಆತ್ಮಲೋಕ ಒಂದೇ ಆಗಿಹುದೇನು?

ಒಂದು ಸಲ ನಾನು ನನ್ನ ಸ್ಥಿತಿಯಲ್ಲಿ ಪ್ರಮತ್ತನಾಗಿದ್ದೆ. ಆಗ ನನ್ನ ಸಮವಯಸ್ಕರೊಬ್ಬರು ಆಗಮಿಸಿದರು. ನಾನು ಅವರನ್ನು ಕೇಳಿದೆ–ಅದೇನೆಂದರೆ, ಆತ್ಮಲೋಕವು ಶರೀರಲೋಕದಿಂದ ಭಿನ್ನವಾಗಿದೆಯೆ? ಆದರೆ ನನ್ನ ದೃಷ್ಟಿಯಲ್ಲಿ ಈ ಲೋಕವೇ ಆತ್ಮಲೋಕವಾಗಿ ತೋರುತ್ತದೆ. ಇದು ಹೇಗೆ ಎಂದರೆ, ಇದು ಯಾವುದಾದರೂ ಧರ್ಮ ಅಥವಾ ಧಾರ್ಮಿಕ ನಂಬಿಕೆಗೆ ಅನುರೂಪವಾಗಿದೆಯೆ? ಅಥವಾ ಅದರ

ತದ್ವಿರುದ್ಧವಾಗಿದೆಯೆ? ಆಗ ಅವರು ನುಡಿದರು, ಇದಕ್ಕೆ ಸಾಕ್ಷ್ಯ ಒದಗಿಸಿ, ಆಗ ನಾನು ಉತ್ತರಿಸಿದೆ, 'ಹುಚ್ಚ'ರ ಹೇಳಿಕೆಗಳಿಗೆ ಯಾವುದೇ ತರ್ಕ ಹಾಗೂ ಸಾಕ್ಷ್ಯದ ಅವಶ್ಯಕತೆ ಇಲ್ಲ. ಈ ಜನರು ತರ್ಕದ ಪರಿಧಿಯಿಂದ ಹಾಗೂ ಸಾಕ್ಷ್ಯದ ರೇಖೆಯಿಂದ ಹೊರದಾಟಿದ್ದಾರೆ ದೀರ್ಘ ಅವಧಿಯಿಂದ ಇವರು ಚತುರ್ಭೂತಗಳ ಹೊದಿಕೆಯನ್ನು ಎಸೆದು ಬೀಸಾಕಿದ್ದಾರೆ ಹಾಗೂ ಅನಂತದ ತೊಡಿಗೆಯನ್ನು, ಇದರ ತಾತ್ಪರ್ಯ ಆದಿಕರಾರಿನ ಪೋಷಾಕನ್ನು ಉಟ್ಟಿರುವರು. ಅದೂ ಅಲ್ಲದೆ ಕೇವಲ ತನ್ನ ಚರ್ಮವಲ್ಲದೆ ಸಮಸ್ತ ಜೀವಸೃಷ್ಟಿಗಳ ಚರ್ಮವನ್ನು, ಕಟುಕನು ಕುರಿಯ ಚರ್ಮ ಸುಲಿದಂತೆ ಸುಲಿಯಲಾಗುತ್ತದೆ. ಈಗ ಅದೇನು ಉಳಿದಿದೆಯೋ ಅದು ಅಪ್ಪಟ ಆತ್ಮವಾಗಿದೆ. ಇದೇ ಆತ್ಮಲೋಕವಾಗಿದೆ ಹಾಗೂ ಯಾವನು ಉಸಿರಾಟವನ್ನು ಇವೆರಡರ ಮಧ್ಯದ ಗೋಡೆ ಎಂದು ಕರೆದನೋ, ಅವನು ಎರಡೂ ಲೋಕಗಳನ್ನು ಪ್ರಶಂಸಿಸಿದನು.

ಹೇ ಆತ್ಮೀಯನೇ ಯಾವಾಗ ಆತ್ಮದ ಗೂಢವನ್ನು ತನಗನಿಸಿದಂತೆ ರಹಸ್ಯೋದ್ಘಾಟನೆಯಾಗುತ್ತದೆಯೋ ಆತ್ಮ ಹಾಗೂ ದೇಹಗಳು ಏಕರೂಪವಾಗಿ ಕಂಡು ಬರುತ್ತದೆ ಹಾಗೂ ತನ್ನ ವಿಹಾರ ಹಾಗೂ ಉಡ್ಡಯಣ ಪ್ರಾಪ್ತಿಯಾಗುತ್ತದೆ.

ಆಗ ಸೆರೆಯಾಳಾದವನು ದೇಹದಲಿ ಬಂಧಿತನಾಗಿದ್ದಾನೆ,
ನೀ ನೋಡಲಾರೆ, ಆ ತೇಜೋಮಯ ಜೀವವನು.

ದೇಹವನು ತೊರೆದು, ಜೀವವನು ಪಡೆದವನು
ಅವನ ನೋಟದಿಂದ ಅತಿ ದೂರ ಶರೀರ ಹಾಗೂ ಲೋಕಗಳು.

ಆಭರಣ-೧೦೨

ಆದರ್ಶ ಲೋಕ ಹಾಗೂ ದೇವಲೋಕ (ಮಲಕೂತ್)ನಲ್ಲಿ ಇರುವ ಭಿನ್ನತೆ

ಹಲವು ಜನರು ಆದರ್ಶ ಲೋಕ ಹಾಗೂ ದೈವಲೋಕ (ಮಲಕೂತ್)ವನ್ನು ಒಂದೇ ಎಂದು ಭಾವಿಸುತ್ತಾರೆ. ಆದರೆ ಇನ್ನು ಹಲವರು ಇದರಲ್ಲಿ ಭಿನ್ನತೆಯನ್ನು ಕಾಣುತ್ತಾರೆ. ನಿಸ್ಸಂದೇಹವಾಗಿ ವಾಸ್ತವವು ಹೀಗೆಯೇ ಇದೆ. ಯಾಕೆಂದರೆ ಸ್ವಪ್ನಾವಸ್ಥೆಯು ಆದರ್ಶ ಲೋಕಕ್ಕೆ ಸಂಬಂಧಿತವಾಗಿದೆ. ಅದು ನಾಸೂತ್ (ನರಲೋಕ) ಹಾಗೂ ಮಲಕೂತ್ (ದೇವಲೋಕ) ಮಧ್ಯೆ ಇದೆ. ಫಕೀರನು (ಬಹರಿಯರು) ಈ ವಿಷಯವನ್ನು ತಮ್ಮ ಸ್ವಯಂ ಅನ್ವೇಷಣೆಯಿಂದ ತೀರ್ಮಾನಕ್ಕೆ ಬಂದಿರವುದೇನೆಂದರೆ ಹಲವು ಸಲ ಸ್ವಪ್ನಾವಸ್ಥೆಯಲ್ಲಿ ಯಾರೊಂದಿಗೋ ಮಾತು-ಕತೆ ನಡೆಸಿದ್ದಾನೆ. ಕೆಲವು ಮಾತುಗಳನ್ನು

ಹೇಳುತ್ತೇನೆ, ಮತ್ತೆ ಹಲವು ಮಾತುಗಳನ್ನು ರಹಸ್ಯವಾಗಿ ಇಟ್ಟದ್ದೇನೆ. ಈ ಮಾತು-ಕತೆಯ ಆದರ್ಶ ಲೋಕದಲಿ ನಡೆಯಿತು.

ಯಾವುದನ್ನು ರಹಸ್ಯವಾಗಿರಿಸಿದ್ದೇನೆ. ಬಹುಶಃ ಅದು ಉನ್ನತ ಮಲಕೂತನಲ್ಲಿ ನೆಲೆಸಿರಬಹುದು, ಸ್ವಪ್ನದಿಂದ ಸ್ವಪ್ನದವರೆಗಿನ ಅರ್ಥವೂ ಇದೇ ಆಗಿದೆ.

ಆದರ್ಶ ಏನಿಹುದು, ಅದು ವಾಸ್ತದಲಿ ಸ್ವಪ್ನ ಮಲಕೂತ್,
ಬೇರೆ ಯಾರಾದರೂ ಸ್ವಪ್ನ ನೋಡಿದರೆ ವಾಸ್ತವದಲಿ ಅದು ಸ್ವಪ್ನ.

ನಿನ್ನ ಹೊರತು ಅನ್ಯರು ಕಂಡಿದ್ದು ಅದೂ ನಿಜವಿರಬಹುದು,
ರಹಸ್ಯಗಳನ್ನು ಬಿಚ್ಚುವ ಹೃದಯವೇ ಜಾಗೃತವಸ್ಥೆಯ ಮಿತಿಯನ್ನು ಮೀರದಿರು.

ಆಭರಣ-೧೦೩

ಆತ್ಮ ಹಾಗೂ ಆದರ್ಶಲೋಕದ ವಿಕಾಸ ಹಾಗೂ ಅವತರಣ

ಪ್ರಚಂಡ ಶಕ್ತಿಯ ಆಗರವಾದ ದೇವನು, ರಹಸ್ಯ ಕೋಶವಾಗಿದ್ದಾನೆ, ಅಸ್ತಿತ್ವ ಹಾಗೂ ನಾಸ್ತಿತ್ವ, ನಾವು ಮತ್ತು ನೀನುಗಳಿಂದ ಪವಿತ್ರನಾಗಿದ್ದನು. ತನ್ನನ್ನು ಗುರುತಿಸಲು ಇಚ್ಛುಕನಾದನು. ಈ ಇಚ್ಛೆಯು ಅರ್ಥಾತ್ 'ಫಾಹಬೀಬತ್' ಮಹ್ಮದರ ಸತ್ಯವಾಗಿದೆ. ಪರಿಪೂರ್ಣ ಚೇತನದ ಸನ್ನೆಯಿಂದಾಗಿ ಯಾವುದು ಪುರಾತನ ಜ್ಞಾನ ಫಲಕದ ಮೇಲಿದ್ದ ಕಲಾತ್ಮಕ ರೂಪ-ಲಾವಣ್ಯಕ್ಕೆ ಅಸ್ತಿತ್ವ ದಯಪಾಲಿಸಿ ಆ ಆಧ್ಯಾತ್ಮಿಕ ಅಸ್ತಿತ್ವವು ಅತ್ಯಂತ ಸುಕೋಮಲವೂ ಮನೋರಮೆಯೂ ಆಗಿದೆ. ಇದನ್ನು ಆತ್ಮಲೋಕದಿಂದ ಆದರ್ಶ ಲೋಕಕ್ಕೆ ಕರೆತರಲಾಯಿತು. ಈ ಆದರ್ಶ ಲೋಕದಿಂದ ಅದು ಸಾಕ್ಷ್ಯ ಲೋಕದಲ್ಲಿ ಪ್ರವರ್ಧಮಾನವಾಗುತ್ತದೆ. ಮತ್ತೆ ಅದು ಸಮಸ್ತವಾಗಿ ಧ್ವಂಸಗೊಳಿಸಲ್ಪಡುತ್ತದೆ. ಕೇವಲ ಮನುಜ ಅಸ್ತಿತ್ವರಾದ 'ಆದಂ'ರ ಹೊರತಾಗಿ ಈ 'ಆದಂ'ರನ್ನು ಮಹ್ಮದ್‌ರ ಸತ್ಯತೆಯ ಪ್ರಕಾಶದ ಭಾಗ್ಯವನ್ನು ದಯಪಾಲಿಸಲಾಯಿತು. ಆದರ್ಶ ಲೋಕದ ನಿರ್ಮಾಣದ ಬಳಿಕ, 'ಅಸ್ಸುಜ್ಜದುವಾ' ಶಿರಸಾವಹಿಸಿದರು, ಆದರೆ ಕೇವಲ ಆ ದುರುಳ ಸಾಹಸಿ ದುರಹಂಕಾರಿಯ ಹೊರತಾಗಿ ಅವನು ದೈವಸನ್ನಿಧಿಯಿಂದ ಹೊರಹಾಕಲ್ಪಟ್ಟನು 'ಆದಂ'ರು ಸ್ವಲ್ಪ ಅವಧಿಯವರೆಗೆ ತಮ್ಮ ಶರೀರದ ಜೊತೆ ಆದರ್ಶ ಲೋಕದಲ್ಲಿದ್ದರು. ಇದರ ನಂತರ ಒಂದು ಯುಕ್ತಿಯಿಂದಾಗಿ ಅವರ ಪಾರ್ಶ್ವದಿಂದಲೇ ಉತ್ಪತ್ತಿಯಾದವರ ಜತೆ ಸಾಕ್ಷ್ಯಲೋಕಕ್ಕೆ ಆಗಮಿಸಿದರು.

ಈ ಸಮಯದಲ್ಲಿ ಮುಂದೆ ಬರುವ ಸಮಸ್ತರ ಆತ್ಮಗಳು ಆದರ್ಶ ಲೋಕದಲ್ಲಿ

ಒಂದೆಡೆ ಸೇರಿದ್ದವು. ಪ್ರತಿ ಆತ್ಮವು ತನ್ನ ನಿಶ್ಚಿತ ವಾಗ್ದಾನದ ಸಮಯಕ್ಕೆ ಆಗಮಿಸುತ್ತದೆ. ಹಾಗೂ ತೆರಳುತ್ತವೆ. ಗೋರಿಯಲ್ಲಿರುವ ತನಕ, ಇದೂ ಸಹ ಆದರ್ಶ ಲೋಕದ ಕಡೆ ವಿಕಾಸಗಾಮಿನಿಯಾಗಿದೆ. ಯಾವ ರೀತಿಯ ಆದರ್ಶದಿಂದ ಇದು ಅವತರಣವಾಗಿತ್ತು, ಅದೇ ರೀತಿಯಾಗಿ ಸಾಧಕನ (ಸಾಲಿಕ) ಮೇಲೆ ಅವತರಣವಾಗುತ್ತದೆ. ಅದು ಮತ್ತೆ ವಿಕಾಸವಾಗಿ ತನ್ನ ಮೂಲಸ್ಥಾನವನ್ನು ತಲುಪುತ್ತದೆ. ಹಲವು ದರ್ವೇಶರು ದೇವರ ಈ ಅನಂತ ಅನುಗ್ರಹದ ಅವತರಣದಿಂದ ಹಂತ-ಹಂತವಾಗಿ ಉನ್ನತ ಹಂತವಾದ ಆದರ್ಶ ಲೋಕದ ಅತ್ಯುಚ್ಚ ಹಂತದಿಂದ ಪರಿಚಿತನಾಗುತ್ತಾರೆ. ಇದರ ಅನ್ವೇಷಣೆಯು ಸಾಧ್ಯವಾಗುತ್ತಿದ್ದರೆ ಭಯ ಭೀತಿಗಳಾವವು ಇರುತ್ತಿರಲಿಲ್ಲ.

ಬುದ್ಧಿಯ ನಾಗಾಲೋಟದಿಂದಾಗಿ ಎಲ್ಲರೂ ಇರುವರು ಆನಂದಿತರು
ಆದರೆ ದೈವೀ ಅದ್ಭುತ ರಹಸ್ಯಗಳಿಂದ ಇರುವವರು ಅತಿದೂರ

ಬುದ್ಧಿಯು ಪರಿಚಿತವಾಗಿ ಇಹುದು ಮುಗ್ಧತೆಯಿಂದ,
ಆದರೆ ಇಲ್ಲಿ ಚಿಂತಾಕ್ರಾಂತವಾಗಿಹುದು ಅಂತರ್‌ದೃಷ್ಟಿಯು.

ಹೇ 'ಬಹರಿ' ನೀನೆಲ್ಲಿ? ಆ ರಹಸ್ಯವಿರುವುದು ಎಲ್ಲಿ?
ನೀ ಸುಮ್ಮನೆ ಕುಳಿತಿರು ನಿನ್ನ ಸ್ಥಾನದಲಿ ಅಂಧನಾಗಿ.

ಆಭರಣ-೧೦೪

ಮನುಷ್ಯನ (ದೈವಿ) ಸತ್ಯೆಯ ಪ್ರಕಟರೂಪ ಹಾಗೂ ಉಳಿದೆಲ್ಲಾ ಪದಾರ್ಥಗಳು ಅರ್ಹತೆಯ ಪ್ರಕಟರೂಪ

ಗೋಚರ ಲೋಕದಿಂದ ಅಗೋಚರದವರೆಗೆ ಪ್ರತಿಯೊಂದು ಪದಾರ್ಥವು ದೈವೀ ಅರ್ಹತೆಯ ಪ್ರಕಟರೂಪವಾಗಿದೆ. ಮನುಷ್ಯನು ಸೂರ್ಯವಂಶದ ಉದಯಸ್ಥಾನ ವಾಗಿದ್ದಾನೆ. ಅವನು ಬಾಹ್ಯರೂಪವಾಗಿದ್ದರೆ, ಅವನಿಂದಲೇ ಬಾಹ್ಯರೂಪವನ್ನು ಪಡೆದಿದ್ದಾನೆ. ಅವನು ಅಕಸ್ಮಾತ್ ಅಂತರ್ಯವಾಗಿದ್ದರೆ, ಅವನಿಂದಲೇ ಆಂತರ್ಯಮಯವಾಗಿದ್ದಾನೆ. ಮಹಾಮಹಿನಾದ ಪರಂಸತ್ಯನು ಇದನ್ನು ಯಾರಾದರೂ ಪರಿಪೂರ್ಣ ಅನುಭಾವದೊಂದಿಗೆ ಗುರುತಿಸುವಂತಾಗುವ ಆಶಾಭಾವ ಹೊಂದಿದ್ದನು. ಇದನ್ನರಿತು ಅವನ ದಾಸ್ಯವನು ಸ್ವೀಕರಿಸುವಂತಾಗಬೇಕು ಎಂದು ಬಯಸಿದ್ದನು. ಅವನು ತನ್ನ ಪ್ರಾಚೀನ ಜ್ಞಾನದಿಂದ ಇದನ್ನು ಅರಿತವನಾಗಿದ್ದನು. ಅದೇನೆಂದರೆ ಈ ಕಾರ್ಯಕ್ಕೆ ಹೃದಯದ ಹೊರತು ಬೇರ್ಯಾರು ಇದಕ್ಕೆ ಅರ್ಹರಲ್ಲ. ಯಾವ ಹೃದಯವು

ಅಸ್ತಿತ್ವರಹಿತವಾಗಿತ್ತು, ಅದು ಮಹ್ಮದರ ಸತ್ಯತೆಯ ಸಾಮಿಪ್ಯವನ್ನು ಪಡೆಯಿತು. ತಾತ್ಪರ್ಯವೆಂದರೆ ಇದನ್ನು ಮತ್ತೇ ಪ್ರತ್ಯಕ್ಷ ಲೋಕದಲ್ಲಿ ತೋರುವ ನಿರ್ಧಾರವಾದಾಗ, ಯಾವ ಪದಾರ್ಥವು ಪರಿಶುದ್ಧವಾಗಿ ಆತ್ಮ ಲೋಕದಲ್ಲಾಗಲಿ, ಶರೀರ ಲೋಕದಲ್ಲಾಗಲಿ ಇದಕ್ಕಾಗಿ ಸೂಕ್ತವಾಗಿರಲಿಲ್ಲ. ಇದಕ್ಕಾಗಿ ಯಾವುದೋ ಆತ್ಮ ಹಾಗೂ ಶರೀರದ ಪರಸ್ಪರತೆಯ ಸಹಭಾಗಿತ್ವದ ಅವಶ್ಯಕತೆ ಇತ್ತು ಇದೇ ಕಾರಣಕ್ಕಾಗಿ ಇವೆರಡು ವಿಶಿಷ್ಟತೆಗಳನ್ನು ಆದಂರಲ್ಲಿ ಸ್ಥಾಪಿಸಿಗೊಳಿಸಿ, ಅವು ಅವರಲ್ಲಿ ನೆಲೆಸುವಂತೆ ಮಾಡಲಾಯಿತು. ಹೀಗಾಗಿ 'ಆದಂ'ರು ದೇವರ ಶೋಧನೆ, ಸೃಷ್ಟಿ ಹಾಗೂ ಪ್ರಕಟರೂಪದಲ್ಲಿ ತರಲಾಯಿತು. 'ಆದಂ'ರು ಸಹ ಈ ಕೃಪೆಯಿಂದ ಜ್ಞಾತರಾಗಿದ್ದು ತಮ್ಮ ಜ್ಞಾನದ ಅನುಗುಣವಾಗಿ ದೇವರ ಸ್ತುತಿ ಹಾಗೂ ಆರಾಧನೆಯನ್ನು ಪ್ರಜ್ಞಾವಸ್ಥೆಯಲ್ಲಿ ಪ್ರಥಮ ಆದ್ಯತೆಯಾಗಿ ಸ್ವೀಕರಿಸಿದರು. ಆಗ ಪರಂಸತ್ಯನು ವಿಧಿನಿಯಮದಂತೆ ಅವರನ್ನು ವೀಕ್ಷಿಸಿ, ಸಂತುಷ್ಟನಾದನು ಹಾಗೂ ಅವರ ಮೇಲೆ ಸೌಭಾಗ್ಯವನ್ನು ದಯಪಾಲಿಸಿದನು.

ಬ ಖ಼ದ್ ಆಯ್ ಖ಼ದಮಾ ಅಹ್ಲೆ ಇಸ್ತಾರ್
ಖ಼ಬಾಯೇ ಖಬೂಲೆಯತ್ ಆಮದ್ ಸಜ಼್್ ಅವರ್

ನೀನೇ ಆ ರಹಸ್ಯದ ಉನ್ನತಿಯ ಎತ್ತರವನ್ನು ಹೊಂದಿರುವಿ,
ಆ ಎತ್ತರಕೆ ಸ್ವೀಕಾರಾರ್ಹದ ನಿಲುವಂಗಿಯು ಸರಿಯಾಗಿ ಹೊಂದಿಕೆಯಾಯಿತು.

ಇದರಿಂದ ವ್ಯಕ್ತವಾಗುವುದೇನೆಂದರೆ ಮನುಷ್ಯನು ಕಾಲಿನ ಉಗುರಿನಿಂದ ತಲೆಯ ಕೂದಲಿನವರೆಗೆ ಹೃದಯದ ರೂಪವಾಗಿದ್ದಾನೆ. ಅರ್ಥಾತ್ ಹೃದಯವೇ ಆಗಿದ್ದಾನೆ. ಜೀವಿಗಳ ವೃಕ್ಷದ ಪ್ರಥಮ ಹಾಗೂ ಅಂತ್ಯದ ಬೀಜವು ಇದೇ ಆಯಿತು. ಇದರ ಪ್ರಾರಂಭವು ತಾಯಿಯ ಗರ್ಭದಿಂದಲ್ಲ, ಬದಲಾಗಿ ಇದು ಒಡಂಬಡಿಕೆಯ ದಿನದಿಂದಲೇ ಇದೆ. ಇದರ ಪರಿಣಾಮವು ಮೃತ್ಯುವಲ್ಲ, ಬದಲಾಗಿ ಪುನರುತ್ಥಾನದ ದಿನವಾಗಿದೆ. ಕೋಟ್ಯಾಂತರ ಉಡುಪುಗಳನ್ನು ಧರಿಸಿ ನಿರಂತರ ಪ್ರಕ್ರಿಯೆಯಲ್ಲಿದ್ದು, ಮುಂದೆಯೂ ಈ ಪ್ರಕ್ರಿಯೆ ಜಾರಿಯಲ್ಲಿದೆ. ಇದರಲ್ಲಿ ಮೃತ್ಯುವು ಒಂದು ಹಂತವಾಗಿದೆ. ಈ ನಿರಂತರ ಪ್ರಕ್ರಿಯೆಯಲ್ಲಿ ಜೀವ ಹಾಗೂ ಹೃದಯದ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಅಮಿತೋತ್ಸಾಹದಿಂದ ಪ್ರಕಟವಾಯಿತು. ಅದೇನೆಂದರೆ ಮನುಷ್ಯನು ಪುನರುತ್ಥಾನದ ದಿನ ಮನುಷ್ಯನಾಗಿದ್ದನು. ಇದನ್ನು 'ಅಲ್‌ಸತ್ ಬರ್‌ಬಕುಂ' ಎಂದು ಉತ್ತರ ದೊರೆಯಿತು. ಅಂದರೆ ತನ್ನ ಉತ್ಕರ್ಷದ ಪ್ರಸಕ್ತ ಸ್ಥಿತಿಯಲ್ಲಿ ಅಲ್ಲ, ಈ ಸ್ಥಿತಿಯಲ್ಲಿ ಮನುಷ್ಯನೆಂದೂ ಹೇಳಲಾಗುವುದಿಲ್ಲ. ಅಗ್ನಿಯೆಂದೂ ಹೇಳಲಾಗುವುದಿಲ್ಲ. ಪ್ರಕಾಶವೆಂದು ಕರೆಯಲಾಗುವುದಿಲ್ಲ. ಇದೊಂದು ಮಹಾನ್ ಚಮತ್ಕಾರವೆನ್ನಬಹುದು.

ನೀನು ಮನುಜನೂ ಅಲ್ಲ, ಜೀವವೂ ಅಲ್ಲ, ಹೇ ಹೃದಯವೇ,
ಪ್ರಕಾಶವಾಗಿದ್ದಾನೆ ನಿನ್ನಲಿ ಪೂರ್ಣ ಸೂರ್ಯನು ನಿಸ್ಸಂದೇಹವಾಗಿ.

ಇದರ ಪ್ರಕಾಶದಿಂದಲೇ ಬೆಳಗಿಹುದು ಈ ಶರೀರವು,
ಇದರ ಹೊಳಪಿನಿಂದಲೇ ಹೃದಯವು ಸಹ ಬೆಳಗಿಹುದು.

ಇವೆರಡು ಭಿನ್ನವೆಂದು ತಿಳಿದರೆ, ನೀನು ಇರುವುದಾದರೂ ಏನು?
ಆದರೆ ಒಂದೇ ಆಗಿ ನೋಡುತಿದೆ ಈ ಕಣ್ಣಿನ ನೋಟವು.

ಅಲ್ಪಜ್ಞಾನದಿಂದ ತಂದೆಯು ಇವನನ್ನು ತನ್ನ ಮಗನೆಂದು ತಿಳಿಯುತ್ತಾನೆ. ತಾಯಿಯು ತಿಳಿಯುತ್ತಾಳೆ, ಇವನು ನಾನು ಜನ್ಮ ನೀಡಿದ ಕಂದನೆಂದು. ಸಹೋದರ ಹೇಳುತ್ತಾನೆ, ಇವನು ನನ್ನ ಸಹೋದರನೆಂದು, ತಾತನು ತನ್ನ ಮೊಮ್ಮಗನೆಂದು ಹೇಳುತ್ತಾನೆ. ಆದರೆ ನನಗೆ ಕೇಳಿದರೆ ಅವನು ಇವರದೂ ಅಲ್ಲ, ಅವರದೂ ಅಲ್ಲ. ಬದಲಾಗಿ ಸತ್ಯದ ಇಡುಗಂಟಾಗಿದ್ದಾನೆ. ಆ ರಹಸ್ಯವನ್ನು ಬೇಧಿಸುವ ಅರ್ಥಕೋಶದವರ ಹೊರತಾಗಿ, ಯಾರಿಗೂ ಇದರ ಪರಿಜ್ಞಾನ ವಿರಲಿಲ್ಲ. ಮಹಮೂದ ಬಹರಿ ಈ ಕಾರಣದಿಂದಲೇ ಮುಖಚರ್ಯೆಯ ಮೋಹಿತನಾದನು, ಇಲ್ಲವಾದರೆ ಪ್ರತಿಯೊಬ್ಬ ಮರ್ಮಜ್ಞಾನಿಯೂ (ಆರಿಫ್) ಅರ್ಥದ ಕಡೆಯೇ ಆಕರ್ಷಿತರಾಗಿದ್ದರು.

ಯಾವನೋ ಕೇಳುತಿಹನು ಚಂದ್ರನ ಅವತರಣದ ಆರಂಭ,
ನನಗಿಂತ ಅಧಿಕ ನೀ ಅರಿಯಲಾರೆ ಹೇ, ಉನ್ನತ ಆಕಾಶವೇ.

ಈಗ ಪೂರ್ಣ ಚಂದ್ರನು ನೀನು ಅರಿಯಲಾರೆನು ಏನೂ ನೀನು
ಅವನ ಸ್ಥಿತಿಗತಿಯೇನು? ನಂಬಿಕೆಯ ಲೋಕದ ಹೇ ಕುಲೀನನೇ.

ಸೂರ್ಯನು ಅಲ್ಲ, ಚಂದ್ರನು ಅಲ್ಲ, ಹೇ ಮನುಜ ಆಕಾಶನೇ,
ಅವನ ಸತ್ತೆಯಲ್ಲಿ ಯಾವಾಗ ಇತ್ತು ತರ್ಕವಿತರ್ಕದ ಅವಕಾಶ?

ನಬಿ 'ಆದಂ' ಲೋಕದ ಪದಾರ್ಥಗಳನ್ನು ಅದನ್ನು ಯಾವಾಗ ಗ್ರಹಿಸಬೇಕಾಗಿದೆಯೋ ಅದೇ ರೀತಿಯಲ್ಲಿ ಅರಿಯತ್ತಾರೆ. ವಜ್ರ, ರತ್ನ, ಕತ್ತೆ ಇತ್ಯಾದಿಗಳ ಮೌಲ್ಯವನ್ನು ನಿರ್ಧರಿಸುತ್ತಾರೆ. ಆದರೆ ಮನುಷ್ಯನ ಸತ್ಯತೆಯ ಮೌಲ್ಯ ನಿರ್ಧಾರಣೆಯಲ್ಲಿ ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸುತ್ತಾರೆ. ಅದನ್ನು ನಿರ್ಧರಿಸಿದರೂ, ಅದಿಷ್ಟೆ? ಅದೇನೆಂದರೆ ಅವನ ಉತ್ಪತ್ತಿಯ ಮೂಲವು ಮಣ್ಣು ಆಗಿರುತ್ತದೆ. ಜತೆಜತೆಗೆ ಅಪವಿತ್ರ ಹೊಲಸು ಹಾಗೂ ನಿಕೃಷ್ಟವಾದ ರಕ್ತವಾಗಿದೆ. ಇದು ಅತ್ಯಂತ ಸ್ಪಷ್ಟವೇ ಆಗಿದೆ. ಅದೇನೆಂದರೆ ಯಾವ ವಸ್ತುವು ಮಲೀನತೆಯಿಂದ ಹುಟ್ಟಿದೆಯೋ ಅದು ಮಲಿನವಾಗಿಯೇ ಇರುತ್ತದೆ, ಪವಿತ್ರವಂತೂ ಅಲ್ಲ. ಅಕಸ್ಮಾತ್ ಅವನು ಅಸ್ತಿತ್ವವನ್ನು

ಹೊಂದಿರುವುದಾದರೂ ಅದು ಎರಡು ಶೂನ್ಯಗಳ ಮಧ್ಯೆ. ಅದು ಮೃತ್ಯುವಿನ ಅಧೀನ ಸೆರೆಯಾಳು ಹಾಗೂ ಮಣ್ಣಿನ ಆಹಾರವಾಗಿದ್ದಾನೆ. ಹೀಗಾಗಿ ಯಾವನಾದರೂ ಈ ರೀತಿಯಾಗಿ ತನ್ನ ಸತ್ಯತೆಯ ಅಸ್ತಿತ್ವದ ಬಗ್ಗೆ ತಿಳಿದುಕೊಂಡಿರುವುದಾದರೆ ಅವನು ನಿಜಕ್ಕೂ ಪರಿಪೂರ್ಣತೆಯನ್ನು ಪ್ರಾಪ್ತಿಸಿಕೊಂಡಿದ್ದಾನೆ. ಆದರೆ ಈ ಫಕೀರನು (ಬಹರಿ) ಅರಿಯುವುದೇನೆಂದರೆ, ಈ ರೀತಿ ಸ್ವಯಂ ತನ್ನ ಎರಡು ಕೈಗಳನ್ನು ತನ್ನದೆ ಹೆಗಲಿನ ಮೇಲೆ ಇಟ್ಟು, ಸ್ವಯಂ ತನ್ನನ್ನೆ ಅಪಮಾನದ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಸ್ವಯಂ ಅನ್ನು ಮಲಿನವೆಂದು ತಿಳಿಯುವ ವ್ಯಕ್ತಿಯ ಕೈ ಪವಿತ್ರ ಬಾಹುಗಳವರೆಗೆ ಅದ್ವೇಗೆ ಚಾಚಬಹುದು. ಯಾವ ವ್ಯಕ್ತಿ ರಣರಂಗದಿಂದ ಪಲಾಯನ ಮಾಡುವ ಉದ್ದೇಶವನ್ನು ಹೊಂದಿದವನಾಗಿರುತ್ತಾನೋ, ಅವನು ಅಜಾನುಬಾಹು ಯೋಧರ ಸಮ್ಮುಖ ಅದ್ವೇಗೆ ನಿಲ್ಲಬಹುದು.

ಆದುದರಿಂದ ನನ್ನ ಪೀರ್-ಮುರ್ಷದ್‌ರು ಹಲವು ಸಲ ನುಡಿಯುತ್ತಿದ್ದರು, ಅದೇನೆಂದರೆ ಮಹಾಮಹಿಮ ದೇವರು ಮನುಷ್ಯನಿಗೆ ಉತ್ಕೃಷ್ಟವಾದ ವೇಷ ಭೂಷಣವನ್ನು ದಯಾಪಾಲಿಸಿ, ಮುಖ್ಯಸ್ಥನ ಪೀಠದಲ್ಲಿ ಕುಳ್ಳಿರಿಸಿದ್ದಾನೆ. ಅದಾಗ್ಯೂ ಇದರ ಅರಿವಿದ್ದೂ ಈ ಪೀಠದಿಂದ ಕೆಳಗಿಳಿದು ಬಂದು, ನಿಕೃಷ್ಟತೆಯ ಹಲಗೆಯ ಮೇಲೆ ಕುಳಿತಿದ್ದರೆ, ಹಾಗೂ ಪ್ರತಿ ವ್ಯಕ್ತಿಯ ಸಮ್ಮುಖ ಶಿರಬಾಗಿಸುತ್ತಿದ್ದರೆ, ಹಾಗೂ ಜನರ ಹಿಂದೆ ನೆರಳಿನಂತೆ ಓಡಾಡುತ್ತಿದ್ದರೆ, ಅವನಷ್ಟು ದೌರ್ಭಾಗ್ಯ ಹಾಗೂ ನತದೃಷ್ಟ ಮತ್ತಾರೂ ಅಲ್ಲ.

ಮನುಷ್ಯನು ಬಾದಶಹಾನಾಗಿದ್ದಾನೆ ನಿರ್ಗತಿಕನಲ್ಲ.
ಅವನು ಮುಂಡಾಸಾಗಿದ್ದಾನೆ, ಪಾದರಕ್ಷೆಯಲ್ಲ.

ಕತ್ತೆ, ನಾಯಿಯ ಬದಲು ಕುದುರೆ ಚೆನ್ನವಾಗಿದೆ,
ಹುಳಿಯಲ್ಲಿ ಈ ಹಣ್ಣು, ಸಿಹಿ ಸ್ವಾದಮಯವಾಗಿದೆ.

ಪ್ರಥಮವೂ ಇವನಾಗಿದ್ದನು, ಅಂತಿಮವೂ ಇವನಾಗಿದ್ದಾನೆ,
ಅಂತರಂಗವೂ ಇವನಾಗಿದ್ದಾನೆ, ಬಹಿರಂಗವೂ ಇವನಾಗಿದ್ದಾನೆ.

ಇವನೇ ಪ್ರತ್ಯಕ್ಷದರ್ಶಿಯಾಗಿದ್ದನು ಒಡಂಬಡಿಕೆಯ ದಿನ,
ಈಗ ಸ್ನೇಹಿತನನು ಹಂಬಲಿಸುವವನೂ ಇವನೇ ಆಗಿಹನು.

ಪುನರುತ್ಥಾನದ ದಿನವೂ ಇವನೇ ಎತ್ತುವನು ಶಿರವನು,
ಸತ್ತು ಸಾವುರಹಿತನಾಗಿರುವನು ಇವನೇ ಮಾತ್ರ.

ನಿಷ್ಕಳಂಕನೂ ಇವನೆ ಹೃದಯ ರೂಪದಿಂದ,
ಅರಿತಿರವನು ಇವನು ಮಾರ್ಗವನೂ, ಗುರಿಯನು.

ವಾಸ್ತವವಾಗಿ ಇವನೇ ಆಗಿದ್ದಾನೆ ಜೀವ ರೂಪದಲಿ,
ಸೃಷ್ಟಿಕರ್ತನ ದರ್ಪಣವಾಗಿಹನು ಇವನು ನಿಸ್ಸಂದೇಹ.

'ಬಹರಿ'ಯ ಮಾತುಗಳು ಎಲ್ಲೆಯನು ಮೀರುತಿವೆ.
ಇದು ಬುದ್ಧಿಯಲ್ಲ, ತಲ್ಲೀನತೆಯಿಂದ ಪ್ರಕಟವಾಗಿದೆ.

ಆಭರಣ–೧೦೫

ಮನುಷ್ಯನು ತನ್ನ ಗುರುತು ಪರಿಚಯದಲ್ಲಿ ತದ್ರೂಪ ಹೊಂದಿಹನು

ಮನುಷ್ಯನಿಗೆ ದಿವ್ಯಜ್ಞಾನ ಪ್ರಾಪ್ತಿಯಾಗುವಂತಿದ್ದರೆ, ಸೃಷ್ಟಿಗಳ ಸಾರವಾಗಿರುವ ಮನುಜ ಉತ್ಕೃಷ್ಟತೆಗೆ ಹಾನಿಯುಂಟು ಮಾಡುವುದಿಲ್ಲ. ಆದರೆ ಯಾವನ ಮೇಲೆ ಆ ಮಹಾಮಹಿಮ ದಯಾಮಯನ ಕೃಪೆಯಾದರೆ, ದಿವ್ಯಜ್ಞಾನದ ಹೊರತಾಗಿಯೂ ಅವನು ಗೌರವ ಪ್ರಾಪ್ತನಾಗುತ್ತಾನೆ. ಮನುಷ್ಯನು ವಾಸ್ತವವಾಗಿ ಏನೋ ಆಗಿದ್ದಾನೆ, ಆದರೆ ತನ್ನನ್ನು ಏನೋ ಎಂದು ತಿಳಿಯುತ್ತಾನೆ. ಅವನು ಸುಲೇಮಾನ್ ಆಗಿದ್ದರೆ, ತನ್ನನ್ನು ಇರುವೆ ಎಂದು ಭಾವಿಸುತ್ತಾನೆ. ಅವನು ಸೂರ್ಯನಾಗಿದ್ದರೆ, ತನ್ನನ್ನು ಅನುಪಯುಕ್ತ ಕಣವೆಂದು ಭಾವಿಸುತ್ತಾನೆ. ಯಾವ ರೀತಿ ಅಫೀಮು ಸೇವಿಸುವವನು ತನ್ನನ್ನು ಯೋಧನೆಂದು ತಿಳಿಯುತ್ತಾನೆ. ಇದಕ್ಕೆ ಅನುರೂಪವಾದ ಕಥೆಯೇನೆಂದರೆ ಒಬ್ಬ ಅಫೀಮನ್ನು ಸೇವಿಸಿದವನು ಹಾಗೂ ಒಬ್ಬ ಚಾಲಾಕ್ ಸೈನಿಕ ಒಂದು ಧರ್ಮಶಾಲೆಯ ಅಂಗಡಿಗೆ ತಲುಪಿ ಏನನ್ನೋ ಖರೀದಿಸಿದರು. ಸಂಜೆ ಕತ್ತಲಾಗಿತ್ತು. ಆದುದರಿಂದ ಇಬ್ಬರೂ ಅಲ್ಲೇ ಮಲಗಿದರು. ಬೆಳಗಾಗುವ ಮೊದಲು ಅಫೀಮ್ ಸೇವಿಸಿದವನು ಎದ್ದು, ಮತ್ತೆ ನೀರಿನೊಡನೆ ಅಫೀಮನ್ನು ಸೇವಿಸಿ ಮಂಪರಿನಲ್ಲಿ ಯೋಚಿಸ ಹತ್ತಿದನು. ಈ ಸೈನಿಕನು ತುಂಬಾ ಸದೃಢ ಹಾಗೂ ಚಾಲಾಕನಾಗಿದ್ದಾನೆ. ಹೀಗಾಗಿ ಬೆಳಗಿನ ಚಳಿಯಾಗಲಿ, ಮಧ್ಯಾಹ್ನ ಬಿಸಿಲಾಗಲಿ, ಅವನ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಅವನು ಯಾವಾಗ ಬೇಕಾದರೂ ಎದ್ದು ಹೊರಡಬಹುದು. ಆದರೆ ನಾನು ಅಶಕ್ತ ಹಾಗೂ ದಣಿದವನಾಗಿದ್ದು, ಸೂರ್ಯೋದಯಕ್ಕೆ ಮುಂಚೆಯೇ ಆದಷ್ಟು ದಾರಿಯನ್ನು ಕ್ರಮಿಸುವುದು ಒಳ್ಳೆಯದೆಂದು ಯೋಚಿಸಿದನು. ಅಲ್ಲಿ ದೀಪವೂ ಇರಲಿಲ್ಲ ಹಾಗೂ ಭಯಭೀತನೂ ಆಗಿದ್ದನು. ಈ ಎರಡೂ ಚಿಂತೆಗಳಲ್ಲಿ ಅವನು ತನ್ನ ಟೋಪಿಯನ್ನು ಬಿಟ್ಟು, ಸೈನಿಕ ಟೋಪಿಯನ್ನು ತಲೆಯ ಮೇಲೆ ಇಟ್ಟುಕೊಂಡು

ಹೊರಟನು. ಸ್ವಲ್ಪ ಸಮಯದ ಬಳಿಕ, ಸೂರ್ಯೋದಯವಾದಾಗ, ಎಲ್ಲಾ ಚಿಕ್ಕ ದೊಡ್ಡ ವಸ್ತುಗಳು ಸ್ಪಷ್ಟವಾಗಿ ಕಾಣಹತ್ತಿದವು. ತಕ್ಷಣವೇ ಆಫೀಮ ಸೇವಿಸಿದ ವ್ಯಕ್ತಿಗೆ ತನ್ನ ಮೇಲಿರುವ ಟೋಪಿಯು ಸೈನಿಕನದ್ದು ಎಂದು ಅರಿವಾಯಿತು. ಅವನಿಗೆ ಆಗ ತನ್ನ ಮೇಲೆಯೇ ಸಂಶಯವಾಗ ತೊಡಗಿತು. ಹಾಗೂ ನುಡಿಯಹತ್ತಿದನು, ನಾನು ಮೂರ್ಖತನದಲ್ಲಿ ದಾರಿಯನ್ನು ಕ್ರಮಿಸಿದ್ದೇನೆಂದು ಭಾವಿಸಿದ್ದೆ. ಇದು ತಪ್ಪಾಗಿದೆ. ವಾಸ್ತವವಾಗಿ ಸೈನಿಕನು ನಡೆಯುತ್ತಿದ್ದಾನೆ ಹಾಗೂ ನಾನು ಅಲ್ಲಿಯೇ ಮಲಗಿದ್ದೇನೆ. ಹಾಗೂ ನಿದ್ರೆಯಲಿ ಮಸ್ತಾಗಿದ್ದೇನೆ.

ಪ್ರತಿಯೊಬ್ಬನು ಇಹನು ಕೇವಲ ಅನ್ಯರ ಚಿಂತೆಯಲಿ,
ತನ್ನ ಸ್ವಯಂ ಬಗ್ಗೆ ಯಾರಿಗೂ ಇಲ್ಲ ಸಂಬಂಧ.

ನೀ ನಿನ್ನನು ಅರಿಯುವ ಬದಲು ಅನ್ಯರನು ಅರಿತೆ,
ಆ ಆಫೀಮ್ ಸೇವಿಸಿದವನಿಗೆ ಆದಂತೆ ನಿನ್ನ ಸ್ಥಿತಿ.

ಹೇ 'ಬಹರಿ' ನೀನು ಜ್ಞಾನ ಸಾಗರವನ್ನು ಅರಿತಿರುದಾದರೆ,
ಸಿಗುವುದು ನಿನಗೆ ನೆಮ್ಮದಿ, ಅಶಾಂತತೆಯು ತೊಲಗಬಹುದು.

ಆಭರಣ-೧೦೬

ಮನುಷ್ಯನ ಸ್ಥಾನವು ಹೃದಯ, ಆತ್ಮ ಹಾಗೂ ಪ್ರಕಾಶಕ್ಕಿಂತಲೂ ಉನ್ನತವಾಗಿದೆ.

ಜನರು ಸಾಮಾನ್ಯವಾಗಿ ತಿಳಿದಿರುವುದೇನೆಂದರೆ ಜೀವವು ಮನುಷ್ಯನ ಸಾರಾಂಶವಾಗಿದೆ. ಆದರೆ ಈ ಫಕೀರನ (ಬಹರಿಯವರ) ವಿಚಾರದಲ್ಲಿ ಮನುಷ್ಯನು ಜೀವದ ಪ್ರಾಪ್ತನಾಗಿದ್ದಾನೆ. ಅದು ಹೇಗೆಂದರೆ ಒಬ್ಬ ವ್ಯಕ್ತಿ ಹೇಳುತ್ತಾನೆ, ನನ್ನ ಜೀವ ಇಂದು ತುಂಬಾ ಚಿಂತಾಕ್ರಾಂತದಾಗಿದೆ. ಅಥವಾ ನಾಳೆ ಹೀಗೆ ಹೇಳುತ್ತಾನೆ., ನನ್ನ ಜೀವ ಇಂದು ಸಂತೋಷದಲ್ಲಿದೆ. ಈ ಎರಡು ವಾಕ್ಯಗಳಿಂದ ಸ್ಪಷ್ಟವೇನೆಂದರೆ ಜೀವವೂ ಯಾರದೋ ಅಧೀನದಲ್ಲಿದೆ ಹಾಗೂ ಮನುಷ್ಯನು ಇವೆಲ್ಲಕ್ಕಿಂತ ಉನ್ನತವಾಗಿದ್ದಾನೆ. ಇದೇ ಕಾರಣದಿಂದಾಗಿ ಅವನು 'ನನ್ನ ಜೀವ' ಎಂದು ಹೇಳುತ್ತಾನೆ. ಇಲ್ಲವಾದರೆ ಅವನು ಜೀವದಿಂದಾಗಿ ಎಂದು ನುಡಿಯುತ್ತಿದ್ದನು.

ಹೇ ಆತ್ಮೀಯನೇ, ಒಂದು ವೇಳೆ ಹೃದಯ, ಆತ್ಮ ಹಾಗೂ ಪ್ರಕಾಶದ ಸ್ಥಾನಮಾನಗಳು ಮನುಷ್ಯನಿಗಿಂತಲೂ ಉನ್ನತವಾಗಿರುತ್ತಿದ್ದರೆ, ಅವು ಮನುಷ್ಯನ ಸಾಹಸ ಪ್ರವೃತ್ತಿಯ

ಬಂಧನದಲ್ಲಿ ಬರುತ್ತಿರಲಿಲ್ಲ. ಇದೇ ಕಾರಣದಿಂದಾಗಿ ಮನುಷ್ಯನನ್ನು 'ವಿಭುವಿನ ಸೂಕ್ಷ್ಮತೆ' ಅಥವಾ 'ಕಿರಿ ವಿಧಿ ಫಲಕ' ಎಂದು ಕರೆಯಲಾಗುತ್ತದೆ.

ಮನಜನಾಗಿಹನು ಸತ್ತೆ, ದೈವೀ ಸತ್ತೆಯ ಪ್ರಕಟರೂಪ,
ಮನುಜನಲ್ಲಿ ಸಮಾವೇಶವಾಗಿಇಹವು ಸಮಸ್ತ ಅರ್ಹತೆಗಳು.

ಸೃಷ್ಟಿ ಲೋಕವಿರಲಿ ಅಥವಾ ಇರಲಿ ವಿಷಯಲೋಕ,
ಇರಲಿ ಇಲ್ಲ ಉನ್ನತ ಅರ್ಹತೆಗಳು ಎಲ್ಲಿಯೂ.

ಮನುಜನು, ಮನುಜನನ್ನು ಗೌರವದಿಂದ ಕಾಣಲಿ
ಇಲ್ಲವಾದರೆ ಮೃಗಗಳಲ್ಲಿ ಎಲ್ಲಿಹುದು ಈ ಗುಣವು

ಯಾರು ಬರೆದರು ಇಂದು ಲೋಕದಲಿ ಇಂಥ ನುಡಿಗಳನ್ನು
'ಬಹರಿ' ನಿನ್ನ ನುಡಿಯು, ನಿಜದಲಿ ಆಗಿಹುದು ಅನುಪಮ.

ಆಭರಣ–೧೦೭

ಅನಂತ ಸನ್ನಿಧಾನದ ವಿಶೇಷತೆಗಳು

ಲೋಕ ಹಾಗೂ 'ಆದಂ'ರ ಈ (ಅರ್ಹತೆಯ) ರತ್ನಗಂಬಳಿಯನ್ನು ಸಾವಿರ ಸಲ ತಿರುವಿ, ಮತ್ತೆ ಹಾಸಿದಾಗ ಸಾಧಕನ ಅಸ್ತಿತ್ವದ ಅಸ್ತಿತ್ವವು ಗಸಗಸೆಯಷ್ಟೂ ಕ್ಷೀಣಿಸುವುದಿಲ್ಲ ಹಾಗೂ ಸಾಸಿವೆ ಕಾಳಿನಷ್ಟು ಹೆಚ್ಚುವುದಿಲ್ಲ. ಇದು ಇಂಥ ಮಹನೀಯರ ಸ್ಥಿತಿಯಾಗಿದೆ. ಯಾರಿಗೆ ನಿತ್ಯತೆಯ ಸನ್ನಿಧಾನ ಪ್ರಾಪ್ತಿಯಾಗಿದೆ ಹಾಗೂ ಉಪಸ್ಥಿತರಿರುವ ಜನರ ವಿಶೇಷತೆಯೆಂದರೆ ಇವರು ಹೃದಯದ ಕಿಂಡಿಯಿಂದ ಕಣ್ಣಿನ ಹೊಸ್ತಿಲಿನವರೆಗೆ ತಮ್ಮ ಹೃದಯ ಸತ್ಯತೆಯವನಿಗೆ ಅನಂತ ದೈವೀ ಪ್ರಭೆಯ ಜೊತೆ, ತಮ್ಮಲ್ಲಿ ಸರ್ವಾಂತರ್ಯಾಮಿಯಾಗಿ ಕಾಣುತ್ತಾರೆ. ಅದರ ಹೊರತಾಗಿಯೂ ಇಬ್ಬರನ್ನೂ ಸಾಕ್ಷರೂಪವಾಗಿ ಕಾಣುತ್ತಾರೆ. ಅರ್ಥಾತ್ ಸಾಕ್ಷ್ಯನ ಸಾಕ್ಷ್ಯದ ಪರಮೋಚ್ಚ ಸ್ಥಾನ ಇದುವೇ ಆಗಿದೆ. ಯಾವ ವಸ್ತು ಅಥವಾ ಗುಣವನ್ನು ಸಂಭಾಷಣೆಯಲ್ಲಿ ನಿರೂಪಿಸಬಹುದು ಹಾಗೂ ಕಲ್ಪನೆಯಲಿ ರೂಪಾಂತರಗೊಳಿಸಬಹುದಾಗಿದೆಯೋ ಅದಕ್ಕೆ ಅರ್ಹತೆ ಎನ್ನಲಾಗುತ್ತದೆ. ಇದಕ್ಕೆ ಹೊರತಾಗಿ ದೈವೀ ಸತ್ತೆಯು ಇದೆ ಆಗಿವೆ, ಇದೇ ರೂಪದ್ದಾಗಿದೆ.

ದೇವರಾಗಿಹನು ನನ್ನ ವಿವೇಚನೆಗೆ ಅತೀತನು,
ಅಪವಿತ್ರ ನುಡಿಗಳಿಂದ ದೋಷರಹಿತನಾಗಿದ್ದಾನೆ.

ಅವನ ಸತ್ತೆಯ ಗೂಢದ ಚರಮವನ್ನು ಅರಿಯುತ್ತಿದ್ದರೆ,
ನನ್ನ ಬಾಯಿಯಿಂದ ಒಂದೂ ಮಾತು ಹೊರಡುತ್ತಿರಲಿಲ್ಲ.

ಅವನು ದೈವೀಸತ್ತೆಯ ಸಾಕ್ಷ್ಯನು ಸ್ವಯಂ ದೈವೀಸತ್ತೆಯೂ ಆಗಿಹನು,
ಉಲಿದಿರುವ ಕೇವಲ ಈಗ ಅರ್ಹತೆಗಳ ಸೆರೆಯಾಳುಗಳು.

ಆ ಶಾಶ್ವತ ದೈವೀಸತ್ತೆಯ ಅಣೆಯಿಟ್ಟು ನುಡಿಯುವೆ ನಾನು,
ಕೇವಲ 'ಖವ್ವಾಲ್'[೧] ನಂತೆ ಅವನ ಸ್ತುತಿಯನು ಹಾಡುವೆನು ನಾನು.

ಯಾವ ಅಂಶಗಳು ನನ್ನಿಂದ ಸಮರ್ಪಿತವಾಗಿವೆ ಅವನಿಗೆ,
ಆ ಅಂಶಗಳ ಯಾವ ಅರಿವೂ ಇರುವುದಿಲ್ಲ ನನ್ನಲ್ಲಿ.

ಆದರೆ ಇತರು ಸವಿಯುವರು ಇದರ ಸ್ವಾದವನು,
ಅರ್ಥ ವಿಶೇಷತೆಯ ಗಡಿಯವರೆಗೆ ಧಾವಿಸುವರು ಅವರು.

ಹೇ 'ಬಹರಿ' ಸಾಹಿತ್ಯದ ಪರ್ಯಾಯವನು ಹುಡುಕು ನೀ,
ವಂಚನೆಯ ನಾಣ್ನುಡಿಯಿಂದ ಹೊರಗೆ ಬಾ 'ಬಹರಿ' ನೀ,

ತೆರೆಯೂ ಏಳಲಿಲ್ಲ ಬದಲಾಗಿ ಆಗು ತೆರೆಮರೆಯವನು
ತೆರೆಯ ಮರೆಯಲ್ಲಿ ಇರುವುವದನ್ನು ಪ್ರಕಟಪಡಿಸಬೇಡ.

ಆಭರಣ–೧೦೮

ಅಪ್ರತ್ಯಕ್ಷ ಏಕದೇವರಾಧನೆ ಹಾಗೂ ಪ್ರತ್ಯಕ್ಷ ಏಕದೇವರಾಧನೆ

ದೈವೀವಿರಾಗಿ (ಖಲಂದರ್)ಗಳ ಮುಖ್ಯಸ್ಥರಾದ ನನ್ನ ಪೀರ್–ಮುರ್ಷದ್ ಹಜ್ರತ್‌ರು ಅಂತರಂಗದ ಅಗ್ಗಿಷ್ಟಿಕೆಯ ಉರಿಯನ್ನು ವೃದ್ಧಿಸುವ ಕಾಲ್ಪನಿಕ ಮದಿರೆಯಿಂದ ಆನಂದ ತುಂದಿಲರಾಗಿದ್ದರು ಹಾಗೂ ಅವರ ಜತೆಯಲ್ಲಿ ಕುಳಿತಿರುವ ಮಹನೀಯರು ಸಹ ಪ್ರಮತ್ತ ಸ್ಥಿತಿಯಲ್ಲಿದ್ದರು. ಪ್ರತಿಯೊಬ್ಬನು ಅಸ್ತಿತ್ವದ ರಹಸ್ಯತೆಗಳ ಬಗ್ಗೆ ಗಹನವಾಗಿ ಚರ್ಚಿಸುತ್ತಿದ್ದರು. ಹಲವರು ಹೃದಯದಿಂದ ವಿವೇಕಿಗಳು, ಇನ್ನು ಹಲವರು ಆತ್ಮದ ಅಂತರ್ದೃಷ್ಟಿಯುಳ್ಳವರು. ಉಳಿದ ಹಲವರು ಇಂದ್ರಿಯಾಸಕ್ತಿಯುಳ್ಳವರು ಚರ್ಚೆಯಲ್ಲಿದ್ದರು. ನನ್ನ ಪೀರ–ಮುರ್ಷಿದ್‌ರು ಅರಿವಿನ ಮದಿರೆಯಿಂದ, ಹಾಗೂ ಸಾನ್ನಧ್ಯದ ಅಮಲಿನಿಂದಾಗಿ ಆನಂದದಲ್ಲಿ ಪ್ರಜ್ಞಾಹೀನರಾಗಿದ್ದ ಅವರು ಪ್ರಜ್ಞಾವಸ್ಥೆಗೆ ಮರಳಿ ಏರುದನಿಯಲ್ಲಿ ನುಡಿಯ ಹತ್ತಿದ್ದರು. ಹೇ, ತರ್ಕವಿತರ್ಕದ ಪ್ರಾಂಗಣದಲ್ಲಿ ಬಂದಿಯಾಗಿರುವವರೇ, ನಿಮ್ಮ ಅಪ್ರತ್ಯಕ್ಷ ಏಕದೇವರಾಧನೆ 'ಏಕತ್ವ'ದ ವಾದ ದೈವೀ

ಸನ್ನಿಧಾನದಲ್ಲಿ ಮೆಚ್ಚುಗೆಯಾಗುವುದಿಲ್ಲ. ಈವರೆಗೆ ಈ ಸಭೆಯ ಶೋಭಾಯಮಾನವಾಗಿದ್ದ ಈ ಮೂರು ರತ್ನಗಳ ಪ್ರಸ್ತಾಪವು ವಿಶೇಷಗಳಲ್ಲಿ, ವಿಶೇಷ ಅಸ್ತಿತ್ವವು ಅರಿವಾಗತೊಡಗಿತು.

ಬಗಲಿನಲ್ಲಿ ಇಟ್ಟುಕೊಂಡು ಹಾಗೂ ಮುಂದೆ ಕುಳಿತುಕೊಂಡು ಕುಡಿಯುತ್ತಾನೆ ಹಾಗೂ ಆವೇಶಭರಿತನಾಗುತ್ತಾನೆ. ಜತೆಯಲ್ಲಿ ಪರಿಪೂರ್ಣ ವೈಭವಪೂರ್ಣನ ಪ್ರಶಂಸೆಯಲ್ಲಿ ತನ್ಮಯನಾಗಿದ್ದಾನೆ. ಯಾರಿವನು? ಜಿನ್ (ಸೈತಾನನ ಸಹಚರ) ಅಥವಾ ಸೈತಾನನೋ ಭೂತವೋ ಅಥವಾ ಚತುಷ್ಪಾದಿಯೋ?

ಸಮಸ್ತ ಜನರು ಆಕರ್ಷಿತರು ಅರ್ಹತೆಗಳಿಂದ,
ಆ ಎಲ್ಲಾ ಸಮಸ್ತ ಅಸ್ತಿತ್ವಗಳ ಮಿಶ್ರಣವು ನನಗೆ ಅಚ್ಚುಮೆಚ್ಚು.

ನಿನ್ನೆ ಹೊಗೆಯಾಗಿದ್ದೆ ಇಂದು ಬೆಂಕಿಯಾಗಿಹೆನು ನಾನು,
ಅರ್ಥಾತ್ ಹೊಗೆಯು ಬೆಂಕಿಯಲ್ಲಿ ಆಗಿತ್ತು ಬಂದಿ.

'ಬಹರಿ' ಕೇಳಬೇಕು ಕಹಿ ನುಡಿಯನೂ ಸಹ ನೀನು,
ಮತ್ಸರಿಗಳಿಂದಲೂ ನೀನಿರು ಹರ್ಷಾನಂದಮಯ.

ಈ ರಹಸ್ಯದ ದಾರವು ಅತಿ ಸೂಕ್ಷ್ಮ ಹಾಗೂ ದುರ್ಬಲವಾಗಿತ್ತು. ಅದನ್ನು ತುಂಡಾಗಿಸಿ, ಗಹನವಾದ ಮುತ್ತುಗಳನ್ನು ಅವುಗಳಲ್ಲಿ ಪೋಣಿಸಲು ಪ್ರಾರಂಭಿಸಲಾಯಿತು. (ಅರ್ಥಾತ್ ಸಾಮಾನ್ಯ ರಹಸ್ಯದ ಚರ್ಚೆ ನಡೆದಿತ್ತು. ಅದನ್ನು ಬಿಟ್ಟು ಮಹತ್ತರವಾದ ಸಮಸ್ಯೆಗಳ ಕುರಿತು ಉಲ್ಲೇಖಗಳು ಪ್ರಾರಂಭವಾಗಹತ್ತಿದವು) ಈ ಅಲ್ಪಮೌಲ್ಯದ ಗುಲಾಮನು ಮುರ್ಷದರ ಸೇವೆಗಾಗಿ ಸಭೆಯಲ್ಲಿ ಹಾಜರಿದ್ದನು ಹಾಗೂ ಮೌನವಾಗಿ ಕುಳಿತಿದ್ದನು. ನಾನುಡಿದೆ ಹೇ ದಸ್ತಗೀರ್ (ಸಹಾಯಕನೆ) ಅಪ್ರತ್ಯಕ್ಷ ಏಕದೇವವಾದ ಬದಲಾಗಿ, ಇದು ಪ್ರತ್ಯಕ್ಷ ದೇವವಾದವಾಗಿದೆ.

ಪ್ರತ್ಯಕ್ಷ ಏಕದೇವವಾದವೆಲ್ಲಿ? ಹಾಗೂ ನಾನೆಲ್ಲಿ?
ಒಂದು ಅಲ್ಪ ಗಿಳಿಯೆಲ್ಲಿ? ಹಾಗೂ ಹೂದೋಟವೆಲ್ಲಿ?

ಮಡಿಕೆಯಾಗಿದೆ ವಿಶಾಲ, ಇದರ ಸಾರವೇ ಆಗಿಹುದು ಮದಿರೆ
ಒಬ್ಬನಿಗೆ ಇಹುದು ಮದಿರೆ ಬರಿದಾಗುತ್ತಿರುವ ಮಡಿಕೆಯ ಚಿಂತೆ

ಈ ಶರೀರವು ಸಾರವಾಗಿಹುದು ಸಮಸ್ತ ಸೃಷ್ಟಿ ಹಾಗೂ ವ್ಯವಹಾರವೂ,
ನಿನ್ನ ಕೈಗಳು ಇದರಿಂದ ಶ್ರೀಮಂತ ಆಗುವುದು ಶ್ರೇಯಕರ.

ಬರೀ ಜೀವವೇನು? ಈ ದೇಹವು ಅರ್ಹತೆಗಳ ಸಂಗ್ರಹವು,
ಆದರೆ ನೀ ದೇಹದ ಮೇಲೆ ಮೋಹಿತನಾಗಿ ಜೀವವನ್ನು ಕಳೆದುಕೊಳ್ಳುತ್ತಿದ್ದಿ.

ಇದು ಮೇಲ್ನೋಟದ ರಹಸ್ಯವಲ್ಲ, ವಾಸ್ತವದಲ್ಲಿ ಜೀವವೇ ಆಗಿದೆ,
ಈ ಅಂಶವು ಮರ್ಮಜ್ಞಾನಿಗಳಿಗೂ ಆಗಿಹುದು ನಿಂದಿತವು.

ಮಣ್ಣು ಅಲ್ಲ, ನೀರೂ ಅಲ್ಲ ಶರೀರವೂ ಅನ್ಯರ ಇಡುಗಂಟಾಗಿವೆ,
'ಬಹರಿ' ಎಲ್ಲರ ಯೋಗದಲಿ ಇಲ್ಲ ಈ ಜ್ಞಾನವು.

ಆಭರಣ-೧೧೯

ಮರ್ಮಜ್ಞಾನಿ (ಆರಿಫ್)ಗೆ ಆದಿಯೂ ಅನಂತವೂ ಒಂದೇ ಆಗಿದೆ

ಇಸ್ಲಾಮಿ ಕರ್ಮಶಾಸ್ತ್ರದಿಂದ ವಿಶ್ವಸ್ಥವಾಗಿದೆಯೇನೆಂದರೆ, ಒಡಂಬಡಿಕೆಯ ದಿನದಂದು ಮನುಷ್ಯನು ಅಸ್ತಿತ್ವದಲ್ಲಿದ್ದು, ಪ್ರಶ್ನೋತ್ತರಕ್ಕೆ ಅರ್ಹನಾಗಿದ್ದನು. ಹಾಗೂ ಫಕೀರರು ಪರಂಸತ್ಯದ ಜ್ಞಾನದಿಂದ ಅರಿವುಳ್ಳವರಾಗಿದ್ದರಲ್ಲದೆ, ಈ ಹಂತದಿಂದ ಒಂದೆರಡು ಹೆಜ್ಜೆ ಉನ್ನತವಾಗಿಯೇ ಇದ್ದರು, ಅರ್ಥಾತ್ ಅವರೊಂದು ವಿಶೇಷ ಸ್ಥಾನದಲ್ಲಿದ್ದರು. ಆದರೆ ದೇವರ ಕೃಪೆಯಿಂದ ಮತ್ತೆ ಅದೇ ಸ್ಥಾನಕ್ಕೆ ತಲುಪುತ್ತಾನೆ. ಇದೇನು ಆಶ್ಚರ್ಯದ ಸಂಗತಿಯಲ್ಲ ಅದೇನೆಂದರೆ, ಎಂದೂ ಮನುಷ್ಯನ ಹೊರತು ಬೇರಾವುದೇ ಜೀವಿಗೆ ದೈವೀಜ್ಞಾನದ ಮೂಲಕ ತನ್ನ ಮೂಲದ ಕಡೆ ಮುನ್ನಡೆಯುವ ಅವಕಾಶ ದೊರೆಯುವುದಿಲ್ಲ, ಆದರೆ ಇವನು ತನ್ನ ನಿರ್ಧಾರಿತ ವಾಸಸ್ಥಳದ ಹೊರತು ಆ ಕಡೆ ಇನ್ನು ಅಧಿಕ ಓಡುವುದಿಲ್ಲ. ಎಷ್ಟೇ ಪ್ರಮಾಣದ ಜ್ಞಾನ ಹಾಗೂ ಕೌಶಲ್ಯವು ಇಂದು ಅವನಿಗೆ ಪಾತ್ರವಾಗಿದೆ, ಅದು ದೈವೀ ಪ್ರಕಾಶ ಲೋಕದಲ್ಲೂ ಅವನಿಗೆ ಪ್ರಾಪ್ತಿಯಾಗಿತ್ತು. ಇದು ಎಂಥ ನಿದರ್ಶನವೆಂದರೆ, ಈ ಲೋಕದಲ್ಲಿ ಎಲ್ಲಿಯೂ ಇರದಿದ್ದರೆ, ಆಗ ಅಲ್ಲಿಯೂ ಇರಲಿಲ್ಲ. ಹಾಗಾದರೆ ಅದು ಇಲ್ಲಿ ಹೇಗೆ ಪ್ರಕಟವಾಯಿತು. ಹಜ್ರತ್ ಮೂಸಾ[೧]ರವರ ಕಾಲದಲ್ಲಿ ಧರ್ಮಪಂಡಿತರು 'ಉಮ್ಮತಿ ಕಾ ನಬಿಯಾ ಬನಿ ಇಸ್ರಾಯೀಲ್'ನ ಪರೀಕ್ಷೆಗಾಗಿ ಇಮಾಂ ಮಹ್ಮದ ಗಜ್ಜಾಲಿಯವರ ಆತ್ಮವನ್ನು ಹಾಜರುಪಡಿಸಿದರು. ಹಜ್ರತ್ ಮೂಸಾ ಹಾಗೂ ಇಮಾಂ ಗಜ್ಜಾಲಿಯ ಮಧ್ಯೆ ಏನೋ ಚರ್ಚೆಯಿಂದ ಮತ್ತು ಅಂತಿಮವಾಗಿ ಸುತರಾಂ ಒಪ್ಪಲು ಸಿದ್ದರಿರದ ಹಜ್ರತ್ ಮೂಸಾರವರು, ಇಮಾಂರ ಪರಮೋಚ್ಚ ವಿವೇಚನೆ ಹಾಗೂ ಪವಿತ್ರ ಸಂತತ್ವವನ್ನು ಒಪ್ಪಿಕೊಂಡರು ಹಾಗೂ ಅವರ ಶ್ಲಾಘನೆ ಮಾಡಿದರು. ಇದರಿಂದ ವೇದ್ಯವಾಗುವುದೇನೆಂದರೆ ಇದು ಸ್ವಯಂ 'ಆದಿ'ಯ ಮಾತಾಗಿತ್ತು. ಹೀಗಾಗಿ ಪ್ರವಾದಿಗಳ

---

೧. ಹಜ್ರತ್ ಮೂಸಾ ಅಥವಾ ಮೊಸಸ್ ಇಸ್ರಾಯಿಲ್‌ನಲ್ಲಿ ಹುಟ್ಟಿದ ಯಹೂದಿ ಪ್ರವಾದಿಗಳು

ಹದೀಸ್‌ನ 'ಇಹಲೋಕ-ಪರಲೋಕ' ಎಂಬ ಅಧ್ಯಾಯದಲ್ಲಿ ಈ ಮಾತನ್ನು ಘಂಟಾಘೋಷವಾಗಿ ಹೇಳಲಾಗಿದೆ. ಅದೇನೆಂದರೆ ಪ್ರತಿಯೊಬ್ಬ ಮನುಷ್ಯನು ಯಾವ ಸ್ಥಿತಿಯಲ್ಲಿ ಬಾಳುತ್ತಾನೆ, ಅದೇ ಸ್ಥಿತಿಯಲ್ಲಿ ಸಾಯುತ್ತಾನೆ ಹಾಗೂ ಸ್ಥಿತಿಯಲ್ಲಿ ಮೇಲೇಳುತ್ತಾನೆ. ಹೀಗಾಗಿ ಈ ಅಂತಿಮ ಆಜ್ಞೆಯಿಂದಾಗಿ ಅರಿವಾಗುವದೇನೆಂದರೆ ಪ್ರಸಕ್ತ ಸ್ಥಿತಿಯು ಪ್ರಳಯದ ದಿನ (ಖಯಾಮತ್)ದೊಂದಿಗೆ ಶಾಶ್ವತವಾಗಿ ಸಂಲಗ್ನಗೊಂಡಿದೆ.

'ಮಾಚು ಶಬ್ ಹೇಸ್ತಂ ಮಾ ಬೈನ್ ದೋ ರೋಜ್ ಆಂ ಎಕೆ ಮೀಶಾಖ್ ವೋ ದೀಗರ್ ಮಹಷರಾತ್'

ಭಾಷಾಂತರ: ನಮ್ಮಿಬ್ಬರ ಮಧ್ಯದ ಒಂದು ನಿದರ್ಶನವಾಗಿದೆ. ಅದೇನೆಂದರೆ ಒಂದು ದಿನ ಒಡಂಬಡಿಕೆಯದಾಗಿದೆ ಹಾಗೂ ಇನ್ನೊಂದು ಅಂತಿಮ ನಿರ್ಣಯದ್ದು. ಇದೇ ಲೋಕವು ಆರಂಭದಲ್ಲಿ ಇದ್ದ ಲೋಕವಾಗಿದೆ ಹಾಗೂ ಇದನ್ನೆ ಈ ನಶ್ವರ ಲೋಕದಲ್ಲಿ ಅವರತಣಗೊಳಿಸಲಾಯಿತು ಹಾಗೂ ಇದೇ ನಿರ್ಣಯದ ವಿಶಾಲ ಬಯಲಿನಲ್ಲಿ ಬಹಿರಂಗವಾಗುವುದು. ಆಗ ಭಾಸವಾಗುವುದೇನೆಂದರೆ ಆದಿಯಿಂದ ಅನಂತ (ಅಂತ್ಯ)ದವರೆಗೆ ಕೇವಲ ಒಂದೇ ಹೆಜ್ಜೆಯ ಕಾಲವಿತ್ತು. ಅಥವಾ ಇದಕ್ಕಿಂತಲೂ ಕಡಿಮೆಯಿತ್ತು. ಇಲ್ಲವಾದರೆ ಎರಡೂ ಸೇರಿ ಒಂದು ಆಗಿರಬಹುದು.

ದೇವಮಿತ್ರನು, ಸತ್ಯ ಸಂಧನು ಪರಿಪೂರ್ಣನು ಆಗಿಹನು ಮನುಜನು,
ನಿಸ್ಸಂದೇಹವಾಗಿ ನೀ ದೈವೀ ತೋಟದಲಿ ಆನಂದತುಂದಿಲನು.

ಅರಿಯುವೆ ನೀನು ನಿನ್ನ ಮಿತಿರೇಖೆಯನ್ನು ಹಾಗೂ ಪರಂಸತ್ಯವನು,
ಯಾರ ಭಯವೂ ಇವನಿಗಿಲ್ಲ, ಯಾರ ವೈಮನಸ್ಸು ಇವನಿಗಿಲ್ಲ.

ಆದಿಯನ್ನು ನೀ ಅನಂತದವರೆಗೆ ಮುಷ್ಟಿಯಲಿ ಹಿಡಿಯುವೆ,
ಒಂದೇ ಬೆರಳಿನಲ್ಲಿ ಎರಡು ಅಂತ್ಯಗಳಿರುವಂತೆ.

ಆದಿಯು ಪಡೆಯಿತು ಒಂದು ವಿಶಿಷ್ಟ ವಿಶಿಷ್ಟಚರ್ಯೆಯನು,
ಅಂತ್ಯ ಆಗಿಹುದು ಒಂದು ಮಲಿನರಹಿತ ದೇಹದಂತೆ.

ಅವನಿಗುಂಟು ಇನ್ನೂ ಆ ಒಡಂಬಡಿಕೆಯ ದಿನ,
ಅದರ ಪರಿಪೂರ್ಣತೆಯ ದಿನದ ರಾತ್ರಿಯಾಗಿಹನು ಹಂಬಲಿತನು.

ಅಷ್ಟಿಷ್ಟು ದಿನದಷ್ಟು ದೂರವಿಲ್ಲ, ಇಹುದು ಕೇವಲ ಒಂದೇ ದಿನ,
ಯಾವ ಹೃದಯವಂತನು ದೂರವಿಲ್ಲ, ಆ ದಿನದ ವಿಯೋಗದಿಂದ.

ಸನಿಹವಾಗಿದೆ ನಿರ್ಣಯದ ದಿನವು ಈ ರೀತಿ ಗೆಳೆಯ,
ಬಾ 'ಬಹರಿ' ಈಗ, ಮಾಡಬೇಡ ವೃಥಾ ತರ್ಕ ವಾಗ್ವಾದ.

ಆಭರಣ–೧೧೦

ಔಲಿಯಾ (ದೈವ ಸ್ನೇಹಿತರು) ಸಾಯುವುದಿಲ್ಲ ಇದರ ವಿವರಣೆ.

ಔಲಿಯಾ (ದೇವ ಸ್ನೇಹಿತರ)ರ ಗೌರವದಲ್ಲಿ 'ಲಾಯಾಮೂತೂನ್'[೧] ಅವತರಣವಾಯಿತು. ಆದರೆ ಔಲಿಯಾಗಳ ಸಾಮ್ರಾಜ್ಯದಿಂದ ಹೊರಗಟ್ಟಿರುವ ಜನರು ಇದನ್ನು ಸ್ವೀಕರಿಸುವುದಿಲ್ಲ. ಬಹಿರಂಗ ರೂಪದಲಿ ಇದರ ಬಗ್ಗೆ ಟೀಕಿಸುವ ಧೈರ್ಯ ಮಾಡಲಾರರು. ಯಾಕೆಂದರೆ ಇದು ಕುರಾನಿನ ಅಂಶವಾಗಿದೆ. ಆದರೆ ಆಂತರ್ಯದಲ್ಲಿ ತಿಳಿಯುವುದೇನೆಂದರೆ ಪ್ರಬುದ್ಧತೆಯ ನೋಟದಲಿ ಯಾವುದು ಒಳ್ಳೆಯದು? ಯಾವುದು ಕೆಟ್ಟದ್ದು? ಯಾಕೆಂದರೆ ಎಲ್ಲರೂ ಸತ್ತಾಗ ಮಾಯವಾಗುತ್ತಾರೆ ಹಾಗೂ ಮಣ್ಣಿನಲ್ಲಿ ಹುದುಗಿಸಲಾಗುತ್ತದೆ. ಹೀಗಾಗಿ ಈ 'ಲಾ ಯಮೂತೂನ್' ಯಾರಿಗಾಗಿ ನುಡಿಯಲಾಯಿತು.

ಹೇ ಆತ್ಮೀಯನೇ, ಯಾವ ಜನರು ಪರಿಪೂರ್ಣ ಬ್ರಹ್ಮಜ್ಞಾನಿಯ (ಆರೀಫ್) ದೈವೀಜ್ಞಾನದ ಅರಿವುಳ್ಳವರಾಗುತ್ತಾರೆ, ಅವರು ಬಾಹ್ಯ ಅಸ್ತಿತ್ವದಿಂದ ತಮ್ಮ ನೋಟವನ್ನು ಬೇರೆಡೆಗೆ ತಿರುಗಿಸುತ್ತಾರೆ. ಆಂತರ್ಯದ ಅಸ್ತಿತ್ವವು ಮಲಕೂತಿಯಾಗಿದ್ದು, ಅದು ಆತ್ಮದ ಮೇಲೆ ಸವಾರಿ ಮಾಡುತ್ತದೆ. ಇದಕ್ಕೆ ನಿದ್ರೆಯ ಪ್ರಭಾವವೂ ಆಗುವುದಿಲ್ಲ. ಸಾವಿನ ಪ್ರಭಾವವೂ ಆಗುವುದಿಲ್ಲ. ಅಂತಹದರ ಮೇಲೆ ತಮ್ಮ ಗಮನವನ್ನು ಕೇಂದ್ರಿಕರಿಸುತ್ತಾರೆ. ಹೀಗಾಗಿ ಪ್ರತಿಯೊಂದು ವಿಷಯದಲ್ಲಿ ಅದು ಲೌಕಿಕಕ್ಕೆ ಸಂಬಂಧಿತವಾಗಿರಲಿ ಅಥವಾ ಪರಲೋಕಕ್ಕೆ ಸಂಬಂಧಿತವಾಗಿರಲಿ, ಅದನ್ನು ಇದೇ ಅನಂತ ಅಸ್ತಿತ್ವದ ಸಹಕಾರದಿಂದ ಪರಿಪೂರ್ಣಗೊಳಿಸಲಾಗುತ್ತದೆ. ಸಂಕ್ಷಿಪ್ತವೇನೆಂದರೆ, ಹೊರಗಿನವರಿಗೆ ಒಳಗೆ ತೆಗೆದುಕೊಂಡು ಹೋಗಲಾಗುತ್ತದೆ ಹಾಗೂ ಒಳಗಿನವರಿಗೆ ಹೊರಗೆ ತರಲಾಗುತ್ತದೆ. ಈ ಹಂತದಲ್ಲಿ ನಾಸೂತ್ (ನರಲೋಕ) ಲೋಕವು ಮಲಕೂತ್ (ದೇವಲೋಕ) ಆಗಿ ಪರಿವರ್ತಿತವಾಗುತ್ತದೆ. ಅತ್ಯಂತ ವಿಶ್ವಸ್ಥ ಅಂಶವೇನೆಂದರೆ ಯಾವರೆಗೆ ಬ್ರಹ್ಮ ಜ್ಞಾನಿಯ (ಆರೀಫ್‌ನ) ಅಂತರಂಗವೂ ಬಹಿರಂಗವೂ ಏಕ ಸಾದೃಶ್ಯವಾಗುವುದಿಲ್ಲ ಹಾಗೂ 'ಔಲಿಯಾ'ಗಳ (ದೇವ ಸ್ನೇಹಿತರ) ಸಮೂಹದಲಿ

---

೧. ಈ ತರಹದ ಚರಣ ಕುರಾನಿನಲ್ಲಿ ಇಲ್ಲ. ಬೇರ್‍ಯಾವ ದೈವೀಗ್ರಂಥ ಬಹರಿಯವರು ಇದನ್ನು ಉಲ್ಲೇಖಿಸಿದರೋ ಗೊತ್ತಿಲ್ಲ.

ಷಾಮೀಲಾಗುವುದಿಲ್ಲ. ಆದರೆ ಹಲವು ಜನರು ಇವರನ್ನು ತಮ್ಮಂತೆ ಲೌಕಿಕ ದೇಹದಲ್ಲಿ ತಿರಸ್ಕಾರ ದೃಷ್ಟಿಯಿಂದ ನೋಡುವವರಾಗಿದ್ದೂ, ಆ ದೇಹದ ಅವಲಂಬಿತರಾಗಿದ್ದರು.

ಯಾವನು ಸತ್ತೆಯನ್ನು ಸ್ನೇಹಿತನಾಗಿಸಿ, ತನ್ನನ್ನ ನಶ್ವರಗೊಳಿಸಿಹನು
ಅವನು ತನ್ನ ಉಳಿದ ಆಯುಷ್ಯದಲ್ಲಿ ಯಶವನ್ನು ಪಡೆದಿರುವನು.

ಆಂತರ್ಯದ ಅಭಿಲಾಷೆಯಲಿ, ಬಾಹ್ಯ ಗ್ರಾಮವನು ದೂರಾಗಿಸಿದವನು
ಅವನು ಅನಂತವನ್ನು ತನ್ನ ಸ್ಥಾಯಿ ನಗರವನ್ನಾಗಿಸಿದನು.

ಆಧ್ಯಾತ್ಮದ ದೇಹದಲ್ಲಿದ್ದು ಜೀವದ ಪೋಷಾಕು ಆಗಿರುವವನು,
ಏನೂ ಸಾಕ್ಷ್ಯ, ಏನೂ ಗೂಢ, ಎಲ್ಲಾ ದಿಶೆಯಲಿ ಸೌಖ್ಯವಿಹುದು.

ಈ ದೇಹ, ಈ ಹೃದಯ, ಈ ಜೀವ, ಜೀವಾತ್ಮ ಮಾತೃತ್ವ,
'ಬಹರಿ'ಯ ಈ ಸಮಸ್ತವು ಸ್ನೇಹಿತನಿಗೆ ನಿವಾಳಿಕೆ.

ಯಾವಾಗ ಈ ನಶ್ವರ ದೇಹದ ಚರ್ಮ ಸುಲಿಯಲಾಗುವುದೋ ಆಗ ಇದೆಂದೂ ಅರ್ಥವಾಗದು, ನಾವು ಒಂದು ಸ್ಥಾನದಿಂದ ಮತ್ತೊಂದು ಸ್ಥಾನಕ್ಕೆ ಸ್ಥಳಾಂತರಗೊಂಡಿದ್ದೇವೆ. ಬದಲಾಗಿ ನಿಮಗೆ ಅರಿವಾಗುವುದೇನೆಂದರೆ ನಾವೆಲ್ಲಿದ್ದೆವೆಯೋ ಅಲ್ಲೇ ಇದ್ದೇವೆ. ಇಲ್ಲಿ ಅತೀ ಸೂಕ್ಷ್ಮ ಅಂಶವೇನೆಂದರೆ ಇವರ ಭಾಗ್ಯದಲ್ಲಿ ಈ ಪ್ರತ್ಯಕ್ಷ ಜೀವನದಲ್ಲಿಯೇ ಈ ನಾಸೂತ್ (ನರಲೋಕ), ಮಲಕೂತ್ (ದೇವಲೋಕ) ಆಗಿ ಬಿಡುತ್ತದೆ. ಆದರೆ ವಾಸ್ತವಿಕವಾಗಿ ಪ್ರತಿ ಎರಡು ಲೋಕಗಳು ಚಹರೆ ಹಾಗೂ ಶುದ್ಧಚರ್ಯೆಯಲ್ಲಿ ಒಂದೇ ರೀತಿಯಾಗಿವೆ. ಹಾಗಾದರೆ ಮತ್ತೇಕೆ ಹೋಗಿಬರುವ ವ್ಯವಧಾನ ಇರಬೇಕು. ಹೀಗಾಗಿ ಇನ್ನೂ ಕೆಲವು ದಿನ ಇದೇ ಸ್ಥಿತಿಯಲ್ಲಿ ವ್ಯತಿತವಾದರೆ, ಪರಮ ದೈವನ ಕೃಪೆ ಹಾಗೂ ಅನುಗ್ರಹದಿಂದ ಹಾಗೂ ಸಂಪೂರ್ಣ ದೈವೀಜ್ಞಾನದಿಂದ ಅವರ ಪವಿತ್ರ ಹೃದಯಗಳಲಿ ಅಪಾಯವುಂಟಾಗಿ, ಅವರು ದೈವಾತ್ಮ ಸಂಭೂತರಾಗಿ, ಶಾಶ್ವತರಾಗುತ್ತಾರೆ ಹಾಗೂ ಹೋಗಿ ಬರುವ ವ್ಯವಧಾನದಿಂದ ಸ್ವತಂತ್ರರಾಗಿದ್ದಾರೆ. ಹೀಗಾಗಿ ಈ ಕೋಲಾಹಲಮಯ ಪ್ರಕಟರೂಪವನ್ನು ನೂರು ಸಲ ಪಲ್ಲಟಗೊಳಿಸಿ ಇಟ್ಟರು, ಇಂದು ನಾನು ಯಾವ ಅಸ್ತಿತ್ವದಲ್ಲಿದ್ದೇನೆ ಅದೇ ಅಸ್ತಿತ್ವದಲ್ಲಿರುವೆನು. ಇದೆ 'ಲಾ ಯಮೂತೂನ್' ನ ಸಾರಾಂಶವಾಗಿದೆ.

ಅಮೂಲ್ಯ 'ಯಮೂತ್'ನ ಗೌರವವಸ್ತ್ರವು,
ಆರಿಫ್ ನ ಎತ್ತರಕ್ಕೆ ಸರಿಹೊಂದುತ್ತದೆ.

ಇದು ಶರೀರದ ಪ್ರತಿ ಮಲೀನತೆಯ ಶರೀರದ ಜೊತೆ,
ಇಂತಹುದು 'ಮೃತ' ಹೃದಯಕೆ ಶೋಭಾಯಮಾನವಲ್ಲ.

ಆಭರಣ–೧೧೧

'ಮನ್ ಆಂ ವಖ್ತ್ ಬೂದಂ ಕೆ ಆಲಂ ಬನೂದ್'

ನಾನು ಕಾಲವಾಗಿದ್ದೆ, ಯಾವಾಗ ಲೋಕವೂ ಇರಲಿಲ್ಲ.
ಆಗ ಹವ್ವಾ[1]ವು ಇರಲಿಲ್ಲ ಮತ್ತು 'ಆದಂ'[1]ನೂ ಇರಲಿಲ್ಲ.

ನಾನು ಆ ಸಮಯದಲ್ಲಿ ಅಲ್ಲಾಹನಿಗೆ ಶಿರಸಾಷ್ಟಾಂಗ ಮಾಡಿದೆ. ಯಾವಾಗ ದೇವರು, ದೈವೀಸತ್ತೆ ಹಾಗೂ ಅರ್ಹತೆಗಳು ಇರಲಿಲ್ಲ.

ಈ ಕ್ಲಿಷ್ಟಕರ ಹಾಗೂ ಗಹನವಾದ ಲೇಖನವನ್ನು ಪದ್ಯ ರೂಪವಾಗಿ ಹೇಳುವ ಕವಿ ಮಹಾಶಯರು ಹೇಳುತ್ತಾರೆ. ಯಾವಾಗ ಲೋಕ ಹಾಗೂ 'ಆದಂ'ರು ಇರದಿದ್ದಾಗ ನಾನಿದ್ದೆ. ಬಹುಶಃ ಇದೇ ಆ ಸ್ಥಾನವಾಗಿದೆ, ಇಲ್ಲಿ ಪರಿಪೂರ್ಣ ಮನುಷ್ಯನು ವಿಷಯ ಲೋಕವಲ್ಲ ಬದಲಾಗಿ ಪರಮಾಧಿಕಾರ ಲೋಕದವನಾಗಿದ್ದಾನೆ. ಅರ್ಥಾತ್ ಅವನು ಸ್ವಯಂ ವಿಷಯ ಸಂಬಂಧಿತನಾಗಿದ್ದಾನೆ. ಅದರೆ ಅವನ ಪ್ರಕಟ ಚಹರೆಯು ಆಂತರ್ಯದ ಪ್ರತಿರೂಪವಾಗಿದೆ. ಹೀಗಿರುವಾಗ ಮತ್ತೆ ಅವನು ಬ್ರಹ್ಮಾಂಡ ಹಾಗು 'ಆದಂ'ರ ಮುಂಚೆ ಏಕಿರಬಾರದು. ಅಲ್ಲಾಹನ ಕೃಪೆಯಿಂದ ಅಳಿವು ಉಳಿವಿನ ಭಾಗ್ಯ ಪಡೆದಿರುವಂತಹ ನನ್ನ ಪೀರ್–ಮುರ್ಷದ್ ಹಜ್ರತ್ ಶೇಖ್ ಮಹ್ಮದ್ ಬಾಖರ್ ಖಾದರಿ (ಅವರ ಗೋರಿಯ ಬೆಳಕಿನಿಂದ ಪ್ರಕಾಶಿತವಾಗಲಿ) ಅವರು, ಪರಿಪೂರ್ಣ ಮನುಷ್ಯನ ಅರ್ಹತೆಗಳ ಸಂಬಂಧ ಈ ರೀತಿಯ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು ಲೋಕದ ಆಮಿಷಗಳ ಎಚ್ಚರಿಕೆಯ ಹೊರತಾಗಿಯೂ, ಪರಿಪೂರ್ಣ ಮನುಷ್ಯನು ಮುಡಿಯಿಂದ ಅಡಿಯವರೆಗೆ ಪವಿತ್ರ ಪಾವನನಾಗಿದ್ದಾನೆ. ಒಂದು ವೇಳೆ ಯಾವನೊಬ್ಬ ಪ್ರೇಮಿ ಅಥವಾ ಹುಚ್ಚನು ಪವಿತ್ರಾತ್ಮವನ್ನು ನೋಡುವ ನಿರ್ಧಾರ ಮಾಡಿದ್ದರೆ, ಅವನು ಹಿಂದು–ಮುಂದು ಆ ಪರಿಪೂರ್ಣ ಮನುಷ್ಯನ ದರ್ಶನಕ್ಕೆ ಅಣಿಯಾಗಬೇಕು ಹಾಗೂ ಅವನ ಉಪಾಸನೆಯನ್ನು ಪ್ರಾರಂಭಿಸಬೇಕು. ಅಲ್ಲಾಹನು ಇಚ್ಛಿಸಿದರೆ ಅವನ ಈ ಹಸಿವು ದೈವೀ ಸಂಚಾರದಲ್ಲಿ ಪರಿವರ್ತಿತವಾಗಬಹುದು. ಹಾಗೂ ಸಮಸ್ತ ಸಂಕಷ್ಟಗಳು ಪರಿಹಾರ ಆಗಬಹುದು. ಮ್ವಾರಿಫತ್‌ನ ತಿರುಳು ಇದೇ ಆಗಿದೆ. ಯಾವನು ಇದರ ಸ್ವಾದವನ್ನು ಕಂಡಿಹನು, ಅವನೇ ಅದರ ರುಚಿಯನ್ನು ಅರಿಯುವನು.

---

೧. 'ಆದಂ' ಆದಿಮಾನವ. ಹವ್ವಾ ಅವರ ಪತ್ನಿ, ಅವರ ಪಕ್ಕೆಲಬಿನಿಂದ ಜನ್ಮ ತಾಳಿದ್ದಾಳೆ.

ನಾನು ಆ ಸಮಯದಲ್ಲಿ ಅಲ್ಲಾಹನಿಗೆ ಶಿರಸಾಷ್ಟಾಂಗ ಮಾಡಿದೆ
ಯಾವಾಗ ದೇವರು, ದೈವೀಸತ್ತೆ ಹಾಗೂ ದೈವೀ ಅರ್ಹತೆಗಳು ಇರಲಿಲ್ಲ.

ಅಲ್ಲಾಹನ ನಾಮದ ಗೌರವದಲ್ಲಿ ನುಡಿಯಲಾದ 'ಕುಂತಾ ಕುಂಝ ಮುಖ್‌ಫಿಯಾ'ದ ವಚನಗಳ ತಾದಾತ್ಮದಂತೆ ಯಾವಾಗ 'ದೈವೀ ಅನುರಾಗದ ಕೋಶ'ವಿತ್ತು ಅರ್ಥಾತ್ ತನ್ನ ಅಸ್ತಿತ್ವದ ಪ್ರಮತ್ತತೆಯ ಹೊರತಾಗಿಯೂ, ಸ್ವಯಂನ ಅರಿವಿರಲಿಲ್ಲ. ಅದ್ಹೇಗೆಂದರೆ ಯಾವನೋ ದೀರ್ಘ ಧ್ಯಾನಾಸಕ್ತನಾಗಿದ್ದಾನೆ ಅಥವಾ ನಿದ್ದೆಯಲ್ಲಿದ್ದಾನೆ. ಈ ಸಮಯದಲ್ಲಿ ಹಠಾತ್ತಾಗಿ ಮಹ್ಮದರ ಪ್ರಕಾಶದ ಗುಪ್ತ ಭಂಡಾರದಿಂದ ಮುತ್ತುಗಳ ರೀತಿಯಲ್ಲಿ ಹೊರಬರಹತ್ತಿದವು. ಈ ಹಂತವು ಮಲಗಿದವರನ್ನು ಜಾಗೃತಗೊಳಿಸಿತು ಹಾಗೂ ಕಾರ್ಯಪ್ರವೃತ್ತಗೊಳಿಸಿತು. ಇದು ಕೇವಲ ಅವನ ದೈವತ್ವದ ಪ್ರಕಟಪಡಿಸುವಿಕೆ ತನ್ನ ಅನುಯಾಯಿತ್ವದ ಒಡಂಬಡಿಕೆಗಾಗಿ ಆಯಿತು. ಈ ಅಂಶವನ್ನು ದಿವ್ಯದೃಷ್ಟಿಯಿಂದ ಕಂಡಾಗ, ನೋಡುವುದೇನೆಂದರೆ ಈಗಲೂ ಶಿರಸಾಷ್ಟಾಂಗದ ಸಂದಿಗ್ಧತೆಯಲ್ಲಿದ್ದನು. ಹೇಳಿಕೆಯ ಪ್ರಕಾರ ಪ್ರಚಲಿತವೇನೆಂದರೆ ಪ್ರಪ್ರಥಮವಾಗಿ ಯಾವ ಅಂಶವು ತನ್ನ ಮೇಲೆ ನಿರ್ಧರಿಸಿ, ಆಚರಣೆಗೆ ತರಲಾಯಿತು ಹಾಗೂ ಅನುಯಾಯಿತ್ವ ತಮ್ಮ ಮೇಲೆ ಕಡ್ಡಾಯಗೊಳಿಸಲಾಯಿತು, ಅದು ಮಹ್ಮದರ ಜ್ಯೋತಿಯಾಗಿದೆ. ಅರ್ಥಾತ್ ವಿಶೇಷ ಸಾಕ್ಷ್ಯದ ಮೂಲಕ ಇದೇ ಜ್ಯೋತಿಯ 'ಅವನ' 'ಅಲ್ಲಾಹ' ಎಂಬುದಾಗಿ ವೇದ್ಯವಾಯಿತು. ಆದುದರಿಂದ ಸದರಿ ಕವನ ಚರಣದಲ್ಲಿ ಕವಿಯು ತನ್ನ ಸಂಬಂಧವನ್ನು 'ಅನಾಮಿನ್ ನೂರುಲ್ಲಾ ವ ಕುಲ್ಲಿ ಶಯನ್ ಮಿನ್ ನೂರಿ'ಯ ಕಾರಣದಿಂದ ಪವಿತ್ರ ದೈವೀ ಜ್ಯೋತಿಯು ಮಹ್ಮದರ ಜತೆ ಸಂಲಗ್ನಗೊಳಿಸಲಾಯಿತು ಹಾಗೂ 'ನಹೂನ್ ಅಲಾ ಖರೂವನಾ ಅಲ್ ಸಾಬಿಖ್ಘೂನ್' ನಂತೆ 'ಸ್ವಯಂ' ಅನ್ನು 'ಆದಿ'ಯಿಂದ ಅನಂತದವರೆಗೆ ಅಸ್ತಿತ್ವದಲ್ಲಿರುವಂತೆ ಯೋಚಿಸಿದ್ದಾನೆ. ಬದಲಾಗಿ 'ಅಲ್ ಇನ್‌ಸಾನ್ ಸರಿ ವುಲ್ ನಾಸೇರಾ' ದ ಸಂಬಂಧ ಶಾಶ್ವತ ಜ್ಯೋತಿಯಾಗಿ ಈ ಕವನ ಚರಣವು ಪರವಶತೆಯ ಸ್ಥಿತಿಯಲ್ಲಿ ನಾಲಿಗೆಯಿಂದ ಹೊರಬಿದ್ದವು. ಹೀಗಾಗಿ ಇದು ಅನಿಯಂತ್ರಿತ ಸ್ಥಿತಿಗೆ ಸಂಬಂಧಿತವಾಗಿದ್ದರೆ, ಅದು ಕ್ಷಮಾರ್ಹವಾಗಿದೆ. ಆದರೆ ಯಾವ ಕವನ ಚರಣಗಳು ಈ ಅಧ್ಯಾಯದಲ್ಲಿ ಚರ್ಚಿತವಾಗಿದೆಯೋ, ಅದು ಕಲಹವನ್ನು ಹುಟ್ಟುಹಾಕಿವೆ. ಅದು ಏಕಾಗಬಾರದು? ಯಾಕೆಂದರೆ ಮಗನು ತನ್ನ ತಂದೆಗೆ (ಆದಂಗೆ) ಹೇಳುತ್ತಾನೆ ಅದೇನೆಂದರೆ ನಾನು ಈ ಕಾಲದ 'ಪೀರ್ (ಸೂಫಿ ಗುರು) ಮೇಲೆ ಮೇಲುಗೈ ಹೊಂದಿದ್ದೇನೆ, ಯಾಕೆಂದರೆ ಆಗ ಅವನ ಅಸ್ತಿತ್ವ ಹಾಗೂ ಅರ್ಹತೆಗಳು ಇರಲಿಲ್ಲ. ಇದು ಅಸಾಧ್ಯವಾಗಿದೆ. ಸಾಕು, ಹೇ ಮಹಮೂದ ಬಹರಿ, ಅಲ್ಲಾಹನು ನಿನಗೆ ಸೌಭಾಗ್ಯವನ್ನು ದಯಪಾಲಿಸಲಿ, ಯಾಕೆಂದರೆ ನೀನು ಅಸಾಧ್ಯ ಚಹರೆಯನ್ನು ಸಾಧ್ಯದ ದರ್ಪಣದಿಂದ

ಪ್ರಜ್ವಲಿತಗೊಳಿಸಿದ್ದಿಯಾ? ಹಾಗೂ ಶಂಕೆಯ ತೆರೆಯನ್ನು ವಿಶ್ವಾಸದ ಅಂತರ್ದೃಷ್ಟಿಯಿಂದ ನಿರ್ಭೀತನಾಗಿ ಬಿಸಾಕಿ ಬಿಟ್ಟಿದ್ದೀಯಾ? ಈ ಸದ್ಯದ ಒಳಿತೆಂದರೆ ಮಾತನ್ನು ಮುಗಿಸುವಂತಾಗಲಿ ಹಾಗೂ ಸ್ಥಿತಿಯನ್ನು ಅರಿಯುವಂತಾಗಲಿ.

'ಬಹರಿ ಎಲ್ಲಿಯವರೆಗೆ ಈ ಮಾತು-ಕತೆಯ ಗೋಷ್ಠಿ,
ಈಗಲಾದರೂ ಮುಳುಗಿಬಿಡು ಮೌನದ ಮಹಾಸಾಗರದಲಿ.

ಮೌನ ಏನಾಗಿಹುದು ವಾಸ್ತವದಲಿ ಹೃದಯದ ಸಾಕ್ಷಾತ್ಕಾರ,
ಮೌನವು ಸತ್ಯವಾಗಿದೆ, ನುಡಿಗಳು ಅಸತ್ಯವಾಗಿವೆ.

ಆಭರಣ-೧೧೨

'ಸ್ವಯಂ' ದೈವೀಜ್ಞಾನ

ಯಾವ ಒಂದು ಸಮಯಕ್ಕಾಗಿ ಸಮಸ್ತ ಸಮಯಗಳನ್ನು ನಿವಾಳಿಸಬಹುದಾಗಿದೆ. ಅಂಥ ಸ್ಥಿತಿಯಲ್ಲಿ ಎಲ್ಲಾ ಪರಿಸ್ಥಿತಿಗಳು ಅವನ ಮುಂದೆ ಮಣ್ಣಿನ ಸಮಾನವಾಗಿದೆಯೋ, ಆಗ ಈ ಕೆಲವು ಕವನದ ಸಾಲುಗಳು ನನ್ನ ಯೋಚನೆಯ ಏಕಾಂತ ಭವನದಿಂದ ಹೊರಹೊಮ್ಮಿದವು. ಅವು ಸಂಪ್ರದಾಯಗಳ ರಹಸ್ಯಗಳನ್ನು ವಿನಾಶಗೊಳಿಸಿದವು. ಯಾವನು ಪರಿಪೂರ್ಣನಾಗಿದ್ದಾನೆ ಹಾಗೂ 'ಮ್ವಾರಿಫತ್'ನ ಲೋಕದ ಒಡೆಯನಾಗಿದ್ದು, ಅವನು ಆ ಸಮಯದ ಅಲ್ಪವಾದರೂ ಸ್ಥಿತಿಯನ್ನು ಅರಿಯಬಹುದಾಗಿದೆ. ಈ ಪ್ರಶಂಸಾ ಕವನವು (ಖಸೀದಾ) ನನ್ನ ಇಚ್ಛೆಗೆ ವಿರುದ್ಧವಾಗಿ ನನ್ನ ಸುಪ್ತ ಯೋಗ್ಯತೆಗಳನ್ನು ಪ್ರಕಟರೂಪದಲ್ಲಿ ಹೊರತಂದಿತು. ಈ ಅನಿಯಂತ್ರಿತ ತಪ್ಪನ್ನು ಕ್ಷಮಿಸುತ್ತಾ, ಇದರ ಪುಣ್ಯಫಲವು ಪ್ರಾಪ್ತಿಯಾಗುವ ನಂಬಿಕೆ ಇದೆ.

'ಚತುರ ಮಾತುಗಾರನ ಮಾತುಗಳನ್ನು ಸ್ವಲ್ಪವೇ ಕೇಳುತಿರಿ,
ಪ್ರಮಾದದ ಸ್ಥಿತಿಯಲ್ಲಿದೆ, ಈ ಬೇಸರಗೊಳಿಸುವ ಸಂವಾದವು.

ಹುಡುಕುವದನ್ನು ಈ ಲೋಕವು ದಾಸನೆಂದು ತಿಳಿಯುತ್ತಿದ್ದೆ,
ಹೇ ಲಾಭದ ಇಚ್ಛುಕನೆ, ನನ್ನ ಬಳಿ ಪ್ರಯತ್ನವನ್ನು ಸ್ಥಗಿತಗೊಳಿಸು.

ಪ್ರೇಮವು ಸ್ವಯಂ ಆಗಿ ಅನ್ಯ ಅಲ್ಲಾಹನನ್ನು ಪವಿತ್ರಗೊಳಿಸಿಕೊಳ್ಳುತ್ತದೆ,
ಇದರಿಂದಾಗಿ ಆಗುತ್ತೆ, ಶ್ರಮಬೆಲೆಯ ರಹಿತ ತೋಟದ ಗತಿಸಿದ ನೋವು.

ಗಂಟಲಲಿ ಇಳಿಯದು ನಿನ್ನ ಆದೇಶದ ಹೊರತು ಕುಡುಕನೆ ಒಂದು ಗುಟುಕು ಸಹ,
ನನ್ನ ಕೈಯಲಿ ಮದ್ಯ ಬಟ್ಟಲು ಇದ್ದು, ತಲೆಯ ಮೇಲೆ ಮಡಿಕೆಯೆ ಇದೆ.

'ಪೀರ್'ನ ದರ್ಪಣದಲಿ ಎಲ್ಲರೂ ಕಾಣುತ್ತಾರೆ, ಸ್ನೇಹಿತನ ಪ್ರತಿಬಿಂಬವನು,
ಆದರೆ ಕಾಣುತ್ತೇನೆ ನಾನು ನನ್ನ ಪೀರ್‌ನನ್ನು ಸ್ವಯಂ ದರ್ಪಣವಾಗಿ.

ಮಧು ಪಾತ್ರೆಯು ವರ್ಣಮಯ ಇಲ್ಲದಿದ್ದರೆ ನನಗಿದರ ದುಃಖವಿಲ್ಲ,
ಇವು ರಹಸ್ಯಲೋಕ ಗೂಢ ಹಾಗೂ ವ್ಯಕ್ತತೆಯ ಅಂಗಡಿಯ ಮಡಿಕೆಗಳು.

ಕೇಳುತ್ತಾನೆ ಇತಿಹಾಸಕಾರನು ನನ್ನ ಜನ್ಮದ ದಿನವನು,
ಹಾಂ! ಲೋಕದಲಿ ಜ್ಞಾನವು ಮೊಳಕೆ ಒಡೆದ ಅದೆ ದಿನವು.

ಬುದ್ಧಿವಂತನು ಪ್ರಥಮವಾಗಿ ಯೋಗ್ಯತೆಯಿಂದ ಆಗಿಹನು ಅಂತ ದೃಷ್ಟಿಯುಳ್ಳವನು.
ನಾನು ಜೀವದಿಂದ ಆವೃತ್ತನು ಹಾಗೂ ಜೀವ ಈ ಲೋಕದ ರೋಮರೋಮದಲಿ.

ತನ್ನನ್ನು ಸದಾ ಅಂತರ್ದೃಷ್ಟಿಯನ್ನಾಗಿಸುವುದು ವಾಸ್ತವದಲಿ ನಮಾಜ್ ಆಗಿದೆ,
ಅನ್ಯರ ಆಲೋಚನೆಯನು ತ್ಯಜಿಸುವುದೇ ತನ್ನ ವುಜೂ ಆಗಿದೆ.

ನಾನೇ ಬಹಿರಂಗ, ನಾನೇ ಅಂತರಂಗ, ಯಾರಿಹರು ನನ್ನ ಹೊರತು,
ಮುರಿಯಲಿ 'ಅಹಂ' ನ ಗೋಣು, ಆಗ ಯಾರಿಹರು ಹೇಳು?

ಪರಾತಂತ್ರದ ರಹಸ್ಯವಾಗಿಹೆನು ನಾನು ಸ್ವಯಂ ರಹಿತನು, ಅನ್ಯ ರಹಿತನು ಆಗಿಹನು,
ತೆರೆಯ ಮರೆಯಲ್ಲಿ ಇಹುದು ಆ ಮಹಾಮಹಿಮನ ಪರಮ ಆದೇಶವು.

ಒಂದರಿಂದ ಇನ್ನೊಂದು ರೂಪ ನಾನು ಪಡೆಯುವುದೇ ಇಲ್ಲ,
ಹೀಗೆಯೇ ಇದ್ದೇನು, ಈಗ ನೀನು ನೋಡುವಂತೆ ಸದ್ಗುಣವಂತನು.

ನಾನು ಬರಲಿಲ್ಲ ಎಲ್ಲಿಂದಲೋ, ನನಗೆ ಹೋಗಬೇಕಾಗಿಲ್ಲ ಎಲ್ಲಿಯೋ,
ನಾನು ಶಾಶ್ವತನು, ಅಲ್ಲದೆ ಸಮಸ್ತ ಲೋಕವನು ಹಾಗೂ ಎಲ್ಲಾ ದಿಶೆಗಳನು.

ಸತ್ಯ ಜ್ಞಾನವು ಆಗಿಹುದು, ಭೋರ್ಗರೆದ ಹಾಗೂ ಕ್ಷೀಣಿಸದ ಮಹಾಸಾಗರ,
ಸಮಸ್ತ ಸೃಷ್ಟಿಗಳು ಇದರಲಿ ಇಹವು ನೀರಿನ ಸಾದೃಶ.

ಇಷ್ಟು ಉನ್ನತವಾಗಿಹುದು, ಈ ಶಾಶ್ವತ ಸುಲ್ತಾನನ ಸ್ಥಾನವು,
ಇದರ ಸೆರಗಿನ ವಿಶಾಲತೆಯಲಿ ನಕ್ಷತ್ರಗಳ ಹಾಸು.

'ಶಿರ್ಕ'ನಿಂದ ಪಾರಾಗಲು ನಾನು ಇದನ್ನು 'ಏಕ'ವೆಂದು ಭಾವಿಸುತ್ತೇನೆ,
ಎರಡರಿಂದಲೂ ನೀನು ಪಾರಾಗುವೆ ಏಕದ ಯಥಾ ರೀತಿಯಲ್ಲಿ.

ಕಾರಂಜಿಯ ಸದೃಶ ಔನ್ನತ್ಯದಿಂದ ಇಹುದು ಆಲಿಂಗನ,
ಆದರೆ ಕೆಲವೊಮ್ಮೆ ಮಳೆಯ ಹನಿಯಾಗಿವೆ ಕುತ್ಸಿತ ಗದ್ದಲದಿ.

ಸ್ವಯಂ ಅರಿವನ್ನು ತಿಳಿಯುವೆ ಮಹಾನ್ ಕಾರ್ಯವೆಂದು,
ಇಲ್ಲವಾದರೆ ಈ ಮತವನ್ನು ನಾನು ಹೃದಯದಿಂದ ಗುರಿಯಾಗಿಸುತ್ತಿದ್ದೆ.

ನಾನು ಮುಸ್ಲಿಮನು, ನನ್ನ ಸತ್ಯ ವಿಶ್ವಾಸವು ದೇವರು ಹಾಗೂ ಮಹ್ಮದರು,
ಸುನ್ನತ್ ಜಮಾತಿನ ಧರ್ಮದಿಂದ ಅಭಿಮಾನಿತನು ನಾನು.

'ಬಹರಿ'ಯಂತೆ ಯಾವನು ದ್ವೇಷದ ಬಂಧನದಿಂದ ಮುಕ್ತನು,
ಅವನು ಧಾರ್ಮಿಕ ಮುಸಲ್ಮಾನನ ಮುರ್ಷದನು ಹಾಗೂ ಬ್ರಾಹ್ಮಣನ ಗುರುವು.

ಆಭರಣ-೧೧೩

ಫಕೀರರ ಸ್ಥಿತಿಯು ವಾದ-ವಿವಾದಗಳಿಗಿಂತಲೂ ಉನ್ನತವಾಗಿದೆ.

ಅಲಂಗೀರ್ ಔರಂಗ್‌ಜೇಬನ ಸೈನ್ಯಾಧಿಪತಿ ನವಾಬ್ ಘಾಜಿವುದ್ದೀನ್ ಖಾನ್ ಫೇರೋಜ್ ಜಂಗರು ಬಾದಶಾಹನ ಆದೇಶದ ಮೇರೆಗೆ ವಾಗಣಗೇರಿಯ ವಾರಸುದಾರನಾಗಿದ್ದ ಪಿಡ್ಡನಾಯಕನ ಬಂಡಾಯವನ್ನು ಹತ್ತಿಕ್ಕಲು ಬೃಹತ್ ಸೇನೆಯ ಜತೆ ಆಗಮಿಸಿದ್ದನು. ನವಾಬ್ ಸಾಹೇಬರ ಸಮೀಪವರ್ತಿಗಳಲ್ಲಿ ಯಾರೋ ಒಬ್ಬರು ಫಕೀರನ ವಿರುದ್ಧ ದೂರು ನೀಡಿದ್ದರು. ನವಾಬ್ ಸಾಹೇಬರು ಲಷ್ಕರ್‌ನ ಖಾಜಿ (ನ್ಯಾಯಾಧೀಶ)ರಾಗಿದ್ದ ಖಾಜಿ ಹಬೀಬಲ್ಲಾರವರನ್ನು ಕರೆ ಕಳುಹಿಸಿದರು. ಈ ಖಾಜಿ ಸಾಹೇಬರು ಕೆಲವು ದಿನಗಳ ಹಿಂದೆಯೇ ಒಬ್ಬ ದರ್ವೇಷ್‌ನನ್ನು ಧರ್ಮ ವಿರೋಧಿ ಸಂವಾದದ ಅಪವಾದದಲ್ಲಿ ಕೊಲೆ ಮಾಡಿದ್ದರು. ಇವರಿಗೆ ಆದೇಶಿಸಲಾಯಿತೇನೆಂದರೆ ಗೋಗಿಯಲ್ಲಿ ಇಂಥಾ ಫಕೀರರ ಆಸ್ಥಾನಕ್ಕೆ ಸ್ವಯಂ ಭೇಟಿ ನೀಡಿ, ತನಿಖೆ ನಡೆಸಿ, ಅಕಸ್ಮಾತ್ ಆ ಫಕೀರನು ವಾಸ್ತವವಾಗಿ ಜನರು ಹೇಳುವಂತಹ ರೀತಿಯಲ್ಲಿ ಏನನ್ನಾದರೂ ನುಡಿದಿದ್ದರೆ, ಅವರಿಗೆ ಇಂತಹ ಶಿಕ್ಷೆ ನೀಡಿ, ಇದರಿಂದ ಮುಂದಿನವರಿಗೆ ಒಂದು ಪಾಠವಾಗಬೇಕು. ಈ ನಿಮಿತ್ತವಾಗಿ ಅವರು ಈ ಫಕೀರನ ವಾಸಸ್ಥಳಕ್ಕೆ ಪಾದಯಾತ್ರೆಯ ಮೂಲಕ ಆಗಮಿಸಿದರು ಹಾಗೂ ಸಲಾಂ ಮಾಡಿ, ಕುಳಿತುಕೊಂಡರು. ನಾನು ಈಗಾಗಲೇ ನಿಶ್ಚಯಿಸಿಕೊಂಡಿದ್ದೆ. ಅದೇನೆಂದರೆ ಅವರು ಏನನ್ನಾದರು ಕೇಳಿದರೆ ನನಗೆ ಇದನ್ನೇ ಹೇಳಬೇಕಾಗಿದೆ. ಅದೇನೆಂದರೆ, ಹೇ ಇಸ್ಲಾಮಿನ ಬುನಾದಿಯನ್ನು ಸುಭದ್ರಗೊಳಿಸುವವನೇ, ನನಗೆ ಏನು ಸೂಕ್ತ ಅನಿಸಿದೆಯೋ ಅದನ್ನು ಮಾಡಿದ್ದೇನೆ. ಹಾಗೂ ನಿಮಗೆ ಯಾವುದು ಸೂಕ್ತ ಏನಿಸುತ್ತವೆ ಮಾಡಬಹುದು. ಸವಿಸ್ತಾರವಾದ ವಾದ-ವಿವಾದದಿಂದ ಪ್ರಯೋಜನವೇನು?.

ದೇವರು ಅವನಿಗೆ ಒಳಿತನ್ನು ಮಾಡಲಿ,
ಅವನು ಏನೂ ಪ್ರಶ್ನಿಸದೇ ಹೊರಟು ಹೋದನು.

ವೃಥಾ ನನ್ನನೇಕೆ ಅಪಮಾನ ಮಾಡುತ್ತಿದ್ದೀರಿ,
ನಾನು ವಾಸ್ತವದಲಿ ಸ್ವಯಂನೂ ಅಲ್ಲ, ಅನ್ಯನು ಅಲ್ಲ.

ಮನ್ಸೂರನ[೧] ತರಹ 'ಅಹಂ' ಏನಾದರೂ ನುಡಿದರೆ
ಅಧಿಕಾರದಲ್ಲಿ ಇರುವವನು ಏರಿಸುವನು ಗಲ್ಲಿಗೆ ಅವನನು.

ನಿನ್ನ ಮಿತಿಯನ್ನು ಮೀರಿರುವಿ, ಹೇ 'ಬಹರಿ'
ಅಪರಾಧಿಗಳಿಗೆ ಆಗು ನೀ ಒಂದು ನಕ್ಷತ್ರ.

ಆಭರಣ–೧೧೪

'ವಿಲಾಯತ್' (ದೈವೀ ಸ್ನೇಹ)ನ ವಿಧಗಳು ಹಾಗೂ ಪ್ರವಾದಿತ್ವ ಹಾಗೂ ವಿಲಾಯತ್ ಒಂದಾಗುವ ವರ್ಣನೆಯ ಕುರಿತು

ಈ ಲೇಖನಿಯ ಕುದುರೆಯನ್ನು ಪ್ರವಾದಿತ್ವ ಹಾಗೂ ವಿಲಾಯತ್‌ನ (ಸಂತತ್ವ) ಮೈದಾನದಲ್ಲಿ ಓಡಿಸುತ್ತೇನೆ. ಯಾಕೆಂದರೆ ಪ್ರವಾದಿತ್ವ ಮುಕ್ತಾಯವಾಗಿದೆ. ಆದುದರಿಂದ ಇದರ ಪ್ರಸ್ತಾಪವೂ ಮುಕ್ತಾಯವಾದರೆ ಒಳ್ಳೆಯದು. ಆದರೆ ವಿಲಾಯತ್ (ಸಂತತ್ವ) ಜಾರಿಯಲ್ಲಿದೆ ಹಾಗೂ ಅದು ಮೂರು ವಿಧಗಳನ್ನು ಹೊಂದಿದೆ.

೧. ಸಾಮಾನ್ಯ ಸಂತತ್ವ ೨. ವಿಶೇಷ ಸಂತತ್ವ ೩. ಪರಮೋಚ್ಚ ಸಂತತ್ವ

೧. ಸಾಮಾನ್ಯ ಸಂತತ್ವ:

ಪ್ರಾರ್ಥನೆ–ಉಪಾಸನೆಯಲ್ಲಿ ತೊಡುಗುವುದು ಹಾಗೂ ನಿಷಿದ್ಧ ಕರ್ಮಗಳಿಂದ ದೂರವಿರುವುದರಿಂದ ಈ ಹಂತವು ಪ್ರಾಪ್ತವಾಗುತ್ತದೆ. ಇದರಲ್ಲಿ ಆಗುವುದೇನೆಂದರೆ ಯಾವುದೇ ಅನೈಚ್ಛಿಕ ಕರ್ಮವು ಸಂತನಿಂದ ಜರುಗಿದರೆ, ತಕ್ಷಣವೇ ಸಂತತ್ವ ಮಾಯವಾಗಬಹುದು. ಆದುದರಿಂದ ಸಾಮಾನ್ಯ ಸಂತತ್ವವು ಒಂದು ತರಹದ ಕಡವಾಗಿದೆ. ಇದ್ದರೆ ಇರುತ್ತದೆ. ಹೋದರೆ ಹೋಗುತ್ತದೆ.

---

೧. ಸೂಫಿ ಮನ್ಸೂರ್ ಹಲ್ಲಾಜ್‌ನನ್ನು ಅನ್–ಅಲ್–ಹಕ್ ಅರ್ಥಾತ್ 'ಅಹಂ ಬ್ರಹ್ಮಾಸ್ಮಿ' ಎಂದಿದಕ್ಕೆ ಗಲ್ಲಿಗೇರಿಸಲಾಯಿತು.

೨. ವಿಶೇಷ ಸಂತತ್ವ:

ಇದು ಪರಮಸತ್ಯನ ವಿಶೇಷ ಕೃಪೆಯಾಗಿದೆ. ಯಾವನಿಗೆ ನೀಡಲು ಇಚ್ಛಿಸುತ್ತಾನೋ, ಅವನಿಗೆ ಪ್ರಕೃತಿದತ್ತವಾಗಿ ಆರಂಭದಿಂದಲೇ ಪ್ರಾಪ್ತಿಯಾಗುತ್ತದೆ. ಇದರಲ್ಲಿ ಆದಿಯೇನು? ಅನಂತವೇನು? ಇಲ್ಲಿ ಏನು? ಅಲ್ಲಿ ಏನು? ಪ್ರತಿ ಸ್ಥಳದಲ್ಲಿ ಹಾಗೂ ಪ್ರತಿ ಹಂತದಲ್ಲಿ ಈ ಸಂತತ್ವವು ಸತತವಾಗಿ ಜಾರಿಯಲ್ಲಿರುತ್ತವೆ. ಒಬ್ಬ ಹಿಂದುಸ್ತಾನಿ ಸ್ನೇಹಿತನು ಈ ಫಕೀರನನ್ನು ಪ್ರಶ್ನಿಸಿದನು 'ಹೇಳಲಾಗುತ್ತಿದೆ, ಸಂತನು ತೀರಿಕೊಂಡಾಗ ಅವನ ಸಂತತ್ವವು ನಲ್ವತ್ತು ವರ್ಷಗಳವರೆಗೆ ಬಾಕಿ ಇರುತ್ತದೆ. ಇದರ ನಂತರ ಅಂತ್ಯಗೊಳ್ಳುತ್ತದೆ. ಇದು ಹೇಗೆ? ನಾನು ನುಡಿದೆ, ಸಂತನು ಸಾಯುತ್ತಿದ್ದರೆ, ನಿಮ್ಮ ಮಾತು ಸೂಕ್ತವಾದುದು. ಆದರೆ ಸಂತನು ಸಾಯುವುದೇ ಇಲ್ಲ. ಅವನು ಪ್ರಶ್ನಿಸಿದನು 'ಸಂತನು ಸಾಯುವುದಿಲ್ಲವೆಂಬ ಪ್ರಮಾಣ ಎಲ್ಲಿದೇ?" ನಾನು ನುಡಿದೆ 'ಅಲಾ ಇನ್ನಾ ಔಲಿಯಾ ಅಲ್ಲಾಹ, ಲಾ ಯಮುತೂನ್' ಇದನ್ನು ಕೇಳಿ ಅತೀವ ಸಂತುಷ್ಟನಾದನು ಹಾಗೂ ನುಡಿದನು ಇಂತಹ ಮಹೋನ್ನತ ಪ್ರಮಾಣದಿಂದ ಅರಿವಾಗುವುದೇನೆಂದರೆ ಔಲಿಯಾಗಳು (ಸಂತರು) ಸಾವನ್ನು ಅರಿಯುವುದೇ ಇಲ್ಲ, ಅದು ಬಿಳಿಯಾಗಲಿ ಅಥವಾ ಕರಿಯಾಗಲಿ!

೩. ಪರಮೋಚ್ಛ ಸಂತತ್ವ (ವಿಲಾಯತ್):

ಪರಮೋಚ್ಛ ಸಂತತ್ವ (ವಿಲಾಯತ್), ಆರೀಫ್‌ನ (ಮರ್ಮಜ್ಞಾನಿ) ಹೊರತಾಗಿ ಯಾರಿಗೂ ಪ್ರಾಪ್ತಿಯಾಗುವುದೂ ಇಲ್ಲ ಹಾಗೂ ಅವನಿಗೆ ಶೋಭಾಯವೆನಿಸುವುದೂ ಇಲ್ಲ. ಯಾಕೆಂದರೆ ಅವನ ವಿಲಾಯತ್ ಪವಿತ್ರ ದೈವೀಜ್ಞಾನದ ಶಿಫಾರಸ್ಸಿನ ಮೇರೆಗೆ ಸ್ವಯಂ ಜ್ಞಾನವಾಗುತ್ತದೆ. ಈ ಲೌಕಿಕ ಜ್ಞಾನದ ಉತ್ಪಾದನಾ ಘಟಕವನ್ನು ನೂರಾರು ಸಲ ಅಸ್ತವ್ಯಸ್ತಗೊಳಿಸಿದರೂ ಆವಾಗಲೂ ಅದರ ಅಸ್ತಿತ್ವವೂ ವಿಲೀನವಾಗುವುದಿಲ್ಲ ಅದರ ವಿಲಾಯತ್ ಸಹ ಮರೆಯಾಗುವುದಿಲ್ಲ.

ವಿಲಾಯತ್ ಅನ್ನು 'ಸಾಮಾನ್ಯ' ಗೊಳಿಸಬೇಕಾಗಿದೆ ಹಾಗೂ ವಿಲಾಯತ್ 'ವಿಶೇಷ' ಆಗಬೇಕಾಗಿದೆ ಹಾಗೂ ಪರಮೋಚ್ಛ ವಿಲಾಯತ್ 'ಇರಬೇಕಾಗಿದೆ' ಹಾಗೂ ಇರುವಿಕೆಯ ಅಸ್ತಿತ್ವವು ಪರಂಸತ್ಯನ ಅಮಾನತ್ (ಇಡಗಂಟು) ಆಗಿದೆ. ಈ ಹಂತ ಪರಂ ಸತ್ಯತೆಯ ಅತ್ಯುಚ್ಛ ಸ್ಥಾನವಾಗಿದೆ.

ಹೇ ಆತ್ಮೀಯರೇ, ಪ್ರವಾದಿತ್ವ ಹಾಗೂ ವಿಲಾಯತ್ ಈ ಎರಡು ಅರ್ಹತೆಗಳು ರಸೂಲ್ ಮಹ್ಮದ್ ಸಲ್ಲಲ್ಲಾಹು ಸಲೈಹು ಸಲ್ಲಂ ರವರ ರಸೂಲತ್ವದಿಂದಾಗಿದೆ. ಇವೆರಡರಲ್ಲಿ ಒಂದನ್ನು (ಅರ್ಥಾತ್ ಪ್ರವಾದಿತ್ವವು) ತನ್ನ ಚರಮವನ್ನು ತಲುಪಿದಾಗ, ಅದನ್ನು ಕೊನೆಗಾಣಿಸಲಾಯಿತು. ಎರಡನೆಯದಾಗಿ ವಿಲಾಯತ್ ಅನ್ನು

ಮಹಾಪುರುಷರ ಮೂಲಕ ಅದನ್ನು ಜಾರಿಯಲ್ಲಿ ಇಡಲಾಯಿತು. ಮೂಲದಲಿ ಈ ಪ್ರಕಾಶ ಹಾಗೂ ವಿಲಾಯತ್‌ಯ 'ವಿಲಾಯತ್‌ನ ಸೂರ್ಯ' (ಅಫ್ತಾಬೆ ಅನ್‌ವಲಿ) ನಿಂದ, ಯಾವುದು ದೇವರ ಪ್ರಸಿದ್ಧ ನಾಮಗಳಲ್ಲಿ ಒಂದಾಗಿದೆಯೋ, ಅದರಿಂದ ಹೊರಹೊಮ್ಮಿ ಜಗದ್ಗುರುಗಳಾದ ಪ್ರವಾದಿಗಳ ಮೇಲೆ ಪ್ರಜ್ವಲಿತವಾಯಿತು. ಅವರಿಂದ, ಅವರ ದಾಸರಿಗೆ ಅದು ಪ್ರಾಪ್ತವಾಯಿತು. ಪ್ರವಾದಿಯು ತನ್ನನ್ನು ಪ್ರವಾದಿಯೆಂದು ಭಾವಿಸಿದರೆ, ಅದು ದೈವೀ ಸಂದೇಶದ ಆಮಂತ್ರಣ ನೀಡುವುದರಿಂದ ಉಚಿತವಾಗಿದೆ. ಆದರೆ 'ವಲಿ'ಯು ತನ್ನನ್ನು 'ವಲಿ' ಎಂದು ಭಾವಿಸಿದರೆ, ಅದು ಅನುಚಿತವಾಗಿದೆ. ಅವನು ಅಸ್ತಿತ್ವದ ದಾವೆ ಹೂಡಿ, 'ಏಕತ್ವ'ದ ಸಾಕ್ಷ್ಯತೆ ಹಾಗೂ ಅನೇಕತೆ ಮತ್ತು 'ಶಿರ್ಕ' (ದೇವ ಸಹಭಾಗಿ ಆರಾಧನೆ)ನ ನಿರಾಕರಣೆಯನ್ನು ಮಾಡುವಂತಿದ್ದರೆ, ಅವನ ಕೃತ್ಯವು ಕ್ಷಮೆಗೆ ಅರ್ಹವಾಗಿದೆ. ಇಲ್ಲವಾದರೆ ಅವನ ವಿಲಾಯತ್(ಸಂತತ್ವ) ಬಡಕಲು ಹಾಗೂ ಅಯೋಗ್ಯವಾಗಿದೆ. ಯಾಕೆಂದರೆ ಸ್ವಯಂ ನೋಟವು ಚಿತ್ತದ ಅರ್ಹತೆಯಾಗಿದೆ. ಅದು ಅದರ ಅಸ್ತಿತ್ವದಲ್ಲಿ ಇನ್ನೂ ಬಾಕಿ ಇದೆ.

ಹೇ ಆತ್ಮೀಯನೇ, ಪ್ರವಾದಿತ್ವವು ಸಂತತ್ವಕ್ಕಿಂತಲೂ ಸಾವಿರ ಪಟ್ಟು ಶ್ರೇಯಸ್ಕರವಾಗಿದೆ. ಯಾಕೆಂದರೆ ಮಹ್ಮದ ಸಲ್ಲಾಹು ಅಲೈಹು ಸಲ್ಲಂ ಅವರನ್ನು ಪ್ರವಾದಿ (ನಬಿ) ಎಂದು ಕರೆಯಬಹುದು. ಆದರೆ ವಲಿ (ಸಂತ) ಎಂದು ಅಲ್ಲ. ವಾಸ್ತವವಾಗಿ ಮಹ್ಮದರು ಪ್ರವಾದಿಯೂ ಆಗಿದ್ದಾರೆ, ವಲಿ (ಸಂತರು)ಯೂ ಆಗಿದ್ದರು. ದೇವರ ರಸೂಲರ (ದೈವಿ ಗ್ರಂಥ ಹೊಂದಿದ ಪ್ರವಾದಿಗಳು) ಅಸ್ತಿತ್ವವು, ವಲಿ ಹಾಗೂ ಪ್ರವಾದಿತ್ವವನ್ನು ಸಮಸ್ತ ಸೃಷ್ಟಕರ್ತನ ಕಡೆ ವಿಜ್ಞಾಪನೆ ಮಾಡುತ್ತದೆ. ಇದು ಇದರ ವಿಶಿಷ್ಟತೆಯಾಗಿದೆ.

'ಬರ್‌ದರ್' ಎಂದು ವಲಿಯನ್ನು ಯಾವನು ಕರೆದಿರುವನೊ, ದೇವರಾಣೆ ಅವನು ಆ ಸ್ಥಿತಿಯನ್ನು ತಲುಪಿಯೇ ನುಡಿದಿದ್ದಾನೆ. ಅದೂ ಅಲ್ಲದೆ ಆ ಸ್ಥಿತಿಯನ್ನು ಕಣ್ಣಾರೆ ಕಂಡು ಅದರ ದಿವ್ಯತೆಯನ್ನು ಅನುಭವಿಸಿ, ಪ್ರಬಲ ಆಸೆಯಿಂದ ನುಡಿದಿದ್ದಾನೆ. ದೇವರ ರಸೂಲರ ಪ್ರವಾದಿತ್ವದಿಂದ ಯಾವ ಇಸ್ಲಾಮಿನ ಪ್ರಚಾರ ಹಾಗೂ ಧರ್ಮದ ಎಲ್ಲೆಕಟ್ಟುಗಳು ನಿರ್ಮಿತವಾದವು. ಅವು ಕೇವಲ ಪ್ರವಾದಿಯವರ ವಲಿಸ್ಥಿತಿಯಿಂದಲೇ ಆಯಿತು. ಯಾಕೆಂದರೆ ಹೃದಯಗಳ ಪ್ರಭಾವ ಬೀರುವಂಥ ಹಾಗೂ ಆಕರ್ಷಿಸುವಂಥ ಗುಣವೇ 'ವಲಿ'ಯ ಸ್ಥಿತಿಯಾಗಿದೆ. ಆದುದರಿಂದ ಪಥಭ್ರಷ್ಟರಾಗುವವರು ಅವಿಶ್ವಾಸಿಗಳು ದೈವೀಧರ್ಮದ ಪ್ರಕಾಶಕ್ಕೆ ಕಟಿಬದ್ಧರಾದವರು, ವಿಲಾಯತ್‌ನ ಪ್ರಭಾವಕ್ಕೆ ಒಳಗಾದರು.

ಪ್ರವಾದಿತ್ವ ದೇವ, ಸಂತತ್ವ ಜೀವವಾಗಿದೆ ಓ ಸ್ನೇಹಿತನೇ,
ಇದು ಜೀವವಾಗಿದ್ದರೆ ಅದು ದೈವೀಜ್ಞಾನವಾಗಿದೆ ಓ ಸ್ನೇಹಿತನೇ,

ಸಂತತ್ವ ಕೈಗಳಾಗಿವೆ ಹಾಗೂ ಪ್ರವಾದಿತ್ವ ಆಯುಧವಾಗಿದೆ.
ಕೈಗಳರಹಿತ ಆಯುಧದ ಉಪಯೋಗವು ನಿಷ್ಪ್ರಯೋಜಕವಾಗಿದೆ.

ಸಂತತ್ವವು ಪ್ರೇಮಿಯ ಹಾಗೂ ಅದು ಅದರ ಆಭರಣ
ಆ ಪ್ರೇಮಿಯ ಆಭರಣ ಆಗಿಹನು ಈ 'ಬಹರಿ'ಯು.

ಆತ್ಮೀಯನೇ, ಈ ಸ್ಥಾನದಲ್ಲಿ ಗಹನತೆಯಿಂದ ಅಲೋಚಿಸುವ ಅಗತ್ಯತೆ ಇದೆ. ಅದೇನೆಂದರೆ ಪ್ರವಾದಿತ್ವ ಅಂತ್ಯವಾಗಿದೆ. ಆದರೆ ಲೋಕವು ಇನ್ನೂ ಅಸ್ತಿತ್ವದಲ್ಲಿದೆ. ಹೀಗಾಗಿ ವಿಲಾಯತ್ (ಸಂತತ್ವ) ಪ್ರವಾದಿತ್ವದ ತರಹ ಅಂತ್ಯವಾಗುತ್ತಿದ್ದರೆ, ಈ ಲೋಕವು ಶೂನ್ಯವಾಗುತ್ತಿತ್ತು. ವಿಲಾಯತ್ ಲೋಕದ ಜೀವವಾಗಿದೆ. ಜೀವ ಹಾರಿ ಹೋದರೆ, ದೇಹದಲ್ಲಿ ಏನೂ ಉಳಿಯುವುದಿಲ್ಲ.

ಹೇ ಲೋಕವೇ! ಎಲ್ಲಿ ಅಗ್ನಿ ಇಹುದು, ಅಲ್ಲಿ ವಿಲಾಯತ್ ಗಾಳಿಯಾಗಿದೆ.
ಗಾಳಿ ಇಲ್ಲದೆ ಎಷ್ಟು ಸಮಯ ಬೆಂಕಿ ಉರಿಯುತ್ತಿರಬಹುದು.

ಯಾವಾಗ 'ವಿಲಾಯತ್'ನ ಅಂತ್ಯವು ಸಮೀಪಿಸುತ್ತದೆ, ಆಗ ಎಲ್ಲಾ ಪದಾರ್ಥಗಳು ತಮ್ಮ ಚರಮ ಸ್ಥಿತಿಯಲ್ಲಿ ಪ್ರಕಟವಾಗುತ್ತವೆ. ಭೂಗರ್ಭದಲ್ಲಿ ಹೂಳಲ್ಪಟ್ಟ ಭಂಡಾರಗಳು ಸ್ವಯಂ ಆಗಿ ಹೊರಬರುತ್ತವೆ. ಪ್ರತಿ ದರಿದ್ರನು ಧನಿಕನಾಗುವನು. ಸಂಪತ್ತನ್ನು ಬಹಿರಂಗ ವ್ಯಕ್ತಿಗಳ ಬದಲಾಗಿ ಸ್ವಯಂ ದೈವೀ ಜ್ಞಾನಿಗಳು ನಿರ್ಧರಿಸುತ್ತಾರೆ. ಅರ್ಥಾತ್ ಯಾವ ವ್ಯಕ್ತಿಯೂ ವಿಭುವಿನ ದಿವ್ಯಜ್ಞಾನದಿಂದ ಕಿವುಡನಾಗಿರುವುದಿಲ್ಲ ಹಾಗೂ ತನ್ನ ಪರಿಚಯದಿಂದ ವಂಚಿತನಾಗಿರುವುದಿಲ್ಲ. ಅದು ಎಲ್ಲಿಯವರೆಗೆಂದರೆ, ಎರಡು, ಮೂರು ಅಥವಾ ಹತ್ತು ಜನರ ಸಣ್ಣ ಗುಂಪು ಎಲ್ಲಿ ಸೇರಿರುತ್ತದೆಯೋ, ಅವನು ಧಾರ್ಮಿಕನೇ ಆಗಿರಲಿ, ಅಧರ್ಮಿಯೇ ಆಗಿರಲಿ. ಅಲ್ಲಿ ದೈವೀಜ್ಞಾನದ ಹೊರತು ಬೇರೆ ವಿಷಯದ ಚರ್ಚೆ ಇರುವುದಿಲ್ಲ. ಅಲ್ಲಿ ಆ ಮಾರ್ಗದ ಹೊರತು ಬೇರೆ ಮಾರ್ಗದ ಮೇಲೆ ಪ್ರಕಾಶವಿರುವುದಿಲ್ಲ. ಆ ಸಮಯದಲ್ಲಿ ಈ ಲೋಕವು ಲೋಕವಾಗಿರದೇ "ಮ್ವಾರಿಫತ್"ನ (ದೈವೀಅನುಭಾವ) ಪಾಠಶಾಲೆಯಾಗಿ ತೋರುವುದು. ನನಗೆ ಈಗಲೂ ಸಂದೇಹವಿದೆಯೇನೆಂದರೆ ಆ ಪ್ರೇಮೋತ್ಕಟತೆಯ ಕಾಲ ಆಗಿಬಿಟ್ಟಿದೆ. ಅದು ಹೇಗಿದೆಯೆಂದರೆ, ನಾನು ಯಾರನ್ನು ನೋಡುತ್ತೇನೋ ಅವನ ದೇವರ ದೈವೀಜ್ಞಾನದ ಅಭಿಲಾಷಿಯೂ ಹಾಗೂ ಅನಂತ ದೈವೀ ರಹಸ್ಯಗಳ ಅನ್ವೇಷಣೆಯ ಇನ್ನೂ ಅಧಿಕ ಅಭಿರುಚಿಯನ್ನು ಹೊಂದಿರುತ್ತಾನೆ. ದೇವರು ಅವನನ್ನು ಹಾಗೆಯೇ ಮಾಡಲಿ ಹಾಗೂ ಈ ಸ್ಥಿರ ಧರ್ಮವನ್ನು ಚಂದ್ರನಂತೆ ಪ್ರಕಾಶ ಹಾಗೂ ಕಾಂತಿಮಯಗೊಳಿಸಲಿ. ಸತ್ಯವಾಗಿ ಮಹ್ಮದರು ಅತ್ಯುತ್ತಮ ಅನುಯಾಯಿಯಾಗಿದ್ದಾರೆ.

ಪ್ರವಾದಿತ್ವ ಹಾಗೂ ವಿಲಾಯತ್ವ ಇರುವವು ಶಾಶ್ವತ,
ಇವರೆಡೂ ಒಂದೇ ಆಗಿಹವು, ಅಂತರ್ದೃಷ್ಟಿಯ ನೋಟದಲಿ.

ಬಂದಿಹವು ಇವೆರಡು ಪ್ರವಾದಿ ಮಹ್ಮದ್ ಮುಸ್ತಫಾರಿಂದ,
ಇವುಗಳು ಇಲ್ಲ ಮೇಲು-ಕೀಳಿನ ಭಾವ ಸತ್ಯದಲಿ.

ಇವುಗಳಲಿ ಒಂದು ಹರಿಯುತಿಹುದು ಸತತ ಕಾಲುವೆಯಂತೆ,
ಇನ್ನೊಂದು ನಿಂತಿಹುದು ಘನತೆಯ ಪರ್ವತನಾಗಿ ಉನ್ನತದಲಿ.

ಆದರೆ ಎಲ್ಲದರಲಿ ಉತ್ತಮವು "ಫಕೀರಿ"ಯ ಸ್ಥಾನವು,
ಯಾಕೆಂದರೆ ಇಲ್ಲಿ ಸಿಗುವುದು ಅಂತೂ-ಇಂತೂ ವಿಶ್ರಾಮವೇ ವಿಶ್ರಾಮವು.

ಬಾ ನಡೆದು 'ಹೇ ಬಹರಿ' ಈ ಫಕೀರಿಯಲಿ ಹೆಜ್ಜೆಯಿಡು,
ಯಾರಿಗೆ ಪ್ರಾಪ್ತಿ ಈ ಸಂಪತ್ತು. ನಿಜಕ್ಕು ವಂದಿತನು ಅವನು.

ಆಭರಣ-೧೧೫

"ದರವೇಶ'ರ ಸ್ಥಿತಿ-ಗತಿಯ ಕುರಿತು

ಒಬ್ಬ ಸತ್ಯಾನ್ವೇಷಿ ದರ್ವೇಶನು ಒಂದು ದೈವೀ ರಹಸ್ಯವನ್ನು ಪ್ರಶ್ನಾರ್ಥಕವಾಗಿ ಫಕೀರನ (ಮಹಮೂದ ಬಹರಿ) ಮುಂದೆ ಇಟ್ಟನು. ನಾನು ಹೇಳಿದೆ 'ದೇವರಾಣೆಗೂ, ನನ್ನನ್ನು ಏನೂ ಕೇಳಬೇಡಿ. ನಾನು ಪ್ರಶ್ನೋತ್ತರಗಳಿಗೆ ಸಿದ್ಧನಾಗಿರುವವನಲ್ಲ. ಒಂದು ದೀರ್ಘವಾದ ಕಾಲಾವಧಿಯಿಂದ ಫಕೀರರ ಸಾಂಗತ್ಯದಲ್ಲಿ ಕುಳಿತರೂ, ನನಗೆ ಕೇವಲ ಈ ಮಾತಿನ ಹೊರತು ಮತ್ತೇನೂ ಪ್ರಾಪ್ತಿಯಾಗಲಿಲ್ಲ ಹಾಗೂ ಇದಕ್ಕಿಂತಲೂ ಹೆಚ್ಚಿನ ಬಂಡವಾಳ ಮತ್ತೇನು ಇಲ್ಲವೇ ಇಲ್ಲವೆಂದು ನಾನು ಭಾವಿಸುತ್ತೇನೆ. ಅದೇನೆಂದರೆ ಸ್ವಯಂ ಮನುಷ್ಯನು ನೈಜವಾಗಿ ಪರಿಪೂರ್ಣ ಉದ್ದಿಷ್ಟವಾಗಿದ್ದಾನೆ. ಇದನ್ನು ಕೇಳಿ ದರ್ವೇಶನು ಉತ್ತಮ! ಅತಿ ಉತ್ತಮ! ಎಂದು ಉದ್ಗರಿಸಿದನು. ಆಗ ಅವನು ಹೇಳ ಹತ್ತಿದನು. ಈ ವಿಷಯದ ಶೋಧನೆಯಲ್ಲಿ ಅದೆಷ್ಟು ಪುಸ್ತಕಗಳನ್ನು ಬರೆಯಲಾಯಿತು ಅವುಗಳ ರಾಶಿಯು ಒಂದು ಗೋಪುರವೇ ಆಗಬಹುದು. ಆದರೆ ಅವೆಲ್ಲವೂ ಸಿಪ್ಪೆಯ ತರಹವೆನಿಸುತ್ತವೆ. ಅವೆಲ್ಲವುಗಳ ತಿರುಳೇ ಇದೇ ಸಮಸ್ಯೆಯಾಗಿದೆ. ನೀವು ಸಿಪ್ಪೆಯನ್ನು ಬೀಸಾಕಿದ್ದೀರಿ ಹಾಗೂ ತಿರುಳನ್ನು ಪ್ರಾಪ್ತಿಸಿಕೊಂಡಿರುವಿರಿ.

ಸ್ವಯಂ ಏನು? ಇವೇ ಮನುಜ ಸತ್ಯದ ಅಸ್ತಿತ್ವವಾಗಿದೆ.
ಅನ್ಯ ಏನು? ಇದೇ ಚಿತ್ತದ ಶಂಕೆಯ ಸಾಧ್ಯತೆಯಾಗಿದೆ.

ಒಂದು ತೆರೆ ನಾಮದ್ದಾಗಿದೆ. ಅದು 'ಆರೀಫ್'ನ ದಾಗಿದೆ.
ಇನ್ನೊಂದು ಪರಮಪ್ರೇಮಿಯದಾಗಿದೆ. ಅದು ದೈವೀ ಸೂಕ್ಷ್ಮತೆಯಾಗಿದೆ.

ಆಭರಣ–೧೧೬

ಧರ್ಮ ಶರೀರವಾಗಿದೆ ಹಾಗೂ ಪ್ರೇಮವು ಜೀವವಾಗಿದೆ.

ಧರ್ಮಕ್ಕೆ ಮಹತ್ವವನ್ನು ದರ್ವೇಶನು ನೀಡದಿದ್ದರೆ, ಮತ್ತ್ಯಾರು ನೀಡಬಹುದು? ಆದರೆ ಅವನು ಇತರರಂತೆ ಸೆರೆಯಾಳಾಗಿ ಇರುವುದಿಲ್ಲ. ಇತರರು ಭಿನ್ನಮತದ ವಿಷಯದಲ್ಲಿ ಜಾಗ್ರತೆಯಿಂದಿರುತ್ತಾರೆ. ಆದರೆ ಫಕೀರನು ಹಾಗಿರುವುದಿಲ್ಲ. ಈ ಜಾಗ್ರತೆ ಯಾವುದೇ ಬಾದಶಹಾನಿಗೆ ಅಥವಾ ಗೌರವಾದರ ಬಯಸುವ ಶೇಖನಿಗೆ ಅಥವಾ ಖಾಜಿಗೆ ಶೋಭಿತವೆನಿಸುತ್ತದೆ. ಆದರೆ ಫಕೀರನಿಗಲ್ಲ? ಯಾವನಿಗೆ ದೈವೀಜ್ಞಾನ ಪ್ರಾಪ್ತಿಯಾಗುವುದಿಲ್ಲವೋ, ಅವನು ಧರ್ಮದ ಜತೆ ಸಂಬಂಧಿತನಾಗಿರುತ್ತಾನೆ. ಅದು ಅವನ ಅನಿವಾರ್ಯತೆಯೂ ಆಗಿದೆ. ಯಾವ ವ್ಯಕ್ತಿಯು ದಿವ್ಯಜ್ಞಾನದ ಚರಮದಿಂದ ಕೃತಾರ್ಥನಾಗುತ್ತಾನೋ, ಅವನು ಎರಡೂ ಲೋಕಗಳನ್ನು ಒಂದು ಜ್ಞಾನದ ಅಧೀನತೆಯನ್ನು ತಂದುಕೊಳ್ಳುತ್ತಾನೆ. ಆಗ ಅವನು ಧರ್ಮ, ಪಂಥ, ನಂಬಿಕೆ ಹಾಗೂ ರೀತಿ–ರಿವಾಜುಗಳ ನಿಬಂಧನೆಗಳಲ್ಲಿ ಇರುವುದಿಲ್ಲ. ಅವನು ಈ ವಿಷಯ ತುಂಬು ವಿಶ್ವಾಸದಿಂದ ತಿಳಿದಿರುತ್ತಾನೆ. ಅದೇನೆಂದರೆ ಧರ್ಮದ ಸಾರಾಂಶವೂ ಹಾಗೂ ಪಂಥಗಳ ಸಾರವು ದೈವೀ ಪ್ರೇಮ ಹಾಗೂ ಮಹಮ್ಮದರ ರಿಸಾಲತ್‌ನ ಪ್ರೀತಿಯಾಗಿದೆ.

ಯಾವುದು 'ಮ್ವಾರಿಫತ್'ನ ಮಾರ್ಗದಲಿ ನಡೆಯುವವನಾಗಿದ್ದಾನೆ,
ಅವನು ಧರ್ಮದ ತಲೆಯನ್ನು ಬಾಗಿಸುವುದಿಲ್ಲ.

ಅವನು ಆನಂದ ತುಂದಿಲನು ಹಾಗೂ ಸಂತೃಪ್ತನು ಆಗಿಹನು,
ಆದುದರಿಂದ ಪ್ರಾರ್ಥನೆಯ ನುಡಿಗಳು ಅವನ ನಾಲಿಗೆಯ ಮೇಲಿರುವುದಿಲ್ಲ.

ಹೀಗಾಗಿ ಆಂತರ್ಯವಾಗಿ ಹೃದಯದಿಂದ ಪರಮ ದೈವನ ಅಸ್ತಿತ್ವದ ಸತ್ಯತೆಯ ಬಗ್ಗೆ, ಅವನ ಸರ್ವವಿದಿತ ಸತ್ಕರ್ಮಗಳ ಸತ್ಯತೆಯ ಬಗ್ಗೆ, ಅವನ ಪ್ರವಾದಿಗಳಾದ ಮಹ್ಮದ್ (ಸ.ಅ) ರವರ ಸತ್ಯತೆಯ ಬಗ್ಗೆ ಪ್ರವಾದಿಗಳ ಸಹಚರರು ಹಾಗೂ ಅನುಯಾಯಿಗಳ ಸತ್ಯತೆಯ ಬಗ್ಗೆ ಅವನು ಪ್ರಮಾಣೀಕರಿಸುತ್ತಾನೆ. ಇದರ ಹೊರತು ಅನ್ಯವೆಲ್ಲಾ ನಿಕೃಷ್ಟ. ಇದರಿಂದಾಗಿ ಯಾವುದೇ ವ್ಯಕ್ತಿ ಅವನನ್ನು 'ದೇವ ಸಹಭಾಗಿತ್ವವಾದಿ' ಅಥವಾ ಮಿಶ್ರಿತ ಎಂದು ನಿಂದನಾತ್ಮಕವಾಗಿ ನುಡಿದರೆ ಅವನು ಸಂತೋಷ ಪಡುತ್ತಾನೆ.

ಹಾಗೂ ಅಲ್ಲಾಹನಿಗೆ ಧನ್ಯತಾ ಭಾವ ಹೊಂದಿರುತ್ತಾನೆ. ಹೇಳುತ್ತಾನೆ. 'ಎಲ್ಲಾ ಸ್ತುತಿಗಳು ಅಲ್ಲಾಹನಿಗೆ ಮೀಸಲು. ಇದೆಲ್ಲವೂ ಅಲ್ಲಾಹನ ಕೃಪೆಯೇ ಆಗಿದೆ. ಯಾಕೆಂದರೆ ನನ್ನ ಪ್ರೇಮವು ನಿಂದನೆಯಿಂದ ಸಮ್ಮಿಳಿತವಾಗಿದೆ. ಅವನು ಅಪಖ್ಯಾತಿಗೆ ಚರ್ಚೆಯಾಗುವುದಿಲ್ಲ ಹಾಗೂ ಶೋಭಿತವೆನಿಸುವುದಿಲ್ಲ.

ಹೇ ಆತ್ಮೀಯನೇ, ಧರ್ಮದ ಸಂಬಂಧವು ದೇಹದಿಂದಾಗಿದೆ, ಜೀವದಿಂದಲ್ಲ. ಯಾಕೆಂದರೆ ಜೀವವು ಪ್ರಕಾಶವಾಗಿದೆ. ಯಾಕೆಂದರೆ ಇದು ಸಮಸ್ತ ಕಶ್ಮಲ ಹಾಗೂ ಕೊಳಕಿನಿಂದ ಪವಿತ್ರವಾಗಿದೆ. ಯಾವಾಗ ಆರೀಫನು (ದೈವೀಜ್ಞಾನಿಯು) ದೇಹದಿಂದ ವಿಮೋಚನೆಗೊಳ್ಳುತ್ತಾನೆ. ಆಗ ಅವನು ಜೀವದ ಜತೆ ಸಂಬಂಧ ಬೆಳೆಸುತ್ತಾನೆ, ಅಲ್ಲದೇ ಸ್ವಯಂ ಜೀವವಾಗುತ್ತಾನೆ. ನಂತರ ಮತ್ತೇ ದೇಹವನ್ನು ತಿರುಗಿಯೂ ನೋಡುವುದಿಲ್ಲ ಹಾಗೂ ಧರ್ಮದ ಕಡೆ ಮುಖವನ್ನು ಮಾಡುವುದಿಲ್ಲ. ಮೂಲತಃ ಇವೆರಡು ಅರ್ಥಾತ್ ದೇಹ ಮತ್ತು ಧರ್ಮ, ಆರೀಫ್‌ನಿಂದ ದೂರ ಓಡುತ್ತವೆ. ತಮ್ಮ ತಲೆಯ ಮೇಲೆ ಬೂದಿ ಎರಚಿಕೊಳ್ಳುತ್ತಾರೆ. ಇಂಥ ಸ್ಥಿತಿಯಲ್ಲಿ ಅವರು ಮನ್ಸೂರನ (ಮನ್ಸೂರ ಹಲ್ಲಾಜ್) ಸ್ಥಾನದಲ್ಲಿ ಕುಳಿತುಕೊಂಡು, ಸ್ಥಿರತೆಯ ಉದ್ಘೋಷ ಮಾಡಿದರೆ, ನಮ್ಮಂತಹ ಜನರಿಗೆ ಯಾವುದೇ ಆಕ್ಷೇಪಣೆಯಿಲ್ಲ. ಮನ್ಸೂರನು 'ಅನ್ ಅಲ್ ಹಕ್' (ಅಹಂ ಬ್ರಹ್ಮಾಸ್ಮಿ) ಎಂದೇನು ನುಡಿದಿದ್ದನೋ, ಭಾಗವಹಿಸುವುದನ್ನು ಅಲ್ಲಗಳೆಯಲು ನುಡಿಯಲಾಗಿತ್ತು. ಇಲ್ಲವಾದರೆ ಈ ಅಸಹಾಯಕರ. ಬಳಿ 'ಸ್ವಯಂತೆ'ಯೂ ಇರಲಿಲ್ಲ. ಅಹಂಭಾವವೂ ಇರಲಿಲ್ಲ. ಜೀವದ ಸೃಷ್ಟಿಕರ್ತನ ಕೃಪೆಯಿಂದ ಆರೀಫನು ಜೀವದಿಂದಲೂ ಉನ್ನತವಾದರೆ ಅರ್ಥಾತ್ ಜೀವದ ಸಾಕ್ಷ್ಯರೂಪದವಾದರೆ, ಅವನು ಪ್ರಕಾಶದ ಅರ್ಹತೆಗೆ ತಲುಪುತ್ತಾನೆ. ಅರ್ಥಾತ್ ಆತ್ಮವು ತನ್ನನ್ನು ಸಹ ಬಿಡುತ್ತದೆ ಹಾಗೂ 'ಸ್ವಯಂರಹಿತ'ವಾಗುತ್ತದೆ. ಈ ಸ್ವಯಂ ರಹಿತತೆಯೇ 'ದೈವೀ ಕೋಶ' ವಾಗಿದೆ.

'ಏಕದೇವ ವಿಶ್ವಾಸಿ' ಇಲ್ಲದಿದ್ದರೂ ಅನುಮೋದಿಸಲ್ಪಟ್ಟವನನ್ನು ನೀಡು,
ಇಂತಹವರ ಅಕಟಗಳನ್ನು ವಿಶ್ವಾಸಿಗಳು ನಂಬುತ್ತಾರೆ.

ಆದರೆ ಯಾರ ಬಂಧನದ ನಿಯಮ ಪಾಲಕನೂ ಅಲ್ಲ,
'ನವೀನಾಚಾರ' ನಂಬುವವರಿಗೆ ಕೊಡಬಾರದು ವೇದನೆ.

ಪಥಭ್ರಷ್ಟರನು ಸನ್ಮಾರ್ಗದಲಿ ನಡೆಯುವಂತೆ ಮಾಡಲಿ,
ಖಾಜಿಯಾಗಲಿ, ಶೇಖ್‌ನಾಗಲಿ ಅಥವಾ ಬಾದಶಹಾನೇ ಮಾಡಲಿ.

ಬಿದತ್ ಅಥವಾ ಇಸ್ಲಾಮಿನಲ್ಲಿ ದೈವಾಜ್ಞೆಗಳ ಹೊರತು ನವೀನಾಚಾರಗಳನ್ನು ಜಾರಿಗೆ ತರುವುದು ಧರ್ಮ ವಿರೋಧ ಎನಿಸುತ್ತದೆ.

ಆದರೆ ದರ್ವೇಶನು ಅದರ ಚಿಂತೆ-ಕೌಶಲಗಳಲ್ಲಿ ಇರನು,
ಸ್ನೇಹಿತನ ನಿವಾಸವು ಆಗಿಹುದು ಅವನ ಸ್ಥಾನವು.

ಪರಿಪೂರ್ಣ ಸ್ನೇಹವು ಆಗಿಹುದು ಯಾರ ತತ್ವಗಳು,
ಜೀವನದ ಚಲನೆಯು ಅವನ ಕಕ್ಷೆಯನೇ ಅವಲಂಬಿಸಿವೆ.

ಧರ್ಮ ಹಾಗೂ ದೇಹವು ಅವನ ಮಾರ್ಗದ ಶಿಲೆಗಳು,
ಅರ್ಥಾತ್ ಇವೆರಡರಿಂದ ಅವನ ಜೀವದ ಕ್ಲೇಶಗಳು.

ದೇಹವನು ಬಿಟ್ಟರೆ, ಧರ್ಮವಿರುವುದಾದರೂ ಎಲ್ಲಿ?
ಚಂದ್ರ ಉದಯಿಸದಿದ್ದರೆ ಮತ್ತೆಲ್ಲಿ ರಾತ್ರಿಯ ನಿಶೆಯು?

ಯಾರ ದೈವೀಜ್ಞಾನದಲಿ ಇಹುದು ಏನೋ ಲೋಪವು,
ಅಂಥಹವರು ಬಂದಿಹುರು ಧಾರ್ಮಿಕ ಶಾಲೆಯೊಳಗೆ.

ಯಾರ 'ಮ್ವಾರಿಫತ್'ನಲಿ ಇರುವರು ಪರಿಪೂರ್ಣರು
ಧರ್ಮ ಸೌಂದರ್ಯದಿಂದ ಇಲ್ಲವರು ಆಕರ್ಷಿತರು.

ಆದರೂ ಹೃದಯ-ಜೀವದಿಂದ ಇಹುದು ಅದರ ವಿಶ್ವಾಸ,
ದೇವರು ಸತ್ಯವಾಗಿಹನು, ಅದರ ಪ್ರತಿ ಸತ್ಯವಾಗಿಹುದು ಕುರಾನ್.

ಮತ್ತೆ ದೇವ ಪ್ರವಾದಿಯೂ ಆಗಿಹರು ಸತ್ಯವು,
ಅವರಿಂದ ಪಡೆದಿಹರು ಪಾಠವನು ಅವರ ಸಂಗಾತಿಗಳು.

ಜನರು ಈ ಸತ್ಯವನು ತಪ್ಪೆಂದು ತಿಳಿದರೆ,
ಅದನು 'ನಿಷೇಧ ವಿಧಿ'ಯನ್ನು ಪರಿಪೂರ್ಣಗೊಳಿಸಲಿ.

ಇದರಿಂದ ಆಗುವನು ಅವನು ಇನ್ನು ಸಂತುಷ್ಟನು,
ಮಾಡುವನು ದೇವರ ಕೃತಜ್ಞತೆಗಳ ಅರ್ಪಣೆ ಅವನು.

ತನ್ನ ಪ್ರೇಮದಲ್ಲಿ ಅವನು ಲಜ್ಜಿತಗೊಳಿಸಿದನು ತನ್ನನ್ನು,
ಇದು ಕೊಡುಗೆಯಾಗಿದೆ ಜೊತೆಗೆ ದೈವೀ ಶ್ರೇಷ್ಠತೆಯೂ ಆಗಿದೆ.

ಪ್ರೇಮದಲಿ ನಿಂದನೆಯು ಕಡ್ಡಾಯವಾಗಿದೆ. ಸ್ನೇಹಿತನೇ,
ಇಂದಿನಿಂದ ಅಲ್ಲ, ಇದು ಆದಿಯಿಂದ ಪರಿಪಾಠವಿದೆ.

ಈ ನಿಂದನೆಯಿಂದ ದೈವೀ ಪ್ರೇಮವು ವೃದ್ಧಿಸುತ್ತವೆ,
ಪ್ರೇಮವೂ ಇನ್ನೂ ಉನ್ನತಗೇರಿ ಪರಿಮಾರ್ಜವಾಗುತ್ತದೆ.

ಪ್ರೇಮ ದೇಹವಾಗಿದೆ, ನಿಂದನೆಯು ಇದರ ಜೀವ,
ಶೈಶವ ಪ್ರೇಮದಿಂದ ತಲುಪುವನು ಅವನು ಪ್ರೌಢಾವಸ್ಥೆ.

ಯಾರ ಮೇಲೆ ಪ್ರೇಮವು ತನ್ನ ಪಾಶವನು ಬೀಸಿಹುದೋ,
ಅವನು ನಿಂದನೆಯನು 'ವಿಭುವಿನಿಂದ ಬಯಸುತಿಹನು

'ಬಹರಿಯೇ' ಎಲ್ಲಿ ನಿಂದನೆ ಇಲ್ಲ ಆ ಪ್ರೇಮವಾದರೂ ಏನು?
ಗಂಟು ಕೊಂಡಿಗಳಲ್ಲದಿದ್ದರೆ ನೀಳಕೂದಲಾದರೂ ಏನು?

ಆಭರಣ–೧೧೭

ಭೇಟಿಯ ಆಕಾಂಕ್ಷೆಯ ಸಂಬಂಧವು ದಿವ್ಯಜ್ಞಾನದಿಂದಾಗಿದೆ ಹಾಗೂ ಬೆಡಗು–ಬಿನ್ನಾಣದ ಸಂಬಂಧವು ಪ್ರೇಮದಿಂದಾಗಿದೆ.

ಯೌವ್ವನದ ಅವಧಿಯು ಹದಿನೈದರಿಂದ ಇಪ್ಪತ್ತೈದು ವರ್ಷದವರೆಗಿನ ವಯೋಮಾನದವರೆಗೆ ಇರುತ್ತದೆ. ದೇವರ ಅತ್ಯಧಿಕ ಕೃಪೆಯಿಂದ ಈ ಅವಧಿಯಲ್ಲಿ ಸತ್ಯತೆಯ ಔದಾರ್ಯಯು ಅಧಿಕಧಿಕವಾಗಿ ಅನುಗ್ರಹವಾಗುತ್ತಾ ಇರುತ್ತದೆ. ಇಂಥ ಸಮಯದಲ್ಲಿ ಪರಮ ಪ್ರೇಮದ ಖಡ್ಗದ ಯಾವುದೇ ಗಾಯವು ಹೃದಯದ ಮೇಲಾದರೆ ಅಥವಾ ಸತ್ಯದ ಪ್ರೇಮಾನ್ವಷಣೆಯಲ್ಲಿ ಯಾವುದೇ ಪೆಟ್ಟಾದರೆ, ಆ ಗಾಯವು ಸದಾ ಸ್ರವಿಸುವ ಒಂದು ಭಯಂಕರ ಹುಣ್ಣಾಗುತ್ತದೆ. ಅರ್ಥಾತ್ ಅದು ಎಂದೂ ಗುಣಮುಖವಾಗುವುದಿಲ್ಲ. ಈ ಗಾಯವು ವಾಸಿಯಾಗದೇ ಇರುವುದರಲ್ಲಿ ಪ್ರೇಮಿಯ ಒಳಿತಿದೆ. ಈ ಪರಿಸ್ಥಿತಿಯಲ್ಲಿ ಅಕಸ್ಮಾತ್ತಾಗಿ ಪರಮ ಗೌರವಾನ್ವಿತ ದೈವನು ಸೌಭಾಗ್ಯದ ತೋಳನ್ನು ಹಿಡಿದುಕೊಳ್ಳುವ ಸಾಧ್ಯತೆಗಳಿವೆ ಹಾಗೂ ಈ ಸ್ಥಿತಿಯಲ್ಲಿಯೇ ಪ್ರೇಮಿಯ ಈ ನಶ್ವರ ಹಾಗೂ ಅಪ್ರಮಾಣಿಕ ಲೋಕದಿಂದ ಪಯಣಿಸಬಹುದು.

ಈ ವಯೋವೃದ್ಧ ಲೋಕದಲಿ ಇಹುದು ಕುತಂತ್ರ ಹೇ ಬುದ್ಧಿವಂತನೇ,
ಇದರ ಖ್ಯಾತಿಯಲ್ಲಿ ನೀನೇಕೆ ಆಗುವೆ ಹುಚ್ಚನು.

ಯಾರು ಇದನು ಸರಿದಾರಿಗೆ ತರಲು ಪ್ರಯತ್ನಿಸಿದರೋ
ಆದರು ಅವರೇ ತಪ್ಪು ದಾರಿಯಿಂದ ಮಾರ್ಗಭ್ರಷ್ಟರು.

ಆ ಗೌರವಾನ್ವಿತ ಘನಸತ್ಯನ ಆಸ್ಥಾನದಲ್ಲಿ ತಪ್ಪು–ಒಪ್ಪುಗಳ ತುಲನೆಯ ಸಂಪ್ರದಾಯ ಪರಿಪೂರ್ಣವಾಗಿ, ಪರೀಕ್ಷೆಯ ವಿಧಾನದ ಕೆಲವು ವಿಧಿಗಳಿವೆ. ಅರ್ಥಾತ್ ಮೊದಲು ಒಂದು ಚಿಕ್ಕ ಹರಳಿನಿಂದ ಹೊಡೆಯಲಾಗುತ್ತದೆ. ಅದು ಸ್ವೀಕರಿಸಿದಾಗ,

ಒಂದು ದೊಡ್ಡ ಕಲ್ಲನ್ನು ಎಸೆಯಲಾಗುತ್ತದೆ. ಇದೂ ಸ್ವೀಕಾರಾರ್ಹವಾಗಿ, ಅವನು ಇದರ ನಂತರ ಸಂತಸ ಭಾವದಲ್ಲಿದ್ದರೆ, ಅಲ್ಲಾಹನು ತನ್ನ ಆ ದಾಸನಿಂದ ಸಂಪ್ರೀತನಾಗಿ, ತನ್ನ ಪವಿತ್ರ ಆಸ್ಥಾನದಲ್ಲಿ ಕರೆಯಲ್ಪಡುತ್ತಾನೆ. ಅವನು ಸಂದರ್ಶನದ ಅರ್ಹತೆಗೆ ಸೂಕ್ತವೆನೆಸಿದರೆ, ಅವನಿಗೆ ಭೇಟಿಯ ಸೌಭಾಗ್ಯ ಒದಗಿಸಲಾಗುತ್ತದೆ. ಆದರೆ ಸ್ವಚ್ಛಂದತೆಯ ಅಪರಾಧಿಯಾಗಿದ್ದರೆ, ಉಡುಪನ್ನು (ಅರ್ಥಾತ್ ಭೇಟಿಯ ಅರ್ಹತೆಯನ್ನು) ದಯಪಾಲಿಸಲಾಗುತ್ತದೆ. ಭೇಟಿಗೆ ಅರ್ಹನು ಆ ವ್ಯಕ್ತಿಯಾಗಿದ್ದಾನೆ, ಯಾವನು ಸ್ವಯಂ ಅನ್ನು ಮಣ್ಣಿನ ತರಹ ಭೂಮಿಯ ಮೇಲೆ ಹಾಕುತ್ತಾನೆ. ಯಾವನಾದರೂ ಇವರ ತಲೆಯ ಮೇಲೆ ತನ್ನ ಪಾದವನ್ನು ಇಟ್ಟರೆ ಇವನು ಅಪಮಾನಿತನಾಗುವುದಿಲ್ಲ. ಅವನ ಅಸ್ತಿತ್ವದಿಂದ ಇರುವೆಯ ಹೃದಯಕ್ಕೂ ಪೆಟ್ಟಾಗುವುದಿಲ್ಲ ಹಾವಿನ ಶಿರಕ್ಕೂ ಯಾವ ಸಂಕಷ್ಟವೂ ಬರುವುದಿಲ್ಲ.

ತಿರುಕನು ಅವನಾಗಿದ್ದಾನೆ, ಯಾವನು ಭೂಮ್ಯಾಕಾಶಗಳನ್ನು ಅರಸು–ಆಳನ್ನು, ಧನ–ಮಣ್ಣನ್ನು, ಮೃತ್ಯು-ಬದುಕನ್ನು, ದುಃಖ–ಸುಖವನ್ನು, ತನ್ನವರನ್ನು ಇತರರನ್ನು ಒಂದೇ ದೃಷ್ಟಿಯಿಂದ ನೋಡುವವನಾಗಿದ್ದಾನೆ. ಅವನು ಧರ್ಮಶಾಸ್ತ್ರ ಸಮ್ಮತವಲ್ಲದೆ ಯಾವ ಕರ್ಮಕ್ಕೂ ಸಿದ್ದನಿರುವುದಿಲ್ಲ. ಹಾಗೆಯೇ ಯಾವುದೇ ನಿಷಿದ್ಧ ಶಬ್ದಗಳನ್ನು ನುಡಿಯುವುದಿಲ್ಲ. ಸಂದರ್ಶಕರಿಗೆ ದೈವೀಜ್ಞಾನದ ಸಂಬಂಧಿತವಾಗಿರುತ್ತವೆ. ಆದರೆ ಅದರಲ್ಲಿ ತಿರುಕನ ಸ್ಥಿತಿ ಏನೂ ಉಳಿದಿರುವುದಿಲ್ಲ.

ಹೇ ಆತ್ಮಿಯನೇ, ಯಾವುದೇ ತಿರುಕನು ತನ್ನದೇ ಸ್ಥಾನದಲ್ಲಿ, ಅಥವಾ ಬೇರ್ಯಾವುದೇ ದೊಡ್ಡ ನಗರದಲ್ಲಿ ವಾಸ್ತವ್ಯ ಮಾಡಿದರೆ, ಅಲ್ಲಿಯ ಸಮಸ್ತ ನಿವಾಸಗಳು, ಅಲ್ಪರೂ ಮಹನೀಯರು ಎಲ್ಲರೂ ಅವನ ಕಡೆಗೆ ಧಾವಿಸುತ್ತಾರೆ. ಅವನ ಭೇಟಿಯನ್ನು ತಮ್ಮ ಸೌಭಾಗ್ಯವೆಂದು ಬಗೆಯುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ಅವನ ಸುತ್ತಲೂ ಜನಸಮೂಹವಿರುತ್ತದೆ. ಆ ಜನರ ಅನಾಪೇಕ್ಷಿತ ಗದ್ದಲದಿಂದ ಅವನ ಏಕಾಂತತೆ ಹಾಗೂ ಏಕಾಗ್ರತೆಗೆ ಚ್ಯುತಿಯಾಗುತ್ತದೆ. ಈ ಅಪ್ರಯೋಜಕ ಗದ್ದಲದಿಂದ ಅವನ ಚಿತ್ತಚಾಂಚಲ್ಯವಾಗುತ್ತದೆ ಹಾಗೂ ಅವನ ಜೀವನ ಉಡುಪು ಮಲಿನವಾಗುತ್ತದೆ. ಆತ್ಮದ ಹಾಸು ಕೊಳಕಾಗುತ್ತದೆ. ಅಂತಿಮವಾಗಿ ನಮಾಜಿನ ಬಟ್ಟೆಯ ಚಿಂತೆಯಲ್ಲಿ ಹೊರ ಬರುತ್ತಾನೆ. ಅರ್ಥಾತ್ ಸಂತೆಯ ದಿನ ಸ್ಥಳೀಯರು ಹಾಗೂ ಅಕ್ಕಪಕ್ಕದ ಊರಿನ ನಿವಾಸಗಳು ಅಧಿಕ ಸಂಖ್ಯೆಯ ಜನ ಸೇರಿರುತ್ತಾರೆ. ಅಲ್ಲಿ ತನ್ನ ನಿವಾಸದಿಂದ ಹೊರಬಂದು ಸಂತೆಯ ಸ್ಥಳದ ಕಡೆಗೆ ನಡೆಯುತ್ತಾನೆ. ಸಮೂಹದ ಮಧ್ಯೆ ನಿಂತು, ಪ್ರತಿಯೊಬ್ಬರಿಗೂ ಬಾಧಕನಾಗುವ ಬದಲು ಅಂಗಸಾಮುದ್ರಿಕನ ಸಹಾಯದಿಂದ ಇಂಥ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾನೆ. ಯಾವನು ಕಠೋರ ನುಡಿಗಳನ್ನು ಸಹಿಸುವುದಿಲ್ಲ ಹಾಗೂ ತೀವ್ರ ಸಂಭಾಷಣೆಯನ್ನು ತಾಳಿಕೊಳ್ಳು ಸಾಮರ್ಥ್ಯ

ಹೊಂದಿರುವುದಿಲ್ಲ ಮತ್ತೆ ಆ ವ್ಯಕ್ತಿಯನ್ನು ನಿಂದನಾತ್ಮಕ ಬೈಗುಳದಿಂದ ಸಂಭೋಧಿಸುತ್ತಾನೆ. ಆ ನಿಂದನೆಯ ನುಡಿಗಳು ಯಾವ ಹಂತದಲ್ಲಿರುತ್ತವೆಂದರೆ ಆ ವ್ಯಕ್ತಿಯ ಅಣ್ಣ ತಮ್ಮಂದಿರಲ್ಲದೆ ನೌಕರ-ಚಾಕರರು ಸಹ ಸೇರಿ, ಇವನ ಜೀವವನ್ನು ತೆಗೆಯಲು ಕಲ್ಲಿನ ಸುರಿಮಳೆ ಪ್ರಾರಂಭಿಸುತ್ತಾರೆ ಹಾಗೂ ದೊಣ್ಣೆಯಿಂದ ಹೊಡೆಯುತ್ತಾರೆ. ಮತ್ತೆ ಇವನ ಎರಡೂ ಕಾಲನ್ನು ಹಿಡಿದು ಎಳೆಯುತ್ತಾ ಬಜಾರಿನ ಮಧ್ಯದಲ್ಲಿ ತರುತ್ತಾರೆ. ಈ ಪೆಟ್ಟಿನಿಂದ ತಿರುಕನು ಕೆಡುಕಿನ ಹೂಜಿಯಿಂದ ಮೂರು ಅಕ್ಷರದಂತೆ, ಮೂರು ದೈವಾಜ್ಞೆಗಳು ಸಿದ್ಧವಾಗುತ್ತವೆ. ಒಂದು ಏನೆಂದರೆ ಪ್ರಾರಂಭದಿಂದ ಏನು ಹೇಳುತ್ತಾ ಬಂದಿರುವನು, ಅಂತ್ಯದವರೆಗೆ ಅದನ್ನೇ ಹೇಳುವನು, ಎರಡನೆಯದೆಂದರೆ ಬಿಲ್ಲು, ಕೊಡಲಿಯಿಂದಲೇ ಪೆಟ್ಟಾದರೂ, ತನ್ನ ಕೈಗಳಿಂದ ಇದರ ತಡೆಗೆ ಪ್ರಯತ್ನಿಸದೇ ಇರುವುದು, ಬದಲಾಗಿ ತನ್ನ ಎರಡು ಕೈಗಳನ್ನು ಬಗಲಿನಲ್ಲಿ ಇಟ್ಟುಕೊಂಡು ಸುಮ್ಮನೆ ನಿಲ್ಲುವುದು. ಮೂರನೆಯದು ಎಂದರೆ ಹೊಡೆಯುವವನ ಬಗ್ಗೆ ಯಾವುದೇ ಆಕ್ಷೇಪ ಮಾಡದಿರುವುದು, ಹಾಗೂ ಈ ಘಟನೆಯನ್ನು ಮತ್ತೆ ಸ್ಮರಿಸದೇ ಇರುವುದು. ಇಂತಹ ಹೊಡೆತಗಳು ತಿರುಕರ ರಹಸ್ಯ ಹಾಗೂ ಸ್ವೇಚ್ಛಿಗಳ ಪ್ರಾರ್ಥನೆಯಾಗಿದೆ. ಅವನ ಅನುಯಾಯಿಗಳು ಹಾಗೂ ಪ್ರಾಮಾಣಿಕ ವ್ಯಕ್ತಿಗಳು ಈ ಸ್ಥಿತಿಯನ್ನು ಕಂಡು ಹೇಳುತ್ತಾರೆ, ಈ ವ್ಯಕ್ತಿಯೂ ನಿಕೃಷ್ಟ ಹಾಗೂ ಅಲ್ಪನಾಗಿದ್ದನು. ಅವನು ಸುಸಂಸ್ಕೃತ ಹಾಗು ಗೌರವಾನ್ವಿತ ಜನರಲ್ಲಿ ಇರುತ್ತಿದ್ದರೆ, ಮಹಾಮಹಿಮ ದೇವರು ಇವನಿಗೆ ಉಚಿತವಾಗಿ ನೀಡಿದ್ದ ನಾಯಕನ ಸ್ಥಾನವನ್ನು ಕೈಯಿಂದ ಜಾರುವಂತೆ ಮಡಿಕೊಳ್ಳುತ್ತಿರಲಿಲ್ಲ. ವಿಷಯವನ್ನು ಈ ಮಟ್ಟಕ್ಕೆ ತಂದು ಅಪಮಾನಿತನಾಗುತ್ತಿರಲಿಲ್ಲ. ಇದರಿಂದಾಗಿ ಅವನ ಎಲ್ಲಾ ಅನುಯಾಯಿಗಳು ಅವನಿಂದ ವಿಮುಖರಾಗುತ್ತಾರೆ. ಕೇವಲ ಒಂದೆರಡು ವ್ಯಕ್ತಿಗಳ ಹೊರತು ಆ ವ್ಯಕ್ತಿಗಳು ಅವನ ಬಗ್ಗೆ ಇನ್ನೂ ಅಧಿಕ ಗೌರವಾದರ ಹಾಗೂ ವಿಧೇಯರಾಗುತ್ತಾರೆ ಹಾಗೂ ತಿಳಿಯುವುದೇನೆಂದರೆ ಇದು ಸಿಂಹ ಪುರುಷನ ನಡೆಯಾಗಿದ್ದು, ಕತ್ತೆ ಕಿರುಬನ ನಡೆಯಲ್ಲಾ ಎಂದು ತಿಳಿಯುತ್ತಾರೆ.

ಯಾವನು ಭೇಟಿಯ ಮಾರ್ಗದ ಸಹಾಯಕನಾಗಿದ್ದಾನೆ,
ರಹಸ್ಯದ ಬಾಗಿಲು ಅವನಿಂದಲೇ ತೆರೆಯಲ್ಪಡುತ್ತದೆ.

ಎಣಿಸುವುದೆ ಇಲ್ಲ ತನ್ನನ್ನು ಅವನು ಅನೇಕರಲ್ಲಿ,
ವಿನಯಶೀಲನಾಗಿದ್ದು, ಮಣ್ಣಿನ ತೇಪೆಯನು ಹೊಂದಿಹನು.

ಭೇಟಿಯಾಗುವನು ಅವನು ತನ್ನ ಬೂದಿಯ ಮೇಲೆ,
ಆದರೆ ಇಹುದು ಅವನ ಬಾವುಟವು ಗಗನದಲಿ.

ಯಾವ ರೀತಿ 'ಅಜೀಜ್' ನಲ್ಲಿ 'ಜೀಮ್' ಆಗಿಹುದು ಸುಪ್ತ,
ಹಾಗೂ ತನ್ನ ಭೇಟಿಯ ಆಪೇಕ್ಷೆಯ ಬಗ್ಗೆ ಅಭಿಮಾನಿತನು.

ತಿರುಕರ ಮಾರ್ಗವನು, ಯಾವನು ನಡೆಯುತಿರುವನು,
ಅವನು ಕೆಂಪು ಪುಷ್ಪದ ಮಧ್ಯೆ ಕಪ್ಪು ಚುಕ್ಕೆ ಅಂತಿಹನು.

ಅಪಮಾನದ ಭಯವಿಲ್ಲ, ಪ್ರಸಿದ್ಧಿಯ ಅಭಿಲಾಷೆಯಿಲ್ಲ,
ಇವನಿಗಿಲ್ಲ ವರ್ಣ ವೈಭವ ಪ್ರದರ್ಶನದ ಆಸಕ್ತಿಯು.

ಪ್ರೇಮದ ಹೊರತು ಇವನಿಗಿಲ್ಲ ಬೇರೆ ಅಭಿರುಚಿಯು,
ಕಾನನದಲಿ ಇಹುದು ಸಿಂಹನಿಗೆ ಸಂತೃಪ್ತಿಯು.

ಬಡವನೂ ರಾಜನೂ ಒಂದೇ ಆಗಿಹನು ಇವನಿಗೆ,
ಇವನಿಗಿಹುದು ಪರ್ವತವು, ಒಣಹುಲ್ಲು ಸಮಾನವು.

ಇವರ ಅಸ್ತಿತ್ವ ಹಾಗೂ ಅರ್ಹತೆಗಳಲಿ ಸಮಾನರು ಎಲ್ಲರೂ,
ಹಾಗೆಯೇ ಜೀವ-ಮೃತ್ಯುವಿನಲಿ ಇಹರು ಸಮಾನರು ಎಲ್ಲರೂ.

ಮಣ್ಣಿರಲಿ, ಚಿನ್ನವಿರಲಿ, ಹೂವಿರಲಿ, ಮುಳ್ಳಿರಲಿ,
ನಿರ್ಜೀವ ಹಗ್ಗವಿರಲಿ, ಜೀವವಿರದ ಹಾವಿರಲಿ.

ಎಲ್ಲವೂ ಅವನ ನೋಟದಲಿ ಒಂದೇ ಇಹವು,
ಸತ್ಯದರ್ಶನದ ವೀಕ್ಷಣೆಯಲಿ ಒಂದೇ ಇಹವು.

ಆರಿಫನು ಅವನು, ಯಾವನು ಪ್ರೇಮದಲಿ ಆಗಿಹನು ತಲ್ಲೀನನು
ಹೀಗಾಗಿ ಇಬ್ಬರಲಿ ಇಲ್ಲ ಅಂತಹ ಬೃಹತ್ ವ್ಯತ್ಯಾಸ.

ಇವನು ಚಿಟ್ಟೆಯಾಗಿದ್ದರೆ, ಅವನು ಆಗಿಹನು ಬುಲ್‌ಬುಲ್
ಪ್ರೀಯಕರನಾಗಿಹನು, ಅಗ್ನಿ ಮತ್ತು ಹೂವು.

'ಬಹರಿ' ನೀ ಭೇಟಿಯ ಆಕಾಂಕ್ಷಿಯಾಗು,
'ತಿರುಕ'ತನದಲ್ಲೂ ಆಗು ನೀ ಗೌರವಾನ್ವಿತನು.

ಉರ್ದು 'ಅಜೀಜ್' ಶಬ್ದ 'ಜೀಮ್' ಅಕ್ಷರು ಮೌನವಾಗಿರುತ್ತವೆ

ಆಭರಣ-೧೧೮

'ತಿರುಕ' ತನದ ಏಕತ್ವ

ಪ್ರಕಾಶದ ಮೂಲವಾಗಿದ್ದ ನನ್ನ ಪೀರ್-ಮುರ್ಷದ್ ನುಡಿಯುತ್ತಿದ್ದರು. ಅದೇನೆಂದರೆ ಒಂದು ಸಲ ದೈವೀಜ್ಞಾನಿಗಳ ಹಾಗೂ ವಾಕ್ಚುತರರು ಸೇರಿದ್ದರು. ಆಗ ಅವರ ಪೀರ್ ಹಜ್ರತ್ ಶಾಹ ಅಬ್ದುಲ್ ಸತ್ತಾರ್೧ ಅವರೂ ಸಹ ಅಲ್ಲಿಗೆ ಆಗಮಿಸಿದರು. ಒಬ್ಬ ವಯೋವೃದ್ಧ ಮಹನೀಯರು ನಿರಂತರವಾಗಿ ದೈವೀ ವಚನ ಉಲ್ಲೇಖಿಸುತ್ತಿದ್ದರು. ಅವುಗಳಲ್ಲಿ ಒಂದು ಏನೆಂದರೆ ಪರಮ ಸತ್ಯ ಶ್ರೇಷ್ಠಾತಿಶ್ರೇಷ್ಟನಾದ ದೈವನು ಯಾವುದೇ ಮಿತಿ ಹಾಗು ಪರಾಕಾಷ್ಠೆಯನ್ನು ಹೊಂದಿರುವುದಿಲ್ಲ. ನೆರೆದಿದ್ದರೆಲ್ಲರು ಅವರ ಹೇಳಿಕೆಗೆ ಸಹಮತಿ ವ್ಯಕ್ತಪಡಿಸಿದರು. ಆದರೆ ಆ ಕಾಲದ ತಿರುಕ ಸಂತರಾಗಿದ್ದ ಹಜ್ರತ್ ಶಾಹ್ ಅಬ್ದುಲ್ ಸತ್ತಾರ್‌ರವರು 'ದೈವನು ಮಿತಿ ಹೊಂದಿದ್ದಾನೆ' ಎಂದು ನುಡಿದರು. ಆಗ ಎಲ್ಲರೂ ವಿಚಾರಿಸಿದರು. 'ಅದ್ಹೇಗೆ' ಎಂದು. ಆಗ ಅವರು ನುಡಿದರು 'ಈ ಸಮಸ್ತದ ಪ್ರಕಟರೂಪವು ಒಂದು ಆಗಿದೆ. ಹೀಗೆ 'ಒಂದು' ಎಂದು ಹೇಳುವುದಿರಂದ ಅದು ಮಿತಿಗೆ ಒಳಪಟ್ಟಿದೆ. ಹೀಗಾಗಿ ಯಾವುದೇ ಪ್ರಕಟರೂಪನ ಪ್ರಕಟಣೆಗಳು ಅಮಿತ ಹಾಗೂ ಅಗಣಿತವಾಗಿದ್ದರೆ, ನೀವು ಹೇಳುವಂತೆ ಅವನಿಗೆ ಯಾವುದೇ ಮಿತಿ ಇಲ್ಲ.

ಪವಿತ್ರ ದಿವ್ಯವಾಣಿ* ಹಾಗೂ ಹದೀಸ್‌ಗಳು ಪ್ರವಾದಿಯಿಂದ ಸಿದ್ಧವಾಗಿದೆ.
ಆದುದರಿಂದ ಪವಿತ್ರ ದೇವ ಅಸ್ತಿತ್ವಕ್ಕೆ ದುಸ್ಸಾಧ್ಯವು ಎಚ್ಚರಿಕೆ.

ಸಂಪ್ರದಾಯ ವಿರೋಧಿಯೆಂದು ಈ ಜಗವು ತಿಳಿಯುತಿದೆ ತಿರುಕರನು,
ಸಮಸ್ತದಲ್ಲಿ ಒಂದು ಎಂದು ತಿಳಿಯುವುದರಿಂದ ಆಯಿತು ಪ್ರತಿಬಂಧ.

---

೧. ಶಾಹ ಅಬ್ದುಲ್ ಸತ್ತಾರ್ ಹಾದಿ ಅಲ್‌ಮುತ್ತಫಿ (೧೧೭೫ ಹಿಜ್ರಿ. ಹಜ್ರತ್ ಬಹರಿಯವರ ತಾತಾರಾಗಿದ್ದರು. ಇವರು ೧೨೦ ವರ್ಷಗಳ ದೀರ್ಘಾಯುಷ್ಯವನ್ನು ಪಡೆದಿದ್ದರು. ಇವರ ಪವಿತ್ರ ಗೋರಿಯು ಚಪ್‌ಗೇರಿ ತಾಲೂಕಾ ಅಧೋನಿ ಜಿಲ್ಲೆ ಬಳ್ಳಾರಿಯಲ್ಲಿದೆ. ಇವರು ತಮ್ಮ ಚಿಕ್ಕಪ್ಪ ಸಯ್ಯದ್ ಮೀರಾನ್ ಅಶ್ರಫ್ ಖಾದರಿಯವರ ಮುರೀದ್ ಹಾಗೂ ಸೂಫಿ ಉತ್ತರಾಧಿಕಾರಿಯಾಗಿದ್ದರು. ಇವರು ಹಜ್ರತ್ ಅಮೀನುದ್ದೀನ್ ಅಲಾರವರ ಸಮಕಾಲೀನರಾಗಿದ್ದರು. ಇವರ ಪತ್ನಿ 'ಉಮ್ಮೆ ಸಲ್ಮಾ' ಖ್ವಾಜಾ ಬಂದೇನವಾಜ್ ಗೇಸುದರಾಜರ ಸಂತತಿಯಿಂದ ಇದ್ದರು.

ಆಭರಣ–೧೯೯

‘ಅಹಂ’ಭಾವದ ಸತ್ಯತೆ

‘ಏಕತ್ವ’ದ ಅಭಿಲಾಷೆ ಇದ್ದರೆ, ಹೇ ಹೃದಯವೇ ನೀ ಮನ್ಸೂರನ ಜತೆಯಾಗು ಬಯಕೆಯ ಬಯಕೆ ಇದ್ದರೆ, ನೀ ಇಲ್ಲಿಂದ ದೂರ ಹೋಗು.

ಯಾವ ವ್ಯಕ್ತಿಯು ಮನ್ಸೂರರ ಸಮರ್ಥನೆ ಮಾಡುವುದಿಲ್ಲವೋ ಅವನು ‘ಏಕತ್ವ’ದ ಸ್ವಾದದಿಂದ ಪರಿಚಿತನಾಗಿರುವುದಿಲ್ಲ. ದೇವರಿಗೆ ಗೊತ್ತು, ಅವರು ಇದರಲ್ಲಿ ಅದೇನು ಮರ್ಮವನು ಕಂಡರೋ, ‘ಏಕತ್ವ’ಕ್ಕಾಗಿ ತಮ್ಮ ಶಿರವನ್ನೇ ಅರ್ಪಿಸಿದರು. ಹಾಗೂ ಜಗದಲ್ಲಿ ಹೆಸರುವಾಸಿಯಾದರು. ಅದು ಎಲ್ಲಿಯವರೆಗೆ ಎಂದರೆ ಸಮಸ್ತ ಜಗತ್ತು ಎರಡು ಬಣಗಳಲ್ಲಿ ವಿಂಗಡನೆಯಾಯಿತು. ಇವರಿಬ್ಬರಲ್ಲಿ ಪ್ರತಿಯೊಬ್ಬರ ಬಳಿಯೂ ಸಶಕ್ತ ತರ್ಕ ಹಾಗೂ ಸಮರ್ಥ ವಾದಗಳಿದ್ದವು. ಅರ್ಥಾತ್ ಕೆಲವು ಜನರು ನುಡಿಯುತ್ತಾರೆ – ಒಬ್ಬ ಮಣ್ಣಿನ ಸಾದೃಶನಾದ ಅಲ್ಪನು ದೈವತ್ವದ ಘೋಷಣೆಯನ್ನು ಮಾಡಿದನು ಹಾಗೂ ಅಂತಿಮವಾಗಿ ನೇಣಿಗೆ ಏರಿಸಲ್ಪಟ್ಟನು. ಮತ್ತೆ ಬೆಂಕಿ ಹಚ್ಚಲಾಯಿತು. ಅವನ ಬೂದಿಯನ್ನು ನೀರಿನಲ್ಲಿ ಎಸೆಯಲಾಯಿತು. ಇನ್ನೊಂದು ಗುಂಪು ಹೇಳುತ್ತದೆ ‘ಯಾವುದೇ ವ್ಯಕ್ತಿಯ ಮುಳ್ಳು ಚುಚ್ಚಿದರೆ, ಅವನ ಉಸಿರಾಟವು ನಿಂತು, ಅವನು ಸಾವಿನ ಕಡೆ ಸಾಗುತ್ತಾನೆ. ಆದರೆ ಮನ್ಸೂರರಿಗೆ ಹಗ್ಗದಿಂದ ನೇಣಿಗೆ ಎಳೆದಾಗ ಅದೇ ‘ಅನಲ್‌ಹಕ್’ ನ ಧ್ವನಿ ಇತ್ತು. ಅವರನ್ನು ಸುಟ್ಟಾಗ ಅದೇ ಗಾನವಿತ್ತು. ನೀರಿನಲ್ಲಿ ಎಸೆದಾಗ ಅದೇ ಸ್ವರವಿತ್ತು. ಇದರಿಂದ ಅರಿವಾಗುವುದದೇನೆಂದರೆ ಇದು ದೈವೀ ಗೂಢಗಳಲ್ಲಿ ಒಂದು ಗೂಡಾಗಿದೆ. ಮತ್ತು ಅವನ ಅಸಂಖ್ಯಾತ ರಹಸ್ಯಗಳಲ್ಲಿ ಇದು ಒಂದು ದೈವೀ ರಹಸ್ಯವಾಗಿದೆ.

ಮಲಗಿದವನಿಗೆ ಎಲ್ಲಿ ಈ ಸ್ಥಾನಮಾನವು?
ಜಾಗೃತರಾದವರು ಶಿಲುಬೆಗೆ ಬಂದರು.

ಗೂಢದ ರಹಸ್ಯ ಬೋಧನೆಯ ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ ಎಂದು ಹೇಳಲಾಗುತ್ತದೆ. ಪರಮ ಸತ್ಯನ ಯಾವುದೇ ಔಚಿತ್ಯತೆಯೇ ಇದರಲ್ಲಿದೆ. ಹೀಗಾಗಿ ಹಜ್ರತ್ ‘ಆದಂ’ರು ಹಣ್ಣು ತಿನ್ನುವ ಅಪರಾಧದಲ್ಲಿ ಸ್ವರ್ಗದಿಂದ ಹೊರಹಾಕಲ್ಪಟ್ಟರು. ಹಾಗೂ ಮನ್ಸೂರರು ನೇಣಿಗೆ ಹಾಕಲ್ಪಟ್ಟರು.

ಹೇ ಆರೀಫನೇ, ಚೆನ್ನಾಗಿ ಯೋಚಿಸು, ಅಕಸ್ಮಾತ್ ಮನ್ಸೂರರು ‘ಅನ್‌ಅಲ್‌ಹಕ್’ ನ ಸಿಂಹನಾದ ಮೊಳಗಿಸದಿದ್ದರೆ, ಮನುಷ್ಯನು ತನ್ನ ಪರಾಕಾಷ್ಠೆಯನ್ನು ಪ್ರಕಟಿಸುತ್ತಿರಲಿಲ್ಲ.

ಬದಲಾಗಿ ನನ್ನ ವಿಚಾರದಲ್ಲಿ ಏಕದೇವ ವಿಶ್ವಾಸಿಗಳ ಹಾಗೂ ಸತ್ಯಾನ್ವೇಷಿಗಳ ಶಿರಗಳು ಇವರ ಉಪಕಾರದ ಹಂಗಿನಲ್ಲಿವೆ. ಒಂದು ವೇಳೆ 'ಹಜ್ರತ್ ಆದಂ'ರು ಸ್ವರ್ಗದಿಂದ ಹೊರಗೆ ಬಾರದೇ ಇದ್ದರೆ, ಜಗದಲ್ಲಿ ಈ ಹೊಳಪು ಎಲ್ಲಿರುತ್ತಿತ್ತು? ಪ್ರವಾದಿಗಳು ಹಾಗೂ ವಲಿಗಳು ಎಲ್ಲಿ ಪ್ರಕಟವಾಗುತ್ತಿದ್ದರು? ಹಾಗೂ ದೇವರ ದೈವತ್ವವನ್ನು ಪುನರುಚ್ಚಿಸುವವರು ಯಾರಿರುತ್ತಿದ್ದರು?

ಹೇ ಆತ್ಮೀಯನೆ, ಯಾವ ವ್ಯಕ್ತಿಯ 'ಅಹಂ'ನ ವೈಶಿಷ್ಟದಿಂದ ತನ್ನ ಪ್ರಸಿದ್ಧಿ ಹಾಗೂ ಗೌರವಕ್ಕಾಗಿ ಅಲ್ಲ; ಬದಲಾಗಿ ಆತ್ಮದ ಪರಿಶೋಧನೆ ಮಾಡುತ್ತಾನೋ, ಅವನ ಸ್ಥಿತಿ ಇದೇ ಆಗುತ್ತದೆ. ಇದು ಚಿತ್ತದ ಅನ್ವೇಷಣೆಯಲ್ಲಿ ಬದಲಾಗಿ ಆತ್ಮದ ಅವಶ್ಯಕತೆಯಾಗಿದೆ.

ಸಮಸ್ತ 'ಆರೀಫ'ರ ಮೇಲಿದೆ, ಹಜ್ರತ್ ಮನ್ಸೂರರ ಉಪಕಾರ,
ಇದರಿಂದ ಮಾನವತೆಯು ಚರಮವನ್ನು ತಲುಪಿತು.

ಜೀವದ ಬಂಧಿತನಾಗಿದ್ದರೆ ಅವನು ಈ ಸಂದೇಶ ನೀಡುತ್ತಿರಲಿಲ್ಲ,
ಹೃದಯವಂತ ವ್ಯಕ್ತಿಗಳಿಗೋಸ್ಕರ ತನ್ನನ್ನು ನೇಣಿಗೆ ಬಲಿಕೊಟ್ಟನು.

ಈ 'ಅಹಂ'ಭಾವವು ಆತ್ಮದ ದನಿಯಲ್ಲಿ ಪ್ರಕಾಶದ ದನಿಯಾಗಿದೆ.
ಪ್ರಕಾಶ ಪರಿಚಯದ ಘೋಷಣೆಯಲ್ಲಿ ಇದು, ಕಾಲವಾಗಿದೆ.

ಪ್ರಕಾಶದ ಸಂಬಂಧವು ದೈವೀಕೋಶದಿಂದ ಸಂಬಂಧಿತವಾದರೆ,
ಮತ್ತೆ ದೈವೀ ರಹಸ್ಯದ ವರ್ಣ ವಾಸನೆಯಿಂದ ಅಪರಿಚಿತನಾಗಿ ನಡೆ.

ಮೂಲ ಗುರಿಯ ಕಡೆ ತಲುಪಿಹನು ಅವನು 'ಬಹರಿ' ತರಹ,
ದೈವೀಕೋಶವನ್ನು ಮಾಡಿಹನು ಯಾರು ಹಾವಿನ ನಿವಾಸದಂತೆ.

ಆಭರಣ–೧೨೦

ಪುರುಷರ 'ಚಿಲ್ಲಾ'*

ನನ್ನ ಒಬ್ಬ ಮಿತ್ರರಾಗಿದ್ದ, ಖ್ವಾಜಾ ಮಹ್ಮದ್ ಅಕ್ಬರರ ಪ್ರಶ್ನೆಗೆ ಉತ್ತರವಾಗಿ ಈ ಕೆಳಗಿನ ಪ್ರಸಂಗವನ್ನು ಬರೆಯಲಾಯಿತು. ಅವರು ವಿಚಾರಿಸಿದರೇನೆಂದರೆ, ಈ

* ದಿವ್ಯವಾಣಿ – ಪವಿತ್ರ ಕುರಾನ್

ಜಗತ್ತಿನ ಚೌಕಟ್ಟಿನಿಂದ ನನ್ನ ಹೃದಯವು ಬೇಸರಗೊಂಡಿದೆ. ಹೀಗಾಗಿ ನಾನು ಇದನ್ನು ತ್ಯಜಿಸಲು ಬಯಸಿದ್ದೇನೆ. ಈ ಕುರಿತು ನಿಮ್ಮ ಅಭಿಪ್ರಾಯವೇನು?

ಹೇ, ಸ್ನೇಹಿತನೇ! ನಾನು ಇದೇ ಆಲೋಚನೆಯಲ್ಲಿದ್ದೆ ಆಗ ನನಗೆ ಅನಿರೀಕ್ಷಿತವಾಗಿ ಈ ವಿವರಣೆಯು ನೆನಪಿಗೆ ಬಂದಿತು. ಯಾವನು ಒಬ್ಬ ಅವಶ್ಯಕತೆಯುಳ್ಳವನು ಒಬ್ಬ ಸತ್ಪುರುಷರಿಂದ ಒಂದು ಚಿಲ್ಲಾದ ಅನುಮತಿ ಕೇಳಿದನು, ಅವರು ಕೇಳಿದರು 'ನಿನಗೆ ಮಹಿಳೆಯರ ಚಿಲ್ಲಾ ಬೇಕೋ, ಅಥವಾ ಪುರುಷರ ಚಿಲ್ಲಾ' ಅಚ್ಚರಿಗೊಂಡ ಆ ವ್ಯಕ್ತಿಗೆ ನುಡಿದನು 'ನನಗೆ ಗೊತ್ತಿಲ್ಲ ಅದು ಹೇಗಿರುತ್ತದೆ'.

ಇದು ಹೇಗಿರುತ್ತದೆ. ಆಗ ಸತ್ಪುರುಷರು ಸ್ಪಷ್ಟೀಕರಣ ನೀಡುತ್ತಾ ನುಡಿದರು; ಮಹಿಳೆಯರ ಚಿಲ್ಲಾವೆಂದರೆ ನಲವತ್ತು ದಿನಗಳವರೆಗೆ ತಮ್ಮ ಸ್ಥಳದಿಂದ ಕದಲದೆ ಇರುವುದು ಹಾಗೂ ಸಮಸ್ತ ವ್ಯವಹಾರಗಳಿಂದ ಸಂಬಂಧ ಕಡಿದುಕೊಳ್ಳುವುದು. ಆದರೆ ಪುರುಷರ ಚಿಲ್ಲಾ ಎಂದರೆ ಹೆಂಡತಿ, ಮಕ್ಕಳು ಇವರ ಪೋಷಣೆಯ ಸಮಸ್ತ ಅವಶ್ಯಕತೆಗಳ ವ್ಯವಸ್ಥೆ ಮಾಡುತ್ತಾ, ಒಂದು ಕ್ಷಣವೂ ಸ್ನೇಹಿತನ ಸ್ಮರಣೆಯಿಂದ ಅಜಾಗರೂಕನಾಗಿರಕೂಡದು. ಹೀಗಾಗಿ ಈ ಫಕೀರನ ಸಲಹೆಯು ಆ ಧೈರ್ಯಶಾಲಿಗೆ ಆಗದಿದ್ದರೆ, ಸೂಕ್ತವೇನೆಂದರೆ ಇಂತಹ ಆಲೋಚನೆಯನ್ನೇ ತ್ಯಜಿಸಿಬಿಡು, ಹಾಗೂ ಸ್ವಾತಂತ್ರ್ಯದಿಂದಲೂ ಸ್ವತಂತ್ರನಾಗಿ ಬಿಡು. ಯಾಕೆಂದರೆ ಅರಿತೂ ನಿನ್ನನ್ನು ಹಾಗೂ ನಿನ್ನ ಅವಲಂಬಿತರನ್ನು ರೊಟ್ಟಿಯ ಒಂದೆರಡು ತುಣುಕುಗಳಿಗಾಗಿ ನೂರು ಕಡೆ ಚಿಂತಾಕ್ರಾಂತರಾಗಿ ಅಲೆದಾಡುವಂತೆ ಮಾಡಬೇಡ. ಬಯಸಿಯೂ ದಾರಿದ್ರ್ಯ ಹಾಗೂ ಅಸಹಾಯಕತೆಯ ಪರಿಸ್ಥಿತಿ ಬಂಧನದಲ್ಲಿ ಹಾಕುವುದು, ಅನುಭವಿ ವ್ಯಕ್ತಿಗಳ ದೃಷ್ಟಿಯಲ್ಲಿ ಸೂಕ್ತವಲ್ಲ. ದರ್ವೇಶಿಯಂತೂ ದೈವೀ ಕರ್ಮವಾಗಿದೆ, ಉಚಿತವೆಂದರೆ ಏನನ್ನು ಮಾಡಬಹುದಾಗಿದೆ. ಅದನ್ನು ಇದೇ ಲೋಕದಲ್ಲಿ ಮಾಡುವುದು ಸೂಕ್ತವಾಗಿದೆ. ಆದುದರಿಂದ ದೇವರ ಕೃಪೆಗಾದರೂ ಈ ಭೌತಿಕ ಜಗತ್ತನ್ನು ವ್ಯರ್ಥ ಹಾಗೂ ಅಯೋಗ್ಯವೆಂದು ತಿಳಿಯಬಾರದು. ಸತ್ಯವು ಅದೇ ಆಗಿದೆ, ಯಾವುದು ಲೌಕಿಕ ದೇಹದಲ್ಲಿ ಅಲ್ಲ, ಬದಲಾಗಿ ಲೌಕಿಕ ನಾಮದ ಪೋಷಾಕಿನಲ್ಲಿ ಅಡಗಿದೆ. ಒಟ್ಟಾರೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅಭಿರುಚಿಯನ್ನು ಹೊಂದಿರಿ, ಇದಕ್ಕಿಂತ ಅಧಿಕ ಏನು ಬರೆಯಲಿ.

ದರ್ವೇಶಿಯು ಒಂದು ದೈವೀದತ್ತ ಕೃಪೆಯಾಗಿದೆ,
ಇದರಲ್ಲಿ ಇಲ್ಲ ಸಂಪತ್ತು– ಮಕ್ಕಳ ಅವಕೃಪೆಗಳು.

• ಚಿಲ್ಲಾ ಎಂದರೆ ೪೦ ದಿನ ಸತತವಾಗಿ ಒಂದೇ ಸ್ಥಳದಲ್ಲಿ ಕುಳಿತು ದೇವರ ಧ್ಯಾನ ಮಾಡುವುದು. ಇದು 'ಜುನ್ನೈದಿ' ಸೂಫಿ ಪರಂಪರೆಯಲ್ಲಿ ಅತೀ ಮಹತ್ವದ ದೈವೀಕರ್ಮವಾಗಿದೆ.

ಬಾಹ್ಯವನು ಬಿಡುವವನು ದರ್ವೇಶನು ಹೇಗಾಗುವನು?
ಅಂತರ್ಯದ ತೇಪೆಯಿಂದ ಸುಖಿಯಾಗಿರುವನು ಅವನು.

ಅಲ್ಪ ಸಂತೃಪ್ತಿಯಿಂದಲೇ ಮನವನ್ನು ಸಂತೈಸಿಕೊಳ್ಳು,
ಧನಿಕನಾಗಿಹನು ಅಂತಹ ದರ್ವೇಶನು ಸದಾ.

ವಾಸ್ತವದಲಿ ಅವನೇ ಆಗಿಹನು ನಿಜ ದರ್ವೇಶನು
ಯಾವನು ಪ್ರತಿಯೊಂದು ಸ್ಥಿತಿಯಲಿ ಇರುವನು ಸಂತೃಪ್ತನು.

ಇವನಿಗೆ ಸ್ವತಂತ್ರವೆಂದು ಯಾರೂ ಹೇಳಲಾರರು,
ಲಾಲಸೆಯಲ್ಲಿ ಯಾರು 'ಬಹರಿ'ಯಂತೆ ಆಗಿಹರು ನಿಯಮಪಾಲಕರು.

ಆಭರಣ–೧೨೧

'ಅಲ್ ಫಖ಼ರ್ ಸ್ವಾದುಲ್ ವಜಾ' ನ ವಿವರಣೆ

ಹಜ್ರತ್ ಮಹ್ಮದ ಪೈಗಂಬರರು (ಸ.ಅ) ನುಡಿದಿರುತ್ತಾರೆ. ಅದೇನೆಂದರೆ 'ಅಲ್ ಫಖ಼ರ್ ಸ್ವಾದುಲ್ ವಜಾ' ಅರ್ಥಾತ್ ಫಕೀರರು ಎರಡೂ ಲೋಕಗಳಲ್ಲಿ ಅಪಮಾನಿತರಾಗಿರುತ್ತಾರೆ. ನಿಸ್ಸಂದೇಹವಾಗಿ ಯಾಕೆ ಇದಾಗಬಾರದು. ಯಾಕೆಂದರೆ ಹಲವು ದರ್ವೇಷರು, ಪ್ರವಾದಿತ್ವದ ಕಿರೀಟವಾಗಿರುವ ಫಕೀರಿಯ ಸಿದ್ಧಾಂತವನ್ನು ತೊರೆದು ಬಿಡುತ್ತಾರೆ. ಟೀಕೆ–ಟಿಪ್ಪಣಿ ಹಾಗೂ ವಾಗ್ವಾದಗಳಲ್ಲಿ ನಿರತರಾಗುತ್ತಾರೆ. ಲೌಕಿಕ ವ್ಯವಹಾರದಲ್ಲಿ ಲೌಕಿಕ ಜನರಿಗಿಂತ ಅಧಿಕವಾಗಿ ತೊಡಗಿಸಿಕೊಂಡಿದ್ದಾರೆ ಹಾಗೂ ಲೋಕವು ಇವರ ಕಂಕುಳ ಕೂದಲಾಗಿದೆ (ಅರ್ಥಾತ್ ಅವರು ಲೌಕಿಕದಿಂದ ಅದು ಸಮೀಪವಿದ್ದು, ಗೌಪ್ಯವಾಗಿದ್ದಾರೆ).

ಫಕೀರನಾಗಿ ಧನಪ್ರಾಪ್ತಿಯ ಹಿಂದೆ ಓಡುವೆ ಏಕೆ,
ಫಕೀರಿಯು ಒಂದು ಗೀಳಾಗಿದ್ದರೆ, ಸಂಪತ್ತು ಸಂಪತ್ತಾಗಿದೆ.

ಮತ್ತೆ ಅವನ ಕಣ್ಣಿನಲ್ಲಿ ಇದು ಅಧಿಕ ಅಥವಾ ಅಲ್ಪವಾಗಿ ಈ ರೀತಿಯಾಗಿ ಕಾಣಿಸುತ್ತದೆ. 'ಸ್ವಾದ್' ಎಂಬ ಶಬ್ದವನ್ನು ಅಧಿಕ ಅರ್ಥಗಳನ್ನು ಹೊಂದಿದ ಕಾರಣ ಸ್ವೀಕರಿಸಲಾಯಿತು ಹಾಗೂ ಶಬ್ದದಿಂದ ಪ್ರಾಪ್ತ ಅರ್ಥಾತ್ ಅರ್ಥದಿಂದ ಮನೋಧರ್ಮವು ಸಂತುಷ್ಟವಾಗುವುದಿಲ್ಲ. ಪರಮ ಪಾವನ ದೇವರು ಹಾಗೂ ಅವನ ರಸೂಲರ ಗ್ರಂಥದಲ್ಲಿ ಅನೇಕ ಅರ್ಥಗಳು ಹಾಗೂ ವಿವಿಧ ಕಾರ್ಯನೀತಿ ಯುಕ್ತತೆಗಳು ಇರುತ್ತವೆ. ಈ ಅರ್ಥಗಳು ಹಾಗೂ ಕಾರ್ಯಯುಕ್ತತೆಯ ಜ್ಞಾನವು

ಅವನಿಗೆ ಶೋಭಿತವಾಗಿದೆ ಹೀಗಾಗಿ 'ಸ್ವಾದ್' ನ ಅರ್ಥವು ಕಪ್ಪು, ಬಿಳಿಪು ಅಥವಾ ಇದರ ಹೊರತಾಗಿಯೂ ತಿಳಿಯಲಾಗುತ್ತದೆ ಮತ್ತು ಸತ್ಯದ ಒಂದು ಸ್ಥಿತಿಯಲ್ಲಿ ದರ್ವೇಶಿಯ ಕಣಿವೆಯಲ್ಲಿ 'ಸ್ವಾದ್-ಅಲ್-ವಜಾ'ದ ಸ್ಥಾನದಿಂದ ಸಾಗುತ್ತಾನೆ. 'ಸ್ವಾದುಲ್ ವಜಾ' ದಂತೆ ಶಬ್ದಗಳು ವಿವರಣೆಗಾಗಿ ಇರುವುದಿಲ್ಲ. ಹೀಗಾಗಿ ಶ್ರೀಮಂತಿಕೆಯ ಬಗ್ಗೆ ಏನು ಹೇಳಬೇಕಾಗಿದೆ ? ಕಾವ್ಯಕೃತಿಯ ಕೈಪಿಡಿಯ ಆಧಾರದಿಂದ ಇದು ಅಸಾಧ್ಯವೆಂದು ಅರಿವಾಗುತ್ತದೆ. ಯಾಕೆಂದರೆ 'ಸ್ವಾದ್' ಶಬ್ದವು ಯುಕ್ತಾರಹಿತವಾಗಿರುವುದಿಲ್ಲ. ಕಾವ್ಯ ಕೈಪಿಡಿಯು ಹೇಳುತ್ತಿದ್ದರೆ ದರ್ವೇಶನ ಹೃದಯವು ಅಹಂಭಾವದಲ್ಲಿ ಸಿಲುಕಿಕೊಳ್ಳುತ್ತದೆ. ಆದರೆ ಇದು ಅಸಾಧ್ಯವಾಗಿದೆ ಯಾಕೆಂದರೆ ದರ್ವೇಶಿಯು ಒಂದು ಪುರಾತನ ಸಂಪ್ರದಾಯವಾಗಿದೆ. ಸಜ್ಜನನಾದವನು ತನ್ನ ಪ್ರಶಂಸೆಯ ಆಕಾಂಕ್ಷಿಯಾಗಿರುವುದಿಲ್ಲ ಆದರೆ ನಿಂದನೆಯ ಹೊರತು. ಇದನ್ನು ವಿಶದಿಕರಿಸಲು 'ಬ್ಯಾಜ್' (ಕೈಪಿಡಿ)ನ ಬದಲಾಗಿ 'ಸ್ವಾದ್' (ಕಪ್ಪು) ಎಂದು ನುಡಿಯಲಾಯಿತು. ಹೀಗಾಗಿ ಬುದ್ಧಿವಂತರು ಕಪ್ಪನ್ನು ಬಿಳಿ ಎಂದು ಬರೆಯುತ್ತಾರೆ. ಇವೆರಡು ಅರ್ಥಗಳು ಒಂದು ಇನ್ನೊಂದರ ಕನ್ನಡಿಯಾಗಿದೆ.

ಹೇ ಫಕೀರನೇ, ಫಕೀರತ್ವ ಏನಾಗಿದೆ? ದೇಹ ಬಂಧನದಿಂದ ಬಿಡುಗಡೆ ಪಡೆಯುವುದು ಹಾಗೂ ಅಡಿಯಿಂದ ಮುಡಿಯವರೆಗೆ ಪ್ರಕಾಶವಾಗುವುದು. ಯಾವುದಕ್ಕೆ ಅಸ್ತಿತ್ವದ ಅವಶ್ಯಕತೆಯೂ ಇಲ್ಲ, ಅರ್ಹತೆಯೂ ಇಲ್ಲ 'ಅಲ್ ಫಖೀರ್ ಲಾ ಯಹೂತಾಜ್ ಅಲಿ ಅಲ್ಲಾಹ ಇಲಾ ಗೈರಾ' (ಫಕೀರನಿಗೆ ಅಲ್ಲಾಹನ ಅವಶ್ಯಕತೆಯೂ ಇಲ್ಲ, ಅನ್ಯನ ಅವಶ್ಯಕತೆಯೂ ಇಲ್ಲ) ಪ್ರದರ್ಶನ ಮನೋಭಾವದವರ ರೀತಿಯಿಂದ ಇದು ಕರಿಯ ಬಣ್ಣದಾಗಿದೆ. ಮೂಲದಲ್ಲಿ ಬೆಳಕಿನ ಬಂಡವಾಳವೇ ಕತ್ತಲಾಗಿದೆ. ಅಗ್ನಿಯು ತನ್ನ ಕ್ರಿಯಾತ್ಮಕತೆಯಿಂದ ಪ್ರಕಾಶ ಹಾಗೂ ಅಂಧಕಾರವನ್ನು ಬೇರ್ಪಡಿಸುವಂತಿದೆ. ಆಗ ಅದು ತನ್ನ ಮೂಲ ಬಣ್ಣಕ್ಕೆ ಬರುತ್ತದೆ ಹಾಗೂ ತಕ್ಷಣವೇ ಕಪ್ಪಾಗುತ್ತದೆ. ಕಣ್ಣಿನ ಮಸೂರದ ಕಪ್ಪು ಚುಕ್ಕೆಯು ಇದರ ಪ್ರತಿಬಿಂಬವೇ ಆಗಿದೆ. ಹೃದಯದ ಕೇಂದ್ರ ಬಿಂದು ಇರುವ ಬಿಂದುವಿನ ಬಣ್ಣವು ಕರಿಯಾಗಿದೆ. ಏಕವರ್ಣದ ಅಂತರ್ದೃಷ್ಟಿಯ ಸಾಗರದ ಬುದ್ದಿವಂತರು, ವಿವೇಕ ಅಲೆಯು ಉತ್ಪತ್ತಿಯಾಗುತ್ತದೆಯೋ ಅವರೂ ಇದನ್ನೆ ತಿಳಿಯುತ್ತಾರೆ. ಹಲವರು ಪ್ರಕಾಶದ ಸಾಗರವನ್ನು ಸಹ ಕಪ್ಪು ಎಂದು ನುಡಿದಿದ್ದಾರೆ. ವಾಸ್ತವಿಕವಾಗಿ ಅದು ವರ್ಣ-ಬಣ್ಣಗಳಿಂದ ಹೊರತಾಗಿದೆ.

ಹೇ ಆತ್ಮೀಯನೇ, ಕಪ್ಪು ಬಣ್ಣವು ಶಾಶ್ವತ ಬಣ್ಣವಾಗಿದ್ದು ಕೊನೆಯ ಬಣ್ಣವಾಗಿದೆ. ಆದುದರಿಂದ ಹಸಿರು ಹಾಗೂ ಕೆಂಪು ಬಣ್ಣವನ್ನು ಕಪ್ಪು ಬಣ್ಣವನ್ನಾಗಿ ಮಾಡಬಹುದು. ಆದರೆ ಹಸಿರು ಅಥವಾ ಕೆಂಪು ಬಣ್ಣವನ್ನಾಗಿ ಮಾಡಲು ಸಾಧ್ಯವಿಲ್ಲ. ಈ ಬಣ್ಣವನ್ನು

'ಲಾಹೂತ್' ಬಣ್ಣವೆಂದು ಕರೆಯುವುದು ಸೂಕ್ತವಾಗಿದೆ. ಯಾಕೆಂದರೆ ಬೇರ್ಯಾವ ಬಣ್ಣವು ಈ ಬಣ್ಣವನ್ನು ಸ್ವೀಕರಿಸುವುದಿಲ್ಲ.

'ಲಾಹೂತ್' ಸ್ಥಾನದ ನಿವಾಸಿಯೂ ಫಕೀರನಾಗಿರುತ್ತಾನೆ. 'ಏಕತ್ವ'ದ ರಹಸ್ಯದ ಘೋಷಣೆಗಾಗಿ, ಯಾವುದು ಅವಿಶ್ವಾಸ ಹಾಗೂ ಏಕದೇವರಾಧನೆಯಿಂದ ಉನ್ನತವಾಗಿದ್ದಾನೆಯೋ ಅವನು ನಿಷ್ಕೃಷ್ಟನು ಹಾಗೂ ಬಹಿಷ್ಕೃತನಾಗುತ್ತಾನೆ. ಅರ್ಹತೆಯ ಹೊರತಾಗಿಯೂ ಕಪ್ಪು ವರ್ಣದವನಾಗುತ್ತಾನೆ. ಪ್ರೇಮಿಯ ರೂಪ-ಲಾವಣ್ಯವು, ಕೇಶ, ಹುಬ್ಬು, ರೆಪ್ಪೆಗಳು ಎಲ್ಲವೂ ಕಪ್ಪಾಗಿದೆ. ಪ್ರೇಮಿಯ ಸ್ಥಾನ ಅರ್ಹತೆಯನ್ನು ಹಜ್ರತ್ ಅಬ್ದುಲ್ ರೆಹಮಾನ ಜಾಮಿರವರು ಅತ್ಯಂತ ಮನೋರಮೆಯಾಗಿ ಈ ರೀತಿ ಬಣ್ಣಿಸುತ್ತಾರೆ.

ಚೂಂ ಆಂ ಬೆ ಚೂಂ ದರೇಂ ಚೂಂ ಕರ್ದಾ ಆರಾಮ್
ಪಯೇ ರೂಪೋಶ್ ಕರ್ದಾ ಯೂಸೂಫೇನ್ ನಾಮ್'

[ಯಾವನು ಕುರೂಪಿಯಾಗಿದ್ದನು, ಅವನು ರೂಪವನ್ನು ಪಡೆದನು. ತನ್ನನ್ನು ಅಡಗಿಸಲು, ಯುಸೂಫ್ ಎಂಬ ಹೆಸರಿಟ್ಟುಕೊಂಡನು]

ಇದರಿಂದ ಅರ್ಥವಾಗುವುದೇನೆಂದರೆ ಅಂಧಕಾರವು (ಕಪ್ಪು) ಬೆಳಕಿನ ಶೋಭೆಯಾಗಿದೆ. ಈ ರೀತಿಯಿಂದ ನಿಷಿದ್ಧ ಸಂದರ್ಭಾನುಸಾರ ಅಂಧಕಾರವು ಪುರಾತನವಾಗಿವೆ. ಹಾಗೂ ಪ್ರಕಾಶವು ನವನವೀನವಾಗಿದ್ದರೂ, ಯಾವುದು ಅಸ್ತಿತ್ವದಲ್ಲಿತ್ತು ಅದೆಲ್ಲವು ಕತ್ತಲಮಯವಾಗಿತ್ತು. ಎಲ್ಲವೂ ಈ ಅಂಧಕಾರದಿಂದ ಹೊರಹೊಮ್ಮಿದೆ, ಮತ್ತೇ ಅಂಧಕಾರದ ಕಡೆಗೆ ಮರಳುತ್ತದೆ. ಅದಕ್ಕೆ ಅಂಧಕಾರ (ಕಪ್ಪು) ಏಕೆ ಹೇಳುತ್ತಾರೆಂದರೆ ಆಗ ಅಂತರ್ದೃಷ್ಟಿಯು ಮಾಯವಾಗುತ್ತದೆ ಹಾಗೂ ಯುಕ್ತಾಯುಕ್ತತೆಯ ಜ್ಞಾನ ಇರುವುದಿಲ್ಲ. ಬೆಳಕು ಹಾಗೂ ಅಕ್ರಮಗಳು ಪದಾರ್ಥಗಳಲ್ಲಿ ಒಂದು ಇನ್ನೊಂದರ ವಿರುದ್ಧವಾಗಿದೆ.

ಯಾವಾಗ ಪದಾರ್ಥವೇ ಇರುವುದಿಲ್ಲವೋ ಆಗ ಅಂಧಕಾರವಿರುವುದು ಅನಿವಾರ್ಯವಾಗಿದೆ. ಆದುದರಿಂದ ಕತ್ತಲೆಯ ರಾತ್ರಿಯಲ್ಲಿ ಪದಾರ್ಥಗಳು ಇದ್ದೂ ಸಹ, ಅವ್ಯಾವವು ಕಂಡುಬರುವುದಿಲ್ಲ, ಕೇವಲ ಅಂಧಕಾರದ ಹೊರತು, ಈ ಅಂಧಕಾರದಲ್ಲಿ 'ಆರೀಫ್'ನ ಹೊರತಾಗಿ, ಯಾವುದು ತನ್ನ ಅಸ್ತಿತ್ವದಿಂದ ಶಾಶ್ವತವಾಗಿದೆ, ಯಾರೂ ನೋಡುವುದಿಲ್ಲ. ಆರೀಫ್ ಸಾಕ್ಷೀ ಪುರುಷ ಪ್ರತೀಕಾತ್ಮಕವಾಗಿ ಭಿನ್ನವಾಗಿದೆ ಅರ್ಥಾತ್ ಶಾಬ್ದಿಕವಾಗಿ ಬೇರೆ ಬೇರೆಯಾಗಿವೆ. ಆದರೆ ಅರ್ಥದ ಪ್ರಕಾರ ಅವು ಒಂದೇ ಆಗಿವೆ.

ಈ ಮೂರೂ ಗಹನತೆಗಳು, ಸಂಖ್ಯೆಯಲಿ ಒಂದು ನೂರಾಗಿವೆ.
ಆದರೆ ಒಂದಾದಾಗ ನದಿ, ಅಲೆ ಹಾಗೂ ನೊರೆ ಹೊಂದುತ್ತವೆ.

ಯಾರು ಅಸ್ತಿತ್ವ ಹಾಗೂ ದೈವೀಜ್ಞಾನದ ನಿಜ ಸಾಕ್ಷ್ಯರು
ಅವೆಲ್ಲವು ಮಾದರಿ ಸರಕುಗಳಾಗಿ, ಗೌರವಾದರ ಹೊಂದಿವೆ.

ಹೇ, ಬಹರಿ ಯಾವ ಹವ್ಯಾಸದಲ್ಲಿ ತಲ್ಲೀನನಾಗಿದ್ದಿ, ಹಾಗೂ ಈಗ ಎಲ್ಲಿ ತಲುಪಿದ್ದಿಯಾ. ನಿನ್ನ ಹಡಗನ್ನು ಈ ನಾವೆಗಳನ್ನು ನುಂಗುವ ಸುಳಿಯಿಂದ ಹೊರತೆಗೆ ಹಾಗೂ ಫಕೀರಿಯ ಮಹೋನ್ನತ ಹಾಗೂ ಪವಿತ್ರ ದ್ವೀಪವನ್ನು ತಲುಪಿಸು, ಯಾಕೆಂದರೆ ಫಕೀರಿಯು ಅಗೋಚರ ಕಪೋಲದ ಮಚ್ಚೆಯಾಗಿದೆ.

ಧನಿಕನ ಮೇಲೆ ಕಿರುಹುಲ್ಲು ಬಿದ್ದರೂ ಆಗುವುದು ಸುದ್ದಿ,
ಆದರೆ ದರ್ವೇಶನ ತಲೆಯ ಮೇಲೆ ಪರ್ವತವಿದ್ದರೂ ಧೂಳಿನ ಸಮ.

ಸಣ್ಣ ದಿನ್ನೆಯ ಮೇಲೆ ಪ್ರಯಾಸದಿ ಏರುವನು ಧನಿಕನು,
ಒಂದು ಕ್ಷಣದಲಿ ಗಗನವನು ತಲುಪುವನು ಇನ್ನೂರ ಸಲ ಫಕೀರನು.

ಆಭರಣ–೧೨೨

ಔರಂಬಜೇಬನ ಒಂದು ರುಬಾಯಿ ದರ್ವೇಶಿ ಹಾಗೂ ಅರಸೊತ್ತಿಗೆಯ ಕುರಿತು

'ಸಲ್ತನತೆ ರಾ ಅಜ಼್‌ತೆ ದರ್ ಫಾನಿ ಕಜಾಸತ್,
ಮಾ ಗದಾಯಾ ನೀಮ್ ಮಾರಾ ಐಶ್ ಸುಲ್ತಾನಿ ಕಜಾಸತ್.

ಆಂಯ್ ದಿಲ್ ದಿವಾನಾ ರಾ ಗಫ್ತುಂ ಕೆ ಆಖಿಲ್ ಶೋನ್‌ಸದ್,
ಆರೇ ಆರೇ ತಿಫರ್ ರಾ ಮೈಲ್ ಸಬಖ್ ಖದಾನಿ ಕಜಾಸತ್'

[ಸಾಮ್ರಾಜ್ಯದ ಗೌರವವು ಎಲ್ಲಿಹುದು ಈ ನಶ್ವರ ಲೋಕದಲಿ,
ನಾವು ಬಡವರು, ನಮ್ಮಂತ ದರಿದ್ರರಿಗೆ ಬಾದಶಹಾರಂಥ ವೈಭೋಗ ಎಲ್ಲಿ

ಹೇಳಿದ್ದೆ ನೀನು ಹೃದಯಕ್ಕೆ, ಕುಶಾಗ್ರಮತಿಯಾಗು ಆದರೆ ಮೋಹಿತನಾದೆ,
ಆಸಕ್ತಿಯಿಂದ ಪಾಠವನು ಓದು, ಬಾಲಕನಂತೆ ಆ ಸ್ವಭಾವ ಎಲ್ಲಿ?]

ಈ ಫಾರಸಿ ರುಬಾಯಿ[೧] ಚಕ್ರವರ್ತಿ ಔರಂಗಜೇಬನದಾಗಿದೆ. ಪ್ರಥಮ ಸಾಲಿನಲ್ಲಿ 'ಸುಲ್ತಾನ್ ರಾ ಇಜ್ಜತೆ ದರ್ ಆಲಂ ಫಾನಿ ಕಜಾಸತ್' ನ ಸಂಬಂಧವಾಗಿ ನುಡಿಯುವುದೇನೆಂದರೆ, ಸುಲ್ತಾನನು ತನ್ನ ಪಾರಿಭಾಷಿಕ ಶೈಲಿಯಲ್ಲಿ ಸಾಮ್ರಾಜ್ಯಶಾಹಿಯನ್ನು ದರ್ವೇಶಿತನ ಎಂದು ಪರಿಗಣಿಸುತ್ತಾನೆ. ಹೀಗಾಗಿ "ಗದಾ ಬಾದ್‌ಶಾಹತ್ ಖಾಮಶ್ ಗದಾ ಸತ್" ಆದರೆ ಸತ್ಯವೇನೆಂದರೆ ದರ್ವೇಶನು ತನ್ನ ಪರಾಕಾಷ್ಠೆಯನ್ನು ತಲುಪಿದಾಗ, ಅಗೋಚರ ಹಾಗೂ ಸಾಕ್ಷಾತ್ ಲೋಕದ ಬಾದಶಹಾನಾಗುತ್ತಾನೆ. ಆದರೆ ಈ ಬಾದಶಹನಿಗೆ ಹಾಗೂ ಅವನ ಸಾಮ್ರಾಜ್ಯಕ್ಕೆ ಈ ನಶ್ವರ ಲೋಕದಲ್ಲಿ ಗೌರವ ಪ್ರಾಪ್ತಿಯಾಗುವುದಿಲ್ಲ. ಎಲ್ಲರೂ ಇವನನ್ನು ನಿಕೃಷ್ಟ ದೃಷ್ಟಿಯಿಂದ ಕಾಣುತ್ತಾರೆ. ಎರಡನೇ ಸಾಲಿನಲ್ಲಿ 'ಮಾ ಗದಯಾ ಮಾರಾ ಐಶ್ ಸುಲ್ತಾನಿ ಕಜಾಸತ್' ನ ಅರ್ಥವೇನೆಂದರೆ ನಾವು ಬಾದಶಹರೇರಾಗಿದ್ದೇವೆ, ಆದರೆ ವಾಸ್ತವವಾಗಿ ದರಿದ್ರರಾಗಿದ್ದೇವೆ ಆದುದರಿಂದ ನಮಗೆ ಬಾದಶಹತ್ವದ ವೈಭೋಗ ಲಭ್ಯವಿಲ್ಲ? ಅರ್ಥಾತ್ ದರ್ವೇಶಿಯು ಸಿಗುವುದು ದುರ್ಲಭವಾಗಿದೆ. ಮೂರನೆ ಸಾಲು 'ಆಂಯ್ ದಿಲ್ ದೀವಾನಾ ರಾ ಗುಫ್ತಂ ಆಖಿಲ್ ಶೋನಿಂದ್" ನ ವಿವರಣೆ ಏನೆಂದರೆ ಸುಲ್ತಾನ್ ಔರಂಗಜೇಬ್ ಪೀಠಾರೋಹಣವಾದ ಮುಂಚೆ ದರ್ವೇಶಿಯಿಂದ ಆಕರ್ಷಿತನಾಗಿದ್ದನು. ನುಡಿಯುತ್ತಾರೆ 'ನಾನು ನನ್ನ ಹುಚ್ಚು ಹೃದಯದಿಂದ ಕುಶಾಗ್ರಮತಿಯಾಗಲು ಹೇಳಿದ್ದೆ, ಅರ್ಥಾತ್ ಬಾದಶಹಾನಾಗುವ ವಿಚಾರವನ್ನು ತಲೆಯಿಂದ ತೆಗೆ ಹಾಗೂ ದರ್ವೇಶಿಯು ಕೈ ತಪ್ಪದಂತೆ ನೋಡಿಕೊಳ್ಳು. ಆದರೆ ಅದು ನನ್ನ ಒಂದು ಮಾತನ್ನೂ ಕೇಳಲಿಲ್ಲ. ಕೇವಲ ಬಾದಶಾಹಿಯ ಕಡೆಗೆಯೇ ಮೋಹಿತನಾದ. ಲೌಕಿಕ ವಿಚಾರವೇ ಪ್ರಾಮುಖ್ಯ ಪಡೆದಿದ್ದನ್ನು ನೋಡಿ, ಪಶ್ಚಾತ್ತಾಪದ ಭಾವದಲ್ಲಿ ನಾಲ್ಕನೆ ಸಾಲನು ನುಡಿದನು 'ಅರೇ ಅರೇ ತಿಫಿಲ್ ರಾ ಮಿಲ್ ಖವಾನಿ ಕಜಾಸಿತ್' ಅರ್ಥಾತ್ ಹೃದಯದ ಹುಡುಗತನಕ್ಕೆ ಈ ಪಾಠದ ಕಿನಾರೆಯು ಫಕೀರಿಯಾಗಿದೆ. ಆದರೆ ಇದರಲ್ಲಿ ನಿರಾಸಕ್ತನಾಗಿದ್ದಾನೆ. ಸಾಮಾನ್ಯವಾಗಿ ಪಾಠದ ಅಭ್ಯಾಸವು ಮೂಲತಃ ಮಗುವಿನ ಭವಿಷ್ಯತ್ತಿನ ಬದುಕಿಗೆ ಭಂಡಾರವಾದರೂ, ಮಗುವಿನ ವಯೋ ಸಹಜ ಪ್ರವೃತ್ತಿಯು ಸದಾ ಆಟೋಟಗಳ ಕಡೆಗೆಯೇ ಆಕರ್ಷಿತವಾಗಿರುತ್ತದೆ. ಆದುದರಿಂದ ಅವನು ಪಾಠದಿಂದ ದೂರ ಓಡುತ್ತಾನೆ.

ಆದರೆ ಶಹಬ್ಬಾಸ್‌ಗಿರಿ ಏನೆಂದರೆ 'ಧಾರ್ಮಿಕ ಬಾದಶಹಾನ ಆಶ್ರಯದ ಮೇಲೆ ಈ ಚ್ಯುತಿಯನ್ನು ಸ್ವೀಕರಿಸುವ ದೇವ ಸಮಕ್ಷಮ ತನ್ನ ಕರ್ಮಾಚರಣೆಯ ಕೊರತೆಯ ಚ್ಯುತಿಯನ್ನು ಅತ್ಯಂತ ಉತ್ತಮ ರೀತಿಯಲ್ಲಿ ಪ್ರಸ್ತುತಪಡಿಸುತ್ತಾನೆ. ಈ ತಪ್ಪಿನ ಅರಿವಿನ ಕಾರಣದಿಂದಲೇ ಅವನ ಆಸ್ಥಾನದಲ್ಲಿ ಸ್ವೀಕಾರ್ಹತೆಯು ಪ್ರಾಪ್ತವಾಗಿರಬೇಕು.

---

೧. ರುಬಾಯಿ – ನಾಲ್ಕು ಸಾಲಿನ ಸ್ವತಂತ್ರ ಕವನ ಪ್ರಕಾರ.

ಮಹಾಮಹಿಮ ದೇವರು ಎಲ್ಲಾ ಪರಿಸ್ಥಿತಿಯಲ್ಲಿಯೂ ಅವರ ಹಿತರಕ್ಷನೂ, ಸಹಾಯಕನೂ ಆಗಿದ್ದಾನೆ.

ಈಗ ಜೀವಿಗಳಿಗಾಗಿಯೂ ನೀನು ಪ್ರಾರ್ಥಿಸು,
'ಬಹರಿ ಇದು ಅನಿವಾರ್ಯವಾಗಿಹುದು ನಿನಗೆ.

ಮಾಡುವೆ ಅವನ ಉಪಕಾರ ಸ್ಮರಣೆ ಈ ಜಗದಿ ನೀನು,
ಕುಡಿಯುವೆ ಅವನ ಕಾಲುವೆಯಿಂದಲೇ ನೀರನು ನೀನು.

ಆಸಕ್ತನಾಗಿದ್ದರೆ ನೀ, ಈ ಚರ್ಚೆಯು ನಿರರ್ಥಕ,
ಈ ಬಲುದೂರದ ಮಾರ್ಗದಿಂದ ಹೊರಟು ಹೋಗು.

ಇದರ ಹೊರತು ಸ್ನೇಹಿತನಿಂದಾಗಲಿ, ಅನ್ಯನಿಂದಾಗಲಿ ಕೆಲಸವಿಲ್ಲ,
ಹಾಗೂ ಅವನ ಕೃಪೆಯಿಂದ ನೀನಾಗಿರು ಆನಂದಿತನು.

ಆಭರಣ–೧೨೩

ಲೌಕಿಕ ಪ್ರೇಮ ಹಾಗೂ ಅಲೌಕಿಕ ಪ್ರೇಮದ ಅರ್ಹತೆಗಳು

ಯಾವನೇ ವ್ಯಕ್ತಿಯು ಲೌಕಿಕ ಪ್ರೇಮದ ಹೊರತಾಗಿ ಪರಮ ಸತ್ಯದವರೆಗೆ ತಲುಪುತ್ತಿದ್ದರೆ, ನಾನು ವಿಶ್ವಾಸಿದಿಂದ ಹೇಳಬಲ್ಲೆ, ಅವನು ಪರಾಕಾಷ್ಟೆಯ ಹಂತದವರೆಗೆ ತಲುಪುವುದಿಲ್ಲ. ಯಾಕೆಂದರೆ ಲೌಕಿಕ ಪ್ರೇಮವೇ ಅಲೌಕಿಕ ಪ್ರೇಮದ ಅರ್ಹತೆಗೆ ಜನ್ಮ ನೀಡುತ್ತದೆ ಹಾಗೂ ನಾವು ಬಯಸದಿದ್ದರೂ ದ್ವಾರಪಾಲಕನು ಸತ್ಯಶಾಹಿಯ ಸಮ್ಮುಖ ತಂದು ನಿಲ್ಲಿಸುತ್ತಾನೆ. ಇದು ಇಂತಹ ಯಾತನೆಯಾಗಿದೆ. ಅದರಿಂದ ಔನ್ನತ್ಯದ ಭಾಗ್ಯ ಪ್ರಾಪ್ತಿಯಾಗುತ್ತದೆ. ಇದು ಇಂತಹ ಶೋಕರಾಗವಾಗಿದೆ. ಅದು ವಿಶೇಷ ದೈವೀವಲಯಕ್ಕೆ ತಲುಪಿಸುತ್ತದೆ ಆದರೆ ಈ ಯಾತನೆಯು ಲೌಕಿಕ ಪ್ರೇಮದ ತೀವ್ರತೆಯ ಹೊರತು ಪ್ರಾಪ್ತಿಯಾಗುವುದಿಲ್ಲ. ಈ ಪ್ರೇಮದ ಶೋಕರಾಗವು ಲೌಕಿಕ ಪ್ರೇಮದ ಅಗ್ನಿಯ ಹೊರತು ಪ್ರಾಪ್ತಿಯಾಗುವುದಿಲ್ಲ.

ಈ ಯಾತನೆಯು ಲೌಕಿಕ ಪ್ರೇಮದ ಕಾರಣವಾಗಲಿಲ್ಲ,
ಆಟವಾಯಿತು ಒಂದು, ಪ್ರೇಮದ ಯೋಧನಾಗಲಿಲ್ಲ.

ಈ ಮಾರ್ಗದಿಂದ ಹೃದಯವು, ತನ್ನ ಗುರಿಯನು ಬದಲಿಸಿದರೆ,
ಪ್ರೇಮಿಗಳ ಪಂಥದಲಿ ಅವನು ನಮಾಜಿ[೧] ಆಗಲಿಲ್ಲ.

ನಂತರದ ದೈವೀಧರ್ಮಗಾಮಿಗಳಾದ ಖ್ವಾಜಾ ಜುನೈದಿ ಬಾಗ್ದಾದಿ ಹಾಗೂ ಬಾಯಝೀದ್ ಬಸ್ತಾಮಿಯವರಂತಹವರ ಹೆಸರುಗಳು ಸೂರ್ಯನಂತೆ ಇಂದಿಗೂ ಪ್ರಕಾಶಮಾನವಾಗಿವೆ. ಇದೇ ದೈವೀ ಪ್ರೇಮದ ಮೂಲಕ ಅವರಿಗೆ 'ಏಕತ್ವ'ದ ಅತ್ಯುನ್ನತ ಸ್ಥಾನವು ಪ್ರಾಪ್ತಿಯಾಯಿತು. ಇದೇ ಲೌಕಿಕ ಪ್ರೇಮದ ಸತ್ಯಾನ್ವೇಷಣೆ ಮಾರ್ಗದ ಪ್ರಯತ್ನವು ಮೈಲುಗಲ್ಲಾಗಿ ಸಾಬೀತಾಯಿತು. ಇದೇ ಒಂದು ಯಾತನೆಯು 'ಪ್ರಾಪ್ತಿ'ಯಾಗಿದ್ದರೆ ಹಾಗೂ ಇದರ ಹೊರತು ಏನೂ ಇರದಿದ್ದರೆ, ವಿಶ್ವಾಸವಿಡು, ಅದೇ ಸಮಸ್ತವಾಗಿದೆ. ಇದೇ ಸಮಸ್ತವಾಗಿದ್ದರೆ ಹಾಗೂ ಇದೊಂದು ಯಾತನೆಯಾಗದೇ ಇದ್ದರೆ, ವಾಸ್ತವ ಸತ್ಯತೆಯಿಂದ ಅವನ ಬಳಿ ಮತ್ತೇನೂ ಇಲ್ಲ ಎಂದು ತಿಳಿ.

"ಯಾತನೆಯು ಕೇವಲ ಪ್ರಾಪ್ತಿಯಾಗಿದ್ದರೆ, ಅದು ಸಮಸ್ತ ಪ್ರಾಪ್ತಿ,
ಸಮಸ್ತವಿದ್ದು, ಯಾತನೆ ಇರದಿದ್ದರೆ, ಅದು ಏನೂ ಇಲ್ಲ.

ಪ್ರೇಮಿಯಂತೆ ನೀನು ದೇವರಿಂದ ಯಾತನೆಯನ್ನು ಯಾಚಿಸು,
ಪ್ರೇಮದಲಿ ನೀನು ಪುರುಷನಾಗಿರದಿದ್ದರೆ ಅದು ಏನೂ ಇಲ್ಲ.

ಹೇ ಆತ್ಮಿಯನೇ, ಪರವಶತೆಯ ಪ್ರಸ್ತಾಪವನ್ನು ಎಲ್ಲಾ ಕಡೆ, ಪ್ರತಿಯೊಬ್ಬ ಮನುಷ್ಯನು ಮಾಡುತ್ತಾನೆ. ಆದರೆ ಇದು ಕೇವಲ ಬಾಯಿ ಮಾತಿನ ಜಮಾ-ಖರ್ಚಿನ ಲೆಕ್ಕವಾಗಿದಯೇ ಹೊರತು ಪರವಶತೆಯ ಸ್ಮರಣೆ, ಕಾರ್ಯತಂತ್ರ ಹಾಗೂ ಕಲ್ಪನೆಯಿಂದ ಪ್ರಾಪ್ತವಾಗುವುದಿಲ್ಲ. ಯಾಕೆಂದರೆ ಅನ್ಯರಿಂದ ಅಗೋಚರವಾಗಬಹುದೇ ವಿನಾಃ ಸ್ವಯಂ ತನ್ನಿಂದಲೇ ಅಂತೂ ಅಲ್ಲ. ಎಲ್ಲಿಯವರೆಗೆ 'ಸ್ವಯಂ'ಗೆ 'ಸ್ವಯಂ'ನ ಮಾಹಿತಿ ಇರುವುದಿಲ್ಲವೋ ಅಲ್ಲಿ ಪರವಶತೆ ಎಲ್ಲಿರುತ್ತದೆ? ಸ್ಪಷ್ಟವಾಗುವುದೇನೆಂದರೆ ಇದು ಪ್ರಾಪ್ತವಾಗುವುದಾದರೆ ಲೌಕಿಕ ಪ್ರೇಮದಿಂದ ಮಾತ್ರ, ಯಾಕೆಂದರೆ ಲೌಕಿಕ ಪ್ರಿಯತಮೆಯು ಪ್ರಿಯಕರನನ್ನು ಕೂದಲೆಳೆಯೆಷ್ಟು ಅಗಲುವುದಿಲ್ಲ. ಅದು ತನ್ನಲ್ಲಿ ಇದ್ದು ಅರ್ಥಾತ್ ಇದರ ಪರಿಪೂರ್ಣ ಅಸ್ತಿತ್ವವನ್ನು ಅಲ್ಲದೆ ಸಮಸ್ತ ಇರುವಿಕೆಗಳನ್ನು ನುಂಗಬಹುದು. ಇದು ದಯಪಾಲಿಸಲ್ಪಟ್ಟ ಪ್ರೇಮವಾಗಿದೆಯೇ ವಿನಃ ಅರ್ಜಿತ ಪ್ರೇಮವಲ್ಲ.

ಪರವಶತೆಯು ಪ್ರಾಪ್ತಿಯಾಗುವುದಿಲ್ಲ. ಲೌಕಿಕ ಪ್ರೇಮದ ಹೊರತು,
ದೈವಪ್ರೇಮದ ಹೊರತು, ಅದು ಪ್ರೇಮಿಯನ್ನು ಭಸ್ಮಗೊಳಿಸುತ್ತದೆ.

ಅದು ಗಗನದಿಂದ ನೆಲದವರೆಗೆ ಎಲ್ಲವನ್ನು ನುಂಗಿಹಾಕುತ್ತದೆ,
ಆದರೆ ಪ್ರೇಮ ಹಂಬಲಿತನನ್ನು ಮಾತ್ರ ಅದು ನುಂಗುವುದಿಲ್ಲ.

---

೧. ನಮಾಜೀ – ನಮಾಜ್ ಮಾಡುವವನು.

ಹೇ ಆತ್ಮೀಯನೇ, ವಿಸ್ಮಯಗಳು ಹಾಗೂ ಚಮತ್ಕಾರಗಳು ಲೌಕಿಕ ಪ್ರೇಮದ ಹೊರತು ಪ್ರಕಟವಾಗುವುದಿಲ್ಲ ಇವುಗಳ ಹೊರತು ಪ್ರಕಟವಾಗುತ್ತಿದ್ದರೆ, ಅದು ನಯವಂಚನೆ ಹಾಗೂ ದ್ರೋಹದ ಹೊರತು ಮತ್ತೇನು ಅಲ್ಲ.

ಚಮತ್ಕಾರಗಳು ಪ್ರೇಮ ವಾತ್ಸಲದ ಸುವಾಸನೆಯಾಗಿದೆ,
ಅದು ಪ್ರೇಮದ ಹೊರತಾಗಿದ್ದರೆ ಮಾಟವಾಗಿದೆ.

ಪ್ರೇಮದಲಿ ಸರಕು ಆಗಬೇಡ, ಬದಲಿಗೆ ಸೋತು ಬಿಡು,
ಹೊಂದಿದರೆ ನೀ ಚಮತ್ಕಾರದ ಅಭಿಲಾಷೆಯನು.

ಲೌಕಿಕ ಪ್ರೇಮದಲಿ ನಿಜವಾಗಿಯೂ ಪವಾಡವಿದ್ದರೆ,
ಈ ಪವಾಡವು ಪ್ರೇಮ ವ್ಯಕ್ತಿಗಳ ಪರಿಯಾಗಿದೆ.

ಹೀಗಾಗಿ ಫಕೀರನ ಪಂಗಡದಲ್ಲಿ ಒಬ್ಬ ಪ್ರಿಯತಮೆ ಇದ್ದಳು. ಅಹಾ! ಅವಳನ್ನು ಯಾವ ರೀತಿಯಿಂದ ವರ್ಣಿಸಲಿ ಹಾಗೂ ಏನೆಂದು ಬರೆಯಲಿ ಸೌಂದರ್ಯ ಹಾಗೂ ಪರಿಪೂರ್ಣತೆಯಲಿ ಸೂರ್ಯನ ತರಹ ತನ್ನ ಪರ್ಯಾಯವನ್ನು ಹೊಂದಿರುತ್ತಿರಲಿಲ್ಲ. ಇವಳ ಹುಬ್ಬಿನ ಕಮಾನು ಪ್ರೇಮಿಗಳ ಪ್ರಾಣಹರಣ ಮಾಡುವ ಬಾಣದ ಸುರಿಮಳೆಗೈಯುತ್ತವೆ... ಇವಳ ಮುಖಚಹರೆಯು ಹಗಲಿಗಿಂತಲೂ ಅಧಿಕ ಪ್ರಕಾಶಮಾನ ಹಾಗೂ ಇವಳ ನಿಡಿದಾದ ಕೇಶರಾಶಿ ರಾತ್ರಿಯ ಕತ್ತಲೆಗಿಂತಲೂ ಅಧಿಕ ಕಪ್ಪು, ಆಕೆಯ ಹಣೆಗೆ ಸೂರ್ಯನಿಂದ ಪ್ರಕಾಶ ಹಾಗೂ ಗದ್ದದ ತಗ್ಗಿಗೆ ಝುಮ್ ಝುಮ್[೧] ಬಾವಿಯಿಂದ ನೀರು ದೊರೆಯುತ್ತಿತ್ತು. ಆಕೆಯ ಕೆಂಪು ತುಟಿಗಳು ಯಾಖೂತ್ ರತ್ನದ ಹೃದಯವನ್ನು ರಕ್ತಸಿಕ್ತಗೊಳಿಸುವಂತಿದ್ದವು. ಆಕೆಯ ಕಣ್ಣುಗಳು ನರ್ಗಿಸ್[೨]. ನನ್ನು ತನ್ನ ಅಲ್ಪ ಪರಿಚಾರಿಕೆಯೆಂದು ಭಾವಿಸುತ್ತಿತ್ತು. ಫಕೀರನು ಅವಳ ಅನುಪಮ ಸೌಂದರ್ಯ ಹಾಗೂ ಬೆಡಗಿಗೆ ಮಾರು ಹೋಗಿದ್ದನು, ಹಾಗೂ ಹೃದಯವು ಅವಳ ಭಾವಭಂಗಿಗೆ ಮನ ಸೋತಿತ್ತು. ಕದ್ದು ಮುಚ್ಚಿ ಅವಳನ್ನು ಪ್ರೀತಿಸುತ್ತಿದ್ದನು. ಇದರ ರಹಸ್ಯವು ಪ್ರೇಮದ ಹೊರತು ಯಾರಿಗೂ ಗೊತ್ತಿರಲಿಲ್ಲ. ಈ ಸಮಯದಲ್ಲಿ ವಿಚಿತ್ರ ಘಟನೆಗಳು ಜರುಗಿದವು. ಅವುಗಳಲ್ಲಿ ಒಂದು ಘಟನೆಯೆಂದರೆ ಲಜ್ಜೆರಹಿತ ಹಾಗೂ ಪ್ರೇಮವಿರೋಧಿ ಗಗನವು ಅವಳ ಮೇಲೆ ದೊಡ್ಡ ಸಂಕಷ್ಟವನ್ನೇ ಬೀಳಿಸಿತ್ತು. ಅದೇನೆಂದರೆ ಅವಳ ಸಹೋದರನು ಹೈದರಾಬಾದಿಗೆ ಹೋಗಿದ್ದನು. ದಾರಿಯಲ್ಲಿ ಕಣ್ಮರೆಯಾದನು. ಈ ಸುದ್ದಿಯು ಗೋಗಿಗೆ ತಲುಪಿದ ತಕ್ಷಣ, ಆಕೆ ಎಲ್ಲಾ ಕಡೆ ಹುಡುಕಲು ಜನರನ್ನು ಕಳುಹಿಸಿದಳು. ಯಾವ ನಗರದಲ್ಲಿಯೂ, ಯಾವ

೧. ಝುಮ್ ಝುಮ್ : ಮಕ್ಕಾದ ಪವಿತ್ರ ಚಿಲುಮೆಯ ನೀರು.
೨. ನರ್ಗಿಸ್ : ಕಣ್ಣಿನಾಕಾರದ ಒಂದು ಹೂವು.

ಗ್ರಾಮದಲ್ಲಿಯೂ ಅವನ ಸುಳಿವು ಸಿಗದೇ ಹೋದ, ಜನ ನಿರಾಶರಾಗಿ ಮರಳಿದರು. ಆಗ ಆ ವ್ಯಕ್ತಿಯ ತಾಯಿ ತಂದೆ ಹಾಗೂ ಅವನನ್ನು ಅತ್ಯಂತ ಪ್ರೀತಿಸುತ್ತಿದ್ದ ಈ ಸಹೋದರಿ ರೋಧನವನ್ನು ಪ್ರಾರಂಭಿಸಿದರು. ಇವರ ಚೀರಾಟ, ಗೋಳಾಟವು ಇವರ ನೆರೆಹೊರೆಯವರ ತಾಳ್ಮೆಯನ್ನು ಪರೀಕ್ಷಿಸುವಂತಿತ್ತು. ಫಕೀರನಿಗೂ ಈ ವಿಷಯ ತಿಳಿಯುತ್ತಲೇ ಓಡುತ್ತಾ ಓಡುತ್ತಾ ಧಾವಿಸಿದನು. ಆ ಪ್ರಿಯತಮೆಯು ನನ್ನನ್ನು ಕಂಡಾಗ ಅವಳ ಗೋಳಾಟದಲ್ಲಿ ಇನ್ನೂ ವೃದ್ಧಿಯಾಯಿತು. ಕಣ್ಣೀರು ಧಾರೆ ಹರಿಸುತ್ತಾ ನನಗೆ ಹೇಳಹತ್ತಿದಳು. ಅದೇನೆಂದರೆ ನನ್ನ ಸಹೋದರನು ಮೃತ್ಯವಿಗೆ ಗುರಿಯಾಗಿದ್ದಾನೆ. ಬಹುಶಃ ನಾನು ಅವನ ಜತೆಯಲ್ಲಿರುತ್ತಿದ್ದರೆ ಎಷ್ಟು ಒಳ್ಳೆಯದಿತ್ತು! ಆಗ ನಾನು ನುಡಿದೆ, ಮೃತ್ಯುವಿಗೆ ಕೈ ಚಾಚುವ ಧೈರ್ಯವಾದರೂ ಉಂಟೆ? ಹಾಗೂ ಅವನ ವೈಭೋಗ ಹಾಗೂ ಆನಂದದಲ್ಲಿ ವೃಥಾ ಹಸ್ತಕ್ಷೇಪ ಮಾಡುವ ಸಾಹಸವಾದರೂ ಎಲ್ಲಿ?. ದೇವರಿಗೆ ಧನ್ಯತೆಯನ್ನು ಅರ್ಪಿಸು, ಅವನು ಸುರಕ್ಷಿತವಾಗಿ ಹಿಂತಿರುಗಿ ಬರುತ್ತಿದ್ದಾನೆ. ಆಗ ಅವಳು ಕೇಳಿದಳು ಯಾವಾಗ ಬರುತ್ತಿದ್ದಾನೆ. ನಾನು ಉತ್ತರಿಸಿದೆ 'ನಾಳೆ'.

ಚಿಂತೆ ಏಕೆ ನಿನಗೆ? ಬರುವನು ಅವನು ನಾಳೆ,
ತನ್ನ ಮುಖದರ್ಶನವನು ತೋರುವನು ಅವನು ನಾಳೆ,

ಭೂಮಿಯ ಆಳದಲ್ಲಿ ಹೂಳಲ್ಪಟ್ಟರೂ ಅವನು,
ದೇವರ ಆಜ್ಞೆಯಿಂದ ನಿಶ್ಚಿತವಾಗಿ ಎದ್ದು ಬರುವನು.

ಭೂಮಿಯ ಹರಿವಾಣದ ಮೇಲಿನಿಂದ ರಾತ್ರಿಯ ಆವರಿಸಿದ ವಸ್ತ್ರವು ಸರಿಯಿತು. ಮುಂಜಾವಿನ ಎಳೆ ಕಿರಣ ಮಂದಹಾಸವು ಎಲ್ಲೆಡೆ ಪಸರಿಸಿತು. ಆಗ ಯಾವುದೇ ದಾರಿ ಕ್ರಮಿಸದೆ ಅನಾಯಾಸವಾಗಿ ಮಸೀಹ ಮವುದ್ನ ತರಹ ಆಕಾಶದಿಂದ ಇಳಿದು ಬಂದನು ಹಾಗೂ ಆತ್ಮೀಯರ ನಡುವೆ ಹಾಜರಾದನು. ದೈವೀ ತೋಟದ ಪುಷ್ಪವೃಕ್ಷದ ಆ ಮೊಗ್ಗು ತನ್ನ ಪರಿವಾರದ ಜತೆ ಅತ್ಯಂತ ಸಂತಸದಲ್ಲಿತ್ತು. ಹಾಗೂ ಫಕೀರನ ಬಗ್ಗೆ ಸಂತೋಷ ಪ್ರಕಟ ಪಡಿಸಿದನು. ಪ್ರಿಯತಮೆಯು ಇದ್ದ ಅಸ್ತಿತ್ವವು ಪ್ರಿಯಕರವಾಯಿತು. ಇದೇ ಭಾವಾರ್ಥದ ಮತ್ತೊಂದು ಘಜಲ್ ಈ ರೀತಿಯಾಗಿದೆ.

ಯಾವನು ಹೃದಯವಂತನ ಸಂಬಂಧಿತ ಸ್ವಭಾವಿತನಾಗಲಿಲ್ಲ,
ದಾಳಿಂಬದ ಹೂವಿನ ಕಡುಗೆಂಪಿನ ಸಂಬಂಧಿತ ಸ್ವಭಾವಿತನಾಲಿಲ್ಲ.

ಯಶಸ್ವಿ ಸತ್ಯಪ್ರೇಮಿಯ ಪರಿ ಏನಿಹುದು ಹೇಳು ನೀ,
ಎಂದೂ ದರ್ಬಾರಿನ ಸಭೆಯ ಉಪಸ್ಥಿತಿಯ ಸಂಬಂಧಿತ ಸ್ವಭಾವಿತನಾಗಲಿಲ್ಲ.

ಗೋಷ್ಠಿಯ ವೀಕ್ಷಕನಾಗಿಯೂ ಅರ್ಥದ ಆಳಕೆ ತಲುಪುವುದಿಲ್ಲ,
ಅವಳ ಜತೆಯಲ್ಲಿದ್ದು ಬಹುಮೂಲ್ಯ ಮುತ್ತಿಗೆ ಸಂಬಂಧಿತ ಸ್ವಭಾವಿತನಾಗಲಿಲ್ಲ.

ಪ್ರೇಮದ ಬೀಜವು ನೀಡುವುದಿಲ್ಲ. ವಾಸ್ತವದ ಫಲ ಎಂದಿಗೂ,
ಅವನು ತೋಟದ ಪವಿತ್ರ ತಾಣಗಳ ಸಂಬಂಧಿತ ಸ್ವಭಾವಿತನಾಗಲಿಲ್ಲ.

ಸತ್ಯಕೋಶದ ಒಡೆಯನು ನೀನೆಂದು ಆಗಲಾರೆ ಹೇ 'ಬಹರಿ',
ನಿನ್ನ ಪ್ರಿಯತಮೆಯು ಪ್ರೇಮಿಯ ಸಂಬಂಧಿತ ಸ್ವಭಾವಿತನಾಗಲಿಲ್ಲ.

ಅದೇ ಓಣಿಯಲ್ಲಿ ಇನ್ನೋರ್ವ ವಿಧವೆ ವಾಸಿಸುತ್ತಿದ್ದಳು. ಅವನ ಮಗನೂ ಯಾವುದೇ ವೃತ್ತಿಯ ಹುಡುಕಾಟದಲ್ಲಿ ಊರನ್ನು ತ್ಯಜಿಸಿ ಎಲ್ಲೋ ಮಾಯವಾಗಿದ್ದನು. ಈ ಘಟನೆಯನ್ನು ಕೇಳಿ ಅರಿತ ಅವಳು, ಕಾಣೆಯಾಗಿದ್ದ ತನ್ನ ಮಗನಿಗೋಸ್ಕರವೂ ಸಹ, ಅವನು ಮರಳಿ ಬರುವಂತೆ ಒಂದರ್ಥ ನುಡಿ ಉಚ್ಚರಿಸುವಂತೆ ನನ್ನ ದುಂಬಾಲು ಬಿದ್ದಳು. ಆಗ ನಾನು ನುಡಿದೆ ಆ ನುಡಿ ಹಾಗೂ ಆಜ್ಞೆಯನ್ನು ಪುನರುಚ್ಚಿಸಿದವನು ಇನ್ನೊಬ್ಬ ಬೇರೆ ಯಾರೋ ಆಗಿದ್ದನು. ಈಗಲೂ ಆ ನುಡಿಗಳನ್ನು ನನ್ನ ನಾಲಿಗೆಯಿಂದ ಹೊರಹೊಮ್ಮಿಸುವುದು ನನ್ನ ಸಾಮರ್ಥ್ಯಕ್ಕೆ ಮೀರಿದ ಮಾತಾಗಿದೆ. ಅವಳು ನನ್ನನ್ನು ನಿಂದಿಸುತ್ತಾ ಹೊರಟು ಹೋದಳು.

ಈ ತರಹದ ಹೆಣ್ಣು ಯಾರಾದರೂ ಇದ್ದರೆ, ಹೇ ಅರಸನೇ,
ಕೊಲೆ ಮಾಡು ಅವಳನು, ಅದು ಪಾಪವಾದರೂ ಸರಿಯೇ.

ಆಭರಣ–೧೨೪

ಲೌಕಿಕ ಪ್ರೇಮಿಯ ದರ್ಶನ

ಒಂದು ರಾತ್ರಿ ನನ್ನ ಪೀರ್ ಮುರ್ಷದ್ ಮಾನ್ಯರು ಆಗಮಿಸಿದರು. ತಮ್ಮ ಆದೇಶಾತ್ಮಕ ವಚನಗಳಿಂದ ಅಹಂಕಾರ ಹಾಗೂ ಅಜ್ಞಾನದ ಬಂಧನದಿಂದ ಬಿಡುಗಡೆ ಮಾಡಿಸಿದರು. ನಾನು ಅರಿಕೆ ಮಾಡಿಕೊಂಡೆ, ಹೇ ದಸ್ತಗೀರ್, ಯಾವುದಾದರೂ ಇಂತಹ ಸ್ಮರಣೆ ಅಥವಾ ಧ್ಯಾನಾಸಕ್ತಿ ಸ್ಥಿತಿಯ ತಿಳುವಳಿಕೆಯನ್ನು ನೀಡಿ, ಅದರಿಂದ ನಾನು ಸದಾ ಏಕದೇವಾರಾಧನೆಯ ಮೇಲೆ ಸ್ಥಿರವಾಗಿರುವಂತಿರಲಿ ಹಾಗೂ ಅನೇಕತೆಯ ವಿಚಾರವನ್ನು ಅಳಿಸಿ ಹಾಕುವಂತಿರಲಿ ಮುರ್ಷದರು ದಾಸಾನುಗ್ರಹಿಯಾಗಿ ತಮ್ಮ ಕೃಪೆಯನ್ನು ತೋರಿದರು. ಯಾಕೆಂದರೆ ಯಾವುದೇ ಪೀರನ ಸಮ್ಮುಖ ಸ್ಮರಣೆ ಅಥವಾ ಧ್ಯಾನದ ಬದಲಿಗೆ ಸ್ವಯಂ ದರ್ಶನದ ಹೊರತು ಬೇರ್ಯಾವುದು

ಸೂಕ್ತವಾಗಿರುವುದಿಲ್ಲ. ಮನೆ ತಲುಪಿದ ನಂತರ, ನಾನು ಅವರ ಆದೇಶವನ್ನು ಕಾರ್ಯರೂಪಕ್ಕೆ ತರಲು ಆ ಕಾಲದಲ್ಲಿ ಉತ್ಕಟ ಪ್ರೇಮಿಯಾಗಿದ್ದ, ನನ್ನ ಲೌಕಿಕ ಪ್ರಿಯತಮೆಯ ಮೊಗವು ಮಧ್ಯದಲ್ಲಿ ಪ್ರತ್ಯಕ್ಷವಾಯಿತು. ಈ ಹೃದಯವು ವಾಸ್ತವವಾಗಿ ನಿನ್ನ ಸ್ವತ್ತಾಗಿದೆ, ಆದರೆ ಅದು ನನ್ನ ವಸತಿಯ ಸ್ಥಾನವಾಗಿದೆ. ಅವನು ಯಾವನು? ನನ್ನನ್ನು ಹೊರಹಾಕುವ ಅವನ ಧೈರ್ಯವಾದರೂ ಏನು? ಹಾಗೂ ಸ್ವಯಂ ತಾನು ಅಲ್ಲಿ ಬಿಡಾರ ಹಾಕುವ ಆಲೋಚನೆಯಲ್ಲಿದ್ದಾನೆ. ನಾನು ಸ್ವಲ್ಪ ಮಟ್ಟಿಗೆ ಮೃದುತ್ವ, ಜತೆಗೆ ಸ್ವಲ್ಪ ಕಠೋರತೆಯನ್ನು ಪ್ರದರ್ಶಿಸಿದೆ. ವಿನಯಶೀಲವಾಗಿ ಪರಿಪರಿಯಾಗಿ ವಿನಂತಿಸಿದೆ. ಆದರೂ ಅವಳು ಹೋಗಲಿಲ್ಲ. ಸಂಪೂರ್ಣ ರಾತ್ರಿಯನ್ನು ಅವಳ ಓಲೈಕೆ ಹಾಗೂ ಕಲಹದಲ್ಲಿ ಕಳೆದೆ, ಅದು ನಿಜಕ್ಕೂ ಯಾತನಾಮಯವಾಗಿತ್ತು.

ಅದು ರಾತ್ರಿಯಾಗಿರಲಿಲ್ಲ, ಹೃದಯದ ಮೇಲೆ ಕಲ್ಲಿತ್ತು,
ಪ್ರೇಮಿಯು ಇರಲಿಲ್ಲ, ಶತ್ರುವಿಗಿಂತಲೂ ಘೋರವಾಗಿತ್ತು.

ಈ ರೀತಿಯಾಗಿ ವಿಧಿ ಲಿಖಿತವೂ ಜತೆ ನೀಡಲಿಲ್ಲ ಹಾಗೂ ಹಣೆಬರಹವು ಸಹಾಯ ಮಾಡಲಿಲ್ಲ. ದರ್ಶನ ಪ್ರಸಾದದಿಂದ ವಂಚಿತನಾದೆ ಹಾಗೂ ಅನಂತ ಉಪಕಾರಗಳಿಂದ ನಿರಾಶೆಗೊಂಡೆ.

ಒಂದು ಸಮಯವು ಈ ತರಹವೂ ವ್ಯತೀತವಾಯಿತು.
ಸ್ವಯಂ ವಿಧಿಲಿಖಿತವೂ ಹಗೆತನವನ್ನು ತೋರಿತು.

ದೇವರು, ದೇವರು ಎನ್ನುವುದರೊಳಗೆ ಬೆಳಗಾಯಿತು ಹಾಗೂ ಸೂರ್ಯೋದಯವಾಯಿತು. ನಾನು ಅತ್ಯಂತ ಶೋಕತಪ್ತನಾಗಿ, ಆಕ್ರಂದನ ಮಾಡುತ್ತಾ, ಹಜ್ರತ್‌ರ ನಿವಾಸ ಸ್ಥಳಕ್ಕೆ ತಲುಪಿದೆ. ಅತ್ಯಂತ ಲಜ್ಜೆ ಹಾಗೂ ಪಶ್ಚಾತಾಪದಿಂದ ರಾತ್ರಿಯ ಘಟನೆಯನ್ನು ಹಜ್ರತರಿಗೆ ರಹಸ್ಯವಾಗಿ ತಿಳಿಸಿದೆ.

ಯಾಕೆಂದರೆ ಯಾರೂ ಅದನ್ನು ಕೇಳದೇ ಇರಲೆಂದು ಹಾಗೂ ನನ್ನನ್ನು ದುರ್ದೈವಿಯೆಂದು ಭಾವಿಸದಿರಲೆಂದು. ಹಜ್ರತ್‌ರು ನನ್ನ ವರ್ಣನೆಯನ್ನು ಕೇಳಿ ಒಂದು ನಿಟ್ಟುಸಿರನ್ನು ಬಿಟ್ಟರು. ತದನಂತರ ನುಡಿದರು, ನೀನು ನಿನ್ನ ಪ್ರೇಮಿಯ ದರ್ಶನದ ಸ್ವಾದವನ್ನು ಪ್ರಾಪ್ತಿಸಿಕೊಳ್ಳು ಹಾಗೂ ಅದರ ಸೊಬಗಿನ ವೀಕ್ಷಣೆಯಲ್ಲಿ ಮಗ್ನನಾಗಿರು. ನಾನು ನನ್ನ ವೀಕ್ಷಣೆಯ ಪರಿಯನ್ನು ನಿನಗೆ ತಿಳಿಸಿ ಹೇಳಿ ಕೊಟ್ಟಿದ್ದೆ, ಅದನ್ನು ಬಿಟ್ಟು ಬಿಡು. ನನಗೆ ಮೊದಲೇ ಪರಿಸ್ಥಿತಿಯು ಈ ರೀತಿಯಾಗುತ್ತದೆ ಎಂದು ಗೊತ್ತಿದ್ದರೆ ನಾನೇಕೆ ನಿನಗೆ ಹೀಗೆ ಹೇಳುತ್ತಿದ್ದೆ. ನಿನ್ನ ಪ್ರೇಮವು ನೀರಾಗಿದೆ.

ಹಾಗೂ ಇದು (ನನ್ನ ವೀಕ್ಷಣೆ) 'ತಯ್ಯಮಮ್'[1] ನೀರು ಇದ್ದರೆ 'ತಯ್ಯಮಮ್'ನ ಸಮ್ಮತವಲ್ಲ.

ನಿನ್ನ ಹೃದಯವು ಪ್ರೇಮದಲ್ಲಿ ಬಂಧಿತವಾಗಿದ್ದರೆ,
ನೀ ತಕ್ಷಣವೇ ಬಿಡು, ಎಲ್ಲಾ ಕೆಲಸಕಾರ್ಯ, ಚಿಂತನೆಗಳನು.

ನಿನ್ನ ಮನೆಯು ನೀರಿನಿಂದ ಬರಿದಾಗಿದ್ದರೆ,
ಅಂಥ ಸ್ಥಿತಿಯಲ್ಲಿ ಅನಿವಾರ್ಯವಾಗಿ ಮಾಡಿ ತಯ್ಯಮಮ್

ಆಭರಣ-೧೨೫

ಪ್ರೇಮದ ಮೂರು ಅವಸ್ಥೆಗಳು

ಪ್ರೇಮದ ಮೂರು ಅವಸ್ಥೆಗಳಿವೆ. ಪ್ರಥಮವಾಗಿ ಆರಂಭದಲ್ಲಿ ಪ್ರಿಯಕರುನು ಯಾವುದೇ ರೀತಿಯಿಂದಲೂ ಪ್ರಿಯತಮೆಯ ಮುಖವನ್ನು ನೋಡುವುದು ಹಾಗೂ ತಾಜಾತನದ ನೋಟದ ಉದ್ಯಾನದಿಂದ ದರ್ಶನದ ಪುಷ್ಪವನ್ನು ಕಿತ್ತುವುದು. ಜೊತೆಗೆ ಈ ಅಭಿಲಾಷೆಯನ್ನು ಹೊಂದಿರುತ್ತಾರೆ. ಅದೇನೆಂದರೆ ಅಂತೂ-ಇಂತೂ ಪ್ರಿಯತಮೆಯು ತನ್ನನ್ನು ಗಮನಿಸಲಿ ಎಂದು. ಅವಳನ್ನು ಕಾಣುವ ಅಭಿಲಾಷೆಯ ಕಾರಣವೇನೆಂದರೆ ಈ ಬಡಪಾಯಿಯು ಎಲ್ಲದರಿಂದಲು ಮುಖವನ್ನು ಬೇರೆಡೆಯಿಂದ ತಿರುಗಿಸಿ, ಕೇವಲ ಇವಳ ಕಡೆ ಗಮನ ಹರಿಸಿದ್ದಾನೆ ಎಂಬುದು ಆಕೆಗೆ ಅರಿವಾಗಲಿ ಎಂದು.

ಈ ಗಮನದಿಂದ ಅವಳ ಕೃಪೆ ಹಾಗೂ ಒಲವು ವೃದ್ಧಿಸಲಿ ಎಂದು. ಪ್ರೇಮಿಯು ಎಲ್ಲಿಯವರೆಗೆ ಪ್ರಿಯತಮೆಯು ತನ್ನ ಕಡೆ ಗಮನಹರಿಸಬೇಕೆಂಬ ಅಭಿಲಾಷೆಯನ್ನು ಹೊಂದಿರುತ್ತಾನೆಯೋ, ಅಲ್ಲಿಯವರೆಗೆ ಅವನ ಪ್ರೇಮವು ಪ್ರಥಮ ಹಂತದಲ್ಲಿಯೇ ಇರುತ್ತದೆ. ಯಾವಾಗ ಈ ಬಯಕೆಯು ಅವನ ಹೃದಯದಿಂದ ಅಳಸಿಹೋದರೆ ಅರ್ಥಾತ್ ಪ್ರಿಯತಮೆ ನೋಡಲಿ ಅಥವಾ ನೋಡದೇ ಇರಲಿ, ಆದರೆ ತಾನು ಮಾತ್ರ ಯಾವುದೇ ಮಾರ್ಗೋಪಾಯದಿಂದ ಅವಳನ್ನು ನೋಡುವಂತಿದ್ದರೆ, ಬಹುಶಃ ಮರವನ್ನು ಏರಿಯಾದರೂ ಇರಬಹುದು ಅಥವಾ ಗೋಡೆಯನ್ನು ಹತ್ತಿಯಾದರೂ

---

೧. ಪ್ರತಿ ನಮಾಜಿನ ಮುಂಚೆ ನೀರಿನಿಂದ ಒಂದು ನಿಯಮಿತ ರೀತಿ ಕೈಕಾಲು ಮುಖವನ್ನು ತೊಳೆದುಕೊಳ್ಳಬೇಕು ಇದಕ್ಕೆ ವುಜೂ ಎನ್ನುತ್ತಾರೆ. ಇದು ನಮಾಜಿನ ಮುಂಚೆ ಅನಿವಾರ್ಯವಾಗಿದೆ. ನೀರು ಸಿಗದ ಸ್ಥಿತಿಯಲ್ಲಿ ಮಣ್ಣಿನ ಮೇಲೆ ಸಂಜ್ಞೆಯ ಮಾಡಬಹುದಾಗಿದೆ. ಇದಕ್ಕೆ ತಯಮ್ಮಮ್ ಎಂದು ಕರೆಯುತ್ತಾರೆ.

ಅದು ಕೈಗೂಡಬಹುದು. ಯಾವುದೇ ರೀತಿಯಿಂದಾಗಲಿ ಅಪರಿಚಿತತೆಯಲಿ ಅವಳನ್ನು ಕಂಡರೆ ಹಾಡೂ ಅವಳ ಸಂಭಾಷಣೆಯನ್ನು ಅವಳಿಗೆ ಅರಿವಿಲ್ಲದೆ ತೆರೆಯ ಮರೆಯಿಂದ ಕೇಳಿ, ತನ್ನ ನೋವುಭರಿತ ಹೃದಯಕ್ಕೆ ಸಾಂತ್ವನ ಹೇಳುವಂತಿದ್ದರೆ ಇದು ಪ್ರೇಮದ ಎರಡನೇ ಹಂತವಾಗಿದೆ. ಯಾವನಾದರು ಇವನಿಗೆ ಈ ರೀತಿ ನುಡಿದರೆ ಅಂದರೆ ನೀನ್ಯಾಕೆ ಮಧ್ಯಮ ಹಂತದಲ್ಲಿದ್ದೀಯಾ! ಏಳು, ಎದ್ದೇಳು! ಏಕದೇವ ವಿಶ್ವಾಸಿಗಳ ಜತೆ ಮೂರನೆಯ ಹಂತ, ಯಾವುದು ಕೊನೆಯ ಹಂತವೂ ಆಗಿದೆಯೋ, ಅದರಲ್ಲಿ ಶಾಮೀಲಾಗಲು ಸೂಚಿಸಿದರೆ, ಆಗ ಅವನು ಹೇಳುತ್ತಾನೆ. ಹೃದಯಶಾಲೆ ಮಿತ್ರನ ಬೀದಿಯಲ್ಲಿ ಕೋಮಲ ಹೃದಯದ ನೋವಿನ ಜೊತೆ ಸುರಕ್ಷಿತವಾಗಿದ್ದೇನೆ, ವಾದ್ಯದ ಸುಮಧುರ ಸ್ವರದಲ್ಲಿ ತನ್ಮಯ ಹಾಗೂ ಪ್ರೇಮಭರಿತ ಕವನಗಳಿಂದ ಉಲ್ಲಸಿತ ಹಾಗೂ ಕೋಮಲತೆಯಲ್ಲಿ ಪ್ರಮತ್ತನಾಗಿ ಆನಂದಿತನಾಗಿದ್ದಾನೆ. ಹೀಗಾಗಿ ಸೌಖ್ಯ ಹಾಗೂ ಅಧಿಕಾರದಿಂದ ಸ್ವತಂತ್ರನಾಗಿದ್ದಾನೆ.

ಪ್ರಿಯತಮೆಯ ಬೀದಿಯಲಿ ಪ್ರೇಮ ಅಸಫಲತೆ ನೋವಿನಿಂದ ಸಂತುಷ್ಟನು,
ಕಾವ್ಯ ಹಾಗೂ ಮದಿರೆಯಿಂದ ಪ್ರಮತ್ತ ನಗ್ನತೆ ಹಾಗೂ ಅಪಖ್ಯಾತಿಯಿಂದ ಸಂತುಷ್ಟನು.

ದೇವರೇ! ನನ್ನನ್ನು ಈ ಸಮಸ್ತ ಕರ್ಮಗಳಿಂದ ಕ್ಷಮಿಸು,
ಹಾಗೂ ತಲೆನೋವಿನಿಂದ ದೂರವಿಡು.

ಅಂತರ್ದೃಷ್ಟಿಯುಳ್ಳ ಪೇಮಿಯ ನೋಟದಲಿ,
ಲೌಕಿಕ ಪ್ರೇಮವೂ ಆಗಿಹುದು ದೈವಿಕ ಪ್ರೇಮ

ಮಜನೂ ನ ಬಳಿ ಬರುವ ಆ ಲೈಲಾಳು,
ನುಡಿವನು ಇದು ಖಂಡಿತವಾಗಿಯೂ ಮಧುರವಾಗಿವೆ.

ಏಕದೇವ ವಿಶ್ವಾಸಿ, 'ಏಕ'ವನು ಕಾಣುವನು 'ಏಕ' ಮಾತ್ರ,
ಇದರಿಂದಲೇ ಅರಿ ನೀ ಕೇಳಬೇಡ ಸಹಸ್ರ ನಾಮಾವಳಿ.

ಹೇ, 'ಆರೀಫ'ನೇ ಲೋಕದೊಳಿಲ್ಲ 'ಅತ್ತಾರ್'ನ ಸದೃಶ,
ಆದರೆ ಈ ಸಮಯದಲ್ಲಿ, ಗೋಗಿಯಲಿ ಇಹನು 'ಬಹರಿ'.

ಮೂರನೆಯ ಹಂತವೇನೆಂದರೆ ಪ್ರಿಯಕರನ ಪ್ರೇಮಿಯ ಮುಖಚರ್ಯೆಯನ್ನು ಕಾಣುವ ಅಭಿಲಾಷಿಯಾಗಿರುವುದಿಲ್ಲ. ಬದಲಾಗಿ ಸ್ವಯಂ ಪ್ರಿಯತಮೆಯು ಮಿಲನಗೊಂಡು ಅಳಿಯುತ್ತಾಳೆ (ಫನಾ). ಯಾವ ರೀತಿ ಮಜ್ನೂ 'ಅನಾಲೈಲಾ' ಎಂದು ಕರೆದನು ಹಾಗೂ ಅವಳ ದರ್ಶನದ ಕಡೆ ಗಮನವೂ ಹರಿಸಲಿಲ್ಲ, ಅಭಿಲಾಷೆಯೂ ವ್ಯಕ್ತಪಡಿಸಲಿಲ್ಲ.

ನಾನು 'ಮನ'ವನು ಬಯಸುತ್ತೇನೆ, 'ನಿನ್ನಿಂದ' ಬೇಸರವು,
ಅಳಿಸಿಹಾಕಿದೆ ಸಮಸ್ತ 'ಸಮಭಾಗಿತ್ವ' ಈ 'ಮನ'.

ಇದೆಲ್ಲವು 'ಮನ' ಇಹುದು ಅಸ್ತಿತ್ವದಲಿ, ಹೇ ಮಿತ್ರನೆ;
ಈ 'ಮನ'ದಿಂದ ಮುಂದೆ ಸಾಗು, ಆಗುವಿ ಬೆಳಕು – ಪ್ರಕಾಶ.

ಈ ಸ್ಥಾನವು 'ಮಜನೂ'ನ ಹೊರತು ಅನ್ಯ ಯಾರಿಗೂ ಸಿದ್ಧಿಸಲಿಲ್ಲ ಹಾಗೂ ಯಾರೂ ಪ್ರಿಯತಮೆಯಿಂದ ನಿರಪೇಕ್ಷಯಾಗಲಿಲ್ಲ. ಅರ್ಥಾತ್ ವರ್ತಮಾನ ಹಾಗೂ ಭವಿಷ್ಯತ್ತಿನ ಮನೋಭಿಲಾಷೆಯ ಬಂಧನದಲ್ಲಿದ್ದನು. 'ಮಜ್ನೂ' ಲೈಲಾಳ ಪರಿವೆಯನ್ನು ಮಾಡದೇ ಇರಲು ಈ ಕಾರಣವಂತೂ ಇರಲಿಲ್ಲ, ಅದೇನೆಂದರೆ ದೇವರು ಅವನನ್ನು ಅವನ ಪ್ರೇಮಕೆ ತಡೆ ಒಡ್ಡಿದ್ದನು ಹಾಗೂ ಅವನು ಅದರ ಬಲೆಯಿಂದ ಬಿಡಿಸಿಕೊಂಡನು, ಸರ್ವಥಾ ಅದಲ್ಲ, ಬದಲಾಗಿ ಅವನು ತನ್ನ ಉದ್ದೇಶ ಹಾಗೂ ಅಭಿಲಾಷೆಯನ್ನು ಲೈಲಾಳ ಕಲ್ಪನೆಯಲಿ ಇಂತಹ ಪರಾಕಾಷ್ಟೆಯ ಸ್ಥಾನವನ್ನು ತಲುಪಿದ್ದನು. ಆ ಹಂತದಲ್ಲಿ ಅವಳ ಚಿತ್ತವು ಹೃದಯದ ಮೇಲೆ ಚಿತ್ರಿತವಾಗಿತ್ತು. ಸ್ವಲ್ಪ ಸಮಯದ ಬಳಿಕ ಸ್ವಯಂ 'ಅನಾಲೈಲಾ' (ಲೈಲಾಳಲ್ಲಿ ಲೀನ) ಆದನು ಹಾಗೂ ಮಜನೂ, 'ಮಜನೂ'ವಿನ ಸ್ಮೃತಿಯಿಂದ ಹೊರಟು ಹೋಯಿತು. ಯಾಕೆಂದರೆ 'ಮಜನೂ' ಇರುತ್ತಿದ್ದರೆ ಅವನು ಲೈಲಾಳ ಕಡೆ ಕೇಂದ್ರಿಕೃತನಾಗಿರುತ್ತಿದ್ದನು. ಪ್ರೇಮದ ಈ ಹಂತವು ಸಮಸ್ತ ಹಂತಗಳ ಕಿರೀಟವಾಗಿದೆ.

'ಅಹಂ'ನಿಂದ ಪರಿಚಿತನಾದ ಪ್ರತಿಯೊಬ್ಬನು,
ಬಯಸನು ಎಂದಿಗೂ 'ಅಹಂ' ನ ಅಳಿವು.

ಈ ಅಹಂ ಶಿರವಾಗಿದೆ. ಸಮಸ್ತ ಪ್ರಾಣಗಳ,
ಇದಕ್ಕೆ ಪ್ರಾಣ ಎಂದರೆ ಅದು ಅದರ ಹೊದಿಕೆಯಾಗಿದೆ.

ಆಭರಣ–೧೨೬

'ಸ್ವಯಂ'ನ ಅನ್ಯತೆಯ ಪ್ರೇಮ ಲೌಕಿಕ ಪ್ರೇಮ

ಬಾಲ್ಯದಿಂದ ಈವರೆಗೆ ಯಾವುದೇ ಜಪಗಳು ಹಾಗೂ ಕರ್ಮಗಳ ಕಡೆ ಗಮನ ಹರಿಸಲಿಲ್ಲ. ಆದರೆ ಒಂದು ಚಹರೆಯು ಹೃದಯದ ಕೇಶರಾಶಿಯಲಿ ದಿಗ್ಭ್ರಾಂತ ಹಾಗೂ ಕಣ್ಣುಗಳು ಅದರ ದರ್ಶನದ ಅಭಿಲಾಷೆಯಲಿ ಚಿಂತಾಕ್ರಾಂತವಾಗಿತ್ತು. ಎಲ್ಲಿಯವರೆಗೆ ಅವಳು ಕಣ್ಮರೆಯಾದಾಗ ಅಂತರ್ದೃಷ್ಟಿ ನೋಟವಾಗಿ ಮತ್ತು ಅವಳು ಕಣ್ಮರೆಯಾದಾಗ ಅಂತರ್ದೃಷ್ಟಿಯಿಂದ ನೋಡುತ್ತಾ ಇರುತ್ತಿದ್ದೆ. ದೇವರಾಣೆ! ನನಗೆ

ಆ ಕಾಲದಲ್ಲಿ ಹೀಗನಿಸುತ್ತಿತ್ತು. ಅದೇನೆಂದರೆ ಲೋಕದಲ್ಲಿರುವ ಕರ್ಮಗಳೆಂದು ಪ್ರಸಿದ್ಧವಾಗಿರುವ ಅವೆಲ್ಲವನ್ನು ನಾನು ಅನುಕ್ರಮವಾಗಿ ಪರಿಪೂರ್ಣಗೊಳಿಸಿದ್ದೇನೆ ಹಾಗೂ ಅದರ ಫಲಿತಾಂಶನವನ್ನು ಪಡೆದಿದ್ದೇನೆ. ಸ್ವಲ್ಪ ಅವಧಿಯ ಬಳಿಕ, ನನ್ನ ಮನದಲ್ಲಿ ಈ ವಿಚಾರ ಸುಳಿದು ಹೋಯಿತು. ಅದೇನೆಂದರೆ 'ಸ್ವಯಂ'ನ ಅನ್ಯತೆಯು ಜೊತೆ ಪ್ರೀತಿ ಮಾಡುವುದು, ಲೌಕಿಕ ಪ್ರೇಮವಾಗಿದೆ. ಮತ್ತು ಇದು ತಾತ್ಕಾಲಿಕವಾಗಿದೆ. ಅದರಲ್ಲಿ ತನ್ನನ್ನು ಅದರಲ್ಲಿ ವಶೀಕರಿಸುವುದು ದೈವೀ ಪ್ರೇಮವಾಗಿದೆ ಹಾಗೂ ಶಾಶ್ವತ ಹಾಗೂ ಚಿರಂತನವಾಗಿದೆ. ಆದುದರಿಂದ ತಾತ್ಕಾಲಿಕದಿಂದ ದಾಟಿಹೋಗು ಹಾಗೂ ಶಾಶ್ವತೆಯಲ್ಲಿ ಸ್ಥಿರವಾಗಿರು.

ನಾನು ಮಾರುಹೋಗಿದ್ದೇನೆ, ನಿನ್ನ ಮುಖದಿಂದ ಬೆಡಗನ್ನು ವಂಚಿತಗೊಳಿಸದಿರು,
ನನ್ನ ಕೈಯಿಂದ ಕಿತ್ತುಕೊಳ್ಳಬೇಡ ಕನ್ನಡಿಯನು ಹೇ ಕನ್ನಡಿಯ ಕರ್ತೃವೇ.

ಈ ಕಾರ್ಯದಲ್ಲಿ ನಾನು ಬೇಡಿಕೊಂಡ ಚಿಕ್ಕ ಚಿಕ್ಕ ವಸ್ತುವು ತಕ್ಷಣವೇ ಹಾಜರುಪಡಿಸಲಾಯಿತು. ಕೃಪೆಗಾಗಿ ಸತ್ಯದೈವನ ಆಸ್ಥಾನದಲ್ಲಿ ಕೃತಜ್ಞತಾಪೂರ್ವಕವಾಗಿ ಅವನಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ. ಅಹಂಭಾವವು ವಸ್ತುತಃ ಹಾನಿಕಾರಕವಾಗಿದೆ. ಆದರೆ ನನಗೆ ಇದು ಲಾಭಪ್ರದವಾಗಿ ಸಾಬೀತಾಯಿತು.

ವಸ್ತುತಃ 'ಅಹಂಭಾವ'ವು ಹಾನಿಕಾರಕವಾಗಿದೆ ಪ್ರತಿ ಪಂಥದಲ್ಲಿ,
ಆದರೆ ನನಗೆ 'ಅಹಂಭಾವ'ದಿಂದಲೆ ದರ್ಶನವಾಯಿತು ದೈವೀಪ್ರಕಾಶ.

ಮನುಷ್ಯನ 'ಗೌರವದ ಸ್ವಯಂದರ್ಶನ'ವೇ ಸತ್ಯದರ್ಶನವಾಗಿದೆ,
ಇದಕ್ಕೆ ಸತ್ಯಪ್ರಭೆಯ ಕನ್ನಡಿ ಎಂದರೆ ಆಗುವುದು ಸೂಕ್ತ.

ಆಭರಣ–೧೨೭

'ಪ್ರೇಮ'ದ ಅಭಿಮಾನ

ವಿಲಾಯತ್‌ನ ಅಂತಿಮ ಹಂತವು ಪ್ರೇಮಿಯದಾಗಿದೆ. ಇದಕ್ಕಿಂತ ಉನ್ನತವಾದ ಹಂತವು ಮತ್ತೊಂದಿಲ್ಲ. ಪ್ರೇಮ ಹಾಗೂ ಪ್ರಿಯತಮೆಯ ಸ್ಥಾನ ಅಡಿಯಿಂದ ಮುಡಿಯವರೆಗೆ ಅಭಿಮಾನವಾಗಿದೆ. ಯಾವ ರೀತಿ ಲೌಕಿಕ ಪ್ರೇಮವು ದೈವೀ ಪ್ರೇಮದ ಸೋಪಾನವಾಗಿದೆ. ಅದೇ ರೀತಿ ಪ್ರಿಯತಮೆಯು ಯಾರ ಜೊತೆಯಲ್ಲಿ ಮಾತಾಡಲಿ, ಅವು ಎರಡೇ ಶಬ್ದಗಳನ್ನು ಹೊಂದಿದ್ದರೂ, ಪ್ರೇಮಿಯ ಅಭಿಮಾನವು ಆವೇಶಭರಿತವಾಗಿ ಬಹುಶಃ ಅವನ ಹೃದಯವು ಅವಳ ಮೇಲೆ ಮೋಹಿತವಾಗುವುದಿಲ್ಲ.

ಈ ರೀತಿಯಾಗಿ ಪ್ರೇಮಿಯು ಯಾರ ಜತೆಯಾದರೂ ಒಂದು ಅಥವಾ ಎರಡು ಸಲ ಭೇಟಿಯಾಗಿ ಸಲುಗೆಯಿಂದಿದ್ದರೆ ಪ್ರಿಯತಮೆಗೆ ಶಂಕೆ ಉಂಟಾಗಲು ಪ್ರಾರಂಭವಾಗುತ್ತದೆ.

ಹೇ ಆತ್ಮೀಯನೇ, ಅಭಿಮಾನವು ಎರಡು ಪ್ರಕಾರದಾಗಿರುತ್ತದೆ. ಒಂದು ಆಜ್ಞಾಪಾಲಕನ ಅಭಿಮಾನ, ಇದು ಮಹಾಮಹಿಮ ಅಲ್ಲಾಹನಿಗೆ ಸಂಬಂಧಿತವಾಗಿದೆ. ಎರಡನೇಯದು ಅಲ್ಲಾಹನ ಅಭಿಮಾನ, ಇದು ಆಜ್ಞಾಪಾಲಕನಿಗೆ ಸಂಬಂಧಿತವಾಗಿದೆ. ಹೀಗಾಗೀ ಶೇಖ್ ಅಬುಬಕರ್ ಶಿಬ್ಲಿ (ರಹಮತುಲ್ಲಾ ಅಲೈ. ರ.ಅ) ಅಜ಼ಾನ್*ನಲ್ಲಿ ಯಾವಾಗ 'ಅಶಹದು ಅನ್ನಾ ಮಹ್ಮದು ರಸೂಲಿಲ್ಲಾಹಿ' ಅರ್ಥಾತ್ ನಾನು ಸಾಕ್ಷ್ಯ ನುಡಿಯುತ್ತೇನೆ ಮಹ್ಮದರು ಅಲ್ಲಾಹನ ರಸೂಲ್ ಆಗಿದ್ದಾರೆ. ಕೇಳಿದಾಕ್ಷಣ ಅವರ ಅಭಿಮಾನವು ಆವೇಶಭರಿತವಾಯಿತು ಹಾಗೂ ನುಡಿದರು "ದೇವರೇ, ನಿನ್ನ ಆಜ್ಞೆಯಾಗಿರದಿದ್ದರೆ ನಿನ್ನ ನಾಮದ ಜೊತೆ, ನಿನ್ನ ಸ್ನೇಹಿತನ (ಮಹಮ್ಮದರ) ಹೆಸರಿದ್ದರೂ, ನಿನ್ನ ಅಸ್ತಿತ್ವದಾಣೆ, ಅದೇನೆಂದರೆ ನಾನು ಎಂದಿಗೂ ನಿನ್ನ ನಾಮದ ಜೊತೆ ಬೇರೆ ಯಾರ ಹೆಸರನ್ನೇ ಕೇಳುತ್ತಿರಲಿಲ್ಲ".

ದೈವವಶಾತ್, ಶೇಖ್ ಅಬುಬಕರ್ ಶಿಬ್ಲಿ (ರ.ಅ) ಅವರು ಹಜ್ರತ್ ದೈವಸ್ನೇಹಿತ ಹಜ್ರತ್ ಮಹ್ಮದ್ (ಸ.ಅ.) ರವರಿಂದ ಧರ್ಮತ್ಯಾಗಿಯಾಗಿ ಬಂಡಾಯವೇಳಲಿಲ್ಲ. ಬದಲಾಗಿ ಪ್ರೇಮದ ಉನ್ನತ ಸ್ಥಾನದವರೆಗೆ ತಲುಪಿದರು. ಇದು ಅನುರಾಗದ ಅಭಿಮಾನದ ಅವಶ್ಯಕತೆಯಾಗಿದ್ದು, ಆಜ್ಞಾಪಾಲಕನ ಅಭಿಮಾನದ ಅಲ್ಲಾಹನ ಸಂಬಂಧಿತ ಇದೇ ಆಗಿದೆ.

ಎರಡನೆಯದು; ಅದೇನೆಂದರೆ ಸುಲ್ತಾನ್ ಇಬ್ರಾಹಿಂ ಅಧಮ್‌ರವರು ತಮ್ಮ ಸಾಮ್ರಾಜ್ಯವನ್ನು ತ್ಯಜಿಸಿ, ಪವಿತ್ರ ಮಕ್ಕಾದ ಮಾರ್ಗ ಹಿಡಿದರು. ಈ ಸಮಯದಲ್ಲಿ ಅವರ ಪುತ್ರನು ಬಾಲಕನಾಗಿದ್ದು, ಪ್ರೌಢಾವಸ್ಥೆಯನ್ನು ತಲುಪಿರಲಿಲ್ಲ. ಅವನು ಪ್ರೌಢನಾದಾಗ, ತನ್ನ ತಂದೆಯ ಜೀವನ ಸಂಗತಿಗಳನ್ನು ಅರಿತು ಸ್ವಯಂ ಪವಿತ್ರ ಮಕ್ಕಾ ನಗರಕ್ಕೆ ಹೊರಡುವ ನಿರ್ಧಾರ ಮಾಡಿದನು.

ಅಲ್ಲಿಗೆ ತಲುಪಿ ತಂದೆಯನ್ನು ಭೇಟಿಯಾದನು. ಇಬ್ಬರಲ್ಲಿ ಇನ್ನೂ ಪರಸ್ಪರ ಸಂಪೂರ್ಣ ಮಾತು-ಕತೆ ಆಗುವುದರಲ್ಲೇ ಇತ್ತು, ಆಗ ಸುಲ್ತಾನ್ ಇಬ್ರಾಹೀಂರು ಎದ್ದು ನಿಂತು, ಹೊರಡುವ ನಿರ್ಧಾರ ಮಾಡಿದರು. ಮಗನು ವ್ಯಾಕುಲನಾಗಿ ತಕ್ಷಣವೇ ತಂದೆಯ ಬಾಹುಗಳನ್ನು ಹಿಡಿದುಕೊಂಡನು ದುಃಖಿಸಹತ್ತಿದನು. ಆಗ ಇಬ್ರಾಹೀಂರ ಮನದಲ್ಲಿ ತಂದೆಯ ಪ್ರೇಮದ ಸೆಳಕು ಗೋಚರಿಸಹತ್ತಿತ್ತು. ಆಗ ಅಗೋಚರ

• ಅಜ಼ಾನ್ – ನಮಾಜಿನ ಮೊದಲು ನಮಾಜಿಗಾಗಿ ಕೂಗುವ ಕರೆ

ವಾಣಿಯಾಯಿತು. "ಯಾ ಇಬ್ರಾಹೀಂ ತದ್‌ಹಿ ಮೊಹಬ್ಬತು ನಾ ವ ಮೊಹಬ್ಬತ ಗೈರನಾ" (ಹೇ ಇಬ್ರಾಹೀಂ ನಮ್ಮ ಜತೆ ಅಚಲ ಪ್ರೇಮದ ನಿರ್ಧಾರ ಹಾಗೂ ಇತರರ ಜೊತೆಯೂ ಪ್ರೇಮವೇ?) ಈ ಅಗೋಚರ ವಾಣಿಯನ್ನು ಕೇಳಿ ಹಜ್ರತ್ ಇಬ್ರಾಹೀಂರು ಅತ್ಯಂತ ಚಿಂತಾಕ್ರಾಂತರಾದರು ಹಾಗೂ ವಿನಂತಿಸಿಕೊಂಡರು, ಹೇ ಒಡೆಯನೇ! ನನ್ನನ್ನು ಎತ್ತಿಕೊಳ್ಳು ಅಥವಾ ನನ್ನ ಮಗನನ್ನು. ಹೀಗಾಗಿ ಅದೇ ಸಮಯದಲ್ಲಿ ಅವರ ಮಗನ ಪ್ರಾಣಪಕ್ಷಿ ಹಾರಿಹೋಯಿತು. ಇದು ದೇವರ ಅಭಿಮಾನವಾಗಿದೆ. ತನ್ನ ಆಜ್ಞಾನುವರ್ತಿಯ ಸಂಬಂಧವಾಗಿ ತಂದೆಯ ಬದಲಿಗೆ ಮಗನು ಸಾವನ್ನಪ್ಪುವ ಕಾರಣವೇನೆಂದರೆ, ತಂದೆಯಿಂದ ಇನ್ನೂ ಹಲವು ಕಾರ್ಯಗಳ ಪರಿಪೂರ್ಣವಾಗು ಬೇಕಾಗಿದ್ದವು ಅರ್ಥಾತ್ ದೈವೀ ಆಜ್ಞೆಗೆ ಸಂಬಂಧಿತ ಕರ್ಮಗಳು.

ಪ್ರೇಮಿಯಾಗಿದ್ದು ಅವನು ಅಭಿಮಾನರಹಿತನಾಗಿದ್ದರೆ,
ಪ್ರೇಮಿಯಲ್ಲ ಅವನು, ಅವನ ಬಾಯಿ ಮಾತಿನ ಚಪಲವಾಗಿದೆ.

ಇಂತಹ ಪ್ರೇಮಿಯ ಪ್ರೇಮವು ಆಗುವುದು ಶತಸಿದ್ಧ
ಯಾವನಿಗೆ ಉಂಟು ಪ್ರತಿ ಕ್ಷಣವು ಅಭಿಮಾನಭಾವವು.

ಆಭರಣ–೧೨೮
'ಪ್ರೇಮ'ದ ದಿವ್ಯಜ್ಞಾನ

"ಕರ್‌ಸಿಂಗಾರ್ ಪಿಯಾ ಬಿನ್ ಚಲಿ ದಿವಾನಾ ಕಾ ಜರ್‌ನೈನ್,
ಆಂಖ್ ಮೂಂಛ್ ಪಿಯಾ ಸೀಸ್ ಮಿಲಿ! ಕಾರನ್ ಕೌನ್ ಹಸೈನ್"

ಪ್ರಿಯತಮೆಯ ಮಿಲನಾಪೇಕ್ಷೆಯಲ್ಲಿ ಷೋಡಶ ಸಿಂಗಾರ ಮಾಡಿಕೊಂಡು, ಸರ್ವಾಲಂಕಾರ ಭೂಷಿತೆಯಾಗಿ ಸಿದ್ಧಳಾದಳು. ಆದರೆ ಕಣ್ಣಿನಲ್ಲಿ ಕಾಡಿಗೆಯನ್ನು ಹಚ್ಚದೇ ತನ್ನ ಪ್ರಿಯಕರನ ಸಮ್ಮುಖ ಹೋದಳು ಹಾಗೂ ಕಣ್ಣುಗಳನ್ನು ಮುಚ್ಚಿಕೊಂಡು ತನ್ನ ಪ್ರಿಯಕರನನ್ನು ಭೇಟಿಯಾದಳು. ಇದು ಯಾತಕ್ಕಾಗಿ? ಇದಕ್ಕೆ ಕಾರಣವೆಂದರೆ ಪ್ರಿಯಕರನು ಕಣ್ತುಂಬ ವ್ಯಾಪಿಸಿದ್ದನು, ಹೀಗಾಗಿ ಅಲ್ಲಿ ಕಾಡಿಗೆಗೆ ಸ್ಥಳಾವಕಾಶವೇ ಇರಲಿಲ್ಲ. ಹೀಗಾಗಿ ಕಾಡಿಗೆಗೆ ಕಣ್ಣಿನ ಸಂಪತ್ತಿನ ಭಾಗ್ಯದಿಂದ ವಂಚಿತವಾಗಬೇಕಾಯಿತು. ಅದ್ಹೇಗೆ ಎಂದರೆ ಯಾವುದೇ ವಸ್ತುವು ಈಗಾಗಲೇ ಪರಿಪೂರ್ಣವಾಗಿ ತುಂಬಿದ್ದರೆ, ಅದರಲ್ಲಿ ಮತ್ತೇನನ್ನಾದರು ಬೇರೆ ವಸ್ತು ಸೇರಿಸಲು ಬಯಸಿದರೆ, ಮೊದಲಿನ ವಸ್ತುವನ್ನು ತೆಗೆಯಬೇಕಾಗುತ್ತದೆ. ಹೀಗಾಗಿ ಒಂದರ ಉಪಸ್ಥಿತಿಯಲ್ಲಿ ಬೇರೊಂದು ವಸ್ತು ಸಮಾವೇಶವಾಗುವುದಿಲ್ಲ. ಆದುದರಿಂದ ಕಣ್ಣು ಮುಚ್ಚಿಕೊಂಡು ಭೇಟಿಯಾಗಿ ಹೋದಳು.

ಹೀಗಾಗಿ ನಿಶ್ಚಿತವಾಗಿ ಒಬ್ಬ ವ್ಯಕ್ತಿ ತನ್ನ ಮಿತ್ರನನ್ನು ತನ್ನ ಕಣ್ಣುಗಳಲ್ಲಿ ಈ ರೀತಿ ತುಂಬಿಕೊಂಡರೆ, ಅಲ್ಲಿ ಕಾಡಿಗೆಯನ್ನು ಸ್ವೀಕರಸುವ ಅವಕಾಶವಿಲ್ಲದಿದ್ದಾಗ, ಕಣ್ಣು ಮುಚ್ಚಿ ಭೇಟಿಯಾದರೂ ಅಥವಾ ಕಣ್ತೆರೆದು ಭೇಟಿಯಾದರೂ ಅದು ಒಂದೇ ಆಗಿದೆ.

ಹೇ ಬಹರಿಯೇ' ಸಮಾನವಾಗಿದೆ ವೀಕ್ಷಣೆ ಅಥವಾ ವೀಕ್ಷಣೆರಹಿತತೆಯು,

ಆದರೆ ಒಪ್ಪಂದವೆಂದರು 'ಮಜ್ನೂ' ಸ್ವಯಂ 'ಅನಾಲೈಲಾ' ಎಂದು ನುಡಿಯಲಿ.

ಆಭರಣ–೧೨೯

'ಪ್ರೇಮ'ದ ಅಗ್ನಿ

'ಅಲ್ ಇಷ್ಕೂ ನಾರನ್ ಇಜ಼ಾ ವಖಾಅ ಇಜಾ ವಖಾಅ ಫಿಲ್ ಖಲ್ಬಿ ಯೂಹಾರಿಖೂ ಮಾಸಿವ ಮಹಬೂಬಿ'

[ಪ್ರೇಮವು ಇಂಥ ಅಗ್ನಿಯಾಗಿದೆ, ಅದು ಹೃದಯಕ್ಕೆ ಹತ್ತಿಕೊಂಡಾಗ ಪ್ರಿಯತಮೆಯ ಹೊರತಾಗಿ ಎಲ್ಲಾ ವಸ್ತುಗಳನ್ನು ಸಮಸ್ತವಾಗಿ ಸುಟ್ಟುಹಾಕುತ್ತದೆ] ಮತ್ತು ಪ್ರಿಯತಮೆಯ ಹೊರತಾಗಿ ಮತ್ತೇನೂ ಬಾಕಿ ಉಳಿಯುದಿಲ್ಲ. ಇದೇ 'ಏಕತ್ವ'ವಾಗಿದೆ "ಅಲ್ ಮಜಾಜು ಖಂತರ್‌ತಲ್ ಹಖೀಖತಿ' (ಲೌಕಿಕತೆಯು ಪರಮಸತ್ಯತೆಯ ಸಂಬಂಧವಾಗಿದೆ) ಇದೇ ಅರ್ಥದಲ್ಲಿ ಹೇಳಲಾಗುತ್ತಿದೆ, ಸತ್ಯಾನ್ವೇಷಣೆಯ ಲೌಕಿಕ ಪ್ರೇಮವು ಪ್ರಯತ್ನವಿಲ್ಲದೆಯೆ ಪರಮ ಸತ್ಯಕ್ಕೆ ತಲುಪಿಸಿ ಬಿಡುತ್ತದೆ. ಆದರೆ ಮತ್ತೆ ಪ್ರೇಮಿಯು ಬಾಕಿ ಉಳಿಯುತ್ತಾನೆ. ಮನುಷ್ಯನ ಪರಕಾಷ್ಟತೆಯು ಇದರಲ್ಲಿಯೇ ಇದೆ. ಅದೇನೆಂದರೆ ಅವನು 'ಸ್ವಯಂ' ಅನ್ನು ಅದರ ಮೂಲದವರೆಗೆ ಅರ್ಥಾತ್ 'ದೈವೀಕೋಶ'ದ ವರೆಗೆ ತಲುಪಿಸಬೇಕು. ಎಲ್ಲಿ 'ನಾನು' ಮತ್ತು 'ನೀನು'ನ ಮಧ್ಯಸ್ಥಿಕೆ ಹಾಗೂ ನಾಸ್ತಿ ಮತ್ತು ಅಸ್ತಿತ್ವದ ನಡೆ ಇರುವುದಿಲ್ಲ. ಹೀಗಾಗಿ ಪ್ರೇಮಿಯು ಬಾಕಿ ಇರುವುದರಿಂದ 'ಸಹಭಾಗಿತ್ವ'ವೂ (ಶಿರ್ಕ) ಬಾಕಿ ಇರುತ್ತದೆ.

'ಮಜನೂ'ಗೆ ಶಹಭಾಷಗಿರಿ! ಯಾಕೆಂದರೆ ಅವನು 'ಅನಾಲೈಲಾ' (ಲೈಲಾದ ಅಹಂ) ಎಂದು ನುಡಿದನು. ಈ 'ಅನಾ' (ಅಹಂ) ಅರ್ಹತೆಯು 'ಏಕತ್ವ'ದ ಪರಮೋಚ್ಚ ಅರ್ಹತೆಯಾಗಿದೆ. ಅಲ್ಲಿ ಕೇವಲ ಅಸ್ತಿತ್ವವಿದೆ. ಆದರಿಂದ ಸಮಸ್ತ ಅಸ್ತಿತ್ವಗಳು ವ್ಯಕ್ತರೂಪ ಪಡೆಯುತ್ತದೆ. ವಿವೇಕ ಹಾಗೂ ಅಂತರ್ದೃಷ್ಟಿಯ ಪ್ರಕಟವು ಇಲ್ಲೆ ಆಗುತ್ತದೆ. ಹೀಗಾಗಿ ಈ ಸ್ಥಾನವು ಶಾಶ್ವತ (ಚಿರಂತನ) ವಿವೇಕ ಹಾಗೂ ಅಂತರ್ದೃಷ್ಟಿಯಾಗಿದೆ.

ಸತ್ಯದ ಅಸ್ತಿತ್ವವು, ಸತ್ಯದ ಸತ್ಯತೆಯಾಗಿದೆ,
ನಿನ್ನ ಅಸ್ತಿತ್ವವನ್ನು ಇದರಿಂದಲೆ ಅಸ್ತಿತ್ವಗೊಳಿಸು.

ಹೇ ಸತ್ಯದ ಅಭಿಲಾಷೆಯೇ, ಸತ್ಯವು ಈ ನಾಸ್ತಿ ಹಾಗೂ ಅಸ್ತಿತ್ವಗಳಿಂದ ಪವಿತ್ರವಾಗಿದ್ದು, ಸಮಸ್ತ ಔನ್ನತ್ಯ ಹಾಗೂ ಅಲ್ಪ ಇವುಗಳಿಂದ ಸ್ವತಂತ್ರವಾಗಿದೆ. ಯಾವುದೇ ಶಬ್ದವು ಶಾಶ್ವತ ಬಂಧಿಯಾಗಿದ್ದಲ್ಲದೆ, ಸ್ವಯಂ ಬಂಧಿಯಾಗಿದ್ದು, ನನ್ನನ್ನು ಪ್ರಶ್ನಿಸಿದರೆ ಶಾಶ್ವತವು ಒಂದು ರೀತಿಯಲ್ಲಿ ಬಂಧಿಯಾಗಿದೆ. ಯಾಕೆಂದರೆ ಅದು ನಾಮದ ಬಂಧನಕ್ಕೆ ಒಳಗಾಗಿ, ಸಂಕೇತದ ಸೆರೆಯಾಳಾಗಿದೆ. ಆದರೆ ಸತ್ಯದ ಅಸ್ತಿತ್ವವು ಹೆಸರು ಸಂಕೇತಗಳಿಂದ ಪವಿತ್ರವಾಗಿದೆ.

ನಿನ್ನ ನಾಮವೂ ಇಲ್ಲ, ಸಂಕೇತವೂ ಇಲ್ಲ, ಇಲ್ಲ ವಿಳಾಸವೂ,
ಹೇ ದೇವನೇ, ನಿನಗೆ ಯಾವ ರೀತಿಯಿಂದ ದೇವರೆಂದು ಕರೆಯಲಿ.

ಪ್ರಕಾಶದ ಚಿಲುಮೆಯಾಗಿವೆ ಈ ಪೂರ್ಣಚಂದ್ರವು ನೋಡು,
ಹಾರುವ ಪಕ್ಷಿಯು ಪಾವನವಾಗಿದ್ದರೆ, ಆಕಾಶ, ಹವೆಯೂ ಪಾವನ.

ಮುತ್ತು ಇರುವುದಾದರೆ, ಅದು ಯಾವ ಸಾಗರದಾಗಿದೆ?
ನಕ್ಷತ್ರ ಇರುವುದಾದರೆ, ಅದು ಯಾವ ಗಗನದಾಗಿದೆ?

ಪುಷ್ಪವಾಗಿದ್ದರೆ, ಅದು ಯಾವ ಉದ್ಯಾನದ್ದು ಆಗಿದೆ?
ಯಾತನೆಯಾಗಿದ್ದರೆ, ನೀಡು ಅದರ ಮದ್ದು ಯಾವುದಿದೆ?

ದಿಶೆ ನಿರ್ಧಾರದಿಂದ ನಿನ್ನ ಗಮನವನ್ನು ಬೇರೆಡೆಗೆ ತಿರುಗಿಸು ಬಹರಿ,
ಧಾವಿಸಿ, ಅಪ್ಪಿಕೋ ಅದರ ಗೂಢಾರ್ಥವನು ತಪ್ಪದೇ,

ಆಭರಣ–೧೩೦

ಪರಮ 'ಪ್ರೇಮ'ದ ಎರಡು ಅರ್ಹತೆಗಳು

ಪ್ರೇಮದ ಸಂಪತ್ತು ಎಲ್ಲರಿಗೆ ಲಭಿಸುವುದಿಲ್ಲ, ಕೇವಲ ಭ್ರಾಂತನ ಹೊರತು. ಯಾಕೆಂದರೆ ಅವನ ಹೃದಯದ ಮೇಲೆ ದೈವೀ ಪ್ರೇಮದ ದೈವೀ ಕುರುಹುಗಳು ಚಿತ್ರಿಸಲ್ಪಟ್ಟಿವೆ. ಹೇ ಮಿತ್ರನೇ ಇದೇ ಪ್ರೇಮವೇ ಪ್ರಬುದ್ಧವಾದಾಗ ಪರಮಪ್ರೇಮವೆಂದು ಕರೆಯಲ್ಪಡುತ್ತದೆ. ಇದೇ ಪರಮ ಪ್ರೇಮವು ತನ್ನ ಪರಾಕಾಷ್ಠೆಯ ಎಲ್ಲೆಗಳನ್ನು ಮೀರಿದಾಗ ಪ್ರಕಾಶವಾಗುತ್ತದೆ. ಇದೇ ಪ್ರಕಾಶವೇ ಅನುಭಾವದ ಇಂತಹ ಪ್ರಕಾಶವಾಗಿದೆ, ಇದರಲ್ಲಿ ಆವೇಶ ಉತ್ಪತ್ತಿಯಾದಾಗ, ಅದು 'ಅನ್‌ಅಲ್‌ಹಕ್' (ನಾನೇ ಸತ್ಯ) ಎಂಬ

ಘೋಷವನ್ನು ಮೊಳಗಿಸುತ್ತದೆ. 'ದೈವೀ ವಚನ'ವು ಇದೇ ಸ್ಥಾನದ ಮಾತಾಗಿದೆ. ಲೌಕಿಕ ಮುಸಲ್ಮಾನರಿಂದ ಅವನು ತನ್ನ ಜೀವವನ್ನು ರಕ್ಷಿಸಿಕೊಂಡರೆ, ಸ್ವಲ್ಪ ಕಾಲದ ನಂತರ ಅವನ ಆವೇಶದ ಗತಿಯು ಮಂದವಾಗುತ್ತದೆ, ಹಾಗೂ ಸಮಸ್ತ ವಚನದ ಅರ್ಹತೆಯ ಜೊತೆ ಈ ಮೋಹಕ್ಕೊಳಗಾದ ಲೋಕದಲ್ಲಿ ಸೇರಿಕೊಳ್ಳುತ್ತಾನೆ ಹಾಗೂ ಸಪ್ತ ಮೋಹಗಳನ್ನು ದಾಟಿ ಸಾಗುತ್ತಾನೆ. ಎಲ್ಲವೂ ಅಳಿಸಲ್ಪಡುತ್ತದೆ. ಕೇವಲ ಹೊಸ ಸೃಷ್ಟಿಯ ಹೊರತು. ಇದರ ಸ್ವಾದದಿಂದ ಕೇವಲ ದರ್ವೇಶರು ಹಾಗೂ ಫಕೀರರು ಪರಿಚಿತರು ಈ ನವಸೃಷ್ಟಿಯಿಂದ ಇವರು ಭೂಲೋಕ ಹಾಗೂ ಆಕಾಶವನ್ನು ನಾಶಪಡಿಸಿ, ಪುನರ್‌ಸೃಷ್ಟಿಸ ಬಯಸಿದರೆ, ಅವರು ಅದನ್ನು ಮಾಡಬಹುದಾಗಿದೆ. ಆದರೆ ಈ ಆಳವಾದ ಸಾಗರದಲ್ಲಿ ಮುಳುಗು ಹಾಕಿರುವ ಜನ, ಮಿತ್ರನ ಸಂಕಲ್ಪಕ್ಕೆ ಸಮ್ಮತರಾಗುತ್ತಿದ್ದರೆ ಹಾಗೂ ಕೂದಲೆಳೆಯಷ್ಟು ಪ್ರಮಾಣದಲ್ಲಿ ಸ್ವಯಂ ಪ್ರಕಟಪಡಿಸಲು ಬಯಸದೇ ಇದ್ದರೆ, ಅದು ಇಂತಹ ಪ್ರಶಂಸೆಯಾಗಿದೆ, ಅದರ ಮಾಧ್ಯಮವಾಗಿ ನಿರ್ಮಲತೆಯ ಜಗಲಿಯನ್ನು ತಲುಪುತ್ತಾರೆ.

ಯಾವನು 'ಸ್ವಯಂ'ನ ಬಂಧನದಿಂದ ಸ್ವತಂತ್ರನಾದನು,
ಅವನು ಅಣುವಿನಂತೆ ನಿಜಕೂ ನಾಶವಾದನು.

ಜಗವು ಗೋಷ್ಠಿಯಾದರೆ ನೀನು ಆಗಿರುವೆ ಸಾಕಿ*
ನೀನು ಶಾಲೆಯಾದರೆ ಅವನು ಆಗಿರುವನು ಶಿಕ್ಷಕ.

ಕಾಲವೊಂದುನಾವೆಯಾಗಿದ್ದರೆ ಅವನು ಆಗಿಹನು ನಾವಿಕ,
ಸರ್ವ ದಾಳಗಳ ಪರೀಕ್ಷಕನು ಆಗಿಹನು ಅವನು.

'ಸ್ವಯಂ'ನಲ್ಲಿ 'ಸ್ವಯಂ' ಅಡಗಿಹನು ಅವನು,
ಬೇಟೆಯನು ಅಡಗಿಸು ಇಡುವಂತೆ, ಬೇಟೆಗಾರನು.

ಕುಲುಮೆಯಲಿ ಯಾವ ರೀತಿ ಅಗ್ನಿ, ಹೇ 'ಬಹರಿ',
ದೈವೀ ಪ್ರಕಾಶದಲ್ಲಿ ನೀನಡಗಿ ಆಗಿಹನು ಜಿಂದಾಬಾದ್.

• ಸಾಕಿ – ಮದ್ಯ ಸೇವನೆ ಮಾಡಿಸುವವನು.

ಆಭರಣ–೧೩೧

ಸಮಸ್ತ ಬ್ರಹ್ಮಾಂಡವು ಪ್ರೇಮದಲ್ಲಿ ಬಂಧಿತವಾಗಿದೆ.

ತಾಯಿಗರ್ಭದಿಂದ ಹೊರಬಂದ ಮೂರ್ನಾಲ್ಕು ವರ್ಷಗಳ ನಂತರದ ವಯಸ್ಸಿನಲ್ಲಿಯೆ, ಕಣ್ಣುಗಳು ಪ್ರಿಯತಮೆಯ ಸೌಂದರ್ಯದಿಂದ ಕೃತಾರ್ಥವಾಯಿತು. ಹಾಗೂ ಹೃದಯವು ಸುಂದರಿಯರ ಅನುಪಮ ಚೆಲುವಿನಿಂದ ಮೋಹಿತವಾಯಿತು. ಹಲವು ಸಲ ನನಗೆ ಯೋಚನೆ ಬರುತ್ತಿತ್ತು, ನನಗಿಂತ ಮೊದಲು ಪ್ರೇಮಯಾತನೆಯ ಈ ಸಂಪ್ರದಾಯ ಚಾಲನೆಯಲ್ಲಿತ್ತೋ ಅಥವಾ ನನ್ನಿಂದಲೇ ಇದರ ಆರಂಭವಾಗಿದಯೋ ಎಂದು? ಆದರೆ ಒಂದು ನಿರ್ದಿಷ್ಟ ಅವಧಿಯ ಬಳಿಕ ಅರಿವಾಯಿತು, ಸಮಸ್ತ ಲೋಕವು ಪ್ರೇಮದಿಂದ ತುಳುಕುತ್ತಿದೆ ಹಾಗೂ ಪ್ರೇಮದ ಯಾತನೆಯಿಂದ ಗ್ರಸ್ತವಾಗಿದೆ.

ಧರ್ಮನಿಷ್ಠರು ಹಡುಕುತಿಹರು ಆರಾಧಕನನ್ನು,
ಸುಂದರಿಯರು, ಇಹರು ಆಭರಣ ಹಾಗೂ ಸಂಪತ್ತಿನ ಯತ್ನದಲಿ.

ಸಂಪತ್ತಲ್ಲ! ನನಗೆ ಇದನು ಬೇಕು ತೆಗೆದುಕೊಳ್ಳಿ,
ಎರಡು ಕಡೆ ನಾಲ್ಕು, ಹಾಗೂ ಮಧ್ಯದಲಿ ಇನ್ನೂರು*

ಅರ್ಥಾತ್ ಆ 'ದರ್ದ' ನನಗೆ ಪ್ರಾಪ್ತಿಯಾಗಲೆ,
ಯಾವುದರ ಔಷಧಿಯು ಇನ್ನು ಸೃಷ್ಟಿಯೇ ಆಗಿಲ್ಲ.

ಬಾಲ್ಯದಿಂದಲೇ, ನನ್ನ ಅರ್ಹತೆಗೆ ಅನುಗುಣವಾಗಿ ದಖನಿ ಹಾಗೂ ಫಾರಸಿಯಲ್ಲಿ ಕವನಗಳನ್ನು ಹೇಳುತ್ತಿದ್ದೆ. ಕೇಳಿದ ಪ್ರತಿಯೊಬ್ಬನು ದಿಗ್ಭ್ರಾಂತಗೊಳ್ಳುತ್ತಿದ್ದನು. ಇಷ್ಟು ಚಿಕ್ಕ ವಯಸ್ಸು, ಹಾಗೂ ಪ್ರೇಮ ಹಾಗೂ ಸಂಕೇತಗಳ ಈ ಪರಿ! ಅಲ್ಲಾಹನ ಅನುಗ್ರಹ! ಅಕಸ್ಮಾತ್ ನಾನು ಕವನ ವಾಚನದ ಅರ್ಹತೆಯನ್ನು ಹೊಂದದೇ ಇದ್ದರೆ, ನನ್ನ ಹೃದಯವು ಸೌತೆಕಾಯಿಯ ತರಹ ಒಡೆದು ಹೋಳಾಗುತ್ತಿತ್ತು. ಹೃದಯವು ಉರಿದ ಕರಿಕಾಳುಗಳ ತರಹ ನೆಗೆದಾಡುತ್ತಿತ್ತು. ಜನರು ತಮಾಷೆಯನ್ನು ನೋಡುತ್ತಿದ್ದರು. ಸಮಸ್ತದ ಮೇಲೆ ನಿಯಂತ್ರಣ ಹೊಂದಿರುವ ದೇವರು ನನ್ನ ಈ ಸ್ಥಿತಿಯ ಸಾಕ್ಷಿಯಾಗಿಹನು, ಹಾಗೂ ನನ್ನ ಈ ಮಾತುಕತೆಯ ಸ್ವಯಂ ದರ್ಶಕನಾಗಿದ್ದಾನೆ.

• ದರ್ದ ಅಂದರೆ ಯಾತನೆ, ಶಬ್ದದಲ್ಲಿ ಹಿಂದೆ ಮುಂದೆ ದಾಲ್' ಅಕ್ಷರವಿದ್ದು, ಮಧ್ಯದ 'ರೆ' ಅಕ್ಷರವಿದೆ. ಅಬ್ಜದ್ ಗಣನೆಯ ಪ್ರಕಾರ 'ದಾಲ್'ನ ಬೆಲೆ ನಾಲ್ಕು ಹಾಗೂ 'ರೇ' ಯ ಬೆಲೆ ಎರಡು ನೂರು ಹೀಗಾಗಿ ದರ್ದ ಎಂದರೆ ಎರಡು ಕಡೆ ನಾಲ್ಕು, ಮಧ್ಯೆ ಇನ್ನೂರು.

ಪ್ರೇಮದಲಿ ಎಲ್ಲಿಹುದು ಧಾರ್ಮಿಕತೆ ಹಾಗೂ ವಿಲಾಸದ ಪ್ರಶ್ನೆ,
ನೋವಿರಲಿ ಅಥವಾ ನಲಿವಿರಲಿ, ಎರಡರಲೂ ಇಹುದು ಮದಿರೆ,

ಪ್ರೇಮದಲಿ ಎಲ್ಲಿಹುದು ಪರ್ವತ, ಹುಲ್ಲಿನ ಭೇದ,
ಪ್ರೇಮದಲಿ ಎಲ್ಲಿಹುದು ಸೂರ್ಯ ಚಂದ್ರರ ಭೇದ.

ಪ್ರೇಮದಲಿ ನೀನಿರಬೇಕು ವ್ಯಾಕುಲ ಹೇ 'ಬಹರಿ'
ಪ್ರೇಮಿಯ ಹೃದಯದ ಪರಿ ಆಗಿಹನು ಸ್ಥಿರ ಮೋಹಿ.

ಆಭರಣ–೧೩೨

ಪ್ರೇಮದ ನೋವು ನಲಿವುಗಳು

ಪತಂಗವು ಹೇಳುತ್ತದೆ, ಅಕಸ್ಮಾತ್ ನಾನು ಬುಲ್‌ಬುಲ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಯಾಕೆಂದರೆ ಬುಲ್ ಬುಲ್ ತನ್ನ ಪ್ರೇಮಿಯ ಅಗಲಿಕೆಯನ್ನು ಸಹಿಸುವುದಿಲ್ಲ. ಆದರೆ ಬುಲ್ ಬುಲ್ ಹೇಳುತ್ತದೆ, ಹಾಯ್! ಎಂಥಹ ವಿಷಾದನೀಯ! ನಾನು ಪತಂಗವಾಗಿದ್ದರೆ ಎಷ್ಟು ಚೆನ್ನಾಗಿತ್ತು? ಪತಂಗವಾಗಿದ್ದರೆ ಸುಟ್ಟು ಅಳಿದು ಹೋಗುತ್ತಿದ್ದೆ, ಈ ದಿನದ ರಾತ್ರಿ ಕೂಗಾಟದಿಂದ ಮುಕ್ತಿ ದೊರೆಯುತ್ತಿತ್ತು.

ನೋವು ಇಹುದು ಪತಂಗದಲಿ, ಸಂಗೀತ ಸಾಧನ ಬುಲ್‌ಬುಲ್‌ನಲಿ,
ಸಂಕ್ಷಿಪ್ತದಲಿ ನುಡಿಯುವುದಾದರೆ, ಎರಡರಲ್ಲಿ ಇದೆ ಪ್ರೇಮಯಾತನೆ.

ನೋವಿಗೆ ನೀಡುವುದು ಆದ್ಯತೆ ಕಾಲವು, ಸಂಗೀತ ಸಾಧನದ ಮೇಲೆ,
ನಾನು ನೀಡುವುದಿಲ್ಲ ಆ ರೀತಿ, ಎರಡೂ ಇಹವು ನೋವಿನ ಅತಿಥಿಗಳು.

ಆಭರಣ–೧೩೩

ರಾಗರಾಗಿಣಿಗಳ ವೈಶಿಷ್ಟ್ಯ

ಈ ಜಗದ ತೋಟವು ಹಸಿರು ಸಮೃದ್ಧವಾಗಿದೆ. ನನಗೆ ವಿಶ್ವಾಸವಿದೆ. ಈ ಸಮೃದ್ಧಿ ಹಾಗೂ ಹಚ್ಚ ಹಸಿರಿನ ರಾಗವು ನೀರಿನಿಂದಾಗಿದೆ. ಇಲ್ಲವಾದರೆ ಈ ಜಗದ ಸ್ಥಿತಿಯು ನೀರು ರಹಿತ ಹಳ್ಳಿಯ ತರಹ ಅಥವಾ ಗಿಡ ಮರರಹಿತ ಕಾಡಿನಂತೆ ಬಂಜರು ಆಗಿರುತ್ತಿತ್ತು. ಈ ಲಘು ಅಮಲು ಬಾದಶಾಹರು ಹಾಗೂ ಫಕೀರರಿಗೆ ಅಲ್ಲಾಹನ ಅಮೂಲ್ಯ ಕಾಣಿಕೆ ಹಾಗೂ ವಿಶೇಷ ಕೃಪೆಯಾಗಿವೆ. ಯಾರ ಹೃದಯವು

ವಜ್ರಕ್ಕಿಂತಲೂ ಕಠೋರವಾಗಿದ್ದು, ಯಾವುದೇ ಪ್ರಾರ್ಥನೆ ಅಥವಾ ಔಷಧಿಯಿಂದ ಮೃದುವಾಗುವುದಿಲ್ಲವೋ, ಅದೇ ರಾಗದಿಂದ ಮೃದುವಾಗುವುದಿಲ್ಲ. ಮೃದು ಹೃದಯದ ವೈಶಿಷ್ಟ್ಯವೇನೆಂದರೆ ಯಾವುದನ್ನು ನೂರು ವರ್ಷದಲ್ಲಿ ಪ್ರಾಪ್ತಿಸಿಕೊಳ್ಳಬಹುದಾಗಿದೆ, ಅದು ಅದನ್ನು ಒಂದು ಕ್ಷಣದಲ್ಲಿ ಸಿದ್ಧಿಸಿಕೊಳ್ಳುತ್ತದೆ. ಕಠೋರ ಹೃದಯಕ್ಕೆ ಸಾವಿರ ಶತಮಾನಗಳು ಕಳೆದರೂ ಅದು ಯಥಾ ಸ್ಥಿತಿಯಲ್ಲಿಯೇ ಇರುತ್ತದೆ. ಅದಕ್ಕೆ ಧರ್ಮವೂ ಉಪಯೋಗಕ್ಕೆ ಬರುವುದಿಲ್ಲ ಜಗವೂ ಕೆಲಸಕ್ಕೆ ಬರುವುದಿಲ್ಲ.

ಚಂಚಲ ಅಗ್ನಿಗೆ ಗಾಳಿಯಾಗಿದೆ ರಾಗವು,
ಬರಡು ಹೃದಯಕೆ ಔಷಧಿಯಾಗಿದೆ ರಾಗವು.

ಕಠೋರ ಹೃದಯವನು ಇದು ಮೃದುವಾಗಿಸುವುದು,
ಹಿಮಗಟ್ಟಿದ ಜೀವಗಳಿಗೆ ಶಾಖ ನೀಡುವುದು ರಾಗವು.

ಹೇ ಸಾಧಕನೆ, ರಾಗವು ಪ್ರೇಮದ ಅವಶ್ಯಕ ಸಾಮಗ್ರಿಗಳಲ್ಲಿ ಒಂದಾಗಿದೆ. ಪ್ರೇಮವು ಆಕಾಶ ಗುಮ್ಮಟದ ಕೆಳಗೆ ಒಂದು ಭಾವಣಿಯ ಸದೃಶವಾಗಿದ್ದು, ಅದು ಈ ನಾಲ್ಕು ಸ್ಥಂಬಗಳಿಂದ ಆಧಾರಿತವಾಗಿದೆ. ಮೊದಲನೆಯದು ಅಪ್ಸರೆಯ ಮುಖಚಹರೆಯ ವೀಕ್ಷಣೆ, ಎರಡನೆಯದು ಸಖಿಯರ ಗಾಯನ, ಮೂರನೇಯದು ಉದ್ಯಾನ ವಿಹಾರ ಹಾಗೂ ನಾಲ್ಕನೆಯದ ಸುರಾಪಾನದ ಸಹಾನುಭೂತಿ.

ನಾಲ್ಕು ಸ್ಥಂಬಗಳು ಅವಶ್ಯಕವು ಪ್ರೇಮದಲಿ,
ಅದರಲಿ ಒಂದು ಇಹುದು ದ್ರಾಕ್ಷಾರಸ ಪಾನ.

ಎರಡನೆಯದು ರಾಗ ಹಾಗೂ ಮೂರನೇಯದು ಇಹುದು,
ಅಪ್ಸರೆಯ ಮೊಗದ ಚೆಲುವಿನ ವೀಕ್ಷಣೆ.

ನಾಲ್ಕನೆಯದು ಇರುವುದು ಉದ್ಯಾನದಲಿ ವಾಯುವಿಹಾರ,
ಈ ನಾಲ್ಕರಿಂದಲೆ ವ್ಯಕ್ತವು ಪ್ರೇಮಭಾವವು.

ಹಾಗಲ್ಲ! ಈ ನಾಲ್ಕೂ ಪ್ರೇಮದಿಂದಲೇ ಇರುವುವು ಪ್ರಕಟವಾಗಿ,
ಇದನು ನುಡಿದಿಹನು 'ಬಹರಿ' ಪ್ರಮತ್ತತೆಯಲಿ ದೂಷಿತನಾಗಿ.

ಪ್ರೇಮಿಗೆ ಈ ನಾಲ್ಕು ವಿಧಗಳು ತೀರಾ ಅವಶ್ಯಕವಾಗಿದೆ. ಆದರೆ ರಾಗದಲಿ ವಿಚಿತ್ರ ಸ್ವಾದವಿದೆ ಹಾಗೂ ಸೂಕ್ಷ್ಮವಾದ ಕೋಮಲಭಾವವಿದೆ. ಅದು ಔಷಧಿರಹಿತ ಯಾತನಾಭರಿತ ಹೃದಯಕೆ ಹಾಗೂ ಜೀವದ ಗಾಯಕ್ಕೆ ಮಲಾಮಿಲ್ಲದೆ ಅಹ್ಲಾದತೆಯನ್ನು ದಯಪಾಲಿಸುತ್ತವೆ. ಆದರೆ ಅಭಿಲಾಷೆಯ ಅಗ್ನಿಯನ್ನು 'ತೂರ್'ಪರ್ವತದಂತೆ ಪ್ರಸಿದ್ಧಿಗೊಳಿಸುತ್ತದೆ.

ಮಂದಸ್ವರವು ಸೂಕ್ತವಾಗಿದೆ ತನ್ನ ಸ್ಥಾನದಲಿ,
ಪರಾಗದಲಿ ಸುಪ್ತವಾಗಿಹುದು ದೃಷ್ಟಿಯ ಮುಂಚೆ.

'ಬಂ' ಆಗಿಹುದ ಪ್ರಿಯ ನನಗೆ ಈ ಕಾರಣದಿಂದ,
ಇದರ ಮಧ್ಯದಲಿ ಇಹುದು ಬಿಸ್ಮಿಲ್ಲಾ.

ಪ್ರೇಮಿಯ ಜೀವನವು ದುಃಖವನ್ನು ಪಡೆಯುವುದರಲ್ಲಿದೆ. ಯಾವ ರೀತಿ ದೀಪದ ಜೀವನವು ಉರಿಯುವುದರಲ್ಲಿದೆ. ಅಕಸ್ಮಾತ್ ಅವನು ಎದೆಯುರಿಯ ಪ್ರಭಾವದಿಂದ ಜೀವಕಳೆಯು ಸ್ವಲ್ಪ ವೃದ್ಧಿಯಾಗುತ್ತದೆ. ಅಥವಾ ಅವನ ಶೋಕಸಾಗರದ ಅಬ್ಬರವು ಸ್ವಲ್ಪಮಟ್ಟಿಗೆ ವೃದ್ಧಿಯಾದರೂ, ಅವನ ಆತ್ಮದ ಹಕ್ಕಿಯ ದೇಹವು ಪಂಜರದಿಂದ ಹೊರಬಂದು, ಸ್ವರ್ಗದ ಮಹೋನ್ನತ ಸ್ಥಾನಕ್ಕೆ ಸಂತೋಷಭರಿತವಾಗಿ ಹಾರಿಹೋಗುತ್ತದೆ. ಆ ವ್ಯಕ್ತಿಯು ನಿಜಕ್ಕೂ ಅದೃಷ್ಟಶಾಲಿಯಾಗಿದ್ದಾನೆ. ಯಾವನು ರಾಗ ಹಾಗೂ ಆನಂದದ ಸಾರವಾಗಿರುತ್ತಾನೆ. ಈ ಯಾತನೆಯನ್ನು ತನ್ನ ಜತೆಗಿರಿಸಿಕೊಳ್ಳುತ್ತಾನೆ. ಇಲ್ಲಿಯಾಗಲಿ ಅಥವಾ ಅಲ್ಲಿಯಾಗಲಿ ಸದಾ ಈ ನೋವಿನಲ್ಲಿ ನಡೆದಾಡುತ್ತಿರುತ್ತಾನೆ. ಬಹಳಷ್ಟು ಸಹಚರರು ಈ ರಾಗದ ಖಡ್ಗದಿಂದ ಹತರಾದರು, ಹತರಾಗುತ್ತಾ ಇದ್ದಾರೆ ಹಾಗೂ ಹತರಾಗುತ್ತಲೇ ಇರುತ್ತಾರೆ. ರಾಗ ಹಾಗೂ ಪ್ರಮತ್ತತೆ ಹೃದಯದಿಂದ ಮೆಚ್ಚುವಂತಹುದು. ಯಾರಿದ್ದಾನೆ ಹಾಗಿದ್ದರೆ, ಇವೆರಡನ್ನು ಮೆಚ್ಚದೇ ಇರುವವನು. ಹಾಗೂ ಇವುಗಳ ಜೊತೆ ಆತ್ಮೀಯತೆ ಹೊಂದದೇ ಇರುವವನು. ಆದರೆ ರಾಗವು ಶೋಕ ಭರಿತ ಹೃದಯಕ್ಕೆ ಬೇರೆ ವಸ್ತುಗಳ ಸಾಪೇಕ್ಷ ಎರಡು ಪಟ್ಟು ಪ್ರಭಾವವನ್ನು ಬೀರುತ್ತದೆ ಹಾಗೂ ಪ್ರಮತ್ತತೆಯು ಅಫೀಮಿನಂತೆ ದುಪಟ್ಟು ಸ್ವಾದವನ್ನು ನೀಡುತ್ತದೆ. ಯಾವ ವ್ಯಕ್ತಿಗೆ ರಾಗಗಳನ್ನು ಆಲಿಸುವ ಹವ್ಯಾಸವಿಲ್ಲವೋ, ಅವನು ಮನುಷ್ಯನಲ್ಲ, ಬದಲಾಗಿ ಮೃಗನಾಗಿದ್ದಾನೆ. ಅಥವಾ ಮಾಂಸರಹಿತ ಎಲಬು ಆಗಿದ್ದಾನೆ.

ಒಂದು ಕಾಲದಿಂದ ಅಪಖ್ಯಾತಿಯಾಗಿದ್ದು, ಗುರಿಯ ಮೀರಿದ್ದೇನೆ ಪ್ರಿಯತಮೆ, ಮದಿರೆ ಹಾಗೂ ಗಾಯನದ ಲೋಕವಾಗಿದೆ. ಎಲ್ಲವನು ತ್ಯಜಿಸಿ, ಏಕನಿಷ್ಠನಾಗುವ ಹಂಬಲವಂತೂ ಇದೆ. ಆದರೆ ಮಾಡಲೇನು? ಗೋಗಿಯೊಳಗೆ ಮನೆ ಇರುವುದು ನನ್ನದು, ಒಂದು ದಿನ ನನ್ನ ಉಪಸ್ಥಿತಿ ಒಂದು ಸೂಫಿ ಸಂಗೀತ ಗೋಷ್ಠಿ (ಸಮಾ)ಯಲ್ಲಿ ಆಯಿತು. ನನಗೆ ನನ್ನ ಅಂತಚಕ್ಷುವಿನಿಂದ ಹೇಗೋ ಗೋಚರಿಸಿತು. ಅದೇನೆಂದರೆ ರಾಗವು ಪ್ರಥಮವಾಗಿ ಆದಿ ದಿನದಿಂದಲೂ ನೋವುಭರಿತ, ಇಂತಹ ಒಂದು ಹೃದಯದಿಂದ, ಅದು ಗೋಷ್ಠಿಯಲ್ಲಿಯೇ ಇರಲಿ ಅಥವಾ ಯಾವುದೇ ಶಿಬಿರದಲ್ಲಿರಲಿ,

---

• ಬಂ – ಬಂ ನ ಅರ್ಥ ಗೊತ್ತಾಗಲಿಲ್ಲ. ಬಹುಶಃ ಇದು ಉರ್ದು ಅರಬಿ ಅಕ್ಷರಗಳ 'ಬೆ' ಮೀಮ್ – ಬಂ ಆಗಿರಬಹುದು ಯಾಕೆಂದರೆ ಬಿಸ್ಮಿಲ್ಲಾ 'ಬೆ' ಮೊದಲ ಮೀಮ್' ಕೊನೆಯಲ್ಲಿದ್ 'ಸೀನ್ ಮಧ್ಯದಲ್ಲಿದೆ.

ಅದು ಪ್ರಭಾವಶಾಲಿಯಾಗಿ ಅವನನ್ನು ಚಲನಶೀಲಗೊಳಿಸಿ, ಇತರರನ್ನು ಪ್ರಭಾವಿತಗೊಳಿಸುತ್ತದೆ. ಇದೆಂತಹ ದೃಷ್ಟಾಂತವೆಂದರೆ, ಕತ್ತಲೆಯ ಕೋಣೆಯಲ್ಲಿ ಒಂದು ಮಾವಿನಲ್ಲಿ ಬಣ್ಣ ಹಾಗೂ ಸುವಾಸನೆ ಉತ್ಪತ್ತಿಯಾಗುತ್ತದೆ. ನಂತರ ಇದರಿಂದಾಗಿ ಉಳಿದೆಲ್ಲವು ನೆರವೇರುತ್ತದೆ. ನೈಜತೆ ಏನೆಂದರೆ, ಹೀನ ಲೋಕಕ್ಕೆ ಕಳುಹಿಸಲ್ಪಟ್ಟ ಆತ್ಮಕ್ಕೆ ಈ ರಾಗದಿಂದಾಗಿ ಪರವಶತೆಯ ಸ್ಥಿತಿ ನಿರ್ಮಾಣವಾಗುತ್ತದೆ. ಮತ್ತು ಅದು ತನ್ನ ಪುರಾತನ ಸ್ಥಾನವಾದ ಉತ್ತುಂಗತೆಯ ನಿಶ್ಚಯ ಮಾಡುತ್ತದೆ.

ಎಂದಿನಿಂದ ಶರೀರದ ಶುಕ್ರದೆಸೆ ಆರಂಭವಾಗಿದೆ,
ನಾವು ಸಂಗೀತದ ಗಾಯನದಲಿ ಲೀನವಾಗಿದ್ದೇವೆ.

ಆದರೆ ಬದುಕಿಗೆ ನೀಡಿರುವ ವಚನವು ಇವನ ಸಾಂಗತ್ಯವನ್ನು ಬಿಡುವುದಿಲ್ಲ. ಆದರೆ ಅವನು ಬದುಕನ್ನೆ ಬಿಡುವಂತೆ ದೇವರು ಹಾಗೆ ಮಾಡದಿರಲಿ. ಪ್ರೇಮದಿಂದ ಗಾಯಗೊಂಡವನು ಅನುಮತಿಸತಕ್ಕ ಕಾರ್ಯಗಳ ಬಿಟ್ಟು ಅನುಮತಿಸತಕ್ಕವುಗಳನ್ನು ಮಾಡುವಂತಿರಲಿ. ಇದರ ಕಾರಣವು ಇದೇ ಆಗಿದೆ. ಇಲ್ಲವಾದರೆ ಏನು ಆಗುತ್ತೋ ಅದು ಸುಸ್ಪಷ್ಟವಾಗಿ ಪ್ರಕಟವಾಗಿದೆ.

ಜನರ ಹಿತದಲಿ ರಾಗವು ದೇವರ ಕೃಪೆಯಾಗಿದೆ,
ಅಂತರ್ದೃಷ್ಟಿಯಿಂದ 'ಆರೀಫ'ರ ವಿವೇಕವು ಕಡಿಮೆಯಾಗಿದೆ.

ಹೃದಯವು ಕಾಗದವಾಗಿದ್ದರೆ, ರಾಗವು ಸಿಹಿನೀರಿನ ಚಿಲುಮೆಯಾಗಿದೆ,
ರಾಗವು ಸೂರ್ಯವಾಗಿದ್ದರೆ, ನನ್ನ ಹೃದಯವು ತಾರೆಯಂತಾಗಿದೆ.

ಹೃದಯಗಳು ಕರಗಿ ಮೃದುವಾಗಿ ಹುಟ್ಟಿಹುದು ಈ ರಾಗವು,
ಯಾವ ರೀತಿ ಬೆಂಕಿಯು ಕಟ್ಟಿಗೆಯನು ಮಾಡುವುದು ಮೃದು

ರಾಗವು ಆಗಿಹುದು ಸತ್ಯದ ಪ್ರಾಪ್ತಿ ಮಾರ್ಗವು ನಿಸ್ಸಂಶಯ,
ಜಗದ ಅಜಾಗರೂಕರಿಗೆ ಎಚ್ಚರಿಸುವುದು ಇದು ಪ್ರತಿಕ್ಷಣ.

ಸಮಸ್ತ ಉಚ್ಚ ಮಟ್ಟದ ಸಾಧನಗಳಲ್ಲಿ ರಾಗವು ಉನ್ನತವಾಗಿದೆ,
ಬಹುತೇಕ ಆಕಾಶವು ಇಹುದು ಇದರ ವರ್ತುಲದಲಿ.

ರಾಗದ ವಿರೋಧಿಗಳು ಆಗಿರುವರು ಬಾಲವಿಲ್ಲದ ಕತ್ತೆ,
ದೇವರಾಣೆಗೂ, ಇದು ಆಗಿಹುದು 'ಬಹರಿ'ಯ ವಿಚಾರ.

ಆಭರಣ–೧೩೪

ಗುರು–ಶಿಷ್ಯ (ಪೀರಿ–ಮುರೀದಿ) ಸಂಬಂಧ ಅನುಭಾವದ ಸತ್ಯತೆಯಲಿ

ಸ್ನೇಹಿತನೊಬ್ಬನು ಈ ಅಸಹಾಯಕನನ್ನು ಒಮ್ಮೆ ಪ್ರಶ್ನಿಸಿದನು. ಪೀರಿ–ಮುರೀದಿ (ಗುರು–ಶಿಷ್ಯ) ಸಂಬಂಧವು ಜಗತ್ತಿನ ಸಂಪ್ರದಾಯಗಳಲಿ ಅತಿ ಅಚ್ಚುಮೆಚ್ಚಿನದ್ದು ಎನಿಸುತ್ತದೆ. ಇದೇನು ಕೇವಲ ಮಹಾಮಹಿಮ ದೇವರ ಅನುಭಾವದ ಪ್ರಾಪ್ತಿಗಾಗಿಯೇ ಅಥವಾ ಬೇರ್ಯಾವುದೇ ಉದ್ದೇಶವಿದೆ. ಯಾರಾದರೊಬ್ಬ ವ್ಯಕ್ತಿಯು 'ಪರಂಸತ್ಯ'ದವರೆಗೆ ತಲುಪುತ್ತಾನೆ ಎಂದು ಭಾವಿಸಿದರೆ, ಅವನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು ಅವನ ಕೈಗೆ ಏನೂ ದೊರಕುವುದಿಲ್ಲ. ಇಂತಹ ಹವ್ಯಾಸಿ 'ಮುರೀದ್'ರ ಹೃದಯದ ಚಿಕಿತ್ಸೆ ಏನಾಗಬಹುದು, ಯಾರು ಸತ್ಯದ ಪರಿಚಯ ಹೊರತು ಬೇರಾವುದೇ ವಸ್ತುನಿಂದ ತೃಪ್ತನಾಗುವುದಿಲ್ಲ. ನಾನು ಅವನ ಪೀರನ ಸಾನ್ನಿಧ್ಯದಲ್ಲಿ ಹಾಜರಾಗಿ, ಸ್ಪಷ್ಟವಾಗಿ ಅವರನ್ನು ನುಡಿದೆ 'ಹೇ ದಸ್ತಗೀರರೇ, ಒಂದು ರಹಸ್ಯದ ಶೋಧನೆಯ ಅವಶ್ಯಕತೆ ಇದೆ. ಹಜ್ರತರ ಅನುಮತಿ ಇದ್ದರೆ ಇಂತಹ ಶೇಖ್‌ನ ಬಳಿ ಹಾಜರಾಗಿ ವಿಚಾರಿಸುತ್ತೇನೆ. ಪೀರರು ಸಂತಸದಿಂದ ಅನುಮತಿ ನೀಡುತ್ತಾರೆ. ಅಕಸ್ಮಾತ್ ಅವರು ನೀನು ನನ್ನ ಮುರೀದ್ ಆಗಿದ್ದು, ಅನ್ಯರ ಬಳಿ ಯಾಕೆ ಹೋಗುವಿ ಎಂದು ನುಡಿದರೆ, ಅವರ ಗಣನೆಯು ನಿಶ್ಚಿತವಾಗಿಯೂ ಪೀರರಲ್ಲಿ ಆಗುವುದಿಲ್ಲ

ಹೇಳಲಾರೆ ನಾನು ಅವನನ್ನು ಪೀರ್ ಎಂದು ಎಂದಿಗೂ,
ಅವನು ಆಗಬಹುದು ಪೀರ್ ಅರ್ಥಾತ್ ವೃದ್ಧನು.

ಅವನು ಅನುಮತಿ ಪಡೆದು, ಬೇರೆ ಶೇಖರ ಬಳಿ ಹೋಗಿ, 'ಹಜ್ರತರೇ, ನಾನು ಇಂಥ ಶೇಖರ ಮುರೀದ್ ಆಗಿದ್ದು, ಒಂದು ರಹಸ್ಯದ ಶೋಧನೆಯಲಿ ತಮ್ಮ ಸಾನ್ನಿಧ್ಯದಲ್ಲಿ ಹಾಜರಾಗಿದ್ದೇನೆ. ಅಲ್ಲಾಹನು ನನಗೆ ಸಹಾಯಹಸ್ತ ನೀಡಲಿ ಆಗ ಆ ಶೇಖನು ಮಾಡಬೇಕಾಗಿರುವುದೇನೆಂದರೆ ಆ ಮುರೀದ್‌ಗಾಗಿ ಒಂದು ಪ್ರತ್ಯೇಕ ಕೋಣೆಯನ್ನು ನಿರ್ಧರಿಸಿ, ನಂತರ ಅವನ ಉಟೋಪಚಾರದ ವ್ಯವಸ್ಥೆ ಮಾಡಬೇಕು. ಅವನ ದೈವದಲ್ಲಿ ಕೃಪೆಯಿದ್ದರೆ, ಯಾವ ಗೂಢದ ಆಕಾಂಕ್ಷಿ ಅವನಾಗಿದ್ದಾನೆ. ಅದನ್ನು ಗುರುವಿಗೆ ತಿಳಿಸಬೇಕು. ಎಲ್ಲಿಯವರೆಗೆ ಎಂದರೆ ಅವನ ಶಂಕೆಯು ದೂರವಾಗಿ, ದೃಢ ವಿಶ್ವಾಸ ಹುಟ್ಟಬೇಕು. ಸಾಕ್ಷಾತ್ ವೀಕ್ಷಣೆಯ ಅವಶ್ಯಕತೆ ಎನಿಸಿದರೆ ಪೀರ್ ಅವನಿಗೆ ವೀಕ್ಷಣೆಯ ವಿಧಾನವನ್ನು ತೋರಿಸಿ, ಅವನ ಶೇಖರ ಬಳಿ ಕಳುಹಿಸಬೇಕು. ಅಕಸ್ಮಾತ್ ಆ ಪೀರನು, ನೀನು ನನ್ನ ಮುರೀದ್ ಅಲ್ಲ. ನೀನು ನನ್ನ ಮುರೀದ್

ಆದರೆ ಮಾತ್ರ ನಾನು ನಿನಗೆ ಆ ರಹಸ್ಯವನ್ನು ತಿಳಿಸುವೆ ಎಂದು ನುಡಿದರೆ ಆ ಪೀರನು ಪೀರ್‌ನಲ್ಲ, ಬದಲಾಗಿ ದಾರಿಹೋಕನಾಗಿದ್ದಾನೆ.

ದಾರಿಹೋಕನು ಅವನು, ಮಾರ್ಗದರ್ಶಕನಂತೂ ಅಲ್ಲ,
ದೈವಮಾರ್ಗದರ್ಶಕರು ಆಗಿಹರು ನನ್ನ ಸಾಕ್ಷಿ ಈಗ.

ತಾತ್ಪರ್ಯವೆಂದರೆ, ಒಬ್ಬ ಪೀರ್‌ಗೆ ಇಬ್ಬರು ಶಿಷ್ಯರು ನ್ಯಾಯಸಮ್ಮತ ಆದರೆ ಒಬ್ಬ ಮುರೀದ್‌ಗೆ ಇಬ್ಬರೂ ಪೀರರನ್ನು ಹೊಂದುವುದು ಶೋಭಾಯಮಾನವಲ್ಲ.

ಒಬ್ಬ ಪೀರ್‌ಗೆ ಇಬ್ಬರು 'ಮುರೀದ್' ಇರಬಹುದು.
ಆದರೆ ಇದರ ವಿರುದ್ಧ ಸ್ಥಿತಿಯು ನಿಷಿದ್ಧವು.

ಒಬ್ಬ ಪತ್ನಿಗೆ ಎರಡು ಪತಿಗಳು ಹೇ 'ಬಹರಿ',
ಬುದ್ಧಿವಂತರ ಬಳಿ ಇದು ಸರ್ವಥಾ ನಿಷಿದ್ಧವು.

ಇದೇ ಭಾವಾರ್ಥದ ಇನ್ನೊಂದು ರುಬಾಯಿ (ಚತುರೋಕ್ತಿ) ಹೀಗಿದೆ.

ಬುದ್ಧಿ ವಿವೇಕವುಳ್ಳ ಆ ಮಹನೀಯರು,
ಒಂದು ವಸ್ತುವನ್ನು ಎರಡು ಕಡೆ ಮಾರುವುದಿಲ್ಲ

ಒಂದೇ ವಸ್ತುವು ಇರುವುದು ಮಾರಾಟಯೋಗ್ಯ
ಅದನ್ನು ಇಬ್ಬರು ಅರ್ಧೇಗೆ ಖರೀದಿಸಬಹುದು.

ಆಭರಣ–೧೩೫

'ಪೀರ್'ನು ಸಮಸ್ತ ಪರಂಪರೆಯ ಸಿದ್ಧಿಯಾಗಿರುತ್ತಾನೆ.

ಒಬ್ಬ ವ್ಯಕ್ತಿಯು ಈ ಫಕೀರನನ್ನು ವಿಚಾರಿಸಿದನು, ಅದೇನೆಂದರೆ ನಾನು ಹಜ್ರತ್ ಖ್ವಾಜಾ ಬಂದೇ ನವಾಜ್ ಗೇಸುದರಾಜ್‌ರ ಮನೆತನದ ಮುರೀದ್ ಆಗಿದ್ದೇನೆ. ಐದು ಹೊತ್ತಿನ ನಮಾಜಿನ ಬಳಿಕ ನನ್ನ ಪೀರ್ ಹಾಗು ಪೀರ್‌ರ ಪೀರ್‌ಗಳಿಗೆ ಫಾತೇಹಾ* ಪಠಿಸುತ್ತೇನೆ.

ಆದರೆ ಈ ಕೆಲವು ದಿನಗಳಿಂದ ನನ್ನ ಮನದಲ್ಲಿ ಸಂಶಯ ಸುಳಿದಾಡುತ್ತಿವೆ. ಅದೇನೆಂದರೆ ಮೊದಲು ಯಾರ ಹೆಸರಿಗೆ ಫಾತೇಹಾ ಪಠಿಸಲಿ. ನಾನು ನುಡಿದೆ

---

* ಫಾತೇಹಾ – ಮೃತರ ಆತ್ಮಶಾಂತಿಗಾಗಿ ಕುರಾನಿನ ದುರೂದ್ ಪಠಿಸುವುದು.

'ನೀನು ದೀಕ್ಷೆ ಪಡೆದ ಪೀರ್‌ನಿಂದ, ಪೀರ್‌ರ-ಪೀರ್‌ರನ್ನು ತಲುಪುತ್ತಿ ಅಥವಾ ಪೀರ್‌ರ-ಪೀರ್‌ನಿಂದ ದೀಕ್ಷೆ ಪಡೆದ 'ಪೀರ್'ನ್ನು ತಲುಪುತ್ತಿ, ಅವನು ನುಡಿದನು 'ದೀಕ್ಷೆ ಸ್ವೀಕರಿಸಿದ ಪೀರ್‌ನಿಂದ, ಆಗ ನಾನು ನುಡಿದೆ, ಇದಕ್ಕಿಂತ ಅಧಿಕ ನನ್ನನ್ನು ಕೇಳಬೇಡ.

ಹೇ ಪ್ರೇಮಿಯೇ, ದೀಕ್ಷಾ ಪೀರ್‌ನೇ ಆಗಿಹನು ನಿನ್ನ ಪೀರ್,
ಸಮಸ್ತ ಪರಂಪರೆಯ ಕೊಂಡಿ ಇವನೇ ಅಗಿಹನು.

ಏನೆಲ್ಲಾ ಇದೆಯೋ ಅವನು ನಿನ್ನ 'ಪೀರ'ನೇ ಆಗಿದ್ದಾನೆ.
ಆದುದರಿಂದು ಮೇಲು-ಕೀಳು ಭಾವದಿಂದ ದಾಟಿ ಮುಂದೆ ಸಾಗು.

ಆಭರಣ-೧೩೬

'ಪೀರ್'ರ ಅನುಸರಣೆ

ಅಕಸ್ಮಾತ್ ಪೀರ್‌ರು ಮುರೀದನಿಗೆ ಏಳನೇ ಆಕಾಶಕ್ಕೆ ಹೋಗಲು ಹಾಗೂ ಶನಿಗ್ರಹದ ಕೈಕಾಲುಗಳನ್ನು ಕಳ್ಳನಿಗೆ ಕಟ್ಟುವಂತೆ ಕಟ್ಟಿ ತರುವಂತೆ ಆಜ್ಞಾಪಿಸಿದರೆ, ಮುರೀದನು ಇದನ್ನು ಸ್ವೀಕರಿಸಿ 'ಈಗಲೇ ತಂದೆ' ಎಂದು ನುಡಿಯುಬೇಕು. ನಾನು ಏಳನೇ ಆಕಾಶಕ್ಕೆ ಹೇಗೆ ಹೋಗಲಿ ಎಂದು ನುಡಿಯಬಾರದು. ಯಾಕೆಂದರೆ ಪೀರ್ ಹಾಗೂ ಮುರೀದ್‌ರ ಮಧ್ಯೆ ವಾಗ್ವಾದ ಅನುಚಿತವಾಗಿದೆ. ಹೀಗಾಗಿ ಅವರು ಅಥವಾ ಇವರು ತಪ್ಪಿತಸ್ಥರಲ್ಲ. ಬದಲಾಗಿ ಪೀರರು 'ಕುನ್' (ಆಗು) ಎಂದರೆ ಮುರೀದ್‌ನು "ಫೈಕುನ್" (ತಥಾಸ್ತು) ಎನ್ನಬೇಕು.

ಹೃದಯದಿಂದ ಸ್ವೀಕರಿಸುವುದು ಸೌಭಾಗ್ಯಮಯ ನಂಬಿಕೆಯಾಗಿದೆ,
ಪೀರ್‌ನು ಯಾವುದೇ ಆದೇಶ ಪಾಲನೆ ಅಗಿಹುದು ಅನಿವಾರ್ಯ.

ಆಭರಣ-೧೩೭

'ಪೀರ್'ನಲ್ಲಿ ಅಲ್ಲಾಹ ಹಾಗೂ ರಸೂಲ್‌ರ ದರ್ಶನ

ಒಬ್ಬ ವ್ಯಕ್ತಿಯ ಈ ಫಕೀರನಿಗೆ ಹತ್ರತ್ ರಸೂಲ್ (ಸ.ಅ) [ಮಹ್ಮದ್ ಪೈಗಂಬರ್]ರ ಸ್ವಪ್ನದಲ್ಲಿ ವೀಕ್ಷಣೆಯ ತೀವ್ರ ಒತ್ತಾಯ ಮಾಡತೊಡಗಿದ. ಜೊತೆಯಲ್ಲಿ ಮಹಾಮಹಿಮರ ಪರಂಸತ್ಯದ ವೀಕ್ಷಣೆಯ ಬಯಕೆಯನ್ನು ವ್ಯಕ್ತಪಡಿಸಿದ. ನನಗರಿವಿಲ್ಲ ಆವಾಗ ಏನು

ಸಮಯವಿತ್ತು ಹಾಗೂ ನನ್ನ ಮನದಲ್ಲಿ ಅದೇನೋ ಹೊಳೆಯಿತೋ, ನಾನು ಕೇಳಿದೆ 'ನೀನು ಯಾರದಾದರೂ ಮುರೀದ್‌ನಾಗಿದ್ದೀಯಾ"? ಅವನು ನುಡಿದು "ಹ್ಞಾಂ! ನಾನು ಮುರೀದ್ ಆಗಿದ್ದೇನೆ. ಆಗ ನಾನು ನುಡಿದೆ "ಹಾಗಾದರೆ ನೀನು ಮಹಮ್ಮದರನ್ನು ಏಕೆ ಹುಡುಕುತ್ತಿಯಾ? ಹಾಗೂ ದೇವ ವೀಕ್ಷಣೆಯ ಅಭಿಲಾಷಿಯಾಗಿದ್ದೀಯ? ಯಾಕೆಂದರೆ ಮುರ್ಷದ್ ಪ್ರತ್ಯಕ್ಷ ಮಹ್ಮದರಾಗಿದ್ದಾರೆ ಹಾಗೂ ಮಹ್ಮದರು ಪ್ರತ್ಯಕ್ಷ ದೇವರಾಗಿದ್ದಾರೆ.

ಸತ್ಯವು ಪುಷ್ಪವಾಗಿದೆ, ಅಹ್ಮದರು ಸಕ್ಕರೆ, ನಿನ್ನ ಪುಷ್ಪವು ಸಕ್ಕರೆಯಾಗಿದೆ,
ಪೀರ್‌ನಲ್ಲಿ ಎರಡೂ ಸಮಾವೇಶಗೊಂಡಿವೆ, ಇದರಲ್ಲಿ ಸಂದೇಹವಿಲ್ಲ.

ಎರಡೂ ಲೋಕಗಳು ಮುರ್ಷದನಲ್ಲಿ ನೆಲೆಸಿಹವು ಅರಿತುಕೋ,
ಈ ಅರ್ಹತೆಯು ನಿನ್ನಲ್ಲಿ ಇರದಿದ್ದರೆ, ನೀನು ದೃಷ್ಟಿಹೀನನು.

ಹೇ ಆತ್ಮೀಯನೇ! ಆಶ್ಚರ್ಯ, ಸಖೇಧಾಶ್ಚರ್ಯ! ಅದೇನೆಂದರು ಜನರು, ಹಜ್ರತ್ ಪೈಗಂಬರರನ್ನು ಪ್ರಜ್ಞಾವಸ್ಥೆಯಲ್ಲಿ ವೀಕ್ಷಣೆ ಮಾಡುವುದಕ್ಕಿಂತಲೂ ಸ್ವಪ್ನದಲ್ಲಿ ಕಾಣುವುದು ಉತ್ತಮವೆಂದು ಭಾವಿಸುತ್ತಾರೆ. ಒಂದು ವೇಳೆ ಫಕೀರ್‌ನನ್ನು ಕೇಳಿದರೆ, ಸತ್ಯರೂಪಿ ಮಹ್ಮದರು ಅವರೇ ಆಗಿದ್ದರು, ಯಾರು ವಿಶೇಷ ದೈವಿಜ್ಞಾನದ ವೀಕ್ಷಕರಾಗಿದ್ದರು. ಇದು ಪ್ರಕಟರೂಪವಾಗಿದೆ. ಪ್ರಕಟರೂಪವನ್ನು ಸ್ವಪ್ನದಲ್ಲಿ ನೋಡುವುದು ಅತ್ಯಧಿಕ ಮೂರ್ಖತನವಾಗಿದೆ.

ಸತ್ಯವು ಪ್ರಕಟರೂಪವಾಗಿದೆ, ನೋಡುವುದು ಬೇಕಾಗಿದೆ
ನೋಡಲು ಸತ್ಯವಂತಿಕೆಯ ವಿಶ್ವಾಸವು ಬೇಕಾಗಿದೆ.

ಅಚ್ಚಾಗಿರಲಿ ನಿನ್ನ ಹೃದಯದ ಮೇಲೆ ಪುರಾತನ ಜ್ಞಾನವು,
ಅರ್ಥಾತ್ ಜರಡಿಯ ಮೇಲೆ ಕುಸುರಿ ಬೇಕಾಗಿದೆ.

ಚಂದ್ರನ ಕಾಂತಿಯ ಅಭಿಲಾಷಿಯಾಗಿದ್ದರೆ ನೀನು,
ಶಿರವು ಚಕ್ರದಂತೆ (ಆಕಾಶ) ಬಾಗಿದ ರೂಪದ್ದು ಬೇಕಾಗಿದೆ.

ಬುದ್ಧಿವಂತರಿಗೆ ಸಾಕು ಕವನದ ಒಂದು ಚರಣ ಮಾತ್ರ,
ಬುದ್ಧಿಹೀನನಿಗೆ ಒಂದು ದೀರ್ಘ ಸ್ತುತಿಕವನ ಬೇಕಾಗಿದೆ.

ಎರಡೂ ಗೂಢಗಳ ಸಂಕೇತಗಳು ವಿಶೇಷವಾಗಿವೆ,
ಪಡೆಯಲದನು ವಿಶೇಷ ಪರಿಣತಿಯು ಬೇಕಾಗಿದೆ.

ಹುಡುಗಾಟದಿಂದ ನಿಶ್ಚಿತವಾಗಿ ದೊರೆಯುವನು ಸ್ನೇಹಿತನು ಖಂಡಿತಾ,
ಯಾವನಾದರೂ 'ಬಹರಿ' ಹೃದಯುಳ್ಳವನು ಬೇಕಾಗಿದೆ.

ಆಭರಣ–೧೩೮

‘ಮುರ್ಷದ್’ನು ಉತ್ತಮ ಪ್ರಕಟರೂಪಿಯಾಗಿರುತ್ತಾನೆ.

ಯಾರ ಗಣನೆಯು ‘ಯೂಮನೂನ ಬಿಲ್ ಘೈಬ್’ ಅರ್ಥಾತ್ (ಅಗೋಚರದ ಮೇಲೆ ವಿಶ್ವಾಸವಿಡುವುದು)ನಲ್ಲಿ ಆಗುತ್ತದೆ. ಅವರೇ ಮಹಾಮಹಿಮ ದೇವರ ಹಾಗೂ ಹಜ್ರತ್ ಮಹ್ಮದ್ (ಸ.ಅ) ಅವರನ್ನು ಸ್ವಪ್ನದಲ್ಲಿ ನೋಡಲು ಇಚ್ಛಿಸುತ್ತಾರೆ. ಯಾರು ಮುರ್ಷದ್‌ರ ಪರಮೋಚ್ಛ ಸೌಂದರ್ಯವನ್ನು ಯಾವ ರೀತಿಯಲ್ಲಿ ವೀಕ್ಷಿಸ ಬಯಸುತ್ತಾರೋ ಆ ರೀತಿಯಲ್ಲಿಯೇ ನೋಡುತ್ತಾರೆ ಹಾಗೂ ಗುರುತಿಸುತ್ತಾರೆ. ಇದರಷ್ಟಕ್ಕೆ ಅವರು ಸಂತುಷ್ಟರಾಗುವುದಿಲ್ಲ. ಏಕತ್ವದ ಪ್ರಕಾಶವು ಯಾವುದರ ಮೇಲೆ ಮಹ್ಮದರ ಪ್ರಕಾಶವಿದೆ, ಅದು ಸಮಸ್ತ ಪದಾರ್ಥಗಳ ಆಂತರ್ಯದಲ್ಲಿ ಹಾಗೂ ಬಾಹ್ಯದಿಂದ ಆವೃತ್ತವಾಗಿದೆ. ಬದಲಾಗಿ ವಿಭಿನ್ನ ರೂಪಗಳಲ್ಲಿ ಸ್ವಯಂ ಪ್ರಕಟವಾಗಿದೆ. ವಾಸ್ತವವಾಗಿ ಸಮಸ್ತ ಪದಾರ್ಥಗಳು ಅವನದೇ ಪ್ರಕಟರೂಪವಾಗಿವೆ. ಆದರೆ ಮುರ್ಷದ್ ಇವೆಲ್ಲವುಗಳಲ್ಲಿ ಉತ್ತಮ ಪ್ರಕಟರೂಪವಾಗಿದ್ದಾನೆ.

ಪ್ರತಿಬಿಂಬವಾಗಿದ್ದಾರೆ ಪ್ರವಾದಿ ಮಹ್ಮದರು,
ಅವರ ಪ್ರತಿಬಿಂಬದ ಹೋಲಿಕೆಯು ಅತ್ಯಂತ ಶುದ್ಧವಾಗಿಹುದು.

ಸಮಸ್ತ ಪದಾರ್ಥಗಳು ಭೂಮಿಯಿಂದ ಆಕಾಶದವರೆಗೆ,
ಇದರ ಪ್ರತಿಬಿಂಬವಾಗಿಹರು ಅವರು ನಿಸ್ಸಂದೇಹ.

ಎರಡೂ ಲೋಕಗಳ ಮಾದರಿ ಆಗಿಹರು. ಪೀರ್‌ರು,
ಅವರ ವಚನಗಳಲ್ಲಿ ನಿನ್ನ ವ್ಯಾಖ್ಯಾನವಿದೆ.

‘ಬಹರಿ’ ನೀನು ನಿನ್ನ ಪೀರ್‌ನ ಮೇಲೆ ಅನುರಾಗಿಯಾಗಿರು,
ಅವನ ಮಾರ್ಗದಲಿ ತಿಳಿದು, ಧೂಳಿಯಾಗು ನೀನು.

ಖಲೀಫಾಗಳು (ಸೂಫಿ ಉತ್ತರಾಧಿಕಾರಿಗಳು) ಯಾವಾಗ ತಮ್ಮ ಸ್ಥಾನವನ್ನು ಇತರರಿಗೆ ನೀಡುತ್ತಾರೆ. ಆಗ ಮೊದಲು ಅನ್ಯತ್ವದ ನಿರಾಕರಣೆ ಹಾಗೂ ಏಕ ಅಸ್ತಿತ್ವದ ಸಾಕ್ಷಗಳಿಂದ ಪರಿಚಿತಗೊಳಿಸುತ್ತಾರೆ. ಆ ನಂತರ ‘ಖಿಲಾಫತ್’ ನ ಅರ್ಹತೆಯನ್ನು ಪ್ರಧಾನ ಮಾಡುತ್ತಾರೆ. ಇದರ ಹೊರತಾಗಿಯೂ ಯಾವುದೇ ವ್ಯಕ್ತಿಯು ದೈವೀ ಸೌಂದರ್ಯ ಹಾಗೂ ಮಹ್ಮದರ ಸೌಂದರ್ಯದ ಸಮಾನವಾಗಿ ಪೀರ್‌ರ ಸೌಂದರ್ಯಕ್ಕೆ ಸಂತೃಪ್ತನಾದರೆ, ಈ ಕಾರ್ಯವೂ ಅಸತ್ಯವೆನಿಸದೆ ವಿಧಿಸಮ್ಮತವಾಗಿದೆ.

---

* ವಲಿ, ಗೌಸ್, ಖುತುಬ್ – ಇವರು ವಿವಿಧ ಸೂಫಿಗಳು

ಯಾವನು ಪೀರನಲ್ಲಿ ಅಳಿದುಹೋದನು ಸಂಪೂರ್ಣ,
ಅವನ ದೇಹವಾಗಿದೆ ಪೀರ್‌ನ ಪ್ರತಿರೂಪ.

ವಲಿ, ಗೌಸ್, ಖುತುಬ್* ಯಾರೇ ಆಗಲಿ ಅವರು,
ತಿಳಿಯನು ಇವರನು ತನ್ನ ಪೀರ್‌ನ ಸರಿಸಮಾನ.

ತನ್ನ ಜತೆಯಲ್ಲಿ ಎಲ್ಲರನು ದಹಿಸಿರುವನು,
ಮುರ್ಷಿದ್‌ನ ಅಗ್ನಿಷ್ಟಿಗೆಯಲಿ ಪರಿಪೂರ್ಣವಾಗಿ.

ಅವನ ಮುರೀದ್ ಎಲ್ಲಿ, ಆಗಿಹನು ವಾಸ್ತವದಲಿ ಪೀರ್,
ಆದರೆ ವಿನಮ್ರತೆಯನು ತೋರುವನು ಪೀರ್‌ನ ಅಸ್ಥಾನದಲಿ.

ಇದು ಆಗಿಹುದು ಎರಡೂ ಲೋಕದಲಿ ಸೇರ್ಪಡೆ ಅವನ
ಹಾಗೂ ಪೀರ್‌ನ ದೃಷ್ಟಿಯು ಆಗಿಹುದು ಅಮೂಲ್ಯ ರತ್ನ.

ಇರುವುದು ತಾರಾಲೋಕದ ಸಾಮ್ರಾಜ್ಯ ಸದೃಶ,
ಹಾಗೂ ಪೀರ್‌ನ ದಿಶೆಯು ಆಗಿಹುದು ಚಂದ್ರನ ಕಾಂತಿ.

ಈ ಎಲ್ಲಾ ದೈವತ್ವವು ಆಗಿಹುದು ಅವನಿಂದಲೇ,
ಪೀರ್‌ನ ಅಸ್ತಿತ್ವವು ಆಗಿಹುದು ಅವನು ವಜ್ರ

ಅಲ್ಲಾಹ, ಮಹ್ಮದ್ ಆಗಿಹರು ಅವನಿಗೆ ಅಚ್ಚುಮೆಚ್ಚು,
ಇಡುವನು ಸದಾ ಇವರನು ಪೀರ್‌ಗಿಂತಲೂ ಉನ್ನತ.

ಇವನ ಮುಂದೆ ಧಾರ್ಮಿಕ ಒಂಟೆಯ ಸವಾರಿ,
ಆಗಿಹನು ಅಭಿಮಾನಿತನು ಅವನ ಕತ್ತೆಯೂ ಸಹ.

ನಾಯಿಯಂತೆ ತಿರುಗುತಿಹನು ಈ 'ಬಹರಿ'ಯು
ಪೀರ್‌ನ ಓಣಿಯು ಆಗಿಹುದು ಅವನಿಗೆ ಉನ್ನತ ಸ್ಥಾನ.

ಆಭರಣ–೧೩೬

'ಪೀರ್' ನ ಹಕ್ಕು

ಪೀರ್'ನ ಹಕ್ಕು ತಂದೆಗೆ ಹೋಲಿಸಿದರೆ ಅಧಿಕವಾಗಿದೆ. ಯಾಕೆಂದರೆ ಮುರ್ಷದರು ಹಜ್ರತ್ ಮಹ್ಮದರಾಗಿದ್ದಾರೆ ಹಾಗೂ ತಂದೆಯ ಹಜ್ರತ್ 'ಆದಂ'ಆಗಿದ್ದಾರೆ. ಈ ದೇಹವು 'ಆದಂ'ರಿಂದ ಪ್ರಾಪ್ತಿಯಾಗಿದೆ. ಅವರು ಎಲ್ಲಾ ದೇಹಗಳ ಮೂಲವಾಗಿದ್ದಾರೆ.

ಆತ್ಮವು ಮಹ್ಮದರಿಂದ ದೊರೆಯಿತು. ಅವರು ಆತ್ಮಗಳ ಮೂಲವಾಗಿದ್ದಾರೆ. ಹೀಗಾಗಿ ಆತ್ಮಕ್ಕೆ ಪ್ರಾಮುಖ್ಯತೆ ಪ್ರಾಪ್ತಿಯಾಗಿದೆ. ಆದರೆ ಹೇ ಪ್ರೇಮಿಯೇ! ನೀನು ತುಂಬಾ ಗಮನವಿಟ್ಟು ನೋಡಿದರೆ ಹಾಗೂ ಯುಕ್ತ ರೀತಿಯಲ್ಲಿ ಆಲೋಚಿಸಿದರೆ, ನಿನಗೆ ಅರಿವಾಗುವದೇನೆಂದರೆ ಇಡೆರಡು ಒಂದಕ್ಕಿಂತ ಇನ್ನೊಂದು ಭಿನ್ನವಾಗಿಲ್ಲ. ಬದಲಾಗಿ ಒಂದೇ ಆಗಿದೆ.

'ಅಹ್ಮದ್' ಹಾಗೂ 'ಆದಂ'ರಲ್ಲಿ ಯಾಕಾಗಿ ಇರಬೇಕು ಭೇದ,
ದೇಹ ಆದಂ, ಆತ್ಮ ಅಹ್ಮದ್ ಅರ್ಥಾತ್ ಏಕ ದೇಹಾತ್ಮ.

ಆಭರಣ–೧೪೦

ಸ್ಮರಣೆ ಹಾಗೂ ಧ್ಯಾನಗಳಲ್ಲಿ ಯಾವ ಸ್ಮರಣೆಯು ಇಷ್ಟಾರ್ಥದವರೆಗೆ ತಲುಪಿಸುತ್ತದೆ.

ಸ್ಮರಣೆ, ಧ್ಯಾನ ಹಾಗೂ ಅನುಚಿಂತನೆಯ ಸೂತ್ರಗಳು ಹಾಗೂ ಜೀವಸೆರೆಯ ವಿಧಾನಗಳು ಮನುಷ್ಯನ ಉಸಿರಾಟದಂತೆ ಅಸಂಖ್ಯಾತವಾಗಿವೆ. ಆದರೆ ಸತ್ಯ ಪಕ್ರಟವಾಗುವಂಥ ಧ್ಯಾನದಿಂದ ವೀಕ್ಷಣೆಯ ಭಾಗ್ಯವು ಪ್ರಾಪ್ತಿಯಾಗುವುದು ಅವಶ್ಯಕವಾಗಿದೆ.

ಹೇ ಆತ್ಮೀಯನೇ! ಜೀವ ಸೆರೆಯು ದೇಹದ ಪವಿತ್ರತೆಗಾಗಿಯಂತೂ ಉಪಯುಕ್ತವಾಗಿದೆ. ಈ ಹಿಂದಿನ ದೈವೀ ಪುರುಷರು ಸಹ ಇದನ್ನು ಕುರಿತು ಒಮ್ಮತ ಪ್ರಕಟಿಸುತ್ತಾರೆ. ಆದರೆ ಅನಾನುಭವಿ ತಿಳಿಗೇಡಿಗಳಿಗೆ ಇದರಲ್ಲಿ ಅನುಮಾನವಿದೆ, ಯಾಕೆಂದರೆ ಜೀವ ಸೆರೆಯ ಏಕಾಗ್ರತೆಯಲಿ ಜೀವಕ್ಕೆ ತೊಂದರೆಯಾಗುತ್ತದೆ ಹಾಗೂ ಶರೀರವು ಯಾತನೆಯಲ್ಲಿ ತೊಳಲಾಡುತ್ತದೆ. ಆನಂದವು ಸಾಮಿಪ್ಯದ ಕಾರಣವಾಗುತ್ತದೆ ಹಾಗೂ ತೊಂದರೆಯ ಅಂತರ ಹೆಚ್ಚಸಲು ಕಾರಣವಾಗುತ್ತದೆ. ಆನಂದದಲ್ಲಿ ಅಲ್ಲಾಹನ ಕೃಪೆಗಳು ಪ್ರಾಪ್ತವಾಗುತ್ತವೆ ಹಾಗೂ ತೊಂದರೆಯಲ್ಲಿ ಸೈತಾನಿನ ಕೇಡುಗಳಿಗೆ ಕಾರಣವಾಗುತ್ತವೆ. ಸಂಕ್ಷಿಪ್ತವೆಂದರೆ ಅಲ್ಲಾಹನ ನಾಮದ ಸ್ಮರಣೆಯು ಸಮಸ್ತ ಸ್ಮರಣೆಗಳಲ್ಲಿ ಅತ್ಯುತ್ತಮವಾಗಿದೆ. ಇದರ ವಿಧಾನವೇನೆಂದರೆ ಇದರಲ್ಲಿ ಗಂಟಲು ಹಾಗೂ ನಾಲಿಗೆಯು ಕ್ರೀಯಾಶೀಲವಾಗದೆ, ಕೇವಲ ದೈವೀಕ ನಾಲಿಗೆಯಿಂದ ಶ್ವಾಸವು ಜೊತೆಯಾಗುವುದು. ಶ್ವಾಸವನ್ನು ಒಳಗೆ ತೆಗೆದುಕೊಂಡರೂ ಅಥವಾ ಹೊರ ಬಿಟ್ಟರೂ, ಹೃದಯವನ್ನು ಏಕಾಗ್ರವಾಗಿಟ್ಟು ದೈವೀಕ ಶರೀರದ ಕಿವಿಯಿಂದ ಕೇಳುತ್ತಾ ಇರಬೇಕು. ಈ ಸ್ಮರಣಕ್ರಿಯೆಯು ಕೇಳದೇ ಇದ್ದರೆ ಸೂಕ್ತವೆನಿಸುವುದಿಲ್ಲ. ಬದಲಾಗಿ ಇದನ್ನು ಹೀಗೆ

ಅರ್ಥೈಸಿಕೊಳ್ಳಿ, ನಾನು ನುಡಿದೆ ಇಲ್ಲ, ಇಂತಹ ಸ್ಮರಣೆಯಿಂದ ಅಪಾಯಗಳು ಸ್ಥಗಿತಗೊಳ್ಳುತ್ತವೆ. ದೇವನು ಅಪಾಯ ರಹಿತ ಧ್ಯಾನಾಸಕ್ತತೆಯನ್ನು ದಯಪಾಲಿಸುತ್ತಾನೆ.

ಯಾರಾದರೂ ಪ್ರಕಟರೂಪವಾಗಿದ್ದರೆ, ಹೃದಯವು ಅಪಾಯರಹಿತವಾಗಿದೆ. ಅದು ನಿಜಕ್ಕೂ ಕನ್ನಡಿಯಂತಿದೆ, ಅಲೆರಹಿತ ಸಮುದ್ರವಾಗಿದೆ.

ಹೇ ಸ್ನೇಹಿತನೇ, ಅಪಾಯಗಳು ಸ್ಥಗಿತವಾಗುವುದು ಅಸಾಧ್ಯವಾಗಿದೆ, ಕೇವಲ ಕೆಲವು ನಿಶ್ಚಿತ ಅವಧಿ ಹಾಗೂ ಅವಸ್ಥೆಗಳ ಹೊರತು. ಅಪಾಯಗಳು ಹಸಿ ಚಾಟಿಯ ಏಟಿನ ತರಹವಿದೆ. ಇವುಗಳನ್ನು ತೆಗೆದು ಬಿಸಾಕಲು ಪ್ರಯತ್ನಿಸಿದರೂ ಅವು ಹೋಗುವುದಿಲ್ಲ. ಅಪಾಯಗಳು ಸ್ಥಗಿತವಾಗುವ ಸಮಯ ಹಾಗೂ ಸ್ಥಿತಿಗಳು, ಅವು ಇವುಗಳಿವೆ. ಪಗಡೆ ಆಡುವುದು, ಬರವಣಿಗೆಯಲ್ಲಿ ತಲ್ಲೀನನಾಗುವುದು ಅಥವಾ ಪ್ರೇಮ ಸ್ವಭಾವಿಯಾಗುವುದು. ಇದರ ಪ್ರೇಮವು ಆರಂಭಿಕ ಹಂತದಲ್ಲಿ ಬೆಂಕಿಯ ತರಹ ಬಿಸಿಯಾಗುತ್ತದೆ. ಅಥವಾ ಆರೀಫ್‌ನ ಸ್ಥಿತಿ, ಯಾವನು ವಿವೇಕವನ್ನು ದಾಟಿ ಆತ್ಮದ ದಿವ್ಯ ಅಂತರ್ದೃಷ್ಟಿಯಲಿ, ಮೆದುಳಿನಲ್ಲಿರುವ ಸ್ಥಾನಕ್ಕೆ ತಲುಪಿ ಕ್ರಿಯಾಶೀಲವಾಗಿರುತ್ತಾನೆ.

ಹೇ ಆತ್ಮೀಯನೇ! ಅಪಾಯ ಹೃದಯದ ಪುತ್ರನೆ, ಆತ್ಮದ ಉತ್ತರಾಧಿಕಾರಿಯು ಹಾಗೂ ಪ್ರಕಾಶದ ಪರಿಣಾಮವಾಗಿದೆ. ಆ ಸ್ಥಿತಿರಹಿತವು ಚಲನಶೀಲವಾದಾಗ, 'ಏಕತ್ವ'ದ ಸ್ಥಾನವನ್ನು ನಿರ್ಣಯಿಸಲಾಯಿತು. ಇದರಿಂದಲೇ ಏಕತ್ವಕ್ಕೆ ಯುಕ್ತಾಯುಕ್ತತೆ ವಿಶಿಷ್ಟತೆಯನ್ನು ದಯಪಾಲಿಸಲಾಯಿತು. ಮತ್ತು ಸಾಕ್ಷ್ಯಲೋಕವನ್ನು ಪ್ರಕಟರೂಪಗೊಳಿಸಲಾಯಿತು. ಬದಲಾಗಿ ಸಮಸ್ತ ಸೃಷ್ಟಿಗಳು ಆದಿಯಿಂದ ಅನಂದದವರೆಗೆ ಇದರ ಉತ್ಪತ್ತಿಯೆ ಆಗಿದೆ. ಚೆನ್ನಾಗಿ ಆಲೋಚಿಸಿದರೆ, ಅರಿವಾಗುವುದೇನೆಂದರೆ ಅಪಾಯವು ಭೇಟಿಯೂ ಆಗಿದೆ, ವಿಯೋಗವೂ ಆಗಿದೆ.

ಹಾಂ! ನಾನು ನನ್ನ ಮೂಲವಿಷಯ 'ಸ್ಮರಣೆ' (ಜಿಕ್ರ್) ಕಡೆಗೆ ಬರುತ್ತೇನೆ. ನನ್ನ ಮಾನ್ಯ ಪೀರ್–ಮುರ್ಷದ್‌ರು ಹಲವಾರು ಬಾರಿ ನುಡಿಯುತ್ತಿದ್ದರು. ಸದಾಚಾರ ಹಾಗೂ ವಿಲಾಯತ್ (ವಲಿಯಸ್ಥಾನ)ನಲ್ಲಿ ಆ ವ್ಯಕ್ತಿಯೇ ಅಗ್ರಗಣ್ಯನೆನಿಸುತ್ತಾನೆ. ಯಾವನು ಔಲಿಯಾಗಳ ವೃಂದದಲಿ ಸೇರಿರುವನು ಹಾಗೂ ಯಾವನ ಹೃದಯವು ಸದಾ ಆ ದೈವ ಅಸ್ತಿತ್ವದಲ್ಲಿ ಮಗ್ನವಾಗಿರುತ್ತದೆ. ಇದಲ್ಲದೆ ಅವರು ತಮ್ಮ ಪೀರ್ ಹಜ್ರತ್ ಶಾಹ ಅಬ್ದುಲ್ ಸತ್ತಾರ್ (ಇವರ ಅಂತಿಮ ವಿರಾಮ ಸ್ಥಳವು ಅಥೋನಿಯ ಬಳಿ ಚಪಗರಿನಲ್ಲಿದೆ) ಇವರು ಮೊಟ್ಟ ಮೊದಲು ಈ ಸ್ಮರಣೆಯ ಆಸಕ್ತಿಯಲ್ಲಿ ದಯಪಾಲಿಸಿದ್ದರು. ಈ ಸ್ಮರಣೆಯು ನನ್ನ ಪೀರ್‌ರ ಸಮಸ್ತ ಬಾಹ್ಯ ಹಾಗೂ ಆಂತರ್ಯದ ಅವಯವಗಳ ಮೇಲೆ ಆವರಿಸಿತು. ಅವರು ಬಯಸಿದಾಗ ಆತ್ಮ

ಧ್ಯಾನಾಸಕ್ತಗೊಳಿಸಿ, 'ಶೇಖ್'ರ ವೀಕ್ಷಣೆಯ ಭಾಗ್ಯವನ್ನು ದಯಪಾಲಿಸುತ್ತಿದ್ದರು. ನನ್ನ ಪೀರ್‌ರು ಸ್ಮರಣೆಯನ್ನು (ಜಿಕ್ರ್) ಬಿಡಲು ಬಯಸಿದಾಗ, ಅಂತಹ ಸ್ಮರಣೆಯಿಂದ ತಡೆಯುತ್ತಿದ್ದರು. ಅದು ಆಫೀಮಿನ ಗೀಳಿನಂತೆ ಅವರಿಗೆ ಬಿಡಲಾಗಲಿಲ್ಲ. ಈವರೆಗೂ ಅನಾಪೇಕ್ಷಿತವಾಗಿ ಅದು ಸತತವಾಗಿ ಜಾರಿಯಲ್ಲಿದೆ. ಹಜ್ರತರ ನಿಧನದ ಸಮಯದಲ್ಲಿನನ್ನ ಪೀರ್‌ರನ್ನು ಕರೆದು ಕೇಳಿದರು. ಅದೇನೆಂದರೆ, ನನಗೆ (ಅಬ್ದುಲ್ ಸತ್ತಾರ್ ಅವರಿಗೆ) ನನ್ನ ಅಸ್ತಿತ್ವದ ಎಲ್ಲಾ ದಿಶೆಗಳಿಂದಲೂ ದೂರದಿಂದ ಡೋಲಿನ ಶಬ್ದ ಕೇಳಿಸುತ್ತಿದೆ. ಇದೇನಿಹುದು? ಆಗ ನನ್ನ ಪೀರರು ತಮ್ಮ ಪೀರ್ ಹಜ್ರತ್‌ರ ದಿವ್ಯ ನೋಟದ ಸಹಾಯದಿಂದಲೇ ನುಡಿದರು. ಹೇ ದಸ್ತಗೀರ್! ಈ ಬ್ರಹ್ಮಾಂಡಕ್ಕಿಂತಲೂ ಅಧಿಕ ವಿಶಾಲವಾದ ಪವಿತ್ರ ಅಸ್ತಿತ್ವದ ನಾಮ ಸ್ಮರಣೆಯು, ಭೂಮಿಯಲ್ಲಿ ಅಡಗಿರುವ ಬೀಜದ ತರಹ ಪ್ರತಿಯೊಂದು ಸ್ಥಳದಲ್ಲಿ ಸುಪ್ತವಾಗಿತ್ತು. ಈಗ ವಿಯೋಗದ ವರ್ಷಧಾರೆಯ ಸಮಯ ಬಂದಿದೆ. ಇದರಿಂದಾಗಿ ಅದು ತೇವವನ್ನು ಪಡೆದು ಪ್ರತಿಯೊಂದು ಸ್ಥಳದಿಂದ ತನ್ನ ಶಿರವನ್ನು ಮೊಳಕೆಯ ರೂಪದಲ್ಲಿ ಪ್ರಕಟಗೊಳಿಸಿದೆ. ಇದನ್ನು ಹೇಳಿ ಹಜ್ರತರು ಮಂದಹಾಸ ಬೀರಿದರು. ಬಹುಶಃ ಹಜ್ರತರು ನನ್ನ ವಿವರಣೆಯನ್ನು ಮೆಚ್ಚಿ, ಸ್ವೀಕರಿಸಿರಬಹುದು.

ಹೇ ಸ್ನೇಹಿತನೇ! ಸಾವಿರ ಮಾತುಗಳ ಬದಲಿಗೆ ಒಂದೇ ಮಾತು ನುಡಿಯುವೆ, ಜಗದ ಆಲೋಚನೆಯನ್ನು ನಿನ್ನ ಹೃದಯದಿಂದ ತೆಗೆ, ಇರುವ ಆಯುಷ್ಯವನ್ನು ಭಾಗ್ಯವೆಂದು ಭಾವಿಸಿ, ಪುರುಷತ್ವದಿಂದ ಸ್ಮರಣೆ (ಜಿಕ್ರ್)ಯಲ್ಲಿ ತಲ್ಲೀನನಾಗು. ನಿನ್ನ ಆಯುಷ್ಯದ ಪ್ರತಿಕ್ಷಣವು ಬಹುಮೂಲ್ಯ ಮಾಣಿಕ್ಯವಾಗಿವೆ. ಅದನ್ನು ಕಲ್ಲೆಂದು ಭಾವಿಸಿ, ವೃಥಾ ವ್ಯಯಿಸದಿರು, ಜಾಗ್ರತೆ!

ಹೋಗುವುದಿದೆ ಒಂದು ದಿನ ನಿನಗೆ ಮೃತ್ಯುವಿನ ಬಾಯಲಿ,
ಗೊತ್ತು ನನಗೆ, ನೀನಿರುವೆ ಆಗಸದ ಚಂದ್ರನಂತೆ ಗೌರವಶಾಲಿ.

ನೀನು ಆಗಿರುವೆ ತೊಟ್ಟಿಯಂತೆ, ಈ ಜಗದ ಮೋಹದಿ,
ಅಧೋಗತಿಯ ಬಳಿಕ ವ್ಯಕ್ತವಾಗುವುದು ನಿನ್ನ ಎತ್ತರ.

ಪ್ರತಿ ಬೆಳಗು-ಸಂಜೆ ಮಾಡು ನೀನು, ದೈವಸ್ಮರಣೆ ತಪ್ಪದೆ,
ಇದೇ ಪಾಠವನು ಹೇಳುತಿಹುದು ಗುಬ್ಬಿ ಕಲರವ ಮಾಡಿ.

ಸ್ನೇಹಿತನ ಹೊರತು ಬಾರದಿರಲಿ ಅನ್ಯರ ಯೋಚನೆ ಮನದಲಿ,
ನಿನ್ನ ಹೃದಯವು ಆಗಲಿ, ಸ್ನೇಹಿತನ ಪ್ರಭೆಯ ನಿವಾಸವು.

'ಸ್ವಯಂ' ದಿಂದ 'ಸ್ವಯಂ' ಅನ್ನು ಅರಿತವನು ಹೇ 'ಬಹರಿ'
ಕಾಣುವನು ಅವನು 'ಪೀರ್'ನ ಮೊಗದಲಿ 'ಅಲ್ಲಾಹ'ನನು.

ಆಭರಣ–೧೪೧

ಸ್ಮರಣೆ ಹಾಗೂ ಸ್ಮರಣೆಯ ಪರಿತ್ಯಾಗ

'ಸಾಹೆಬುಲ್ ವರದ್ ಮಲೂನ್, ದ ತಾರೀಕುಲ್ ವರದ್ ಮಲೂನ್'

(ಸ್ಮರಣೆ ಮಾಡುವವನು ಉದ್ಘೋಷಕನಾಗಿದ್ದಾನೆ, ಸ್ಮರಣೆಯನ್ನು ತ್ಯಜಿಸಿದವನು ಧಿಕ್ಕರಿಸಲ್ಪಟ್ಟವನಾಗಿದ್ದಾನೆ)

ಏಕದೇವ ವಿಶ್ವಾಸಿಯು, ಯಾವಾಗ ಏಕತ್ವದ ಸ್ಥಾನಕ್ಕೆ ತಲುಪುತ್ತಾನೆ ಹಾಗೂ ದಿವ್ಯಜ್ಞಾನದ ಭಂಡಾರವು ಅವನಿಗೆ ಪ್ರಾಪ್ತಿಯಾಗುತ್ತದೆ. ಆಗ ಅವನು ಸಮಸ್ತ ಸ್ತೋತ್ರಗಳು, ಜಪಗಳು ಹಾಗೂ ಸ್ಮರಣೆಗಳನ್ನು ಪರಿಪೂರ್ಣಗೊಳಿಸಿಕೊಂಡಂತೆ, ಯಾಕೆಂದರೆ ಸಮಸ್ತ ಉಪಾಸನೆಗಳ ತಿರುಳು 'ಆರೀಫ್'ನ ಪ್ರಕಾರ ಇದಾಗಿದೆ.

ಹೇ ಆತ್ಮೀಯನೇ! ಏಕತ್ವದಿಂದ ಬಹುತ್ವದ ಪ್ರಕಟವಾಗಿದೆ. ಮೊದಲು ಬಹುತ್ವವು ಏಕತ್ವದಲ್ಲಿ ಸುಪ್ತವಾಗಿತ್ತು. ಈ ಏಕತ್ವವು ಬಹುತ್ವದಲ್ಲಿ ಸುಪ್ತವಾಗಿದೆ. ಯಾವ ಜನರು ಏಕತ್ವದ ಮದ್ಯಪಾತ್ರೆಯಿಂದ ಪ್ರಮತ್ತರಾಗಿರುವವರು ಮಾಡುವುದೇನೆಂದರೆ ಅವರೆಲ್ಲರೂ ಮೊಟ್ಟಮೊದಲು ಬಹುತ್ವವನ್ನು 'ಏಕತ್ವ'ದಲ್ಲಿ ಲೀನಗೊಳಿಸಿರುತ್ತಾರೆ ಹಾಗೂ ನೆನಪಿನ ರಾಶಿಯನ್ನು ನಾಶಗೊಳಿಸುತ್ತಾರೆ. ಯಾಕೆಂದರೆ ನೆನಪು ಸಹ 'ಸಹಭಾಗಿತ್ವ'ದಾಗಿದೆ. ಅರ್ಥಾತ್ ಅದು ದೇವ ಸ್ಮರಣೆ ಮಾಡುವವನು ಹಾಗೂ ಸ್ಮರಿಸಲ್ಪಡುವವನನ್ನು ಸೃಷ್ಟಿಸುತ್ತದೆ. ಹೀಗಾಗಿ ಆರೀಫ್‌ನು ಈ ಸ್ಥಾನದಲ್ಲಿ ಏಕತ್ವದ ಸ್ಮರಣೆಯ ವಿಚಾರವನ್ನು ಮನದಲ್ಲಿ ತಂದರೆ ಅಥವಾ ಅದರ ಕಡೆ ಅವನ ಗಮನ ಕೇಂದ್ರೀಕೃತವಾದರೆ, ಅವನು ವಾಸ್ತವಿಕವಾಗಿ ಪಾಪಿಯಾಗಿರುವನು.

ನನ್ನ ನೆನಪಿನಲ್ಲೂ ಇಲ್ಲ ನಾನು, ನನಗೆ ನಿನ್ನ ಮರೆವೂ ಇಲ್ಲ,
ಸೌಂದರ್ಯದಲ್ಲಿ ಮುಳುಗಿದ್ದೇನೆ. ಸಾಗರದ ಬಾಹುಬಂಧದಲ್ಲಿದ್ದೇನೆ.

ಅರಿವಾಗುವುದೇನೆಂದರೆ ಧಿಕ್ಕರಿಸಲ್ಪಟ್ಟ ವ್ಯಕ್ತಿಯೆಂದು ಬಹುಶಃ ಇದೇ ಅರ್ಥದಲ್ಲಿ ಹೇಳಲಾಗಿದೆ. ಅದೇನೆಂದರೆ ಯಾವನು ಸತ್ಯದ ಮಜಲುಗಳನ್ನು ದಾಟದೆಯೇ ಹಾಗೂ ದೈವೀಜ್ಞಾನದ ಅರ್ಹತೆಗಳನ್ನು ಪ್ರಾಪ್ತಿಸದೆ, ಸ್ಮರಣೆಯನ್ನು ತ್ಯಜಿಸಿದವನು, ನಿಸ್ಸಂದೇಹವಾಗಿ ಧಿಕ್ಕರಿಸಲ್ಪಟ್ಟವನಾಗಿದ್ದಾನೆ. ಧಿಕ್ಕರಿಸಲ್ಪಟ್ಟದು ಇದೇ ಸ್ಥಾನದ ಮಾತಾಗಿದೆ. ಇದು ಈಗಾಗಲೇ ಪ್ರಕಟವಾಗಿದೆ, ಆದುದರಿಂದ ಸ್ಪಷ್ಟೀಕರಣದ ಅವಶ್ಯಕತೆ ಇಲ್ಲ.

ಸ್ಮರಣೆ ನಿರತ ವ್ಯಕ್ತಿಯಾದನು ಬಹಿಷ್ಕೃತನು,
ಅವನು ಅದು ಇದುಗಳಿಂದ ಶ್ರೇಷ್ಠನಾದನು.

ಪ್ರೇಮ, ದಿವ್ಯಜ್ಞಾನದಿಂದ ಲೋಕವು ತುಂಬಿತು,
ಸಪ್ತಸಾಗರಗಳು ಮದಿರೆ ಪಾತ್ರೆಯಲಿ ಮುಳುಗಿದವು.

ಜೀವವನು ಸ್ನೇಹಿತನ ಮೇಲಿಂದ ನಿವಾಳಿಸಿದೆನು,
ಲೌಕಿಕ ಜ್ಞಾನವೆಲ್ಲವೂ ಸೋತು ಹೋಯಿತು.

ಅವನು 'ಏಕತ್ವ'ದ ಮದಿರೆಯಲಿ ಪ್ರಮತ್ತನಾದನು,
ಪ್ರತಿಯೊಂದು ಹಿಡಿತದಿಂದ ಮುಕ್ತನಾದನು ಅವನು.

ನೆನಪು – ಮರೆವಿನ ಸ್ಥಿತಿಯು ಇರಲಿಲ್ಲ ಆಗ,
ಅರಿವಿನ ಮೇಲ ಪರವಶತೆಯು ಜಾಗೃತವಾಗಿದೆ.

ಕೇವಲ ಅಸ್ತಿತ್ವದ ಆವೇಶ ಇರುವುದು ಆಗ,
ಅಸ್ತಿತ್ವವಿರುವ ಪ್ರಜ್ಞೆಯು ಇರುವುದು ಆಗ,

ಇಂತಹದರಲ್ಲಿ 'ಸ್ನೇಹಿತ'ನ ಸ್ಮರಣೆಯನು ಮಾಡುವುದು,
ತನ್ನನ್ನು ಇದು ಅನಾವಶ್ಯಕವಾಗಿ ಪಾಪಿಷ್ಠನನ್ನಾಗಿಸುವುದು.

'ಸ್ಮರಣೆ' ಏನು? 'ಸಹಭಾಗಿತ್ವ'ದ ಸಾಕ್ಷಾತ್ಕಾರವಾಗಿದೆ,
ಭಗ್ನಹೃದಯಿಯೇ! ಅವನಿಗೆ ಇವನಿಂದ ತೆರೆ ಇದೆ.

ಹೇ ಬಹರಿ, 'ಸಹಭಾಗಿತ್ವ'ಕ್ಕೆ ಆಶ್ರಯ ನೀಡಿದವನು,
ಅವನ ಹೃದಯದ ಬದುಕು ಆಗಿಹುದು ಪಾಪಮಯ.

ಆಭರಣ–೧೪೨

ಕನ್ನಡಿಯ ಮೂಲಕಾರ್ಯ

ಇದು ಅದೇ ನಿರ್ಮಲೀಕರಣವಾಗಿದೆ. ಯಾವುದು ಬಂಧನದ ಎಚ್ಚರಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಸಾಧಕನು (ಸಾಲಿಕ್) ತನ್ನ ಅಸಲಿನ ಅನ್ವೇಷಣೆಯಲ್ಲಿ ನಿರತನಾಗಿದ್ದಾನೆ ಹಾಗೂ ಅದು ಅವನಿಗೆ ಪ್ರಾಪ್ತಿಯಾಗಲಿ, ಇದರಿಂದ ಬಂಧಿತನನ್ನು ಸ್ವತಂತ್ರಗೊಳಿಸಲಿ. ಇದರ ವಿಧಾನವೆಂದರೆ ಕನ್ನಡಿಯನ್ನು ಮುಂದೆ ಇಟ್ಟುಕೊಂಡು ತನ್ನ ಚಹರೆಯನ್ನು ನೋಡುತ್ತಾ ಇರಲಿ.

ಹೇ ಸ್ನೇಹಿತನೇ! ನಿನ್ನಿಂದ ದೂರವಿಡಬೇಡ ಕನ್ನಡಿಯನು,
ಅಗೋಚರದ ಮುಖಚಹರೆಯು ಆಗುವುದು ಪ್ರಕಟ.

ಯಾವ ಹಂತದವರೆಗೆ ನೋಡುತ್ತಾ ಇರಬೇಕೆಂದರೆ ಕನ್ನಡಿಯು ಮುಂದೆ ಇಲ್ಲದೆ ಇದ್ದರೂ ಚಹರೆಯ ಪ್ರತಿಬಿಂಬವು ಕಾಣಿಸುತ್ತಿರಬೇಕು. ಅರ್ಥಾತ್ ಕನ್ನಡಿಯನ್ನು ಸರಿಸಲಾಗಿದೆ. ಆದರೆ ಸ್ವಲ್ಪ ಸಮಯದ ಬಳಿಕ ಕನ್ನಡಿ ಇಲ್ಲದೆಯೂ ತನ್ನ ಚಹರೆಯನ್ನು ವೀಕ್ಷಿಸುತ್ತಾನೆ. ನೋಡುಗನು ಸ್ಥಿರವಾಗಿ ಅದರಲ್ಲಿ ಕೇಂದ್ರಿತವಾದಾಗ, ಅವನು ಮಾಡುವುದೇನೆಂದರೆ ತನ್ನ ಚಹರೆಯನ್ನು ಸಹ ಆ ಕನ್ನಡಿಯಂತೆ ಮಧ್ಯದಿಂದ ಸರಿಸುತ್ತಾನೆ ಹಾಗೂ ಆ ನೋಡುಗನನ್ನು ನೋಡುತ್ತಿರುತ್ತಾನೆ. ಆ ನೋಡುವವನು ಅಂತರ್ದೃಷ್ಟಿಯ ಸಾಗರದಲ್ಲಿ ಮುಳುಗಿ ಎದ್ದಾಗ, ಕೇವಲ ಅಂತರ್ದೃಷ್ಟಿಯನ್ನು ಬಾಕಿ ಇಡುತ್ತಾನೆ. ಕೆಲವು ದಿನಗಳವರೆಗೆ ಈ ಮಹಾನ್ ಅಭ್ಯಾಸವನ್ನು ಸತತವಾಗಿ ಜಾರಿಯಲ್ಲಿಡುತ್ತಾನೆ. ಒಂದು ದಿನ ಅಂತರ್ದೃಷ್ಟಿಯನ್ನು ಪವಿತ್ರ ಅಸ್ತಿತ್ವದ ವಶಕ್ಕೆ ಅರ್ಪಿಸುತ್ತಾನೆ. ಇದು ಶಾಶ್ವತ ನೋಟವಾಗಿದ್ದು, ಅದರಲ್ಲಿ ತನ್ನನ್ನು ಅಳಿಸಿಹಾಕುತ್ತಾನೆ.

ಹೇ ಆತ್ಮೀಯನೇ! ಇದನು ತಿಳಿ, ಅಂತರ್ದೃಷ್ಟಿಯು ಉನ್ನತ ದೈವೀ ಲೋಕದ ಹೃದಯ ಹಾಗೂ ಹೀನಲೋಕದ ಜೀವವಾಗಿದೆ. ಇದು ಅಲ್ಲಾಹನ ವಿಶೇಷ ಭಂಡಾರವಾಗಿದೆಯಲ್ಲದೆ, ಸೀಮಾತೀತ ಸಾಗರವಾಗಿದೆ. ಸಮಸ್ತ ನಾಸೂತ್ ಲೋಕವು ಈ ಸೀಮಾತೀತ ಸಾಗರದ ಚಿಕ್ಕ ಅಲೆಯಾಗಿದೆ ಹಾಗೂ ಸಮಸ್ತ ಮಲಕೂತ್ ಲೋಕವು ಒಂದು ನಿರ್ಗುಳ್ಳೆಯ ಸಮಾನವಾಗಿದೆ ಹಾಗೂ ಎಲ್ಲರೂ ಇದೇ ಸಾಗರಕ್ಕೆ ಮರಳಿ ಬರುತ್ತಾರೆ.

ನಿನ್ನ ಸೌಂದರ್ಯವನು ನೀನು ನೋಡ ಬಯಸಿದರೆ,
ನೋಡು ನೀ ಕಲೆರಹಿತ ಚಂದಿರನನು.

ನಾನೇನು ನುಡಿದಿಹೆನು ಕ್ರಮದಲಿ ಈವರೆಗೆ
ನೀ ಎದುರಲಿ ಕನ್ನಡಿಯನ್ನು ಇಟ್ಟು ನೋಡು ಒಂದು ಸಲ.

ಆದರೆ ಆ ರಹಸ್ಯವನು ಪ್ರಕಟಿಸಬೇಡ ಎಲ್ಲರಿಗೆ,
ತೆರೆ-ಮರೆಯಲ್ಲಿರಲಿ ಎಲ್ಲಾ ದರ್ಪಣಗಳು.

ಯಾವನು ಸುಪ್ತವಾಗಿರಿಸಿಹನು ಅವನೇ ಆಗಿಹನು "ಆರೀಫ್",
ದೈವೀ ಕೋಶದ ಭಂಡಾರವಾಗಿದೆ ಅವನ ಎದೆಯು.

ಎಲ್ಲಿಯವರೆಗೆ ಈ ಆಟೋಟಗಳು ಹೇಳು ಹೇ 'ಬಹರಿ',
ಶುಕ್ರವಾರದ ದಿನದಂದು ಯುದ್ಧಮಾಡಿದಂತೆ.

ಆಭರಣ–೧೪೩

'ಅಪಾಯ'ಗಳ ವಿವರಣೆಯಲ್ಲಿ

ಕೇಳಿದನು ವ್ಯಕ್ತಿಯೊಬ್ಬನು ಒಂದು ಸಲ ಸಾಧಕನಿಗೆ,
ಮನದ ಸಂಬಂಧ ಇರುವುದೇ ಹೇಗೆ ಒಡೆಯನ ಜೊತೆ ಎಂದು.

ಅಪಾಯವು ಸುಶೀಲ, ಇದು ನಂತರ ದಿಶೆ ಬದಲಾಯಿಸುತ್ತದೆ,
'ಅನ್ಯ'ನ ಸ್ಮರಣೆಯಲ್ಲಿ ಮತ್ತೆ ಪಥಭ್ರಷ್ಟವಾಗುತ್ತದೆ.

ನನ್ನ ಪ್ರಯತ್ನದಿಂದ ಅದು ಬಾರದು ಮತ್ತೆ ಮರಳಿ,
ದೇವರ ಕೃಪೆಗಾಗಿ ಅದನ್ನು ನನಗೆ ಮರೆಯದೆ ಮರಳಿಸಿ.

ಎಲ್ಲಿಯವರೆಗೆ ನೀನು ದೃಢ ನಿಶ್ಚಯದವನಾಗಿರುವೆ,
ಹೃದಯ ಶೀಶೆಯಾದರೆ ಅಪಾಯ ಮದಿರೆಯಾಗಿದೆ.

ಎಲ್ಲಿಯ ತನಕ ನೀರಿನಲಿ ಅಡಗಿಹುದು ಗಾಳಿಯು,
ಆಗ ನೀರಿನ ಮೃತ್ಯುವು ಮೇಲೆಳುವುದು.

ಅಲೆಗಳ ಸಾಲಿನಲಿ ರಭಸವು ಸ್ಪಷ್ಟವಾಗಿ ಕಾಣುತಿಹದು,
ಆದರೆ ಇದರಿಂದ ಇಹುದು ನೀರು ತನ್ನ ರೂಪದಲಿ.

ಇನ್ನೊಂದು ದೃಷ್ಟಾಂತವನ್ನು ಕೇಳು ನೀನು ಇಲ್ಲಿಗೆ ಬಂದು,
ಅದು ಚೆನ್ನಾಗಿದ್ದರೆ ಅದಕ್ಕಿಂತಲೂ ಚೆನ್ನಾಗಿದೆ ಇದು.

ಪೀಠದಲಿ ವಿರಾಜಮಾನನು ಲೋಕದ ಬಾದಶಹಾನು,
ಮೋಡದ ರೂಪದಲಿ ದರ್ಶನನೀಯುವನು ಆ ಭಾಗ್ಯಶಾಲಿ.

ಬಲಭಾಗದಲ್ಲಿಹುದು ಅವನ ವೈಭವದ ಚರ್ಚೆಗಳು,
ಎಡಭಾಗದಲ್ಲಿಹುದ ಅವನ ಹರಿತವಾದ ಮೊನಚುಗಳು.

ಕೆಲವೊಮ್ಮೆ ಇಲ್ಲಿಹುದು ನೋಟ, ಮತ್ತೆ ಕೆಲವೊಮ್ಮೆ ಅಲ್ಲಿ,
ಅವನಿಗೆ ಕೇಳುವರ್‍ಯಾರು? ಯಾರಿಹನು ಆ ಬಾದಶಾಹ?

ಸ್ವಭಾವದಲಿ ಅವನು ವಾಸ್ತವಿಕ ಇಹನು ಬಾದಶಾಹ,
ಯಾವ ಕಡೆ ಬಯಸುವವನು, ಆ ಕಡೆ ತಿರುವುವನು ನೋಟ.

ಶಾಹಮಾನ್ಯರು ವಿರಾಜಮಾನರು ತಮ್ಮ ಸಿಂಹಾಸನದಲಿ,
ಸಂತೃಪ್ತನು ಹಾಗೂ ಆನಂದಿತನು ತನ್ನ ಭಾಗ್ಯದ ಕುರಿತು.

ಶಾಹ ಎಲ್ಲಿಯವರೆಗೆ ಇಹನು, ಸೈನ್ಯವು ಇರುವುದು ಬಾಕಿ,
ಸಮುದ್ರ ಇರುವವರೆಗೆ ಅಲೆಗಳ ಅಬ್ಬರ ಇರುವುದು ಬಾಕಿ.

ಎಲ್ಲಿಯವರೆಗೆ ಇಹುದು ಹೃದಯ? ಅಲ್ಲಿಯವರೆಗೆ ಇರುವುದು ಅಪಾಯ,
ಹೃದಯದಲಿ ಸ್ನೇಹಿತನಿರುವುದು, ಆವೇಶ ಬರುವುದು ಸಹಜ.

ನಿನಗೆ ಅಪಾಯ ಏಕಿಹುದು ದುಃಖ ಹೇ ಮಿತ್ರನೇ!
'ಬಹರಿ'ಯ ಸಾದೃಶ ಶಾಂತನಾಗಿರು, ಎಲ್ಲವನು ತೊರೆದು ನೀ.

ಆಭರಣ-೧೪೪

ಪ್ರಾರ್ಥನೆ (ನಮಾಜ್) ನಾನು-ನೀನು ಹಾಗೂ ಅದು-ಇದುಗಳಿಂದ ಪವಿತ್ರವಾಗಿದೆ.

ಒಬ್ಬ ವ್ಯಕ್ತಿಯು ಫಕೀರನನ್ನು ವಿಚಾರಿಸಿದನು, ಅದೇನೆಂದರೆ ಯಾರು ನಮಾಜನ್ನು ಮಾಡುತ್ತಾರೆ. ಅವರು ತಮಗಾಗಿ ಮಾಡುತ್ತಾರೆ ಅಥವಾ ದೇವರಿಗಾಗಿ? ನಾನು ನುಡಿದೆ ತನಗಾಗಿಯೂ ಅಲ್ಲ, ದೇವರಿಗಗಿಯೂ ಅಲ್ಲ. ಯಾಕೆಂದರೆ ನಮಾಜ್ ಒಂದು ರಹಸ್ಯವಾಗಿದ್ದು, ಅದು 'ಅಲ್ಲಾಹನಿಂದ ಅವನಿಗೋಸ್ಕರ'ದ ಸ್ನೇಹಿತನಾಗಿದ್ದು, ನಾನು ನೀನುಗಳಿಂದ ಹೊರತಾಗಿ, 'ಅದು-ಇದು'ಗಳಿಂದ ಪವಿತ್ರವಾಗಿದೆ. ಅಕಸ್ಮಾತ್ ಯಾವುದೇ ಸಂಬಂಧವು ಮಧ್ಯದಲ್ಲಿ ಇದ್ದರೆ ಅದು ನಮಾಜ್ ಆಗುವುದಿಲ್ಲ. ಬದಲಾಗಿ ಬೇರೆಯೇ ವಸ್ತುವಾಗುತ್ತದೆ. ಆದುದರಿಂದ ಸೂಫಿಗಳ ಕಿರೀಟರಾಗಿದ್ದ ಬೀಬೀ ರಾಬಿಯಾ ಬಸ್ರಿ ಒಂದು ಕೈಯಲ್ಲಿ ನೀರು ಹಾಗೂ ಇನ್ನೊಂದು ಕೈಯಲಿ ಬೆಂಕಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಗ ಒಬ್ಬ ಸ್ನೇಹಿತನು ನುಡಿದನು 'ಬೀಬೀ, ಬೆಂಕಿ ಹಾಗೂ ನೀರು ಒತ್ತೊಟ್ಟಿಗೆ ಒಯ್ಯುವುದು ಅಪವಿತ್ರವಾಗಿದೆ. ಎಲ್ಲಿಗೆ ತೆಗೆದುಕೊಂಡು ಹೋಗುತ್ತಿರುವೆ ಹಾಗೂ ಇದರ ಮರ್ಮವೇನು? ಆಗ ಅವರು ನುಡಿದರು 'ಜನರು ನರಕದ ಭಯದಿಂದ ಅಥವಾ ಸ್ವರ್ಗದ ಆಪೇಕ್ಷೆಯಿಂದ ನಮಾಜನ್ನು ಮಾಡುತ್ತಾರೆ. ನಾನು ಈ ನೀರನ್ನು ನರಕದ ಅಗ್ನಿಯನ್ನು ಆರಿಸಲು ಹಾಗೂ ಸ್ವರ್ಗವನ್ನು ಸುಡಲು ಅಗ್ನಿಯನ್ನು ಒಯ್ಯುತ್ತಿದ್ದೇನೆ. ಇದರಿಂದಾಗಿ ನಮಾಜ್ ಈ ಅನಿಷ್ಟಗಳಿಂದ ಮುಕ್ತವಾಗಲಿ.

ನಮಾಜ್ ಒಂದು ರಹಸ್ಯವಾಗಿದೆ, ವರ್ಣ-ವಾಸನೆಗಳಿಂದ ಮುಕ್ತವಾಗಿದೆ,
ಇದು ನೇರ ಮಾರ್ಗವಾಗಿದೆ, ಇದರಲಿ ಆಚರಣೆ, ನಾಮ, ಕರ್ಮವಿಲ್ಲ.

ನಮಾಜ್‌ನಲ್ಲಿ ಇಲ್ಲ ಜಾಗ್ರತೆ, ಇಲ್ಲ ಆತ್ಮ ಹೃದಯದ ಹಸ್ತಕ್ಷೇಪ,
ವ್ಯಕ್ತಿಯ ಜೀವತನದ ಗತಿಯಿಲ್ಲದಿದ್ದರೆ ಸುಖಭೋಗದ ಸ್ಥಳವೆಲ್ಲಿ?

ನಮಾಜಿನಲ್ಲಿ ನಾನು-ನೀನು ಇಲ್ಲ, ಇಲ್ಲ ಅದು-ಇದುವು,
ಇದು ಕೇವಲ ಅಲ್ಲಾಹನಿಗೆ, ಅಲ್ಲಾಹನಿಹನು ವಿಶೇಷ ಜ್ಯೋತಿಯು.

ನಮಾಜ್ ಏನಿದೆ, ಹೃದಯದ ಸಾಮಿಪ್ಯ ದೈವೀ ಪ್ರಕಾಶ,
ಅದು ಪವಿತ್ರ ಜ್ಯೋತಿಯಾಗಿದೆ, ಅರಿವಿನಿಂದ ಜಾಗೃತನಲಿ.

ನಮಾಜ್ ಏನಾಗಿದೆ, ನಿರ್ಮಲತೆಯ ನಿರ್ಮಲತೆಯು 'ಬಹರಿ'
ಯಾವ ಹೃದಯಕ್ಕೆ ಇದು ಪ್ರಾಪ್ತವಾಗಿದೆಯೋ ಅದಾಗಿದೆ ದರ್ಗಾದ ಬಾಗಿಲು.

ಆಭರಣ-೧೪೫

"ಏಕಾಂತವಾಸ'ವು ಯಾರಿಗೆ ಸೂಕ್ತವಾಗಿದೆ.

ಏಕಾಂತವಾಸವು ಪ್ರತಿ ವ್ಯಕ್ತಿಗೆ ಶೋಭಾಯಮಾನವಲ್ಲ. ಹಾಂ! ಯಾರಿಗೆ ನೀಳಕೂದಲು ಬಿಡುವ ಅಭಿಲಾಷೆಯಿದೆಯೋ ಅಥವಾ ಇಂಥ ಸ್ವತಂತ್ರ ಮನೋಭಾವದವನಿಗೆ ಯಾವನ ತುಟಿಗಳಿಗೆ ಸತ್ಯದ ಮದಿರೆಯ ತೇವವು ತಲುಪಿದೆಯೋ ಇವರೊಬ್ಬರ ಹೊರತು ಅನ್ಯರಿಗೆ ಏಕಾಂತವಾಸವು ಮರಳುತನ ಹಾಗೂ ಬುದ್ಧಿಭ್ರಮಣದ ಪ್ರತೀಕವಾಗಿದೆ.

ಎಲ್ಲರಲಿ ಎಲ್ಲಿಹುದು ಏಕಾಂತವಾಸದ ಪ್ರತಿಬಿಂಬ,
ಇದರಿಂದ ಶಿಕ್ಷೆಯಲಿ ಇಹರು ಇಬ್ಬರು ಮಾತ್ರ.

ಒಬ್ಬನು ಪ್ರೇಮ ವ್ಯಾಮೋಹಿಯಾದ ಹುಚ್ಚನು,
'ಅಯ್ಯಾಜ್'ನ ಸದೃಶ ಕಗ್ಗಂಟಾದ ಕೇಶರಾಯವನು.

ಎರಡನೇ ಪ್ರೇಮಿಯು ಆಗಿಹನು ಸತ್ಯದ ಅರಿವುಳ್ಳವನು,
ಆದರೆ ಸತ್ಯಪ್ರೇಮಿಯಿಂದ ಆಗಿಹನವನು ಭಗ್ನ ಹೃದಯಿಯು.

ಇವರ ಹೊರತು ಎಲ್ಲರಿಗೂ ಉಂಟು ಅಪರಿಚಿತತೆ,
ಎಲ್ಲರಿಗೆ ಇರುವುದು ಮರಳುತನ ಹಾಗೂ ಹುಚ್ಚುತನ.

'ಬಹರಿ' ನಿನಗೆ ಸೂಕ್ತವಾಗಿದೆ ಏಕಾಂತವಾಸ,
ಯಾಕೆಂದರೆ ಪ್ರೇಮವು ನಿನ್ನ ದೈವೀಲಿಖಿತವಾಗಿದೆ.

ಆಭರಣ–೧೪೬

'ದೈವೀಜ್ಞಾನವು' ಯಾವ ರೀತಿಯಿಂದ ಅರ್ಥವಾಗುತ್ತದೆ.

ಒಬ್ಬ ಸರಳ ಹೃದಯಿ ಸಾಧಕನು (ಸಾಲಿಕ್) ನಿಶ್ಚಯಿಸಿದರೆ ದೈವೀಜ್ಞಾನ ಯಾವುದು ಪ್ರವಾದಿ ಮಹ್ಮದ (ಸ.ಅ) ರವರ ಸತ್ಯತೆಯಾಗಿದೆ ಹಾಗೂ ಬ್ರಹ್ಮಾಂಡದ ಸಮಸ್ತ ಆತ್ಮಗಳ ಮೂಲಸೆಲೆಯಾಗಿವೆ ಎಂದು ತಿಳಿಯಬೇಕು. ಅದರ ವಿಶಿಷ್ಟತೆಗಳನ್ನು ಅನಿವಾರ್ಯವಾಗಿ ಬುದ್ಧಿಯ ವ್ಯಾಪ್ತಿಯಲ್ಲಿ ತರಬೇಕಾಗುತ್ತದೆ. ಇದಕ್ಕೆ ಪ್ರಮುಖ ನಿಬಂಧನೆಯೆಂದರೆ ಅಲ್ಲಾಹನ ಹೊರತಾಗಿ ಬೇರೆ ಸಮಸ್ತದ ಕಡೆ ಮುಖ ತಿರುವಿಕೊಳ್ಳಬೇಕು. ಮತ್ತೆ ದುರಾಶೆ ಹಾಗೂ ಲೋಭದಿಂದ ಸಂಬಂಧವನ್ನು ಕಡಿತಗೊಳ್ಳಬೇಕು. ಮತ್ತು ಅಲ್ಲಾಹನ ಪವಿತ್ರ ನಾಮಗಳು ಯಾವವು ಪ್ರತಿಯೊಂದು ಅಣು–ಕಣ ರತ್ನದ ತಲೆಯ ಕಿರೀಟವಾಗಿದೆ ಹಾಗೂ ಸಮಸ್ತ ದೈವೀನಾಮಗಳ ಸಾರವಾಗಿದೆ. ಅದನ್ನು ಸದಾ ಹೃದಯದಲ್ಲಿ ಸ್ಥಿರವಾಗಿ ಸ್ಥಾಪಿಸಿಕೊಳ್ಳಬೇಕು ಹಾಗೂ ತನ್ನ ಪ್ರತಿಯೊಂದು ರೋಮದಲ್ಲೂ ಇದೇ ನಾಮ ವಿಶೇಷದ ಸಾಕ್ಷಾತ್ಕಾರವನ್ನು ನೋಡುವುದಾದರೆ ಪರಮ ದೈವನು ತನ್ನ 'ಏಕತ್ವ'ದ ವೈಭವದಿಂದ ಹಾಗೂ ಮಹೋನ್ನತೆಯಿಂದ ಅವನನ್ನು ಸದಾಚಾರಿಗಳ ಗುಂಪಿನಲ್ಲಿ ಸೇರಿಸಲಾಗುತ್ತದೆ.

ದೇವನಾಮವು ಹಾಗೂ ಪ್ರವಾದಿ ರಸೂಲ್ ಅಲ್ಲಾಹರು,
ನನ್ನ ಮನದಲ್ಲಿ ಮಾಡಿಕೊಂಡಿಹರು ದಾರಿಯನು.

ಯಾರಿಗೆ ದುರುದ್‌ನ ಗುಲಾಬಿಯು ಪ್ರಾಪ್ತವಾಗಿದೆ,
ಎರಡು ಲೋಕಗಳಲ್ಲಿ ಅವನ ಶಿರವೂ ಕಿರೀಟಪ್ರಾಯವಾಗಿದೆ.

ಆಭರಣ–೧೪೭

ಮೃತ್ಯುವಿನ ಕುರಿತಾಗಿ

ಜನರು ಮೃತ್ಯುವಿನಿಂದ ಓಡುತ್ತಾರೆ. ನನಗೆ ಕೇಳುವದಾದರೆ ಮೃತ್ಯುವು ಬದುಕಿಗಿಂತಲೂ ಉತ್ತಮವಾಗಿದೆ ಎಂದು ನುಡಿಯುವೆ. ಯಾಕೆಂದರೆ ಬದುಕು ವಿನೋದದ ಕಡೆ ಸೆಳೆಯುತ್ತದೆ. ಆದರೆ ಮೃತ್ಯುವು ಸಂಬಂಧಗಳನ್ನು ಪತನಗೊಳಿಸಿ

ಸ್ನೇಹಿತನ ಭೇಟಿಯ ಸೂಕ್ತತೆಯನ್ನು ದಯಪಾಲಿಸುತ್ತದೆ. ನಿಸ್ಸಂದೇಹವಾಗಿ ಮೃತ್ಯುವಿನ ಹೊರತು ಸಂಬಂಧಗಳ ನಕಾರಾತ್ಮಗೊಳಿಸುವ ಸಾಹಸ ಬೇರೆ ಯಾವುದರಲ್ಲಿದೆ? ಸಂಬಂಧಗಳ ಕಡಿತದ ಹೊರತು 'ಏಕತ್ವ'ದ ಮಹೋನ್ನತೆಯು ಎಂದಿಗೂ ಪ್ರಾಪ್ತಿಯಾಗುವುದಿಲ್ಲ.

ಹೇ ಆತ್ಮೀಯನೆ, ಸಾವು, ಎರಡು ಸ್ನೇಹಿತರ ಮಧ್ಯೆ ಸೇತುವೆಯಾಗಿದೆ. ಇದು ಇರದೇ ಇದ್ದರೆ, ಒಬ್ಬ ಸ್ನೇಹಿತನು ಮತ್ತೊಬ್ಬ ಸ್ನೇಹಿತನನ್ನು ಮಹಾಪ್ರಳಯದವರೆಗೆ ಭೇಟಿಯಾಗುವ ಸಾಧ್ಯತೆಗಳಿರಲಿಲ್ಲ. ಆದುದರಿಂದ ಇವರಿಬ್ಬರ ಮಧ್ಯೆ ನಾಸೂತ್‌ನ (ನರಲೋಕ) ಆಳವಾದ ಸಾಗರವು ಅಡ್ಡಿಯಾಗಿದೆ. ಯಾವನಾದರೂ ತನ್ನ ಬಾಹುಬಲದಿಂದ ಈಜಾಡಿ ಈ ತೀರದಿಂದ ಆ ತೀರದವರೆಗೆ ಎಲ್ಲಿ ಸತ್ಯವು ನೆಲೆಸಿಹುದು, ಅಲ್ಲಿ ತಲುಪಿದರೆ, ಸೇತುವೆಯ ಮಧ್ಯಸ್ಥಿಕೆಯು ಇಲ್ಲದೆಯ ಸಾಧ್ಯವಿದೆ. ಆದುದರಿಂದ ಪ್ರವಾದಿ ಹಜ್ರತ್ ಮಹ್ಮದರು ಆಜ್ಞಾಪಿಸಿದರು. ಅದೇನೆಂದರೆ "ಮೃತ್ಯುವಿಗೆ ಮುಂಚೆ ಮರಣ ಹೊಂದಿ" ಅರ್ಥಾತ್ ಸಾವಿನಿಂದಾಗಿ ಏನೆಲ್ಲವನ್ನು ತೊರೆಯಬೇಕು ಅದನ್ನು ತೊರೆದು ಬಿಡಿ, ಸಂಬಂಧಗಳ ಕಡಿತವು ಇದೇ ಆಗಿದೆ. ಮೃತ್ಯುವು ಐಚ್ಛಿಕವಾಗಿಯೂ ಇದ್ದು, ಅದು ಅಸಹಾಯಕತೆಯ ವಿರುದ್ಧವೂ ಆಗಿದೆ. ಸಾವು ಎಷ್ಟು ವಿಚಿತ್ರವಾಗಿ ಸಂಭವಿಸುತ್ತದೆ ಎಂದರೆ ನನ್ನ ಚಿಕ್ಕಪ್ಪನವರೂ ಹಾಗೂ ಮಾವನವರೂ ಆಗಿದ್ದ ಸಫೀರ್ ಅಲ್ಲಾಹ* ತಮ್ಮ ಜಾಗೀರನ್ನು ನೋಡಲು ಹೋಗಿದ್ದರು, ಅಲ್ಲಿಂದಲೇ ತಮ್ಮ ಶಾಶ್ವತ ಜಾಗೀರಿಗೆ (ಪರಲೋಕ ಪ್ರಯಾಣ) ಸ್ಥಳಾಂತರಗೊಂಡರು. ಮಳೆಗಾಲದ ದಿನಗಳಿದ್ದವು. ಅತೀವ ಪ್ರಯಾಸದಿಂದ ಅವರ ಶವವನ್ನು ಗೋಗಿಗೆ ಹಜ್ರತ್ ಚಂದಾ ಹುಸೇನಿ ಅವರ ಸ್ವರ್ಗಸಮಾನವಾದ ದರ್ಗಾ ಪರಿಸರದಲ್ಲಿ ತರಲಾಯಿತು. ತುಂಬಾ ರಾತ್ರಿಯಾಗಿತ್ತು.

ಬೆಳಗಾದಂತೆ ಅವರ ಶವಸಂಸ್ಕಾರವನ್ನು ಮಾಡಲಾಯಿತು. ಇದರಿಂದ ಪ್ರಭಾವಿತನಾಗಿ ಅದೇ ರಾತ್ರಿ ನಾನು ನನ್ನ ಅಪ್ರಯೋಜಕ ಮನಸ್ಸಿನಿಂದ ಸಾವಿನ ಅರ್ಥದ ಹುಡುಕಾಟದಲ್ಲಿ ನಿರತನಾದೆ. ಸಾವು-ಬದುಕನ್ನು ಸರಿಯಾಗಿ ಅರ್ಥೈಸಿಕೊಂಡವರೇ! ಸಾವಿಗೀಡಾಗುತ್ತಾರೆ. ಆದರೆ ಯಾವ ರೀತಿಯಿಂದ ಹಾಗೂ ಅವರ ಸ್ಥಿತಿಯು (ದುಸ್ಥಿತಿಯು) ಏನಾಗುತ್ತದೆ? ಗ್ರಂಥದಿಂದ ಅಲ್ಲ, ಅಗೋಚರ ಜ್ಞಾನದಿಂದ ಇದನ್ನು ಸ್ಪಷ್ಟೀಕರಿಸು. ಆಗ ನುಡಿಯಲಾಯಿತು. ಒಂದೆಂದರೆ ಜಾಗೃತನಾಗಿದ್ದವನೆ, ನಿದ್ರಾವಸ್ಥೆಗೆ ತಲುಪಿದನು. ಎರಡನೆಯದು ಮಲಗಿದ್ದನು,

---

* ಮೀರ್ ಸಫೀರ್ ಅಲ್ಲಾಹ: ಖಾಜಿ ಬಹರುದ್ದೀನ್ ಅವರ ತಮ್ಮರಾಗಿದ್ದರೆ ಗೋಗಿಯಲ್ಲಿ ವಾಸಿಸುತ್ತಿದ್ದರು. ಅತೀವ ಬಡತನದ ಬದುಕನ್ನು ಸವೆಸುತ್ತಿದ್ದರು. ಆ ಕಾಲ ಬಾದಶಹಾನು ಇವರಿಗೆ ಪಕ್ಕದ ಗ್ರಾಮದಲ್ಲಿ ಜಾಗೀರ ದಯಪಾಲಿಸಿದ್ದನು.

ಆಕಸ್ಮಿಕವಾಗಿ ಜಾಗೃತನಾದನು. ಮೂರನೆಯದು ಮಲಗಿಯೂ ಇರಲಿಲ್ಲ. ಜಾಗೃತನಾಗೂ ಇರಲಿಲ್ಲ. ಯಾವ ರೀತಿ ಇಲ್ಲಿದ್ದನೋ ಅದೇ ರೀತಿಯಲ್ಲಿ ಅಲ್ಲಿ ಇರುವನು, ಇದೇ ಭೂಮ್ಯಾಕಾಶಗಳ ಜೊತೆಗೆ. ಹೇ, ಆತ್ಮೀಯನೇ! ಮೊದಲ ವರ್ಗದ ಸಾವು ಜನಸಾಮಾನ್ಯರಿಗೆ ಸಂಬಂಧಿಸಿದ್ದು, ಎರಡನೆಯದು ವಿಶೇಷ ವ್ಯಕ್ತಿಗಳಿಗೆ ಸಂಬಂದಿಸಿದ್ದು, ಮೂರನೆಯದು ಅತಿ ವಿಶೇಷದಂತವರಿಗೆ ಸಂಬಂಧಿಸಿದ್ದು. ಸಾವು ಈ ಅತಿ ವಿಶೇಷರ ಹೊರತಾಗಿ ಯಾರಿಂದಲೂ ದೂಷಿತವಲ್ಲ. ಆದುದರಿಂದ ದೇವರು ದಯೆ ಕೃಪೆಗಳಿಂದ ಎಲ್ಲರಿಗೂ ಅದನ್ನು ದಯಪಾಲಿಸಲಿ!

ಮೃತ್ಯು ಏನಿಹುದು, ದೈವೀಕೃಪೆಯ ಶಾಶ್ವತ ದಯೆಯು,
ವಾಸ್ತವದಲಿ ಅನಾದಿ ಜೀವದಿಂದ ನಿರ್ಗಮಿಕನು.

ಮೃತ್ಯುವೇ ಸಮಸ್ತ ಸಂಬಂಧಗಳನ್ನು ಅಳಿಸಿಹಾಕುತ್ತದೆ,
ಮೃತ್ಯುವಿನಿಂದ ಸತ್ಯದ ಭೇಟಿಯ ಮಾರ್ಗವು ತೋರುತ್ತೆ.

ಮೃತ್ಯುವೇ ಅಗ್ನಿಯನ್ನು ತೋಟವನ್ನಾಗಿಸುತ್ತದೆ,
ಬೂದಿಯನು ಪವಿತ್ರಗೊಳಿಸುತ್ತದೆ. ಈ ಚಿರಸತ್ಯ ಮೃತ್ಯುವು.

ಮುಳ್ಳಿನ ತರಹ ಎಲ್ಲಿಯವರೆಗೆ ಉರಿಯಲಾರೆ ಹೇ ಹೃದಯವೇ,
ದೇಹ ದ್ರಾಕ್ಷಿಯಾದರೆ, ಅದರ ರಸವಾಗಿ ಬೇಗ ಹೊರಹೊಮ್ಮು.

ಇಂತಹ ಲೋಕದಲಿ ನಿನ್ನನ್ನು ಒಯ್ಯುವುದು ಈ ಸಾವು ನಿನ್ನನ್ನು,
ಎಲ್ಲಿ 'ಬಹರಿ' ಇಹನು, ಅದೇ ಭೂಮಿ-ಆಕಾಶ, ಸಂಜೆ-ಬೆಳಗು.

ಆಭರಣ-೧೪೪

ಮ್ವಾರಿಫತ್ (ಸೂಫಿ ದೈವೀಜ್ಞಾನ)ನ ಅಶ್ವರೋಹಿಯ ಐದು ಆಯುಧಗಳು

ಸೈನಿಕನಾದವನು, ಪ್ರತಿ ಸ್ಥಿತಿಯಲ್ಲೂ ಅವನು ಪ್ರಯಾಣದಲ್ಲಿರಲಿ, ಲಾಭ-ನಷ್ಟದ ವ್ಯವಹಾರದಲ್ಲಿರಲಿ, ಐದು ಆಯುಧಗಳು ಸದಾ ಅವನ ಜತೆಯಲ್ಲಿ ಇರಬೇಕು.

ಪ್ರತಿ ಸೈನಿಕನಿಗೆ ಅವಶ್ಯಕವು, ಪ್ರತಿಕ್ಷಣವು ಆಯುಧಗಳು,
ಅವು ಇರುವವು ಐದು-ಢಾಲು, ಈಟಿ, ಬಾಣ, ಕೊಡಲಿ, ಕಠಾರಿ.

ಅವನು ಯಾವುದೇ ಪರಿಸ್ಥಿತಿಯಲ್ಲಿ ಇವುಗಳನ್ನು ತನ್ನಿಂದ ಬೇರ್ಪಡಿಸುವುದಿಲ್ಲ

ಎಲ್ಲಿಯವರೆಗೆಂದರೆ ಬಹಿರ್ದೆಸೆಗೆ ಹೋಗಬೇಕಾದರೂ ಇವುಗಳನ್ನು ತನ್ನಿಂದ ಬೇರ್ಪಡಿಸುವುದಿಲ್ಲ. ಆದರೆ ಇಲ್ಲಿ ಸ್ನೇಹಿತನ ಹೊರತಾಗಿ ಶತ್ರುವಿನ ಗಂಡಾಂತರ ಇರುವುದಿಲ್ಲ. ಆದರೆ ಸದಾ ಅವನ ಬಗಲಲ್ಲಿ ಚೂರಿ ಇರುತ್ತದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಅವುಗಳನ್ನು ತ್ಯಜಿಸುವ ಅಭ್ಯಾಸವೇ ಇರುವುದಿಲ್ಲ. ಯಾಕೆಂದರೆ ಈ ಅಭ್ಯಾಸ ತಪ್ಪಿದರೆ, ಹಲವು ಜನರು ತಮ್ಮ ಆಯುಧಗಳನ್ನು ಕಳೆದುಕೊಂಡಿದ್ದಾರೆ. ಹೀಗಾಗಿ ಇವರು ಸದಾ ತಮ್ಮ ಜೊತೆಯೇ ಇರಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಇಟ್ಟುಕೊಂಡು, ಇನ್ನೂ ಕೆಲವೊಮ್ಮೆ ಇಟ್ಟುಕೊಳ್ಳದೇ ಇದ್ದರೆ, ಅದನ್ನು ಕುಳಿತಲ್ಲಿಯೇ ಬಿಟ್ಟು ಮರೆತುಬಿಡುತ್ತಾರೆ. ಯಾಕೆಂದರೆ ಸದಾ ಜೊತೆಯಲ್ಲಿ ಇಡುವ ಅಭ್ಯಾಸವಿರುವುದಿಲ್ಲ. ಆ ಅಭ್ಯಾಸವಿರುತ್ತಿದ್ದರೆ ಮರೆಯುತ್ತಿರಲಿಲ್ಲ. ಎರಡನೆಯದು ಯಾವುದೇ ದುರದೃಷ್ಟಕರ ಘಟನೆ ಹೇಳಿಕೇಳಿ ಬರುವುದಿಲ್ಲ. ಮತ್ತೇ ಅದಕ್ಕೆ ಯಾವುದೇ ನಿರ್ಧಾರಿತ ಕಾಲವಿರುವುದಿಲ್ಲ. ಯಾರಿಗೆ ಗೊತ್ತು! ಶತ್ರು ಭೂಮಿಯ ಕೆಳಗಿನಿಂದ ಹುಲ್ಲಿನ ತರಹ ಹೊರಬರಬಹುದು. ಅಥವಾ ಆಕಾಶದಿಂದ ಮಳೆ ಹನಿಯಂತೆ ಉದುರಬಹುದು. ಇಂಥ ಸ್ಥಿತಿಯಲ್ಲಿ ಏನಾಗಬಹುದು? ತಿಂಗಳುಗಳು ವರ್ಷಗಳು ಈ ಆಯುಧಗಳನ್ನು ಈ ಕಾರಣಕ್ಕಾಗಿ ಹೊತ್ತುಕೊಂಡು ತಿರುಗಬೇಕಾಗುತ್ತದೆ, ಅದು ಇಂತಹ ಅನಿರೀಕ್ಷಿತ ಸಮಯದಲ್ಲಿ ಉಪಯೋಗಕ್ಕೆ ಬರಲೆಂದು ಇದೇ ರೀತಿಯಾಗಿ ಮ್ವಾರಿಫತ್‌ನ ಅಶ್ವರೋಹಿಗೂ ಈ ಐದು ಆಯುಧಗಳ ಅನಿವಾರ್ಯವಾಗಿವೆ. ಮೊದಲನೆಯದು ಸ್ನೇಹಿತನ ಸಮ್ಮುಖ ಉಪಸ್ಥಿತಿ ಹಾಗೂ ವಿಧೇಯತೆ, ಎರಡನೆಯದು ಮಿತ ಸ್ವಾತಂತ್ರ್ಯ, ಮೂರನೆಯದು ನೇರ ಸಂಭಾಷಣೆ, ನಾಲ್ಕನೇಯದು ಸತ್ಸಂಕಲ್ಪ, ಐದನೆಯದು ದೈವದತ್ತ ಪರಿಸ್ಥಿತಿಗಳು. ತನಗೆ ಅನುಕೂಲಕರ ಅಥವಾ ಅನಾನುಕೂಲಕರವಾದರೂ ಇವುಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಇರುವುದು ಈ ಐದೂ ಆಯುಧಗಳನ್ನು ವೈಭೋಗದಲ್ಲಿಯಾಗಲಿ, ಸಂಕಷ್ಟದಲ್ಲಾಗಲಿ ತಮ್ಮ ಜತೆಗಾರನನ್ನಾಗಿ ಮಾಡಿಕೊಳ್ಳಿ, ಯಾಕೆಂದರೆ ಮೃತ್ಯುವಿನ ಸಮಯದಲ್ಲಿ ಯಾವುದರ ಆಗಮನದ ಸಮಯವು ಅನಿಶ್ಚಿತವಾಗಿದೆ. ಅದು ಆಕಸ್ಮಿಕ ಬಂದು ಎದುರುಗೊಳ್ಳಬಹುದು ಹಾಗೂ ಮೃತ್ಯುವಿನ ನಂತರ ಇವು ಉಪಯೋಗಕ್ಕೆ ಬರಬಹುದು.

ಪ್ರವಾದಿಗಳ ಪವಿತ್ರ ವಚನಾಮೃತಗಳಲ್ಲಿ (ಹದೀಸ್‌ನಲ್ಲಿ) ಹೇಳಲಾಗಿದೆ. ಮನುಷ್ಯನು ಯಾವ ಸ್ಥಿತಿಯಲ್ಲಿ ಬದುಕುತ್ತಾನೋ, ಅದೇ ಸ್ಥಿತಿಯಲಿ ಮರಣ ಹೊಂದುತ್ತಾನೆ. ಮತ್ತೆ ಅದೇ ಸ್ಥಿತಿಯಲ್ಲಿ ಎದ್ದೇಳುತ್ತಾನೆ. ಆದುದರಿಂದ ದರ್ವೇಷನು ಸದಾ ಸಿದ್ಧನಾಗಿದ್ದು, ಪ್ರತಿಹೆಜ್ಜೆಯಲ್ಲೂ ಜಾಗೃತನಾಗಿರಬೇಕು. ಸಂಪೂರ್ಣ ಜೀವನವನ್ನು ಅಜಾಗರೂಕತೆಯಲಿ ಕಳೆದು, ಸಾವಿನ ಸಮಯದಲ್ಲಿ ಜಾಗೃತನಾದರೆ, ಈ ಜಾಗೃತಾವಸ್ಥೆ ಯಾವ ಕೆಲಸದ್ದು? ಜನರು ಮೃತ್ಯು ಸನಿಹವಾದ ಸಮಯದಲ್ಲಿ 'ಕಲೇಮಾ ತಯ್ಯಬ್'ನನ್ನು ಅವನಿಂದ

ಉಚ್ಚರಿಸುತ್ತಾರೆ. ಸಾಯುವವನು ಅವನು ಚೆನ್ನಾಗಿ ಉಚ್ಚರಿಸಿದರೆ ಅವನ ಅಂತ್ಯವು ಒಳ್ಳೆ ರೀತಿಯಿಂದ ಆಯಿತೆಂದು ಭಾವಿಸುತ್ತಾರೆ. ಇದರಲ್ಲಿ ಆಶ್ಚರ್ಯವಿಲ್ಲ, 'ಕಲೇಮಾ ತಯ್ಯಬಾ'ಂದ ಕೃಪೆಯಿಂದ ಅವನ ಅಂತ್ಯವು ಉತ್ತಮ ರೀತಿಯಿಂದಲೇ ಆಗಿರಬೇಕು. ಆದರೆ ಜನರಿಗೆ ಇದು ಗೊತ್ತಿಲ್ಲ, ಅದೇನೆಂದರೆ ಈ ರೀತಿ ನೆನಪು ಹಾಗೂ ನೆನಪಿಸುವುದು ಎರಡೂ ಪ್ರಯೋಜನಕಾರಿಯೂ, ಫಲಪ್ರದವೂ ಅಲ್ಲ, ಯಾಕೆಂದರೆ ಯಾವುದೇ ಕಾರ್ಯವು ಆಫೀಮಿನಂತೆ ಗೀಳಾಗುವುದಿಲ್ಲವೋ ಅದೇ ಹೇಗೆ ಅವನ ಜತೆ ಹೋಗುವುದು, ಹಾಗೂ ಯಾವ ರೀತಿಯಿಂದ ಅದು ಉಪಯುಕ್ತ ಪರಿಣಾಮವನ್ನು ಉಂಟುಮಾಡಬಹುದಾಗಿದೆ.

ಸೈನಿಕನು ಅಕಸ್ಮಾತ್ತಾಗಿ ನಡೆದರೆ ತನ್ನ "ಅವಶ್ಯಕತೆ"ಗೆ
ಆದರೂ ಕೈಯಲ್ಲಿ ಇರಿಸಿಕೊಳ್ಳುವನು ಖಡ್ಗವನು.

ಸಮಯ ಬಂದರೆ ಅದರ ಉಪಯೋಗವಾಗಲೆಂದು,
ಈ ರೀತಿಯಾಗಿ 'ಪ್ರೇಮದಲಿ ನಿರತ 'ಆರೀಫ್'ರು.

ಗುಪ್ತವಾಗಿರಿಸುತ್ತಾರೆ ಹೃದಯದಲಿ 'ಸ್ನೇಹಿತನ' ನೆನಪು,
ಅದನು ಯಾವಾಗಲೂ ಉನ್ನತದಲ್ಲಿರಲಿ ಅಥವಾ ನಿಕೃಷ್ಟದಲ್ಲಿರಲಿ.

ನಿನಗೆ ಸ್ನೇಹಿತರ ನೆನಪು ಇರದಿದ್ದರೆ ಪರವೆ ಇಲ್ಲ 'ಬಹರಿ',
ಆದರೆ 'ಪರಮ ಸ್ನೇಹಿತ'ನ ಸ್ನೇಹಿತರ ನೆನಪಿನಲಿ ತಲ್ಲೀನನಿರು.

ಆಭರಣ–೧೪೯

ಮೃತ್ಯು ಅಗೋಚರ ಲೋಕದ ಪ್ರಥಮ ದ್ವಾರವಾಗಿದೆ

ನನ್ನ ಪೀರ್–ಮುರ್ಷದ್ ಹಜ್ರತ್‌ರು ನುಡಿಯುತ್ತಿದ್ದರು. ಮೃತ್ಯು ಅಗೋಚರ ಲೋಕದಲ್ಲಿ ಪ್ರವೇಶಿಸುವ ಮೊದಲ ದ್ವಾರವಾಗಿದೆ. ಇದರ ಹೊರತಾಗಿಯೂ ಹಲವಾರು ದ್ವಾರಗಳಿವೆ. ಆದರೆ ಮೊದಲ ದ್ವಾರವೇ ಅತಿ ಕಠಿಣವಾಗಿದೆ. ಇಲ್ಲಿಯೇ ತಪಾಸಣೆ ಹಾಗೂ ಶೋಧನೆಯಾಗುತ್ತದೆ. ಯಾವ ರೀತಿ ಲೌಕಿಕ ಬಾದಶಹಾನ ಮಹಲಿನಲ್ಲಿ ಯಾವನೊಬ್ಬನು ಮೊದಲ ಬಾಗಿಲಿನಿಂದ ಅದ್ಹೇಗೊ ಪಾರಾಗಿ ಒಳಹೊಕ್ಕರೆ, ಒಳಗಿನ ಬಾಗಿಲುಗಳನ್ನು ದಾಟುವುದರಲ್ಲಿ ಯಾವುದೇ ತೊಂದರೆ ಅಥವಾ ಸಂಕಷ್ಟ ಎದುರಾಗುವುದಿಲ್ಲ. ಉಳಿದೆಲ್ಲಾ ವ್ಯವಹಾರಗಳು ಯಾವುದೇ ಸಂಕಷ್ಟವಿಲ್ಲದೆ ಸುಕ್ಷೇಮವಾಗಿ ಜರಗುತ್ತವೆ.

ಮೃತ್ಯುವಾಗಿದೆ ಅಗೋಚರ ಲೋಕದ ಪ್ರಥಮ ದ್ವಾರವು,
ಇರುವುದೇ ಇಲ್ಲೆ ಸಂಕಷ್ಟಗಳು, ತದನಂತರವು ಎಲ್ಲವೂ ಸರಳವು.

ಪ್ರವೇಶ ದ್ವಾರದಿಂದ ಸರಳವಾಗಿ ಪ್ರವೇಶ ದೊರೆತರೆ ಮಾತ್ರ,
ಮುಂದಿನ ದ್ವಾರದಲ್ಲಿ ಇರುವುದಿಲ್ಲ ಯಾವುದೇ ಸಂಕಷ್ಟಗಳು ನಿಶ್ಚಿತ.

ಆಭರಣ–೧೫೦

ಮೃತ್ಯುವಿನ ಬಗ್ಗೆ ಸಮಯದ ಮೊದಲು ಅದರ ಅರಿವು

ಒಬ್ಬ ಹೃದಯವಂತರು ಈ ಹೃದಯವಿಹೀನನನ್ನು ವಿಚಾರಿಸಿದರು, ಅದೇನೆಂದರೆ, ಹೇ ದರರ್ವೇಶ್, ವಿಷಯವೇನೆಂದರೆ ಆಯುಷ್ಯವು ಎರಡು ದಿನ, ಎರಡು ತಿಂಗಳು ಅಥವಾ ಎರಡು ವರ್ಷ ಉಳಿಯಿತೆಂದು, ಯಾವ ರೀತಿಯಿಂದ ತಿಳಿಯಬಹುದು. ನಾನು ನುಡಿದೆ, ಯಾವಾಗ ದೇವರ ಅಸ್ತಿತ್ವ ಹಾಗೂ ಅರ್ಹತೆಗಳ ರಹಸ್ಯವನ್ನು ತಿಳಿಯುವುದಾದರೆ, ಅದೆಂತಹ ವಿಷಯವಾಗಿದೆ ಇದು ತಿಳಿಯದೇ ಇರಲು? ಆಗ ಅವರು ಪ್ರಶ್ನಿಸಿದರು, ಹಾಗಾದರೆ ಹೇಳಿ ಈಗ ನಿಮ್ಮ ಆಯುಷ್ಯ ಎಷ್ಟು ಬಾಕಿ ಉಳಿದಿದೆ. ನಾನು ವಾಸ್ತವವಾಗಿ ಇದರ ಉತ್ತರ ನೀಡಲು ಸಮರ್ಥನಾಗಿರಲಿಲ್ಲ. ಆದರೂ ಪ್ರಮಾದದ ದಾರಿಯಲ್ಲಿ ಸಾಗುತ್ತಾ ಅವನಿಗೆ ನುಡಿದೆ. ಯಾವನು ಸಾಯುವವನಿದ್ದಾನೆ, ಅವನನ್ನೇ ಕೇಳಿ!

ಮನುಷ್ಯನು ಗುರುತುಗಳು ಅಳಿಸುವಂತಹವು ಅಲ್ಲ,
ಹಾಗೂ ಅಳಿವಿನಿಂದ ಅವನು ಅರಿವುಳ್ಳವನು ಅಲ್ಲ.

ಆದಿಯಿಂದ ಅಂತ್ಯದವರೆಗೆ ಇಹುದು ಇದರ ಸಂಚಾರ,
ಪ್ರಾರಂಭ ಹೇಗಿದೆ ಎಂದರೆ ಅದರ ಅಂತ್ಯವೇ ಇಲ್ಲ.

ಉಳಿದ ಅಸ್ತಿತ್ವದ ಜತೆ ಹೃದಯವು ಸೇರಿಕೊಂಡಾಗ,
ಸಾವು ಇವನಿಗೆ ಅನುಮತಿಸತಕ್ಕ ಪ್ರಕ್ರಿಯೆಯ ಇಲ್ಲ.

'ಖಾಫ್'* ಯಾವ ರೀತಿಯಲಿ ಸ್ಥಿರವಾಗಿದೆ. ಒಳಿತಿನ ಕಾರ್ಯದಲಿ,
'ನೂನ್'ನ ಈ ತರಹ ಕಾರ್ಯವೂ ಇಲ್ಲ 'ಫನಾ'ದಲಿ.

---

* ಖಾಫ್ – ಪರ್ವತದ ಹೆಸರು 'ನೂನ್' – ಫನಾ ಮಧ್ಯದಲ್ಲಿ ಉರ್ದು/ಅರಬ್ಬಿ ಅಕ್ಷರ

ಅವನು ಅರಸು ಇಲ್ಲಾ, ಇಲ್ಲ ಅವನು ಸೇವಕನು,
ಶಾಹನಾಗಿದ್ದಾನೆ ನಿಶ್ಚಿತ, ಶಾಹ ಮಂತ್ರಿಯೂ ಅಲ್ಲ.

ಸತ್ಯದ ಮಧುರತೆಯಲಿ ಯಾರಿಗೆ ಇಹುದು ವಿಶ್ವಾಸ,
ಅವನಿಗೆ ಎಂದಿಗೂ ಖಂಡಿತ ಯಾವುದೇ ಅನ್ಯಾಯವಿಲ್ಲ.

ಪ್ರೇಮವು ಅಹುದು ಪ್ರೇಮದ ನೋವಿನಿಂದ ಬಾಕಿ,
'ಬಹರಿ' ಈ ನೋವಿಗೆ ಯಾವ ಔಷಧಿಯೂ ಇಲ್ಲ.

ಆಭರಣ–೧೫೧

ಹಜ್ರತ್ ಶೇಖ್ ಮಹ್ಮದ್ 'ಬಾಖರ್' ರವರ ಸಾವಿನ ಪ್ರಸಂಗ

'ಹಜ್ರತ್ ಪೀರ್–ಮುರ್ಷದ್ ಮಾನ್ಯರ ವಯಸ್ಸು ಬಹುತೇಕ ಒಂದು ನೂರು ವರ್ಷವಿತ್ತು. ಅವರ ಗಡ್ಡವು ತುಂಬಾ ಉದ್ದವಾಗಿದ್ದು ಬಹಳ ದಟ್ಟವಾಗಿದ್ದು, 'ಶಬೆ–ಖದರ್'[೧] ರಾತ್ರಿಯ ಕತ್ತಲೆಗಿಂತಲೂ ಕಪ್ಪಾಗಿತ್ತು ಹಾಗೂ ಅವರ ಪವಿತ್ರ ಚಹರೆಯು ಹುಣ್ಣಿಮೆಯ ಚಂದ್ರನಿಗಿಂತಲೂ ಅಧಿಕ ಕಾಂತಿಯುಕ್ತವಾಗಿತ್ತು. ಈ ವಯಸ್ಸಿನಲ್ಲೂ ಯೋಚನಾ ಶಕ್ತಿಯು ಅತೀವ ಸರಿಯಾಗಿದ್ದು, ಅಂತರ್ದೃಷ್ಟಿಯು ಯಥಾಸ್ಥಿತಿಯಲ್ಲಿದ್ದು, ಬದಲಾಗಿ ಯೌವನವ ವೈಭೋಗವು ಅದೇ ಸ್ಥಿತಿಯಲ್ಲಿತ್ತು. ಜನರು ಹಜ್ರತ್‌ರ ಈ ವಿಲಕ್ಷಣಗಳಿಂದ ಆಶ್ಚರ್ಯಚಕಿತರಾಗುತ್ತಿದ್ದರು ಹಾಗೂ ವಿಸ್ಮಿತರಾಗುತ್ತಿದ್ದರು. ಆದರೆ ಕೆಲವು ದಿನಗಳ ನಂತರ ಲೌಕಿಕ ದೇಹದಲ್ಲಿ ಏನೂ ಬಾಕಿ ಉಳಿದಿರಲಿಲ್ಲ ಹಾಗೂ ವಿಷಮ ಪರಿಸ್ಥಿತಿಯು ತನ್ನ ಚರಮವನ್ನು ತಲುಪಿತು. ಎಲ್ಲರೂ ಅಳಲು ಪ್ರಾರಂಭಿಸಿದರು. ಅವರು ಯಾರಿಗೂ ಏನೂ ಹೇಳಲಿಲ್ಲ. [illegible] ಅವರ ಗುಲಾಮನ (ಬಹರಿಯ) ಕಣ್ಣುಗಳಲ್ಲಿ ಅಶ್ರುಗಳನ್ನು ಕಂಡು ನೊಂದುಕೊಂಡರು. ಮತ್ತು ನುಡಿದರು 'ನೀನೇಕೋ ಅಳುವೇ? ಇತರರಂತೆ ನೀನೂ ಇದೇ ತರಹ ತಿಳಿಯುತ್ತೀಯಾ, ನಾನು ಮೃತ್ಯುವಿನ ಕೈಯಲ್ಲಿ ಸಾಯುತ್ತಿದ್ದೇನೆ ಎಂದು? ಇದೇನು ಮಾತು! ಇದರಿಂದ ತಲ್ಲಣಗೊಂಡೆ, ನನ್ನ ಕಣ್ಣೀರು ಶುಷ್ಕವಾದವು. ಇದೇ ಸಮಯದಲ್ಲಿ ನಾನು ಅತೀವ ದುಃಖದಲ್ಲಿ ವಿನಂತಿಸಿಕೊಂಡೆ 'ಹಜ್ರತರೇ, ತಾವಂತೂ ಪ್ರಯಾಣದ ನಿರ್ಧಾರ ಮಾಡಿದ್ದೀರಿ? ನನಗೆ ಯಾವುದೇ ಸತ್ಯದಗೂಢ ಭೇದಿಸಲಾಗದಿದ್ದರೆ ಹಾಗೂ ಮ್ಮಾರಿಫತ್‌ನ ರಹಸ್ಯ ಗೊತ್ತಾಗದಿದ್ದರೆ, ನಾನು ಯಾರನ್ನು ವಿಚಾರಿಸಲಿ. ಉತ್ತರವಾಗಿ ಈ ಗುಲಾಮನ ಕಡೆ ಸಂಜ್ಞೆ ಮಾಡಿದರು. ಆದರೆ ಇದೇ ಸಮಯಕ್ಕೆ ಪ್ರಜ್ಞಾಹೀನರಾದರು ಹಾಗೂ ಮಾತುಕತೆ ನಿಂತಿತ್ತು. ಒಂದೆರಡು ಗಂಟೆಯ ಬಳಿಕ ಮತ್ತೆ ಈ ಸೇವಕನ

ಕಡೆ ನೋಟ ಬೀರಿದರು ಹಾಗೂ ತಮ್ಮ ಬಲಗೈಯನ್ನು ತಮ್ಮ ನಾಭಿಯ ಮೇಲಿಟ್ಟರು. ಇದರ ತಾತ್ಪರ್ಯ ಏನಾಗಿತ್ತೆಂದರೆ ಸ್ಥಿತಿಯು ಆಗ ನಾಭಿಯು ಅಸ್ತಿತ್ವದ ಸಿದ್ಧಾಂತದವರೆಗೆ ಬಂದು ತಲುಪಿದೆ ಎಂದು. ಅದು ಇದೇ ರೀತಿಯಲ್ಲಿ ಇನ್ನು ವೃದ್ಧಿಸುತ್ತಿದೆ. ನಾನು ತಿಳಿಗೇಡಿ, ಅನನುಭವಿ, ಈ ಮಾತನ್ನು ಅರ್ಥೈಸಿಕೊಳ್ಳಲಿಲ್ಲ. ನುಡಿದೆ 'ಹೇ ದಸ್ತಗೀರ್! ಬಹುಶಃ ನಾಭಿಯಲ್ಲಿ ನೋವಾಗುತ್ತಿರಬಹುದು. ತಲೆಯನ್ನು ಒತ್ತುತ್ತಾ ಮತ್ತೇ ಒಂದು ಕ್ಷಣ ಹೊಟ್ಟೆಯ ಮೇಲೆ ಕೈ ಇಟ್ಟೆ, ನಂತರ ಎದೆಯ ಮೇಲೆ ಆನಂತರ ಗಂಟಲ ಮೇಲೆ. ನಾನು ಮೊದಲಿನ ತರಹ ಕೇಳಹತ್ತಿದೆ. ಹಜ್ರತ್ ಅದೇ ರೀತಿಯಲ್ಲಿ ತಲೆ ಅಲ್ಲಾಡಿಸಿ, ನಕಾರಾತ್ಮಕ ಭಾವನೆ ವ್ಯಕ್ತಪಡಿಸುತ್ತಿದ್ದರು. ಆಮೇಲೆ ಒಮ್ಮೆಲೆ ಜ್ಞಾನ ಮರಳಿ ಬಂದು, ನುಡಿದರು "ಹೇ ಮಹಮೂದ್ ಬಹರಿ, ಈಗ ನಾನು ಯಾತ್ರೆಗೆ ಹೊರಡುವವನಿದ್ದೇನೆ. ನಾನು ಎರಡೂ ಕೈಗಳನ್ನು ಮೇಲೆತ್ತಿ ನುಡಿದೆ "ಸಂತೋಷದಿಂದ" ಇದರ ನಂತರ ಅವರ ಪವಿತ್ರ ಪ್ರಾಣ ಪಕ್ಷಿಯು ಹಾರಿಹೋಯಿತು.

ಚಹರೆಯಿಂದ ಹಾದು ಹೋಗು, ತಾತ್ಪರ್ಯವನ್ನು ಶೋಧಿಸು,
ಅನಂತತೆಯ ಭೂಮಿಯೊಳಗೆ ಹೋಗಿ ನೀ ಶೋಧಿಸು.

ನೀನು ಅಸಹಾಯಕನು, ಈ ಲೋಕದ ಪುಟ್ಟ ಗ್ರಾಮದಲಿ,
ಕವನದ ಆಳಕೆ ಇಳಿದು, ಅದರಲಿ ಒಂದಾಗಿ ಶೋಧಿಸು.

ಸ್ವಯಂ ಮಾಡು ನಿರಾಕರಣೆ, ಸತ್ಯ ದೃಷ್ಟಾಂತದ ಮೂಲಕ,
ಹೃದಯವನ್ನು 'ಇಲ್ಲ' ಎಂಬುದರಿಂದ ಪ್ರಾರಂಭಿಸಿ, 'ವಿನಾ'ದವರೆಗೆ ಶೋಧಿಸು.

ಈ ನಶ್ವರ ಗುರಿಯಲಿ ಮೋಸಹೋಗದಿರು ಎಂದಿಗೂ,
ಮದಿರೆಯ ಮಧುಪಾತ್ರೆಯಲಿ, ಸಂತೃಪ್ತಿಯನು ನಿ ಶೋಧಿಸು.

ತಿಳಿಗೇಡಿತನದಲಿ ನೀನು, ವಿವೇಕದಿಂದ ದೂರವಾದೆ,
ಹೇ ತಿಳಿಗೇಡಿ ಹೃದಯದಿಂದ, ನೀನು ವಿವೇಕವನು ಶೋಧಿಸು.

ಬಾದಶಹಾನಾಗಿ ಬಲಹೀನನಾಗುವುದು ಆಗಿಹುದು ಕೆಡಕು,
ಏರಿಸು! ನಿನ್ನ ಶಿರವನ್ನು ಮಹೋನ್ನತ ಅರ್ಹತೆಯನು ಶೋಧಿಸು.

ಆಭರಣ–೧೫೨

ಜಗತ್ತಿನ 'ದಿವ್ಯಜ್ಞಾನ'ದ ವರ್ಣನೆ

ಆದಿಲ್ ಶಾಹಿ ಸಾಮ್ರಾಜ್ಯದ ಕೊನೆಯ ದೊರೆಯಾಗಿದ್ದ ಸಿಕಂದರ್ ಖಾನರು, ಈ ಫಕೀರನನ್ನೂ ವಿಚಾರಿಸಿದರು. 'ಜಗತ್ತು ಏನಾಗಿದೆ'? ನಾನು ನುಡಿದೆ 'ಮರಣಾನಂತರ ಕೆಲಸಕ್ಕೆ ಬಾರದ್ದು', ಆಗ ಅವರು ನುಡಿದರು 'ಇದನ್ನು ಎಲ್ಲಾ ಜನರು ಹೇಳುತ್ತಾರೆ" ನಾನು ನುಡಿದೆ "ಎಲ್ಲರೂ ಏನು ಹೇಳುತ್ತಿದ್ದಾರೆ, ಅದು ಇನ್ನೂ ಅಧಿಕ ಸ್ಥಿರವಾಗಿರುತ್ತದೆ. ಒಂದಿಬ್ಬರು ನುಡಿದರೆ ಅದು ವಿಶ್ವಾಸರ್ಹ ಮಾತಲ್ಲ!" ನನ್ನ ಹೃದಯದ ಅರ್ಹತೆಗೆ ಅನುಗುಣವಾಗಿ ಯಾವುದಾದರೂ ರಹಸ್ಯವನ್ನು ತಿಳಿಸಿ, ಅದರಿಂದ ನಾನು ಪ್ರಯೋಜನ ಪಡೆಯುವಂತಾಗಲಿ ಹಾಗೂ ಆನಂದ ಪ್ರಾಪ್ತಿಹೊಂದಲಿ. ನಾನು ನುಡಿದೆ 'ಯಾವುದನ್ನು ಕೈಯಿಂದ ಸ್ಪರ್ಶಿಸಿ ಅನುಭವಿಸಬಹುದೋ, ಕಣ್ಣು ಹಾಗೂ ಹೃದಯದಲ್ಲಿ ನೆಲೆಸಿದಂತಾದ, ಅದು ನಾಸೂತ್‌ನಿಂದ ಪ್ರಾರಂಭವಾಗಿ ಮಲಕೂತ್‌ದವರೆಗೆ ಎಲ್ಲವೂ ಜಗತ್ತು ಆಗಿದೆ. ಇದರ ಮುಂದೆ ಇರುವುದು ಧರ್ಮವಾಗಿದೆ. ಇದನ್ನು ಕೇಳಿ ಬಾದಶಹಾನು ಅತೀವ ಸಂತುಷ್ಟನಾಗಿ ನನ್ನನ್ನು ಹೊಗಳಿದನು.

ಅಗೋಚರ ಲೋಕವಾಗಿರಲಿ ಅಥವಾ ಸಾಕ್ಷ್ಯ ಗೋಷ್ಠಿ ಇರಲಿ,
ದೇಹದ ಬಂಧನದಲ್ಲಿ ಇದ್ದೆ ಇದೆ ಈ ಜಗವು.

ದೇಹದ ಬಂಧನದಿಂದ ಯಾವನು ಆಗಿಹನು ಸ್ವತಂತ್ರ,
ದೈವಧರ್ಮವೆನ್ನುತ್ತಾರೆ. ಅದನು, ಮರೆಯದೆ ನೆನಪಿಡು.

ಜಗವು ದೇಹವಾದರೆ ಧರ್ಮವು ಆಗಿಹುದು ಅದರ ಜೀವ,
ಅವನು ಅಜ್ಞಾನಿಯು ಧರ್ಮವು ಆಗಿಹುದು ದಿವ್ಯಜ್ಞಾನ.

'ಬಹರಿ'ಯೇ ಧರ್ಮವಾಗಿಹುದು ಪಾವನ ಜಗವು ಅಧಮ,
ಮುರೀದ್ ಒಬ್ಬನಿಹನು, ಧರ್ಮಭ್ರಷ್ಟತೆಯಿಂದ ಅತಿದೂರ.

ಆಭರಣ–೧೫೩

ಲೌಕಿಕ ವ್ಯಕ್ತಿ, ದೈವೀಭ್ರಾಂತ (ಮಜಝೂಬ್) ನ ದೃಷ್ಟಿಯಲ್ಲಿ

ಇದೇ ಗೋಗಿಯಲ್ಲಿ 'ಬಹಲೂಲ್' ಹೆಸರಿನ ಒಬ್ಬ ದೈವೀಭ್ರಾಂತ (ಮಜಝೂಬ್) ಇರುತ್ತಿದ್ದರು. ಎರಡು ಮೂರು ಸಲ ಚೆನ್ನಾಗಿ ತಿನ್ನುತ್ತಿದ್ದರು ಹಾಗೂ ಕೈಯಲ್ಲಿ ಹಾಗೂ ನಡುವಿನಲ್ಲಿ ಹಣವನ್ನು ಕಟ್ಟಿಕೊಂಡಿರುತ್ತಿದ್ದರು. ಎಲ್ಲಿಯಾದರೂ ಜನ ಸೇರಿದ್ದನ್ನು ಕಂಡರೆ, ಅಲ್ಲಿಗೆ ತಲುಪಿ, ಎರೆಡೆರಡು, ಮೂರುಮೂರು ಸಲ ಸತತವಾಗಿ ಒಂದೇ ವಾಕ್ಯವನ್ನು ಪುನಾರವರ್ತಿಸುತ್ತಿದ್ದರು. "ನಮಗೆ ರೊಟ್ಟಿ ಕೊಡಿ, ನಮಗೆ ಪೈಸೆ ಕೊಡಿ" ಅನೇಕ ಜನ ಅವರಿಂದ ಬೇಜಾರಾಗಿದ್ದರು. ಒಂದು ದಿನ ನನ್ನ ಪೀರ್–ಮುರ್ಷದ್‌ರ ಗೋಷ್ಠಿಯಲ್ಲಿಯೂ ತಲುಪಿ, ಅದನ್ನೇ ಬಡಬಡಿಸಹತ್ತಿದರು. ಇವರನ್ನು ಅರಿಯದೇ ಇದ್ದ, ನನ್ನ ಸ್ನೇಹಿತರೊಬ್ಬರು, ಹಜ್ರತರನ್ನು ಉದ್ದೇಶಿಸಿ ನುಡಿದರು, ಅದೇನೆಂದರೆ ಈ ಫಕೀರನ ರೊಟ್ಟಿ ಹಾಗೂ ಕಾಸಿಗಾಗಿ ಈ ರೀತಿ ಜೀವವನ್ನು ನಿಕೃಷ್ಟಗೊಳಿಸುವುದು ಅತಿಯಾಗಿದೆ. ಆಗ ಹಜ್ರತರು ನುಡಿದರು 'ಮಜಝೂಬ್ ತನ್ನ ಸ್ಥಿತಿಯನ್ನು ತಿಳಿಸುತ್ತಿಲ್ಲ. ಬದಲಿಗೆ ಜಗದ ಲೋಭಿಗಳ ಕಥನವನ್ನು ಸಾಂಕೇತಿಕವಾಗಿ ವಿವರಿಸುತ್ತಿದ್ದಾರೆ. ಲೌಕಿಕರು ಇದೇ ತರಹ ದುರಾಸೆ ಹಾಗೂ ಲೋಭದಲ್ಲಿ ಮುಳಗಿದ್ದಾರೆ.

ಮೈಮರೆತ ಜಗಕೆ ಜಗದ ಜ್ಞಾನವೇನು ಗೊತ್ತು?
ಜಗದ ವಾಸಿಗಳಿಗೆ ಸೂಕ್ತವಲ್ಲ ದೇವಧರ್ಮವು.

ಎರಡೂ ತಿರಸ್ಕರಿಸುವುದು ಇಹುದು ಇದು ಸೂಕ್ತ,
ಇದನು ಪ್ರೀತಿಸುವುದು ಒಳಿತು. ಅಥವಾ ನಿಂದನೆಯು ಸೂಕ್ತ.

ಆಭರಣ–೧೫೪

ಸಾಧಕನ ಮಾರ್ಗದರ್ಶನದಲ್ಲಿ ಒಂದು ಒಕ್ಕಣೆ

ಸ್ನೇಹಿತರೊಬ್ಬರು ತಮ್ಮ ನಡೆ (ಸುಲೂಕ್)ಯನ್ನು ನಿರ್ಧರಿಸುತ್ತಿದ್ದರು. ತಮ್ಮ ಅಳಿವು (ಫನಾ) ಹಾಗೂ ದೇವರ ಪರಿಚಯಕ್ಕಾಗಿ ನನ್ನಲ್ಲಿ ನಿವೇದಿಸಿಕೊಂಡನು. ಆದುದರಿಂದ ಕೆಲವು ಅಕ್ಷರಗಳನ್ನು ನಾನು ಒಂದು ಕಾಗದದ ತುಣುಕಿನ ಮೇಲೆ ಬರೆದು ಅವರಿಗೆ ಒಪ್ಪಿಸಿದೆ. ಅದು ಹೀಗಿತ್ತು.

ದೇವರ ಸ್ತುತಿ ಹಾಗೂ ಮಹ್ಮದ ರಸೂಲರ ವರ್ಣಾನಾ ಕವನಗಳು (ನಾತ್), ಅವರ ಅನುಯಾಯಿಗಳು ಅವರ ಅಧೀನರ ವಿವರಣಾ ಕವನಗಳ (ಮನಖಬತ್) ನಂತರ ದೇವರ ಆಪೇಕ್ಷಕರಿಗೆ ಸ್ಪಷ್ಟವಾಗಬೇಕೆನೆಂದರೆ, ಆಯುಷ್ಯವು ಇನ್ನೊಬ್ಬನ ಅವಲಂಬನವಾಗಿದೆ. ಬಹಿರಂಗವಾಗಿ ಹಾಗೂ ಅಂತರಂಗದಿಂದ ಸದಾ ತನ್ನ ಒಡೆಯರ ಸ್ಮೃತಿಯಲ್ಲಿ ಆನಂದಿತನೂ, ನಿರಂತನೂ ಆಗಿರಬೇಕು. ಧಾರ್ಮಿಕ ವಿಧಿವಿಧಾನಗಳು ವಿಶೇಷವಾಗಿ ನಮಾಜ಼್ ರೋಜ಼ಾ ಕುರಾನ್ ಪಠಣ ಇತ್ಯಾದಿಯಲ್ಲಿ ದೃಢಸಂಕಲ್ಪನೂ, ಸ್ಥಿರ ಚಿತ್ತನೂ ಆಗಿರಬೇಕು. ಸುಳ್ಳು, ಪರನಿಂದೆ ಹಾಗೂ ಗರ್ವಗಳಿಗೆ ಎಂದಿಗೂ ಹೃದಯದಲ್ಲಿ ಸ್ಥಾನ ನೀಡಬಾರದು ಹಾಗೂ ಜೀವಿಗಳ ಸಹಾನುಭೂತಿ ಹಾಗೂ ಹೊಗಳಿಕೆಯ ಆಕಾಂಕ್ಷಿಯಾಗಿರಬಾರದು. ಇದೇ ಪುರುಷಸಿಂಹರ ನಡೆಯಾಗಿದೆ. ಯಾವುದೇ ಜೀವಿಗೆ ತನ್ನ ಕೈಯಿಂದ ಅಥವಾ ನಾಲಿಗೆಯಿಂದ ತೊಂದರೆ ನೀಡಬಾರದು. ಯಾಕೆಂದರೆ ಜೀವಾತ್ಮಗಳಿಗೆ ಕಷ್ಟ ನೀಡುವವವನು ಅಲ್ಲಾಹನ ನಿವಾಸದಿಂದ ಬಹಿಷ್ಕರಿಸಲ್ಪಟ್ಟವನಾಗಿದ್ದಾನೆ ಹಾಗೂ ರಸೂಲರ ಸನ್ನಿಧಿಯಲ್ಲಿ ನಿಷಿದ್ದನಾಗಿದ್ದಾನೆ. ದೇವರಲ್ಲಿ ನಂಬಿಕೆಯನ್ನು ಸ್ನೇಹಿತವನ್ನಾಗಿಸು ಹಾಗೂ ದೇವರ ಸಂತುಷ್ಟಿಯನ್ನು ನಿನ್ನ ಸಹಭಾಗಿಯನ್ನಾಗಿಸಿಕೊಳ್ಳು. ರೊಟ್ಟಿ ಹಾಗೂ ಬಟ್ಟೆಯು, ಯಾವ ರೀತಿ ಸಮಸ್ತ ಲೋಕಕ್ಕೆ ಪ್ರಾಪ್ತವಾಗುತ್ತಿದೆಯೋ ಅದು ಅವರವರ ವಿಧಿ ಬರಹಕ್ಕೆ ಅನುಗುಣವಾಗಿ ಸಿಕ್ಕೇ ಸಿಗುತ್ತದೆ. ಈ ವಿಷಯದಲ್ಲಿ ಅಧಿಕ ಚಿಂತೆ ಅನಾವಶ್ಯಕವಾಗಿದೆ ಹಾಗೂ ದೀರ್ಘ ಅಭಿಲಾಷೆ ಅಪ್ರಯೋಜಕವಾಗಿದೆ. ಬೇಡಿಕೆಯ ಯೋಚನೆಯನ್ನು ಮನದಿಂದ ಹೊರಹಾಕು, ಯಾಕೆಂದರೆ ಇದಕ್ಕಿಂತ ಅಪಮಾನ ಹಾಗೂ ಅನಿಷ್ಟತೆ ಬೇರೊಂದಿಲ್ಲ.

ನಿನ್ನ ಅಭಿಲಾಷೆಯಿಂದ ಯಾವುದಾಯಿತು ಪ್ರಾಪ್ತ,
ಚೊಕ್ಕ ಚಿನ್ನವಾದರೂ ಅದು ಮಣ್ಣೆಂದು ತಿಳಿ.

ಹುಡುಕದೇ ದೊರೆತ ಆ ವಸ್ತುವನು ನೀನು,
ಮಣ್ಣಾದರೂ ಅದನು ಪವಿತ್ರವೆಂದು ತಿಳಿ.

ಯಾವುದೇ ವ್ಯಕ್ತಿಯು ಕ್ರೌರ್ಯದಿಂದ ಕಷ್ಟ ನೀಡುತ್ತಿದ್ದರೆ, ವಿವಿಧ ಅವಾಚ್ಯ ಶಬ್ದಗಳನ್ನು ನಾಲಿಗೆಯ ಮೇಲೆ ತಂದು ಬೈಯ್ಯುತ್ತಿದ್ದರೆ, ಆಗಲೂ ಸಹನೆಯಿಂದಿರು. ಅವನನ್ನು ಶಪಿಸಬೇಡ. ಬದಲಾಗಿ ದೇವರಿಂದಲೂ ಅವನಿಗೆ ಕೆಡಕಾಗದಂತೆ ಬಯಸಿದರೆ, ಆ ಪರಂಸತ್ಯನು ಸಂತುಷ್ಟನಾಗಿದ್ದಾನೆ. ಹಾಗೂ ಈ ಕುರಿತು ವ್ಯಾಜ್ಯವನ್ನು ದೊರೆಯ ಸನ್ನಿಧಿಯಲ್ಲಿ ಒಯ್ಯಬೇಡ.

ಇಂತಹ ಸ್ಥಳದಲ್ಲಿ ಕುಳಿತುಕೊಳ್ಳಿ ನಿಮಗೆ ವೃಥಾ ಹಸ್ತಕ್ಷೇಪವಾಗದಿರಲಿ ಹಾಗೂ ಅನೇಕ ಸಾರಿ ಎದ್ದೇಳಬೇಡಿ, ಅವಶ್ಯಕತೆಯ ಹೊರತು ಹಾಗೂ ರಕ್ಷಣೆಯ ನಿಮಿತ್ತದ

ಹೊರತು. ಶಾಂತತೆಯನ್ನು ಕಾಪಾಡಿಕೊಳ್ಳು, ಯಾಕೆಂದರೆ ಶಾಂತತೆ ನಿನ್ನ ಸ್ವಭಾವದ ಸ್ವಯಂ ಪ್ರಕಟರೂಪವಾಗಿದೆ. ದೈವ ನಾಮವನು ಯಾವ ರೀತಿ ಪ್ರಸ್ತಾಪಿಸಲಾಗಿದೆಯೋ ಶರೀರವನ್ನು ದೈವಲೋಕದ ನಾಲಿಗೆಯಿಂದ ಅದನ್ನು ತಮ್ಮ ಕರ್ಮವನ್ನಾಗಿಸಿ. ಇದರಿಂದಲೇ ದೈವಲೋಕವು ತೆರೆಯುವಂತಿರಬೇಕು. ಇದರ ಮುಂದೆ ನಿರೋಧಿಸಲ್ಪಟ್ಟ ಅಸ್ತಿತ್ವವುಳ್ಳವರಾಗುತ್ತೀರಿ. ಯಾಕೆಂದರೆ ಇಲ್ಲಿ ಅಂಧಕಾರವಿದೆ. ಪ್ರವೇಶಿಸಿದರೆ ಹೀಗನಿಸಬಹುದು ಈ ಅಂಧಕಾರದಲ್ಲಿ ವಿನಾಶವಾಗಬಹುದು (ಫನಾ), ಸ್ವಯಂನ ಯಾವುದೇ ಪ್ರಭಾವವು ಇರುವುದಿಲ್ಲ. ಆದರೂ ವಿನಾಶವಾಗಿದ್ದೀರಿ. ಯಾಕೆಂದರೆ ಈ ಅಂಧಕಾರದಲ್ಲಿ ನಿಮ್ಮ ಹೊರತು ಯಾರು ನೋಡುತ್ತಿರುವವರು? ಈ ಸ್ಥಾನದಲ್ಲಿ "ಆರೀಫ್'ನ ಅಸ್ತಿತ್ವ ಪ್ರಕಟವಾಗುತ್ತದೆ. ಮತ್ತೆ ಅಲ್ಲಿ 'ಆರೀಫ'ನ ಅಸ್ತಿತ್ವದ ವೀಕ್ಷಣೆಯಾಗುತ್ತದೆ. ಇದು ಆರೀಫನ ಅಸ್ತಿತ್ವವಾಗಿದ್ದು ನಿರೋಧಿಸಲ್ಪಟ್ಟ ಅಸ್ತಿತ್ವದ ಆ ಅಂಧಕಾರವು ಈ ಸ್ಥಾನದಲ್ಲಿ 'ಏಕ' ಅಸ್ತಿತ್ವವಾಗುತ್ತದೆ. ಅಂದರೆ ಶಾಶ್ವತ ಅಸ್ತಿತ್ವ ಅರಿವಿನ ಅಸ್ತಿತ್ವವು ಸಾಕ್ಷ್ಯದ ಅಡಿಪಾಯವನ್ನು ತಲುಪಿದಾಗ ಪವಿತ್ರ ಸತ್ಯೆಯ ಶಾಶ್ವತ ಜ್ಞಾನದ ಅಸ್ತಿತ್ವಕ್ಕೆ ಕಾಣಿಕೆಯನ್ನು ಅರ್ಪಿಸು. ಯಾಕೆಂದರೆ ಇದು ಅದೇ ಶಿಕ್ಷೆಗೆ ಅರ್ಹವಾಗಿದೆ. ಅಂದರೆ ಸತ್ಯದಲ್ಲಿ ವಿಲೀನವಾಗಿಸಿ (ಫನಾ), ಈ ಸ್ಥಾನವು ವಸತಿ ರಹಿತನಾದ ಪರಮಾಧಿಕಾರದ ಸ್ಥಾನವಾಗಿದೆ. ಸತ್ಯದ ಭಯದಲ್ಲಿ ಇರಿ. ನಿಮ್ಮ ಸಮಸ್ತ ವ್ಯವಹಾರ, ವ್ಯವಧಾನ ಅವನ ಸಮ್ಮುಖವೇ ಹಾಜರುಪಡಿಸಿ, ಏನಾದರೂ ಕೇಳಬೇಕಾರೆ ಅಥವಾ ಬೇಡವಾದರೆ ಅನ್ಯರಿಗಿಂತಲೂ ಅವನನ್ನೇ (ದೇವನನ್ನೆ) ಕೇಳುವುದು ಸೂಕ್ತವಾಗಿದೆ.

ಸದಾ ನಿಮ್ಮ ಪೀರ್-ದಸ್ತಗೀರ್‌ರಿಂದಲೇ ಬೇಡಿ ಹಾಗೂ ಅರಿತುಕೊ ಏನೆಲ್ಲಾಇದೆಯೋ ಅದು 'ಪೀರಿ'ಯೇ ಆಗಿದೆ. 'ಪೀರ್'ನ ಹೊರತಾಗಿ ಮತ್ತೇನೂ ಇಲ್ಲ. ಪೀರ್‌ನ ಅಸ್ತಿತ್ವವು ಭೌತಿಕವಾಗಿಲ್ಲ. ಬದಲಾಗಿ ಅದು ಪುರಾತನ ದೈವೀಪ್ರೇಮವಾಗಿದೆ. ದೈವೀಜ್ಞಾನವನ್ನು 'ಸ್ವಯಂ' ರೂಪದಲ್ಲಿ ಸಮಸ್ತ ಸೃಷ್ಟಿಗಳನ್ನು ಪೀರ್‌ನಿಗೆ ಅರ್ಪಿಸು ಅದು ಈ ಬ್ರಹ್ಮಾಂಡ ಜ್ಞಾನದಲ್ಲಿ ವಿಲೀನ (ಫನಾ)ವಾಗುವವರೆಗೆ.

ನಾನೇನು ಅರಿಯಲಿ ಭಲೇ, ಏನಿಹರು ದೇವರು ಹಾಗೂ ಮಹ್ಮದ್
ಜನ ಹೇಳುವರು ದೇವರು ಮತ್ತು ಮಹ್ಮದರಲಿ ಇಹರು ಪೀರ್‌ರು.

ಹೇ ಆತ್ಮೀಯನೇ, ಬ್ರಹ್ಮಾಂಡದ ಸಾರವು ಜ್ಞಾನವಾಗಿದೆ. ಬದಲಾಗಿ ಶಾಶ್ವತ ಜ್ಞಾನವಾಗಿದೆ. ಜೀವ ಹಾಗೂ ಪ್ರಕಾಶ ಇವೆಲ್ಲವು ಜ್ಞಾನದ ಹೆಸರುಗಳೇ ಆಗಿವೆ. ಈ ಜ್ಞಾನದಿಂದ ಸಿದ್ದಿಯಾದಾಗ ಸ್ವಯಂ ಜ್ಞಾನವಾಗುವನು ಹಾಗೂ ಶೂನ್ಯದಿಂದ ಹಾದುಹೋಗಿ ವಿಶೇಷ ಅಸ್ತಿತ್ವವನ್ನು ಸೇರುವುದು ಆ ಪರಮ ಸತ್ಯನು ಮಹಮೂದ ಬಹರಿ ಹಾಗೂ ಅವನ ಸಂಬಂಧಿತರಾದವರನ್ನು ಈ ಮಾರ್ಗದಲ್ಲಿ ನಡೆಯಲು

ಪ್ರೇರೇಪಿಸಲಾಗಿದೆ, ಯಾವುದನ್ನು 'ಸಿರಾತೆ–ಮುಸ್ತಖೀಮ್' ಅರ್ಥಾತ್ ನೇರಮಾರ್ಗ ಎಂದು ಕರೆಯಲಾಗಿದೆ. ಅದನ್ನು ದೃಢವಾಗಿ ಸ್ಥಾಪಿಸುವಂತಾಗಲಿ ಹಾಗೂ ಸಮಸ್ತ ಸೃಷ್ಟಿಯ ಖ್ವಾಜಾರಾದಂತಹ ಹಜ್ರತ್ ಮಹ್ಮದ್ (ಸ.ಅ) ಧರ್ಮಾಚರಣೆಯ ಪ್ರೇಮವನ್ನು ದಯಪಾಲಿಸಲಿ (ಆಮೀನ್).

ಆಭರಣ–೧೫೫

'ಮುಸಲ್ಮಾನ'ನ ಅರ್ಥವ್ಯಾಖ್ಯಾನ

ಬುದ್ಧಿವಂತನೂ ಇವನು, ದರ್ವೇಶನೂ ಇವನೂ, ಶೇಖ್‌ನೂ ಇವನು ಎಲ್ಲವನ್ನು ಇವನು, ಆದರೆ ಹಾಯ್! ಮುಸಲ್ಮಾನನಲ್ಲ!

ಈ 'ಮುಸಲ್ಮಾನಿ' ಏನಿದೆ? ಹಾಗೂ ಇದು ಯಾವ ಸಂಕಷ್ಟದ ಹೆಸರು? ಯಾಕೆ ಇದು ದರ್ವೇಶನ ಕಡೆ ಹೋಗುತ್ತದೆ, ಹಾಗೂ ಬುದ್ಧಿವಂತಿಕೆಯ ಕಡೆ ಗಮನ ಹರಿಸುವುದಿಲ್ಲ. ದೀಕ್ಷೆ ಪಡೆದ (ಸಾಹೇಬೆ ಬಯತ್) ಹೃದಯದ 'ಮುಸಲ್ಮಾನಿ'ಯ ಭಾವಾರ್ಥವೇ ಮತ್ತೇನೋ ಆಗಿರಬಹುದು. ಈ ಮೂವರಿಂದ ಇಸ್ಲಾಮಿನ ವಿಧಿ ವಿಧಾನ ಅನುಸರಣೆಯು ರೀತಿ–ನೀತಿಗಳು ಬೇರೆಯದೇ ಇರಬೇಕು.

ಆದರೆ ಮೇಲೆ ಏನನ್ನು ಹೇಳಲಾಗಿದೆ, ಅದು ಸತ್ಯವನ್ನೆ ಹೇಳಲಾಗಿದೆ. ಯಾಕೆಂದರೆ ಜಗವನ್ನು ತೊರೆದು, ತೇಪೆ ಹಾಕಿದ ನಿಲುವಂಗಿ ಧರಿಸಿರುವುದರಿಂದ ದರ್ವೇಶನ ರೂಪಚರ್ಯೆ ಸಿದ್ದವಾಗುತ್ತದೆ ಹಾಗೂ ಏಕಾಂತವಾಸ ಮಾಡುವುದರಿಂದ ಹಾಗೂ ಸತತ ಸಾಧನೆ ಮತ್ತು ಪ್ರವಾದಿ ಮಹ್ಮದರ ಕರ್ಮಾನುಸರಣೆಯಿಂದ ಶೇಖ್ (ಧಾರ್ಮಿಕ ನಾಯಕ) ಆಗುತ್ತಾನೆ. ವಿವಿಧ ಜ್ಞಾನ–ವಿಜ್ಞಾನ–ಕೌಶಲಗಳನ್ನು ಪ್ರಾಪ್ತಿಸಿಕೊಳ್ಳುವುದರಿಂದ ಬುದ್ಧಿವಂತನೆನಿಸಿಕೊಳ್ಳುತ್ತಾನೆ. ಆದರೆ ಮುಸಲ್ಮಾನ್, ಯಾವುದು ವಿಲಾಯತ್ (ಸಂತತ್ವ)ನ ತಿರುಳಾಗಿದೆ ಅದು ಬೇರೆಯೇ ವಿಷಯವಾಗಿದೆ. ಒಬ್ಬ ಯಾತ್ರಿಕನು 'ಬಾರಹಾ' ಎಂಬ ಪ್ರದೇಶವನ್ನು ತಲುಪಿದನು. ಅದು ಸಾದಾತ್‌ರ (ಸಯ್ಯದ್)[೧] ಪ್ರದೇಶವಾಗಿತ್ತು. ಅಲ್ಲಿ ವಿಚಾರಿಸಿದನು. ಇಲ್ಲಿ ಯಾರಾದರೂ ಮುಸಲ್ಮಾನರಿದ್ದಾರೆಯೇ? ಆದರೆ ಒಬ್ಬ ಮುಗ್ಧ ಸಯ್ಯದನು ಅಲ್ಲಿ ಇದ್ದನು. ಅವನು ಹೇಳಿದನು, ಎಲ್ಲಿ ಎಲ್ಲರೂ ಸಾದಾತ್‌ರು ಇರುತ್ತಾರೆ. ಅರ್ಥಾತ್ ಇಲ್ಲ ಯಾರೂ ಮುಸಲ್ಮಾನರು ಇರುವುದಿಲ್ಲ ಎಂಬಂತೆ. ಆ ಸಯ್ಯದನು ಈ ಮಾತನ್ನು ಸರಳ ಮುಗ್ಧತೆಯಲ್ಲಿ ಹೇಳಿದನಾದರೂ ಈ ಫಕೀರನು ತಿಳಿಯುವುದು ಏನೆಂದರೆ ಅವನು ಅತಿ ಬುದ್ಧಿವಂತಿಕೆಯ ಉತ್ತರವನ್ನೇ ನೀಡಿದ್ದಾನೆ.

ಹೀಗಾಗಿ 'ಮುಸಲ್ಮಾನಿ' ಅಲ್ಲಾಹನ ವಿಶೇಷ ಕೃಪೆಯಾಗಿದೆ. ಬದಲಾಗಿ ಅದು ಅವನ ಅಮಾನತ್ ಆಗಿದೆ. ಮತ್ತು ಅವನು ಜನರ ದೃಷ್ಠಿಯಿಂದ ರಹಸ್ಯವಾಗಿದ್ದಾನೆ. ಅವನು ವಿಸ್ಮಯಗಳ ಪ್ರಕಟರೂಪವಾಗಿದ್ದಾನೆ. ಅರ್ಥಾತ್ ಆ ಮುಗ್ಧ ಸಯ್ಯದ್‌ನು ಮುಸಲ್ಮಾನರಲ್ಲಿ ಹಾಗೂ ಸಯ್ಯದ್‌ರಲ್ಲಿ ಯಾವ ಭೇದವನ್ನು ಇಟ್ಟಿದ್ದಾನೊ ಅದು ಇದೇ ಕಾರಣದಿಂದಾಗಿತ್ತು. ಇಲ್ಲವಾದರೆ "ಸಯ್ಯದ್" ಮುಸಲ್ಮಾನ್ನನೇ ಆಗಿರುತ್ತಿದ್ದನು. ಬದಲಾಗಿ 'ಮುಸಲ್ಮಾನಿ' ಅವನಿಂದಲೇ ಇದೆ. ಬಾಹ್ಯ ರೂಪದಲ್ಲಿ ಮುಸಲ್ಮಾನನ ವಿವೇಚನೆಯು ಜ್ಞಾನದಿಂದಲೇ ಆಗುತ್ತದೆ. ಆದರೆ ಈ ಅಲ್ಪನಿಗೆ ಹೀಗೆ ಅರಿವಾಗುತ್ತದೆ. ಅದೇನೆಂದರೆ ಇದು ಜ್ಞಾನದಿಂದ ಪ್ರತ್ಯೇಕವಾದ ಯಾವುದೇ ಬೇರೆ ವಸ್ತುವಿದೆ. ಯಾವುದು ಸಮಸ್ತ ದಾಕ್ಷಿಣ್ಯಗಳಿಂದ ಮುಕ್ತವಾಗಿದೆ. ಹೀಗಾಗಿ ನಾನು ಒಂದು ದಿನ ಖ್ವಾಜಾ ಅಬ್ದುಲ್ ಹಕೀಂರ ಮನೆಯಲ್ಲಿ ಅತಿಥಿಯಾಗಿದ್ದೆ. ಅಬ್ದುಲ್ ಹಕೀಂರು ಸಗರ ಕೋಟೆಯ ಸಿಡಿಮದ್ದಿನ ಉಗ್ರಾಣದ ಮೇಲ್ವಿಚಾರಕರಾಗಿದ್ದರು. ಭೋಜನದ ನಂತರ ಅತಿಥೇಯರ ಸಹಾಯಕನಾಗಿದ್ದ ಚತ್‌ರಾಯ ಆಗಮಿಸಿದನು. 'ಅತೀ ಕ್ಲಿಷ್ಟ ಎಂದು ಪರಿಗಣಿಸಲ್ಪಡುವ ಪ್ರಸಿದ್ಧ "ದೀವಾನೇ ಹಾಫಿಜ್" ಅಲ್ಲೇ ಮಧ್ಯದಲ್ಲಿ ಇಟ್ಟಿದ್ದರು. ಅವನು ಅದನ್ನು ಎತ್ತಿಕೊಂಡನು ಹಾಗೂ ಒಂದೆರಡು ಗಜಲ್‌ಗಳನ್ನು ಓದಿದನು ಹಾಗೂ ಸರಿಯಾಗಿಯೇ ಓದಿದನು. ನನ್ನ ಹೃದಯಲ್ಲಿ ಒಂದು ವಿಚಾರ ಸುಳಿಯಿತು. ಇವನಿಗೆ ಒಂದೆರಡು ಕವನದ ಸಾಲಿನ ಅರ್ಥವಾದರೂ ಕೇಳಿ ನೋಡೋಣ ಎಂದು. ಅವನು ಈ ಗಜಲ್‌ಗಳನ್ನು ಅರ್ಥ ಮಾಡಿಕೊಂಡಿದ್ದಾನೆಯೋ ಅಥವಾ ಇಲ್ಲವೋ ಎಂದು! ಹೀಗಾಗಿ ಕೇಳಿದೆನು ಮತ್ತು ನಾನು ಯಾವ ಭಾವಾರ್ಥವನ್ನು ನಿರೀಕ್ಷಿಸುತ್ತಿದ್ದೆನೋ ಅದನ್ನೇ ಪಡೆದೆನು. ಈ ಸಮಯದಲ್ಲಿ ನಾನು ಈ ತೀರ್ಮಾನಕ್ಕೆ ಬಂದೆ, ಅದೇನೆಂದರೆ ಅಕಸ್ಮಾತ್ 'ಮುಸಲ್ಮಾನಿ'ಯ ಅಡಿಪಾಯವು ಜ್ಞಾನದಿಂದ ಆಗುತ್ತಿದ್ದರೆ ಈ ಹಿಂದೂ ತಕ್ಷಣವೇ ಮುಸಲ್ಮಾನನಾಗುತ್ತಿದ್ದನು ಹಾಗೂ ಮುಸಲ್ಮಾನರಿಗಿಂತಲೂ ಉತ್ತಮರಾಗಿರುತ್ತಿದ್ದರು. ಆದರೆ ಅದು ಹೇಗಾಗುತ್ತಿತ್ತು? ತಕ್ಷಣವೇ ಕವನದ ಈ ಸಾಲು ತಲೆಯಲ್ಲಿ ಸುಳಿದು ಹೋಯಿತು. (ಸಬ್ ಕುಚ್ ತೊ ಹುವಾ ಹಾಯ್! ಮುಸಲ್ಮಾನ್ ನ ಹುವಾ, ಅರ್ಥಾತ್ ನೀನು ಎಲ್ಲವನ್ನು ಆದೆ, ಆದರೆ ಮುಸಲ್ಮಾನನಾಗಲಿಲ್ಲ). 'ಆಯ್ ಜುಮ್ಲಾ ಶದಿ ಲೇಕ್ ಮುಸಲ್ಮಾನ್ ನಶ್‌ದಿ ಅರ್ಥಾತ್ ಸತ್ಯದ ಸತ್ಯತೆಯನ್ನು ನೀನು ಒಪ್ಪಿಕೊಳ್ಳಲಿಲ್ಲ. ಅಥವಾ ಪ್ರೇಮದ ವೇದನೆಯನ್ನು ಅನುಭವಿಸಲಿಲ್ಲ ಅರ್ಥಾತ್ "ಆರೀಫ್"ನಾಗಲಿಲ್ಲ.

ಆರೀಫನು ಅವನಾಗಿದ್ದಾನೆ. (ಯಾವನು ಸತ್ಯದ ಅನ್ವೇಷಕನಾಗಿದ್ದಾನೆ) ಯಾವನು ನಾನು ಯಾರಿಹನು? ಹಾಗೂ ಈ ಜೀವಿಗಳು ಏನಾಗಿವೆ? ಹಾಗೂ ಜೀವಿಗಳ

• ಸಯ್ಯದ್ ಅಥವಾ ಸಾದಾತ್ – ಪ್ರವಾದಿಯ ನೇರ ಅಥವಾ ಪರೋಕ್ಷ ವಂಶಜರು.

ಸೃಷ್ಟಿಕರ್ತನು ಹೇಗಿಹನು? ಈ ಎಲ್ಲಾ ವಿಷಯುಗಳನ್ನು ಸರಿಯಾಗಿ ಅರಿತಿರುವವನಾಗಿರಬೇಕು. ಇವೆಲ್ಲದರ ಸಾರಾಂಶವನ್ನು ಕೇಳಬಯಸುವುದಾದರೆ, ಮುಸಲ್ಮಾನನು ಅವನಾಗಿದ್ದಾನೆ ಯಾವನ ಉದ್ದೇಶವು ಸಮಸ್ತ ಜೀವಿಗಳ ಬಾಧ್ಯತೆಯಲ್ಲಿ ಹಿತವನ್ನು ಬಯುಸುವುದಾಗಿದೆ. ದುರದ್ದೇಶದ ಪ್ರಸಂಗದಲ್ಲೂ ಹಿತಚಿಂತಕನಾಗಿರುವವನು.

ಹೀಗಾಗಿ ಉದ್ದೇಶವು ಕರ್ಮಕ್ಕಿಂತಲೂ ಶ್ರೇಷ್ಠವಾಗಿದೆ. ಕರ್ಮದಲ್ಲಿ ಪ್ರಮಾದವಾದರೆ.. ಅದನ್ನು ಸರಿಪಡಿಸುವ ಆಶಾಭಾವವಿರುತ್ತದೆ. ಆದರೆ ಉದ್ದೇಶದಲ್ಲಿ ಕೆಡಕಿದ್ದರೆ, ಸಮಸ್ತ ಕಾರ್ಯವು ಕೈಯಿಂದ ಜಾರಿಹೋದಂತೆ.

ಒಳ್ಳೆಯ ಉದ್ದೇಶವು, ಕರ್ಮಕ್ಕಿಂತಲೂ ಶ್ರೇಷ್ಠವಾಗಿದೆ, ಹಾಗೂ ಕರ್ಮವೇ ತೊಡಕಿನ ಬುನಾದಿಯಾಗಿದೆ. ಅರ್ಥಾತ್ ಉದ್ದೇಶವು ತೊಡಕಿನಿಂದ ಮುಕ್ತವಾಗಿದೆ. ಹೀಗಾಗಿ ಕರ್ಮದ ತಲೆಯ ಮೇಲೆ ಮಣ್ಣೆರಚಿ ಬಿಡು.

ಆಭರಣ–೧೫೬

ದೀವಾನೆ ಹಾಫೀಜ್‌ನ ಕೆಲವು ಪಾರಿಭಾಷಿಕ ಶಬ್ದಾರ್ಥಗಳು

ದರ್ವೇಶನೊಬ್ಬನು ಈ ವ್ಯಾಕುಲ ಹೃದಯ ಹುಚ್ಚನನು ಕೇಳಿದನು. ಅದೇನೆಂದರೆ ಹಜ್ರತ್ ಹಾಫೀಜ್‌ರವರು ಏಕತ್ವ ಸತ್ಯದ ಮದಿರಾಶಾಲೆಯಾಗಿರುವ ತಮ್ಮ ಕಾವ್ಯಗ್ರಂಥದಲ್ಲಿ, ಎಲ್ಲಾ ಕಡೆ ಮದಿರೆ ಹಾಗೂ ಪ್ರಿಯತಮೆಯ ಉಲ್ಲೇಖ ಮಾಡಿರುತ್ತಾರೆ. ಇದೇನಿದು? ಹಾಗೂ ವಾಸ್ತವಿಕವಾಗಿ ಶರಾಬಿನ ಭಾವಾರ್ಥವೇನು? ನಾನು ನುಡಿದೆ ಪ್ರತಿಯೊಬ್ಬ ಮಹಾನುಭಾವರು ತಮ್ಮ ಪ್ರೇಮದ ಯೋಗ್ಯತೆಯ ಅನುಸಾರ ವಿಭಿನ್ನ ವಿಧಾನಗಳಿಂದ ಪ್ರತೀಕಾತ್ಮಕ ಅರ್ಥಗಳನ್ನು ನಿರ್ಧರಿಸಿಕೊಂಡಿರುತ್ತಾರೆ. ಅಧ್ಯಯನದಿಂದ ಸಾಮಾನ್ಯವಾಗಿ ಅರ್ಥವಾಗುವುದೇನೆಂದರೆ, ಪ್ರೇಮ ಹಾಗೂ ಮ್ವಾರಿಫತ್‌ನ ಮದಿರೆಯ ತಾತ್ಪರ್ಯವು ಮಹಾಮಹಿಮ, ಶ್ರೇಷ್ಠಾತಿ ಶ್ರೇಷ್ಠ ದೇವನಾಗಿದ್ದಾನೆ. ಮದಿರೆಯ ಮಾರಾಟವೆಂದರೆ ಸತ್ಯದ ಮುರ್ಷದ್, ಮದ್ಯದ ಹೂಜಿ ಎಂದರೆ ಮುರ್ಷದನ ಪವಿತ್ರ ಎದೆ, ಮದಿರೆಶಾಲೆ ಎಂದರೆ ಮುರ್ಷದ್‌ನ ಆಸ್ಥಾನ ಹಾಗೂ ಮದ್ಯ ಬಟ್ಟಲು ಎಂದರೆ ಕರ್ಮಾಚರಣೆ, (ತರೀಖತ್) ಆಕಾಂಕ್ಷಿಯ ಹೃದಯ.

ಮುರ್ಷದನಿಗೆ ಮದಿರೆ ಮಾರಾಟಗಾರ ಅಥವಾ ಸಾಕಿ ಎಂದು ಈ ಅರ್ಥದಲ್ಲಿ ಕರೆಯಲಾಗುತ್ತವೆ. ಅವನು ಆಕಾಂಕ್ಷಿಗೆ ಒಂದು 'ರಹಸ್ಯ'ದಲ್ಲಿ ಪ್ರಮತ್ತಗೊಳಿಸಿ,

ಅಮಲೇರಿದ ಸ್ಥಿತಿಗೆ ಒಯ್ಯುತ್ತಾನೆ. ಟೀಕಾಕಾರರ ಟೀಕೆಗೆ ಮೌನವಹಿಸುವ ಸ್ಥಿತಿಗೆ ತಲುಪಿಸುತ್ತಾನೆ. ಮತ್ತೇ ಹೃದಯಹೀನ, ಅನಾಗರೀಕ ಹಾಗೂ ಅಯೋಗ್ಯ ಹೃದಯದಲ್ಲಿ ಈ ಯೋಚನೆಯು ಬರುತ್ತದೆ. ಮದಿರೆಯೆಂದರೆ ಪರವಶತೆಯ ಸ್ಥಿತಿಯಾಗಬಹುದು. ಇದೇ ಕಾರಣದಿಂದ ಪರವಶರಾದ ದರ್ವೇಶರು ಸತ್ಯದ ಪ್ರಾಪ್ತಿ ಇವರದೇ ಸ್ವತ್ತಾಗಿದ್ದು, ಪರವಶತೆಯನ್ನು ಅತಿ ಆತ್ಮೀಯ ಭಾವಿಸುತ್ತಾರೆ. ಬದಲಾಗಿ ಸೃಷ್ಟಿ ರಚನಾಕಾರನ ನೈಜ ಮನೋಸ್ಥಿತಿ ಎಂದು ಭಾವಿಸುತ್ತಾರೆ.

ಪರವಶತೆಯ ಶರಾಬು ಖಂಡಿತಾ ಅದಲ್ಲ ಹೇ ಗೆಳೆಯ!
ಯಾವದನು ಕುಡಿದು ಮನುಜನು ಆಗುವನು ಮೃಗಗಿಂತಲೂ ಕೆಡಕು.

ಗೆಳೆಯನ ಗೌರವದ ಕಾಳಜಿಯಿದ್ದರೆ, ಕುಡಿಯ ಬೇಡ ನೀನು,
ಈ ಬಿಳಿ-ಕೆಂಪು ದ್ರವವನೇ, ಭಾಂಗ್ ಹಾಗೂ ಶರಾಬ್ ಎನ್ನುವರು.

ಇದರಿಂದ ನೈಜವಾಗಿ ಸೂಚಿತವಾಗುವುದೆಂದರೆ, ಸ್ತೋತ್ರಗಳು, ಸ್ಮರಣೆಗಳು ಮತ್ತು ಕಾಲ್ಪನಿಕತೆಗಳಿಂದ ನಿರೀಕ್ಷಿತ ಪರವಶತೆಯು ಇದರ ಹೊರತು ಉತ್ಪತ್ತಿಯಾಗುವುದಿಲ್ಲ. ಹೀಗಾಗಿ ಯಾವನಾದರೂ ಕೆಟ್ಟ ಪಾನೀಯ ಕುಡಿದರೆ, ಅವನು ಸಂಪೂರ್ಣ ಪ್ರಜ್ಞಾಹೀನನಾಗುತ್ತಾನೆ. ಅವನೂ ಜೀವದ ಜತೆ ಇರುವುದಿಲ್ಲ, ಜೀವವೂ ಅವನ ಜತೆ ಇರುವುದಿಲ್ಲ. ಕುಡಿಯವವ ಬಹುಶಃ ಸದರಿ ನಶೆಯಿಂದ ಉನ್ನತ ಸಾಕ್ಷಕ್ಕೆ ಯಾವುದು ಸಮಸ್ತ ಸಾಕ್ಷ್ಯಗಳ ಬೇರಾಗಿದೆ. ಅಲ್ಲಿಗೆ ಪರವಶನಾಗಿ ತಲುಪುತ್ತಾನೆ. ಈ ಪರವಶತೆಯು ವಸ್ತುತಃ ಲೌಕಿಕವಾಗಿದೆ. ಆದರೆ ಅಲೌಕಿಕ ಪರವಶತೆಯ ಪದರಾಗಿದೆ. ಬಹುತೇಕ ಅದು ಈ ರೀತಿಯಾಗಿಯೇ ಇದೆ. ಯಾಕೆಂದರೆ ಹಲವು "ಏಕತ್ವ'ದ ಮೈದಾನಿನ ಅಶ್ವಾರೋಹಿಗಳು ಬೇಕಂತಲೇ ಖಾನಖಾಗಳಿಂದ ಮದಿರಾಲಯಗಳಿಗೆ ಮುಖ ತಿರುಗಿಸಿದರು ಹಾಗೂ ನಿಂದನೆ ಮತ್ತು ಅಪಮಾನದ ಮಾರ್ಗವನ್ನು ಹಿಡಿದರು, ಇದೇ ಪರವಶತೆಯ ಅನ್ವೇಷಣೆಯ ಉದ್ದೇಶ ಹೊಂದದೇ ಇದ್ದರೆ ಶರಾಬು ಹಾಗೂ ಮಧ್ಯಪಾನಿಗಳ ಮೇಲೆ ಅಭಿಶಾಪವಾಗಲಿ.

ಪರವಶತೆಗೆ ಉಂಟಾಗುವುದಿಲ್ಲ ಮದಿರೆಯ ಹೊರತು,
ಇದು ಪೂರ್ವವಾಗಿದೆ ಹಾಗೂ ಅದಾಗಿದೆ ಸೂರ್ಯ.

ಮದಿರೆಯು ಕೇವಲ ಮಾರುವ ಹಣ್ಣಿನ ರಸವಲ್ಲ,
ಇದರ ಅರ್ಹನು ಪ್ರತಿ ಸಾಮಾನ್ಯ ಬಲ್ಲಿದನಲ್ಲ.

ಇದು ಅದಾಗಿದೆ, ಯಾವುದು ಮುರ್ಷದನ ತಾಣವಾಗಿದೆ,
ಆದರೂ ಇದರ ಮಾಪನವು ಮುರ್ಷದ್‌ನೇ ಆಗಿಹನು.

ಇವನು ಅದೇ, ಯಾವನು ಮದಿರೆ ಮಾರಾಟಗಾರನ ಸದೃಶ,
ಕಿತ್ತುಕೊಳ್ಳುವುದು ಇದು ಜಾಗೃತೆ! ಒಂದು ಕ್ಷಣ ಪ್ರಜ್ಞೆಯನು ನಿನ್ನ.

ಮನ್ಸೂರನಂತೆ ಇವನನ್ನು ತಲುಪಿಸಿ ಹೊರಲೋಕಕೆ,
ಯಾಕೆಂದರೆ ನನ್ನಂತಹವರು ಇಹರು ಲೋಕದಲಿ ಸಾವಿರ.

ಇದರಿಂದ ಸಿಗಬಹುದು ನಿನಗೆ ಪರವಶತೆಯು ಹೇ ಹೃದಯವೇ,
ಇದು ನಮಾಜಾಗಿದೆ, ಇದರ ಪ್ರಾಪ್ತವು ಆಗಿಹುದು ಪರವಶತೆ.

ಈ ಶರಾಬ್ 'ಏಕತ್ವ'ದ ಪರವಶತೆ ಆಗಿಹುದು ನೀ ಅರಿ,
ಇದು ಮುಳ್ಳು ಹಾಗೂ ಲಾಮಂಚದ ಸಮೃದ್ಧ ಅಗ್ಗಿಷ್ಟಿಗೆಯಾಗಿದೆ.

ಪರವಶರಿಗೆ ಪರವಶತೆಯು ಆಗಿಹುದು ದೈವೀಕೋಶ,
ಬಹುತ್ವ ಹಾಗೂ 'ಏಕತ್ವ'ಗಳು ಅಡಗಿಹವು ಇಲ್ಲಿಯೇ.

ಪರವಶತೆಯು ಏನು? ಅದು ಏಕತ್ವದ ಪರಾಕಾಷ್ಠೆ ನಿಜಾರ್ಥದಲಿ,
ಅದು ಏಕತ್ವ ಹಾಗೂ ಸಹಭಾಗಿವಿರಹಿತ ಸೌಂದರ್ಯವಾಗಿಹುದು.

ಪರವಶತೆಯು ಆಗಿಹುದು ಪವಿತ್ರ ಪ್ರಕಾಶದ ಪ್ರಕಟರೂಪ,
ಶರೀರದ ಶಿರದ ಮೇಲೆ ಬೀಳುವುದು ಧೂಳು.

ಹೃದಯವೂ ಜೀವವೂ ಇಲ್ಲದ ಸ್ಥಳದಲಿ ಏಕೆ ಹೃದಯದ ಪ್ರಸ್ತಾಪ,
ಇಲ್ಲಿ ಇಲ್ಲ ಒಂದಕೆ ಸ್ಥಾನ, ಎರಡರ ಏಕೆ ಪ್ರಸ್ತಾಪ.

ಎಷ್ಟು ಸೂಕ್ಷ್ಮವಾಗಿಹುದು ಏಕತ್ವದ ಸ್ಥಾನ ವಿಶೇಷವು,
ಪ್ರಕಾಶವಂತೂ ಇವೆ, ಆದರೆ ಎಲ್ಲಿಯೂ ದೀಪದ ಹೆಸರಿಲ್ಲ.

ಸೌಭಾಗ್ಯವನು ದಯಪಾಲಿಸಿಹನು ಯಾರೋ ನೋಟವುಳ್ಳವನು,
ಇದರಿಂದ ದೊರೆತಿರುವುದು 'ಬಹರಿ'ಗೆ ಪರವಶತೆಯ ಮಾರ್ಗ.

ಆಭರಣ–೧೫೭

'ಔಲಿಯಾ' (ಸೂಫಿ ಸಂತ)ರ ಪವಾಡಗಳು

ಸೂಫಿ ಸಂತನು (ವಲಿ) ಪವಾಡದ ಕಡೆ ವಾಲಿದ್ದರೆ, ವಾಸ್ತವಿಕವಾಗಿ ಅವನು ಚಮತ್ಕಾರಿ ವ್ಯಕ್ತಿ ಅಥವಾ ಜಾದೂಗರ್‌ನಾಗಿರುವವನು. ಯಾಕೆಂದರೆ ವಿಲಾಯತ್‌ನ ಬಣ್ಣ ದಯಾಮಯವಾಗಿದೆ ಹಾಗೂ ಪವಾಡದಲ್ಲಿ ಶೈತಾನಿನ ವಾಸನೆ ಬರುತ್ತದೆ.

ಹೇ ಆತ್ಮೀಯನೇ! ಪವಾಡವು ಸಂತತ್ವದ ವಿರುದ್ಧ ಶಬ್ದವಾಗಿದೆ. ಹೀಗಾಗಿ ಸ್ಪಷ್ಟವಾಗುವುದೇನೆಂದರೆ ಎರಡು ವಿರುದ್ಧ ಒಂದೇ ಕಡೆ ಸೇರಲಾರವು. ಯಾವ ರೀತಿ ಹಗಲು-ರಾತ್ರಿ, ಸುಖ-ದುಃಖ ಏಕಕಾಲಕ್ಕೆ ಒಂದಡೆ ಇರುವುದಿಲ್ಲ. ಯಾರಾದರೂ ಈ ಮುಂಚಿನ ಔಲಿಯಾಗಳಿಂದ ಪವಾಡಗಳು ಹಾಗೂ ಅತೀಂದ್ರಿಯ ಘಟನೆಗಳು ಪ್ರಕಟವಾಗಿವೆ ಎಂದು ಹೇಳಿದರೆ ಈ ಫಕೀರನು ಹೇಳುತ್ತಾನೆ. "ಖಂಡಿತವಾಗಿ ಹೀಗೆ ಆಗದೇ ಇರಬಹುದು" ಎಂದು. ಅಕಸ್ಮಾತ್ ಆದದ್ದೆ ಆದರೆ ಬಹುಶಃ ಹೀಗೆ ಆಗಿರಬಹುದು. ಅದೇನೆಂದರೆ ಯಾವನೇ ಧನಿಕನು ಯಾವನೇ ವಲಿಯ ಜೊತೆ ದುರ್ವ್ಯವಹಾರ ಮಾಡಿರಬೇಕು. ಹಾಗೂ ಅದೇ ಸಮಯಕ್ಕೆ ಅವನ ಕುದುರೆಯ ಆಯುಷ್ಯವು ಪರಿಪೂರ್ಣವಾಗಿರಬೇಕು. ಹೀಗಾಗಿ ಅಕಸ್ಮಾತ್ತಾಗಿ, ಅರಿವಿಲ್ಲದೆ ಆ ದಿನವೇ ಆ ಕುದುರೆ ಸತ್ತಿರಬೇಕು. ಇದರಿಂದ ಜನರು ಈ ಊಹೆಯನ್ನು ಮಾಡಿರಬೇಕು. ಅದೇನೆಂದರೆ ಇದು ಇಂತಹ ವಲಿಯ ಪವಾಡವಾಗಿದೆ. ಆದರೆ ವಾಸ್ತವವಾಗಿ 'ವಲಿ' ಈ ರೀತಿಯ ಪವಾಡಗಳಿಂದ ಬೇಜಾರಾಗುತ್ತಾನೆ. ಯಾಕೆಂದರೆ ಯಾವನೇ ವಲಿಯು, ಯಾರಿಗೂ ಅಭಿಶಾಪ ನೀಡುವುದಿಲ್ಲ. ಹಾಗೆ ಮಾಡಿದರೆ, ಅವನಲ್ಲಿ ಹಾಗೂ ಸಾಮಾನ್ಯ ಮನುಷ್ಯನ ಮಧ್ಯೆ ವ್ಯತ್ಯಾಸವೇನು? ಜನಸಾಮಾನ್ಯರಲ್ಲಿ ತಾಳ್ಮೆರಹಿತತೆ ಹಾಗೂ ಕೆಡಕಿನ ಅಭಿಲಾಷೆ ಸಾಮಾನ್ಯ ಮಾತಾಗಿದೆ. ಆದರೆ 'ವಲಿ'ಯು ತಾಳ್ಮೆ ಹಾಗೂ ಸಹೆನಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿರುತ್ತಾನೆ. ಕೆಳಗಿನ "ಖತಾ" ದಖ್ಖನಿನ ಪುಂಡರ ಭಾಷೆಯಲ್ಲಿ ಬರೆಯಲಾಗಿದೆ.

ಯಾರಾದರೂ ಉಗಿದರೆ ಕೊರಳು ಸ್ತಬ್ದವಾಗುತ್ತದೆ.
ಇಂದಿಗೂ ಮಲದಲ್ಲಿ ಆ ಪವಾಡವು ಇದೆ.

ಹಾಗೂ ಸಲಾಂ ಮಾಡುವುದರಿಂದ ಗುಣಮುಖವಾಗುವುದಾದರೆ,
ಒಂದೇ ಶ್ವಾಸದಲ್ಲಿ ಎಲ್ಲಾ ಕೆಡಕುಗಳು ನಿರ್ನಾಮವು.

ಓಡು ಹೇ ಪವಾಡದ ಆಕಾಂಕ್ಷಿಯೆ ಸತತ ಓಡು,
'ಊಸು' ಆಗು, ನಿನಗೆ 'ಮಲ'ದ ಬಗ್ಗೆ ಭಕ್ತಿ ಇದ್ದರೆ.

ಇದು ನಿನ್ನ ಪವಾಡವಾಗಿದೆ ನಿಶ್ಚಿತ ಹೇ 'ಬಹರಿ',
ಅದೇನೆಂದರೆ ನಿನಗೆ ಪವಾಡದಿಂದ ದ್ವೇಷವಿದೆ.

ಆಭರಣ–೧೫೮

ಬ್ರಹ್ಮಾಂಡ ಹಾಗೂ 'ಆದಂ'ರು ಪ್ರಕಾಶಿತರಾಗಿರುವ ಎರಡು ರತ್ನಗಳ ವ್ಯಾಖ್ಯಾನ

'ಬಾಲಾಯೇ ನ ಸಿಪ್‌ಹರ್ ದೋ ಗೋಹರ್ ಮದೂರ್ ಅಂದ್,
ಗಜ್ ನೂರ್ ಶಾಂ ಆಲಂ ವೋ ಆದಂ ಮನವ್ವಲ್ ಅಂದ್*

[ಅರ್ಥಾತ್ ಒಂಬತ್ತು ಆಕಾಶಗಳ ಮೇಲೆ ಎರಡು ಗುಂಡಾದ ರತ್ನಗಿವೆ ಅವುಗಳ ಜ್ಯೋತಿಯಿಂದ ಬ್ರಹ್ಮಾಂಡ ಹಾಗೂ ಆದಂರು ಪ್ರಕಾಶಿತರಾಗಿದ್ದಾರೆ]

[ಈ ಕವನದ ಸಾಲಿನ ಕವಿಯು ಹಕೀಂ ನಾಸೀರ್ ಖುಸ್ರೂ ಆಗಿದ್ದಾರೆ, ಹಕೀಂ ನಾಸೀರ್ ಖುಸ್ರೂ ಅವರು ಬಿನ್ ಹಾರಿಸ್‌ರ ಬಾಹ್ಯವಾದದಿಂದ ಸಂಬಂಧ ಹೊಂದಿದವರಾಗಿದ್ದರು. ತಮ್ಮ ಧಾರ್ಮಿಕ ನಂಬಿಕೆಯ ಕಾರಣದಿಂದ ಹೆದರಿ ತಲೆಮರಿಸಿಕೊಂಡಿದ್ದರು. ಇವರ ನಿಧನವು ಹಿ.ಶ. ೪೮೧ರಲ್ಲಿ 'ಬದಖಶಾಂ'ನಲ್ಲಿ ಆಯಿತು.]

ಅರ್ಥಹೀನತೆಯನ್ನು ಮೆಚ್ಚುವ ಈ ಅಸಹಾಯಕನ ಮತವೇನೆಂದರೆ ಒಂಬತ್ತು ಆಕಾಶಗಳ ಸಂಜ್ಞೆಯು ಮನುಷ್ಯನ ಅಸ್ತಿತ್ವದ ಕಡೆ ಇದೆ. ಆದುದರಿಂದ ಮಹಾಮಹಿಮ ತೇಜೋಮಯನು ಪ್ರತಿಯೊಂದು ಸೃಷ್ಟಿಯನ್ನು ನಾಲ್ಕು ಮೂಲಭೂತಗಳಿಂದ ರೂಪಧಾರಣೆ ಮಾಡಿಸಿ ಹುಟ್ಟಿಸಿದನು. "ಬ ಹುಕುಂ ಆಲಾ ತಸ್‌ಅತಾ ಅಬತನ್" (ಒಂಬತ್ತು ಪದರುಗಳ ಅಥವಾ ತೆರೆಗಳಲ್ಲಿ) ತೆರೆತೆರೆಯಾಗಿ ಒಂಬತ್ತು ತೆರೆಗಳನ್ನು ನಿರ್ಮಿಸಲಾಯಿತು. ಇನ್ನೂ ಅಧಿಕವಾಗಿ ಕೇಳುವುದಾದರೆ ಶರೀರದಿಂದ ಪರಂಸತ್ತೆಯವರೆಗೆ ಎಪ್ಪತ್ತು ಸಾವಿರ ತೆರೆಗಳಿವೆ. ಅವುಗಳಲ್ಲಿ ಹಲವು ಪ್ರಕಾಶವಾಗಿವೆ. ಇನ್ನೂ ಕೆಲವು ಕ್ರೌರ್ಯಮಯವಾಗಿವೆ. ಇವು ಅಂಗದಿಂದ ಅಂಗದವರೆಗೆ ಆಕಾಶದಂತೆ ಪದರಿನಿಂದ ಪದರಾಗಿ ವ್ಯಾಪಿಸಿದೆ. ಕಾಲ ಹೆಬ್ಬರಳಿನಿಂದ ತಲೆಯವರೆಗೆ ಒಂಬತ್ತು ಕೊಂಡಿಗಳಿವೆ. ಅದರ ವಿವರಣೆ ಹೀಗದೆ, ಕಾಲಿನ ಹೆಬ್ಬರಳಿನ ಮೂರು ಕೊಂಡಿಗಳು, ನಾಲ್ಕನೆಯದು ಪಾದಕೀಲು, ಐದನೆಯದು ಮೀನಖಂಡ, ಆರನೆಯದು ತೊಡೆಯ ಕೊಂಡಿ, ಏಳನೆಯದು ಎದೆಯ ಹಂದರ, ಎಂಟನೆಯದು ಕುತ್ತಿಗೆ, ಒಂಬತ್ತನೆಯದು ತಲೆ. ಹೀಗಾಗಿ ಮನುಷ್ಯನು ಸೃಷ್ಟಿಯ ನಾಲ್ಕು ಮೂಲಭೂತಗಳಿಂದ ಹಾಗೂ ಐದು ಇಂದ್ರಿಯಗಳಿಂದ ಆಗಿ, ಇವು ಒಂಬತ್ತು ಆಗಿದೆ. ಎರಡು ರತ್ನಗಳೆಂದರೆ ವಿವೇಕ ಮತ್ತು ಅಂತರ್ದೃಷ್ಟಿ, ಇವು ಸಮಸ್ತ ಸೃಷ್ಟಿಯ ಪ್ರಾಪ್ತಸಾರವಾಗಿದೆ. ನಿಸ್ಸಂದೇಹವಾಗಿ ಇವೆರಡು ಬ್ರಹ್ಮಾಂಡ ಹಾಗೂ 'ಆದಂ'ರನ್ನು ಪ್ರಕಾಶಮಯಗೊಳಿಸುತ್ತಾ ಇವೆ. ಅಗೋಚರ

ಹಾಗೂ ಸಾಕ್ಷ್ಯಲೋಕಗಳಲ್ಲಿ ಈ ಎರಡು ರತ್ನಗಳು ಯಾವುದೇ ವಸ್ತುವಿಗೆ ಅರಿವಿದೆಯೆಂದು ಅಥವಾ ಉಪಸ್ಥಿತ ಇರುವುದೆಂದು ಹೇಳಲಾಗುವುದಿಲ್ಲ. ಬದಲಾಗಿ ಇವು ಯಾವುದು ನಾನಾ ತರಹದ ರೂಪಾಕೃತಿಗಳಲ್ಲಿ ಮೂಡಿಬಂದಿವೆಯೋ, ಅದಕ್ಕೆ ಅನುರೂಪವಾಗಿ ನಾಮವಿಶೇಷಗಳನ್ನು ಪಡೆದುಕೊಂಡಿದೆ. ಸತ್ಯನಿಷ್ಠವಾಗಿ ವಸ್ತುತಃ ಎರಡೂ ಒಂದೇ ಆಗಿವೆ. ಆದರೆ ಹೆಸರು ಮಾತ್ರ ಬೇರೆ ಬೇರೆಯಾಗಿದೆ. ಅನ್ವೇಷಕನು ಅಕಸ್ಮಾತ್ ವಿವೇಕದ ಜಿಜ್ಞಾಸೆಯಿಂದು ಹುಡುಕಿದರೆ ಅವನು ಅಂತರ್ದೃಷ್ಟಿಯ ವೀಕ್ಷಣೆ ಮಾಡುವನು. ಅವನು ಅಂತರ್ದೃಷ್ಟಿಯ ಕಡೆ ಮುಖಮಾಡಿದರೆ ವಿವೇಕದ ದರ್ಶನವಾಗುತ್ತದೆ.

ವಿವೇಕ ಮತ್ತು ಅಂತರ್ದೃಷ್ಟಿ ಭೂಮಿಯ ಮಾಣಿಕ್ಯಗಳು,
ಹೊರಗೂ ಒಳಗೂ ಇಹುದು, ಇದರದೆ ಚಮತ್ಕಾರವು.

ಇರುವುದು ಒಂದೆಡೆ ಗುಲಾಮಗಿರಿ, ಇನ್ನೊಂದೆಡೆ ಸಾಮ್ರಾಜ್ಯಶಾಹಿ,
ಒಂದು ಕಡೆ ಇರುವುದು ನೀರು, ಇನ್ನೊಂದೆಡೆ ಬೆಳದಿಂಗಳು.

ಕೆಲವೊಮ್ಮೆ ಅದು ಸೂರ್ಯನು, ಮತ್ತೊಮ್ಮೆ ಇವನು ಹಗಲಿನಂತಿಹನು,
ಕೆಲಮೊಮ್ಮೆ ಇದು ಅಗ್ನಿಯಾದರೆ, ಅದು ಆಗಿಹುದು ಉರಿ.

ಅರ್ಥಾತ್ ಇವೆರಡು ಒಂದೇ ಆಗಿವೆ, ಹೇ ಗೆಳೆಯನೇ,
ಅವೆರಡು ಒಂದಾದರೆ ತಿರುಳು ಇಲ್ಲ, ಸಿಪ್ಪೆಯೂ ಇಲ್ಲ.

ಇಹವು, ಇಲ್ಲವು ಹಾಗೂ ವ್ಯಕ್ತವೂ, ಅವ್ಯಕ್ತವೂ,
ಯಾವ ರೀತಿ ಪವಿತ್ರ ಸತ್ತೆಯು, ಅಣುವು ಅಲ್ಲ, ಜೀವವೂ ಅಲ್ಲ.

ಯಾರಿಗೆ ದೈವೀಜ್ಞಾನದಲ್ಲಿ ಪಾಲು ಸಿಕ್ಕಿದೆ, ಅವರು ಇದನ್ನು ಚೆನ್ನಾಗಿ ಅರಿಯುತ್ತಾರೆ. ಇವೆರಡು ಬಹುಮುಖ್ಯ ರತ್ನಗಳು. ಯಾವವು ಅಂಗಾಂಗಗಳ ಒಡೆಯ ಆಗಿಹೆವೋ ಹಾಗೂ ಅಸ್ತಿತ್ವದ ಪ್ರಭುತ್ವವಾಗಿಹೇ. ಇದು ಪ್ರತಿ ಅಸ್ತಿತ್ವದ ಜೊತೆ ಉಪಸ್ಥಿತವಿದೆ. ಯಾವುದೇ ಪದಾರ್ಥದ ಶರೀರವಿಲ್ಲದಿದ್ದರೆ. ಇದಕ್ಕೆ ಹೆಸರಿರುವುದಿಲ್ಲ. 'ನಾಸ್ತಿ'ಯು ಇರುವುದಾದರೆ ಅದರ ಹೆಸರು ಯಾರದಿದೆ. ಅಸ್ತಿತ್ವರಹಿತತೆಯು ಸ್ಥಿತಿಯಾಗಿದೆ. ಇದಕ್ಕಾಗಿ 'ನಾಸ್ತಿ' ಎನ್ನಲಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಇವೆರಡು ದೈವೀಲಾಲಿತ್ಯದ ರತ್ನಗಳಾಗಿವೆ. ಇದು ಭೌತಿಕ ಶರೀರವನ್ನು ಹೊಂದಿರುವುದಿಲ್ಲ. ಹೀಗಾಗಿ ಸ್ಪರ್ಶದ ಪರಿಧಿಯೊಳಗೆ ಬರುವುದಿಲ್ಲ ಅಥವಾ ಇದನ್ನು ಯಾರೂ ಭೌತಿಕವಾಗಿ ನೋಡಲಾಗುವುದಿಲ್ಲ. ಅಥವಾ ಇತರರನ್ನು ತೋರಿಸಲಾಗುವುದಿಲ್ಲ. ಯಾಕೆಂದರೆ ಅಸ್ತಿತ್ವದಲ್ಲಿ ಅಗೋಚರವಾಗಿದ್ದು, ಹಾಗೂ ಪ್ರಭಾವದಲಿ ಪ್ರಕಟರೂಪವಾಗಿದೆ. ಈ

ರೀತಿಯಾಗಿ ಅವ್ಯಕ್ತವೂ ಆಗಿವೆ. ವಾಸ್ತವವಾಗಿ ಎರಡು ವಿರುದ್ಧ ಅಸ್ತಿತ್ವಗಳು ಏಕಕಾಲಕ್ಕೆ ಒಂದೇ ಕಡೆ ಸೇರುವುದಿಲ್ಲ. ಆದರೆ ಅಲ್ಲಾಹುವಿನ ಅಸ್ತಿತ್ವದ ಸೂಕ್ಷ್ಮತೆಯಿಂದಾಗಿ ಇದಕ್ಕೆ ಶರೀರವೆಂದು ಕರೆಯಲಾಗುವುದಿಲ್ಲ, ಅಣುವೆಂದು ಕರೆಯಲಾಗುವುದಿಲ್ಲ.

ಇದು 'ಗುರು'ವು ಅಲ್ಲ, ಶುಕ್ರ, ಮಂಗಳವೂ ಅಲ್ಲ, ಶನಿಯೂ ಅಲ್ಲ,
ಇದು ಚಂದ್ರನೂ ಅಲ್ಲ, ನಿಶ್ಚಿತವಾಗಿ ಸೂರ್ಯನೂ ಅಲ್ಲ.

ನಿಸ್ಸಂದೇಹವಾಗಿ ಇವ್ಯಾವುಗಳು ಇದು ಅಲ್ಲ. ಅಕಸ್ಮಾತ್ ಇವುಗಳಿಂದ ಇದರ ಸಂಬಂಧ ಇರುತ್ತಿದ್ದರೆ ಇವುಗಳ ಸಂಬಂಧವು ಉತ್ತಮ ಹಾಗೂ ಅಪಶಕುನ ಇವುಗಳಿಂದ ಸಂಬಂಧಿತವಾಗಿರುತ್ತಿತ್ತು ಹಾಗೂ ಉನ್ನತಿ ಹಾಗೂ ಅವನತಿಗಳಿಂದಾಗುತ್ತಿತ್ತು. ಆದರೆ ಇದು ಇವುಗಳಿಂದ ಮುಕ್ತವಾಗಿದೆ.

"ಪರ್‌ವರ್‌ದಿಗಾನೆ ದಾಯ ಖುದ್ದಸ್ ಅಂದೂರ್ ಅಜಲ್,
ಆಂಜಾ ಪರಿಶ್ತಾ ದಾರ್ ವರ್ ಏಜಾ ಪಯಂಬರ್ ಅಂದ್"

ಆದಿಯಿಂದ ಬೆಳೆಯುತಿಹವು ಇವು ದೇವರ ಮಡಿಲಲ್ಲಿ.
ಇವರು ಜ್ಞಾನದ ಭಂಡಾರವಾಗಿದ್ದರು ಪ್ರಕಟರೂಪದಲಿ ಪೈಗಂಬರರು*

ಪರಮಜ್ಞಾನಿಯಾದ ಸರ್ವಸ್ವನು ಮೊದಲು ಅಂತರ್ದೃಷ್ಟಿಯ ಪ್ರತಿರೂಪವಾದ ವಿವೇಕವನ್ನು ಮೊಟ್ಟ ಮೊದಲು ಹುಟ್ಟಿಸಿದನೆಂದು ಹೇಳಲಾಗುತ್ತದೆ. ಎಪ್ಪತ್ತು ಸಾವಿರ ವರ್ಷಗಳವರೆಗೆ ತನ್ನ ನೋಟದಿಂದ ಪೋಷಣೆ ಹಾಗೂ ಪಾಲಕತ್ವವನ್ನು ದಯಪಾಲಿಸಿದನು. ಆದುದರಿಂದ ಪವಿತ್ರ ದಾದಿಯೆದು ಈ ಅರ್ಥದಲ್ಲಿಯೇ ನುಡಿಯಲಾಗಿದೆ. ಮತ್ತೆ ಈ ಎರಡು ರತ್ನಗಳನ್ನು ಆತ್ಮದ ಅಸ್ತಿತ್ವದ ವಶಕ್ಕೆ ನೀಡಲಾಯಿತು. ಇದರ ಹೊರಪೋಷಾಕು (ಸಿಪ್ಪೆ) ಈ ಭೌತಿಕ ದೇಹವಾಗಿದೆ. ಇವೆರಡು ಸಿಪ್ಪೆಯ ಹೊರತಾಗಿ ಎರಡು ತಿರುಳುಗಳಾಗಿಯೂ ವ್ಯರ್ಥ, ಇದನ್ನೇ ಹೀಗೆ ನುಡಿಯಲಾಗಿದೆ. 'ಪೋಸ್ತ್ ರಾಪಾ ಯೇ ಮೊಗಜ್ ಅಸ್ತ್ ದ ಗರ್ ನ ಮಾಲೂಮ್"

(ಸಿಪ್ಪೆಯು ತಿರುಳುನಿಂದಾಗಿಯೇ ಮಹತ್ವವನ್ನು ಪಡೆದು ಕೊಂಡಿದೆ. ಇಲ್ಲವಾದರೆ ಇದರ ಮಹತ್ವವೇನು)

ಇನ್ನೊಂದು ಸಾಲು "ಆಂಜಾ ಫರಿಶ್ತಾ ವಾರದ್‌ರ್ ಅಯಿಂಜಾ ಪಯಂಬರ್ ಅಂದ್" ಅರ್ಥಾತ್ ಅಲ್ಲಿ ದೇವದೂತರಂತೆ ಇದ್ದರು ಸಿಪ್ಪೆ ರಹಿತರಾಗಿ, ಇಲ್ಲಿ ಪೈಗಂಬರರಾಗಿದ್ದಾರೆ. ಹದೀಸ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಏನೆಂದರೆ ಶರೀರ ಲೋಕದ ಮುಂಚೆಯೇ ಆತ್ಮಲೋಕವನ್ನು ಪರಿಪೂರ್ಣಗೊಳಿಸಲಾಗಿತ್ತು. ಹೀಗಾಗಿ ಈ ಅಲ್ಪತಮ

* ಪೈಗಂಬರರು – ಸಂದೇಶವಾಹಕರು, ಪ್ರವಾದಿಗಳು.

ಹೃದಯ ಹಾಗೂ ಭ್ರಾಂತ ಹಾಗೂ ಅನಾಗರೀಕನ ವಿಚಾರದಲ್ಲಿ ಬರುವುದೇನೆಂದರೆ ಈ ಎರಡು ರತ್ನಗಳು ಅರ್ಥದ ಆಶ್ರಯದಲ್ಲಿ ದೇವದೂತರ ಸಾದೃಶ ಸಮಸ್ತ ಕಪಟ ಹಾಗೂ ಸೃಷ್ಟಿಗಳಿಂದ ಪವಿತ್ರವಾಗಿವೆ ಹಾಗೂ ಸತ್ಯಕ್ಕೆ ಅದರ ಯೋಗ್ಯತೆಗೆ ಅನುಗುಣವಾಗಿ, ಯಾವುದು ಪೂರ್ಣತೆಯ ಪ್ರಕ್ರಿಯೆಯಲ್ಲಿತ್ತು. ಪರಿಪೂರ್ಣವಾಗಿ ಪ್ರಕಟವಾಗಿತ್ತು, ಅದನ್ನು ಅರಿಯಲಾಯಿತು. ಯಾವಾಗ ಈ ಅರ್ಹತೆಗಳು ಆಕೃತಿಯಲ್ಲಿ ರೂಪಾಂತರವಾಗಿ ಪ್ರಕಟವಾದಾಗ ಅದರ ಸತ್ತೆಯ ಅನ್ವೇಷಣೆ ಮಾಡಲಾಯಿತು. ಅದರ ಸತ್ತೆಗೆ ಸೂಕ್ತವಾದ ಸಮಸ್ತ ಅರ್ಹತೆಗಳನ್ನು ಹಾಗೂ ಅನಿಷ್ಟತೆಗಳನ್ನು ವಿವೇಚನೆಗೆ ಒಳಪಡಿಸಲಾಯಿತು ಹಾಗೂ ಈ ರೀತಿ ತನ್ನ ಸಮಸ್ತ ಕಾಲಾವಧಿಯನ್ನು ಪೂರ್ಣಗೊಳಿಸಿತು. ಅರ್ಥಾತ್ ತನ್ನ ಮೂಲಸ್ಥಾನವಾದ ದೈವಿ ಜ್ಞಾನಕೋಶಕ್ಕೆ ಮರಳಿತು. ಬದಲಾಗಿ ಪೈಗಂಬರರ ತರಹ ಅವರನ್ನು ಅಲ್ಲಿಗೆ ತಲುಪಿಸಲಾಯಿತು, ಜತೆಗೆ ಯಾರು ಅಲ್ಲಿಗೆ ತಲುಪಲು ಅಸಾಧ್ಯವಿತ್ತು. ಅವರನ್ನು ತಲುಪಿಸಲಾಯಿತು.

ಈ ಎರಡು ರತ್ನಗಳೇ ಇಂತಹವಿದ್ದವು, ಅವು ಪ್ರಕಾಶಲೋಕದಲ್ಲಿ ಜಿಬ್ರಾಯಿಲ್‌ರ ಯೋಗ್ಯತೆಗೆ ಸಮಾನವಾಗಿದ್ದವು (ಅರ್ಥಾತ್ ಆತ್ಮ) ಹಾಗೂ ದೇಹಲೋಕದಲಿ ಮಹ್ಮದ್ ಪೈಗಂಬರ್ (ಸ.ಅ) ಅವರ ನಿದರ್ಶನದಲ್ಲಿ ಪ್ರಕಟವಾದವು (ಅರ್ಥಾತ್ ಹೃದಯ) ಹೇ ಸ್ನೇಹಿತನೇ! ಆತ್ಮವು ಮಗುವಾಗಿದೆ ಹಾಗೂ ಹೃದಯವು ನವಯುವಕನಾಗಿದ್ದಾನೆ ಮಗು ಹಾಗೂ ನವಯುವಕನ ಮಧ್ಯೆ ಭೂಮ್ಯಾಕಾಶದ ಅಂತರದವಿದೆ.

ಈ ಶೋಕ ಜಾಲ ಭವನದಲಿ ಏನು ಪರಿವೇ ಮಾಡಲಿ,
ಹಾರಾಡಬೇಕಿದೆ ಇನ್ನು ಕೆಳಗೆ "ಖಾಫ್" ಪರ್ವತದ ಜೊತೆ.

ಇವೆರಡೇ ರತ್ನಗಳು ಸ್ವಭಾವದ ಬಂಧನದಲ್ಲಿ ಬಂದಾಗ, ಇವುಗಳ ಹೆಸರು 'ಮನುಷ್ಯ' ಎಂದಾಯಿತು. ಯಾವಾಗ ಈ ಶೋಕಜಾಲ ಭವನ (ಶೋಕಲೋಕ) ಅರ್ಥಾತ್ ನಾಸೂತ್ ಲೋಕ ಮೃತ್ಯು ಹೊಂದುತ್ತಾನೋ ಆಗ ಮಲಕೂತ್ ಲೋಕದ ಕಡೆ ತೆರಳುತ್ತಾನೆ. ಮಲಕೂತ್, ನಾಸೂತ್‌ನ ವೀಕ್ಷಕನಾಗಿದ್ದು, ಈ ನಾಸೂತ್ ಲೋಕವನ್ನು ತನ್ನ ಮುಷ್ಟಿಯಲಿ ತೆಗೆದುಕೊಂಡು ಅಲ್ಲಿಗೆ ಹೋಗುತ್ತಾನೆ. ಎರಡನೆಯ ಸಾರಾಂಶವೆಂದರೆ ಈ ಭೌತಿಕ ಲೋಕದ ಪ್ರತಿ ವ್ಯಕ್ತಿಯ ನೋಟದ ಮಾರ್ಗದಿಂದ ಹೃದಯದಲ್ಲಿ ಇಳಿದು ಅಚ್ಚೊತ್ತಿದೆ. ಈ ಸ್ಥಾನದಿಂದ ಯಾತ್ರೆ ಪ್ರಾರಂಭಿಸಿದಾಗ, ಹೃದಯವು ಅವನ ಜೊತೆ ಇರುವುದು. ಈ ಕಾರಣದಿಂದಲೂ ಇದು ಸೂಕ್ತವೆನಿಸುವುದೇಕೆಂದರೆ ಭೂಲೋಕದ 'ಖಾಫ್' ಪರ್ವತವನು ತನ್ನ ಮುಷ್ಟಿಯಲ್ಲಿ ಅವಚಿಕೊಂಡು ಹಾರಾಡುತ್ತಾನೆ.

ತಹಖೀಖ್ ಶುದ್ ಕೆ ನಾಸಿರ್ ಖುಸ್ರೊ ಗುಲಾಮ್ ಆದ್,
ಹರ್‌ಕಸ್ ಕೆ ಗೋಯದ್ ಆಂಯ್ ದೋ ಗಹಲ್ ಅಜ್ ಚೆ ಅನ್ಸರ್ ಅಂದ್.

ಈ ಎರಡು ರತ್ನಗಳನ್ನು ಯಾವ ಧಾತುವಿನಿಂದ ನಿರ್ಮಿಸಿದ್ದಾರೆ,
ಇದರ ಗುಲಾಮನ ನಾಸಿರ್ ಖುಸ್ರೊ ಆಗಿಹನು ನಿಸ್ಸಂದೇಹ.

ಹೇ ಆತ್ಮೀಯನೇ! ಈ ಎರಡು ರತ್ನಗಳ ಮೌಲ್ಯವನ್ನು ಸಮಸ್ತದ ಮೇಲೆ ಸಾಮರ್ಥ್ಯವುಳ್ಳವನ ಹೊರತು ಯಾರೂ ಅರಿಯಲಾರರು. ಈ ರತ್ನವು ಹಲವು ರತ್ನಗಳಂತೆ ಗಣಿಯಿಂದಾಗಲಿ ಅಥವಾ 'ಕುನ್'ನ ದೈವೋಕ್ತಿಯಿಂದಾಗಲಿ ಪ್ರಕಟಾಗುವುದಿಲ್ಲ. ಬದಲಾಗಿ ದೈವೀಕೋಶದಿಂದ, ಅನ್ಯರ ಮಧ್ಯಸ್ಥಿಕೆಯಿಲ್ಲದೆ ನೇರವಾಗಿ ಆಗಮನವಾಯಿತು. ಈಗಲೂ ಇದು ಈ ಭಂಡಾರದಲ್ಲಿ (ದೈವೀಕೋಶದಲಿ) ಇರುವುದು. ಹೀಗಾಗಿ ಸೃಷ್ಟಿಲೋಕ ಹಾಗೂ ಕರ್ಮಲೋಕದ ಅಂಗಡಿಯು ಇದರಿಂದಲೇ ತುಂಬಿತುಳುಕುತ್ತಿದೆ. ಯಾವನೇ ವ್ಯಕ್ತಿ 'ಸಹಾ' (ಒಂದು ನಕ್ಷತ್ರ) ಆಗಿ, ಸಮಸ್ತ ಆಕಾಶದ ಸಂಚಾರ ಮಾಡಿದರೆ ಹಾಗೂ ವಸಂತ ಮಾರುತವಾಗಿ ಇಡೀ ಭೂಗೋಳದ ಪ್ರದಕ್ಷಿಣೆ ಮಾಡಿದರೂ, ಆಗಲೂ ಸಹ ಅವನು ಪರಿಪೂರ್ಣ ಮನುಷ್ಯ ಎಂದು ಕರೆಸಿಕೊಳ್ಳಲು ಅರ್ಹನಾಗುವುದಿಲ್ಲ ಹಾಗೂ ಈ ಎರಡು ರತ್ನಗಳ ವಾಸ್ತವಿಕತೆಯನ್ನು ಕಂಡು ಹಿಡಿಯಲು ಸಾಧ್ಯವಾಗುವುದಿಲ್ಲ.

ಹೇ! ಬಹರಿ ನೀನು ಏನಾಗಿದ್ದೀಯಾ! ನಿನ್ನ ಅಸ್ತಿತ್ವವೇನು? ನೀನು ಈ ಎರಡು ರತ್ನಗಳ ಕುರಿತು ದಣಿವರಿಯದೇ ನಿರಂತರವಾಗಿ ಚರ್ಚೆಯನ್ನು ಮಾಡುತ್ತಿದ್ದೀಯಾ? ಇದಕ್ಕಾಗಿ ದೈವೀಪರವಶ ಪುರುಷನ ಅವಶ್ಯಕತೆ ಇದೆ ಆದರೆ ನಾನು ಕಾಣುವುದೇನೆಂದರೆ ನೀನು ದೈವೀ ಪರವಶ ಮಹನೀಯನೂ ಅಲ್ಲ ಹಾಗೂ ದೈವೀ ಸಂವಾದಕ್ಕೆ ಅರ್ಹನಾದ ವ್ಯಕ್ತಿಯೂ ಅಲ್ಲ. ಹೀಗಾಗಿ ಸುಮ್ಮನಿರು.

ಹೇ! ಬಹರಿಯೇ ಮರಳಿಬಾ! ಪ್ರತಿ ವ್ಯಕ್ತಿಯು ಹೇಗೆ,
ವಿವೇಕವು, ಅಂತರ್ದೃಷ್ಟಿಯನು ಅರಿಯುವನು ಹೇಳು?

ಗೊತ್ತಿದೆಯೇನು ನಿನಗೆ ಇದು ಶಾಹನ ಬಾಗಿಲಿನಂತೆ,
ಪ್ರತಿ ದರಿದ್ರನಿಗೆ ಎಲ್ಲಿಹುದು ಪ್ರವೇಶಕೆ ಯೋಗ್ಯ.

ಆಭರಣ–೧೫೫

ದೇವರು ಲಕ್ಷ ಹಾಗೂ ಮಹ್ಮಮದರು ಸಾವಿರದ ವ್ಯಾಖ್ಯಾನ

"ಖುದಾ ಲಕ್ ಅಸ್ತ್ ವೊ ಮೊಹ್ಮದ್ ಹಜಾರ್, ಆದಂ ಎಕ್,
ಬಿಯಾಬ್ ಮಜಹಬ್ ಸೂಫಿ ಅಗರ್ ತೂ ದಆರಿ ಷಕ್"

[ದೇವರು ಲಕ್ಷಾಂತರ ಇದ್ದಾರೆ, ಮಹ್ಮದರು ಸಾವಿರ ಹಾಗೂ ಆದಂ ಒಬ್ಬನಾಗಿದ್ದಾನೆ. ನಿನಗೆ ಇದರಲ್ಲಿ ಶಂಕೆ ಇರುವುದಾದರೆ ಸೂಫಿ ಸಿದ್ಧಾಂತದಲ್ಲಿ ಸೇರ್ಪಡೆಯಾಗು]

ಹೈದ್ರಾಬಾದಿನಿಂದ ಒಬ್ಬ ಸ್ನೇಹಿತನು ಆಗಮಿಸಿದ್ದನು. ತನ್ನ ಸ್ಥಿತಿ–ಗತಿ ಹಾಗೂ ಕ್ಷೇಮ ಸಮಾಚಾರದ ಬಳಿಕ ಈ ವಿಚಿತ್ರ ರಹಸ್ಯವನ್ನು ಪ್ರಶ್ನಾರ್ಥಕವಾಗಿ ನನ್ನ ಮುಂದಿಟ್ಟನು. ಅದು ಈ ಮೇಲಿನ ಉದ್ಧರಿಸಿದ ಕವನದ ಸಾಲುಗಳಾಗಿದ್ದವು. ಈ ಕವನದ ಸಾಲುಗಳು ಹೈದ್ರಾಬಾದಿನ ಜ್ಞಾನಿಗಳ ಆತ್ಮಸ್ಥೈರ್ಯವನ್ನೇ ಅಡಗಿಸಿತ್ತು. ಈ ಬೀಗವನ್ನು ಯಾರೂ ತಮ್ಮ ವಿದ್ವತ್ತಿನ ಬೀಗದ ಕೈಯಿಂದ ತೆರೆಯಲು ಯಶಸ್ವಿಯಾಗಿರಲಿಲ್ಲ. ಒಂದು ಸಲ, ಇದೇ ಸ್ನೇಹಿತನು ನನ್ನನ್ನು ಉದ್ದೇಶಿಸಿ ನುಡಿದನು, ಯಾವ ರೀತಿ ಒಂದು ಮಾತನ್ನು ತಂದೆಯು ಹೇಳಿದರೆ, ಮಗನು ಅದನ್ನು ಸ್ವೀಕರಿಸುವುದಿಲ್ಲವೋ, ಅದೇ ರೀತಿ ಈ ಸಮಸ್ಯೆಗೆ ಸಂಬಂಧಿಸಿದಂತೆ ತಮಗೇನಾದರೂ ಅರಿವಾಗುತ್ತಿದ್ದರೆ ಕಳವಳಗೊಳ್ಳದೆ ಹೇಳಬಹುದು. (ಅರ್ಥಾತ್ ಸ್ವೀಕಾರ್ಹತೆ ಅಥವಾ ರದ್ದತಿಯನ್ನು ಗಣನೆಗೆ ತರಬಾರದು). ಇದರ ಕುರಿತಾಗಿ ನನ್ನ ಮೆದುಳಿಗೆ ಏನಾದರೂ ಹೊಳೆದರೆ, ತಮ್ಮ ಅರಿವಿನ ಸನ್ನಿಧಿಯಲ್ಲಿ ಪ್ರಸ್ತುತಪಡಿಸುತ್ತೇನೆ ಎಂದು ನುಡಿದೆ. ಹೀಗಾಗಿ ಈ ಸಂಬಂಧದ ಚಿಂತನೆಯಲ್ಲಿ ಅದೇನು ಹೊಳೆಯಿತೋ ಅದೆಲ್ಲವನ್ನು ಒಂದು ಭಾಂಗ್ ಕುಡುಕನ ವ್ಯರ್ಥಾಲಾಪ ಹಾಗೂ ಬಡಬಡಿಕೆ ಎಂದು ಬರೆಯುತ್ತಿದ್ದೇನೆ.

ಯಾರಾದರೂ ಸ್ವೀಕರಿಸಲಿ, ಅಥವಾ ತಿರಸ್ಕರಿಸಲಿ, ಅದು ನನಗೆ ಸ್ವೀಕಾರ್ಹ,
ಯಾಕೆಂದರೆ 'ಭಾಂಗ್' ಕುಡಿದು ಬಡಬಡಿಸುತ್ತೇನೆ, ಅದು ಅದರ ಪ್ರಭಾವ.

ಹೇ ಆತ್ಮೀಯನೇ! ಜೀವರಾಶಿಗಳ ಧರ್ಮಗಳು ಹಾಗೂ ಮತ ನಂಬಿಕೆಗಳು ಅವುಗಳ ಮೂಲ ಸ್ವರೂಪದಲ್ಲಿ ಹಾಗೂ ಧಾರ್ಮಿಕ ಗುಣ ವೈಶಿಷ್ಟಗಳಲ್ಲಿ ಒಂದೇ ರೀತಿಯ ಸಿಧ್ಧಾಂತದ ಮೇಲೆ ಅವಲಂಬಿತವಾಗಿಲ್ಲ. ಆದುದರಿಂದಲೇ ನುಡಿಯಲಾಯಿತು. "ಅತ್ತರಖೂ ಇಲ್ಲಾಲ್ಲಾಹಿ ಬಿ ಅದಬಿ ಇನ್‌ಪಾಸ ಖಲಾಯಿಖ್" (ಅರ್ಥಾತ್ ಜೀವರಾಶಿಗಳ ಉಸಿರಾಟದ ಸಂಖ್ಯೆಯಲ್ಲಿ ಅಲ್ಲಾಹನ ಕಡೆ ಮಾರ್ಗಗಳಿವೆ) ಆದರೆ ಅವಿಶ್ವಾಸಿಯೇ ಇರಲಿ, ಅಥವಾ ಮುಸಲ್ಮಾನನೇ ಇರಲಿ ಮಹಾಮಹಿಮ

ಅಲ್ಲಾಹನನ್ನು ಎರಡು ಎಂದು ಹೇಳುವುದಿಲ್ಲ. ಎಲ್ಲರೂ ಅವನ ಅಸ್ತಿತ್ವದ ಏಕತ್ವನ್ನು ಸ್ವೀಕರಿಸುತ್ತಾರೆ.

ಭೂಮಿಯ ಪ್ರತಿ ಕಣವೂ ಅಧೋಗತಿಯಿಂದ ಪ್ರಕಾಶಹೀನವು,
'ಏಕ' ಅಸ್ತಿತ್ವದ ನಿನ್ನ ಸಾಕ್ಷ್ಯವೂ ವೀಕ್ಷಕನು ಅವನು.

ಕವಿಯು ದೇವರನು ಲಕ್ಷಾಂತರ (ಲಕ್) ಎಂದಿದ್ದು, ಬಹುಶಃ ಅವನು ಇದರ ಬೇರ್ಯಾವುದೇ ಅರ್ಥವನ್ನು ಅರಿಯುತ್ತಿರಬೇಕು. ಆದರೆ ವಾಸ್ತವಿಕತೆಯನ್ನು ಈ ತರಹವೂ ತಿಳಿದುಕೊಳ್ಳಬಹುದಾಗಿದೆ, ಅದೇನೆಂದರೆ ಲಕ್ಷವೂ ಪ್ರಕಟರೂಪವಾಗಿದೆ. ಹಾಗೂ ಏಕವೂ ಪ್ರಕಟ ಅಸ್ತಿತ್ವದ ಸಾಕ್ಷ್ಯವನ್ನು ನುಡಿಯುತ್ತದೆ.

ಹೇ ಆತ್ಮೀಯನೇ! ಒಂದು ಸಮೂಹವು ಆಕಾಶವನ್ನು ದೇವರು ಎನ್ನುತ್ತದೆ. ಅದು ಯಾಕೆಂದರೆ ಆಕಾಶ ಹಾಗೂ ಅದರ ಕಾಯಗಳು ಇದರ ಚಲನಶೀಲತೆಯಿಂದಲೇ ಇದೆ ಹಾಗೂ ಈ ಸಮಸ್ತ ಪದಾರ್ಥಗಳನ್ನು ಆವರಿಸಿದೆ. ಮತ್ತೊಂದು ಸಮೂಹವು ಸೂರ್ಯನನ್ನು ಈ ಕಾರಣಕ್ಕಾಗಿ ದೇವರೆಂದು ಭಾವಿಸುತ್ತವೆ, ಯಾಕೆಂದರೆ ತಾಪ, ಶೀತ, ಬೆಳಕು ಹಾಗೂ ಕತ್ತಲೆ ಇದರಿಂದಲೇ ಇದೆ. ಹಲವರು ಗಾಳಿಯನ್ನು ಸಮಸ್ತ ತತ್ವಗಳ ಪ್ರಥಮವೆಂದು, ಈ ತತ್ವಗಳು (ಭೂತ) ತತ್ವಗಳಾಗದೇ ಇದ್ದರೆ, ಏನೂ ಇರುತ್ತಿರಲಿಲ್ಲ. ಇನ್ನು ಕೆಲವರು ನೀರಿನ ಆರಾಧಕರಾಗಿದ್ದಾರೆ, ಯಾಕೆಂದರೆ ಸಮಸ್ತ ಸೃಷ್ಟಿಗಳಲ್ಲಿ ಆದಿಯೂ ಹಾಗೂ ಅಂತ್ಯವೂ ನೀರಿನಿಂದ ಅಸ್ತಿತ್ವಶಾಲಿಗಳಾದವು ಹಾಗೂ ನೀರಿನಿಂದಲೇ ನಿರಂತರಾಗಿ ಇರುವವು. ಆದರೆ ಫಕೀರರ ಸಮೂಹದಲ್ಲಿ ಹಲವರು ಹೃದಯಕ್ಕೆ ಮಹತ್ವವನ್ನು ನೀಡುತ್ತಾರೆ. ಯಾಕೆಂದರೆ ಹೃದಯವು ಸತ್ಯದ ಅಸ್ತಿತ್ವವಾಗಿದೆ. ಮಹ್ಮದರ ಪ್ರಕಾಶ ಸಾರವೂ ಇದೇ ಆಗಿದೆ. ಯಾಕೆಂದರೆ ಇದು 'ಏಕತ್ವ'ದ ಸ್ಥಾನದ ಬೆಂಬಲಿತವಾಗಿದೆ. ಇದರಿಂದಲೇ ಮನುಷ್ಯನ ಪ್ರಭುತ್ವವು ಸ್ಥಾಪಿತವಾಯಿತು ಹಾಗೂ ದೇವದೂತರು ಶಿರಸಾಷ್ಟಾಂಗ ಮಾಡಿದರು. ಇನ್ನೂ ಹಲವರು ಆತ್ಮನನ್ನು ದೈವೀಲಾಲಿತ್ಯ, ಅಲೌಕಿಕ ಹಾಗೂ ಸಾಕ್ಷ್ಯದ ಅರಿವುಳ್ಳವನೆಂದು ಹಾಗೂ ವರ್ತಮಾನ ಹಾಗೂ ಭವಿಷ್ಯತ್ತಿನ ವೀಕ್ಷಕನೆಂದು ವಾದಿಸುತ್ತಾರೆ. ಇನ್ನು ಕೆಲವರು ಕುರಾನಿನ ಈ ಉಕ್ತಿಯನ್ನು ಉಲ್ಲೇಖಿಸುತ್ತಾ 'ಅಲ್ಲಾಹ ನೂರುಸ್ಸಮಾವಾತಿ ವಲ್ ಅರ್‌ಜಿ (ಅಲ್ಲಾಹನ ಪ್ರಕಾಶವು ಸಮಸ್ತ ಬ್ರಹ್ಮಾಂಡವನ್ನು ಆವರಿಸಿದೆ) ಅರ್ಥಾತ್ ಬೆಳಕಿನಲ್ಲಿ ಪ್ರಕಾಶ! ಪ್ರಕಾಶವು ಏನಾಗಿದೆ? ಯಾವಾಗ ಆತ್ಮದ ಅಸ್ತಿತ್ವವು ಆತ್ಮದಲ್ಲಿ ವಿಲೀನವಾದಾಗ ಅದು ಪ್ರಕಾಶವಾಗುತ್ತದೆ. ಆದರೆ ಇನ್ನು ಹಲವರು ಪ್ರೇಮಕ್ಕೆ ಆ ಸ್ಥಾನ ನೀಡುತ್ತಾರೆ. ಯಾಕೆಂದರೆ ಪ್ರೇಮಬೀಜದ ಹೊರತು ಸೃಷ್ಟಿಯ ವೃಕ್ಷವು ಮೊಳಕೆ ಒಡೆಯುವುದಿಲ್ಲ. ಹಾಗೂ ಅದರ ನಿರಂತತೆಯು ಸ್ಥಾಪಿತವಾಗುವುದಿಲ್ಲ.

ಧನವಾಗಿಹವು ಆ ಹೆಜ್ಜೆಗುರುತುಗಳು, ಯಾರು ಅದರ ದೈವಿಕ ಹಾಗೂ ಪ್ರವಾದಿಗಳ ಆದೇಶಗಳ ಪಾಲನೆಯನ್ನು ಮಾಡಿದರು ದೈವೀ ಸಾಮರ್ಥ್ಯ.

ಇದನ್ನು ಎಲ್ಲದರ ಮೇಲೆ ಸಾರ್ವಭೌಮವನ್ನಾಗಿ, ಎಲ್ಲರಿಗಿಂತಲೂ ಮಹೋನ್ನತ ಹಾಗೂ ಪರಮೋಚ್ಚ, ಸಮಸ್ತ ನೆಲೆಗೊಂಡಿರುವು (ಸೃಷ್ಟಿಗಳು)ಗಳಿಗೆ ಅವುಗಳಿಂದ ಹಾಗೂ ತಮ್ಮನ್ನು ಅವನ ಅಸ್ತಿತ್ವದಿಂದ ಸ್ಥಿರವೆಂದು ಭಾವಿಸುತ್ತಾರೆ. ಹೀಗಾಗಿ ಅವರು ಯಾವುದೇ ಸಹಾಯದ ಇಚ್ಛುಕರಿಲ್ಲ ಹಾಗೂ ಯಾವುದನ್ನು ಬಯಸುತ್ತಾರೆ ಅದನ್ನು ಮಾಡುತ್ತಾರೆ. ಹಲವು ಜನ 'ಹುವಲ್ ಅವ್ವಲು, ಹುವಲ್ ಆಖಿರ್' ನ ಪ್ರಕಾರ ದೇವರ ಹೊರತಾಗಿ ಏನನ್ನೂ ಕಾಣುವುದಿಲ್ಲ ಹಾಗೂ ಯಾರನ್ನೂ ಅರಿಯುವುದಿಲ್ಲ. ಬಾಹ್ಯವಾಗಲಿ, ಆಂತರ್ಯವಾಗಲಿ, ಆದಿ ಇರಲಿ ಅಥವಾ ಅಂತ್ಯವಿರಲಿ ನಾಸೂತ್ ಲೋಕದ ಸಮರ್ಪಣೆಯಿಂದ ತಮ್ಮ ಅವಧಿಯನ್ನು ಪರಿಪೂರ್ಣಗೊಳಿಸಿಕೊಂಡು, ಸ್ವಯಂ ಅನ್ನು ಹಾಗೂ ಸಮಸ್ತ ಕಣಗಳನ್ನು ಹಾಗೂ ಸೃಷ್ಟಿಗಳನ್ನು, ಯಾವುದರ ತೇಜಸ್ಸು ಸತ್ಯಸೂರ್ಯನಿಂದಾಗಿದೆ ಅವೆಲ್ಲವನ್ನು ಏಕತ್ರಗೊಳಿಸಿ, ಅಸ್ತಿತ್ವ ವಿಶೇಷವಾಗಿರುವ ಮಹ್ಮದರ ಪ್ರಕಾಶದ ಮೂಸೆಯಲ್ಲಿ ಹಾಕಲಾಗುತ್ತವೆ. ಮತ್ತೆ ಪ್ರೇಮದ ಅಗ್ನಿಯನ್ನು ಉದ್ದೀಪನಗೊಳಿಸಿ, ಅದನ್ನು ಕರಗಿಸಿ ಒಂದು ಅಸ್ತಿತ್ವವನ್ನು ಮಾಡಲಾಗುತ್ತದೆ ಹಾಗೂ ಸ್ವಯಂ ಅದೇ ಆಗಿರುತ್ತದೆ.

'ಬಹರಿಯಾ ಅಂಯ್ ಮುಖಾಮೇ ಮಹಮೂದ್ ಅಸ್ತ್' ಬೇರೆಯವು ಪಾದರಸದಂತೆ ಚಂಚಲವಾಗಿವೆ. ಆದರೆ ಆಳವಾಗಿವೆ. ಆಳದ ಸ್ಥಾನವು ಪ್ರಕಾಶದ ಸ್ಥಾನವಾಗಿದ್ದು, ಶಾಶ್ವತ ಜ್ಯೋತಿಯೊಂದಿಗೆ ಸಂಬಂಧ ಹೊಂದಿವೆ. ದೀಪದ ಜ್ವಾಲೆಯಲ್ಲಿ ಎಲ್ಲಿಯವರೆಗೆ ಗಾಳಿ ಇರುತ್ತದೆ, ಅದು ಉರಿಯುತ್ತಿರುತ್ತವೆ. ಗಾಳಿಯು ಜ್ವಾಲೆ ಆವೃತ್ತವಾಗಿರುತ್ತದೆ. ಗಾಳಿಯನ್ನು ಜ್ವಾಲೆಯಿಂದ ಬೇರ್ಪಡಿಸುವುದು, ಅಂತರ್ದೃಷ್ಟಿಯನ್ನು ವಿವೇಕದಿಂದ ಬೇರ್ಪಡಿಸುವುದು ಅತಿ ಕಠಿಣವಾಗಿದೆ. ಈ ರೀತಿಯಾಗಿ ವಿಶ್ವಾಸಿಗಳು ಉಲ್ಲೇಖಿತ ನಂಬಿಕೆಗಳು ಹಾಗೂ ಬರೆಯಲಾದ ಲೇಖನದಿಂದ ಲಕ್ಷ ದೇವರುಗಳ ಭಾವಾರ್ಥವು ಚೆನ್ನಾಗಿ ಗ್ರಹಿಕೆಗೆ ಬಂದಿರಬೇಕು. ಈ ಲಕ್ಷ ದೇವರುಗಳು ಅರ್ಥಾತ್ 'ಬಹುತ್ವ'ವನ್ನು ದಾಟಿ ಹೋಗಬೇಕಾಗಿದೆ. ಇದು ತೆಗಳುವಿಕೆಯ ಸ್ಥಾನವಾಗಿದೆ. ಒಂದು ಕಡೆ ಅದು 'ಏಕತ್ವ'ದಿಂದ ಸಂಬಂಧ ಹೊಂದಬಯಸುತ್ತದೆ. 'ಏಕತ್ವ' ಹೇಗಿದೆಯೆಂದರೆ ಪ್ರತಿಯೊಂದು ಪಂಥ ಸಮೂಹಕ್ಕೆ ಈ ಮಾತಿನ ಬಗ್ಗೆ ಏಕಾಭಿಪ್ರಾಯ ಹಾಗೂ ಅನುಮೋದನೆ ಉಂಟು, ಅದೇನೆಂದರೆ ನಮ್ಮ ದೇವರು ಈ ಸೃಷ್ಟಿಯ ಕರ್ತನಾಗಿದ್ದಾನೆ.

ಭೂಮಿಯ-ದೇವರು ನಮ್ಮವನು ಹಾಗೂ ಆಕಾಶದ ದೇವರು ಬೇರೆಯವರದ್ದು

ಎಂಬುದಾಗಿ ಅಲ್ಲ. ಇವರ ಈ ಪುನರುಚ್ಚಾರದಿಂದ ಗೊತ್ತಾಗುವುದೇನೆಂದರೆ ದೇವರು ಒಬ್ಬನಾಗಿದ್ದಾನೆ.

"ಗರ್ಚೆ ಹರ್ ಏಕ್ ಬ ಮಜಹಬಿ ಅಸ್ತ್ ಜುದಾ,
ಲೇಕಿನ್ ಆಂಯ್ ಜುಮ್ಲಾ ರಾಕೇಸಿಯತ್ ಖುದಾ."

ಪ್ರತಿಯೊಬ್ಬನು ಧರ್ಮವು ಇರುವುದು ಭಿನ್ನ,
ಆದರೆ ಇವರೆಲ್ಲರ ದೇವರು ಒಂದೇ ಆಗಿಹನು ನಿಶ್ಚಿತ.

"ಮಹ್ಮದ ಸಾವಿರ"ದ ಭಾವಾರ್ಥವೇನೆಂದರೆ, ಯಾವ ರೀತಿ ದೇವರ ಸಮೂಹವನು ಒಂದಾಗಿದೆ, ಅದೇ ರೀತಿ ಮಹ್ಮದರದು ಒಂದಾಗಿದೆ, ಯಾವುದೇ ಸಮೂಹ ಅಥವಾ ಪಂಥ ಮಹ್ಮದರ ಮಧ್ಯಸ್ಥಿಕೆ ಇಲ್ಲದೆ ದೇವರವರೆಗೆ ತಲುಪುವುದಿಲ್ಲ. ಅವನು ಯಾರೇ ಆಗಿರಲಿ, ಯಾವುದೇ ಪಂಥದವನಾಗಿರಲಿ ಮಹ್ಮದರ ಧಾರ್ಮಿಕ ನಂಬಿಕೆಯನ್ನು ತಲುಪಿದಾಗಲೇ ಮಹ್ಮದನಾಗುವನು. ಮಹ್ಮದರ ಧಾರ್ಮಿಕ ನಂಬಿಕೆ ಎಂದರೆ ಸಮಸ್ತ ದೇವರ ಸೃಷ್ಟಿ (ಜೀವರಾಶಿ)ಯನ್ನು ದೇವರ ಕಡೆ ಕರೆಯುವುದು. ಹೀಗಾಗಿ ಸಮಸ್ತ 'ಮಹ್ಮದ್'ರು ಒಂದೇ 'ಮಹ್ಮದ್' ಆಗಿದ್ದಾರೆ. ಈ ರೀತಿ ಉಲ್ಲೇಖವಾಗಿದೆ. 'ನಹನುಲ್ ಅಖಿರೂನಸ್ ಸಾಬಿಖೂನ್' (ಮುಂದಿನ ಹಾಗೂ ಮುಂಚಿನ ಸಮಸ್ತರು ನಾವೇ ಆಗಿದ್ದೇವೆ) ಹಾಗೂ ಸತ್ಯವೇನೆಂದರೆ ಸಮಸ್ತವು ಮಹ್ಮದ್ (ಸ.ಅ) ರವರ ಜ್ಯೋತಿಯ ಪ್ರಕಟರೂಪವಾಗಿದೆ.

"ಶದ್ ನೂರ್ ನಬಿ ದರ್ ಹಮಾ ಅನ್ವಾರ್ ನಮೂದಾರ್
ದರ್ ಆದಂ ವೋ ಇದ್ರಿಸ್ ಬೇಕಬಾರ್ ನಮುದಾರ್"

ಪ್ರಕಾಶಗಳು ಆಗಿಹವು ಪ್ರವಾದಿಯ ಪ್ರಕಾಶದ ಪ್ರಕಟರೂಪ,
'ಆದಂ'ನಲಿ ಹಾಗೂ ಇದ್ರೀಸ್‌ನಲಿ ಸಮಾನಾಗಿದೆ ಪ್ರಕಟರೂಪ.

'ಆದಂ' ಒಂದೇ, ಬಹುಶಃ 'ಆದಂ'ರನ್ನು ಒಂದು ಎಂದು ಕಲ್ಪಿಸಿಕೊಂಡರೆ 'ಆದಂ'ರು ಒಂದೇ ಆಗಿಹರು. ಒಂದನ್ನು ಒಂದು ಎಂದು ಹೇಳುವುದರಲ್ಲಿ ಪ್ರಮಾದವೇನು? ನನ್ನ ಮನೋಗತವು 'ಆದಂ' ವ್ಯಕ್ತಿಗೆ ಸಂಬಂಧಿಸಿದ್ದೆ ಆದರೆ, ಯಾವ ರೀತಿ ದೇವರನ್ನು ಲಕ್ಷವೆಂದು ಕರೆಯಲಾಗಿದೆಯೋ ಅದೇ ತರಹ ಲಕ್ಷಾಂತರ 'ಆದಂ'ರನ್ನು 'ಒಂದು' ಎಂದು ಕರೆಯಬಹುದು. ಹೇ ಆತ್ಮೀಯನೇ, ದೇವರು ಅಸಂಖ್ಯಾತ ಮನುಷ್ಯರ ಆಕೃತಿ ಹಾಗೂ ಆಕಾರದಲ್ಲಿ ವೈವಿಧ್ಯಮಯವಾಗಿ ಹುಟ್ಟಿಸಿದನು. ಪ್ರತಿಯೊಬ್ಬ ವ್ಯಕ್ತಿಯು ಪ್ರತಿಯೊಂದು ಅರ್ಹತೆಯಲಿ ಭಿನ್ನವಾಗಿದ್ದಾನೆ. ಹೀಗಾಗಿ ಒಂದೇ ತರಹದಿಂದ ತಿನ್ನುತ್ತಾನೆ. ಹಾಗೂ ಮಲಗುತ್ತಾನೆ. ಎರಡನೆಯದು ಸಂಚಾರವೇ

ಮಾಡವುದಿಲ್ಲ ಹಾಗೂ ವಿರಾಮವನ್ನು ಮಾಡುವುದಿಲ್ಲ. ಮತ್ತೆ ಯಾವ ರೀತಿಯಿಂದ ಒಂದಾಗುತ್ತಾನೆ ಆದರೆ ಕೆಲವು ರಹಸ್ಯಗಳ ಮಧ್ಯಸ್ಥಿಕೆಯಿಂದ ಇದು ಸಾಧ್ಯವಾಗಿದೆ. ಹಾಗಾದರೆ ಆ ರಹಸ್ಯಗಳು ಏನಿಹವು? ಎರಡು ಮನುಷ್ಯರು ಎದುರು ಬದರು ಕೂಡಿಸುವುದು.

'ಅಲ್‌ಮೋಮಿನು ಮಿರ್‌ಅತುಲ್ ಮೊಮಿನ್" ನಂತೆ ಎರಡು ಕನ್ನಡಿಗಳನ್ನು ಎದಿರುಬದಿರಾಗಿ ಇಡುವುದಾಗಿದೆ. ಒಬ್ಬನು ಒಂದರಲಿ, ಎರಡನೆಯವನು ಇನ್ನೊಂದರಲಿ ಕಾಣಿಸುವಂತಿರಲಿ. ಆಗ ಪ್ರತಿಯೊಬ್ಬ ವ್ಯಕ್ತಿಯು ಒಂದು ಪ್ರತ್ಯೇಕ ಪ್ರಕಟರೂಪವಾಗಿದ್ದಾನೆ. ಆದರೆ ಈ ಬಹುಬಿಂಬ ಪ್ರಕಟಗಳನ್ನು ಪ್ರಕಟಗೊಳಿಸುವ ಮೂಲ ಪ್ರಕಟಕನು ಒಂದೇ ಅಸ್ತಿತ್ವವಾಗಿದೆ. ಆ ಅಸ್ತಿತ್ವವು ದೈವೀಶಾಶ್ವತ ಅಸ್ತಿತ್ವಾಗಿದೆ. ಅಕಸ್ಮಾತ್ ಪ್ರತಿ ಮೂಲ ಪ್ರಕಟಕನ ಪ್ರಕಟರೂಪವು ಭಿನ್ನವಾಗಿರುತ್ತಿದ್ದರೆ ಲಕ್ಷವನ್ನು 'ಏಕ'ವೆಂದು ಹೇಳುವುದು ದುಸ್ತರವಾಗುತ್ತಿತ್ತು.

ಎರಡನೆ ಕಾರಣವೇನೆಂದರೆ ಸಯ್ಯದ್* ಹಾಗೆ ಶೇಖ್* ಸಹ ಮನುಷ್ಯರಿದ್ದಾರೆ. ಗೌಸ್ ಹಾಗೂ ಖುತುಬ್‌ರು, ಆರೀಫ್ ಹಾಗೂ ಪ್ರೇಮಿಗಳು ಮನುಷ್ಯರಾಗಿದ್ದರು. ಸುಳ್ಳುಗಾರನು ಹಾಗೂ ಸತ್ಯವಂತನೂ ಸಹ ಮನುಷ್ಯನಾಗಿದ್ದಾನೆ. ಈ ರೀತಿಯಾಗಿ ಎಲ್ಲಾ ಮನುಷ್ಯರು ಒಂದೇ ಮನುಷ್ಯನಾಗಿದ್ದಾನೆ.

ಮತ್ತೊಂದು ಕಾರಣವೇನೆಂದರೆ ಅಕಸ್ಮಾತ್ ಬಹಳಷ್ಟು ಜನರನ್ನು ನಗ್ನಸ್ಥಿತಿಯಲ್ಲಿ ಒಂದು ಸ್ಥಳದಲ್ಲಿ ನಿಲ್ಲಿಸಿದರೆ, ಎಲ್ಲಾ ಬುದ್ಧಿ ಹಾಗೂ ವಿವೇಕದ ಹೊರತಾಗಿಯೂ ಇವನು ಶೇಖ್‌ನಾಗಿದ್ದಾನೆ ಹಾಗೂ ಸೈನಿಕ ಆಗಿದ್ದಾನೆ ಎಂದು ನಿಖರವಾಗಿ ಗುರುತಿಸಲಾಗುವುದಿಲ್ಲ. ಸೈನಿಕನ್ನು ಆಯುಧ ಹಾಗೂ ಶಸ್ತ್ರಾಸ್ತ್ರಗಳು ಇಲ್ಲದೆಯೇ ಹಾಗೂ ಶೇಖ್‌ನನ್ನು ನಿಲುವಂಗಿ ಹಾಗೂ ಅಸಾ (ಫಕೀರರು ಕೈಯಲ್ಲಿ ಹಿಡಿಯುವ ಕಟ್ಟಿಗೆಯ ದಂಡ) ಇಲ್ಲದೆ ಅವರನ್ನು ಗುರುತಿಸಲಾಗುವುದಿಲ್ಲ. ಅಕಸ್ಮಾತ್ ಯಾರಾದರೂ ಕವಿಯು 'ಆದಂ' ಒಂದೇ ಆಗಿಹನು ಎಂದು ನುಡಿದರೇ, ಈ 'ಆದಂ ಸಂತತಿ'ಯ ಪ್ರಸ್ತಾಪ ಎಲ್ಲಿಂದ ಬಂತು ಎಂದು ಕೇಳಿದರೆ, 'ಆದಂ'ನನ್ನು ತೆಗೆದುಕೊಂಡು ಇದನ್ನು ಸಾಬೀತು ಪಡಿಸುತ್ತೇನೆ. ಅದೇನೆಂದರೆ ಸುಮಾರು ನಲವತ್ತು 'ಆದಂ'ರು ಆಗಿದ್ದರೆಂದು ಹೇಳಲಾಗುತ್ತಿದೆ. ಉದಾಹರಣೆಗೆ ಮನುಷ್ಯ ಆದಂ, ಜಿನ್* ಆದಂ, ಸೈತಾನ್ ಆದಂ, ಯಕ್ಷಣಿ ಆದಂ ಇತ್ಯಾದಿಗಳು ಆದರೆ ಸತ್ಯತೆಯಲ್ಲಿ ಒಂದೇ ಆದಂ ಆಗಿಹವು.

ಬಹರಿಯ ಹೇಳಿಕೆಯನು ಹುಚ್ಚನ ಮಾತೆಂದು ಭಾವಿಸಬೇಡಿ,
ಅವನ ಮನಸ್ಸಿಗೆ ಏನು ಹೊಳೆಯುವುದೋ ಅದನು ನುಡಿಯುವನು.

ಇವನ ಪ್ರತಿ ಮಾತು ಕೇವಲ ವಿಚಿತ್ರವಲ್ಲ, ತಿರುವುಮುರುವಾಗಿದೆ,
ಎಲ್ಲರೂ ಯಾವುದನು ಮಣ್ಣಿನ ಶರೀರವೆನ್ನುವರು ಜೀವ ಎನ್ನುವನು ಅವನು.

ಆಭರಣ–೧೬೦

'ನಹಸದ್ ವೊ ಫತ್‌ಹಾವ್ ಖಾಲಿಬ್ ದೀದಅಂ'ನ ವ್ಯಾಖ್ಯಾನ

[ಅರ್ಥಾತ್ 'ಕೋಟ್ಯಾಂತರ ಶರೀರಗಳನ್ನು ಬದಲಾಯಿಸುತ್ತಲೆ ಇದ್ದೆ' ಇದರ ವ್ಯಾಖ್ಯಾನ]

'ಗರ್ ಬ ಪರ್‌ಸಂದ್ ಜ಼ಹಾಲ್ ಜಿಂದಗಿ,
ನಹಸದ್ ವೋ ಹಫ್ತಾದ್ ಖಾಲಿಬ್ ದೀದಅಂ.

ದರ್‌ಬಗೋಯಂ ಶರಹಾ ಹಾಲ್ ಖದಿಶ್ ರವಾ"
ಹಮ್ ಚೂ ಸಬ್ಜ ಬಾರ್‌ಹಾ ರೂಯಿದಾ–ಏ–ಅಂ.

'ನನಗೆ ಕೇಳುವುದಾದರೆ ಜೀವನದ ಸ್ಥಿತಿಯ ಬಗ್ಗೆ
ಕೋಟ್ಯಾಂತರ ಶರೀರಗಳನ್ನು ಬದಲಾಯಿಸುತ್ತಲೇ ಇದ್ದೆ.

ಮತ್ತೇ ನನ್ನ ಜೀವನ ವೃತ್ತಾಂತ ಹೇಳುವುದಾದರೆ ನಾನು,
ಪೈರುಪಚ್ಚೆಯಂತೆ ಅನೇಕ ಸಲ ಪುನರ್‌ಪ್ರಕಟವಾದೆ.

ಹಲವು ಜನ ಹೇಳುತ್ತಾರೆ, ಈ ರುಬಾಯಿ (ಚತುಷ್ಪದಿ) 'ಶಮ್ಸ್ ತಬ್ರೇಜ್' ಅವರದು ಎಂದು. ಆದರೆ ಕೆಲವರು ಇದನ್ನು 'ಖಮರ್ ಖಂದವಿ' ಯವರು ಬರೆದಿರುತ್ತಾರೆ ಎನ್ನುತ್ತಾರೆ. ಒಟ್ಟಾರೆ ಈ 'ರುಬಾಯಿ'ಯ ರಚನಕಾರನ ಹೆಸರು ನಿಶ್ಚಿತಾಗಿ ತಿಳಿದಿರುವುದಿಲ್ಲ. ಈ ಧ್ವನಿಯ ಘೋಷ ಮೊಳಗಿಸಿದವರ ಸ್ಥಿತಿಯು ಸಂಪೂರ್ಣವಾಗಿ ತಿಳಿದಿರುವುದಿಲ್ಲ.

ಯಾರದೇ ಇರಲಿ ಈ ಕವನ ಚೆನ್ನಾಗಿಯೇ ಇದೆ,
ಪ್ರತಿ ಶರೀರಕೆ ಇದು ಜೀವಪ್ರಿಯವಾಗಿದೆ.

ಪ್ರತಿಯೊಂದು ಅಕ್ಷರದಲಿ ಅಡಗಿಹವು ನೂರಾರು ರಹಸ್ಯಗಳು,
ಪ್ರತಿಯೊಂದರ ಅರ್ಥಕೆ ಬೇಕಾಗಬಹುದು ನೂರಾರು ಶಬ್ದಗಳು.

ಸಕ್ಕರೆರಹಿತದಿಂದ ಸಕ್ಕರೆ ಸ್ವಾದವನು ನೀಡಿಹನು,
ಕೃತಜ್ಞತೆಗಳು, ಆ ಸಕ್ಕರೆಯ ನಿರ್ಮಾತೃವಿಗೆ.

ಈ ಖತಾ (ಕವನ)ವು ಮೇಲ್ನೋಟಕೆ ಹಿಂದೂಗಳ ಪುನರ್ಜನ್ಮದ ಪರವಾಗಿ ಕಂಡುಬರುತ್ತದೆ. ಅವರಲ್ಲಿ ಜನ್ಮಕ್ಕೆ ಶರೀರವು ಎನ್ನುತ್ತಾರೆ. ಈ ನಂಬಿಕೆ ಏನೆಂದರೆ ಯಾವುದು ಈ ಅಸ್ತಿತ್ವದಲಿದೆ ಹಾಗೂ ಮುಂದೆ ಏನಾಗುವುದು, ಅದು ಮೃತ್ಯುವಿನ ಬಳಿಕ ಬೇರೆ ಬೇರೆ ಶರೀರಗಳನ್ನು ಧಾರಣೆ ಮಾಡುವುದು. ಜತೆಗೆ ಈ ಧ್ವಂಸಮಯ ಶ್ರದ್ಧೆಯನ್ನು ಇಡಬೇಕಾಗುತ್ತದೆ. ಅದೇನೆಂದರೆ ಸತ್ಕರ್ಮಗಳ ಫಲ ಹಾಗೂ ದುಷ್ಕರ್ಮಗಳ ಶಿಕ್ಷೆ ಇದೇ ಲೋಕದಲ್ಲಿ ಆಗುತ್ತದೆ.

"ಆಶ್ನಾಯೇ ಜನಂ ಅರ್ಷದ್ ಬ ಜಹನನ್ನಮ್ ಚ ಅಜಬ್,
ಕೆ ಗರ್ ಫತಿಶ್ ಸರ್ ದೇನಾ ವ ಅಖ್ಬಿ ಬಜಾಗಶ್ತ್."

ಏನು ವಿಚಿತ್ರ, ನರಕ ಲೋಕದಲೇ ಜನ್ಮ ಹಂಬಲಿತನು,
ಅವನು ಇಹಲೋಕವನು ಹಿಡಿದಿಹನು ಪರಲೋಕ ಮರೆತಿಹನು.

ಪುನರ್ಜನ್ಮವು ಪ್ರಶ್ನೆಗೆ ಅರ್ಹವೂ ಅಲ್ಲ, ಉತ್ತರದ ಅವಶ್ಯಕತೆಯೂ ಇಲ್ಲ, ಆದರೆ ಮೇಲಿನ ಕವನದ ಸಾಲುಗಳಿಂದ ಮುಸ್ಲಿಮನಿಗೆ ಇದರಲ್ಲಿ ಇಸ್ಲಾಮಿನ ಸತ್ಯತೆಯ ವಾಸನೆ ಬರುತ್ತದೆ. ಹೀಗಾಗಿ ಸ್ಪಷ್ಟವಾಯಿತೇನೆಂದರೆ ಕವಿಯೂ ತನ್ನ ಸತ್ಯತೆಯ ವೀಕ್ಷಣೆಯನ್ನು ಪುನರ್ಜನ್ಮದ ಉಡುಪಿನಲ್ಲಿ ಪ್ರಸ್ತುತಪಡಿಸಿದ್ದಾನೆ. ಆದರೆ ಈ ಸೌಂದರ್ಯ ಭಾವವನ್ನು ಹಿಂದೂಗಳ ಜನ್ಮದ ನಂಬಿಕೆಯ ರೂಪದಲ್ಲಿ ಸಮಾವೇಶಗೊಳಿಸಿದರು, ಯಾಕೆಂದರೆ ಪ್ರತಿಯೊಬ್ಬ ಅರಿವುರಹಿತನು ಅಲ್ಲಿಯವರೆಗೆ ತಲುಪದೇ ಇರಲೆಂದು. ಪ್ರತಿ ಅಂಧನ ಬುದ್ಧಿಯು ಅಲ್ಲಿಯವರೆಗೆ ತನ್ನ ಹಾರಾಟವನ್ನು ಮಾಡದೇ ಇರಲೆಂದು. ಯಾಕೆಂದರೆ ಸಾವಿರಾರು ಜನರಲ್ಲಿ ಒಬ್ಬ ವ್ಯಕ್ತಿಯು ಸಮಸ್ತ ಸಂಶಯಗಳಿಂದ ಮುಕ್ತನಾಗಿ ಅಸ್ತಿತ್ವದ ಅನ್ವೇಷಣೆಯನ್ನು ಮಾಡಿರುತ್ತಾನೆ. ಅವನು ಯಾರೆಂದರೆ ಯಾವನು ಸಿಪ್ಪೆಯನ್ನು ಹಾದಿಯಲ್ಲಿ ಒಗೆದು ಕೇವಲ ತಿರುಳನ್ನು ತೆಗೆದುಕೊಂಡಿರುವನಾಗಿರುತ್ತಾನೆ.

ಹೇ ಆತ್ಮೀಯನೇ! "ಅನಾ ಮಿನ್ ನೂರೆಲ್ಲಾಹಿ ವ ಕುಲ್ಲಾ ಶೈ ಇನ್ ಮಿನ್ ನೂರಿ" ಈ ಉಕ್ತಿಯ ಪ್ರಕಾರ ಪ್ರಮಾಣವಾಗುವುದೇನೆಂದರೆ ಮೊಟ್ಟ ಮೊದಲಿಗೆ ಶಾಶ್ವತ ಪ್ರಕಾಶದಿಂದ ಮಹ್ಮದರ ಪ್ರಕಾಶದ ಅವಿರ್ಭಾವವಾಯಿತು. ಯಾವ ರೀತಿ ಅಲೆಯಿಂದ ನೀರು ಹಾಗೂ ಅಗ್ನಿಯಿಂದ ಜ್ವಾಲೆಯು 'ಏಕತ್ವ'ದ ಸ್ಥಾನದ ಶಿಪಾರಸ್ಸುಗಾರರ ದೃಷಿಯಲ್ಲಿ ಇವೆರಡರಲ್ಲಿ ಏನೂ ಬೇಧ ಹಾಗೂ ಅಂತರವಿಲ್ಲ. ಹಾಂ! ಆದರೆ ಇವೆರಡನ್ನು ನೋಡುವ ತಿಳಿಗೇಡಿಯ ಸ್ಥಿತಿಗತಿಯಲ್ಲಿ ಇರುವುದಾದರೆ ಇರಬಹುದು.

ಆದರೆ ಮಹ್ಮದರ ಶಿಫಾರಸ್ಸಿನಂತೆ ಸಮಸ್ತ ಸೃಷ್ಟಿಗಳಲ್ಲಿ ಇವು ಪ್ರಕಟವಾಗಿವೆ. ಹೀಗಾಗಿ ಸ್ಪಷ್ಟವಾಗುವುದೇನೆಂದರೆ ಸಮಸ್ತ ಪ್ರಕಾಶಗಳು ಒಂದು ಪ್ರಕಾಶದಿಂದ ಹಾಗೂ ಸಮಸ್ತ ಶಿಲೆಗಳು ಒಂದೇ ಪರ್ವತದಿಂದ ಅಸ್ತಿತ್ವವಾಗಿವೆ.

"ಗರ್ ಅತಿಷೇ ವೋ ದೂದ್ ವೋ ಹೈಝಮ್ ವೊ ಊದ್,
ಅಝ್ ನೂಲ್ ಮಹ್ಮದ್ ಯಸ್ತ್ ಮೌಜೂದ್"

'ಕಟ್ಟಿಗೆಯಾಗಲಿ, ಬೆಂಕಿಯಾಗಲಿ ಅಥವಾ ಹೊಗೆಯಾಗಲಿ,
ಸಮಸ್ತವು ಇರುವವು ಮಹ್ಮದರ ಪ್ರಕಾಶದಿಂದ'.

ಮನುಷ್ಯನು ಅಡಿಯಿಂದ ಮುಡಿಯವರೆಗೆ ಪ್ರಮಾದವಾಗಿದ್ದಾನೆ. ಒಂದು ವೇಳೆ ದೇವರ ದಿವ್ಯಕೃಪೆಯು ಅವನಿಗೆ ಮಾರ್ಗದರ್ಶನ ಮಾಡಿದರೆ, ಹಾಗೂ ಮಹ್ಮದರ ಜಾಮೀನಿನ ಫಲಶ್ರುತಿಯಾದರೆ, ಜ್ಞಾನದ ಪ್ರಭೆಯು ಎಲ್ಲೆಡೆ ಪಸರಿಸುತ್ತದೆ. ಇದರ ಶಿಫಾರಸ್ಸಿನಂತೆ ಯಾರ ವಶದಲ್ಲಿ ಸಮಸ್ತ ಇಂದ್ರಿಯಾನುಭವಗಳ ಶರೀರವಿದೆಯೋ, ಅದರ ನೈಜಸ್ಥಿತಿಯಿಂದ ಅರಿವುಳ್ಳನಾಗುತ್ತಾನೆ. ನಂತರ ಶರೀರವು ಹೃದಯವರೆಗೆ ತಲುಪುತ್ತದೆ. ಯಾವನು ಅಗೋಚರವನ್ನು ಅರಿಯುವವನಾಗಿದ್ದಾನೆ ಹಾಗೂ ದಿವ್ಯ ಪ್ರೇಮವನು ಗುರುತಿಸಬಲ್ಲನಾಗಿದ್ದಾನೆ. ಇದನ್ನು ಬುದ್ಧಿಯ ಲೋಕವೆಂದು ಪರಿಭಾವಿಸುತ್ತಾರೆ. ಮತ್ತೆ ಹೃದಯವು ಆತ್ಮದ ಮೇಲೆ ಪ್ರವೀಣತೆಯನ್ನು ಪಡೆಯುತ್ತವೆ. ಇದು ಮುಖದ ಅರ್ಥವನ್ನು ನೋಡುವುದಾಗಿದೆ. ಮುಂದೆ ಆತ್ಮದಿಂದ ಇದರ ಮೂಲ ಅಸ್ತಿತ್ವವಾದ ಮಹ್ಮದ ಅಸ್ತಿತ್ವದಿಂದ ಪ್ರೇಮ, ಆರೀಫ್ (ಮರ್ಮಜ್ಞಾನಿ) ಹಾಗೂ ಅಸ್ತಿತ್ವ ಅರಿವನ್ನು ಪಡೆಯುತ್ತದೆ.

ಮೂರು ರತ್ನಗಳು ಇಹವು ಒಂದೇ, ಆದರೆ ಎರಡು ಎನ್ನಬೇಡ,
ನಿನ್ನಲಿ ನಿಜವಾಗಿಯೂ ಮ್ವಾರಿಫತ್‌ನ ಪ್ರಮತ್ತತೆ ಇರುವುದಾದರೆ.

ಇದು ಏನು ಇಹುದು ಎಂದು ನೀನು ಕೇಳುವಿಯಾದರೆ,
ನುಡಿಯುವೆ 'ಆರೀಫ್'ನ, ಪ್ರೇಮಿಯು ಹಾಗೂ ಅಸ್ತಿತ್ವವು ಆಗಿಹನು.

ಮತ್ತೆ ಮಹ್ಮದರ ಪ್ರಕಾಶದಿಂದ ಏಕತ್ವ ಹಾಗೂ ನಿರಪೇಕ್ಷತೆಯನ್ನು ಪ್ರಾಪ್ತಿಸಿಕೊಳ್ಳುತ್ತಾನೆ. ಇದು ಎಂಥ ಪವಿತ್ರ ಅಸ್ತಿತ್ವವೆಂದರೆ, ಇಲ್ಲಿ ಯಾವ ಸಾಮಾನ್ಯ ಆಸ್ತಿಕತೆ ಅಥವಾ ನಾಸ್ತಿಕತೆಯ ಪ್ರವೇಶವು ಸರ್ವಥಾ ನಿರ್ಬಂಧಿತವಾಗಿದೆ. ಯಾವುದೇ ಬದಲಾವಣೆ ಅಥವಾ ರೂಪಾಂತರವು ಅಲ್ಲಿಯವರೆಗೆ ತಲುಪುವುದೇ ಅಸಾಧ್ಯವಾಗಿದೆ. ಇದು ಜ್ಞಾನರತ್ನದ ಗಣಿಯಾಗಿದೆ ಹಾಗೂ ದಿವ್ಯ ನಕ್ಷತ್ರಗಳ ಚಿಲುಮೆಗಳ ಆಕಾಶವಾಗಿದೆ.

“ದಾನಂ ಐ ದೋಸ್ತ್, ಹಂ ಬದೌಲತ್ ದೋಸ್ತ್,

ಹಸ್ತಿ ದೊಸ್ತ್‌ರಾ ಹಖೀಖತ್ ದೋಸ್ತ್’

‘ಸ್ನೇಹಿತನನ್ನು ಸ್ನೇಹಿತನಿಂದಲೇ ಅರಿತುಕೊಂಡನು,

ಅವನು ‘ಇರುವಿಕೆ’ಯ ಅಸ್ತಿತ್ವವನ್ನು ಒಪ್ಪಿಕೊಂಡನು’.

ಅಸ್ತಿತ್ವವೇ ಪ್ರಮತ್ತತೆ ಆಗಿದೆ. ಪ್ರಮತ್ತತೆಯೇ ಅಸ್ತಿತ್ವವಾಗಿದೆ. ಇದುವೇ ಮನ್ಸೂರನನ್ನು ಗಲ್ಲುಶಿಕ್ಷೆಯ ಭಾಗ್ಯವನ್ನು ದಯಪಾಲಿಸಿತು. ಅಂಜನಕ್ಕೆ ತಲೆ ನೀಡಲು ತಯಾರಾದರು. ಆದರೆ ಮಹ್ಮದ ಪ್ರಕಾಶವು ‘ದಿಕ್ಕುಗಳು ಒಡೆಯನು’ ಹಾಗೂ ‘ಪರಿಪಾಲನೆಯ ಅನುಪಾಲಕನು’ ಆಗಿರುತ್ತದೆ. ಯಾರೆ ಆಗಲಿ ಮಹ್ಮದರ ಜ್ಯೋತಿಯನ್ನು ಅದರ ಸತ್ಯತೆಯಲ್ಲಿ ಅರ್ಥೈಸಿಕೊಳ್ಳುವನು, ಅವನು ತನ್ನ ಉದ್ದೇಶದ ಪರಮೋಚ್ಛ ಪದವಿಗೆ ತಲುಪಿದ್ದಾನೆ. ಇದೇ ಅಂಶವು ಬುದ್ಧಿವಂತರ ಮೆಟ್ಟಿಲು ಹಾಗೂ ಸತ್ಯ ವಿಶ್ವಾಸಿಗಳ ಏಣಿ (ಮೇರಾಜ್)* ಆಗಿದೆ.

“ಆಂಚಾ ಸರ್ ತಾ ಸರ್ ಬೂದ್ ಸೂಂ ಆಯ್ ಬೂದ್

ನರ್ದ್ ಬಾನ್ ಬಾಮ್ ಮಖಸೂದ್ ಆಂಯ್ ಬೂದ್.”

ಮೇಲಿನ ಕವನ ಸಾಲಿನ ಕವಿ ಹೇಳುವುದೇನೆಂದರೆ, ಮಹ್ಮದರ ಪ್ರಕಾಶವು ಸಮಸ್ತ ಸಾಧಾರವಾಗುವ ಸ್ಥಳವಾಗಿದ್ದು, ಎಲ್ಲಾ ಮಾರ್ಗಗಳ ಉಗಮ ಸ್ಥಾನವಾಗಿದೆ. ಆ ‘ನಾನು ಇದ್ದೇನೆ’ ಅರ್ಥಾತ್ ದೈವೀ ವಿಶೇಷ ಜ್ಞಾನ ಅಥವಾ ‘ಏಕತ್ವ’ದ ಜ್ಞಾನದ ಮೂಲ ಸೆಲೆಯಾಗಿದೆ.

ನನ್ನ ಆಸ್ತಿತ್ವವು ಆಗಿಹುದು ಶಾಶ್ವತ, ನಾನು ಅಹ್ಮದರ ಪ್ರಕಾಶವಾಗಿದ್ದೇನೆ,

ಈ ಭೂಮಿ ಹಾಗೂ ಕಾಲವನ್ನು ನನ್ನಲ್ಲಿ ನೋಡುತ್ತೇನೆ ನಾನು.

ಆಕಾಶ, ಭೂಖಂಡ, ಈ ತಾರೆ, ಈ ಚಂದ್ರ, ಈ ಕೋಟೆ–ಕೊತ್ತಲ,

ದೇವರೇ ಸಾಕ್ಷಿ! ಈ ತೋಟವನು ಸ್ವಯಂನಲ್ಲಿ ನೋಡುತ್ತೇನೆ ನಾನು.

ಈ ವರ್ಣಮಯ ವಿವಿಧ ಕಾಯಗಳು ಭೂಮಿಯ ಆದಿಯಿಂದ ಇಂದಿನವರೆಗೆ ಪ್ರಕಟವಾಗಿವೆ. ಮುಂದೆಯೂ ಪ್ರಕಟವಾಗಬಹುದು. ಅವು ನನ್ನವೇ ಇವೆ. ಬದಲಾಗಿ ಅದು ಸ್ವಯಂ ನಾನಾಗಿದ್ದೇನೆ. ನಾನು ಸಮಸ್ತ ಶರೀರಗಳಲ್ಲಿ ಇದ್ದೇನೆ. ಮೇಲಿನ ಒಂಬೈನೂರು ಎಪ್ಪತ್ತರ (ನ ಸದ್ ವೊ ಹಫ್ತಾದ್) ಸಂಖ್ಯೆಯು ಅನಿರ್ದಿಷ್ಟ ಹಾಗೂ ಬಹುಸಂಖ್ಯಾತ ಸೂಚಕವಾಗಿ ಇದೆ. ಈಗ ನಾನು ಒಂದೇ ಶುದ್ಧ ನಿರ್ಮಲನಾಗಿದ್ದ,

---

* ಮೇರಾಜ್– ಇದರ ಶಾಬ್ದಿಕ ಅರ್ಥ ಏಣಿ, ಪ್ರವಾದಿ ಮಹ್ಮದರು ತಮ್ಮ ಜೀವಿತ ಕಾಲದಲ್ಲಿ ಏಳು ಆಕಾಶ ಸಂಚಾರವನ್ನು ರಜ್ಜಬ್ ೨೭ರಂದು ಮಾಡಿದ್ದರು. ಇದನ್ನು ‘ಮೇರಾಜ್’ ಎಂದು ಕರೆಯುತ್ತಾರೆ.

ವಿಧವಿಧವಾದ ಪಾತ್ರೆಗಳಲ್ಲಿ ಕಂಗೊಳಿಸುತ್ತಿದ್ದೇನೆ ಹಾಗೂ ಚಿಲಿಪಿಗುಟ್ಟುತ್ತಿದ್ದೇನೆ. ಇವೆಲ್ಲವೂ ನನ್ನ ಬಣ್ಣಬಣ್ಣದ ವೇಷಗಳಾಗಿವೆ ಹಾಗೂ ಯಾವ ರೀತಿ ಒಂದೇ ಶರೀರದ ಸಮಸ್ತ ಅಂಗಾಂಗಗಳಲ್ಲಿ ಒಂದೇ ಆತ್ಮವು ನೆಲೆಸಿರುತ್ತದೆಯೋ, ಅದೇ ರೀತಿಯಾಗಿ ನಾನು ಇವುಗಳ ಜೀವವಾಗಿದ್ದೇನೆ.

ಕೀರಿಟವಾಗಿದ್ದೇನೆ ನಿಸ್ಸಂಶಯ, ಅಂತರ್ದೃಷ್ಟಿಯ ರಾಜನು ನಾನು,
ಬೀಜವಾಗಿದ್ದೇನೆ ಸಮಸ್ತ ಪ್ರಪಂಚದ ಸೃಷ್ಟಿಯ.

'ಶಿರ್ಕ' ಇರಲಿ ಇದು, ಇದು ಕೇವಲ ರೂಪವಾಗಿಹುದು,
ನಾನಲ್ಲ 'ಅದು', ನಾನು ಯಾವುದು ಇಲ್ಲಿ ಅವಶ್ಯಕತೆಯಿದೆ.

ಮತ್ತೆ ಈ 'ನಾನು' ಸಹ ದೂರವಾದರೆ ಆಗ,
ಕಾಲಿನಿಂದ ತಲೆಯವರೆಗೆ ಪ್ರಕಾಶಮಯವಾಗುವುದು.

ಅದು ಇದು, ಅಂಥ, ಇಂಥವುಗಳಿಂದ ಇದು ಮುಕ್ತವಾಗಿದೆ,
ಶಾಶ್ವತ ಅಸ್ತಿತ್ವದ ಸ್ಥಾನವು ಅತೀವ ಮಹೋನ್ನತವಾಗಿದೆ.

ಹೀಗಾಗಿ ಮಹ್ಮದರ(ಸ.ಅ) ಅವರ ಪ್ರಕಾಶವು ಬೀಜವಾಗಿದೆ, ವಿಶೇಷವಾಗಿ ಜೀವಿಗಳ ವೃಕ್ಷದ ಇದು ಯಾವ ಸ್ಥಳದಲ್ಲಿ ತನ್ನ ತೇಜಸ್ಸನ್ನು ಪ್ರಕಟಗೊಳಿಸುತ್ತದೆಯೋ, ಅಲ್ಲಿಂದ ವೃಕ್ಷವು ಈ ರೀತಿಯಾಗಿ ಮಾಯವಾಗುತ್ತದೆ ಹಗಲಿನ ಬೆಳಕಿನಲ್ಲಿ ನಕ್ಷತ್ರ ಮಾಯವಾದಂತೆ, ಇದೇ ಸ್ಥಾನವಾಗಿದೆ. ತಿಳಿಗೇಡಿಗೆ ವೃಕ್ಷವು ಕಂಡುಬರುತ್ತದೆ, ಹಾಗೂ 'ಆರೀಫ್'ನಿಗೆ ಬೀಜವು ಒಂದು ಸಮಯ ಹೀಗೂ ಬರುತ್ತದೆ, ಆರೀಫ್‌ನೂ ಈ ರೀತಿಯಾಗಿ ವೃಕ್ಷವೇ ಬೀಜದ ಮೂಲ ರೂಪವಾಗಿದೆ ಹಾಗೂ ಇವೆರಡು ಒಂದು – ಇನ್ನೊಂದರ ಮೂಲಸತ್ಯವನ್ನೇ ಅತ್ಯುನ್ನತ ಸ್ಥಾನದಲ್ಲಿ ಪ್ರಾಪ್ತವಾಗಿದೆ. ಹೊರತು ಇದನ್ನು ಬೇರ್ಪಡಿಸುವ ಸ್ಥಿತಿ ಅಥವಾ ಅಯೋಗ್ಯ ಸ್ಥಾನವನ್ನು.

'ಬೀಜದ ಮುಖವು, ಅಸಲಿ ಮುಖವು ಆಗಿರುವುದಿಲ್ಲ,
ಅದು ಆಗಿರುವುದು ವೃಕ್ಷವು ನಿಸ್ಸಂದೇಹ.

ವೃಕ್ಷವು ಶ್ರೇಷ್ಠವಾಗಿಹುದು, ಬೀಜಕ್ಕೆ ಹೇಳಿ,
ವಾಸ್ತವದ ಸರಳವು ಮೂಲದಲಿ ಸ್ಥಿರವಾಗಿದೆ.

ಕವನದ ಕೊನೆಯ ಸಾಲಿನಿಂದ ಕವನ ಪ್ರಾರಂಭದ ಸಾಲನ್ನು ಪಡೆಯುವುದು ಸರಳವಾಗಿದೆ. ಆದರೆ ಪ್ರಾರಂಭದ ಸಾಲಿನಿಂದ ಅಂತ್ಯದ ಸಾಲನ್ನು ಹುಡುಕುವುದು ಕಷ್ಟಕರವಾಗಿದೆ. ಗುರಿಯ ಆಪೇಕ್ಷಿತನು ಕೊನೆಯ ಹಂತವನ್ನು ತಲುಪಿದಾಗ ಸಾಧಕನ ಸ್ಥಿತಿಯು ದೇವರ ಸಾಮಿಪ್ಯವನ್ನು ತಲುಪುವಂತಾಗುತ್ತದೆ. ಇದೇ ಕಾರಣದಿಂದ

ಅದೇ ತೇಜಸ್ಸು, ನಿಯಂತ್ರಣ (ಮೇಲು-ಕೀಳಿನ ಭಾವ) ಇವುಗಳಿಂದ ಹಾದು ಹೋದ ಸ್ಥಾನವಾದ, ಬಹುವಚನಕ್ಕೆ ಯಾವ ದೈವೀಜ್ಞಾನದ ಅವಶ್ಯಕತೆ ಇದೆಯೋ, ಅದು ಅತ್ಯಂತ ಔನತ್ಯದ್ದಾಗಿವೆ, ಅದು ದಾರಿದೀಪವಾಗುತ್ತದೆ. ಬಹುತ್ವದ ಬಹು ಇಂಥ ಸ್ಥಾನವಾಗಿದೆ, ಅಲ್ಲಿ ಬಹುತ್ವಕ್ಕೆ ಸೋಲು ಅಥವಾ ಉದ್ವಿಗ್ನತೆ ಇಲ್ಲ. ಅಥವ ದೀಪದೊಂದಿಗೆ ಅವಧಾನವು ಇಲ್ಲ. ಇದು ಎಂತಹ ಸ್ಥಾನವೆಂದರೆ, ಯಾವ ವಸ್ತುವೂ ಇದರಿಂದ ಹೊಮ್ಮುವುದಿಲ್ಲ ಅಥವಾ ಯಾವ ವಸ್ತುವೂ ಇದರಲ್ಲಿ ಪ್ರವೇಶಿಸುವುದಿಲ್ಲ. ಆದಿ ಹಾಗೂ ಅಂತ್ಯವು ಇದರ ಅಸ್ತಿತ್ವದಿಂದಲೇ ಕಂಡು ಬರುತ್ತದೆ. ಇದರಿಂದಲೇ ಎತ್ತಿಕೊಳ್ಳಬೇಕಾಗಿದೆ ಹಾಗೂ ತೆಗೆದುಕೊಳ್ಳಬೇಕಾಗಿದೆ. ದರ್ಶನ, ಇರುವಿಕೆಯ ಸ್ಥಿತಿ ಹಾಗೂ ಅಸ್ತಿತ್ವ ಇವುಗಳ ರಹಸ್ಯಗಳನ್ನು ಇದೇ ಶರೀರದಿಂದ ಪಡೆದುಕೊಳ್ಳಬೇಕಾಗಿದೆ. ಯಾವ ರೀತಿಯಿಂದ ಆಕೃತಿ ಪುರಾತನದಿಂದ ರೂಪಿತವಾಗಿದೆಯೇನೋ, ಅದರಿಂದಲೇ ಪರಿವೀಕ್ಷಿಸಬೇಕಾಗಿದೆ. ಹೇ ಬಹರಿ! ಬಹುಶಃ ನೀನು ಹುಚ್ಚನಿರಬೇಕು, ನೀನು ಒಂದು ರಹಸ್ಯದಿಂದ ನಿನ್ನ ಒಡಂಬಡಿಕೆಯನ್ನು ಪರಿಪೂರ್ಣಗೊಳಿಸಲಿಲ್ಲ, ಅರ್ಥಾತ್ ಒಂದು ರಹಸ್ಯವನ್ನು ಸಂಪೂರ್ಣವಾಗಿ ವಿವರಿಸಲಿಲ್ಲ ಹಾಗೂ ಬೇರೆಯ ಕಡೆಗೆ ಹೆಜ್ಜೆ ಹಾಕಿದೆ. ಅದನ್ನು ಬಿಡು, ಬಾ! ಮತ್ತೇ ಭೇರುಂಡನ ತರಹ ವೃಕ್ಷದ ಟೊಂಗೆಯ ಕಡೆಗೆ ನಡೆಯೋಣ ಹಾಗೂ ಇದರ ಬೀಜದ ಸ್ಮರಣೆಯಲ್ಲಿ ನಿರತರಾಗೋಣ. ಯಾವುದು ಆರಂಭದ ಉದಯಕ್ಕೆ ಬೆಳಕನ್ನು ನೀಡುವುದೋ ಹಾಗೂ ಅಂತ್ಯಕ್ಕೆ ಪ್ರಕಾಶ ನೀಡಿ ಪ್ರಕಟಪಡಿಸುವವನಾಗಿದ್ದಾನೆ.

ಹೇ ಆತ್ಮೀಯನೇ! ಬೀಜವೇ ವೃಕ್ಷದ ಆರಂಭ ಹಾಗೂ ಔನ್ನತ್ಯವಾಗಿದೆ. ಆದುದರಿಂದ ಬೀಜವನ್ನು ವೃಕ್ಷದ ಬೇರಿನಿಂದ ಫಲದವರೆಗೆ ಅವರ ಸ್ವಯಂನ ಜನಿತ ಹಾಗೂ ಇವೆಲ್ಲದರಲ್ಲಿ ಸೇರಿರುವ ಎಂದು ಭಾವಿಸುವುದಾದರೆ ಅದು ಸೂಕ್ತವಾಗಿದೆ. ತನ್ನ ಸಮಸ್ತ ಸ್ಥಾನಮಾನಗಳನ್ನು, ಅಂದರೆ ಪ್ರತಿ ಟೊಂಗೆ ಹಾಗೂ ಪ್ರತಿ ಎಲೆಯನ್ನು ತನ್ನ ಶರೀರವೆಂದು ಭಾವಿಸಬೇಕು ಹಾಗೂ ಇವೆಲ್ಲಕ್ಕಿಂತ ಭಿನ್ನವೆಂದು ಭಾವಿಸುವುದಾದರೆ ಅದು ಅಸಂಗತವಾಗಿದೆ. ಒಂಬೈನೂರಾ ಎಪ್ಪತ್ತು ಶರೀರಗಳ ಭಾವಾರ್ಥವು ಇದೇ ಆಗಿದೆ.

ಮನುಷ್ಯನು ಹೃದಯವಾಗಿಹನು ಚಿತ್ತವೂ ಅಲ್ಲ, ಆತ್ಮವೂ ಅಲ್ಲ,
ಬದಲಾಗಿ ಇದರಿಂದಲೇ ಇಹುದು ಈ ಮೂರರ ವಿಜಯ.

ಯಾವನು ಉಭಯತ್ವನು ಆಗಿಹನು ಅತಿ ಉನ್ನತನು,
ಅವನ 'ಸ್ವಯಂ'ನ ನೆರಳೂ ಅಲ್ಲ, ಅನ್ಯನ ಛಾಯೆಯು ಅಲ್ಲ.

ಮತ್ತೆ ಕವಿಯು ನುಡಿಯುತ್ತಾನೆ. ಅದೇನೆಂದರೆ ನಾನು ಅದೇ ಪ್ರಕಾಶವಾಗಿದ್ದೇನೆ,

ಯಾವುದನ್ನು ನಾನು ಮೇಲೆ ಉಲ್ಲೇಖದಲ್ಲಿ ವಿಭಿನ್ನ ರೂಪಗಳಲ್ಲಿ ಹಾಗೂ ನವನವೀನ ಸಂಪ್ರದಾಯಗಳಿಂದ ಅಸ್ತಿತ್ವರಹಿತತೆಯಿಂದ ಅಸ್ತಿತ್ವದವರೆಗೆ ಹಾಗೂ ಅಸ್ತಿತ್ವದಿಂದ ರಹಿತತೆಯಲ್ಲಿ ಮತ್ತೆ ಮತ್ತೆ ಬಂದು ಹೋಗುತ್ತಾ ಇದ್ದೇನೆ. ಆದರೆ ನಾನು ಏನು ಆಗಿದ್ದೇನೆ, ಅದೇ ಆಗಿದ್ದೇನೆ. ಸದಾ ನಿತ್ಯತೆಯ ಮದಿರೆಯಿಂದ ಪ್ರಮತ್ತನಾಗಿ ಸಂಭ್ರಮಿತನು.

ನೀ ನಂಬುವುದಾದರೇ ನವವಧುವು ಆಗುವುದು ಪ್ರತಿ ಚಹರೆಯು,
ಇಲ್ಲಿ ಬಂದು–ಹೋಗುವ ಮಹ್ಮದರ ಪ್ರಕಾಶ ಪ್ರತಿ ಶ್ವಾಸವು.

ಹೇ ಆತ್ಮೀಯನೇ! ಮನುಷ್ಯನು ಮಹ್ಮದ (ಸ.ಅ)ರವರ ಪ್ರಕಾಶದ ಛಾಯೆಯಾಗಿದ್ದಾನೆ. ಮಹ್ಮದರ ಪ್ರಕಾಶವನ್ನು ಯಾವ ರೀತಿಯಿಂದ ಕಡಿಮೆ ಶಬ್ದಗಳಲ್ಲಿ ಹಾಗೂ ವಿಶಾಲ ಅರ್ಥದಲ್ಲಿ ಬರೆಯಲಾಗಿವೆಯೋ, ಅದೇ ವಿಧಾನದಿಂದ ಪ್ರಾಪ್ತಿಸಿಕೊಳ್ಳು, ಹಾಗೂ ಛಾಯೆಯನ್ನು ಇದೇ ದೀಪದ ಪ್ರಭೆಯ ಜೊತೆ ಸೇರಿಸಿದರೆ, ಅದೆ ದೈವಿ ಪ್ರಕಾಶವಾಗುತ್ತದೆ.

ಶುಭ್ರತೆ ಹಾಗೂ ಪುಷ್ಪದ ಬೇಧ ಹಾಗೂ ಬಂಧನದಿಂದ ಮುಕ್ತಿ ಪಡೆಯಲಿ ಮಹ್ಮದ ಪ್ರಕಾಶ ಅರ್ಥಾತ್ ದೈವಿ ಶಾಶ್ವತ ಸತ್ಯ, ಯಾವುದು ದೈವೀ ಕೋಶವಾಗಿತ್ತು ಯಾವಾಗ ತನ್ನ ಸತ್ತೆಯ ವೀಕ್ಷಕನಾದನು ಇದೇ ದೈವಿ ಸಾಕ್ಷಾತ್ಕಾರವಾಗಿದೆ. ಹೀಗಾಗಿ ಮಹ್ಮದರ ಜ್ಯೋತಿಯ ಮೇಲೆ ಮನಸೋಲುವವನು ಈ ದಾವೆಯನ್ನು ಮಾಡುತ್ತಾನೆ, ಅದೇನೆಂದರೆ ಅನೇಕ ಸಲ ಅಸ್ತಿತ್ವದಿಂದ ಶೂನ್ಯತೆಯಲಿ ಹಾಗೂ ಶೂನ್ಯತೆಯಿಂದ ಅಸ್ತಿತ್ವದಲಿ ಬರುತ್ತಾ–ಹೋಗುತ್ತಾ ಇದ್ದನು. ಆಗ ಬುದ್ಧಿವಂತರ ಬಳಿ ಇದು ಒಂದು ಅಲ್ಪ ಹಾಗು ಸಾಮಾನ್ಯ ಮಾತಾಗಿರಲಿಲ್ಲ, ಬದಲಾಗಿ ಅತೀ ಸೂಕ್ತ ಮಾತಾಗಿತ್ತು. ಯಾಕೆಂದರೆ ಹಲವು ಪರಿಪೂರ್ಣ ಔಲಿಯಾಗಳಿಗೆ (ಸೂಫಿ ಸಂತರಿಗೆ) ಈ ತರಹದ ಸಂಚಾರ ವಿಹಾರ ಹಾಗೂ ಹಾರಾಟವೂ ಲಭ್ಯವಾಗಿತ್ತು. ಈ ಕವನ ಸಾಲು 'ಹಮ್‌ಚೂ ಸಬ್ಜಾ ಬಾರಾಹ ರವಾಯಿದಮ್' ಈ ತರಹ ವಿಹಾರ ಸಂಚಾರದ ಪಕ್ಷಿನೋಟದ ಸುಳಿವನ್ನು ನೀಡುತ್ತವೆ.

ನುಡಿಸು ನೀ ಬೇರೆ ರಾಗದಲಿ ಈ ಭವ್ಯ ಗೀತೆಯ,
ಬಂಧಿಸುತಿರುವೆ ನೀನು, ಶಾಶ್ವತನ ಅಸ್ತಿತ್ವನು ಕಥನ ರೂಪದಲಿ.

ಹೇ ಆತ್ಮೀಯನೇ! ಇದೇ ವಾದವನ್ನು ಇನ್ನೊಂದು ರೀತಿಯಿಂದ ಸ್ಪಷ್ಟಿಕರಿಸುತ್ತೇನೆ ಹಾಗೂ ರಹಸ್ಯ ಭೇದಿಸುತ್ತೇನೆ. ಮನುಷ್ಯ ಬಾಲ್ಯದ ಮುಂಚಿನ ಅವಸ್ಥೆಯಿಂದ ಮುಪ್ಪಿನವರೆಗೆ ಅದೆಷ್ಟು ಹಂತಗಳನ್ನು ಹಾದು ಹೋಗುತ್ತಾನೆ ಹಾಗೂ ಎಷ್ಟು ಘಟ್ಟಗಳನ್ನು ದಾಟುತ್ತಾನೆ. ಪ್ರತಿ ಹಂತದ ಮಧ್ಯೆ ಅದೆಷ್ಟು ಸ್ಥಾನಗಳನ್ನು ಹಿಂದೆ ಬಿಟ್ಟು, ಮುಂದೆ

ಸಾಗಿರುವನು. ಇದನ್ನಂತೂ ಆ 'ದಿವ್ಯ ಶಾಶ್ವತ ಪರಂಜ್ಞಾನಿಯೇ' ಅರಿಯಬಲ್ಲನು! ಆದರೆ ಸಂಕ್ಷಿಪ್ತ ಹಾಗೂ ಅವಶ್ಯಕ ಹಂತ ಇವುಗಳಿವೆ. ಅದೇನೆಂದರೆ ಏಕ ಸಹಭಾಗಿತ ವಿರಹಿತದಿಂದ ಏಕತ್ವದ ಕಡೆ, ಏಕತ್ವದಿಂದ ಶಾಶ್ವತ ಏಕತ್ವ ಕಡೆಗೆ ಅಂತಿಮ ಶಂಖನಾದದ ಜತೆ ತಲುಪುತ್ತಾನೆ. ಏಕತ್ವವು ಆತ್ಮಗಳಿಂದಾಗಿದೆ. ಆತ್ಮಗಳಿಂದ ದೃಷ್ಟಾಂತಗಳಲಿ, ದೃಷ್ಟಾಂತಗಳಿಂದ ನೆಲೆಸುವಿಕೆಯಲ್ಲಿ ಅರ್ಥಾತ್ ಮೊದಲು ತಂದೆಯ ಪೃಷ್ಠದಲ್ಲಿ, ತಂದೆಯ ಪೃಷ್ಠದಿಂದ ತಾಯಿಯ ಗರ್ಭದಲ್ಲಿ ಮತ್ತೆ ಈ ವೀರ್ಯವು ರಕ್ತ-ಮಾಂಸದ ಲೋಳೆಯಲ್ಲಿ ಮೂರು ಹಂತಗಳಲ್ಲಿ ಮೂರು ಅವಧಿಯಲ್ಲಿ (ಅರ್ಥಾತ್ ನಾಲ್ಕು ತಿಂಗಳಲಿ) ಅದು ಪೂರ್ಣತೆಯನ್ನು ಪ್ರಾಪ್ತಿಸಿಕೊಳ್ಳುತ್ತದೆ. ಮತ್ತೆ ಮೂರು ಅಧಿಕ ಅವಧಿಗಳು ಕಳೆಯುತ್ತವೆ. ಆಗ ತಾಯಿಯ ಗರ್ಭದಿಂದ ಹೊರಬರುತ್ತಾನೆ. ಈ ರೀತಿಯಾಗಿ ಹಾಲು ಆಹಾರದ ಹಂತದಿಂದ ಬಾಲ್ಯಕ್ಕೆ, ಬಾಲ್ಯದಿಂದ ತರುಣಾವಸ್ಥೆಗೆ, ತಾರುಣ್ಯದಿಂದ ಮಧ್ಯವಯಸ್ಸಿಗೆ, ಮಧ್ಯ ವಯಸ್ಸಿನಿಂದ ವೃದ್ಯಾಪವನ್ನು ತಲುಪುತ್ತಾನೆ.

ಒಂದು ಸ್ಥಿತಿಯು ಇನ್ನೊಂದು ಸ್ಥಿತಿಯಂತೆ ಇರುವುದಿಲ್ಲ, ಬಾಲ್ಯದ ಅವಸ್ಥೆಯೇ ಬೇರೆ! ತಾರುಣ್ಯದ ವರ್ಣವೇ ಬೇರೆ!

ಇದಲ್ಲ! ಎರಡು ಹೆಜ್ಜೆಯ ನಂತರ ಕಾಬಾದ ಪ್ರಾಂಗಣವನ್ನು ಕಂಡೆ,
ಅವನನ್ನು ಕಾಣುವ ಸಲುವಾಗಿ ದೀರ್ಘ ಮಾರ್ಗವನು ಕಂಡೆ.

ಇದು ಆರಂಭದ ಗರ್ಭವೂ ಅಲ್ಲ, ಚರಮದ ಮೃತ್ಯುವೂ ಅಲ್ಲ,
ಎರಡು ಸಾವಿರ ಇಂತಹ ತೆರೆಗಳನ್ನು ಸರಿಸಿ ರಹಸ್ಯವನ್ನು ಕಂಡೆ.

ಹೀಗಾಗಿ ಪ್ರತಿಯೊಂದು ಸ್ಥಿತಿಯಲ್ಲಿ ಶರೀರವಿಲ್ಲದೆ ಹೀಗಾಗಬಹುದು. ಒಂಬೈನೂರಾ ಎಪ್ಪತ್ತು ಶರೀರಗಳ ವಿಹಾರ-ಸಂಚಾರವು ಇದರ ಅವತರಣದ ಸುಳಿವನ್ನು ನೀಡುತ್ತದೆ.

ಬಾಲ್ಯವಸ್ಥೆಯಿಂದಲೂ ಈ ಉದ್ಯಾನವು ಉಲ್ಲಾಸಭರಿತವಾಗಿದೆ,
ಉತ್ಕೃಷ್ಟ ಆಗುವುದು ಇದು, ನವೀನ ರೀತಿಯ ಎರಕ ಹೊಯ್ದರೆ.

ಒಬ್ಬ ವ್ಯಕ್ತಿಯ ಈ ಕವನದ ಸಾಲನ್ನು ಫಕೀರನ ಮುಂದೆ ಓದಿ, ಇದರ ರಹಸ್ಯವನ್ನು ವಿಚಾರಿಸಿದನು. ನಾನರಿಯೇ! ಆಗ ಅದೇಂಥ ಸಮಯವಿತ್ತು! ಆಗ ಅದೇನು ತಲೆಯಲ್ಲಿ ಸುಳಿಯಿತು, ಅದಕ್ಕೆ ಅನುರೂಪವಾಗಿ ಉತ್ತರಿಸಿದೆ. ಅದಾಗ್ಯೂ ನಾನು ಈ ಶೈಲಿಯ ಪರಿಣಿತನೂ ಅಲ್ಲ, ಹಾಗು ಇದರ ಫಲಪ್ರಾಪ್ತಿಯ ಅರ್ಹನೂ ಅಲ್ಲ, ನಾನು ನುಡಿದೆ 'ಹೇ ಅರ್ಥದ ಮುತ್ತುಗಳನ್ನು ಹುಡುಕುವವನೇ! ಚೆನ್ನಾಗಿ ಗಹನವಾಗಿ ಚಿಂತನೆ ಮಾಡಿ ಹಾಗು ವಿಚಾರಿಸಿ ಆ ಕವಿ ಮಹಾಶಯರು (ಅಲ್ಲಾಹನು ಅವರ ಗೋರಿಯನ್ನು ಪ್ರಕಾಶಿಸಲಿ) ಬಹುತೇಕ ತೊಂಬತ್ತು ವರ್ಷ ಅಥವಾ ಎಪ್ಪತ್ತು ವರ್ಷ ಆಯುಷ್ಯದಲ್ಲಿ ಒಂಬೈನೂರಾ ಎಪ್ಪತ್ತು ಶರೀರಗಳನ್ನು ಕಂಡಿರಬೇಕು. ಸೇವಕ

ಅವರ ಅಲ್ಪ ಗುಲಾಮರು ಹಾಗೂ ಅಭಿಮಾನಗಳಲ್ಲಿ ಒಬ್ಬನಾಗಿದ್ದಾನೆ. ಒಂದು ದಿನದಲ್ಲಿ ಬದಲಾಗಿ ಒಂದು ಗಳಿಗೆಯಲ್ಲಿ ಅದೆಷ್ಟು ಶರೀರಗಳನ್ನು ತನ್ನ ಮೇಲೆ ಕಾಣುತ್ತಾನೆ. ಅವನು ಕೇಳಿದನು ಅದ್ಹೇಗೆ? ನಾನು ನುಡಿದೆ, ಒಂದು ಮಾತಿನಿಂದ ಇನ್ನೊಂದು ಮಾತಿಗೆ ಬಂದಾಗ, ಮತ್ತೊಂದು ಶರೀರವನು ಪಡೆಯುತ್ತೇನೆ. ಒಂದು ವಚನದಿಂದ ಇನ್ನೊಂದು ವಚನಕ್ಕೆ ಬರುವುದೊರಳಗಾಗಿ, ಮತ್ತೊಂದು ಹೊಸ ಉಡುಪನ್ನು ಧರಿಸಿರುತ್ತೇನೆ. ಯಾವ ರೀತಿ ಮಹಾಮಹಿಮ ಶಾಶ್ವತ ಗೌರವ ಶ್ರೇಷ್ಠನು ಒಂದು ರೂಪದಲ್ಲಿ ಮತ್ತೊಮ್ಮೆ ಪ್ರಕಾಶ ನೀಡುವುದಿಲ್ಲವೋ, ಅದೇ ರೀತಿಯಾಗಿ ಇದರ "ಖಲೀಫಾ" ಆಗಿರುವ ಆತ್ಮವು ಸಮಸ್ತ ಸೃಷ್ಟಿಯ ಸಾರವಾಗಿರುವ, ನಾನಾ ಬಗೆಯ ಆಸಕ್ತಿಗಳಿಂದಾಗಿ ಚಮತ್ಕಾರವನ್ನು ಸೃಷ್ಟಿಸುವುದು ಹಾಗೂ ಸೌಂದರ್ಯದ ಮೋಹಕ್ಕೆ ಒಳಗಾಗಲು, ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ವಿಹಾರ ಮಾಡುತ್ತಿರುತ್ತದೆ. ಒಂದು ಸ್ಥಳ ಇನ್ನೊಂದು ಸ್ಥಳಕ್ಕೆ ಸುತ್ತು ಹಾಕುತ್ತಲೇ ಇರುತ್ತದೆ. ಆದರೆ ಒಂದೇ ಸ್ಥಳದಲ್ಲಿ ಎರಡು ಸಲ ಗಮನಹರಿಸುವುದಿಲ್ಲ. ಹಾಗು ಎರಡು ಸಲ ಒಂದೇ ಉಡುಪನ್ನು ಧರಿಸುವುದಿಲ್ಲ. ಪ್ರತಿಕ್ಷಣವೂ ಅಸ್ತಿತ್ವ ಪ್ರಕಟಕ್ಕಾಗಿ, ಬೆಂಕಿಯ ಇಂಧನದಂತೆ ಒಂದು ಹೊಸ ದೃಶ್ಯಕ್ಕೆ ಜನ್ಮ ನೀಡುತ್ತದೆ. ಹೀಗಾಗಿ ಪ್ರತಿ ಹೊಸ ದೃಶ್ಯವು ಒಂದು ಶರೀರವಾಗಿದೆ.

"ರುಖೆ ಅಂಯ್ ಮಾನಿ ಅಜ್ ಏಕ್‌ರಂಗ್ ಬನಾಮಿದ್ ಬಂತಂಗ್,
ಆ ಮಸೂರ್ ಗರ್ ಬೂದ್ ರಂಗ್ ದಿಗರ್ ತಸ್ವೀರ್ ಕುನ್".

ಅರ್ಥಾತ್ ಪ್ರಿಯತಮೆ ಏಕವರ್ಣದಿಂದ ಬೇಜಾರಾಗಿದ್ದಾಳೆ, ಹೇ ಮಾನಿಚಿತ್ರಕಾರನೆ, ನಿನ್ನ ಬಳಿ ಬಣ್ಣವಿದ್ದರೆ, ಹೊಸ ರೂಪಗಳನು ಸೃಷ್ಟಿಸು. ಮನುಷ್ಯನು ಯಾವಾಗ ಮೌನವಾಗಿ ಕುಳಿತಿರುತ್ತಾನೆ, ಆಗ ಮೌನದ ನಶೆಯಲ್ಲಿ ಪ್ರಮತ್ತನಾಗಿರುತ್ತಾನೆ. ಆಗ ಅವನ ಹೃದಯದಲ್ಲಿ ಯಾವುದೇ ಅಪಾಯ ಬಂದರೂ, ಅವನ ಆಂತರ್ಯವು ಆ ಅಪಾಯದ ಚಿತ್ರವಾಗುತ್ತದೆ. ಅಕಸ್ಮಾತ್ ಮಾತಾಡುತ್ತಿದ್ದರೆ, ಸ್ನೇಹಿತನ ಸಾಹಿತ್ಯ ಭಂಡಾರದಿಂದ ನಾಲಿಗೆಯಿಂದ ಹೊರಹೊಮ್ಮುವ ಪ್ರತಿ ಅಕ್ಷರವು, ಅವನ ಆಂತರ್ಯದಲ್ಲಿ ಆ ಅಕ್ಷರದ ರೂಪ ಚಿತ್ರವು ಮೂಡುತ್ತದೆ. ಅಕಸ್ಮಾತ್ 'ಲೋಟ'ಎಂದರೆ 'ಲೋಟ'ದ ಚಿತ್ರವು ಮೂಡುತ್ತದೆ. ಮದಿರೆಯ ಮಡಕೆ' ಎಂದರೆ 'ಮದಿರೆಯ ಮಡಿಕೆ'ಯು ಆಕಾಶವೆಂದರೆ ಆಕಾಶ, ನಕ್ಷತ್ರವೆಂದರೆ ನಕ್ಷತ್ರ – ಈ ತರಹದ ಚಿತ್ರಗಳು ಮೂಡುತ್ತವೆ. ಅದೃಷ್ಟವಂತನು, ಆ ಮನುಷ್ಯನ ಯೌವನದ ಆಂತರ್ಯದಲ್ಲಿ ಸದಾ ಮನುಷ್ಯನ ಚಿತ್ರವಿರುತ್ತದೆ. ನಿಯಮಗಳು ನಡೆಗೆ ಅನುಗುಣವಾಗಿ ಸಮಾನವಾಗಿರಲಿ, ನವ ಗೌರವಗಳು ಹಾಗೂ ಉಪಮೆಗಳಿಂದ ಈ ಪರವಶತೆಗೆ ಬಲ ದೊರೆಯುತ್ತದೆ. ಹಾಗೂ ಸಂಭಾಷಣೆಯ ಅನುಮೋದನೆಯಾಗುತ್ತದೆ.

"ಮೈ ಬರ್‌ಯಜ಼್ ಅಯ್ ಸಾಖಿ ಅಜ಼್ ಮೀನಾ ಬ ಮೀನಾಯೇ ದಿಗರ್,
ಅವರ್ ಆಂ ಖುರ್ಷೀದ್ ಸೀಮಾರ ಬ ಸೀಮಾಯೇ ದಿಗರ್".

[ಹೇ ಸಾಕಿಯೆ, (ಮದಿರೆ ಕುಡಿಸುವವನು), ಮದಿರೆಯನ್ನು ಒಂದು ಹೂಜಿಯಿಂದ, ಇನ್ನೊಂದು ಹೂಜಿಗೆ ಸುರಿ ಹಾಗೂ ಈ ಹಣೆಯ ಸೂರ್ಯನಿಂದ ಇನ್ನೊಂದು ಹಣೆಯನ್ನು ಪ್ರಕಾಶಿಸು]

ಮನುಷ್ಯನ ಬುನಾದಿಯು ಹಜ್ರತ್ ಆದಂ ಆಗಿರುತ್ತಾರೆ. ಹಜ್ರತ್ ಆದಂರಿಂದ ಕವಿಯವರೆಗೆ ಅಸಂಖ್ಯಾತ ಏಣಿಗಳು ಉಪಲಬ್ದವಿದ್ದವು, ಅಂತರ್ದೃಷ್ಟಿಯ ದೀಪವು 'ಆದಂ'ರ ಬಳಿಯಿತ್ತು (ತಾತ್ಪರ್ಯವೆಂದರೆ ವಾಸ್ತವಿಕ ಸತ್ಯತೆಯಿಂದ ಈ ಅಂತರ್ದೃಷ್ಟಿಯ ದೀಪವನ್ನು ಹೊಂದಿರುವವನೆ 'ಆದಂ' ಆಗಿರುತ್ತಾರೆ) ಅದು ಹಸ್ತಾನುಗತವಾಗಿ ಯಾವುದೇ ಕಡತವಾಗದೆ, ಅತ್ಯಂತ ಸುರಕ್ಷಿತ ವಿಧಾನದಿಂದ, ಅಮಾನತ್ತಿನ (ಕೈಗಡಗದ) ರೂಪದಲ್ಲಿ ಕವಿಯವರೆಗೆ ತಲುಪಿದೆ. ಕವಿಯು ಈ ದೀಪದ ವಿವೇಚನೆಯಿಂದ ವಿವೇಕದ ಅಂತರ್ದೃಷ್ಟಿಯನ್ನು ಇದರಿಂದಲೇ ಪ್ರಕಾಶಿತಗೊಳಿಸಲಾಗಿದೆ. ತನ್ನ 'ಅಹಂ'ನ ವಿವೇಕದ ಅಂತರ್ದೃಷ್ಟಿಯ ಬೆಳಕಿನಲ್ಲಿ 'ಸ್ವಯಂ' ಅನ್ನು 'ಆದಂ'ನ ಪ್ರತಿರೂಪವಾಗಿ ಕಂಡನು. 'ಆದಂ' ಹಾಗೂ ತನ್ನ ಮಧ್ಯೆ ಅದೆಷ್ಟು ಮೆಟ್ಟಿಲುಗಳು ಸಾಗಿರುವವು, ಇದನ್ನು ತನ್ನದೇ ಕಂದೀಲುಗಳಾಗಿ ಅರ್ಥಾತ್ ಶರೀರಗಳೆಂದು ಭಾವಿಸಿದನು.

ನನ್ನ ಮತ್ತು 'ಆದಂ'ರ ಮಧ್ಯೆ ಇನ್ನೂರು ಮೆಟ್ಟಿಲುಗಳ ಅಂತರವಿದೆ,
ನನಗೇಕೆ ದುಃಖ ಇವು ನನ್ನ ದೀಪದ ಲಾಂದ್ರಾಗಳಾಗಿವೆ.

ಮೇಲೆ ಉಲ್ಲೇಖಿಸಿದ ಪ್ರಸ್ತಾಪವೂ ಒಂಬೈನೂರು ಎಪ್ಪತ್ತು ಶರೀರದ ರಹಸ್ಯಗಳಲ್ಲಿ ಒಂದಾಗಬಹುದು. ಈ ಮಾತಿನ ಪ್ರಮಾಣದಲ್ಲಿ ನಾನು ಈ ಅರ್ಥಹೀನ ವಚನಗಳು, ಅಪ್ರಯೋಜಕ ಚರ್ಚೆ ಅಥವಾ ಅಂಶಗಳು, ವಿವರಣೆಗಳು ಹಾಗೂ ಕವನಗಳು ಇತ್ಯಾದಿಗಳನ್ನು ಪ್ರಸ್ತುತಪಡಿಸಿದ್ದೇನೆ. ಇವುಗಳನ್ನು ಧಾರ್ಮಿಕ ಪಂಡಿತರ ಗ್ರಂಥಗಳಿಂದ ಆಯ್ದುಕೊಂಡಿರುವುದಿಲ್ಲ. ಬದಲಾಗಿ ನನ್ನ ಸ್ವಯಂನ ದೋಷಪೂರ್ಣ ಕವನಗಳು ಹಾಗೂ ಅರೆಬರೆ ಗದ್ಯದಲ್ಲಿ ಸಾದರಪಡಿಸಿದ್ದೇನೆ. ಯಾಕೆಂದರೆ ಹತ್ತಿಯ ಬಟ್ಟೆಯಲ್ಲಿ ರೇಷ್ಮೆಯ ತೇಪೆಯನ್ನು ಹಚ್ಚುವುದು ಹಾಗೂ ವಜ್ರವನ್ನು ಮಣ್ಣಿನ ಗುಡ್ಡೆಯಲ್ಲಿ ಹಾಕುವುದು ನನಗೆ ಸ್ವೀಕಾರಾರ್ಹವಾಗಿರಲಿಲ್ಲ. ಇಂತಹ ಕೃತ್ಯವನ್ನು ಅಯೋಗ್ಯ ಸಾಹಸವೆಂದು ಭಾವಿಸುತ್ತೇನೆ. ಒಟ್ಟಾರೆ ಈ ನೆಲಕಚ್ಚಿದ ಅರ್ಥಗಳು ಎಲ್ಲಿ ಹಾಗೂ ಒಂಬೈನೂರು ಎಪ್ಪತ್ತು ಶರೀರಗಳ ಆ ರಹಸ್ಯವೆಲ್ಲಿ? ಏನನ್ನು ಬರೆಯಲಾಗಿದೆಯೋ ಅದು ನನ್ನ ಸಾಮಾನ್ಯ ಚಿಂತನೆ ಹಾಗೂ ಅಶಾಂತ ಬುದ್ಧಿಯ ಪರಿಣಾಮವಾಗಿದೆ, ಅವು ನಳನಳಿಸುವ ಉದ್ಯಾನವೇ ಆಗಿರಲಿ ಅಥವಾ ನಿರ್ಜನ ಕಾಡೇ ಇರಲಿ.

ಯಾರು ನನ್ನಂತೆ ಕಲ್ಪನಾ ವ್ಯಕ್ತಿಗಳಿದ್ದಾರೆ, ಅದನ್ನು ಸೇವಿಸಿ,
ಕಲ್ಪನಾ ವ್ಯಕ್ತಿಗೆ ಅರ್ಹವಾಗಿದೆ. ಈ ಕಲ್ಪನಾ ಪಲಾವು.

ಇನ್ನೊಂದು ಕವನವನ್ನು ಆಲಿಸಿ,

'ಬಹರಿ' ಯಾರಿಹನು ನೀನು, ಮತ್ತು ಈ ರಹಸ್ಯಗಳು,
ಮುಚ್ಚುಮರೆ ಏನು? ಎಲ್ಲರಿಗೂ ಪ್ರಕಟಿಸು ಅದು.

ಎಂಥಹದೆ ಇರಲಿ ಅವು, ಆಕ್ಷೇಪ ಎತ್ತಬೇಡ ಅದರಲಿ,
ಪ್ರಮತ್ತ ಆದವರಿಗೆ ಸುಮ್ಮನೆ ವಶಕ್ಕೆ ಒಪ್ಪಿಸು.

ವಾಸ್ತವವಾಗಿ ಈ ಜನರು ಟೀಕಾಕಾರರಾಗಿದ್ದಾರೆ,
ಆದರೂ ಎಲ್ಲವನ್ನೂ ಅರಿತು, ನಾಲಿಗೆ ಇಲ್ಲದವರ ಹಾಗಿದ್ದಾರೆ.

ಮಾಡುವರು ಇವರು ವಾದವಿವಾದದಲಿ ಸರ್ವನಾಶ,
ತನ್ಮಯರಾಗಿಹರು ಇವರು ಸ್ವಯಂನಲಿ, 'ಸ್ವಯಂ'ನಿಂದ ಸ್ವತಂತ್ರರು.

■

*

ಉಪಸಂಹಾರ

ಸಮಾಪ್ತಿಯಾಯಿತು ಈಗ ದೇವರ ಕೃಪೆಯಿಂದ,
ಅತ್ಯಧಿಕ ಶ್ರೇಷ್ಠತೆಯ ಪ್ರಯೋಜನ ನೀಡಲಿ ಈ ಗ್ರಂಥ.

ಕಾಗದದಿಂದ ಸಂಕಷ್ಟ ದೂರವಾಯಿತು ಇಂದು,
ಲೇಖನಿಯ ಚಿಂತೆಯೂ ದೂರವಾಯಿತು ಇಂದು.

ಲೇಖನಿಯ ಮೂಲಸೆಲೆಯಾಗಿದ್ದ ಆ ಕುಡಿಕೆಯು,
ಪಡೆಯಿತು ವಿದ್ಯಾಸಿರಿಯ ಸೌಭಾಗ್ಯವನು.

ಎದೆಯ ಭಾರದಿಂದ ಕೈಯು ಹಗುರವಾಯಿತು,
ಹೃದಯವು ಇಂದು ಬಂಧನದಿಂದ ಬಿಡುಗಡೆಯಾಯಿತು.

ನಾನಂತೂ ಈ ಕಾರ್ಯವನೂ ಪರಿಪೂರ್ಣಗೊಳಿಸಲಿಲ್ಲ,
ನನ್ನ 'ಕೈ' ಹಾಗೂ 'ಹೃದಯ'ದಿಂದ ಆಗಲಿಲ್ಲ ಕ್ರಮಬದ್ಧತೆ.

ಸಮಸ್ತ ಕೃಪೆಗಳು ನನ್ನ 'ಪೀರ್'ರಿಂದ ಆಗಿವೆ,
ಅವರು ಮಹಾಮಹಿಮನ ದೇವರ ಪ್ರೀತಿಪಾತ್ರರಾಗಿದ್ದರು.

ನನಗೆ ಈ ತರಬೇತಿಯು ನನ್ನ 'ಪೀರ್'ರಿಂದ ಆಗಿದೆ,
ಈ ಕೃತಿಯು ಸರ್ವಥಾ ಈ ಹೃದಯವಂತನದು ಅಲ್ಲ.

ಈ ಕೃಪೆಗಳು ಎಲ್ಲವೂ ಅವರಿಂದಲೇ ಆಗಿಹವು,
ಪ್ರತಿಯೊಂದು ಶೋಧದ ಮೂಲವೂ ಅವರಿಂದಲೇ ಆಗಿದೆ.

ಈ ನುಡಿಯು ನಿಶ್ಚಿತವಾಗಿ ಇಹುದು ಅವರಿಂದಲೇ,
ಇಲ್ಲವಾದರೆ ಅಪ್ರಸಂಗಿಕ ನಾನೆಲ್ಲ ಮಧ್ಯದಲಿ.

ನನ್ನ ಸ್ವಭಾವದಲ್ಲಿ ಯಾವಾಗ ಯೌವ್ವನದ ತಾಪವಿತ್ತು, ಆಗ ಅನಂತ ಪ್ರೇಮವು ಆವೇಶದ ಸ್ಥಿತಿಯಲ್ಲಿತ್ತು. ಆಗ ನಾನು ಸರಿ ಸುಮಾರು ಐವತ್ತು ಸಾವಿರ ವೈವಿಧ್ಯಮಯ ಕವನ ಸಾಲುಗಳನ್ನು ಅದರಲ್ಲಿ ವಿಶೇಷವಾಗಿ ಮಸ್ನವಿ ಗಜಲ್ ಹಾಗು ಖಸೀದಾ (ಪ್ರಶಂಸಾ ಕವನಗಳು) ಇತ್ಯಾದಿಗಳನ್ನು ಬರೆದಿದ್ದೆ. ವಿಶೇಷವಾಗಿ ದೈವೀಜ್ಞಾನಕ್ಕೆ ಸಂಬಂಧಿಸಿದ ಲೇಖನಿಗಳು ದಖನಿ ಹಾಗೂ ಫಾರಸಿ ಭಾಷೆಯಲ್ಲಿದ್ದವು. ಈ ಕವನಗಳು ಹೃದಯದ ನೋವಿನ ಕಿಟಕಿಯಿಂದ ನೆಗೆದು ಹೊರಹೊಮ್ಮಿದ್ದವು. ಅಥವಾ ಅಗೋಚರ ಜ್ಞಾನದ ಜ್ವಾಲೆಯಲಿ ದಹಿಸುತ್ತಿರುವ ಅಗ್ನಿಯ ಕಿಡಿಗಳಾಗಿ ಹಾರಿ ಬಂದಿದ್ದವು. ನಾನು ಸಾಹಿತ್ಯದ ಈ ಅಮೂಲ್ಯ ನಿಧಿ ಹಾಗೂ ಸಿಕಂದರ್ ಖಾನ್ ಬಿಜಾಪುರಿಯವರ ವಿಶೇಷ ಆಸ್ಥಾನಶಾಹಿಯಿಂದ ಕಾಣಿಕೆ ರೂಪದಲ್ಲಿ ದೊರೆತ ಬಹುಮೂಲ್ಯ ಸಾಮಗ್ರಿಗಳು ಹಾಗೂ ಬೆಲೆಬಾಳುವ ಉತ್ಕೃಷ್ಟ ರಾಜುಡುಪು ಇವುಗಳ ಜೊತೆ ಒಂದು ಸಮಾರಂಭದಲ್ಲಿ ಭಾಗವಹಿಸಲು ಹೈದ್ರಾಬಾದ್ ನಗರಕ್ಕೆ ಹೋಗುತ್ತಿದ್ದೆ. ದಾರಿ ಮಧ್ಯದಲ್ಲಿ ಮುಸುಕುಧಾರಿ ಡಕಾಯಿತರು ಪೀಡಕ ಆಕಾಶದ ಸಂಜ್ಞೆಯಂತೆ ಗಾಢಾಂಧಕಾರದಲ್ಲಿ ನನ್ನ ಈ ಸಮಸ್ತ ಸಂಪತ್ತನ್ನು, ಸಾಹಿತ್ಯ ನಿಧಿಯ ಜೊತೆ ಕಸಿದುಕೊಂಡು ಓಡಿ ಹೋದರು.

ಆಕಾಶದ ಒಡೆಯನು ಬಲಹೀನನೂ ಆಗಿರುವವನು,
ಹಾಗೂ ಪೀಡಿಸುವುದರಲ್ಲಿ ಅವನು ಯುವಕನೂ ಆಗಿಹನು.

ಹಾಯ್ ವಿಷಾದವೇ! ಈ ವರ್ಣಮಯ ಗ್ರಂಥದ ಒಂದಕ್ಷರವೂ ಉಳಿಯಲಿಲ್ಲ ಹಾಗೂ ಶಾಹಿ ಉಡುಪಿನ ಒಂದು ಎಳೆಯೂ ಉಳಿಯಲಿಲ್ಲ. ಈ ಶಾಹಿ ಬಳುವಳಿ ಹೋದರೆ ಪೀಡೆ ಹೋಯಿತು, ಆದರೆ ಆ ಗ್ರಂಥ ಕಳೆದು ಹೋದ ಬಗ್ಗೆ ಅತೀವ ದುಃಖವಿದೆ. ಆಗ ನಿಶ್ಚಯಿಸಿಕೊಂಡೆ, ಮುಂದೆ ಇಂಥ ವ್ಯರ್ಥ ಹಾಗೂ ಅರ್ಥಹೀನತೆಯ ಕಡೆ ದೃಷ್ಟಿಯನ್ನೂ ಹಾಕುವುದಿಲ್ಲ ಹಾಗೂ ಉಳಿದ ಆಯುಷ್ಯವನ್ನು ದೊಡ್ಡದು ಎಂದು ಅರಿಯುವುದರ ಹೊರತು ಅನ್ಯ ಮಾರ್ಗವಿಲ್ಲ. ಆದರೆ ಮತ್ತೆ ಇಂಥ ಅಪ್ರಯೋಜಕತೆಯಲ್ಲಿ ಜೀವನವನ್ನು ವ್ಯಯಿಸುವುದಿಲ್ಲ ಎಂದು ನಿರ್ಧರಿಸಿದೆ.

"ದರ್ಯಾಬ್ ವಖ್ತ್, ವೋ ವಾಖಿಫ್ ಖುದ್ ಬಾದಶ್ ಹಂ ಖುದಾ,
ಸಾಹಿಸ್ತ್ ರಾಹ್ ರೂಡ್ ದಿಲಾವರೆ ದನೆ ಬದನ್"

ಅರಿ, ಕಾಲ ಏನಿಹುದು, ಹಾಗೂ ನೀನು ಎಲ್ಲಿ?
ಹೇ ಹೃದಯವೆ, ದೇಹದಲಿ ಚೇತನವಿದೆ ಎಲ್ಲಿಯವರೆಗೆ ಜೀವದಲಿ ಮದಿರೆಯಿದೆ.

ಅಂತಿಮವಾಗಿ ಇದೇ ನೊಂದ ಸ್ಥಿತಿಯಲ್ಲಿ ಹುಡುಕಾಟ ಹಾಗೂ ಮತ್ತೆ ದೊರೆಯುವ ನಿರೀಕ್ಷೆಯನ್ನು ತ್ಯಜಿಸಿಬಿಟ್ಟೆ, ಇದರಿಂದ ದೇಹವು ಅಂಧಕಾರಮಯ ವಾಗುತ್ತದೆ. ಹೀಗಾಗಿ ದುಷ್ಟ ವಿಚಾರಗಳನ್ನು ಹುಚ್ಚು ಹೃದಯದ ನಾಳಗಳಿಂದ ಅನುಪಯುಕ್ತ ರಕ್ತದಂತೆ ಹೊರತೆಗೆದು ಬೀಸಾಕಿದೆ ಹಾಗೂ ನನ್ನ ಸಂರಕ್ಷಕ ಅರ್ಥಾತ್ ಪೀರ್–ಮುರ್ಷದ್‌ರ ಪ್ರಕಾಶಮಾನ ಸಮಾಧಿಯ ಬಳಿ ಬಂದು ಬಿದ್ದು ಬಿಟ್ಟೆ.

"ಸರ್ ಫಿದಾಯೇ ಪಾಯೇ ಖುದ್ ಕರ್ದಮ್ ಕೆ ಪಾಯ್ ಖುದ್ ಶಿಕಸ್ತ್,
ಅಜ್ ಬರಾಯೆ ಯಾರ್ ಖುದ್ ಅಜ್ ಬರಾಯೇ ಖುದ್ ಶಿಕಸ್ತ"

ಕಾಲುಗಳಿಗಾಗಿ ನನ್ನ ಶಿರವು ಸಮರ್ಪಿತ, ಹೀಗಾಗಿ ಸ್ವಯಂ ಮುರಿದಿದೆ ಕಾಲು,
ಇಂತಹದೇ ಸ್ಥಿತಿಯಲ್ಲಿ ಓಣಿಯಿಂದ ಎದ್ದು ಹೋಗದೇ ಇರಲಿ ನಾನು

ಯಾರಿಗಾದರೂ ಈ ತಾರೀಕು ತಿಳಿದುಕೊಳ್ಳುವ ಅಭಿಲಾಷೆಯಿದ್ದರೆ ಕೆಳಗಿನ ಕವನವನ್ನು ಓದಿ ತಿಳಿದುಕೊಳ್ಳಬಹುದು.

ಬಹರಿಯವರ ಏಕಾಂತ ಸ್ಥಿತಿ ವ್ಯಕ್ತಪಡಿಸುವ "ಖತಾ" (ಕವನ)

ಚೂದ್‌ಯದಂ 'ಬಹರಿ' ಗುಂ ಕರ್ದಾ ದಿಲ್ ರಾ,
ಕೆ ಬದ್ ಗರ್ದಾನ್ ಚೂಂ ಗದ್ ಅಜ್ ಬಾದ್ ಜಸ್ತಾ.

ಚೆ ರೂದ್ ಆವಶ್ ಕೆ ಬಾಝ್ ಆಮದ್ ಜಗರದಿಶ್,
ಬ ನಿಜ್ದ್ ಗೋರೆ ಪೀರ್ ಖುದ್ ನಿಶಸ್ತಾ.

ಬಶರ್ತ್ ಆಂ ಕೆ ಹರ್‌ಗಿಜ್ ಬರ್ ನ ಖೈಜದ್,
ಬೂದ್ ತಾ ಜಾನಿರ್ಶ ಅಂದರ್ ಜಿಸ್ಮ್ ಖಸ್ತಾ.

ತೂ ಕಲ್ ರಾ ಕಫೇರ್ ಕಾರ್ ಖುದ್ ಸಾಖತ್,
ಜಿಡಯಾಯೇ ತಹಾಯೇ ಗೋನಾಗೂಂ ಗಸ್ತಾ.

ಬಲಗಫಮ್ ಚಂದ್ ಸಾಲಸತ್ ಅಜ್ ನಿಶಸಸ್ತ್,
ಬಗಫ್ತಾ "ಪೀರ್ ಪಾಯೇ ಮನ್ ಶಿಕಸ್ತಾ"

೧೧೦೦ (ಹಿಜ್ರಿ)

ಇನ್ನೊಂದು ಖತ್ಹಾ

ಚೂಮನ್ ಬ ತಕೀಯಾ ಬಹರಿ ರಸೀದಲ ವ ಗುಸ್ತಂ,
ಕೆ ಚಂದ್ ಸಾಲ್ ಗುಜ್‌ಶತ್ ಅಜ್ ನಿಶಸ್ತ ಆಯ್ ಹಮಾದಾಂ.

ಜವಾಬ್ ಹೈಚ್ ವಿಲೆ ಚೂಂ ದೀವಾನಾ,
ದೋಯದೂ ದಾದ್ ಬದ್ ಸಿತಂ ದೋ ಗೋಯೇ ದೋ ಚೂಗಾಂ.

೧೧೦೦ (ಹಿಜ್ರಿ)

ನಾನು ಈ ಅವಧಿಯಲ್ಲಿ ಪೀರ್–ಮುರ್ಷದ್ ಹಜ್ರತ್ ಬಾಖ಼ಿರ್ ಅವರ ಗೋರಿಯ ಮೇಲೆ ಸುಂದರವಾದ ಚೌಖಂಡಿಯ ಬುನಾದಿಯನ್ನು ಹಾಕಿದೆ. ಹಜ್ರತ್‌ರ ದಿವ್ಯಗಮನದಿಂದಲೇ ಅದನ್ನು ಪರಿಪೂರ್ಣಗೊಳಿಸಿ ಸುಸಜ್ಜಿತಗೊಳಿಸಿದೆ.

ಹಜ್ರತ್ ಬಾಖಿರ್ ಚೌಖಂಡಿಯ ಕುರಿತಾದ 'ಖತಾ' (ಕವನ)

ಜೇರ್ ಸಿಪ್‌ಹರೆ ಸತೂನ್ ಅರೇ ಅಮ್ಮಾರ್ ತಹಾ ಬಸೆ ಅಸ್ತ್,
ಬನೂದ ವೋ ಲೇಕಿನ್ ಹಮ್ಜೂ ಆಂಯ್, ದರ್ ಹಸ್ತ ಅಂದ್ ಕೆ.

ದರ್ ಬಾಬ್ ತಾರೀಖ್ ಝಿ ಅಂಯ್ ಮಿಸ್ತಾ ಗೈಹಂ ರಸೀದ್,
ಮಹಮೂದ್ ಬಹರಿ ಬಂದ್, ಬಾಖರ್ ಮಹ್ಮದ್ ಬೇಷಕೆ.

ಕೆಲವು ದಿನಗಳು ಇದೇ ವ್ಯಥೆಯಲ್ಲಿ ಕಳೆದುಹೋದವು. ಆದರೆ ಒಮ್ಮಿಂದೊಮ್ಮಲೇ ದೈವಾಜ್ಞೆಯಂತೆ ನನ್ನ ಹಾಗೂ ನನ್ನ ಸಂತೋಷದ ಮಧ್ಯೆ ಒಂದು ಭಯಾನಕ ರೋಗವು ತಲೆದೋರಿತು. ಇದು ಅತ್ಯಂತ ಚಿಂತಾಕ್ರಾಂತ ಮಾಡಿತು. ಅರ್ಥಾತ್ ಅತೀ ಘೋರ ಯಾತನಾಮಯ ಕ್ಷಯರೋಗ (ಚಳಿಜ್ವರ್)ದ ಬಾಧೆಯಾಯಿತು.

ಸಾವಿನ ಗಿಡಗನಿಗೆ ತಿಳಿದುಕೋ ಇರುವುದು ಎರಡೇ ರೆಕ್ಕೆಗಳು,
ಮೃತ್ಯು ಮಾರ್ಗದ ಒಂದು ಬಾಣ ಅಥವಾ ಕೊಡಲಿಯು.

ಒಂದು ದೀರ್ಘ ಅವಧಿಯವರೆಗೆ ಈ ಎರಡು ದುಷ್ಟಶಕ್ತಿಗಳ (ಅರ್ಥಾತ್ ಚಳಿ ಮತ್ತು ಜ್ವರ)ದ ಸಾಂಗತ್ಯದಲ್ಲಿದ್ದೆ. ಅದರಲ್ಲಿ ಒಂದು ವಾಸ್ತವವಾಗಿ ನರಕದ ನೈಜ ನೋಟವಾಗಿತ್ತು. ಎರಡನೆಯದು ಅವನ ಸಹಚರನಂತಿತ್ತು. ಈ ಇಬ್ಬರು ಶತ್ರುಗಳ ಸ್ನೇಹದಲ್ಲಿದ್ದೆ. ಹಾಗೂ ಇದರಿಂದಾಗಿ ಅದೆಷ್ಟು ಅಶಕ್ತನಾದೆನೆಂದರೆ ಹೆಸರಿನ ಹೊರತಾಗಿ ಮತ್ತೇನೂ ಬಾಕಿ ಉಳಿಯಲಿಲ್ಲ. ಆದರೂ ನನ್ನ ಪೀರ್-ಮುರ್ಷದರ ಪ್ರಕಾಶ ತೇಜದ ನೋಟದ ಸೌಭಾಗ್ಯದ ಪ್ರಭಾವದಿಂದ ಎಲ್ಲವೂ ಬಾಕಿ ಉಳಿದಿದೆ.

ನಮಾನಂದಾಜ್ ಜಿಸ್ಮ್ ಓ ಜಾನಂ ಹೈಚ್ ಲೇಕಿನ್ ದಮ್ ಬರ್‌ಗಾಹಿಯಮ್,
ಚುನಾ ಮೀರ್ ಖಸದ್ ಅಜ್ ಸಾಜಿಶ್ ಕೆ ದೋ ಪರ್ಶಾನಾ ಮಿ ರಖಸದ್.

ಸಾದಾತ್ ವಂಶಜರು ಹಾಗು ಹಜ್ರತ್ ಚಂದಾ ಹುಸೇನಿ ಶಾಹ ಸಾಹೇಬ್ ಇವರ ಉತ್ತಾರಾಧಿಕಾರಿಯ ಸಂತತಿಯವರಾದ ಸಯ್ಯದ್ ಅಹ್ಮದ್ ಇಬ್ನೆ ಸಯ್ಯದ್ ಇಸ್ಮಾಯಿಲ್‌ರವರು, ಈ ಫಕೀರನ ಮೇಲೆ ಅತೀವ ಕೃಪೆಯನ್ನು ತೋರಿಸುತ್ತಿದ್ದರು ಹಾಗು ಆತ್ಮೀಯ ಸಂರಕ್ಷಕನಂತೆ ನಡೆದುಕೊಳ್ಳುತ್ತಿದ್ದರು. ನನ್ನ ಈ ದುಸ್ಥಿತಿಯನ್ನು ನೋಡಿ ಅತೀವ ಮರಗುತ್ತಿದ್ದರು ಹಾಗೂ ನುಡಿಯುತ್ತಿದ್ದರು. ನಿಮ್ಮ ಸೂಕ್ಷ್ಮ ಕೃತಿರಚನಾ ವ್ಯಕ್ತಿತ್ವದಿಂದ ಏನೆಲ್ಲಾ ಅಸ್ತಿತ್ವಕ್ಕೆ ಬಂದಿತ್ತು. ಆ ಸಮಸ್ತವು ತನ್ನ ಮೂಲಕ್ಕೆ ತಲುಪಿದೆ. ಆದರೆ ಈ ಮಾತು ಶಾಶ್ವತವಾಗಿದೆ, ಅದೇನೆಂದರೆ ಕೇವಲ ತೇಜೋಮಯ ಮಹಾಮಹಿಮನ ಅಸ್ತಿತ್ವದ ಹೊರತು ಪ್ರತಿಯೊಂದು ಅವನತಿಯ ಗತಿಯಲ್ಲಿವೆ. ಯಾಕೆಂದರೆ ಈ ಲೋಕದಲ್ಲಿ 'ಫಾತೇಹಾ' ಪಠಣಕ್ಕಾಗಿ ಏನಾದರೊಂದು ಕಾರಣ ಹಾಗು ನೆಪ ಬೇಕೇ ಬೇಕಾಗುತ್ತದೆ. ಹೀಗಾಗಿ ಹಜ್ರತ್‌ರ ಆದೇಶದ ಪರಿಪಾಲನೆಗಾಗಿ ಅದೇ ಅಶಕ್ತ ಸ್ಥಿತಿಯಲ್ಲಿ ರೋಗದ ವಿಷದ ಪಿತ್ತವನ್ನು ನೀರಾಗಿ ಹಾಗೂ ಯಕೃತ್ತನ್ನು ರಕ್ತವನ್ನಾಗಿಸಿತ್ತು. ಅಂತಹ ಸ್ಥಿತಿಯಲ್ಲಿ ದಖ್ಖನಿ ಭಾಷೆಯಲ್ಲಿ "ಮನ್ ಲಗನ್" ಕೃತಿಗಿಳಿಸಿದೆ. ಈ ಪುಸ್ತಕವು ನನ್ನ ಮನೋಗತದ ಪ್ರಕಾರ ಅಷ್ಟು ಸರಿಯಾಗಿರಲಿಲ್ಲ ಹಾಗು ಸೂಕ್ತ ರೀತಿಯಲ್ಲಿ ಮುಕ್ತಾಯದ ಹಂತವನ್ನು ತಲುಪಿರಲಿಲ್ಲ. ಇದೇ ಸಮಯದಲ್ಲಿ ನನ್ನ ಸಮೀಪವರ್ತಿ ಆದರೆ ದೂರದೃಷ್ಟಿಯ ಮಿತ್ರರೊಬ್ಬರು ನನಗೆ ನುಡಿದರು "ಈ ಪುಸ್ತಕವು ಪಾರಸಿಯಲ್ಲಿ ಇರುತ್ತಿದ್ದರೆ, ಅದೆಷ್ಟು ಚೆನ್ನಾಗಿರುತ್ತಿತ್ತು, ಇದರಿಂದಾಗಿ ಅನೇಕ ದೇಶಗಳ ಹಾಗೂ ಪ್ರಾಂತಗಳ ಸಾಹಿತ್ಯಿಕ ಅಭಿರುಚಿಯ ವ್ಯಕ್ತಿಗಳು ಇದನ್ನು ಮೌಲಿಕವೆಂದು ಭಾವಿಸುತ್ತಿದ್ದರು ಹಾಗೂ ಇದರಿಂದ ಮಾರ್ಗದರ್ಶನ ಪಡೆಯುತ್ತಿದ್ದರು. ಇದೇ ಕಾರಣದಿಂದಗಿ ನಾನು ಈ "ಉರೂಸೆ-ಇರ್ಫಾನ್" ಕೃತಿಯನ್ನು "ಮನ್ ಲಗನ್" ನ ಅರ್ಥವಿವರಣೆಯ ಭಾಷಾಂತರ ಕೃತಿಯಾಗಿ ಬರೆದೆ. ಆಪೇಕ್ಷೆಯ ಮೇರೆಗೆ ಇದರ ವ್ಯಾಪ್ತಿಯನ್ನು ಹೆಚ್ಚಿಸಿ, ಸಮೃದ್ಧಮಯಗೊಳಿಸಿದೆ.

ಗಂಜೆ – ಇರ್ಫಾನ್, ಉರೂಸೆ-ಇರ್ಫಾನ್' ಆಗಿದೆ,
ಪ್ರತಿ ಜೀವವು 'ಉರೂಸೆ-ಇರ್ಫಾನ್' ಆಗಿದೆ.

ಸಂತುಷ್ಟರಾಗಿಹರು 'ಏಕತ್ವ'ದ ಬುಲ್ ಬುಲ್ ಪಕ್ಷಿಗಳು,
ಒಂದು ಉದ್ಯಾನವು 'ಉರೂಸೆ-ಇರ್ಫಾನ್' ಆಗಿದೆ.

ಈಗ ಪ್ರಾಚೀನವೂ, ನಿತ್ಯ ನೂತನವೂ, ಚಿರಂತವು ಆದು ಪರಮಗೌರವಾನ್ವಿತ ವಿಭುವಿನ ಅಸ್ಥಾನದಲಿ ಕಿರುಕಾಣಿಕೆಯಾಗಿದೆ.

ಅಗ್ನಿಯಿಂದ ಪ್ರಕಟ ಪಡಿಸಿದನು ಯಾವನು ಜಲವನ್ನು,
ಅಗೋಚರ ದ್ರಾಕ್ಷಿಯಿಂದ ಗೋಚರಿಸಿದನು ಮದಿರೆಯನ್ನು.

ನೆಲದ ಮೇಲೆ ಉತ್ಕೃಷ ಹಾಸಿರುವನು ಹಾಸನ್ನು,
ತಲೆಯ ಮೇಲೆ ಆಕಾಶದ ಡೇರೆಯನು ಹಾಕಿರುವವನು.

ಅಗೋಚರ ಸೌಂದರ್ಯ ಹಾಗೂ ಅನುಪಮ ಎಲುವಿನ ಸಂದೇಹರಹಿತವಾಗಿ ವಿಶ್ವಾಸವಿರಿಸಿದೆ, ಈ ವಿಶ್ವಾಸಿಕನಿಗೆ ಸ್ವೀಕಾರ್ಹದ ಆಭರಣವನ್ನು ದಯಪಾಲಿಸು. ಹಾಗೂ ನಿನ್ನ ಅನಂತ ಕೃಪೆ ಹಾಗು ಕರುಣೆಯಿಂದ ಜನರ ಹೃದಯದಲಿ ಇದರ ಪ್ರೇಮವನ್ನು ದಯಪಾಲಿಸು.

ನಿನಗೆ ದೈವಿಜ್ಞಾನದ ಆಸಕ್ತಿ ಇರುವುದಾದರೆ,
ನೀನು ಪ್ರಾಚೀನ ಹಾಗೂ ಆಧುನಿಕ ಕಥನ ಆಗಿರುವಿ.

ವಿಹಾರ ಮಾಡು ಈ 'ಉರೂಸೆ-ಇರ್ಫಾನ್'ನಲಿ,
ಸ್ವಲ್ಪವೇ ಮಾತ್ರ ಸಾಕು ಈ ದೀಪದ ಪ್ರಭೆಯು.

ಉತ್ಕೃಷ್ಟವಾಗಿ ಸಂಪಾದಿತವಾಯಿತು ಈ ಅಗೋಚರ ನುಡಿ,
ಆದರು ಮರ್ಮಜ್ಞಾನಿಗಳು ಭೂಮಿಯ ಗುರುಗಳು.

ನಮ್ಮ ತರಹ ಫಕೀರರ ಸ್ಮರಣೆಯು ಏನಿದೆ,
ಇದರ ಸೌಂದರ್ಯಕ್ಕೆ ಮೋಹಿತರು ಖುಸ್ರೂ,

ಇರುವುದಾದರೆ ಇತಿಹಾಸದ ಹುಡುಕಾಟದ ಅಭಿರುಚಿ ನಿನಗೆ,
'ಉರೂಸೆ-ಇರ್ಫಾನ್' ಓದಿ ಯಶಸ್ವಿಯಾಗು ನೀನು.

■

*

ಪಾರಿಭಾಷಿಕ ಶಬ್ದಕೋಶ

ಅಂತಾ	ನೀನು
ಅಜಾನ್	ನಮಾಜಿಕ್ಕಿಂತ ಮುಂಚೆ ನಮಾಜಿಗೆ ಬರಲು ಕೂಗುವ ಕರೆ
ಅಜ್ಮತ್	ಮಹೋನ್ನತ
ಅತ್ತಾರ್	ಸುಗಂಧ ದ್ರವ್ಯ ಮಾರುವವನು, ಸೂಫಿ ಫರೀದುದ್ದೀನ್ ಅತ್ತಾರ್‌ರು.
ಅನಲ್‌ಹಕ್	'ನಾನೇ ಸತ್ಯ' ಅಥವಾ ಅಹಂ ಬ್ರಹ್ಮಾಸ್ಮಿ ಎಂದರ್ಥ
ಅನಾ	ನಾನು, ಅಹಂ
ಅನಾಲೈಲಾ	ಲೈಲಾಳಲ್ಲಿ ಲೀನ
ಅಬಾಯತ್	ಕವನಗಳು
ಅಮಾನತ್	ಇಡಗಂಟು, ಕೈಗಡ
ಅಲ್ ಹಮ್ದು ಲಿಲ್ಲಾಹ್	ಸಮಸ್ತ ಸ್ತೋತ್ರಗಳು ಅಲ್ಲಾಹನಿಗೆ ಮೀಸಲು ಎಂಬ ಅರ್ಥ
ಅಲ್–ಅಲೀಮ್	ಸರ್ವಜ್ಞ
ಅಲೀಫ್	ಅರಬ್ಬಿ, ಉರ್ದು, ಫಾರ್ಸಿ ಭಾಷೆಯ ಪ್ರಥಮ ಅಕ್ಷರ.

ಅಸ್ಸಲಾತ್ ಮೇರಾಜುಲ್ ಮೋಮಿನೀನ್	ಮೇರಾಜನ್ನು ಪಡೆದ ದೈವೀಭಕ್ತರಿಗೆ ನಮ್ಮ ಸಲಾಂ.
ಅಶಾರ್	ಎರಡು ಸಾಲಿನ ಕವನದ ಚರಣಗಳು (ದ್ವಿಪದಿಗಳು)
ಅಹ್ಮದ್	ಮಹ್ಮದ್ ಪೈಗಂಬರ ಇನ್ನೊಂದು ಹೆಸರು
ಅಹ್ಲೆ ಸುನ್ನತ್	ಪ್ರವಾದಿ ಮಹ್ಮದರು ಹಾಗೂ ಹದೀಸ್‌ಗಳಿಗೆ ಅಧಿಕ ಮಹತ್ವ ನೀಡುವ ಮುಸ್ಲಿಂ ಪಂಥ.
ಅಹ್ಲೆದಿಲ್	ಹೃದಯವುಳ್ಳ ವ್ಯಕ್ತಿ
ಆದಂ	ಆದಿಮಾನವ, ಇಸ್ಲಾಂ ನಂಬಿಕೆಯ ಪ್ರಕಾರ ಪಥಮ ಮಾನವ ಹಾಗೂ ಪ್ರಥಮ ನಬಿ ಅರ್ಥಾತ್ ಪ್ರವಾದಿಗಳು, ಮನುಷ್ಯ ಸಂತತಿ.
ಆಪ್ತಾಬೆ ಅನ್‌ವಲಿ	ವಿಲಾಯತ್‌ನ ಸೂರ್ಯ
ಆಮೀನ್	ಪ್ರಾರ್ಥನೆಯ ನಂತರ ಹೇಳುವ ಶಬ್ದ, ತಥಾಸ್ತು.
ಆರಿಫ್	ಮರ್ಮಜ್ಞಾನಿ, ಬ್ರಹ್ಮಜ್ಞಾನಿ ದೈವೀಜ್ಞಾನಿ
ಆರಿಫುಲ್ ವುಜೂದ್	ಬ್ರಹ್ಮಜ್ಞಾನ ಅಸ್ತಿತ್ವ
ಆಲಂ–ಎ–ಮಿಸಾಲ್	ಆತ್ಮಗಳ ಲೋಕ
ಇಬ್ಲೀಸ್	ಸೈತಾನ್, ಸೈತಾನನ ಗುಂಪಿಗೆ ಸೇರಿದವನು.
ಇಮ್‌ಹಾತುಲ್ ಸಿಫಾತ್	ಅರ್ಹತೆಗಳ ಮಾತೆ
ಇಲ್ಮ್	ಜ್ಞಾನ
ಇಲ್ಹಾಮ್	ದೈವೀ ಪ್ರೇರಣಾ ವಾಣಿ, ಅಶರೀರ ವಾಣಿ
ಇಸ್ತರ್‌ಲಾಬ್	ಜ್ಯೋತಿರ್ವಿಜ್ಞಾನದ ಒಂದು ಉಪಕರಣ
ಉರುಸೆ–ಇರ್ಫಾನ್	'ಸ್ವರ್ಗದ ಮಿಲನ'
ಉರ್ಸ್	ಶಾಬ್ದಿಕ ಅರ್ಥ ಮಿಲನ, ವಿವಾಹ, ಸೂಫಿಗಳ ನಿಧನದ ದಿನಾಂಕದಂದು ಮಾಡುವ ಆಚರಣೆ
ಐನುಲ್ ಐನ್	ಉತ್ತಮರಲ್ಲಿ ಅತ್ಯುತ್ತಮ.

ಕನ್ನಾನ್	ಪ್ಯಾಲೆಸ್ಟೈನ್‌ನಲ್ಲಿರುವ ಪ್ರವಾದಿ ಯೂಸೂಫ್‌ರ ಜನ್ಮಸ್ಥಳ
ಕಲೀಮಾ ತಯ್ಯಬಾ	ಇಸ್ಲಾಮಿನ ಪವಿತ್ರ ವಚನ (ಲಾ ಇಲಾಹ ಇಲ್ಲಾಲ್ಲಾಹ, ಮಹ್ಮದುರ್ ರಸೂಲ್ ಲಿಲ್ಲಾಹ)
ಕಲೀಮಾ	'ಲಾ ಇಲಾಹ ಇಲ್ಲಾಲ್ಲಾಹ, ಮಹ್ಮದರ ರಸೂಲ್ ಲಿಲ್ಲಾಹ' ಎಂಬ ವಚನ ಇದರ ಅರ್ಥ ಅಲ್ಲಾಹನಿಗೆ ಹೊರತು ದೇವರಿಲ್ಲ. ಮಹ್ಮದರು ಅವರ ಪ್ರವಾದಿಯಾಗಿದ್ದಾರೆ.
ಕಾಫೀರ್	ಸತ್ಯ ನಿಷೇಧಿ
ಕಾಬಾ	ಮಕ್ಕಾ ನಗರದಲ್ಲಿರುವ ಪ್ರವಾದಿ ಇಬ್ರಾಹೀಂರಿಂದ ಕಟ್ಟಿಸಲ್ಪಟ್ಟ ಕರಿಕಲ್ಲಿನ ಚೌಕಾಕಾರದ ದೇವಭವನ
ಕುನ್	ಅಲ್ಲಾಹನು 'ಕುನ್' ಎಂದು ಉದ್ಗರಿಸಿದರಿಂದಲೇ ಬ್ರಹ್ಮಾಂಡ ಹಾಗೂ ಜೀವಿಗಳು ಸೃಷ್ಟಿಯಾಯಿತು. 'ಕುನ್'ನ ಶಾಬ್ದಿಕ ಅರ್ಥ 'ಆಗು' ಎಂದು.
ಕುರಾನ್	ಮಹ್ಮದ ಪೈಗಂಬರರಿಗೆ ಅವತೀರ್ಣಗೊಂಡ ಮುಸ್ಲಿಂ ದೈವೀಗ್ರಂಥ
ಖಜ಼ಾ	ನಮಾಜನ ನಿಯಮಿತ ಸಮಯ ತಪ್ಪಿದರೆ ನಂತರ ಮಾಡುವ ನಮಾಜ್.
ಖತಾ	ಸರಳ ಕವನ
ಖತಾಯತ್	ಉರ್ದು ಮತ್ತು ಪಾರ್ಸಿ ಭಾಷೆಯ ಕನಿಷ್ಠ ೪ ಸಾಲಿನ ಅಥವಾ ಅದಕ್ಕಿಂತ ಅಧಿಕ
ಖಯಾಮತ್	ಪ್ರಳಯದ ದಿನ
ಖಲಂದರ್	ದೈವಿ ವಿರಾಗಿ
ಖಲೀಫಾ	ಮಹ್ಮದ ಪೈಗಂಬರರ ನಂತರ ಮುಸ್ಲಿಂ ಮುಂದಾಳತ್ವ ವಹಿಸಿದ ನಾಲ್ಕು ನಾಯಕರು, ಸೂಫಿ ಪರಿಭಾಷೆಯಲ್ಲಿ ಮುರ್ಷದನಿಂದ ದೀಕ್ಷೆ ಪಡೆದ ಉತ್ತರಾಧಿಕಾರಿಗಳು.
ಖವ್ವಾಲ್	ಖವ್ವಾಲಿ ಗಾಯಕ
ಖಾನಿಖಾ	ಸೂಫಿ ಮಠ

ಖಾಫ್	ಒಂದು ಪರ್ವತದ ಹೆಸರು.
ಖಾಲ್	ದೈವೀ ಸಂವಾದ, ತನ್ಮಯ ಸ್ಥಿತಿಯಲ್ಲಿ ಭಾಸವಾದ ದೈವೀ ಸಂವಾದ
ಖ್ವಾಜಿ	ಮದುವೆ, ಧಾರ್ಮಿಕ ಹಾಗೂ ಕುಟುಂಬದ ವ್ಯಾಜ್ಯಗಳನ್ನು ಇಸ್ಲಾಮಿ ನ್ಯಾಯ ಶಾಸ್ತ್ರದ ಅಡಿಯಲ್ಲಿ ಬಗೆಹರಿಸುವ ನ್ಯಾಯಧೀಶನಂತೆ ಕಾರ್ಯ ನಿರ್ವಹಿಸುವ ವ್ಯಕ್ತಿ
ಗಂಜೆ ಮಖಫಿ	ದೈವೀ ರಹಸ್ಯ ಕೋಶ
ಗಜಲ್	ಶಾಬ್ದಿಕ ಅರ್ಥ ಸ್ತ್ರೀಯೊಡನೆ ಸಂಭಾಷಣೆ ಮಾಡುವುದು, ಉರ್ದು ಭಾಷೆಯ ಒಂದು ಪದ್ಯ ಪ್ರಕಾರ
ಚಿಲ್ಲಾ	ನಲವತ್ತು ದಿನ ಒಂದೇ ಸ್ಥಳದಲ್ಲಿ ಕುಳಿತು ಧ್ಯಾನ, ಜಪ, ಪ್ರಾರ್ಥನೆ ಮಾಡುವುದು.
ಜಬರೂತ್	ಐಶ್ವರ್ಯಲೋಕ
ಜಮಾಲ್	ಸೌಂದರ್ಯ, ದೈವೀ ಸೌಂದರ್ಯ, ಅಲ್ಲಾಹನ ಒಂದು ಗುಣವಿಶೇಷ
ಜಲಾಲ್	ರೌದ್ರತೆ, ಅಲ್ಲಾಹನ ಒಂದು ಗುಣವಿಶೇಷ
ಜಾತ್	ದೈವೀ ಸತ್ಯೆ
ಜಾಮ್	ಮದಿರೆಯ ಪಾತ್ರೆ, ಮದಿರೆಯ ಬಟ್ಟಲು
ಜಿಕ್ರ್	ಸ್ಮರಣೆ
ಜಿನ್	ಸೈತಾನನ ಒಂದು ಬಗೆ, ಸೈತಾನಿನ ಸಹಚರ
ಜಿಬ್ರಾಯಿಲ್	ದೇವ ಸಂದೇಶ ತರುವ ದೇವದೂತ
ಜಿಲ್ಲತ್	ಪ್ರಕಾಶಮಾನ
ಝುಮ್-ಝುಮ್	ಶಾಬ್ದಿಕ ಅರ್ಥ ನಿಲ್ಲು ನಿಲ್ಲು, ಮಕ್ಕಾದ್ ಪವಿತ್ರ ಚಿಲುಮೆಯ ನೀರು.
ತಯ್ಯಮಮ್	ಪ್ರತಿ ನಮಾಜಿನ ಮುಂಚೆ ನೀರಿನಿಂದ ನಿಯಮಿತ

	ರೀತಿ ಕೈಕಾಲು ಮುಖವನ್ನು ತೊಳೆದುಕೊಳ್ಳಬೇಕು. ಇದಕ್ಕೆ ವುಜೂ ಎನ್ನುತ್ತಾರೆ. ನೀರು ಸಿಗದ ಸ್ಥಿತಿಯಲ್ಲಿ ಮಣ್ಣಿನ ಮೇಲೆ ಸಂಜ್ಞೆಯ ಮೂಲಕ ಮಾಡುವ ವುಜೂನ ಪರ್ಯಾಯಕ್ಕೆ ತಯ್ಯಮಮ್ ಎನ್ನುತ್ತಾರೆ.
ತರೀಖತ್	ಕರ್ಮಕಾಂಡ
ತೂಬಾ	ಸ್ವರ್ಗದಲ್ಲಿರುವ ಒಂದು ಉದ್ಯಾನ
ತೌಹೀದ್	ಏಕದೇವ ಉಪಾಸನೆ
ದಖ್ಖನ್	ದಕ್ಷಿಣ ಪ್ರಸ್ಥಭೂಮಿ
ದಖ್ಖನಿ	ಉರ್ದು, ಫಾರಸಿ, ಗುಜರಾತಿ, ಹಿಂದಿ, ಪಂಜಾಬಿ, ಕನ್ನಡ, ತೆಲಗು, ಮುಂತಾದ ಭಾಷೆಗಳ ಮಿಶ್ರಣದಿಂದ ಉತ್ಪತ್ತಿಯಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಆಡುಭಾಷೆ
ದರ್ಗಾ	ಸೂಫಿಗಳ ಚಿರನಿದ್ರೆಯ ಸ್ಥಾನ
ದರ್ದ್	ಯಾತನೆ
ದರ್ವೇಶ್	ಆಧ್ಯಾತ್ಮಿಕ ಫಕೀರರು, ಲೌಕಿಕತೆಯತೆಯನ್ನು ತ್ಯಜಿಸಿ ವಿರಾಗಿಗಳಾದವರು
ದಲಿಖ್	ವೇಷಧಾರಿ
ದಸ್ತಗೀರ್	ಸಹಾಯಕ, ಆಧ್ಯಾತ್ಮದ ಹಾದಿಯಲ್ಲಿ ಸರಿಯಾಗಿ ನಡೆಯಲು ಸಹಾಯ ಮಾಡುವವನು.
ದಹರಿಯಾ	ನಾಸ್ತಿಕ
ದಾಲ್, ಲಾಮ್	ಉರ್ದು ಅಕ್ಷರಗಳು
ದಿಲ್	ಹೃದಯ
ದೀವಾನೆ ಹಾಫೀಜ್	'ಹಾಫೀಜ್'ನ ಕವನ ಸಂಕಲನ
ದುರೂದ್	ಆತ್ಮಕ್ಕೆ ಪುಣ್ಯಪ್ರಾಪ್ತಿಗಾಗಿ ಓದುವ ಒಂದು ದೈವೀ ಸ್ತೋತ್ರ ದುರೂದೇ ಇಬ್ರಾಹಿಮ

ನದಾಫ್	ಹತ್ತಿ ಶುದ್ಧೀಕರಿಸುವುದು
ನಫ್ಸೆ ಅಮ್ಮರಾ	ದುಶ್ಕರ್ಮಗಳನ್ನು ಮಾಡಲು ಮಾನವನನ್ನು ಪ್ರೇರೆಪಿಸುವ ಚಿತ್ತ
ನಫ್ಸ್	ಚಿತ್ತ
ನರ್ಗಿಸ್	ಕಣ್ಣಿನಾಕಾರದ ಒಂದು ಹೂವು
ನಾತ್	ಪ್ರವಾದಿಗಳ ವರ್ಣನಾ ಕವಿತೆ
ನಾಸೂತ್	ಮೃತ್ಯುಲೋಕ
ನೂನ್	ಒಂದು ಅಕ್ಷರ, 'ಫನಾ' ಶಬ್ದದಲ್ಲಿ ಮಧ್ಯದಲ್ಲಿ ಬರುತ್ತದೆ.
ನೂರ್	ಪ್ರಕಾಶ, ಬೆಳಕು, ಜ್ಯೋತಿ
ಪೀರ್	ಸೂಫಿಗುರು
ಪೀರಿ–ಮುರೀದಿ	ಸೂಫಿ ಗುರು–ಶಿಷ್ಯ ಪರಂಪರೆ
ಫನಾ	ಐಕ್ಯವಾಗುವುದು, ವಿಲೀನವಾಗುವುದು, ನಿರ್ವಾಣ, ತನ್ನನ್ನು ಅಳಸಿಬಿಡುವುದು.
ಫಾಅಹುಬ್ಬಾತಾ	ಬಯಸಿದೆ
ಫಾತೇಹಾ	ಆತ್ಮದ ಶಾಂತಿಗಾಗಿ ಪಠಿಸುವ ಕುರಾನಿನ ಒಂದು ಸ್ತೋತ್ರ ಪವಿತ್ರ ಕುರಾನಿನ ಪ್ರಥಮ ಸ್ತೋತ್ರ.
ಫಿಕ್ರ್	ಚಿಂತನೆ
ಫಿರ್ದೋಸ್	ಸ್ವರ್ಗೋದ್ಯಾನ
ಬನಿ ಇಸ್ರಾಯಿಲ್	ಇಸ್ರೇಲ್ ನಿವಾಸಿಗಳು, ಯಹೋದ್ಯರು
ಬರ್ಜಗ್	ಮರಣದ ನಂತರದಿಂದ ಪ್ರಳಯದ ಕಾಲದವರೆಗಿನ ಕಾಲಾವಧಿ
ಬ್ಯಾಜ್	ಕೈಪಿಡಿ
ಭಾಂಗ್	ಭಂಗಿ, ಒಂದು ಮಾದಕ ಪಾನೀಯ
ಮಜಜ್ಞೂಬ್	ತಿರುಕನ ತರಹದ ಸಂತ–ಫಕೀರ

ಮನಖಬತ್	ಪ್ರವಾದಿಯ ಅನುಯಾಯಿಗಳು ಹಾಗೂ ಅಧೀನರ ವಿವರಣಾ ಕವಿತೆಗಳು.
ಮನಮ್	ನಾನಾಗಿರುತ್ತೇನೆ
ಮಲಕೂತ್	ದೈವಲೋಕ
ಮಶ್ಕ್	ಅಭ್ಯಾಸ
ಮಸ್‌ಅ	ವುಜೂವಿನಲ್ಲಿ ತಲೆಯ ಮೇಲೆ ನೀರು ಚಿಮಿಕಿಸಿ, ಕಿವಿಗಳಿಗೆ ನೀರು ತಾಗಿಸುವ ಒಂದು ಕ್ರಮ.
ಮಸಿಹ್ ಮವೂದ್	ಏಸುಕ್ರಿಸ್ತ (ಮತ್ತೆ ಆಕಾಶದಿಂದ ಇಳಿದು ಬರುವನೆಂಬ ಧಾರ್ಮಿಕ ನಂಬಿಕೆಯ ವ್ಯಕ್ತಿ)
ಮಸ್ನವಿ	ಒಂದು ನಿರ್ದಿಷ್ಟ ವಿಷಯವನ್ನು ನಿರಂತರವಾಗಿ ದ್ವಿಪದಿಗಳಲ್ಲಿ ವ್ಯಕ್ತಪಡಿಸುವ ಕಾವ್ಯಾತ್ಮಕ ಪ್ರಕಾರ
ಮಿಖಾಯಿಲ್	ಜೀವಾತ್ಮರಿಗೆ ಆಹಾರ ನೀಡುವ ಹಾಗೂ ಮಳೆ ತರುವ ದೇವದೂತ.
ಮುನ್‌ಕೀರ್–ವ–ನಕೀರ್	ಸತ್ತ ಮೇಲೆ ಗೋರಿಯಲ್ಲಿ ಮೃತನೊಡನೆ ಅವನ ಕರ್ಮಗಳ ಬಗ್ಗೆ ಪ್ರಶ್ನಿಸುವ ಇಬ್ಬರು ದೇವಚರರು.
ಮುಮಕಿನುಲ್ ವುಜೂದ್	ಸಾಧ್ಯತಾ ಅಸ್ತಿತ್ವ
ಮುರೀದ್	ಸೂಫಿ ಶಿಷ್ಯ, ಸೂಫಿ ಅನುಯಾಯಿ
ಮೇರಾಜ್	ಇದರ ಶಾಬ್ದಿಕ ಅರ್ಥ ಏಣಿ, ಪ್ರವಾದಿಯರು ತಮ್ಮ ಜೀವಿತಕಾಲದಲ್ಲಿ ಒಂದು ಸಲ ರಜ್ಜಬ್‌ನ ೨೭ರ ರಾತ್ರಿ ಬುರ್ರಾಖ್ ಎಂಬ ವಾಹನ ಏರಿ ಸಪ್ತ ಆಕಾಶಗಳ ಯಾತ್ರೆಯನ್ನು ಮಾಡಿ ಪರಂಜ್ಞಾನಿ ಅಲ್ಲಾಹನು ಇವರಿಗೆ ಪರೋಕ್ಷವಾಗಿ ದರ್ಶನ ನೀಡಿದ್ದಾನೆ ಎನ್ನಲಾಗುತ್ತದೆ. ಇದಕ್ಕೆ ಮೇರಾಜ್ ಎನ್ನುತ್ತಾರೆ.
ಮೊಜ್ಜನ್	ಅಜ಼ಾನ್ ಅರ್ಥಾತ್ ನಮಾಜಿನ ಕರೆ ನೀಡುವವನು.
ಮೋಮಿನ್	ದೈವೀ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮುಸ್ಲಿಂ ಧರ್ಮನಿಷ್ಠ

ಮ್ವಾರಿಫತ್	ಸೂಫಿ ಅನುಭಾವ, ರಹಸ್ಯಜ್ಞಾನ
ಯಾಖೂತ್	ಒಂದು ಬಗೆಯ ಬಹುಮೂಲ್ಯ ರತ್ನ
ಯುನಾನಿ	ಗ್ರೀಕ್‌ಗೆ ಸಂಬಂಧಪಟ್ಟದ್ದು
ರ.ಅ ರಹಮತುಲ್ಲಾ ಅಲೈ,	ಅಲ್ಲಾಹನು ಅವರಿಗೆ ತನ್ನ ಕೃಪೆಯನು ದಯಪಾಲಿಸಲಿ ಎನ್ನುವ ಭಾವಾರ್ಥ
ರಬ್	ವಿಭು, ದೇವ
ರಸೂಲ್	ದೈವೀಗ್ರಂಥವನ್ನು ಪಡೆದ ಪ್ರವಾದಿಗಳು, (ದಾವೂದ್, ಮೂಸಾ, ಏಸುಕ್ರಿಸ್ತ, ಹಾಗೂ ಮಹ್ಮದರು ಇಸ್ಲಾಂ ಧರ್ಮನಂಬಿಕೆಯ ಪ್ರಕಾರ ರಸೂಲರು.
ರಸೂಲ್	ದೈವೀಗ್ರಂಥ ಹೊಂದಿದ ಪ್ರವಾದಿಗಳು
ರುಬಾಯಿ	ನಾಲ್ಕು ಸಾಲಿನ ಕವನ
ರೂಹ್	ಆತ್ಮ
ರೂಹೆ ಖುದ್ಸಿ	ಪವಿತ್ರಾತ್ಮ
ರೂಹೆ ನಾತೇಖಾ	ವಾಕ್‌ಶಕ್ತಿ ಆತ್ಮ
ರೂಹೆ ಮುತಹರಿಕಾ	ಚಲನಶೀಲ ಆತ್ಮ
ರೋಜಾ	ಉಪವಾಸ, ವೃತ
ಲಾಜಿಮುಲ್ ವುಜೂದ್	ಕಡ್ಡಾಯ ಅಸ್ತಿತ್ವ
ಲಾಹೂತ್	ಮಾಧುರ್ಯ ಲೋಕ
ಲೀವೋವ್ ಅಲ್ಲಾಹ ವಕ್	ಒಂದೇ ಸಲ ಮಾತ್ರ ಜರಗುವುದು.
ವಜೂದಿಯಾ	ಅಸ್ತಿತ್ವವಾದ ಸಿದ್ಧಾಂತಕ್ಕೆ ಸಂಬಂಧಿಸಿದ
ವಲಿ/ಔಲಿಯಾ	ದೇವ ಸ್ನೇಹಿತ, ಸೂಫಿಗಳಿಗೆ ಪರ್ಯಾಯವಾಗಿ ಉಪಯೋಗಿಸಲ್ಪಡುತ್ತದೆ. ಔಲಿಯಾ ವಲಿ ಶಬ್ದದ ಬಹುವಚನ ಕುರಾನಿನಲ್ಲಿ ಮಹೋನ್ನತ ದೈವೀ ಅನುಸರಣೆ. ವ್ಯಕ್ತಿಗಳಿಗಾಗಿ ಈ ಶಬ್ದ ಉಪಯೋಗಿಸಲಾಗಿದೆ.

ವಲಿ, ಗೌಸ್, ಖುತುಬ್	ಸೂಫಿಗಳ ವಿವಿಧ ಉಪಾಧಿಗಳು.
ವಸ್ಲ್	ಮಿಲನ, ಸಂಗಮ, ಐಕ್ಯವಾಗುವಿಕೆ
ವಸ್ಲಹಕ್	ಸತ್ಯಮಿಲನ, ಪರಮಸತ್ಯನಲ್ಲಿ ಮಿಲನ
ವಹದತ್	ಏಕತ್ವ
ವಹದತುಲ್ ವುಜೂದ್	ಅಸ್ತಿತ್ವವಾದ, ಅದ್ವೈತವಾದ
ವಹದತುಲ್ ಶುಹೂದ್	ದೈವೀ ಸಾಕ್ಷಾತ್ಕಾರವಾದ, ದ್ವೈತವಾದಕ್ಕೆ ಸನಿಹವಾದದ್ದು.
ವಹಿ	ಪ್ರವಾದಿಗಳಿಗೆ ದೇವದೂತ ಜಿಬ್ರಾಯಿಲ್‌ರ ಮೂಲಕ ತಲುಪಿದ ದೈವೀ ಸಂದೇಶ, ಕುರಾನ್ ವಹಿಯ ಮೂಲಕವೇ ಅವತೀರ್ಣಗೊಂಡಿದೆ
ವಾಹಿದುಲ್ ವುಜೂದ್	ಏಕ ಅಸ್ತಿತ್ವ
ವಿಲಾಯತ್	ವಲಿಯ ಆಧ್ಯಾತ್ಮಿಕ ಸಾಮ್ರಾಜ್ಯ ಅಥವಾ ಅದರ ಕ್ರಿಯಾಪದ, ಸಂತದಿಂದ ಸಂತತ್ವದಂತೆ ವಲಿಯಿಂದ ವಿಲಾಯತ್.
ವುಜೂ	ನಮಾಜಿನ ಮುಂಚೆ ಒಂದು ನಿರ್ದಿಷ್ಟ ರೀತಿಯಲ್ಲಿ ಕೈಕಾಲು ಮುಖ ತೊಳೆದುಕೊಂಡು ನಿರ್ಮಲನಾಗುವ ಕ್ರಿಯೆ.
ಶಬೇ ಖದರ್	ರಮಜಾನ್ ತಿಂಗಳ ೨೧, ೨೩, ೨೫, ೨೭, ೨೯ ರ ರಾತ್ರಿಗಳಲ್ಲಿ ಪವಿತ್ರವಾಗಿರುವ ಒಂದು ರಾತ್ರಿಯೇ ಶಬೇ ಖದರ್ ಅನಿಸಿಕೊಳ್ಳುತ್ತದೆ. ಬಹುಶಃ ಇದು ೨೭ರ ರಾತ್ರಿಯಾಗಿದ್ದು, ಆ ರಾತ್ರಿಯಲ್ಲಿ ಕುರಾನ್ ಪರಿಪೂರ್ಣವಾಗಿ ಪ್ರಕಟವಾಯಿತು. ಇದನ್ನು ಅತಿ ಪವಿತ್ರ ರಾತ್ರಿಯೆಂದು, ಪ್ರತಿಷ್ಠಿತ ರಾತ್ರಿಯೆಂದು ಭಾವಿಸಲಾಗುತ್ತದೆ.
ಶರಾಬ್	ಮದಿರೆ
ಶರೀಯತ್	ದೈವೀಶಾಸ್ತ್ರ ಅನುಸರಣೆ, ಆತ್ಮಶುದ್ಧಿ ಕಾಂಡ
ಶಹೂದಿಯಾ	ದೈವೀಸಾಕ್ಷಾತ್ಕಾರ ಸಿದ್ಧಾಂತಕ್ಕೆ ಸಂಬಂಧಿಸಿದ

ಶಿರ್ಕ್	ಅಲ್ಲಾಹನ ಜತೆ ಇನ್ನೊಬ್ಬರನ್ನು ಸೇರಿಸಿ ಉಪಾಸನೆ ಮಾಡುವುದು ಇದು ಇಸ್ಲಾಮಿನಲ್ಲಿ ನಿಷಿದ್ಧವಿದೆ.
ಶೇಖ್	ಧಾರ್ಮಿಕ ನಾಯಕ
ಷವ್ವಾಲ್	ಚಂದ್ರಮಾನ ಕಾಲೆಂಡರಿನ ತಿಂಗಳು
ಸಮಾ	ಸೂಫಿ ಸಂಗೀತ ಗೋಷ್ಠಿ
ಸಯ್ಯದ್, ಸಾದಾತ್	ಪ್ರವಾದಿಯ ವಂಶಪರಂಪರೆಯವರು
ಸಲ್ಲಾಲ್ಲಾಹು ಅಲೈಹು ಸಲ್ಲಂ (ಸ.ಅ.ಸ)	ಅಲ್ಲಾಹನು ಅವರ ಮೇಲೆ ಸ್ವಸ್ತಿ ಹಾಗೂ ಶಾಂತಿ ನೀಡಲಿ ಎಂಬ ಅರ್ಥ, ಪ್ರವಾದಿಯ ಹೆಸರಿನ ಜತೆ ಈ ರೀತಿ ಹೇಳಲಾಗುತ್ತದೆ.
ಸಹಾ	ಒಂದು ನಕ್ಷತ್ರದ ಹೆಸರು
ಸಾಕಿ	ಮದಿರೆ ಕುಡಿಸುವವನು
ಸಾಲಿಕ್	ಸಾಧಕ, ದೈವೀ ಮಾರ್ಗದ ಸಾಧಕ
ಸಿಪಾತ್	ಅರ್ಹತೆ
ಸಿಮರಘ್	ಒಂದು ಕಾಲ್ಪನಿಕ ಪಕ್ಷಿ
ಸಿರಾತೆ ಮುಸ್ತೇಖೀಮ್	ನೇರ ಮಾರ್ಗ, ದೇವರನ್ನು ತಲುಪುವ ನೇರಮಾರ್ಗ.
ಸಿಲ್‌ಸಿಲಾ	ಸೂಫಿ ಪರಂಪರೆ
ಸೀರಾತೆ ವಹದತ್	ಏಕಮಾರ್ಗ
ಸುಲೂಕ್	ಶುದ್ಧ ಆಚರಣೆ
ಸೈತಾನ್	ಮೊದಲು ದೇವದೂತನಾಗಿದ್ದು, ದೈವೀ ಆಜ್ಞೆ ಉಲ್ಲಂಘನೆಗಾಗಿ, ದೇವರಿಂದ ಬಹಿಷ್ಕೃತಗೊಂಡು ಜನರನ್ನು ಪಥಭ್ರಷ್ಟಗೊಳಿಸುವವನು.
ಸ್ವಾದ್	ಉರ್ದು, ಅರಬ್ಬಿ, ಫಾರಸಿ ಭಾಷೆಯ ಒಂದು ಅಕ್ಷರ ಅರ್ಥ ಕಪ್ಪ

ಹಕ್	ಸತ್ಯ, ದೈವೀ ಸತ್ಯ, ಪರಂಸತ್ಯ
ಹಖೀಖತ್	ಬ್ರಹ್ಮಕಾಂಡ
ಹದೀಸ್	ಮಹ್ಮದ ಪೈಗಂಬರರ ವಚನಗಳು ಹಾಗೂ ನಡೆಗಳ ಸಂಗ್ರಹ.

■ ■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359